
<u>ಮೈಸೂರು ಸರ್ಕಾರ</u>

**ಪಠ್ಯ ಪುಸ್ತಕಗಳ ಇಲಾಖೆ**

(ವಿದ್ಯಾ ಸಂಶೋಧನ ಶಾಖೆ)


# ಕನ್ನಡ ವ್ಯಾಕರಣ ದರ್ಪಣ

**(8, 9 ಮತ್ತು 10ನೆಯ ತರಗತಿಗಳಿಗೆ)**




**1971**

**ಬೆಲೆ ರೂ: 2-00**

# ಮುನ್ನುಡಿ

ಯಾವ ಭಾಷೆಯನ್ನಾದರೂ ಶುದ್ಧವಾಗಿ ಪ್ರಯೋಗ ಮಾಡಬೇಕಾದರೆ ಆ ಭಾಷೆಯ ವ್ಯಾಕರಣ ಪರಿಚಯ ಅತ್ಯಾವಶ್ಯಕ. ವ್ಯಾಕರಣ ಜ್ಞಾನವಿಲ್ಲದೆ ಭಾಷೆಯ ಅಧ್ಯಯನ ಪೂರ್ಣವಾಗದು. ಭಾಷೆಯ ಅಧ್ಯಯನದ ಆರಂಭದಲ್ಲಿ ಪ್ರಯೋಗಗಳ ಮೂಲಕ ವ್ಯಾಕರಣದ ಅರಿವನ್ನುಂಟುಮಾಡಿದರೂ ಮುಂದೆ ಸಕ್ರಮವಾಗಿ ವ್ಯಾಕರಣ ಶಾಸ್ತ್ರದ ಪರಿಚಯವನ್ನು ಮಾಡಿಸುವ ಅವಶ್ಯಕತೆಯಿದೆ. ಈ ದೃಷ್ಟಿಯಿಂದ ಸೆಕೆಂಡರಿ ಶಾಲೆಗಳ ಪಠ್ಯಕ್ರಮದಲ್ಲಿ ವ್ಯಾಕರಣ ಶಾಸ್ತ್ರದ ಮುಖ್ಯ ವಿಷಯಗಳನ್ನು ಅಳವಡಿಸಲಾಗಿದೆ. ಸೆಕೆಂಡರಿ ಹಂತದ ಎಂಟು, ಒಂಬತ್ತು ಮತ್ತು ಹತ್ತನೆಯ ತರಗತಿಗಳ ಪಠ್ಯಕ್ರಮದಲ್ಲಿ ಮಕ್ಕಳಿಗೆ ಕಲಿಸಬೇಕೆಂದು ಸಲಹೆ ಮಾಡಿರುವಂತೆ ವ್ಯಾಕರಣ, ಅಲಂಕಾರ ಮತ್ತು ಛಂದಸ್ಸುಗಳ ಅಂಶಗಳನ್ನು ಒಳಗೊಂಡ ಕನ್ನಡ ವ್ಯಾಕರಣ ರಚಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಯಿತು:

೧. ಡಾ॥ ಶಿ. ಚ. ನಂದಿಮಠ, ಎಂ.ಎ., ಪಿ.ಹೆಚ್‌ಡಿ.,
ಸಂಸ್ಕೃತ ಪ್ರೊಫೆಸರ್, ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ. ... ... ... ಅಧ್ಯಕ್ಷರು

೨. ಸಿ. ಎಂ. ಎರೇಸೀಮೆ,
ಕನ್ನಡ ಪಂಡಿತರು,
ಗೌ॥ ಸೆಂಟ್ರಲ್ ಹೈಯರ್ ಸೆಕೆಂಡರಿ ಶಾಲೆ,
ಬೆಂಗಳೂರು. ... ... ... ಸದಸ್ಯರು

೩. ಡಿ. ರೇವಣಪ್ಪ,
ಕನ್ನಡ ಪಂಡಿತರು, ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್
ಚಿತ್ರದುರ್ಗ. ... ... ... ಸದಸ್ಯರು

ಈ ಸಮಿತಿಯವರು ಉಪಯುಕ್ತ ಅಭ್ಯಾಸಗಳೊಂದಿಗೆ ಈ ಕನ್ನಡ ವ್ಯಾಕರಣವನ್ನು ಸಿದ್ಧಗೊಳಿಸಿರುತ್ತಾರೆ. ಮೇಲ್ಕಂಡ ಸಮಿತಿಯವರಿಗೆ ಈ ಅಮೂಲ್ಯ ಕಾರ್ಯಕ್ಕಾಗಿ ಇಲಾಖೆ ಋಣಿಯಾಗಿದೆ.

ಟಿ. ವಿ. ತಿಮ್ಮೇಗೌಡ,
ಡೈರೆಕ್ಟರ್ ಆಫ್ ಟೆಕ್ಸ್ಟ್ ಬುಕ್ಸ್

# ಮೊದಲ ಮಾತು

ಮೈಸೂರು ರಾಜ್ಯದ ವಿದ್ಯಾಶಾಖೆಯ ವ್ಯಾಪ್ತಿಗೊಳಪಟ್ಟ ಪ್ರೌಢಶಾಲೆಗಳ ೮, ೯, ೧೦ ನೆಯ ವರ್ಗಗಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ನೂತನ ಅಭ್ಯಾಸಕ್ರಮಕ್ಕನುಸರಿಸಿ ಒಂದು ವ್ಯಾಕರಣ ಪಠ್ಯಪುಸ್ತಕವನ್ನು ರಚಿಸಬೇಕೆಂದೂ, ಅದರಲ್ಲಿ ಆಯಾ ತರಗತಿಗಳಿಗೆ ನಿಯಮಿತವಾದ ಅಲಂಕಾರ, ಛಂದಸ್ಸುಗಳ ಭಾಗವೂ ಇರಬೇಕೆಂದೂ ವಿದ್ಯಾಶಾಖೆಯವರು ತೀರ್ಮಾನಿಸಿ ಒಂದು ಸಮಿತಿಯನ್ನು ನಿಯಮಿಸಿದರು.

ವಿದ್ಯಾಶಾಖೆಯವರು ನಿರ್ಣಯಿಸಿದ ಪಠ್ಯಕ್ರಮಕ್ಕನುಸರಿಸಿ ಶಾಲಾಮಕ್ಕಳ ಮಟ್ಟವನ್ನು ಗಮನದಲ್ಲಿಟ್ಟುಕೊಂಡು "ಸುಲಭದಿಂದ ಕಠಿಣಕ್ಕೆ" ಎಂಬ ಬೋಧನಾತತ್ತ್ವಕ್ಕನುಗುಣವಾಗಿ ವಿಷಯ ನಿರೂಪಣೆ ಮಾಡುತ್ತ, ನಿಯಮಿತ ಅವಧಿಯಲ್ಲಿಯೇ ಈ ಪುಸ್ತಕವನ್ನು ರಚಿಸಲಾಗಿದೆ. ಇದರಲ್ಲಿ ಪಠ್ಯಕ್ರಮದ ವ್ಯಾಪ್ತಿಯನ್ನು ಮಿಕ್ಕಿ ಅಲ್ಲಲ್ಲಿ ಕೆಲವು ವಿಷಯಗಳನ್ನು ಗ್ರಂಥದ ಪರಿಪೂರ್ಣತೆಗಾಗಿ, ಜಿಜ್ಞಾಸೆಯುಳ್ಳ ಕನ್ನಡಭಾಷಾಭ್ಯಾಸಿಗಳ ಅನುಕೂಲತೆಗಾಗಿ ಹೇಳಿದ್ದರೂ ಕೂಡ ಉಪಾಧ್ಯಾಯರು ಅಂಥವುಗಳ ಕಡೆಗೆ ಹೆಚ್ಚು ಲಕ್ಷ್ಯಕೊಡದೆ ಕೇವಲ ಪಠ್ಯಕ್ರಮದ ವ್ಯಾಪ್ತಿಗನುಗುಣವಾಗಿ ಬೋಧನಾವಿಷಯಗಳನ್ನು ಆರಿಸಿಕೊಂಡು ಪಾಠ ಹೇಳಬೇಕೆಂದು ಸೂಚಿಸುತ್ತೇವೆ.

ಸೂತ್ರಗಳನ್ನು ಹೇಳುವುದಕ್ಕೆ ಪೂರ್ವದಲ್ಲಿ ಸಾಕಷ್ಟು ವಿವರಣೆಯನ್ನು ಕೊಡಲಾಗಿದೆ. ಸುಲಭವಾದ ದೃಷ್ಟಾಂತಗಳನ್ನು ತೋರಿಸಲಾಗಿದೆ. ಆ ವಿವರಣೆಯ ಆಧಾರದ ಮೇಲೆ ಸೂತ್ರ ರಚನೆಯನ್ನು ಮಕ್ಕಳಿಂದಲೇ ಮಾಡಿಸುವ ಬೋಧನಾನಿಯಮವನ್ನು ಶಿಕ್ಷಕರು ಅನುಸರಿಸಿ, ವ್ಯಾಕರಣವು ಸುಲಭವಾದ ವಿಷಯವೆಂಬ ವಿಶ್ವಾಸವನ್ನು ಮಕ್ಕಳಲ್ಲಿ ಮೂಡಿಸುವುದು ಬೋಧನಾಚತುರರಾದ ಉಪಾಧ್ಯಾಯರ ಕರ್ತವ್ಯವೆಂದು ನಾವು ಭಾವಿಸುತ್ತೇವೆ. ವಿದ್ಯಾರ್ಥಿಗಳ ಉಪಯೋಗದೃಷ್ಟಿಯಿಂದ ಹೆಚ್ಚಾಗಿ ದೃಷ್ಟಾಂತಗಳನ್ನು ಅಳವಡಿಸಲಾಗಿದೆ.

ಅಲಂಕಾರಗಳು ಸುಲಭವಾಗಿ ಮಕ್ಕಳ ಮನಸ್ಸನ್ನು ನಾಟಬೇಕೆಂಬ ಉದ್ದೇಶದಿಂದ ಗಾದೆಯ ಮಾತುಗಳ ಮತ್ತು ರೂಢಿಯೊಳಗಿನ ಮಾತುಗಳ ಸುಲಭ ದೃಷ್ಟಾಂತಗಳನ್ನು ಪ್ರಾರಂಭದಲ್ಲಿ ತಿಳಿಸಿ, ತದನಂತರ ಪದ್ಯಗಳನ್ನು ಹೇಳಿ; ವಿವರಣೆಮಾಡಿ ಸೂತ್ರಗಳನ್ನು ಹೇಳಲಾಗಿದೆ. ಅವರ ಪಠ್ಯಪುಸ್ತಕಗಳಲ್ಲಿ ಬಂದಿರುವ ಉದಾಹರಣೆಗಳತ್ತ ಸಾಮಾನ್ಯವಾಗಿ ಹೆಚ್ಚು ಲಕ್ಷ್ಯ ವಹಿಸಲಾಗಿದೆ. ಕೆಲವು ಕಡೆ ಪಠ್ಯಪುಸ್ತಕದ ಹೊರಗಿನ ಉದಾಹರಣೆಗಳನ್ನೂ ಕೊಡಲಾಗಿದೆ.

ಹೈಸ್ಕೂಲಿನ (ಪ್ರೌಢಶಾಲೆಯ) ಮೂರು ತರಗತಿಗಳಲ್ಲಿಯೂ ಮಕ್ಕಳು ಹಳಗನ್ನಡ ಗದ್ಯಪದ್ಯ ಭಾಗವನ್ನು ಸ್ವಲ್ಪ ಪರಿಚಯ ಮಾಡಿಕೊಳ್ಳಬೇಕಾಗಿರುವುದರಿಂದ ಅಲ್ಲಲ್ಲಿ ಹಳಗನ್ನಡ ಉದಾಹರಣೆಗಳನ್ನೂ ಕೊಡಲಾಗಿದೆ. ನಾಮವಿಭಕ್ತಿ ಪ್ರತ್ಯಯಗಳ ವಿವರಣೆ ಮಾಡುವಾಗ ಇದೇ ದೃಷ್ಟಿಯಿಂದ ಹೊಸಗನ್ನಡ ಮತ್ತು ಹಳಗನ್ನಡದ ಎರಡು ರೂಪಗಳನ್ನೂ ಹೇಳಲಾಗಿದೆ. ಸಮಾಸ ಪ್ರಕರಣದಲ್ಲಿ ಅನೇಕ ಹೊಸಗನ್ನಡ, ಹಳಗನ್ನಡದ ವಿಶೇಷ ಉದಾಹರಣೆಗಳ ಪಟ್ಟಿಯನ್ನು ಕೊಡಲಾಗಿದೆ. ಕ್ರಿಯಾಪದ ಪ್ರಕರಣಾಂತ್ಯದಲ್ಲಿ ದೀರ್ಘವಾದ ಧಾತುಗಳ

ಪಟ್ಟಿಯೊಂದನ್ನು ಕೊಟ್ಟು ಅದರಲ್ಲಿ ಹೊಸಗನ್ನಡ ಹಳಗನ್ನಡ ಧಾತುರೂಪಗಳು ಮತ್ತು ಅವುಗಳ ಅರ್ಥ, ಕ್ರಿಯಾಪದದ ಒಂದೊಂದು ರೂಪ ಇವನ್ನು ಕೊಡಲಾಗಿದೆ. ಅಲ್ಲದೆ ಹಳಗನ್ನಡದಿಂದ ಹೊಸಗನ್ನಡಕ್ಕೆ ರೂಪಾಂತರಹೊಂದುವ ಅನೇಕ ಶಬ್ದಗಳ ಒಂದು ಪಟ್ಟಿಯನ್ನು ಮೂರನೆಯ ಅಧ್ಯಾಯದಲ್ಲಿ ಕೊಡಲಾಗಿದೆ. ಇದು ಬುದ್ಧಿವಂತರಾದ ವಿದ್ಯಾರ್ಥಿಗಳ ಭಾಷಾಜ್ಞಾನ ಬೆಳೆಯಲು ಉಪಯುಕ್ತ ಅಂಶವೆಂದು ಭಾವಿಸಿದ್ದೇವೆ. ಈ ಗ್ರಂಥದಲ್ಲಿ ದೋಷಗಳು ಉಳಿಯಬಾರದೆಂದು ಸಾಧ್ಯವಾದಷ್ಟು ಎಚ್ಚರಿಕೆ ವಹಿಸಿದ್ದೇವೆ. ಆದರೆ ಭಾಷೆಯೆಂಬುದು ವಿಸ್ತಾರವಾದುದರಿಂದಲೂ, ಪ್ರಯೋಗಗಳು ಅಗಣಿತವಾದುದರಿಂದಲೂ, ವೈಗುಣ್ಯಗಳು ಅಪ್ಪಿತಪ್ಪಿ ಉಳಿದಿದ್ದರೆ ಸಹೃದಯ ರಾದವರು ತಿಳಿಸಿದರೆ ಪುನರ್ಮುದ್ರಣದಲ್ಲಿ ಸರಿಪಡಿಸಲಾಗುವುದು.

ಮಕ್ಕಳ ಅಭ್ಯಾಸ ದೃಷ್ಟಿಯಿಂದ ಪ್ರತಿ ಅಧ್ಯಾಯದ ಕೊನೆಯಲ್ಲಿ ಅಭ್ಯಾಸ ಪ್ರಶ್ನೆಗಳನ್ನು ಸಾಕಷ್ಟು ವೈವಿಧ್ಯಪೂರ್ಣವಾಗಿ ಕೊಡಲಾಗಿದೆ. ಆ ಅಭ್ಯಾಸಗಳನ್ನು ಅವಶ್ಯವಾಗಿ ಉಪಾಧ್ಯಾಯರು ಮಾಡಿಸಬೇಕಾಗುವುದು. ಆಗಲೇ ವ್ಯಾಕರಣಪಾಠ ಪೂರ್ಣವಾಗುವುದು. ಗ್ರಂಥಾಂತ್ಯದಲ್ಲಿ ಲೇಖನ ಚಿಹ್ನೆಗಳ ಬಗೆಗೆ ವಿವರಿಸಲಾಗಿದೆ.

ಈ ಪುಸ್ತಕದ ರಚನೆಯ ಕಾರ್ಯವನ್ನು ನಮಗೆ ವಹಿಸಿಕೊಟ್ಟುದಕ್ಕಾಗಿ ಪಠ್ಯಪುಸ್ತಕ ವಿಭಾಗದ ಅಧಿಕಾರಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಬೆಂಗಳೂರು ಶಿ. ಚ. ನಂದಿಮಠ

೧೪–೪–೭೦ (ಸಮಿತಿಯ ಪರವಾಗಿ)

# ವಿಷಯಾನುಕ್ರಮಣಿಕೆ


| | | | ಪುಟ |
|---|---|---|---|
| **ಪೀಠಿಕೆ–** | | | |
| | (i) **ವ್ಯಾಕರಣದ ಉದ್ದೇಶ** | .. | XV |
| | (ii) **ಕನ್ನಡ ವ್ಯಾಕರಣಕಾರರು ಮತ್ತು ಅವರ ಗ್ರಂಥಗಳು** | .. | XVII |
| **ಅಧ್ಯಾಯ ೧.** | **ಸಂಜ್ಞಾಪ್ರಕರಣ** | .. | **1** |
| | **ಸಂಜ್ಞೆಗಳು** | .. | 1 |
| | I ಕನ್ನಡ ವರ್ಣಮಾಲೆ | .. | 1 |
| | (೧) ಸ್ವರಗಳು | .. | 2 |
| | (೨) ವ್ಯಂಜನಗಳು | .. | 3 |
| | (೩) ಯೋಗವಾಹಗಳು | .. | 3 |
| | II ಸ್ವರಗಳ ವಿಚಾರ | .. | 3 |
| | III ವ್ಯಂಜನಾಕ್ಷರಗಳು | .. | 5 |
| | IV ಗುಣಿತಾಕ್ಷರಗಳು | .. | 6 |
| | V ಸಂಯುಕ್ತಾಕ್ಷರಗಳು (ಒತ್ತಕ್ಷರಗಳು) | .. | 7 |
| | VI ಅಕ್ಷರ ಹುಟ್ಟುವ ಸ್ಥಾನ | .. | 8 |
| | VII ಸಾರಾಂಶ | .. | 9 |
| **೨ ಅಧ್ಯಾಯ.** | **ಸಂಧಿಪ್ರಕರಣ** | .. | **12** |
| | I **ಸಂಧಿ** | .. | 12 |
| | II **ಕನ್ನಡ ಸಂಧಿಗಳು** | .. | 13 |
| | ೧. ಲೋಪಸಂಧಿ | .. | 13 |
| | ೨. ಆಗಮ ಸಂಧಿ | .. | 15 |
| | (೧) ಯಕಾರಗಮ ಸಂಧಿ | .. | 16 |
| | (೨) ವಕಾರಗಮ ಸಂಧಿ | .. | 17 |
| | ೩. ಆದೇಶ ಸಂಧಿ | .. | 19 |
| | III **ಪ್ರಕೃತಿ ಭಾವ** | .. | 22 |
| | IV **ಸಾರಾಂಶ** | .. | 25 |
| | V **ಸಂಸ್ಕೃತ ಸಂಧಿಗಳು** | .. | 28 |
| | 1. ಸಂಸ್ಕೃತ ಸ್ವರ ಸಂಧಿಗಳು | .. | 28 |

| | | | ಪುಟ |
|---|---|---|---|
| | (೧) ಸವರ್ಣ ದೀರ್ಘ ಸಂಧಿ | .. | 28 |
| | (೨) ಗುಣಸಂಧಿ | .. | 30 |
| | (೩) ವೃದ್ಧಿ ಸಂಧಿ | .. | 31 |
| | (೪) ಯಣ್ ಸಂಧಿ | .. | 33 |
| | 2. ಸಂಸ್ಕೃತ ವ್ಯಂಜನ ಸಂಧಿಗಳು | .. | 35 |
| | (೧) ಜಶ್ತ್ವಸಂಧಿ | .. | 35 |
| | (೨) ಶ್ಚುತ್ವ ಸಂಧಿ | .. | 37 |
| | (೩) ಅನುನಾಸಿಕ ಸಂಧಿ | .. | 38 |
| | VI **ಸಾರಾಂಶ** | .. | 40 |
| **ಅಧ್ಯಾಯ ೩.** | **ದೇಶ್ಯ–ಅನ್ಯದೇಶ್ಯ–ತತ್ಸಮ–ತದ್ಭವ ಪ್ರಕರಣ** | .. | **43** |
| | I **ದೇಶ್ಯ ಅಚ್ಚಗನ್ನಡ ಶಬ್ದಗಳು** | .. | 44 |
| | II **ಅನ್ಯದೇಶ್ಯ ಶಬ್ದಗಳು** | .. | 44 |
| | (೧) ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು | .. | 44 |
| | (೨) ಹಿಂದೂಸ್ಥಾನೀ ಭಾಷೆಯಿಂದ ಬಂದ ಶಬ್ದಗಳು | .. | 45 |
| | (೩) ಇಂಗ್ಲೀಷಿನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಶಬ್ದಗಳು | .. | 45 |
| | (೪) ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು | .. | 46 |
| | (೫) ಸಂಸ್ಕೃತದಿಂದ ತಮ್ಮ ಮೂಲರೂಪವನ್ನು ವ್ಯತ್ಯಾಸಮಾಡಿಕೊಂಡು ಕನ್ನಡಕ್ಕೆ ಬಂದ ಶಬ್ದಗಳು | .. | 46 |
| | III **ತತ್ಸಮ ತದ್ಭವ ರೂಪಗಳು** | .. | 47 |
| **ಅಧ್ಯಾಯ ೪.** | **ನಾಮಪದ ಪ್ರಕರಣ** | .. | **62** |
| | **(ನಾಮಪದ–ನಾಮಪ್ರಕೃತಿ–ನಾಮವಿಭಕ್ತಿ ಪ್ರತ್ಯಯ)** | | |
| | I **ನಾಮಪದ** | .. | 62 |
| | II **ನಾಮ ಪ್ರಕೃತಿಗಳು** | .. | 64 |
| | (೧) ವಸ್ತುವಾಚಕಗಳು | .. | 65 |
| | (೨) ಗುಣವಾಚಕಗಳು | .. | 66 |

| | | | |
|---|---|---|---|
| | | | **ಪುಟ** |
| | (೩) ಸಂಖ್ಯಾವಾಚಕಗಳು | ·· | 67 |
| | (೪) ಸಂಖ್ಯೇಯವಾಚಕಗಳು | ·· | 67 |
| | (೫) ಭಾವನಾಮಗಳು | ·· | 68 |
| | (೬) ಪರಿಮಾಣವಾಚಕಗಳು | ·· | 68 |
| | (೭) ಪ್ರಕಾರವಾಚಕಗಳು | ·· | 69 |
| | (೮) ದಿಗ್ವಾಚಕಗಳು | ·· | 69 |
| | (೯) ಸರ್ವನಾಮಗಳು | ·· | 69 |
| | ೧. ಪುರುಷಾರ್ಥಕ ಸರ್ವನಾಮಗಳು | ·· | 70 |
| | ೨. ಪ್ರಶ್ನಾರ್ಥಕ ಸರ್ವನಾಮಗಳು | ·· | 70 |
| | ೩. ಆತ್ಮಾರ್ಥಕ ಸರ್ವನಾಮಗಳು | ·· | 70 |
| III | **ಲಿಂಗಗಳು** | ·· | 71 |
| | (೧) ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ | ·· | 71 |
| | (೨) ಪುನ್ನಪುಂಸಕಲಿಂಗ, ಸ್ತ್ರೀನಪುಂಸಕಲಿಂಗ ನಿತ್ಯನಪುಂಸಕಲಿಂಗಗಳು | ·· | 72 |
| | (೩) ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರರಲ್ಲೂ ಪ್ರಯೋಗವಾಗುವ ಶಬ್ದಗಳು [ವಾಚ್ಯಲಿಂಗ (ವಿಶೇಷ್ಯಾಧೀನಲಿಂಗಗಳು)] | ·· | 73 |
| IV | **ವಚನಗಳು** | ·· | 77 |
| V | **ವಿಭಕ್ತಿಪ್ರತ್ಯಯಗಳು** | ·· | 82 |
| VI | **ನಾಮಪ್ರಕೃತಿಗಳಿಗೆ ನಾಮವಿಭಕ್ತಿಪ್ರತ್ಯಯಗಳು ಬರುವ ಅರ್ಥಗಳು ಮತ್ತು ಪ್ರಯೋಗಗಳು** | ·· | 105 |
| VII | **ವಿಭಕ್ತಿಪಲ್ಲಟ** | ·· | 113 |
| VIII | **ಸಾರಾಂಶ** | ·· | 114 |
| ಅಧ್ಯಾಯ ೫. | ಕ್ರಿಯಾಪದ ಪ್ರಕರಣ | ·· | **118** |
| I | **ಕ್ರಿಯಾಪ್ರಕೃತಿ (ಧಾತು)** | ·· | 118 |
| | ೧. ಮೂಲಧಾತು (ಸಹಜಧಾತು) | ·· | 119 |
| | ೨. ಪ್ರತ್ಯಯಾಂತಧಾತು (ಸಾಧಿತಧಾತು) | ·· | 119 |
| II | **ಸಕರ್ಮಕಧಾತು, ಅಕರ್ಮಕಧಾತು** | ·· | 122 |
| III | **ಕ್ರಿಯಾಪದ** | ·· | 123 |
| IV | **ಕ್ರಿಯಾಪದ ರೂಪಗಳು ಉಂಟಾಗುವಿಕೆ** | ·· | 125 |
| | (೧) ವರ್ತಮಾನಕಾಲದ ಕ್ರಿಯಾಪದಗಳು | ·· | 125 |

| | | | |
|---|---|---|---|
| | | | ಪುಟ |
| | (೨) ಭೂತಕಾಲದ ಕ್ರಿಯಾಪದಗಳು | ·· | 126 |
| | (೩) ಭವಿಷ್ಯತ್‌ಕಾಲದ ಕ್ರಿಯಾಪದಗಳು | ·· | 127 |
| | (೧) ವಿಧ್ಯರ್ಥ (ವಿಧಿ+ಅರ್ಥ) ರೂಪಗಳು | ·· | 129 |
| | (೨) ನಿಷೇಧಾರ್ಥಕ ರೂಪಗಳು | ·· | 130 |
| | (೩) ಸಂಭಾವನಾರ್ಥಕ ರೂಪಗಳು | ·· | 132 |
| V | **ಕ್ರಿಯಾಪದ ರೂಪಗಳ ಕೆಲವು ವಿಶೇಷ ರೂಪಗಳು** | ·· | 134 |
| | (೧) ವರ್ತಮಾನಕಾಲದ ಕೆಲವು ವಿಶೇಷ ಪ್ರಯೋಗಗಳು | ·· | 134 |
| | (೨) ಭೂತಕಾಲದ ಕೆಲವು ವಿಶೇಷ ರೂಪಗಳು | ·· | 135 |
| | (೩) ಭವಿಷ್ಯತ್‌ಕಾಲದ ಕೆಲವು ವಿಶೇಷ ರೂಪಗಳು | ·· | 137 |
| | **ಕ್ರಿಯಾಪದಗಳ ಕಾಲಪಲ್ಲಟಗೊಳ್ಳುವಿಕೆ** | ·· | 137 |
| | (೪) ವಿಧ್ಯರ್ಥದಲ್ಲಿ ಬರುವ ಕೆಲವು ವಿಶೇಷ ರೂಪಗಳು | ·· | 138 |
| | (೫) ನಿಷೇಧಾರ್ಥದಲ್ಲಿ ಬರುವ ಕೆಲವು ವಿಶೇಷ ರೂಪಗಳು | ·· | 140 |
| | (೬) ಸಂಭಾವನಾರ್ಥದಲ್ಲಿ ಬರುವ ಕೆಲವು ವಿಶೇಷ ರೂಪಗಳು | ·· | 143 |
| VI | **ಕರ್ಮಣಿಪ್ರಯೋಗಗಳು** | ·· | 147 |
| VII | **ಕರ್ಮಣಿಪ್ರಯೋಗದಲ್ಲಿ ಕ್ರಿಯಾಪದದ ಲಿಂಗವ್ಯವಸ್ಥೆ** | ·· | 149 |
| VIII | **ಸಾರಾಂಶ** | ·· | 152 |
| | **ಮುಖ್ಯವಾದ ಕೆಲವು ಧಾತುಗಳು–ಅರ್ಥ–ಕ್ರಿಯಾಪದಗಳ ಪಟ್ಟಿ** | ·· | 156 |
| **ಅಧ್ಯಾಯ ೬.** | **ಸಮಾಸ ಪ್ರಕರಣ** | ·· | **173** |
| I | **ಅರಿಸಮಾಸ** | ·· | 175 |
| II | **ಸಮಾಸದ ವಿಧಗಳು** | ·· | 177 |
| | (೧) ತತ್ಪುರುಷಸಮಾಸ | ·· | 177 |
| | (೨) ಕರ್ಮಧಾರಯಸಮಾಸ | ·· | 179 |

| | | | | ಪುಟ |
|---|---|---|---|---|
| | | (೩) ದ್ವಿಗುಸಮಾಸ | .. | 182 |
| | | (೪) ಅಂಶಿಸಮಾಸ | .. | 184 |
| | | (೫) ದ್ವಂದ್ವಸಮಾಸ | .. | 186 |
| | | (೬) ಬಹುವ್ರೀಹಿಸಮಾಸ | .. | 187 |
| | | (೭) ಕ್ರಿಯಾಸಮಾಸ | .. | 189 |
| | | (೮) ಗಮಕಸಮಾಸ | .. | 191 |
| | | **ಹಳಗನ್ನಡ, ನಡುಗನ್ನಡ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಮುಖ್ಯವಾದ ಕೆಲವು ಸಮಾಸಗಳ ಪಟ್ಟಿ** | .. | 193 |
| | III | **ಸಾರಾಂಶ** | .. | 199 |
| | IV | **ದ್ವಿರುಕ್ತಿ** | .. | 201 |
| **ಅಧ್ಯಾಯ ೭.** | | **ಕೃದಂತ, ತದ್ಧಿತಾಂತ ಪ್ರಕರಣ** | .. | **205** |
| | I | **ಕೃದಂತಪ್ರಕರಣ (ಕೃನ್ನಾಮಪ್ರಕರಣ)** | .. | 205 |
| | | (೧) ಕೃದಂತ ನಾಮಗಳು | .. | 206 |
| | | (೨) ಕೃದಂತ ಭಾವನಾಮಗಳು (ಭಾವಕೃದಂತ) | .. | 210 |
| | | (೩) ಕೃದಂತಾವ್ಯಯಗಳು (ಅವ್ಯಯಕೃದಂತ) | .. | 213 |
| | II | **ಸಾರಾಂಶ** | .. | 217 |
| | III | **ತದ್ಧಿತಾಂತಗಳು** | .. | 220 |
| | | (೧) ತದ್ಧಿತಾಂತ ನಾಮಗಳು | .. | 221 |
| | | (೨) ತದ್ಧಿತಾಂತ ಭಾವನಾಮಗಳು | .. | 223 |
| | | (೩) ತದ್ಧಿತಾಂತಾವ್ಯಯಗಳು | .. | 224 |
| | IV | **ಸಾರಾಂಶ** | .. | 226 |
| **ಅಧ್ಯಾಯ ೮.** | | **ಅವ್ಯಯ ಪ್ರಕರಣ** | .. | **229** |
| | | (೧) ಸಾಮಾನ್ಯಾವ್ಯಯಗಳು | .. | 229 |
| | | (೨) ಅನುಕರಣಾವ್ಯಯಗಳು | .. | 230 |
| | | (೩) ಭಾವಸೂಚಕಾವ್ಯಯಗಳು (ನಿಪಾತಾವ್ಯಯಗಳು) | .. | 230 |
| | | (೪) ಕ್ರಿಯಾರ್ಥಕಾವ್ಯಯಗಳು | .. | 230 |
| | | (೫) ಸಂಬಂಧಾರ್ಥಕಾವ್ಯಯಗಳು | .. | 230 |
| | | (೬) ಕೃದಂತಾವ್ಯಯಗಳು | .. | 231 |

| | | | ಪುಟ |
|---|---|---|---|
| | | (೭) ತದ್ಧಿತಾಂತಾವ್ಯಯ | .. 231 |
| | | (೮) ಅವಧಾರಣಾರ್ಥಕಾವ್ಯಯ | .. 232 |
| | | **ಸಾರಾಂಶ** | .. 232 |
| **ಅಧ್ಯಾಯ ೯.** | **ವಾಕ್ಯಗಳು** | | .. **235** |
| | I | **ಅನ್ವಯಾನುಕ್ರಮ** | .. 236 |
| | II | **ಆಧ್ಯಾಹಾರ** | .. 237 |
| | III | **ವಾಕ್ಯಗಳ ಪ್ರಕಾರಗಳು** | .. 239 |
| | | (೧) ಸಾಮಾನ್ಯವಾಕ್ಯ | .. 239 |
| | | (೨) ಸಂಯೋಜಿತವಾಕ್ಯ | .. 240 |
| | | (೩) ಮಿಶ್ರವಾಕ್ಯ | .. 240 |
| | IV | **ವಾಕ್ಯವಿಭಜನೆ** | .. 241 |
| | V | **ರೂಪನಿಷ್ಪತ್ತಿ** | .. 242 |
| | VI | **ಸಾರಾಂಶ** | .. 244 |
| **ಅಧ್ಯಾಯ ೧೦.** | **ಛಂದಸ್ಸು** | | .. **247** |
| | I | **ಛಂದೋಂಬುದಿ ಗ್ರಂಥ ಕರ್ತೃವಿನ ವಿಚಾರ** | .. 248 |
| | II | **ಕನ್ನಡ ಕಾವ್ಯಗಳು** | .. 248 |
| | III | **ಪದ್ಯ** | .. 249 |
| | | (೧) ಪ್ರಾಸ | .. 249 |
| | | (೨) ಯತಿ | .. 251 |
| | | (೩) ಗಣಗಳು | .. 252 |
| | IV | **ಮಾತ್ರೆ, ಗುರು, ಲಘುಗಳು** | .. 252 |
| | V | **ಮಾತ್ರಾಗಣದ ಛಂದಸ್ಸಿನ ಪದ್ಯಗಳು** | .. 254 |
| | | (1) ಕಂದ ಪದ್ಯದ ಲಕ್ಷಣ | .. 255 |
| | | (2) ಷಟ್ಪದಿಗಳ ಲಕ್ಷಣಗಳು | .. 256 |
| | | (೧) ಶರಷಟ್ಪಪದಿ | .. 256 |
| | | (೨) ಕುಸುಮಷಟ್ಪದಿ | .. 257 |
| | | (೩) ಭೋಗಷಟ್ಪದಿ | .. 258 |
| | | (೪) ಭಾಮಿನೀಷಟ್ಪದಿ | .. 259 |
| | | (೫) ಪರಿವರ್ಧಿನೀಷಟ್ಪದಿ | .. 260 |
| | | (೬) ವಾರ್ಧಕಷಟ್ಪದಿ | .. 261 |

| | | | ಪುಟ |
|---|---|---|---|
| | (3) ರಗಳೆ ಜಾತಿಯ ಪದ್ಯ ಲಕ್ಷಣಗಳು | .. | 262 |
| | (೧) ಉತ್ಸಾಹರಗಳೆಯ ಲಕ್ಷಣ | .. | 263 |
| | (೨) ಮಂದಾನಿಲರಗಳೆಯ ಲಕ್ಷಣ | .. | 264 |
| | (೩) ಲಲಿತರಗಳೆಯ ಲಕ್ಷಣ | .. | 266 |
| VI | **ಅಕ್ಷರಗಣಗಳು** | .. | 267 |
| | (4) ವೃತ್ತಜಾತಿಯ ಛಂದಸ್ಸಿನ ಲಕ್ಷಣಗಳು | .. | 270 |
| | (೧) ಉತ್ಪಲಮಾಲಾವೃತ್ತದ ಲಕ್ಷಣ | .. | 270 |
| | (೨) ಚಂಪಕಮಾಲಾವೃತ್ತದ ಲಕ್ಷಣ | .. | 271 |
| | (೩) ಶಾರ್ದೂಲವಿಕ್ರೀಡಿತವೃತ್ತದ ಲಕ್ಷಣ | .. | 272 |
| | (೪) ಮತ್ತೇಭವಿಕ್ರೀಡಿತವೃತ್ತದ ಲಕ್ಷಣ | .. | 273 |
| | (೫) ಸ್ರಗ್ಧರಾವೃತ್ತದ ಲಕ್ಷಣ | .. | 274 |
| | (೬) ಮಹಾಸ್ರಗ್ಧರಾವೃತ್ತದ ಲಕ್ಷಣ | .. | 275 |
| VII | **ಅಂಶಗಣಗಳು** | .. | 276 |
| VIII | **ಸಾರಾಂಶ** | .. | 277 |
| **ಅಧ್ಯಾಯ ೧೧.** | **ಅಲಂಕಾರಗಳು** | .. | **280** |
| I | **ಅರ್ಥಾಲಂಕಾರ** | .. | 283 |
| | (೧) ಉಪಮಾಲಂಕಾರ | .. | 283 |
| | (೨) ರೂಪಕಾಲಂಕಾರ | .. | 285 |
| | (೩) ಉತ್ಪ್ರೇಕ್ಷಾಲಂಕಾರ | .. | 287 |
| | (೪) ದೃಷ್ಟಾಂತಾಲಂಕಾರ | .. | 289 |
| | (೫) ಅರ್ಥಾಂತರನ್ಯಾಸಾಲಂಕಾರ | .. | 290 |
| | (೬) ಶ್ಲೇಷಾಲಂಕಾರ | .. | 292 |
| II | **ಶಬ್ದಾಲಂಕಾರಗಳು** | .. | 295 |
| | (ಅ) ಅನುಪ್ರಾಸ | .. | 295 |
| | (೧) ವೃತ್ತ್ಯನುಪ್ರಾಸ | .. | 295 |
| | (೨) ಛೇಕಾನುಪ್ರಾಸ | .. | 296 |
| | (ಆ) ಯಮಕಾಲಂಕಾರ | .. | 297 |
| III | **ಸಾರಾಂಶ** | .. | 298 |

| | | | ಪುಟ |
|---|---|---|---|
| **ಅಧ್ಯಾಯ ೧೨.** | **ಲೇಖನ ಚಿಹ್ನೆಗಳು** | .. | **301** |
| | (೧) ಪೂರ್ಣವಿರಾಮ ಚಿಹ್ನೆ | .. | 301 |
| | (೨) ಅರ್ಧವಿರಾಮ ಚಿಹ್ನೆ | .. | 301 |
| | (೩) ಅಲ್ಪವಿರಾಮ ಚಿಹ್ನೆ | .. | 302 |
| | (೪) ಪ್ರಶ್ನಾರ್ಥಕ ಚಿಹ್ನೆ | .. | 303 |
| | (೫) ಭಾವಸೂಚಕ ಚಿಹ್ನೆ | .. | 303 |
| | (೬) ಉದ್ಧರಣ ಚಿಹ್ನೆ ಅಥವಾ ವಾಕ್ಯವೇಷ್ಟನ ಚಿಹ್ನೆ | .. | 304 |
| | (೭) ಆವರಣ ಚಿಹ್ನೆ | .. | 305 |
| | (೮) ವಿವರಣಾತ್ಮಕ ಚಿಹ್ನೆ | .. | 306 |
| | (೯) ಅಧಿಕ ಚಿಹ್ನೆ | .. | 306 |
| | (೧೦) ಸಮಾನಾರ್ಥಕ ಚಿಹ್ನೆ | .. | 306 |

* * * * *

# ಸೂತ್ರ ಸಂಖ್ಯೆಗಳು*

(1) ಸ್ವರ
(2) ವ್ಯಂಜನ
(3) ಯೋಗವಾಹ
(4) ಒಟ್ಟುವರ್ಣಮಾಲೆಯ ಅಕ್ಷರಗಳು
(5) ಹ್ರಸ್ವಸ್ವರ
(6) ದೀರ್ಘಸ್ವರ
(7) ಪ್ಲುತಸ್ವರ
(8) ಅಲ್ಪಪ್ರಾಣ
(9) ಮಹಾಪ್ರಾಣ
(10) ಅನುನಾಸಿಕ
(11) ಅವರ್ಗೀಯ ವ್ಯಂಜನ
(12) ಗುಣಿತಾಕ್ಷರ
(13) ಸಜಾತೀಯ ಸಂಯುಕ್ತಾಕ್ಷರ
(14) ವಿಜಾತೀಯ ಸಂಯುಕ್ತಾಕ್ಷರ
(15) ಸಂಧಿ
(16) ಲೋಪಸಂಧಿ
(17) ಆಗಮಸಂಧಿ
(18) ಆದೇಶಸಂಧಿ
(19) ಪ್ರಕೃತಿಭಾವ
(20) ಸವರ್ಣದೀರ್ಘಸಂಧಿ
(21) ಗುಣಸಂಧಿ
(22) ವೃದ್ಧಿಸಂಧಿ
(23) ಯಣ್‌ಸಂಧಿ
(24) ಜಶ್ತ್ವಸಂಧಿ
(25) ಶ್ಚುತ್ವಸಂಧಿ
(26) ಅನುನಾಸಿಕಸಂಧಿ
(27) ತತ್ಸಮಗಳು
(28) ತದ್ಭವಗಳು
(29) ನಾಮಪ್ರಕೃತಿ
(30) ಪದ
(31) ನಾಮಪದ
(32) ವಿಭಕ್ತಿಪ್ರತ್ಯಯಗಳು
(33) ನಾಮಪ್ರಕೃತಿಭೇದಗಳು
(34) ವಸ್ತುವಾಚಕಗಳು
(35) ಗುಣವಾಚಕಗಳು
(36) ಸಂಖ್ಯಾವಾಚಕಗಳು
(37) ಸಂಖ್ಯೇಯವಾಚಕಗಳು
(38) ಭಾವನಾಮಗಳು
(39) ಪರಿಮಾಣವಾಚಕಗಳು
(40) ಪ್ರಕಾರವಾಚಕಗಳು
(41) ದಿಗ್ವಾಚಕಗಳು
(42) ಸರ್ವನಾಮಗಳು
(43) ಪುಲ್ಲಿಂಗ
(44) ಸ್ತ್ರೀಲಿಂಗ
(45) ನಪುಂಸಕಲಿಂಗ
(46) ಪುನ್ನಪುಂಸಕಲಿಂಗ
(47) ಸ್ತ್ರೀನಪುಂಸಕಲಿಂಗ
(48) ನಿತ್ಯನಪುಂಸಕಲಿಂಗ
(49) ವಾಚ್ಯಲಿಂಗಗಳು
(50) ಏಕವಚನ, ಬಹುವಚನಗಳು
(51) ಬಹುವಚನದಲ್ಲಿ ಆಗಮಗಳು
(52) ವಿಭಕ್ತಿ
(53) ವಿಭಕ್ತಿಪಲ್ಲಟ
(54) ಧಾತು

* ಈ ಗ್ರಂಥದಲ್ಲಿ ವ್ಯಾಕರಣ ಸೂತ್ರಗಳಿಗೆ ಆಂಗ್ಲ ಸಂಖ್ಯೆಯನ್ನು ಕ್ರಮವಾಗಿ ಕೊಟ್ಟಿದೆ. ಇದರಿಂದ ವಿದ್ಯಾರ್ಥಿಗಳಿಗೆ ಬೇಕಾದ ವಿಷಯದ ಸೂತ್ರವನ್ನು ಹುಡುಕಿಕೊಳ್ಳುವುದು ಸುಲಭವಾಗುವುದೆಂದು ಭಾವಿಸಿ ಹಾಗೆ ಮಾಡಲಾಗಿದೆ.

(55) ಸಾಧಿತಧಾತು (ಪ್ರತ್ಯಯಾಂತಧಾತು)
(56) ಸಂಸ್ಕೃತ ನಾಮಪ್ರಕೃತಿಗಳು ಕನ್ನಡದ ಧಾತುವಾಗುವಿಕೆ
(57) ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯ
(58) ಸಕರ್ಮಕ ಧಾತುಗಳು
(59) ಅಕರ್ಮಕ ಧಾತುಗಳು
(60) ಕ್ರಿಯಾಪದಗಳು
(61) ವರ್ತಮಾನಕಾಲದ ಕ್ರಿಯಾಪದಗಳು
(62) ಭೂತಕಾಲದ ಕ್ರಿಯಾಪದಗಳು
(63) ಭವಿಷ್ಯತ್ ಕಾಲದ ಕ್ರಿಯಾಪದಗಳು
(64) ವಿಧ್ಯರ್ಥಕ ಕ್ರಿಯಾಪದಗಳು
(65) ನಿಷೇಧಾರ್ಥಕ ಕ್ರಿಯಾಪದಗಳು
(66) ಸಂಭಾವನಾರ್ಥಕ ಕ್ರಿಯಾಪದಗಳು
(67) ಕಾಲಪಲ್ಲಟ
(68) ಕ್ರಿಯಾರ್ಥಕಾವ್ಯಯಗಳು
(69) ಕರ್ಮಣಿಪ್ರಯೋಗಗಳು
(70) ಕರ್ತರಿ ಕರ್ಮಣಿ ಪ್ರಯೋಗದಲ್ಲಿ ಲಿಂಗವ್ಯವಸ್ಥೆ
(71) ಅನೇಕ ಕರ್ತೃಗಳಿರುವಾಗ ಲಿಂಗ ವ್ಯವಸ್ಥೆ
(72) (73) ಸರ್ವನಾಮಗಳು ಕರ್ತೃವಾಗಿರುವಾಗ ಲಿಂಗವ್ಯವಸ್ಥೆ
(74) ಸಮಾಸ
(75) ಅರಿಸಮಾಸ
(76) ಸಮಾಸ ವಿಧಗಳು
(77) ತತ್ಪುರುಷ ಸಮಾಸ
(78) ಕರ್ಮಧಾರಯ ಸಮಾಸ
(79) ದ್ವಿಗು ಸಮಾಸ
(80) ಅಂಶಿ ಸಮಾಸ
(81) ದ್ವಂದ್ವ ಸಮಾಸ
(82) ಬಹುವ್ರೀಹಿ ಸಮಾಸ
(83) ಕ್ರಿಯಾ ಸಮಾಸ
(84) ಗಮಕ ಸಮಾಸ
(85) ದ್ವಿರುಕ್ತಿ
(86) ಕೃದಂತ
(87) ಕೃನ್ನಾಮ ರೂಪಗಳು
(88) ಕೃದಂತ ಭಾವನಾಮ
(89) ಕೃದಂತಾವ್ಯಯಗಳು
(90) ತದ್ಧಿತಾಂತಗಳು
(91) ಸ್ತ್ರೀಲಿಂಗದಲ್ಲಿ ತದ್ಧಿತ ಪ್ರತ್ಯಯಗಳು
(92) ತದ್ಧಿತ ಭಾವನಾಮಗಳು
(93) ತದ್ಧಿತಾಂತಾವ್ಯಯಗಳು
(94) ಅವ್ಯಯಗಳು:
(i) ಸಾಮಾನ್ಯಾವ್ಯಯಗಳು
(ii) ಅನುಕರಣಾವ್ಯಯಗಳು
(iii) ಭಾವಸೂಚಕಾವ್ಯಯಗಳು
(iv) ಕ್ರಿಯಾರ್ಥಕಾವ್ಯಯಗಳು
(v) ಸಂಬಂಧಾರ್ಥಕಾವ್ಯಯಗಳು
(vi) ಕೃದಂತಾವ್ಯಯ
(vii) ತದ್ಧಿತಾಂತಾವ್ಯಯ
(viii) ಅವಧಾರಣಾರ್ಥಕಾವ್ಯಯಗಳು
(95) ವಾಕ್ಯ
(96) ಆಧ್ಯಾಹಾರ
(97) ಸಾಮಾನ್ಯವಾಕ್ಯ
(98) ಸಂಯೋಜಿತವಾಕ್ಯ
(99) ಮಿಶ್ರವಾಕ್ಯ
(100) ರೂಪನಿಷ್ಪತ್ತಿ
(101) ಪ್ರಾಸ
(102) ಗಣಗಳು
(103) ಮಾತ್ರೆ, ಗುರು ಮತ್ತು ಲಘುಗಳು
(104) ಒಂದು ಮಾತ್ರಾಕಾಲದ ಅಕ್ಷರಗಳು
(105) ಗುರುಗಳು
(106) ಗುರುಗಳಾಗುವ ಅಕ್ಷರಗಳು

(107) ಕಂದಪದ್ಯದ ಲಕ್ಷಣ
(108) ಶರಷಟ್ಪದಿ ಲಕ್ಷಣ
(109) ಕುಸುಮಷಟ್ಪದಿ ಲಕ್ಷಣ
(110) ಭೋಗಷಟ್ಪದಿ ಲಕ್ಷಣ
(111) ಭಾಮಿನಿಷಟ್ಪದಿ ಲಕ್ಷಣ
(112) ಪರಿವರ್ಧಿನಿಷಟ್ಪದಿ ಲಕ್ಷಣ
(113) ವಾರ್ಧಕಷಟ್ಪದಿ ಲಕ್ಷಣ
(114) ಉತ್ಸಾಹರಗಳೆ ಲಕ್ಷಣ
(115) ಮಂದಾನಿಲರಗಳೆ ಲಕ್ಷಣ
(116) ಮಂದಾನಿಲರಗಳೆ ಲಕ್ಷಣ
(117) ಲಲಿತರಗಳೆ ಲಕ್ಷಣ
(118) ಅಕ್ಷರಗಣಗಳು
(119) ಉತ್ಪಲಮಾಲಾವೃತ್ತ ಲಕ್ಷಣ
(120) ಚಂಪಕಮಾಲಾವೃತ್ತ ಲಕ್ಷಣ
(121) ಶಾರ್ದೂಲವಿಕ್ರೀಡಿತವೃತ್ತ ಲಕ್ಷಣ
(122) ಮತ್ತೇಭವಿಕ್ರೀಡಿತವೃತ್ತ ಲಕ್ಷಣ
(123) ಸ್ರಗ್ಧರಾವೃತ್ತ ಲಕ್ಷಣ
(124) ಮಹಾಸ್ರಗ್ಧರಾವೃತ್ತ ಲಕ್ಷಣ
(125) ಉಪಮಾಲಂಕಾರ
(126) ಅಭೇದರೂಪಕಾಲಂಕಾರ
(127) ಉತ್ಪ್ರೇಕ್ಷಾಲಂಕಾರ
(128) ದೃಷ್ಟಾಂತಾಲಂಕಾರ
(129) ಅರ್ಥಾಂತರನ್ಯಾಸಾಲಂಕಾರ
(130) ಶ್ಲೇಷಾಲಂಕಾರ
(131) ಶಬ್ದಾಲಂಕಾರ
(132) ವೃತ್ತ್ಯನುಪ್ರಾಸ
(133) ಛೇಕಾನುಪ್ರಾಸ
(134) ಯಮಕಾಲಂಕಾರ

* * * * *

# ಪೀಠಿಕೆ

ಶ್ರೀವಾಗ್ದೇವಿಗೆ ಶಬ್ದದಿ–।
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು–।
ದ್ಭಾವಿಪ ನಿರ್ಮಳಮೂರ್ತಿಗಿ–।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

– ಕೇಶಿರಾಜ (ಕ್ರಿ.ಶ.೧೨೬೦)

ಲೋಕದಲ್ಲಿ ನಡೆಯುವ ಎಲ್ಲಾ ವ್ಯವಹಾರಗಳೂ ಪರಸ್ಪರ ಮಾತನಾಡುವುದರಿಂದ, ಬರೆಯುವುದರಿಂದ ನಡೆಯುತ್ತವೆ. ತಮ್ಮ ತಮ್ಮ ಮನಸ್ಸಿನ ವಿಚಾರಗಳನ್ನು ಎಲ್ಲರೂ ಮಾತಿನ ಮೂಲಕವೇ ಇನ್ನೊಬ್ಬರಿಗೆ ತಿಳಿಯಪಡಿಸುತ್ತಾರೆ. ಆಡಿದ ಮಾತುಗಳನ್ನು, ಆಡಬೇಕಾದ ಮಾತುಗಳನ್ನು ಗೊತ್ತಾದ ಲಿಪಿಯ ಮೂಲಕ ಬರೆಯುವುದೇ ಬರವಣಿಗೆಯೆನಿಸುವುದು. ಬರೆಯುವುದೂ, ಮಾತನಾಡುವುದೂ ಮುಖ್ಯವಾಗಿ ಶಬ್ದಗಳ ಮೂಲಕವೇ ಆಗಿದೆ. ಒಂದೊಂದು ಶಬ್ದಕ್ಕೂ ಒಂದೊಂದು ಅರ್ಥವಿದೆ. ಶಬ್ದಗಳ ಉಚ್ಚಾರವಾಗಲಿ ಬರವಣಿಗೆಯಾಗಲಿ ಅರ್ಥಪೂರ್ಣವಾಗಿರಬೇಕು. ಶುದ್ಧವಾಗಿ ಮಾತನಾಡುವುದೂ, ಬರೆಯುವುದೂ ಉತ್ತಮ ವಿದ್ಯಾವಂತನ ಲಕ್ಷಣವಾಗಿದೆ. ವಿದ್ಯಾವಂತನೆನ್ನಿಸಿಕೊಳ್ಳಬೇಕಾದವನು ತಾನು ಬರೆಯುವ ಬರವಣಿಗೆಯನ್ನು ಪೂರ್ಣ ವಿಚಾರಿಸಿ, ಶುದ್ಧವಾಗಿ ಬರೆಯಬೇಕಾಗುವುದು; ಅಲ್ಲದೆ ಅವನು ಮಾತನಾಡುವುದೂ ಅರ್ಥಪೂರ್ಣವಾಗಿರಬೇಕು. ಶಬ್ದ ಮತ್ತು ಶಬ್ದಗಳ ಸಂಬಂಧ ಹೀಗೆ ಹೀಗೆಯೇ ಇರಬೇಕೆಂಬುದನ್ನು ವ್ಯಾಕರಣ ಶಾಸ್ತ್ರವು ಗೊತ್ತುಪಡಿಸುವುದು. ಆದುದರಿಂದ ಶುದ್ಧವಾಗಿ, ಅರ್ಥಪೂರ್ಣವಾಗಿ ಮಾತನಾಡುವ ಮತ್ತು ಬರೆಯುವ ಶಕ್ತಿಯನ್ನು ಪಡೆಯಬೇಕಾದರೆ ಅವಶ್ಯವಾಗಿ ವ್ಯಾಕರಣಶಾಸ್ತ್ರವನ್ನು ಅಭ್ಯಾಸ ಮಾಡಲೇ ಬೇಕಾಗುವುದು. ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಆಯಾಯ ಭಾಷೆಗಳ ಸ್ವರೂಪವನ್ನು ಅವುಗಳ ವ್ಯಾಕರಣಶಾಸ್ತ್ರವನ್ನು ಅಭ್ಯಾಸ ಮಾಡಬೇಕು. ಕನ್ನಡ ಭಾಷೆಯನ್ನು ಕಲಿಯುವವರು ಕನ್ನಡ ವ್ಯಾಕರಣವನ್ನು ಅವಶ್ಯವಾಗಿ ಓದಿ, ಅದರ ಶಬ್ದಗಳ ಶುದ್ಧ ರೂಪಗಳನ್ನೂ, ಅವುಗಳ ಸಂಬಂಧವನ್ನೂ ಸ್ಪಷ್ಟವಾಗಿ ತಿಳಿಯಬೇಕಾಗುವುದು.

ಸರ್ವ ವ್ಯವಹಾರಗಳಿಗೆ ಮೂಲವಾದುದು ಶಬ್ದಾರ್ಥಗಳ ನಿರ್ಣಯವೇ ಆಗಿದೆಯೆಂಬುದನ್ನು ಈ ಹಿಂದೆಯೇ ತಿಳಿಸಿದೆ. ವ್ಯಾಕರಣದಿಂದ ಪದ, ಪದದಿಂದ ಅರ್ಥ, ಅರ್ಥದಿಂದ ಜ್ಞಾನವು ಉಂಟಾಗುತ್ತದೆ*. ಭಾಷೆಯಲ್ಲಿ ಬಲ್ಲವನೆನ್ನಿಸಿಕೊಳ್ಳಬೇಕಾದರೆ,

* ವ್ಯಾಕರಣದಿಂದೆ ಪದಮಾ। ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ। ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥೧೦॥ ವೃತ್ತಿ: (ಪು.ತಿ.ನೋ)

**ಕೂಲಂಕುಷವಾಗಿ ವ್ಯಾಕರಣಶಾಸ್ತ್ರವನ್ನು ಓದಲೇ ಬೇಕು. ಭಾಷೆಯ ನಿಯಮಗಳನ್ನು ತಿಳಿಯಲೇ ಬೇಕು. ಮನಸ್ಸಿಗೆ ಬಂದ ಹಾಗೆ ಭಾಷೆಯ ಬಳಕೆಯನ್ನು ಮಾಡುತ್ತ ಹೋದರೆ ಕಾಲಾನಂತರದಲ್ಲಿ ಶದ್ಧವಾದ ಭಾಷೆಯ ಸ್ವರೂಪವೇ ಹಾಳಾಗಿ ಹೋಗಬಹುದು. ಶುದ್ಧವಾದ ಭಾಷೆಯನ್ನು ಬೆಳೆಸಿ, ಉಳಿಸಿಕೊಂಡು ಬರುವ ಸತ್ಸಂಪ್ರದಾಯವನ್ನು ಕನ್ನಡ ನಾಡಿನ ಮಕ್ಕಳು ಅನುಸರಿಸಬೇಕು. ನಮ್ಮ ಮಕ್ಕಳು ಶುದ್ಧವಾಗಿ ಬರೆಯುವುದನ್ನೂ, ಮಾತನಾಡುವುದನ್ನೂ ಅಭ್ಯಾಸ ಮಾಡಿ, ಸುಸಂಸ್ಕೃತ ಜನಾಂಗವೆಂದೆನಿಸಿಕೊಳ್ಳಬೇಕು. ಪ್ರೌಢಶಾಲೆಗಳಲ್ಲಿ ಓದುವ ಮಕ್ಕಳು ಈ ವ್ಯಾಕರಣದಲ್ಲಿರುವ ಎಲ್ಲ ನಿಬಂಧನೆಗಳನ್ನೂ ಚೆನ್ನಾಗಿ ಅರಿಯಬೇಕೆಂಬ ಮುಖ್ಯೋದ್ಧೇಶದಿಂದ ಈ ಪುಸ್ತಕವನ್ನು ರಚಿಸಲಾಗಿದೆ.**

* * * * *

---

ವೃತ್ತಿ: ವ್ಯಾಕರಣದಿಂ ಪದಸಿದ್ಧಿಯಕ್ಕುಂ: ಪದಸಿದ್ಧಿಯಿಂದರ್ಥಜ್ಞಾನಮಕ್ಕುಂ: ಅರ್ಥಜ್ಞಾನದಿಂ ತತ್ತ್ವವಿಚಾರಮಕ್ಕುಂ: ತತ್ತ್ವಜ್ಞಾನದಿಂ ಮುಕ್ತಿ ದೊರೆಕೊಳ್ಗುಂ ವಿಬುಧರ್ಗದು ಕಾರಣದಿಂ ವ್ಯಾಕರಣಮುಪಾದೇಯಂ. –ಶಬ್ದಮಣಿದರ್ಪಣಂ –ಕೇಶಿರಾಜ

# ಕನ್ನಡ ವ್ಯಾಕರಣಕಾರರು ಮತ್ತು ಅವರ ಗ್ರಂಥಗಳು

ಕನ್ನಡ ಭಾಷೆ ಪ್ರಾಚೀನವಾದುದು. ಇದು ದಕ್ಷಿಣಭಾರತದಲ್ಲಿ ಪ್ರಸಿದ್ಧವಾಗಿರುವ ದ್ರಾವಿಡ ಭಾಷೆಗಳ ವರ್ಗಕ್ಕೆ ಸೇರಿದುದು. ತಮಿಳು, ತೆಲುಗು, ಮಲಯಾಳ, ತುಳುಗಳೂ ಆ ವರ್ಗಕ್ಕೇ ಸೇರಿದವುಗಳು. ಈ ಐದೂ ಭಾಷೆಗಳು ಒಬ್ಬಳೇ ತಾಯಿಯಿಂದ ಜನ್ಮವೆತ್ತಿದ ಅಕ್ಕತಂಗಿಯರಿದ್ದ ಹಾಗೆ. ಸುಮಾರು ೨ ಸಾವಿರ ವರ್ಷಗಳಿಂದಲೂ '**ಕನ್ನಡ**' ಎಂಬ ನಾವು ಮಾತನಾಡುವ ಭಾಷೆ ಬಳಕೆಯಲ್ಲಿದೆ. ಪ್ರಾಚೀನಕಾಲದ ಈ ಕನ್ನಡಭಾಷೆಯನ್ನು ನಾವು '**ಹಳಗನ್ನಡ**' ಎಂದು ಕರೆಯುತ್ತೇವೆ. ಹಳಗನ್ನಡದ ಈ ಭಾಷೆಯ ಸ್ವರೂಪವನ್ನು ತಿಳಿಯಪಡಿಸಲೋಸುಗ ಅನೇಕ ವ್ಯಾಕರಣ ಗ್ರಂಥಗಳನ್ನು ಪ್ರಸಿದ್ಧ ವಿದ್ವಾಂಸರನೇಕರು ಬರೆದಿದ್ದಾರೆ. ಅವರ ಸಂಕ್ಷೇಪ ಪರಿಚಯವನ್ನು ಈ ಕೆಳಗೆ ಕೊಡಲಾಗಿದೆ.

## (೧) ೨ನೆಯ ನಾಗವರ್ಮ

ಕ್ರಿ.ಶ.ಸು. ೧೧೪೫ ರಲ್ಲಿದ್ದ ನಾಗವರ್ಮನೆಂಬುವನು '**ಕರ್ನಾಟಕ ಭಾಷಾ ಭೂಷಣ**', '**ಕಾವ್ಯಾವಲೋಕನ**'ಗಳೆಂಬೆರಡು ಗ್ರಂಥಗಳನ್ನು ಬರೆದನು. ಕವ್ಯಾವಲೋಕನದಲ್ಲಿರುವ ೧ನೆಯ ಭಾಗದಲ್ಲಿ '**ಶಬ್ದಸ್ಮೃತಿ**' ಎಂಬ ಹೆಸರಿನಿಂದ ಬರೆದ ವಿಚಾರವೇ ವ್ಯಾಕರಣಶಾಸ್ತ್ರಕ್ಕೆ ಸಂಬಂಧಿಸಿ ದುದಾಗಿದೆ. ಈ '**ಶಬ್ದಸ್ಮೃತಿ**'ಯಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ–ಎಂಬ ೫ ಭಾಗಗಳಿದ್ದು, ಬಹು ಸಂಕ್ಷೇಪವಾಗಿ ಹಳಗನ್ನಡ ವ್ಯಾಕರಣ ವಿಷಯಗಳನ್ನು ಅದರಲ್ಲಿ ವಿವರಿಸಲಾಗಿದೆ. 'ಕರ್ನಾಟಕಭಾಷಾಭೂಷಣ' ಎಂಬ ಗ್ರಂಥವು ಕನ್ನಡ ವ್ಯಾಕರಣಗ್ರಂಥ ವಾದರೂ ಸಂಸ್ಕೃತಭಾಷೆಯಲ್ಲಿ ಬರೆಯಲ್ಪಟ್ಟಿದೆ. ಈ ಪುಸ್ತಕದಿಂದ ಸಂಸ್ಕೃತವನ್ನು ಬಲ್ಲವರೂ ಕನ್ನಡ ವ್ಯಾಕರಣ ತಿಳಿಯಲು ಹೆಚ್ಚು ಅನುಕೂಲವಾಗಿದೆ. ಅಲ್ಲದೆ ಕನ್ನಡವೂ ಸಂಸ್ಕೃತದಷ್ಟೇ ಮಹತ್ವದ ಭಾಷೆಯೆಂಬುದನ್ನು ತೋರಿಸಿಕೊಡಲು ಸಾಧ್ಯವಾಗಿದೆ.

## (೨) ಕೇಶಿರಾಜ

ಕ್ರಿ.ಶ.ಸು. ೧೨೬೦ ರಲ್ಲಿದ್ದ '**ಕೇಶಿರಾಜ**' ಎಂಬುವನು '**ಶಬ್ದಮಣಿದರ್ಪಣ**' ಎಂಬ ಹೆಸರಿನ ಕನ್ನಡ ವ್ಯಾಕರಣಗ್ರಂಥವನ್ನು ರಚಿಸಿದನು. ಇದು ಸಮಗ್ರ ಹಳಗನ್ನಡ ಭಾಷೆಯ ಸ್ವರೂಪವನ್ನು ತಿಳಿಯಬೇಕೆನ್ನುವವರಿಗೆ ಉತ್ತಮ ಕೈಗನ್ನಡಿಯಂತಿದೆ. ಇವನ ತಂದೆಯಾದ '**ಮಲ್ಲಿಕಾರ್ಜುನ**' ಎಂಬುವನೂ, ಸೋದರಮಾವನಾದ '**ಜನ್ನ**' ಎಂಬುವನೂ ದೊಡ್ಡ ಕವಿಗಳು. ತಾತನಾದ (ತಾಯಿಯ ತಂದೆ) '**ಕವಿಸುಮನೋಬಾಣ**' ಎಂಬುವನೂ ಮಹಾವಿದ್ವಾಂಸ. ಇಂಥ ಮಹಾ ವಿದ್ವಾಂಸರ ಪರಂಪರೆಯಲ್ಲಿ ಹುಟ್ಟಿದ ಕೇಶಿರಾಜನೂ ಮಹಾವಿದ್ವಾಂಸನೇ ಆಗಿದ್ದನೆಂಬುದು ಅವನು ಬರೆದ ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥದಿಂದ ಗೊತ್ತಾಗುವುದು. ಈ ವ್ಯಾಕರಣ ಗ್ರಂಥದಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಎಂಟು ಅಧ್ಯಾಯಗಳಿವೆ. ಗ್ರಂಥದ ಕೊನೆಯಲ್ಲಿರುವ

ಪ್ರಯೋಗಸಾರವೆಂಬ ಅಧ್ಯಾಯವು ಶಬ್ದಾರ್ಥನಿರ್ಣಯವನ್ನು ತಿಳಿಯಲು ಉಪಯುಕ್ತವಾಗಿದೆ. ವ್ಯಾಕರಣದ ಸೂತ್ರಗಳೆಲ್ಲ ಕಂದಪದ್ಯದಲ್ಲಿವೆ. ಒಟ್ಟು ೩೨೨ ಸೂತ್ರಗಳಿವೆ.

## (೩) ಭಟ್ಟಾಕಳಂಕದೇವ

ಕ್ರಿ.ಶ. ೧೬೦೪ರ ಸುಮಾರಿನಲ್ಲಿದ್ದ '**ಭಟ್ಟಾಕಳಂಕದೇವ**'ನೆಂಬುವನು '**ಶಬ್ದಾನುಶಾಸನ**' ಎಂಬ ಹೆಸರಿನ ಬಹುಪ್ರೌಢವಾದ ಕನ್ನಡ ವ್ಯಾಕರಣಗ್ರಂಥವನ್ನು ಬರೆದನು. ಆದರೆ ಇದು ಸಂಸ್ಕೃತದಲ್ಲಿದೆ. ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಾಡುವಳ್ಳಿ (ಸಂಗೀತಪುರ) ಎಂಬ ಊರಿನಲ್ಲಿರುವ ಜೈನರ ಮಠದ ಗುರುವಾಗಿದ್ದ '**ಅಕಳಂಕದೇವ**' ಎಂಬುವರು ಭಟ್ಟಾಕಳಂಕನ ಗುರುಗಳು. ಭಟ್ಟಾಕಳಂಕನು ಸಂಸ್ಕೃತ, ಕನ್ನಡ ಈ ಎರಡೂ ಭಾಷೆಗಳಲ್ಲಿ ಮಹಾವಿದ್ವಾಂಸ ನಾಗಿದ್ದನು. ಕನ್ನಡಭಾಷೆಯೂ ಸಂಸ್ಕೃತದಂತೆ ಯೋಗ್ಯ ಪುರಸ್ಕಾರ ಪಡೆಯತಕ್ಕ ಭಾಷೆಯೆಂಬು ದನ್ನು ಆಗಿನ ಸಂಸ್ಕೃತಭಾಷಾವಿದ್ವಾಂಸರಿಗೆ ತೋರಿಸಿಕೊಡುವ ಉದ್ದೇಶದಿಂದ ಈ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದುದು ಕನ್ನಡ ಭಾಷೆಗೊಂದು ದೊಡ್ಡ ಹೆಮ್ಮೆಯ ವಿಷಯ. ಹಿಂದೆ **ಪಾಣಿನಿ** ಮತ್ತು **ಪತಂಜಲಿ** ಮಹರ್ಷಿಗಳು ಸಂಸ್ಕೃತಭಾಷೆಯ ಸಲುವಾಗಿ '**ಅಷ್ಟಾಧ್ಯಾಯೀ**' ಮತ್ತು '**ಮಹಾಭಾಷ್ಯ**' ಎಂಬ ವ್ಯಾಕರಣಗ್ರಂಥಗಳನ್ನು ಕ್ರಮವಾಗಿ ರಚಿಸಿದ್ದಾರೆ. ಅವುಗಳ ಹಾಗೆಯೇ ಒಂದು ವ್ಯವಸ್ಥಾಬದ್ಧ ಕ್ರಮದಲ್ಲಿ ಭಟ್ಟಾಕಳಂಕದೇವನು ಕನ್ನಡದ ಈ ಶಬ್ದಾನುಶಾಸನ ವ್ಯಾಕರಣದ ಸೂತ್ರಗಳನ್ನೂ, ಅವುಗಳಿಗೆ ಭಾಷ್ಯವನ್ನೂ ರಚಿಸಿದನು.

ಈ ಪೂರ್ವದಲ್ಲಿ ಹೇಳಲ್ಪಟ್ಟ ನಾಗವರ್ಮನ ಶಬ್ದಸ್ಮೃತಿ, ಕರ್ನಾಟಕಭಾಷಾಭೂಷಣ ಗಳೂ, ಕೇಶಿರಾಜನ ಶಬ್ದಮಣಿದರ್ಪಣವೂ, ಭಟ್ಟಾಕಳಂಕದೇವನ ಶಬ್ದಾನುಶಾಸನವೂ ಕನ್ನಡ ಭಾಷೆಯ ಸ್ವರೂಪವನ್ನು ತಿಳಿಸತಕ್ಕ ವ್ಯಾಕರಣ ಗ್ರಂಥಗಳು. ಇಂದಿನ ಕಾಲದಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯು ಹಿಂದಿನ ಕಾಲದ ಕನ್ನಡ ಭಾಷೆಗಿಂತ ಬಹಳ ಮಟ್ಟಿಗೆ ಮಾರ್ಪಾಟುಗೊಂಡಿದೆ. ಈ ಕಾಲದ ಭಾಷೆಯನ್ನು '**ಹೊಸಗನ್ನಡ**' ಎಂದು ಕರೆಯುತ್ತೇವೆ. ನಮ್ಮ ಮಕ್ಕಳು ಮುಖ್ಯವಾಗಿ ಹೊಸಗನ್ನಡ ಭಾಷೆಯನ್ನು ಕ್ರಮವಾಗಿ ಅಭ್ಯಾಸ ಮಾಡುವುದರ ಜೊತೆಗೆ ಹಳಗನ್ನಡ ಭಾಷೆಯ ಸ್ಥೂಲವಾದ ಪರಿಚಯವನ್ನೂ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ಮುಖ್ಯವಾಗಿ ಹೊಸಗನ್ನಡ ವ್ಯಾಕರಣವನ್ನು ಓದುವುದರ ಜೊತೆಗೆ ಹಳಗನ್ನಡವನ್ನು ಪರಿಚಯ ಮಾಡಿಕೊಳ್ಳಲು ಬೇಕಾಗುವ ಕೆಲವು ವ್ಯಾಕರಣದ ಅಂಶಗಳ ಕಡೆಗೆ ಗಮನ ಕೊಡಬೇಕಾಗುವುದು. ಆದರೆ ಹಳಗನ್ನಡ ವ್ಯಾಕರಣವನ್ನೇ ಪ್ರಧಾನವಾಗಿ ತಿಳಿಯಬೇಕಾಗಿಲ್ಲ. ಹಳಗನ್ನಡ ಕಾವ್ಯಗಳನ್ನು ಸ್ವಲ್ಪ ಸ್ವಲ್ಪವಾಗಿ ಓದುತ್ತಿರುವ ನಮ್ಮ ಮಕ್ಕಳು ಆ ಬಗೆಗೆ ಅಲ್ಪಸ್ವಲ್ಪ ತಿಳಿದರೆ ಸಾಕು.

* * * * *

# ಅಧ್ಯಾಯ ೧

# ಸಂಜ್ಞಾ ಪ್ರಕರಣ

## ಸಂಜ್ಞೆಗಳು

## I – ಕನ್ನಡ ವರ್ಣಮಾಲೆ

ನಾವು ಮಾತನಾಡುವ ಮಾತುಗಳೆಲ್ಲ ವಾಕ್ಯವಾಕ್ಯಗಳಾಗಿರುತ್ತವೆ. ವಾಕ್ಯಗಳು ಪದಗಳಿಂದ ಕೂಡಿರುತ್ತವೆ. ಪದಗಳು ಅಕ್ಷರಗಳಿಂದ ಕೂಡಿರುತ್ತವೆ.

"**ನಾನು ಪಾಠಶಾಲೆಗೆ ಹೋಗಿ ಬಂದೆನು.**" ಈ ವಾಕ್ಯದಲ್ಲಿ '**ನಾನು**', '**ಪಾಠಶಾಲೆಗೆ**', '**ಹೋಗಿ**', '**ಬಂದೆನು**' – ಹೀಗೆ ನಾಲ್ಕು ಪದಗಳಿವೆ. ಒಂದೊಂದು ಪದದಲ್ಲೂ ಅನೇಕ ಅಕ್ಷರಗಳಿವೆ. '**ನಾನು**' ಎಂಬಲ್ಲಿ **ನ್ ಆ ನ್ ಉ** ಎಂಬ ಬೇರೆ ಬೇರೆ ಅಕ್ಷರಗಳಿವೆ. ನಾವು ಕನ್ನಡ ಭಾಷೆಯನ್ನು ಮಾತಾಡುವಾಗ ಇಂಥ ೫೦ ಅಕ್ಷರಗಳನ್ನು ಬಳಸುತ್ತೇವೆ. ಕನ್ನಡದ ಈ ೫೦ ಅಕ್ಷರಗಳ ಮಾಲೆಗೇ '**ವರ್ಣಮಾಲೆ**' ಅಥವಾ '**ಅಕ್ಷರಮಾಲೆ**' ಎನ್ನುತ್ತೇವೆ.

'**ಪಾಠಶಾಲೆ**' ಎಂಬ ಪದದಲ್ಲಿ ಎಷ್ಟು ಅಕ್ಷರಗಳಿವೆ ಎಂಬುದನ್ನು ಈಗ ನೋಡೋಣ. **ಪ್ಆ, ಠ್ಅ, ಶ್ಆ, ಲ್ಎ–** ಹೀಗೆ ಎಂಟು ಅಕ್ಷರಗಳು ಈ ಪದದಲ್ಲಿ ಇದ್ದ ಹಾಗಾಯಿತು. **ಪ್, ಠ್, ಶ್, ಲ್–** ಹೀಗೆ ಈ ನಾಲ್ಕು ಅಕ್ಷರಗಳನ್ನು ಅವುಗಳ ಮುಂದೆ ಇರುವ **ಆ, ಅ, ಆ, ಎ** ಎಂಬ ಈ ನಾಲ್ಕು ಅಕ್ಷರಗಳನ್ನು ಉಚ್ಚಾರ ಮಾಡಿದಂತೆ ಸುಲಭವಾಗಿ ಉಚ್ಚಾರ ಮಾಡಲಾಗುವುದಿಲ್ಲ. ಇವುಗಳನ್ನು ಉಚ್ಚಾರ ಮಾಡಲು ಮುಂದೆ **ಆ ಇ ಏ–** ಇತ್ಯಾದಿ ಸ್ವರಗಳು ಬೇಕೇ ಬೇಕು. ಅಥವಾ ಹಿಂದಾದರೂ ಸ್ವರವಿರಬೇಕು. ಹೇಗೆಂದರೆ '**ಪ್**' ಇದರ ಹಿಂದೆ "**ಆ**" ಸ್ವರವಿದ್ದರೆ '**ಆಪ್**' ಎನ್ನಬಹುದು. ಮುಂದೆ ಇದ್ದರೆ '**ಪ**' ಎನ್ನಬಹುದು, ಅದಿಲ್ಲದೆ **ಪ್ ಠ್ ಶ್ ಲ್** ಹೀಗೆ ಬರೆದರೆ ಶಬ್ದವೂ ಆಗುವುದಿಲ್ಲ, ಉಚ್ಚಾರ ಮಾಡಲೂ ಆಗುವುದಿಲ್ಲ. **ಆ, ಇ, ಎ, ಒ** – ಇಂಥ ಅಕ್ಷರಗಳನ್ನಾದರೋ ಸ್ವತಂತ್ರವಾಗಿ ಉಚ್ಚಾರ ಮಾಡಬಹುದು. ಆದ್ದರಿಂದ–

**(1) ಸ್ವತಂತ್ರವಾಗಿ ಉಚ್ಚಾರಮಾಡಲಾಗುವ ಅಕ್ಷರಗಳನ್ನು ಸ್ವರಗಳೆಂದು ಕರೆಯುತ್ತೇವೆ.**

**(2) ಸ್ವರಗಳ ಸಹಾಯದಿಂದ ಮಾತ್ರ ಉಚ್ಚಾರಮಾಡಲಾಗುವ ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುತ್ತೇವೆ.**

ಈ ಸ್ವರ ವ್ಯಂಜನಗಳಲ್ಲದೆ ಇನ್ನೊಂದು ಬಗೆಯ ಅಕ್ಷರಗಳಿವೆ. ಅವುಗಳನ್ನು ನೋಡಿರಿ–

'**ರಂಗ**' ಎಂಬಲ್ಲಿ **ರ್ ಅ ಂ ಗ್ ಅ –** ಇಷ್ಟು ಅಕ್ಷರಗಳಿವೆ. ಇಲ್ಲಿ ಅಕಾರದ ಮುಂದೆ ಸೊನ್ನೆಯೊಂದಿದೆ. ಆದರೆ ಅದು ಗಣಿತಪಾಠದಲ್ಲಿ ಬರುವ ಸೊನ್ನೆಯಲ್ಲ. ಅದಕ್ಕೆ ಭಾಷೆಯಲ್ಲಿ '**ಅನುಸ್ವಾರ**' ಎನ್ನುತ್ತೇವೆ, ಇದರ ಹಾಗೆಯೇ '**ದುಃಖ**' ಎಂಬ ಶಬ್ದದಲ್ಲಿ **ದ್ ಉ ಃ ಖ್ ಅ** ಎಂಬ ಅಕ್ಷರಗಳಿವೆಯಷ್ಟೆ. ಉಕಾರದ ಮುಂದೆ ಒಂದರ ಮೇಲೊಂದು ಸೊನ್ನೆಗಳನ್ನು ' ಃ ' ಹೀಗೆ ಬರೆದಿರುವ ಅಕ್ಷರವೇ '**ವಿಸರ್ಗ**' ಎಂಬ ಹೆಸರಿನದು. '**ಂ**' ಹೀಗೆ ಬರೆದಿರುವ ಅನುಸ್ವಾರವನ್ನೂ 'ಃ' ಹೀಗೆ ಬರೆದಿರುವ ವಿಸರ್ಗವನ್ನೂ '**ಯೋಗವಾಹ**'ಗಳೆಂದು ಕರೆಯುತ್ತೇವೆ.

**ಯೋಗವಾಹ (ಂ, ಃ)** ಗಳನ್ನು ಪ್ರತ್ಯೇಕವಾಗಿ (ಸ್ವತಃ) ಉಚ್ಚಾರ ಮಾಡಲಾಗುವುದಿಲ್ಲ. ಇನ್ನೊಂದು ಅಕ್ಷರದ ಸಂಬಂಧವನ್ನು ಇವು ಹೊಂದಿದಾಗಲೇ ಉಚ್ಚಾರ ಮಾಡಲು ಬರುತ್ತವೆ. '**ಯೋಗ**' ಎಂದರೆ ಸಂಬಂಧವನ್ನು, '**ವಾಹ**' ಎಂದರೆ ಹೊಂದಿದ, ಎಂದು ಅರ್ಥ. ಆದ್ದರಿಂದ ಒಂದು ಅಕ್ಷರದ ಸಂಬಂಧವನ್ನು ಹೊಂದಿದ ಮೇಲೆಯೇ ಉಚ್ಚಾರ ಮಾಡಲು ಬರುವ ಇವಕ್ಕೆ '**ಯೋಗವಾಹ**' ಗಳೆಂಬ ಹೆಸರು ಬಂದಿದೆ.

ಮುಖ್ಯವಾಗಿ ಇವು ಸ್ವರದ ಸಂಬಂಧ ಪಡೆದ ಮೇಲೆ ಎಂದರೆ ಸ್ವರಾಕ್ಷರಗಳ ಮುಂದೆ ಬಂದಾಗ ಉಚ್ಚಾರವಾಗುತ್ತವೆ. **ಅಂ, ಇಂ, ಎಂ, ಒಂ, ಓಂ, ಅಃ, ಇಃ, ಉಃ,__** ಹೀಗೆ ಇವನ್ನು ಸ್ವರದ ಸಂಬಂಧದಿಂದಲೇ ಉಚ್ಚರಿಸಬಹುದಲ್ಲದೆ, ಅದಿಲ್ಲದೆಯೇ 'ಂ' ' ಃ ' ಹೀಗೆ ಯಾವ ಅಕ್ಷರ ಸಂಬಂಧವಿಲ್ಲದೆ ಬರೆದರೆ, ಉಚ್ಚಾರಮಾಡಲು ಬರುವುದೇ ಇಲ್ಲ.[1] ಆದ್ದರಿಂದ

**(3) ಸ್ವರಗಳ ಮುಂದೆ ಬರೆದು ಉಚ್ಚರಿಸಲಾಗುವ ಅನುಸ್ವಾರ (ಂ), ವಿಸರ್ಗ (ಃ) ಗಳಿಗೆ ಯೋಗವಾಹಗಳು ಎಂದು ಹೆಸರು.**

ಮೇಲೆ ವಿವರಿಸಿದಂತೆ ಅಕ್ಷರಗಳನ್ನು (೧) **ಸ್ವರಗಳು,** (೨) **ವ್ಯಂಜನಗಳು,** (೩) **ಯೋಗವಾಹ**ಗಳು –ಎಂದು ಮೂರು ಭಾಗ ಮಾಡಬಹುದು. ಹಾಗಾದರೆ ಅವು ಯಾವುವು? ಎಂಬುದನ್ನು ಕ್ರಮವಾಗಿ ತಿಳಿಯೋಣ.

## (೧) ಸ್ವರಗಳು

**ಅ ಆ ಇ ಈ ಉ ಊ ಋ ೠ[2] ಎ ಏ ಐ ಒ ಓ ಔ**

ಎಂದು ಒಟ್ಟು ಸ್ವರಗಳು ಹದಿನಾಲ್ಕು (೧೪)

---

[1] ಅನುಸ್ವಾರ, ವಿಸರ್ಗಗಳನ್ನು ವ್ಯಂಜನಾಕ್ಷರಗಳ ಮುಂದೆಯೂ **ಗ್ಂ, ರ್ಂ** ಹೀಗೆಯೂ ಬರೆದು ಉಚ್ಚರಿಸಬಹುದು. ಇಂಥ ಉಚ್ಚಾರ ರೂಢಿಯಲ್ಲಿಲ್ಲ. ವೇದ, ಉಪನಿಷತ್ತುಗಳಲ್ಲಿ ಮಾತ್ರ ಉಂಟು.

[2] '**ೠ**' ಎಂಬ ಸ್ವರದಿಂದ ಕೂಡಿದ ಶಬ್ದಗಳು ಕನ್ನಡದ ಮಾತುಗಳಲ್ಲಿ ಬರುವುದೇ ಇಲ್ಲವಾದ್ದರಿಂದ ಇದನ್ನು ಕೈಬಿಟ್ಟರೂ ಹಾನಿಯಿಲ್ಲ. ಆಗ ಒಟ್ಟು ಅಕ್ಷರಗಳ ಸಂಖ್ಯೆ ೫೦ ಕ್ಕೆ ಪ್ರತಿಯಾಗಿ ೪೯ ಆಗುವುವು. ಆದರೆ ೫೦ ಅಕ್ಷರಗಳೆಂದು ೠಕಾರವನ್ನು ವರ್ಣಮಾಲೆಯಲ್ಲಿ ಸೇರಿಸಿ ಹೇಳುವುದು ವಾಡಿಕೆ.

## (೨) ವ್ಯಂಜನಗಳು

ಕ್ ಖ್ ಗ್ ಘ್ ಙ್ – ಕವರ್ಗ – ೫
ಚ್ ಛ್ ಜ್ ಝ್ ಞ್ – ಚವರ್ಗ – ೫
ಟ್ ಠ್ ಡ್ ಢ್ ಣ್ – ಟವರ್ಗ – ೫
ತ್ ಥ್ ದ್ ಧ್ ನ್ – ತವರ್ಗ – ೫
ಪ್ ಫ್ ಬ್ ಭ್ ಮ್ – ಪವರ್ಗ – ೫

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ – ೯

## (೩) ಯೋಗವಾಹಗಳು*

**ಅನುಸ್ವಾರ (ಂ) ವಿಸರ್ಗ (ಃ) – ೨**

**(4) ೧೪ ಸ್ವರಗಳು, ೩೪ ವ್ಯಂಜನಗಳು, ೨ ಯೋಗವಾಹಗಳು; ಒಟ್ಟು ೫೦ ಅಕ್ಷರಗಳು ಕನ್ನಡ ಭಾಷೆಯಲ್ಲಿವೆ. ಇವಕ್ಕೆ ಕನ್ನಡ ವರ್ಣಮಾಲೆ ಎನ್ನುವರು.**

# II – ಸ್ವರಗಳ ವಿಚಾರ

ಮೇಲೆ ಹೇಳಿದ ೧೪ ಸ್ವರಗಳಲ್ಲಿ **ಅ, ಇ, ಉ, ಋ, ಎ, ಒ** ಈ ಆರು ಸ್ವರಗಳನ್ನು ಒಂದು ಮಾತ್ರೆಯ ಕಾಲದಲ್ಲಿ[3] ಉಚ್ಚರಿಸುತ್ತೇವೆ.

**(5) ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವಸ್ವರಗಳೆನ್ನುವರು.**

**(6) ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಆ, ಈ, ಊ, ೠ, ಏ, ಐ, ಓ, ಔ ಈ ಎಂಟು ಸ್ವರಗಳನ್ನು ದೀರ್ಘಸ್ವರಗಳೆನ್ನುವರು.**

---

* ಯೋಗ ಎಂಬುದು 'ಯುಜ್' ಅಂದರೆ 'ಕೂಡು' ಎಂದೂ, 'ವಾಹ' ಇದು 'ವಹ್' ಎಂಬ ಧಾತುವಿನಿಂದ ಹುಟ್ಟಿ 'ಕೂಡಿಹೋಗು' ಎಂಬ ಅರ್ಥವನ್ನೂ ಕೊಡುತ್ತವೆ. ಆದ್ದರಿಂದ ಯೋಗವಾಹವೆಂದರೆ, ಯಾವುದಾದರೊಂದು ಅಕ್ಷರ ಸಂಬಂಧವಿಲ್ಲದೆ ಉಚ್ಚರಿಸಲಾಗದ ಅಕ್ಷರವೆಂದು ತಿಳಿಯಬೇಕು.

[3] ಒಂದು ಮಾತ್ರಾ ಕಾಲವೆಂದರೆ 'ಅ' ಎಂಬ ಅಕ್ಷರವನ್ನು ಉಚ್ಚರಿಸಲು ಎಷ್ಟು ಕಾಲವು ಹಿಡಿಯುವುದೋ ಅಷ್ಟು ಕಾಲ. ಅಂದರೆ ಎಳೆದು ಹೇಳದಂತೆ, ಮೊಟಕಾಗಿಯೂ ಹೇಳದಂತೆ ಉಚ್ಚರಿಸಬೇಕು. 'ಅದು' ಎನ್ನುವಾಗ 'ಅ' ಕಾರವನ್ನು ಎಷ್ಟು ಕಾಲದಲ್ಲಿ ಉಚ್ಚರಿಸುವೆವೋ ಅಷ್ಟು ಕಾಲಕ್ಕೆ ಒಂದು ಮಾತ್ರಾ ಕಾಲವೆನ್ನಬಹುದು. ಹೀಗೆ ಮೊಟಕಾಗಿ ೧ ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರವೇ ಹ್ರಸ್ವಸ್ವರವೆನಿಸುವುದು. ಇದೇ ಅಕಾರವನ್ನು ಸ್ವಲ್ಪ ಹೆಚ್ಚು ಎಳೆದರೆ 'ಆ' ಎಂದು ಎರಡು ಮಾತ್ರೆಗಳ ಕಾಲ ತೆಗೆದುಕೊಳ್ಳುವುದು. ಮೂರು ಮಾತ್ರೆಗಳ ಕಾಲದವರೆಗೂ ಎಳೆದು ಹೇಳಬಹುದು.

ಮೇಲೆ ಹೇಳಿದ ಸ್ವರಗಳನ್ನೇ ಎರಡು ಮಾತ್ರೆಗಳ ಕಾಲಕ್ಕಿಂತಲೂ ಹೆಚ್ಚುಕಾಲ ಎಳೆದು ಹೇಳುವುದೂ ಉಂಟು.

ಅಣ್ಣಾ$_3$ ಓಡಿ ಬಾ.
ದೇವರೇ$_3$ ಕಾಪಾಡು

ಈ ಮಾತುಗಳಲ್ಲಿ **ಣ್** ಕಾರದ ಮುಂದಿರುವ '**ಆ**' ಕಾರವನ್ನು, '**ದೇವರೇ**' ಎಂಬಲ್ಲಿ **ರ್** ಕಾರದ ಮುಂದಿರುವ **ಏ** ಕಾರವನ್ನೂ ಎರಡು ಮಾತ್ರೆಗಳ ಕಾಲಕ್ಕಿಂತಲೂ ಹೆಚ್ಚು ಕಾಲ ಅಂದರೆ ಮೂರು ಮಾತ್ರೆಗಳ ಕಾಲದವರೆಗೆ ಎಳೆದು ಉಚ್ಚರಿಸುತ್ತೇವೆ. ಸಂಬೋಧನೆಯಲ್ಲಿ[4] (ಕರೆಯುವಾಗ) ಕೊನೆಯ ಸ್ವರವನ್ನು ಹೀಗೆ ಮೂರು ಮಾತ್ರೆಗಳ ಕಾಲ ತೆಗೆದುಕೊಂಡು ಉಚ್ಚರಿಸುತ್ತೇವೆ. ಇದೇ ಪ್ಲುತಸ್ವರವೆನಿಸುವುದು.

**(7) ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳೆಲ್ಲ ಪ್ಲುತ ಸ್ವರಗಳೆನಿಸುವುವು**[5]

ಉದಾಹರಣೆಗೆ:- ಅಕ್ಕಾ$_3$ ಇಲ್ಲಿ ನೋಡು.
ಅಮ್ಮಾ$_3$ ನನಗೆ ಹಾಲು.
ದೇವರೇ$_3$ ರಕ್ಷಿಸು.
ಗುರುಗಳೇ$_3$ ತಮಗೆ ನಮಸ್ಕಾರ.
ಮಕ್ಕಳಿರಾ$_3$ ಬನ್ನಿರಿ.
ಮರಗಳೇ$_3$ ನೀವು ಫಲಗಳನ್ನು ಕೊಡಿ.

**(ಇಲ್ಲಿ ($_3$) ಎಂದು ಗುರುತುಮಾಡಿರುವ ಸ್ವರಗಳೇ ಪ್ಲುತಗಳು)**

ಹೀಗೆ ಮೇಲೆ ವಿವರಿಸಿದಂತೆ ಸ್ವರಗಳಲ್ಲಿ **ಹ್ರಸ್ವ, ದೀರ್ಘ, ಪ್ಲುತಗಳೆಂದು** ಮೂರು ರೀತಿ.

---

[4] ಸಂಬೋಧನೆಯೆಂದರೆ ಕರೆಯುವಿಕೆ (ಅಭಿಮುಖೀಕರಣ). 'ಅಣ್ಣಾ' ಎಂದು ಕರೆಯುವಾಗ ಣ ಕಾರದ ಮುಂದಿರುವ 'ಆ' ಕಾರವೇ ಸಂಬೋಧನೆಯ ಸ್ವರ, 'ಅಣ್ಣ ಬಂದ' 'ಅಣ್ಣಾ ಬಾ' ಎಂಬಲ್ಲಿ, ಮೊದಲನೆಯ 'ಅಣ್ಣ' ಎಂಬಲ್ಲಿಯ ಣ ಕಾರದ ಮುಂದಿರುವ ಅಕಾರ ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸಿದ ಹ್ರಸ್ವವಾದರೆ, 'ಅಣ್ಣಾ' ಎಂಬಲ್ಲಿಯ ಣಕಾರದ ಮುಂದಿರುವ ಆಕಾರ ಮೂರುಮಾತ್ರೆಯ ಸ್ವರ. ಆ ಸ್ವರಗಳ ಕೆಳಗಡೆ ($_3$) ಎಂದು ಬರೆದಿರುವುದು ಪ್ಲುತಸ್ವರವೆಂಬ ಗುರುತಿಗಾಗಿ ಮಾತ್ರ.

[5] ಹ್ರಸ್ವ ದೀರ್ಘ ಪ್ಲುತಗಳಿಗೆ ಒಂದು ಸೊಗಸಾದ ಉದಾಹರಣೆ ಕೊಡಬಹುದು. "ಕು$_1$ ಕೂ$_2$ ಕೂ$_3$......" ಎಂದು ಕೋಳಿ ಕೂಗಿದುದನ್ನು ನಾವು ಹೀಗೆ ಕೂಗಿತೆನ್ನುತ್ತೇವೆ. ೧ನೆಯ ಕಕಾರದ ಮುಂದಿರುವ 'ಉ' ಕಾರ ಹ್ರಸ್ವವಾದರೆ, ಎರಡನೆಯ ಕಕಾರದ ಮುಂದಿರುವ ಉಕಾರವೇ ದೀರ್ಘ, ಮೂರನೆಯ ಕಕಾರದ ಮುಂದಿರುವ 'ಉ' ಕಾರವೇ ಪ್ಲುತ. ಇವು ಕ್ರಮವಾಗಿ ಒಂದು ಮಾತ್ರೆ, ಎರಡು ಮಾತ್ರೆ, ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸುವ ಸ್ವರಗಳು.

# III – ವ್ಯಂಜನಾಕ್ಷರಗಳು

ಮೇಲೆ ಹೇಳಿದ ೩೪ ವ್ಯಂಜನಗಳಲ್ಲಿ ಮೊದಲಿನ ೨೫ ವ್ಯಂಜನಗಳನ್ನು ಎಂದರೆ: ಕಕಾರದಿಂದ ಮಕಾರದವರೆಗಿನ ವ್ಯಂಜನಗಳನ್ನು ಐದೈದರ ವರ್ಗಗಳನ್ನಾಗಿ ಬರೆಯುತ್ತೇವೆ. ಆದ್ದರಿಂದ ಇವನ್ನು '**ವರ್ಗೀಯ ವ್ಯಂಜನಗಳು**' ಎಂದು ಕರೆಯುತ್ತೇವೆ. ಈ ವರ್ಗೀಯ ವ್ಯಂಜನಗಳಲ್ಲಿ '**ಅಲ್ಪಪ್ರಾಣ**'[6]**,** '**ಮಹಾಪ್ರಾಣ**' ಮತ್ತು '**ಅನುನಾಸಿಕ**' ಎಂಬ ಮೂರು ರೀತಿಯ ಅಕ್ಷರಗಳಿವೆ. ಅವುಗಳನ್ನು ಕೆಳಗೆ ನೋಡಿರಿ:–

| ವರ್ಗ | ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | ಒಟ್ಟು ಅಕ್ಷರಗಳು |
|---|---|---|---|---|---|---|
| **ಕವರ್ಗ** | ಕ್ | ಖ್ | ಗ್ | ಘ್ | ಙ್ | **೫** |
| **ಚವರ್ಗ** | ಚ್ | ಛ್ | ಜ್ | ಝ್ | ಞ್ | **೫** |
| **ಟವರ್ಗ** | ಟ್ | ಠ್ | ಡ್ | ಢ್ | ಣ್ | **೫** |
| **ತವರ್ಗ** | ತ್ | ಥ್ | ದ್ | ಧ್ | ನ್ | **೫** |
| **ಪವರ್ಗ** | ಪ್ | ಫ್ | ಬ್ | ಭ್ | ಮ್ | **೫** |
| | **೫** | **೫** | **೫** | **೫** | **೫** | **೨೫** |

**(8) ಅಲ್ಪಪ್ರಾಣ:– ಪ್ರತಿಯೊಂದು ವರ್ಗದ ೧ನೆಯ, ೩ನೆಯ ವ್ಯಂಜನಗಳು ಅಲ್ಪಪ್ರಾಣಗಳು**

**(9) ಮಹಾಪ್ರಾಣ:– ಪ್ರತಿಯೊಂದು ವರ್ಗದ ೨ನೆಯ, ೪ನೆಯ ವ್ಯಂಜನಗಳು ಮಹಾಪ್ರಾಣಗಳು**

**(10) ಅನುನಾಸಿಕ:– ಪ್ರತಿಯೊಂದು ವರ್ಗದ ೫ನೆಯ ವ್ಯಂಜನವು ಅನುನಾಸಿಕವೆನಿಸುವುದು. ಇವುಗಳ ಉಚ್ಚಾರಣೆಗೆ ಮೂಗಿನ ಸಹಾಯವು ಬೇಕಾಗುವುದರಿಂದ ಇವನ್ನು ಅನುನಾಸಿಕವೆನ್ನುವರು.**

---

[6] 'ಅಲ್ಪಪ್ರಾಣ' ಎಂದರೆ ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರ; 'ಮಹಾಪ್ರಾಣ' ವೆಂದರೆ ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರ; 'ಅನುನಾಸಿಕ' ವೆಂದರೆ ಮೂಗಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರ. (ನಾಸಿಕ=ಮೂಗು) (ಪ್ರಾಣ=ಉಸಿರು) (ಅಲ್ಪ=ಸ್ವಲ್ಪ) (ಮಹಾ=ಹೆಚ್ಚು). ನಾಸಿಕವನ್ನು ಅನುಸರಿಸಿ ಉಚ್ಚರಿಸುವ ಅಕ್ಷರವೇ ಅನುನಾಸಿಕ.

ಮೇಲಿನ ಈ ೨೫ ಅಕ್ಷರಗಳನ್ನು ಕವರ್ಗ, ಚವರ್ಗ, ಟವರ್ಗ, ತವರ್ಗಗಳೆಂದು ವಿಭಾಗಿಸಿ ವರ್ಗಾಕ್ಷರಗಳೆಂದು ಹೆಸರಿಟ್ಟರೆ, **ಯ್ ರ್ ಲ್ ವ್ ಶ್ ಷ್ ಸ್ ಹ್ ಳ್** ಈ ಒಂಬತ್ತು ಅಕ್ಷರಗಳನ್ನು ಯಾವ ವರ್ಗವೂ ಇಲ್ಲದೆ ಹೇಳುತ್ತೇವೆ. ವರ್ಗದ ವ್ಯವಸ್ಥೆ ಇವಕ್ಕೆ ಇಲ್ಲದುದ ರಿಂದ ಇವು '**ಅವರ್ಗೀಯ**' ವ್ಯಂಜನಗಳೆನಿಸುವುವು.

**(11) ಯಕಾರದಿಂದ ಳ ಕಾರದವರೆಗಿರುವ ೯ ವ್ಯಂಜನಗಳು ಅವರ್ಗೀಯವ್ಯಂಜನಗಳೆ ನಿಸುವುವು.**

## IV – ಗುಣಿತಾಕ್ಷರಗಳು

ವ್ಯಂಜನಾಕ್ಷರಗಳನ್ನು '**ದ್ವ್ರ್**' ಹೀಗೆ ಬರೆದು ಅರ್ಥವತ್ತಾದ ಶಬ್ದಗಳನ್ನು ಮಾಡಲಾಗುವುದೇ ಇಲ್ಲ. ಅವುಗಳಿಗೆಲ್ಲ ಸ್ವರಗಳು ಸೇರಲೇ ಬೇಕು. **ದ್+ಏ=ದೇ, ವ್+ಅ=ವ, ರ್+ಉ=ರು** – ಹೀಗೆ ಸ್ವರಗಳನ್ನು ಸೇರಿಸಿದ ಮೇಲೆಯೇ "**ದೇವರು**" ಎಂದು ಉಚ್ಚಾರ ಮಾಡಲು ಬರುತ್ತವೆ. ಅಥವಾ ಹಿಂದೆ ಸ್ವರವಿದ್ದರೆ "**ಅದ್**", "**ಅರ್**" ಎನ್ನಬಹುದು. ಈ ವಿಷಯವನ್ನು ಹಿಂದೆ ತಿಳಿಸಿದೆ. **ದೇವರು** ಎಂದಾಗ ಅದರಲ್ಲಿರುವ **ದ್ ಏ ವ್ ಅ ರ್ ಉ** ವ್ಯಂಜನ ಸ್ವರಗಳನ್ನು ಬಿಡಿಬಿಡಿಯಾಗಿ ಬರೆಯುವುದಿಲ್ಲ. ವ್ಯಂಜನದಲ್ಲಿ ಸ್ವರವನ್ನು ಸೇರಿಸಿ ಒಂದು ಹೊಸ ಆಕಾರದ ಅಕ್ಷರವನ್ನು ಮಾಡಿ ಬರೆಯುತ್ತೇವೆ. ಕೆಳಗೆ ಕೊಟ್ಟಿರುವ ಪಟ್ಟಿಯನ್ನು ನೋಡಿರಿ:–

| ವ್ಯಂಜನ | | ಸ್ವರ | ಗುಣಿತಾಕ್ಷರ |
|---|---|---|---|
| ಕ್ | + | ಅ | = ಕ |
| ಕ್ | + | ಆ | = ಕಾ |
| ಚ್ | + | ಇ | = ಚಿ |
| ಚ್ | + | ಈ | = ಚೀ |
| ತ್ | + | ಉ | = ತು |
| ತ್ | + | ಊ | = ತೂ |
| ಟ್ | + | ಎ | = ಟೆ |

| ವ್ಯಂಜನ | | ಸ್ವರ | ಗುಣಿತಾಕ್ಷರ |
|---|---|---|---|
| ಟ್ | + | ಏ | = ಟೇ |
| ಪ್ | + | ಐ | = ಪೈ |
| ಪ್ | + | ಒ | = ಪೊ |
| ಬ್ | + | ಓ | = ಬೋ |
| ಬ್ | + | ಔ | = ಬೌ |
| ಕ್ | + | ಋ | = ಕೃ |
| ಬ್ | + | ೠ | = ಬೄ |

ಇದರಂತೆ ಎಲ್ಲಾ ಸ್ವರಗಳನ್ನೂ (೧೪ ಸ್ವರಗಳನ್ನೂ) ೩೪ ವ್ಯಂಜನಗಳಲ್ಲಿಯೂ ಸೇರಿಸಿ ಹೊಸ ಆಕಾರದ ಅಕ್ಷರಗಳನ್ನು ಮಾಡಿಕೊಳ್ಳುತ್ತೇವೆ. ಇವೇ ಗುಣಿತಾಕ್ಷರಗಳೆಂದು ಕರೆಯಿಸಿಕೊಳ್ಳುತ್ತವೆ.

**(12) ವ್ಯಂಜನಗಳಿಗೆ ಸ್ವರಗಳು ಸೇರಿ ಗುಣಿತಾಕ್ಷರಗಳೆನಿಸುವುವು**[7]**.**

---

[7] ರೂಢಿಯಲ್ಲಿ 'ಕಾಗುಣಿತ' ಎನ್ನುವುದುಂಟು. ಕಾಗುಣಿತ ಎಂದರೆ ಕ್+ಅ=ಕ, ಕ್+ಆ=ಕಾ, ಕ್+ಇ=ಕಿ, ಹೀಗೆ ಕಕಾರದಲ್ಲಿ ಹದಿನಾಲ್ಕು ಸ್ವರಗಳೂ ಸೇರಿದ ಮೇಲೆ ಆಗುವ 'ಕ ಕಾ ಕಿ ಕೀ__' ಎಂಬ ಹದಿನಾಲ್ಕು ಗುಣಿತಾಕ್ಷರಗಳೇ ಕಾಗುಣಿತಗಳು. ಇವಕ್ಕೆ 'ಬಳ್ಳಿ' ಎಂದೂ ಕರೆಯುವರು.

# V – ಸಂಯುಕ್ತಾಕ್ಷರಗಳು (ಒತ್ತಕ್ಷರಗಳು)

(೧) 'ಅಕ್ಕ' ಎಂಬ ಶಬ್ದದಲ್ಲಿ ಯಾವ ಯಾವ ಅಕ್ಷರಗಳಿವೆ ಎಂಬುದನ್ನು ನೋಡಿರಿ. ಅ + ಕ್ + ಕ್ + ಅ – ಹೀಗೆ ನಾಲ್ಕು ಅಕ್ಷರಗಳು ಕೂಡಿ 'ಅಕ್ಕ' ಶಬ್ದವಾಗಿದೆಯಲ್ಲವೆ? ಇದರ ಹಾಗೆಯೇ 'ಅಣ್ಣ' ಎಂಬಲ್ಲಿ, ಅ + ಣ್ + ಣ್ + ಅ ಎಂಬ ನಾಲ್ಕಕ್ಷರಗಳು ಸೇರಿ ಅಣ್ಣ ಶಬ್ದವಾಗಿದೆ. 'ಕ್ಕ' ಎಂದರೆ = ಕ್ + ಕ್ + ಅ; 'ಣ್ಣ' ಎಂದರೆ = ಣ್ + ಣ್ + ಅ. ಇಲ್ಲಿ ಎರಡೆರಡು ವ್ಯಂಜನ ಸೇರಿಕೊಂಡು ಒಂದಕ್ಷರವಾಗಿದೆ. ಈ ಎರಡೂ ವ್ಯಂಜನಗಳು ಒಂದೇ ಜಾತಿಯವು ಎಂದರೆ ಸಜಾತೀಯ ವ್ಯಂಜನಗಳು.

**(13) ಒಂದೇ ಜಾತಿಯ (ಸಜಾತೀಯ) ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರವು ಸಜಾತೀಯ ಸಂಯುಕ್ತಾಕ್ಷರವೆನಿಸುವುದು[8]. ಇದಕ್ಕೆ ದ್ವಿತ್ವವೆಂದೂ ಹೆಸರು[9].**

ಉದಾಹರಣೆಗೆ:– ಅಕ್ಕ (ಕ್ + ಕ್)
ಅಣ್ಣ (ಣ್ + ಣ್)
ಅಜ್ಜ (ಜ್ + ಜ್)
ಕೆಟ್ಟು (ಟ್ + ಟ್)
ಹುತ್ತ (ತ್ + ತ್)

(೨) '**ಭಕ್ತ**' ಎಂಬ ಶಬ್ದದಲ್ಲಿ **ಭ್+ಅ+ಕ್+ತ್+ಅ** ಎಂಬ ಐದು ಅಕ್ಷರಗಳಿವೆ. '**ಅಷ್ಟು**' ಎಂಬ ಶಬ್ದದಲ್ಲಿ **ಅ+ಷ್+ಟ್+ಉ** ಎಂಬ ನಾಲ್ಕು ಅಕ್ಷರಗಳಿವೆ. '**ಸ್ತ್ರೀ**' ಎಂಬ ಶಬ್ದದಲ್ಲಿ '**ಸ್+ತ್+ರ್+ಈ**' ಎಂಬ ನಾಲ್ಕು ಅಕ್ಷರಗಳಿವೆ. ಮೇಲಿನ ಈ ಉದಾಹರಣೆಗಳಲ್ಲಿ ಎರಡೆರಡು ಮೂರುಮೂರು ವ್ಯಂಜನಗಳು ಸೇರಿ ಒಂದೊಂದು ಅಕ್ಷರಗಳಾಗಿವೆ. ಆದರೆ ಹೀಗೆ ಇಲ್ಲಿ ಸೇರಿರುವ ವ್ಯಂಜನಗಳು ಬೇರೆಬೇರೆ ಜಾತಿಯವು, ಎಂದರೆ ವಿಜಾತೀಯ ವ್ಯಂಜನಗಳು.

'**ಷ್ಟು**' ಎಂಬುದು **ಷ್+ಟ್** ಎಂಬ ವ್ಯಂಜನಗಳಿಂದಲೂ, '**ಕ್ತ**' ಎಂಬುದು **ಕ್+ತ್** ಎಂಬ ವ್ಯಂಜನಗಳಿಂದಲೂ, '**ಸ್ತ್ರೀ**' ಎಂಬುದು **ಸ್+ತ್+ರ್** ಎಂಬ ವ್ಯಂಜನಗಳಿಂದಲೂ ಸೇರಿ ಆಗಿರುವ ಸಂಯುಕ್ತಾಕ್ಷರ (ಒತ್ತಕ್ಷರ)ವಾಗಿದೆ.

**(14) ಬೇರೆಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಕ್ಕೆ ವಿಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.**

---

[8] 'ಸಂಯುಕ್ತ' ಎಂದರೆ ಚೆನ್ನಾಗಿ ಸೇರಿಸಿದ ಎಂದು ಅರ್ಥ. ಎರಡು ವ್ಯಂಜನಗಳು ಮಧ್ಯದಲ್ಲಿ ಯಾವ ಕಾಲ ವಿಳಂಬವೂ ಇಲ್ಲದೆ ಸೇರುವುದೇ ಸಂಯುಕ್ತಾಕ್ಷರವೆನಿಸುವುದು. (ಸಂ=ಚೆನ್ನಾಗಿ), (ಯುಕ್ತ=ಸೇರಿದ)

[9] 'ದ್ವಿತ್ವ' ಎಂದು ಒಂದೇ ಜಾತಿಯ ಎರಡು ವ್ಯಂಜನಗಳು ಸೇರುವುದಕ್ಕೆ ಮಾತ್ರ ಕರೆಯಲಾಗುವುದು. ಬೇರೆಬೇರೆ ಜಾತಿಯ ವ್ಯಂಜನ ಸೇರಿದರೆ ದ್ವಿತ್ವ ಎನಿಸಿಕೊಳ್ಳುವುದಿಲ್ಲ.

ಉದಾಹರಣೆಗೆ:– ವಸ್ತ್ರ (ಸ್ + ತ್ + ರ್)
ಅಕ್ಷರ (ಕ್ + ಷ್)
ಜ್ಞಾನ (ಜ್ + ಞ್)
ಸ್ವಾರ್ಥ (ಸ್ + ವ್; ರ್ + ಥ್)
ಶಕ್ತಿ (ಕ್ + ತ್)

# VI – ಯಾವ ಯಾವ ಅಕ್ಷರಗಳು ಎಲ್ಲೆಲ್ಲಿ (ಯಾವ ಯಾವ ಸ್ಥಾನದಲ್ಲಿ) ಹುಟ್ಟುತ್ತವೆ?

ಇದುವರೆಗೆ ೫೦ ಅಕ್ಷರಗಳ ಬಗೆಗೆ ವಿವರವಾಗಿ ತಿಳಿದಿದ್ದೀರಿ. ಈ ಅಕ್ಷರಗಳೆಲ್ಲ ಹೊಕ್ಕಳದ ಮೂಲ ಭಾಗದಿಂದ ಹೊರಟ ಶಬ್ದವೊಂದರಿಂದ ಹುಟ್ಟುತ್ತವೆ. ಹಾಗೆ ಹೊರಟ ಶಬ್ದವು ಗಂಟಲು, ದವಡೆ, ಮೂರ್ಧ (ನಾಲಗೆಯ ಮೇಲ್ಭಾಗದ ಭಾಗ), ತುಟಿ, ಹಲ್ಲು – ಇತ್ಯಾದಿ ಅವಯವಗಳ ಸಹಾಯದಿಂದ ಬೇರೆ ಬೇರೆ ಅಕ್ಷರಗಳಾಗುತ್ತವೆ. ಹಾಗಾದರೆ ಯಾವ ಯಾವ ಅಕ್ಷರಗಳು ಎಲ್ಲೆಲ್ಲಿ ಹುಟ್ಟುತ್ತವೆ? ಎಂಬ ಬಗೆಗೆ ಈ ಕೆಳಗಿನ ವಿವರಣೆಯನ್ನು ನೋಡಿರಿ:–

(೧) **ಅ, ಆ, ಕ, ಖ, ಗ, ಘ, ಙ, ಹ** ಮತ್ತು **ವಿಸರ್ಗ (ಃ)** – ಇವು ಕಂಠದಲ್ಲಿ ಹುಟ್ಟುತ್ತವಾದ್ದರಿಂದ ಇವನ್ನು '**ಕಂಠ್ಯ**' ವರ್ಣಗಳೆನ್ನುತ್ತಾರೆ.

(೨) **ಇ, ಈ, ಚ, ಛ, ಜ, ಝ, ಞ, ಯ, ಶ** – ಇವುಗಳು ತಾಲುವಿನ (ದವಡೆಯ) ಸಹಾಯದಿಂದ ಹುಟ್ಟುತ್ತವಾದ್ದರಿಂದ ಇವನ್ನು '**ತಾಲ್ವಕ್ಷರ**' ಗಳೆನ್ನುವರು.

(೩) **ಋ, ೠ, ಟ, ಠ, ಡ, ಢ, ಣ, ರ, ಷ** – ಅಕ್ಷರಗಳು ನಾಲಗೆಯ ಮೇಲ್ಭಾಗವಾದ ಮೂರ್ಧವೆಂಬುದರ ಸಹಾಯದಿಂದ ಹುಟ್ಟುತ್ತವೆ. ಆದುದರಿಂದ ಇವು '**ಮೂರ್ಧನ್ಯ**'ಗಳೆನಿಸುವುವು.

(೪) **ತ, ಥ, ದ, ಧ, ನ, ಲ, ಸ** – ಅಕ್ಷರಗಳು ಹಲ್ಲುಗಳ ಸಹಾಯದಿಂದ ಹುಟ್ಟುತ್ತವಾದ್ದರಿಂದ ಇವು '**ದಂತ್ಯ**' ವರ್ಣಗಳೆನಿಸುವುವು. (ದಂತ=ಹಲ್ಲು)

(೫) **ಉ, ಊ, ಪ, ಫ, ಬ, ಭ, ಮ** – ಅಕ್ಷರಗಳು ತುಟಿಯ (ಓಷ್ಠದ) ಸಹಾಯದಿಂದ ಹುಟ್ಟುತ್ತವಾದ್ದರಿಂದ ಇವನ್ನು '**ಓಷ್ಠ್ಯ**' ವರ್ಣಗಳೆನ್ನುವರು.

(೬) **ಙ, ಞ, ಣ, ನ, ಮ** – ವರ್ಣಗಳು ನಾಸಿಕದ ಸಹಾಯದಿಂದ ಹುಟ್ಟುತ್ತವಾದ್ದರಿಂದ ಇವು '**ನಾಸಿಕಗಳು**' **(ಅನುನಾಸಿಕಗಳು)** ಎನಿಸುವುವು.

(೭) **ಎ, ಏ, ಐ** – ಅಕ್ಷರಗಳು ಹುಟ್ಟಲು ಕಂಠ ಮತ್ತು ತಾಲು (ದವಡೆ) ಗಳೆರಡರ ಸಹಾಯ ಬೇಕಾಗುವುದರಿಂದ ಇವು '**ಕಂಠತಾಲು**' ಅಕ್ಷರಗಳೆನಿಸುವುವು.

(೮) **ಒ, ಓ, ಔ** – ಅಕ್ಷರಗಳು ಕಂಠ ಮತ್ತು ತುಟಿ (ಓಷ್ಠ) ಗಳೆರಡರ ಸಹಾಯದಿಂದ ಹುಟ್ಟುತ್ತವಾದ್ದರಿಂದ ಇವು '**ಕಂಠೋಷ್ಠ್ಯ**' ವರ್ಣಗಳೆನಿಸುವುವು.

(೯) **ವ** – ಎಂಬಕ್ಷರವು ಹಲ್ಲು (ದಂತ) ಮತ್ತು ತುಟಿ (ಓಷ್ಠ) ಗಳೆರಡರ ಸಹಾಯದಿಂದ ಹುಟ್ಟುತ್ತಾದ್ದರಿಂದ ಇದು '**ದಂತೋಷ್ಠ್ಯ**' ವರ್ಣವೆನಿಸುವುದು.

(೧೦) **ಅನುಸ್ವಾರ (ಂ)** ವು – ಕಂಠ ಮತ್ತು ನಾಸಿಕದ ಸಹಾಯದಿಂದ ಹುಟ್ಟುತ್ತಾದ್ದರಿಂದ ಇದು '**ಕಂಠನಾಸಿಕ**' ವರ್ಣವೆನಿಸುವುದು.


ಈ ರೀತಿಯಲ್ಲಿ ಅಕ್ಷರಗಳು ಹುಟ್ಟುವ ರೀತಿಯನ್ನು ವ್ಯವಸ್ಥೆಗೊಳಿಸಿದ್ದಾರೆ.

## VII – ಸಾರಾಂಶ

**ಇದುವರೆಗೆ ವ್ಯಾಕರಣವನ್ನು ಓದುವವರು ತಿಳಿಯಬೇಕಾದ ಕೆಲವು ಸಂಜ್ಞೆಗಳನ್ನು ವಿವರಿಸಲಾಯಿತು. ಇದರಲ್ಲಿ ಸ್ವರ, ವ್ಯಂಜನ, ಯೋಗವಾಹ – ಎಂಬ ಐವತ್ತು ಅಕ್ಷರಗಳ ಬಗೆಗೂ, ಸ್ವರಗಳಲ್ಲಿ ಹ್ರಸ್ವ, ದೀರ್ಘ, ಪ್ಲುತಗಳ ಬಗೆಗೂ, ವ್ಯಂಜನಗಳಲ್ಲಿ ವರ್ಗೀಯ, ಅವರ್ಗೀಯ ವ್ಯಂಜನಗಳೆಂದರೇನು? ವರ್ಗೀಯ ವ್ಯಂಜನಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕಗಳೆಂದರಾವುವು? ಗುಣಿತಾಕ್ಷರ, ಸಜಾತೀಯ – ವಿಜಾತೀಯ ಸಂಯುಕ್ತಾಕ್ಷರಗಳೆಂದರೇನು? ಯಾವ ಯಾವ ಅಕ್ಷರಗಳು ಎಲ್ಲೆಲ್ಲಿ ಹುಟ್ಟುತ್ತವೆ? ಇತ್ಯಾದಿ ಅಂಶಗಳ ಬಗೆಗೂ ವಿವರವಾಗಿ ಹೇಳಲಾಯಿತು. ಈ ಎಲ್ಲಾ ಅಂಶಗಳನ್ನೂ ಮುಂದಿನ ಪುಟದಲ್ಲಿ ಸೂಚಿಸಿರುವ ಗೆರೆಗಳ ಸಹಾಯದಿಂದ ಸಂಕ್ಷೇಪವಾಗಿ ತಿಳಿಯಬಹುದು.**

## ಕನ್ನಡ ವರ್ಣಮಾಲೆ

**೫೦ ಅಕ್ಷರ**




**(ಒಟ್ಟು–ಸ್ವರ, ವ್ಯಂಜನ, ಯೋಗವಾಹಗಳು ಸೇರಿ ೫೦ ಅಕ್ಷರಗಳು)**

* * * * *

## ಅಭ್ಯಾಸ ಪ್ರಶ್ನೆಗಳು

(೧) 'ಅವನು' ಎಂಬ ಶಬ್ದದಲ್ಲಿರುವ ಸ್ವರ, ವ್ಯಂಜನಗಳನ್ನು ಬಿಡಿಸಿ ಬರೆಯಿರಿ.

(೨) 'ದೇವರು' ಎಂಬ ಶಬ್ದದಲ್ಲಿರುವ ದೀರ್ಘಸ್ವರಗಳಾವುವು?

(೩) 'ಅಕ್ಕಾ, ಇಲ್ಲಿ ನೋಡು' ಈ ವಾಕ್ಯದಲ್ಲಿ ಬಂದಿರುವ ಪ್ಲುತಸ್ವರಗಳನ್ನು ಗುರುತಿಸಿರಿ.

(೪) 'ಅಣ್ಣಾ, ಇತ್ತ ಹೋಗು' ಈ ವಾಕ್ಯದಲ್ಲಿ ಬಂದಿರುವ ಹ್ರಸ್ವ, ದೀರ್ಘ, ಪ್ಲುತಗಳನ್ನು ಗುರುತಿಸಿರಿ.

(೫) ಕ್ ಅ ನ್ ನ್ ಅ ಡ್ ಅ ನ್ ಆ ಡ್ ಉ – ಈ ವ್ಯಂಜನ ಸ್ವರಗಳನ್ನು ಕೂಡಿಸಿ ಶಬ್ದಮಾಡಿ ಬರೆಯಿರಿ.

(೬) 'ಅಂತಃಕರಣದಿಂದ' ಈ ಪದದಲ್ಲಿ ಬಂದಿರುವ ಅನುಸ್ವಾರ ವಿಸರ್ಗಗಳು ಯಾವ ಯಾವ ಸ್ವರಗಳ ಮುಂದೆ ಬಂದಿವೆ?

(೭) 'ಹನುಮಂತನು ಮನೆಗೆ ಬಂದನು' ಈ ವಾಕ್ಯದಲ್ಲಿ ಬಂದಿರುವ ಅನುನಾಸಿಕ ವರ್ಣಗಳಾವುವು?

(೮) ಸ್ತ್ರೀ, ಸ್ತ್ರ – ಈ ಸಂಯುಕ್ತಾಕ್ಷರಗಳಲ್ಲಿ ಸೇರಿರುವ ವ್ಯಂಜನಗಳಾವುವು? ಬಿಡಿಸಿ ಬರೆಯಿರಿ. ಇವನ್ನು ಎಂಥ ಸಂಯುಕ್ತವರ್ಣಗಳೆನ್ನುವರು?

(೯) 'ಮಲ್ಲಿಕಾರ್ಜುನ' ಎಂಬಲ್ಲಿ ಬಂದಿರುವ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ತಿಳಿಸಿರಿ.

(೧೦) ಗುಣಿತಾಕ್ಷರ, ಅನುನಾಸಿಕ, ಅಲ್ಪಪ್ರಾಣ, ಮಹಾಪ್ರಾಣ, ಪ್ಲುತ ಸ್ವರಗಳೆಂದರೇನು? ಉದಾಹರಣೆಗಳೊಂದಿಗೆ ವಿವರಿಸಿರಿ.

(೧೧) ಈ ಕೆಳಗೆ ಬಿಟ್ಟಿರುವ ಸ್ಥಳಗಳನ್ನು ಪೂರ್ಣಗೊಳಿಸಿರಿ:–

(ಅ) ಪ್ರತಿಯೊಂದು ವರ್ಗದ ೧ನೆಯ, ೩ನೆಯ ವ್ಯಂಜನಗಳು ______________

(ಆ) ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸುವ ಸ್ವರಕ್ಕೆ __________ ಎನ್ನುತ್ತಾರೆ.

(ಇ) ಅನುಸ್ವಾರ ವಿಸರ್ಗಗಳಿಗೆ _____________ ಎಂದು ಹೆಸರು.

(ಈ) ವ್ಯಂಜನಗಳಿಗೆ ಸ್ವರಗಳು ಸೇರಿ _____________ ಎನಿಸುವುವು.

(ಉ) ಎರಡು ಅಥವಾ ಅನೇಕ ವ್ಯಂಜನಗಳು ಸೇರಿ ಆಗುವ ಅಕ್ಷರಕ್ಕೆ _________ ಎನ್ನುವರು.

* * * * *

# ಅಧ್ಯಾಯ ೨

# ಸಂಧಿಪ್ರಕರಣ[10]

## I – ಸಂಧಿ

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು ಬಿಡಿಬಿಡಿಯಾಗಿ ಹೇಳುವುದಿಲ್ಲ. "**ಊರು ಊರು**" ಎಂಬೆರಡು ಶಬ್ದಗಳನ್ನು '**ಊರೂರು**' ಎಂದು ಕೂಡಿಸಿಯೇ ಮಾತನಾಡುತ್ತೇವೆ. '**ಅವನು + ಅಲ್ಲಿ**' ಎಂಬೆರಡು ಶಬ್ದ ರೂಪಗಳನ್ನು '**ಅವನಲ್ಲಿ**' ಎಂದು ಕೂಡಿಸಿ ಹೇಳುತ್ತೇವೆ. ಮೇಲೆ ಹೇಳಿರುವ **ಊರು + ಊರು** ಎಂಬ ಶಬ್ದಗಳನ್ನೂ, **ಅವನು + ಅಲ್ಲಿ** ಎಂಬ ಪ್ರಕೃತಿ ಪ್ರತ್ಯಯಗಳನ್ನೂ ಕೂಡಿಸಿಯೇ ಹೇಳುತ್ತೇವೆ. ಅಂದರೆ, ಅವನ್ನು ಸಂಧಿಸಿಯೇ ಹೇಳುತ್ತೇವೆ. ಒಮ್ಮೊಮ್ಮೆ ಶಬ್ದ ಶಬ್ದಗಳನ್ನು ಬಿಡಿಬಿಡಿಸಿ ಹೇಳಿದರೂ, ಪಕೃತಿ ಪ್ರತ್ಯಯಗಳನ್ನು ಮಾತ್ರ ಸಂಧಿಸಿಯೇ ಹೇಳುತ್ತೇವೆ. ಅವನ್ನು ಬಿಡಿಬಿಡಿಯಾಗಿ ಹೇಳಲಾಗುವುದೇ ಇಲ್ಲ. ಈ ಕೆಳಗೆ ನೋಡಿ:–

| **ಪ್ರಕೃತಿ** | **+** | **ಪ್ರತ್ಯಯ** | **=** | **ಕೂಡಿಸಿದ ರೂಪ** |
|---|---|---|---|---|
| ಆಡು | + | ಇಸು | = | ಆಡಿಸು |
| ಮರ | + | ಅನ್ನು | = | ಮರವನ್ನು |
| ಪುಸ್ತಕ | + | ಇಂದ | = | ಪುಸ್ತಕದಿಂದ |
| ದೇವರು | + | ಇಗೆ | = | ದೇವರಿಗೆ |

ಪದಗಳನ್ನು ಕೂಡಿಸಿಯಾದರೂ ಹೇಳಬಹುದು ಅಥವಾ ಬಿಡಿಬಿಡಿಯಾಗಿಯೂ ಹೇಳಬಹುದು.

| **ಪದ** | **+** | **ಪದ** | **=** | **ಕೂಡಿಸಿದ ರೂಪ** | **–** | **ಕೂಡಿಸದ ರೂಪ** |
|---|---|---|---|---|---|---|
| ಅವನ | + | ಅಂಗಡಿ | = | ಅವನಂಗಡಿ | – | ಅವನ ಅಂಗಡಿ |
| ಅವನಿಗೆ | + | ಇಲ್ಲ | = | ಅವನಿಗಿಲ್ಲ | – | ಅವನಿಗೆ ಇಲ್ಲ |
| ಹಣ್ಣಿನ | + | ಅಂಗಡಿ | = | ಹಣ್ಣಿನಂಗಡಿ | – | ಹಣ್ಣಿನ ಅಂಗಡಿ |

---

[10] 'ಸಂಧಿ' ಎಂದರೆ ಎರಡು ಅಕ್ಷರಗಳು ಪರಸ್ಪರ ಯಾವ ಕಾಲ ವಿಳಂಬವೂ ಇಲ್ಲದೆ ಸೇರುವುದು ಎಂದು ಅರ್ಥ. ವ್ಯಂಜನದ ಮುಂದೆ ಸ್ವರವಿರುವುದೂ ಒಂದು ರೀತಿಯಿಂದ ಸಂಧಿಯೇ ಆಗಿದೆ. ಅಕ್ಷರಗಳು ಎಡಬಿಡದೆ ಅರ್ಧಮಾತ್ರಾಕಾಲ ವ್ಯವಧಾನವಿಲ್ಲದೆ ಸೇರುವಿಕೆಯೇ ಅಥವಾ ಸಂಧಿಸುವಿಕೆಯೇ ಸಂಧಿಯೆನಿಸುವುದು. 'ಸಂಹಿತೆ' ಯೆಂದೂ ಇದಕ್ಕೆ ಹೆಸರು. ಪ್ರಕೃತಿ ಪ್ರತ್ಯಯಗಳನ್ನಂತೂ ಹೀಗೆ ಸಂಧಿಸಿಯೇ ಹೇಳಬೇಕು. ಪದಪದಗಳನ್ನು ಬಿಡಿಬಿಡಿಸಿಯಾದರೂ ಹೇಳಬಹುದು, ಸಂಧಿ ಮಾಡಿಯಾದರೂ ಹೇಳಬಹುದು. ಅದು ಹೇಳುವವರ ಇಚ್ಛೆ. ಪ್ರಕೃತಿ ಪ್ರತ್ಯಯಗಳು ಎಂದರೆ – ಉದಾಹರಣೆಗೆ:– 'ಮರ' ಪ್ರಕೃತಿ, 'ಅನ್ನು' ಎಂಬುದು ಪ್ರತ್ಯಯ – ಇವೆರಡೂ ಕೂಡಿ ಆದ 'ಮರವನ್ನು' ರೂಪವೇ 'ಪದ' ವೆನಿಸಿ ಕೊಳ್ಳುವುದು.

ಮೇಲೆ ಹೇಳಿರುವ ಅನೇಕ ಉದಾಹರಣೆಗಳಲ್ಲಿ ಪ್ರಕೃತಿ ಪ್ರತ್ಯಯಗಳನ್ನು ಸೇರಿಸುವಲ್ಲಿ ಅವನ್ನು ಕೂಡಿಸಿಯೇ ಹೇಳುತ್ತೇವಲ್ಲದೆ ಬಿಡಿಬಿಡಿಸಿ ಹೇಳಲು ಬರುವಂತೆಯೇ ಇಲ್ಲ. '**ಆಡು ಇಸು**' ಎಂದು ಯಾರು ಹೇಳುವುದಿಲ್ಲ. '**ಪುಸ್ತಕ ಅನ್ನು ತಾ**' ಎನ್ನಬಾರದು. '**ಆಡಿಸು**' '**ಪುಸ್ತಕವನ್ನು**' ಹೀಗೆ ಕೂಡಿಸಿಯೇ ಹೇಳಬೇಕು. **ಆಡಿಸು** ಎಂಬಲ್ಲಿ **(ಆಡು+ಇಸು) ಉ+ಇ** ಸ್ವರಗಳು ಸಂಧಿಸುತ್ತವೆ. **ಪುಸ್ತಕ+ಅನ್ನು** ಎಂಬಲ್ಲಿ **ಅ+ಅ** ಸ್ವರಗಳು ಪರಸ್ಪರ ಸಂಧಿಸುತ್ತವೆ. ಅವೆರಡೂ ಸಂಧಿಸುವಾಗ ಮೊದಲಿನ ಸ್ವರಗಳು ಎರಡೂ ಕಡೆ ಹೋಗುತ್ತವೆ. ಈ ಸಂಧಿಸುವಿಕೆಯು ಕಾಲವಿಳಂಬವಿಲ್ಲದೆ ಹಾಗೆ ಆಗುತ್ತದೆ. ಇವು ಪ್ರಕೃತಿ ಪ್ರತ್ಯಯಗಳ ಸಂಧಿಸುವಿಕೆಯನ್ನು ತಿಳಿಸುವ ಉದಾಹರಣೆಗಳು.

'**ಅವನ ಅಂಗಡಿ**' ಎಂಬ ಪದಗಳನ್ನು ಬೇಕಾದರೆ ಸಂಧಿಯಾಗುವಂತೆ '**ಅವನಂಗಡಿ**' ಎಂದಾದರೂ ಹೇಳಬಹುದು; ಅಥವಾ ಕಾಲವನ್ನು ಸ್ವಲ್ಪ ವಿಳಂಬ ಮಾಡಿ '**ಅವನ ಅಂಗಡಿ**' ಎಂದಾದರೂ ಹೇಳಬಹುದು. ಅದು ಹೇಳುವವನ ಇಚ್ಛೆಯನ್ನು ಅವಲಂಬಿಸಿರುತ್ತದೆ. '**ಅವನಂಗಡಿ**' ಎನ್ನುವಾಗ **(ಅವನ+ಅಂಗಡಿ)** ಇಲ್ಲಿ ಸಂಧಿಸುವ ಸ್ವರಗಳು '**ಅ+ಅ**' ಎಂಬುವು. ಇವುಗಳಲ್ಲಿ ಮೊದಲಿನ ಅಕಾರವನ್ನು ತೆಗೆದುಹಾಕುತ್ತೇವೆ. ಆದ್ದರಿಂದ ಎರಡು ಅಕ್ಷರಗಳು ಸಂಧಿಸುವಿಕೆಯೇ ಸಂಧಿಯೆನಿಸುವುದೆಂದಹಾಗಾಯಿತು. ಇದರ ಸೂತ್ರವನ್ನು ಹೀಗೆ ಹೇಳಬಹುದು:–

**(15) ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದಂತೆ ಸೇರುವುದೇ ಸಂಧಿಯೆನಿಸುವುದು.**

(i) ಸ್ವರದ ಮುಂದೆ ಸ್ವರ ಬಂದು ಹೀಗೆ ಸಂಧಿಯಾದರೆ **ಸ್ವರಸಂಧಿಯೆನ್ನುತ್ತೇವೆ.**

(ii) ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾದರೆ **ವ್ಯಂಜನಸಂಧಿಯೆನ್ನುತ್ತೇವೆ.**

(iii) ಹೀಗೆ ಸಂಧಿಯಾಗುವಾಗ ಹಲಕೆಲವು ವ್ಯತ್ಯಾಸಗಳು ಆ ಸಂಧಿಸಿದ ಅಕ್ಷರಗಳಲ್ಲಿ ಉಂಟಾಗುವುವು. ಅವನ್ನೇ '**ಸಂಧಿಕಾರ್ಯಗಳು**' ಎನ್ನುತ್ತೇವೆ. ಅವುಗಳನ್ನು ಮುಂದೆ ತಿಳಿಯೋಣ.

# II – ಕನ್ನಡ ಸಂಧಿಗಳು

## ೧. ಲೋಪಸಂಧಿ

'**ಊರು + ಅಲ್ಲಿ**' ಎಂಬಲ್ಲಿ '**ಉ**' ಎಂಬ ಸ್ವರದ ಮುಂದೆ '**ಅ**' ಎಂಬ ಸ್ವರ ಬಂದಿದೆ. ಕೂಡಿಸಿ ಬರೆದರೆ '**ಊರ್ ಅಲ್ಲಿ**' = '**ಊರಲ್ಲಿ**' ಎಂದಾಯಿತು. ಅಂದರೆ ರಕಾರದಲ್ಲಿರುವ '**ಉ**' ಕಾರ ಬಿಟ್ಟುಹೋಯಿತು. ಇದರ ಹಾಗೆ ಕೆಳಗಿನ ಇನ್ನೂ ಕೆಲವು ಉದಾಹರಣೆಗಳನ್ನು ನೋಡಿರಿ:–

ಮಾತು + ಇಲ್ಲ = ಮಾತಿಲ್ಲ (ಉಕಾರ ಇಲ್ಲದಾಯಿತು)
(ಉ + ಇ)

ಆಡು + ಇಸು = ಆಡಿಸು (ಉಕಾರ ಇಲ್ಲದಾಯಿತು)
(ಉ + ಇ)

ಬೇರೆ + ಒಬ್ಬ = ಬೇರೊಬ್ಬ (ಎಕಾರ ಇಲ್ಲದಾಯಿತು)
(ಎ + ಒ)

ನಿನಗೆ + ಅಲ್ಲದೆ = ನಿನಗಲ್ಲದೆ (ಎಕಾರ ಇಲ್ಲದಾಯಿತು)
(ಎ + ಅ)

ನಾವು + ಎಲ್ಲಾ = ನಾವೆಲ್ಲಾ (ಉಕಾರ ಬಿಟ್ಟುಹೋಯಿತು)
(ಉ + ಎ)

ಮೇಲಿನ ಉದಾಹರಣೆಗಳಲ್ಲೆಲ್ಲಾ, ಎರಡು ಸ್ವರಗಳು ಸಂಧಿಸುವಾಗ ಮೊದಲನೆಯ ಸ್ವರವು ಇಲ್ಲದಂತಾಗುವುದು (ಲೋಪವಾಗುವುದು) ಕಂಡು ಬರುತ್ತದೆ. ಆದರೆ ಕೆಲವು ಕಡೆಗೆ ಸ್ವರದ ಮುಂದೆ ಸ್ವರವು ಬಂದಾಗ ಲೋಪ ಮಾಡಿದರೆ ಅರ್ಥವು ಕೆಡುವುದು. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:–

ಮನೆ + ಇಂದ – ಇಲ್ಲಿ ಲೋಪಮಾಡಿದರೆ 'ಮನಿಂದ' ಎಂದಾಗುವುದು
(ಎ + ಇ)

ಗುರು + ಅನ್ನು – ಇಲ್ಲಿ ಲೋಪಮಾಡಿದರೆ 'ಗುರನ್ನು' ಆಗುವುದು
(ಉ + ಅ)

ಹಾಗಾದರೆ ಅರ್ಥವು ಹಾಳಾಗುವಲ್ಲಿ ಲೋಪ ಮಾಡಬಾರದು. ಅಲ್ಲಿ ಬೇರೆ ವಿಧಾನವನ್ನು (ಮಾರ್ಗವನ್ನು) ಅನುಸರಿಸಬೇಕಾಗುವುದು. ಹಾಗಾದರೆ ಒಟ್ಟಿನಲ್ಲಿ ಲೋಪಸಂಧಿಗೆ ಸೂತ್ರವನ್ನು ಹೀಗೆ ಹೇಳಬಹುದು:–

**(16) ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವದಲ್ಲಿರುವ ಸ್ವರವು ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು. ಇದಕ್ಕೆ ಲೋಪಸಂಧಿಯೆಂದು ಹೆಸರು.**

ಉದಾಹರಣೆಗೆ:–

ಊರು + ಅಲ್ಲಿ = ಊರಲ್ಲಿ (ಉಕಾರ ಲೋಪ)
(ಉ + ಅ)

| | | | | | |
|---|---|---|---|---|---|
| ದೇವರು | + | ಇಂದ | = | ದೇವರಿಂದ | (ಉಕಾರ ಲೋಪ) |
| (ಉ | + | ಇ) | | | |
| ಬಲ್ಲೆನು | + | ಎಂದು | = | ಬಲ್ಲೆನೆಂದು | (ಉಕಾರ ಲೋಪ) |
| (ಉ | + | ಎ) | | | |
| ಏನು | + | ಆದುದು | = | ಏನಾದುದು | (ಉಕಾರ ಲೋಪ) |
| (ಉ | + | ಆ) | | | |
| ಇವನಿಗೆ | + | ಆನು | = | ಇವನಿಗಾನು | (ಎಕಾರ ಲೋಪ) |
| (ಎ | + | ಆ) | | | |
| ಅವನ | + | ಊರು | = | ಅವನೂರು | (ಅಕಾರ ಲೋಪ) |
| (ಅ | + | ಊ) | | | |

## ೨. ಆಗಮ ಸಂಧಿ

ಮೇಲೆ ಹೇಳಿದ ಲೋಪಸಂಧಿಯನ್ನು ಅರ್ಥವು ಕೆಡದಂತಿದ್ದರೆ ಮಾತ್ರ ಮಾಡಬೇಕು, ಇಲ್ಲದಿದ್ದರೆ ಮಾಡಬಾರದು ಎಂದು ತಿಳಿದಿದ್ದೀರಿ.

ಮನೆ + ಅನ್ನು ಎಂಬಲ್ಲಿ ಲೋಪ ಮಾಡಿದರೆ 'ಮನನ್ನು' ಆಗುವುದು,
ಗುರು + ಅನ್ನು ಎಂಬಲ್ಲಿ ಲೋಪ ಮಾಡಿದರೆ 'ಗುರನ್ನು' ಆಗುವುದು

ಎಂಬುದನ್ನು ಹಿಂದೆ ತಿಳಿದಿದ್ದೀರಿ. ಹಾಗಾದರೆ ಮನೆ + ಅನ್ನು, ಗುರು + ಅನ್ನು ಇವು ಕೂಡುವಾಗ ಪದದ ಮಧ್ಯದಲ್ಲಿ ಸ್ವರದ ಮುಂದೆ ಸ್ವರ ಬಂದಿದೆಯಾದ್ದರಿಂದ ಅವನ್ನು ಬಿಡಿ ಬಿಡಿಸಿ ಅನ್ನಲೂ ಕೂಡ ಯೋಗ್ಯವಾಗುವುದಿಲ್ಲ. ಆಗ ಆ ಎರಡೂ ಸ್ವರಗಳ ಮಧ್ಯದಲ್ಲಿ ಕೂಡಿಸಿ ಹೇಳಲು ಅನುಕೂಲವಾಗುವಂತಹ '**ಯ್**'ಕಾರವನ್ನೋ, '**ವ್**' ಕಾರವನ್ನೋ ಹೊಸದಾಗಿ ಸೇರಿಸಿದಾಗ ಉಚ್ಚಾರಮಾಡಲು ಅನುಕೂಲವಾಗುವುದು. ಹೀಗೆ ಹೊಸದಾಗಿ ಸೇರುವ ಅಕ್ಷರವೇ ಆಗಮಾಕ್ಷರ. ಹಾಗೆ ಹೊಸ ಅಕ್ಷರವನ್ನು ಸೇರಿಸಿ ಹೇಳುವ ಸಂಧಿಯೇ ಆಗಮಸಂಧಿ. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:–

### ಯಕಾರಾಗಮ ಬರುವುದಕ್ಕೆ

| | | | | | | | | | | |
|---|---|---|---|---|---|---|---|---|---|---|
| ತೆನೆ | + | ಅನ್ನು | = | ತೆನೆ | + | ಯ್ | + | ಅನ್ನು | = | ತೆನೆಯನ್ನು |
| ಕೈ | + | ಅನ್ನು | = | ಕೈ | + | ಯ್ | + | ಅನ್ನು | = | ಕೈಯನ್ನು |
| ಚಳಿ | + | ಅಲ್ಲಿ | = | ಚಳಿ | + | ಯ್ | + | ಅಲ್ಲಿ | = | ಚಳಿಯಲ್ಲಿ |
| ಮಳೆ | + | ಇಂದ | = | ಮಳೆ | + | ಯ್ | + | ಇಂದ | = | ಮಳೆಯಿಂದ |

| | | | | | | | | | | |
|---|---|---|---|---|---|---|---|---|---|---|
| ಗಾಳಿ | + | ಅನ್ನು | = | ಗಾಳಿ | + | ಯ್ | + | ಅನ್ನು | = | ಗಾಳಿಯನ್ನು |
| ಕೆರೆ | + | ಅಲ್ಲಿ | = | ಕೆರೆ | + | ಯ್ | + | ಅಲ್ಲಿ | = | ಕೆರೆಯಲ್ಲಿ |
| ಮರೆ | + | ಇಂದ | = | ಮರೆ | + | ಯ್ | + | ಇಂದ | = | ಮರೆಯಿಂದ |

## ವಕಾರಾಗಮ ಬರುವುದಕ್ಕೆ

| | | | | | | | | | | |
|---|---|---|---|---|---|---|---|---|---|---|
| ಗುರು | + | ಅನ್ನು | = | ಗುರು | + | ವ್ | + | ಅನ್ನು | = | ಗುರುವನ್ನು |
| ಪಿತೃ | + | ಅನ್ನು | = | ಪಿತೃ | + | ವ್ | + | ಅನ್ನು | = | ಪಿತೃವನ್ನು |
| ಮಗು | + | ಇಗೆ | = | ಮಗು | + | ವ್ | + | ಇಗೆ | = | ಮಗುವಿಗೆ |
| ಆ | + | ಉಂಗುರ | = | ಆ | + | ವ್ | + | ಉಂಗುರ | = | ಆವುಂಗುರ |
| ಆ | + | ಊರು | = | ಆ | + | ವ್ | + | ಊರು | = | ಆವೂರು |
| ಆ | + | ಒಲೆ | = | ಆ | + | ವ್ | + | ಒಲೆ | = | ಆವೊಲೆ |
| ಪೂ | + | ಅನ್ನು | = | ಪೂ | + | ವ್ | + | ಅನ್ನು | = | ಪೂವನ್ನು |

ಮೇಲೆ ತೋರಿಸಿರುವ ಯಕಾರಗಮ, ವಕಾರಾಗಮ ಸಂಧಿ ಬಂದಿರುವ ಸ್ಥಳಗಳಲ್ಲೆಲ್ಲ ಲೋಪಸಂಧಿಯನ್ನು ಮಾಡಿ ಹೇಳಲೂ ಬಾರದು, ಬರೆಯಲೂ ಬಾರದು. ಹಾಗೆ ಲೋಪ ಮಾಡಿದರೆ ಅರ್ಥವು ಹಾಳಾಗುವುದೆಂದು ಕಂಡಿದ್ದೀರಿ. ಆದುದರಿಂದ ಈ ಆಗಮಸಂಧಿಗೆ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು:–

**(17) ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ 'ಆಗಮ ಸಂಧಿ' ಎನ್ನುವರು.**

## ಯಕಾರಾಗಮ ವಕಾರಾಗಮ ಎಲ್ಲೆಲ್ಲಿ ಬರುತ್ತವೆಂಬುದನ್ನು ತೀಳಿಯೋಣ:–

**(೧) ಯಕಾರಾಗಮ ಸಂಧಿ:– ಆ, ಇ, ಈ, ಎ, ಏ, ಐ ಗಳ** ಮುಂದೆ ಸ್ವರ ಬಂದರೆ ಆ ಎರಡೂ ಸ್ವರಗಳ ಮಧ್ಯದಲ್ಲಿ '**ಯ್**' **ಕಾರವು ಆಗಮವಾಗುವುದು.**

ಉದಾಹರಣೆಗೆ:– [11]ಕಾ+ಅದೆ =ಕಾ+ಯ್+ಅದೆ=ಕಾಯದೆ
(ಆ+ಅ)
ಗಿರಿ+ಅನ್ನು=ಗಿರಿ+ಯ್+ಅನ್ನು=ಗಿರಿಯನ್ನು
(ಇ+ಅ)

[11]'ಕಾ' ಎಂಬುದು 'ರಕ್ಷಣೆ ಮಾಡು' ಎಂಬರ್ಥದಲ್ಲಿ ಏಕಾಕ್ಷರಧಾತು. ಹೊಸಗನ್ನಡದಲ್ಲಿ 'ಕಾ' ಧಾತು 'ಕಾಯ್' ಆಗುವುದೆಂದು ಕೆಲವರು ಒಪ್ಪುತ್ತಾರೆ.

[12]ಮೀ+ಅಲು=ಮೀ+ಯ್+ಅಲು=ಮೀಯಲು
(ಈ+ಅ)
ಕೆರೆ+ಅನ್ನು=ಕೆರೆ+ಯ್+ಅನ್ನು=ಕೆರೆಯನ್ನು
(ಎ+ಅ)
[13]ಮೇ+ಇಸು=ಮೇ+ಯ್+ಇಸು=ಮೇಯಿಸು
(ಏ+ಇ)
ಮೈ+ಅನ್ನು=ಮೈ+ಯ್+ಅನ್ನು=ಮೈಯನ್ನು
(ಐ+ಅ)

## (೨) ವಕಾರಾಗಮ ಸಂಧಿ:–

(i) **ಉ, ಊ, ಋ, ಓ ಸ್ವರಗಳ ಮುಂದೆ ಸ್ವರವು ಬಂದರೆ ನಡುವೆ 'ವ್' ಕಾರವು ಆಗಮವಾಗಿ ಬರುವುದು.**

ಉದಾಹರಣೆಗೆ:– ಮಡು+ಅನ್ನು=ಮಡು+ವ್+ಅನ್ನು=ಮಡುವನ್ನು
(ಉ+ಅ)
ಪೂ+ಇಂದ=ಪೂ+ವ್+ಇಂದ=ಪೂವಿಂದ
(ಊ+ಇ)
ಮಾತೃ+ಅನ್ನು=ಮಾತೃ+ವ್+ಅನ್ನು=ಮಾತೃವನ್ನು
(ಋ+ಅ)
ಗೋ+ಅನ್ನು=ಗೋ+ವ್+ಅನ್ನು=ಗೋವನ್ನು
(ಓ+ಅ)

(ii) **ಅಕಾರದ ಮುಂದೆ ಅಕಾರವೇ ಬಂದರೆ 'ವ್' ಕಾರಾಗಮವಾಗುವುದು.**
(ಪ್ರಕೃತಿ ಪ್ರತ್ಯಯ ಸೇರುವಾಗ ಮಾತ್ರ ಈ ಸಂಧಿಯಾಗುವುದು)

ಉದಾಹರಣೆಗೆ:– ಹೊಲ+ಅನ್ನು=ಹೊಲ+ವ್+ಅನ್ನು=ಹೊಲವನ್ನು
ನೆಲ+ಅನ್ನು= ನೆಲ+ವ್+ಅನ್ನು=ನೆಲವನ್ನು
ಕುಲ+ಅನ್ನು=ಕುಲ+ವ್+ಅನ್ನು=ಕುಲವನ್ನು
ತಿಲ+ಅನ್ನು=ತಿಲ+ವ್+ಅನ್ನು=ತಿಲವನ್ನು
ಮನ+ಅನ್ನು=ಮನ+ವ್+ಅನ್ನು=ಮನವನ್ನು

---

[12] 'ಮೀ' ಎಂಬುದೂ ಕೂಡ 'ಸ್ನಾನಮಾಡು' ಎಂಬರ್ಥದ ಕನ್ನಡ ಏಕಾಕ್ಷರ ಧಾತು.
[13] 'ಮೇ' ಎಂಬುದೂ ಕೂಡ ಪಶುಗಳ ಆಹಾರ ಭಕ್ಷಣೆಯ ಅರ್ಥದಲ್ಲಿ ಏಕಾಕ್ಷರ ಧಾತುವಾಗಿದೆ.

(iii) '**ಆ**'[14] ಎಂಬ ಶಬ್ದದ ಮುಂದೆ **ಉ, ಊ, ಒ, ಓ** ಗಳು ಬಂದರೆ ನಡುವೆ '**ವ**' ಕಾರವು ಆಗಮವಾಗಿ ಬರುವುದುಂಟು. (ಸಂಧಿಯನ್ನು ಮಾಡದೆಯೂ ಹೇಳಬಹುದು)

ಉದಾಹರಣೆಗೆ:– ಆ + ಉಂಗುರ = ಆ + ವ್ + ಉಂಗುರ = ಆವುಂಗುರ
ಆ + ಊಟ = ಆ + ವ್ + ಊಟ = ಆವೂಟ
ಆ + ಒಂಟೆ = ಆ + ವ್ + ಒಂಟೆ = ಆವೊಂಟೆ
ಆ + ಓಟ = ಆ + ವ್ + ಓಟ = ಆವೋಟ

ಸಂಧಿ ಮಾಡದಿರುವುದಕ್ಕೆ–ಆ ಉಂಗುರ, ಆ ಊಟ, ಆ ಒಂಟೆ, ಆ ಓಟ (ಹೀಗೂ ಹೇಳಬಹುದು)

(iv) '**ಈ**' ಶಬ್ದದ ಮುಂದೆ **ಉ, ಊ, ಒ, ಓ** ಗಳು ಬಂದರೆ, ಯಕಾರಾಗಮವನ್ನಾದರೂ ಮಾಡಬಹುದು; ಅಥವಾ ವಕಾರಾಗಮವನ್ನಾದರೂ ಮಾಡಬಹುದು

ಉದಾಹರಣೆಗೆ:– ಈ + ಉದಕ = ಈ + ಯ್ + ಉದಕ = ಈಯುದಕ
ಈವುದಕ
ಈ + ಊರು = ಈ + ಯ್ + ಊರು = ಈಯೂರು
ಈವೂರು
ಈ + ಊಟ = ಈ + ಯ್ + ಊಟ = ಈಯೂಟ
ಈವೂಟ
ಈ + ಒಲೆ = ಈ + ಯ್ + ಒಲೆ = ಈಯೊಲೆ
ಈವೊಲೆ
ಈ + ಒಂಟೆ = ಈ + ಯ್ + ಒಂಟೆ = ಈಯೊಂಟೆ
ಈವೊಂಟೆ
ಈ + ಓಕುಳಿ = ಈ + ಯ್ + ಓಕುಳಿ = ಈಯೋಕುಳಿ
ಈವೋಕುಳಿ
ಈ + ಓಲೆ = ಈ + ಯ್ + ಓಲೆ = ಈಯೋಲೆ
ಈವೋಲೆ

---

[14] 'ಆ' ಶಬ್ದವೆಂದರೆ, ಕೆಲವು ಕಡೆ ಅವನು, ಅವಳು, ಅದು ಎಂಬ ಸರ್ವನಾಮಗಳಿಗೆ 'ಆ' ಎಂಬುದು ಆದೇಶವಾಗಿ ಬರುವುದು. ಹಾಗೆ ಆದೇಶವಾಗಿ ಬಂದ ಆಕಾರವೇ 'ಆ' ಶಬ್ದವೆನಿಸುವುದು. ಉದಾ.:– ಅವನು+ಗಂಡಸು= ಆ ಗಂಡಸು; ಅವಳು+ಹೆಂಗಸು=ಆ ಹೆಂಗಸು; ಅದು+ಕಲ್ಲು= ಆ ಕಲ್ಲು ಇದರಂತೆ ಕೆಲವು ಕಡೆ – ಇವನು+ಗಂಡಸು=ಈ ಗಂಡಸು; ಇವಳು+ಹೆಂಗಸು=ಈ ಹೆಂಗಸು; ಇದು+ಕಲ್ಲು=ಈ ಕಲ್ಲು ಇತ್ಯಾದಿ ಕಡೆಗಳಲ್ಲಿ ಇವನು, ಇವಳು, ಇದು ಎಂಬುದಕ್ಕೆ 'ಈ' ಆದೇಶವಾಗಿ ಬಂದರೆ ಇದನ್ನು 'ಈ' ಶಬ್ದವೆನ್ನುವರು

ಈ ಮೇಲೆ ಹೇಳಿದ ಕಡೆಗಳಲ್ಲಿ ಸಂಧಿಗಳನ್ನು ಮಾಡದೆಯೆ ಈ ಉದಕ, ಈ ಊರು, ಈ ಒಂಟೆ, ಈ ಓಲೆ ಹೀಗೆಯೂ ಬರೆಯಬಹುದು

(v) **ಓ** ಕಾರದ ಮುಂದೆ ಸ್ವರ ಬಂದರೆ '**ವ**' ಕಾರಾಗಮ ಬರುವುದೆಂದು ಹಿಂದೆ ಹೇಳಿದೆಯಷ್ಟೆ. ಆದರೆ ಕೆಲವು ಕಡೆ ಯಕಾರಾಗಮ ಬರುವುದುಂಟು.

ಉದಾಹರಣೆಗೆ:– ಗೋ + ಅನ್ನು = ಗೋವನ್ನು (ವಕಾರಾಗಮ ಬಂದಿದೆ)
(ಓ + ಅ)
ನೋ + ಅಲು = ನೋಯಲು (ಯಕಾರಾಗಮ ಬಂದಿದೆ)
(ಓ + ಅ)

## ೩. ಆದೇಶ ಸಂಧಿ

ಇದುವರೆಗೆ ಸ್ವರದ ಮುಂದೆ ಸ್ವರ ಬಂದರೆ ಲೋಪಸಂಧಿಯೋ, ಆಗಮಸಂಧಿಯೋ ಆಗುವ ವಿಚಾರ ನೋಡಿದೆವು. ಈಗ ಸ್ವರದ ಮುಂದೆ ವ್ಯಂಜನ ಬಂದಾಗ ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದಾಗ ಏನೇನು ಸಂಧಿಕಾರ್ಯ ನಡೆಯುವುದೆಂಬುದನ್ನು ತಿಳಿಯೋಣ.

ಮಳೆ + ಕಾಲ = ಮಳೆಗಾಲ (ಮಳೆ + ಗ್ಆಲ)
ಚಳಿ + ಕಾಲ = ಚಳಿಗಾಲ (ಚಳಿ +ಗ್ಆಲ)
ಬೆಟ್ಟ + ತಾವರೆ = ಬೆಟ್ಟದಾವರೆ (ಬೆಟ್ಟ + ದ್ಆವರೆ)
ಕಣ್ + ಕೆಟ್ಟು = ಕಂಗೆಟ್ಟು (ಕಂ + ಗ್ಎಟ್ಟು)
ಕಣ್ + ಪನಿ = ಕಂಬನಿ (ಕಂ + ಬ್ಅನಿ)

ಮೇಲಿನ ಉದಾಹರಣೆಗಳಲ್ಲಿರುವ, ಮಳೆ + ಕಾಲ ಎಂಬೆರಡು ಶಬ್ದಗಳಲ್ಲಿ ೨ ನೆಯ ಪದ [ಉತ್ತರಪದ][15] ದ ಮೊದಲನೆಯ '**ಕ**' ಕಾರಕ್ಕೆ '**ಗ**' ಕಾರ ಬಂದಿದೆ. '**ಚಳಿಗಾಲ**' ಎಂಬಲ್ಲಿಯೂ ಇದರಂತೆಯೇ ಕಕಾರಕ್ಕೆ ಗಕಾರ ಬಂದಿದೆ. **ಬೆಟ್ಟ + ತಾವರೆ** ಎಂಬೆರಡು ಪದಗಳಲ್ಲಿ ೨ ನೆಯ ಪದದ ಮೊದಲಕ್ಷರವಾದ **ತ** ಕಾರಕ್ಕೆ **ದ** ಕಾರ ಬಂದಿದೆ. [ಅಂದರೆ ತ್ ಎಂಬ ವ್ಯಂಜನಕ್ಕೆ ದ್ ಎಂಬ ವ್ಯಂಜನ ಬಂದಿದೆ] ಕಣ್ + ಪನಿ ಎಂಬಲ್ಲಿ **ಪ** ಕಾರಕ್ಕೆ **ಬ** ಕಾರ ಬಂದಿದೆ. ಹೀಗೆ ಸಂಧಿಯಾಗುವಾಗ ಒಂದು ಅಕ್ಷರದ ಸ್ಥಳದಲ್ಲಿ ಬೇರೊಂದು ಅಕ್ಷರ ಬರುವುದೇ ಆದೇಶವೆನಿಸುವುದು. ಕನ್ನಡ ಸಂಧಿಗಳಲ್ಲಿ ಈ ಆದೇಶವಾಗುವಿಕೆಯು ಉತ್ತರ ಪದದ ಆದಿಯಲ್ಲಿರುವ ವ್ಯಂಜನಕ್ಕೆ ಮಾತ್ರ ಎಂಬುದನ್ನು ಮುಖ್ಯವಾಗಿ ಗಮನದಲ್ಲಿಟ್ಟಿರಬೇಕು.

---

[15] ಎರಡು ಪದಗಳಲ್ಲಿ ಮೊದಲನೆಯ ಪದ ಪೂರ್ವಪದ; ಎರಡನೆಯ ಪದ ಉತ್ತರಪದ. ಸಮಾಸದಲ್ಲಿ ಹೀಗೆ ಹೇಳುವುದು ವಾಡಿಕೆ. ಮಳೆಯ + ಕಾಲ–ಎಂಬೆರಡು ಪದಗಳಲ್ಲಿ ಮಳೆಯ ಎಂಬುದು ಪೂರ್ವಪದ; ಕಾಲ ಎಂಬುದು ಉತ್ತರ ಪದ ಹೀಗೆ ತಿಳಿಯಬೇಕು

**(18) ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ (ಸ್ಥಳದಲ್ಲಿ) ಬೇರೊಂದು ಅಕ್ಷರವು ಬರುವುದೇ ಆದೇಶಸಂಧಿಯೆನಿಸುವುದು.**

ಹಾಗಾದರೆ ಎಲ್ಲೆಲ್ಲಿ ಈ ಆದೇಶಸಂಧಿಯಾಗುವುದು? ಯಾವ ಅಕ್ಷರಕ್ಕೆ ಯಾವ ಅಕ್ಷರ ಆದೇಶವಾಗಿ ಬರುವುದು? ಎಂಬುದನ್ನು ವಿವರವಾಗಿ ತಿಳಿಯೋಣ.

**(i) ಸಮಾಸದಲ್ಲಿ[16] ಉತ್ತರಪದದ ಆದಿಯಲ್ಲಿರುವ ಕ ತ ಪ ವ್ಯಂಜನಗಳಿಗೆ ಕ್ರಮವಾಗಿ ಗ ದ ಬ ವ್ಯಂಜನಗಳು ಆದೇಶವಾಗಿ ಬರುವುವು.**

ಉದಾಹರಣೆಗೆ:–

ಹುಲ್ಲು + ಕಾವಲು = *ಹುಲ್ಲು + ಗ್ ಆವಲು = ಹುಲ್ಲುಗಾವಲು
(ಕಕಾರಕ್ಕೆ ಗಕಾರಾದೇಶ)

ಹಳ + ಕನ್ನಡ = ಹಳ + ಗ್ ಅನ್ನಡ = ಹಳಗನ್ನಡ
(ಕಕಾರಕ್ಕೆ ಗಕಾರಾದೇಶ)

ಕಳೆ + ಕೂಡಿ = ಕಳೆ + ಗ್ ಊಡಿ = ಕಳೆಗೂಡಿ
(ಕಕಾರಕ್ಕೆ ಗಕಾರಾದೇಶ)

ಎಳೆ + ಕರು = ಎಳೆ + ಗ್ ಅರು = ಎಳೆಗರು
(ಕಕಾರಕ್ಕೆ ಗಕಾರಾದೇಶ)

ಮನೆ + ಕೆಲಸ = ಮನೆ = ಗ್ ಎಲಸ = ಮನೆಗೆಲಸ
(ಕಕಾರಕ್ಕೆ ಗಕಾರಾದೇಶ)

ಮೈ + ತೊಳೆ = ಮೈ + ದ್ ಒಳೆ = ಮೈದೊಳೆ
(ತಕಾರಕ್ಕೆ ದಕಾರಾದೇಶ)

ಮೇರೆ + ತಪ್ಪು = ಮೇರೆ + ದ್ ಅಪ್ಪು = ಮೇರೆದಪ್ಪು
(ತಕಾರಕ್ಕೆ ದಕಾರಾದೇಶ)

ಕಣ್ + ಪನಿ = ಕಣ್ + ಬ್ ಅನಿ = ಕಂಬನಿ
(ಪಕಾರಕ್ಕೆ ಬಕಾರಾದೇಶ)

ಬೆನ್ + ಪತ್ತು = ಬೆನ್ + ಬ್ ಅತ್ತು = (ಬೆಂಬತ್ತು)
(ಪಕಾರಕ್ಕೆ ಬಕಾರಾದೇಶ)

---

[16] 'ಸಮಾಸ' ಎಂದರೇನು? ಎಂಬುದನ್ನು ಮುಂದೆ ಸಮಾಸ ಪ್ರಕರಣ ಎಂಬ ಹೆಸರಿನ ಭಾಗದಲ್ಲಿ ವಿವರಿಸಿದೆ. ಆಗ ಸ್ಪಷ್ಟವಾಗಿ ತಿಳಿದುಬರುವುದು. ಈಗ ಸಂಧಿಕಾರ್ಯಗಳನ್ನಷ್ಟು ಗಮನಿಸಿದರೆ ಸಾಕು.

* ಇಲ್ಲಿ ಹುಲ್ಲು + ಕಾವಲು–ಎಂಬಲ್ಲಿ ಹುಲ್ಲು + ಕ್ + ಆವಲು = ಹುಲ್ಲುಗ್ಆವಲು = 'ಹುಲ್ಲುಗಾವಲು' ಎಂದು 'ಕ್' ವ್ಯಂಜನಕ್ಕೆ 'ಗ್' ವ್ಯಂಜನ ಬಂದಿದೆ ಎಂದು ತಿಳಿಯಬೇಕು. ಇದರಂತೆ ಉಳಿದವುಗಳನ್ನೂ ತಿಳಿಯಬೇಕು.

**ಕೆಲವು ಕಡೆ ಈ ಆದೇಶಗಳು ಬಾರದೆ ಇರುವುದೂ ಉಂಟು**

ಮನೆ + ಕಟ್ಟು = ಮನೆಕಟ್ಟು
ತಲೆ + ಕಟ್ಟು = ತಲೆಕಟ್ಟು

**(ii) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ 'ಪ ಬ ಮ' ವ್ಯಂಜನಗಳಿಗೆ 'ವ' ಕಾರವು ಆದೇಶವಾಗಿ ಬರುವುದು**[17]

ಉದಾಹರಣೆಗೆ:– ನೀರ್ + ಪೊನಲ್ = ನೀರ್ + ವ್ ಒನಲ್ = ನೀರ್ವೊನಲ್
(ಪಕಾರಕ್ಕೆ ವಕಾರಾದೇಶ)
ಎಳ + ಪೆರೆ = ಎಳ + ವ್ ಎರೆ = ಎಳವರೆ
(ಪಕಾರಕ್ಕೆ ವಕಾರಾದೇಶ)
ಬೆಮರ್ + ಪನಿ = ಬೆಮರ್ + ವ್ ಅನಿ = ಬೆಮರ್ವನಿ
(ಪಕಾರಕ್ಕೆ ವಕಾರಾದೇಶ)
ಬೇರ್ + ಬೆರಸಿ = ಬೇರ್ + ವ್ ಎರಸಿ = ಬೇರ್ವೆರಸಿ
(ಬಕಾರಕ್ಕೆ ವಕಾರಾದೇಶ)
ಕಡು + ಬೆಳ್ಪು = ಕಡು + ವ್ ಎಳ್ಪು = ಕಡುವೆಳ್ಪು
(ಬಕಾರಕ್ಕೆ ವಕಾರಾದೇಶ)
ಎಳ + ಬಳ್ಳಿ = ಎಳ + ವ್ ಅಳ್ಳಿ = ಎಳವಳ್ಳಿ
(ಬಕಾರಕ್ಕೆ ವಕಾರಾದೇಶ)
ಮೆಲ್ + ಮಾತು = ಮೆಲ್ + ವ್ ಆತು = ಮೆಲ್ವಾತು
(ಮಕಾರಕ್ಕೆ ವಕಾರಾದೇಶ)
ನೆಲೆ + ಮನೆ = ನೆಲೆ + ವ್ ಅನೆ = ನೆಲೆವನೆ
(ಮಕಾರಕ್ಕೆ ವಕಾರಾದೇಶ)

ಇದರ ಹಾಗೆ......**ಕಿಸುವಣ್, ಎಸರ್ವೊಯ್ದು, ಚೆಲ್ವೆಳಕು, ಕೆನೆವಾಲ್, ಕೈವಿಡಿ, ನೆರೆವೀದಿ, ಪೊರೆವೀಡು** ಇತ್ಯಾದಿಗಳಲ್ಲಿ ವಕಾರಾದೇಶ ಬಂದಿರುವುದನ್ನು ಗಮನಿಸಿರಿ.

**ಈ ಆದೇಶವು ಕೆಲವು ಕಡೆ ಬರುವುದಿಲ್ಲ.** ಅದಕ್ಕೆ ಉದಾಹರಣೆ:–

ಕಣ್ + ಬೇಟ = ಕಣ್ಬೇಟ (ಕಣ್ವೇಟ ಆಗುವುದಿಲ್ಲ)
ಕಿಳ್ + ಪೊಡೆ = ಕಿಳ್ಪೊಡೆ (ಕಿಳ್ವೊಡೆ ಆಗುವುದಿಲ್ಲ)
ಪಾಳ್ + ಮನೆ = ಪಾಳ್ಮನೆ (ಪಾಳ್ವನೆ ಆಗುವುದಿಲ್ಲ)

---

[17] ಪ ಬ ಮ ವ್ಯಂಜನಗಳಿಗೆ ಎಂದರೆ ಪ್, ಬ್, ಮ್‌ಗಳಿಗೆ ಎಂದೂ, ವಕಾರವೆಂದರೆ 'ವ್' ಎಂಬ ವ್ಯಂಜನವೆಂದೂ ತಿಳಿಯಬೇಕು. ಉಚ್ಚಾರಣೆಯ ಸೌಲಭ್ಯ ದೃಷ್ಟಿಯಿಂದ ಪ ಬ ಮ ವ–ಇತ್ಯಾದಿ ಬರೆದಿದೆ. ಆದೇಶ ಬರುವುದು ಕೇವಲ ವ್ಯಂಜನಾಕ್ಷರಕ್ಕೇ ಎಂದು ಎಲ್ಲ ಕಡೆಗೂ ತಿಳಿಯಬೇಕು.

**(iii) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಸಕಾರಕ್ಕೆ ಸಾಮಾನ್ಯವಾಗಿ ಕೆಲವು ಕಡೆ ಚಕಾರವೂ, ಕೆಲವು ಕಡೆ ಜಕಾರವೂ, ಕೆಲವು ಕಡೆ ಛಕಾರವೂ ಆದೇಶವಾಗಿ ಬರುವುದುಂಟು. ಆದರೆ ಪೂರ್ವಪದದ ಕೊನೆಯಲ್ಲಿ ಯ್, ಲ್ ಗಳು ಇರಬಾರದು.**

ಉದಾಹರಣೆಗೆ:–

**(೧) ಸಕಾರಕ್ಕೆ ಚಕಾರ ಬರುವುದಕ್ಕೆ––**

ಇನ್ + ಸರ = ಇನ್ + ಚ್ ಅರ = ಇಂಚರ

ನುಣ್ + ಸರ = ನುಣ್ + ಚ್ ಅರ = ನುಣ್ಚರ

**(೨) ಸಕಾರಕ್ಕೆ ಜಕಾರ ಬರುವುದಕ್ಕೆ––**

ಮುನ್ + ಸೆರಂಗು = ಮುನ್ + ಜ್ ಎರಂಗು = ಮುಂಜೆರಂಗು

ಮುನ್ + ಸೊಡರ್ = ಮುನ್ + ಜ್ ಒಡರ್ = ಮುಂಜೊಡರ್

ತಣ್ + ಸೊಡರ್ = ತಣ್ + ಜ್ ಒಡರ್ = ತಣ್ಜೊಡರ್

**(೩) ಸಕಾರಕ್ಕೆ ಛಕಾರ ಬರುವುದಕ್ಕೆ––**

ಇರ್ + ಸಾಸಿರ = ಇರ್ + ಛ್ ಆಸಿರ = ಇರ್ಛಾಸಿರ

ಪದಿನೆಣ್ + ಸಾಸಿರ = ಪದಿನೆಣ್ + ಛ್ ಆಸಿರ = ಪದಿನೆಣ್ಛಾಸಿರ

ನೂರ್ + ಸಾಸಿರ = ನೂರ್ + ಛ್ ಆಸಿರ = ನೂರ್ಛಾಸಿರ

**ಕೆಲವು ಕಡೆ ಈ ಸಕಾರಕ್ಕೆ ಯಾವ ಆದೇಶಗಳೂ ಬಾರದಿರುವುದುಂಟು.**

ಬಾಯ್ + ಸವಿ = ಬಾಯ್ಸವಿ, ಬೆಳ್ಸರಿ, ಕಣ್ಸೋಲ, ಕಣ್ಸವಿ, ಮೆಲ್ಸರ, ಮೆಯ್ಸವಿ, ಬಲ್ಸೋನೆ.

# III – ಪ್ರಕೃತಿ ಭಾವ

ಇದುವರೆಗೆ ಕನ್ನಡದ ಸಂಧಿಗಳಾದ ಲೋಪ, ಆಗಮ, ಆದೇಶ ಸಂಧಿಗಳ ವಿಚಾರವಾಗಿ ತಿಳಿದಿರಿ. ಸ್ವರದ ಮುಂದೆ ಸ್ವರ ಬಂದರೆ ಲೋಪ ಅಥವಾ ಆಗಮಗಳಲ್ಲಿ ಯಾವುದಾದರೊಂದು ಸಂಧಿಯಾಗಬೇಕು ಎಂದು ಹಿಂದೆ ಹೇಳಲಾಯಿತು. ಆದರೆ ಈ ಕೆಳಗಿನ ಕೆಲವು ಉದಾಹರಣೆ ನೋಡಿರಿ:–

**ಅಹಹಾ + ಎಷ್ಟು ಚೆನ್ನಾಗಿದೆ?**

**ಅಯ್ಯೋ + ಇದೇನು?**

**ಓಹೋ + ಇದೇನು?**

**ಓಹೋ + ಅವನು ಬಂದನೇ?**

**ಅಕ್ಕಾ + ಇತ್ತ ಬಾ**

ಮೇಲಿನ ನಾಲ್ಕು ವಾಕ್ಯಗಳನ್ನು ನೋಡಿರಿ. ಅಹಹಾ + ಎಷ್ಟು ಚೆನ್ನಾಗಿದೆ, '**ಆ**' ಕಾರಕ್ಕೆ (ಹ್ ವ್ಯಂಜನದ ಮುಂದಿನ ಆಕಾರಕ್ಕೆ) '**ಎ**' ಕಾರ ಪರವಾಗಿದೆ (ಎದುರಿಗೆ ಬಂದಿದೆ). ಹಿಂದೆ ಹೇಳಿದ

ನಿಯಮದ ಪ್ರಕಾರ ಇಲ್ಲಿ ಯಕಾರಾಗಮವಾಗಬೇಕಾಗಿತ್ತಲ್ಲವೆ? ಅದರಂತೆ, "**ಅಯ್ಯೋ + ಇದೇನು**" ಎಂಬಲ್ಲಿ **ಓ** ಕಾರದ ಮುಂದೆ **ಇ** ಕಾರ ಬಂದಿದೆ. "**ಓಹೋ + ಇದೇನು**" ಎಂಬಲ್ಲಿ **ಓ** ಕಾರದ ಮುಂದೆ **ಇ** ಕಾರ ಬಂದಿದೆ, "**ಅಕ್ಕಾ + ಇತ್ತ**" ಎಂಬಲ್ಲಿಯೂ **ಆ** ಕಾರದ ಮುಂದೆ **ಇ** ಕಾರ ಬಂದಿದೆ. ಈ ನಾಲ್ಕೂ ಕಡೆಯಲ್ಲೂ ಸ್ವರದ ಮುಂದೆ ಸ್ವರ ಬಂದಿದ್ದರೂ ಲೋಪವನ್ನಾಗಲಿ, ಆಗಮವನ್ನಾಗಲಿ ಮಾಡಲೇಬಾರದು. ಅವು ಹೇಗಿವೆಯೋ ಹಾಗೇ ಬಿಡಬೇಕು. ಹೀಗೆ ಇದ್ದ ರೀತಿಯಲ್ಲೇ ಇರುವುದಕ್ಕೆ "**ಪ್ರಕೃತಿಭಾವ**" ಎಂದು ವ್ಯಾಕರಣದಲ್ಲಿ ಹೇಳುತ್ತಾರೆ. ಆದ್ದರಿಂದ ಪ್ರಕೃತಿ ಭಾವಕ್ಕೆ ಸೂತ್ರವನ್ನು ಕೆಳಗಿನಂತೆ ಹೇಳಬಹುದು:–

**(19) ಸ್ವರದ ಮುಂದೆ ಸ್ವರವು ಬಂದರೂ, ಕೆಲವು ಕಡೆಗಳಲ್ಲಿ ಲೋಪ, ಆಗಮ ಮೊದಲಾದ ಸಂಧಿಕಾರ್ಯಗಳಾಗದೆ ಇದ್ದ ಹಾಗೆಯೇ ಇರುವುದಕ್ಕೆ ಪ್ರಕೃತಿ ಭಾವವೆನ್ನುವರು.**

ಹಾಗಾದರೆ ಎಂಥ ಕಡೆ ಈ ಪ್ರಕೃತಿಭಾವ ಬರುವುದೆಂಬುದನ್ನು (ಸಂಧಿಕಾರ್ಯವಾಗದಿರುವಿಕೆಯನ್ನು) ಗಮನಿಸಿರಿ:–

(i) **ಪ್ಲುತಸ್ವರಗಳ**[18] **ಮುಂದೆ ಸ್ವರಪರವಾದರೆ ಸಂಧಿಕಾರ್ಯ ಮಾಡಬಾರದು (ಪ್ರಕೃತಿಭಾವ ಬರುವುದು).**

ಅಣ್ಣಾ($_3$) + ಇತ್ತಬಾ = ಅಣ್ಣಾ, ಇತ್ತ ಬಾ
ದೇವರೇ($_3$) + ಇನ್ನೇನು ಗತಿ = ದೇವರೇ, ಇನ್ನೇನು ಗತಿ
ಅಮ್ಮಾ($_3$) + ಅದು ಬೇಕು = ಅಮ್ಮಾ, ಅದು ಬೇಕು
ರಾಮಾ($_3$) + ಅಲ್ಲಿ ನೋಡು = ರಾಮಾ, ಅಲ್ಲಿ ನೋಡು
ಗುರುವೇ($_3$) + ಉದ್ಧರಿಸು = ಗುರುವೇ, ಉದ್ಧರಿಸು

(ii) **ಭಾವಸೂಚಕಾವ್ಯಯಗಳಾದ**[19] **ಅಹಹಾ! ಅಬ್ಬಾ! ಅಯ್ಯೋ! ಅಕ್ಕಟಾ! ಓಹೋ! ಛೇ! —— ಇತ್ಯಾದಿ ಶಬ್ದಗಳ ಮುಂದೆ ಸ್ವರ ಪರವಾದಾಗ ಸಂಧಿ ಕಾರ್ಯಗಳಾಗುವುದಿಲ್ಲ.**

(ಬಹುಶಃ ಈ ಭಾವಸೂಚಕಾವ್ಯಯಗಳೆಲ್ಲ ಸ್ವರಾಂತಗಳಾಗಿರುತ್ತವೆ. ಇವುಗಳ ಮುಂದೆ ಸ್ವರ ಬಂದರೆ ಪ್ರಕೃತಿಭಾವ ಬರುವುದು)

ಉದಾಹರಣೆಗೆ:– ಅಯ್ಯೋ + ಅವನಿಗೇನಾಯಿತು? = ಅಯ್ಯೋ! ಅವನಿಗೇನಾಯಿತು?
ಅಬ್ಬಾ + ಅದು ಹಾವೇ? = ಅಬ್ಬಾ! ಅದು ಹಾವೇ?
ಅಕ್ಕಟಾ + ಇಂದ್ರನಿಗೆ ಹಾನಿಯೇ? = ಅಕ್ಕಟಾ! ಇಂದ್ರನಿಗೆ ಹಾನಿಯೇ?
ಓಹೋ + ಅವನೇನು? = ಓಹೋ! ಅವನೇನು?

[18] ಪ್ಲುತಸ್ವರವೆಂದರೆ ಸಂಬೋಧನೆಯಲ್ಲಿ ಬರುವ ಸ್ವರ. ಈ ಉದಾಹರಣೆಗಳಲ್ಲಿ($_3$) ಈ ಗುರುತಿನಿಂದ ಸೂಚಿಸಿರುವ ಸ್ವರಗಳೆಲ್ಲ ಪ್ಲುತಗಳೆಂದು ತಿಳಿಯಬೇಕು. ಹಿಂದೆ ಸ್ವರಗಳನ್ನು ಹೇಳಿದ ಕಡೆ ಅಂದರೆ ಸಂಜ್ಞಾಪ್ರಕರಣದಲ್ಲಿ ಈ ವಿಷಯ ತಿಳಿಸಿದೆ.

[19] ಈ ಭಾವಸೂಚಕಾವ್ಯಯಗಳನ್ನು ನಿಪಾತಾವ್ಯಯಗಳೆಂದೂ ಕರೆಯುವರು.

ಎಲಾ + ಅಧಮನೇ? = ಎಲಾ! ಅಧಮನೇ
ಛೇ + ಅದೆಲ್ಲಿ = ಛೇ! ಅದೆಲ್ಲಿ.

(iii) **'ಆ' ಎಂಬ ಶಬ್ದದ ಮುಂದೆ ಅ ಆ ಐ ಔ ಸ್ವರಗಳು ಬಂದರೆ ಸಂಧಿಕಾರ್ಯ ಮಾಡಬಾರದು (ಪ್ರಕೃತಿಭಾವ ಬರುವುದು).**

ಆ + ಅಂಗಡಿ = ಆ ಅಂಗಡಿ
ಆ + ಅರಸು = ಆ ಅರಸು
ಆ + ಐಶ್ವರ್ಯ = ಆ ಐಶ್ವರ್ಯ
ಆ + ಆಡು = ಆ ಆಡು
ಆ + ಆಕಳು = ಆ ಆಕಳು
ಆ + ಔನ್ನತ್ಯ = ಆ ಔನ್ನತ್ಯ
ಆ + ಔದಾರ್ಯ = ಆ ಔದಾರ್ಯ

# IV – ಸಾರಾಂಶ

ಇದುವರೆಗೆ ಕನ್ನಡ ಭಾಷೆಯಲ್ಲಿ ಬರುವ ಲೋಪ, ಆಗಮ, ಆದೇಶ ಸಂಧಿಗಳ ಬಗೆಗೆ ತಿಳಿದಿರಿ. ಸ್ವರದ ಮುಂದೆ ಸ್ವರ ಬಂದರೆ ಲೋಪ ಅಥವಾ ಆಗಮ ಸಂಧಿಗಳಾಗುತ್ತವೆ. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದರೆ ಆಗುವ ಆದೇಶ ಸಂಧಿಗಳ ಸ್ಥೂಲಪರಿಚಯ ಮಾಡಿಕೊಂಡಿರಿ. ಅನಂತರ ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇರುವ ಪ್ರಕೃತಿಭಾವವನ್ನೂ ಅರಿತಿರಿ. ಇದನ್ನು ಕೆಳಗೆ ಸೂಚಿಸಿರುವ ರೇಖಾ ಚಿತ್ರಗಳ ಮೂಲಕ ಸ್ಥೂಲವಾಗಿ ನೆನಪಿನಲ್ಲಿ ಇಟ್ಟುಕೊಳ್ಳಿರಿ.

## (೧) ಕನ್ನಡ ಸಂಧಿಗಳು

**ಲೋಪ**

ಸ್ವರ+ಸ್ವರ–ಪೂರ್ವದ ಸ್ವರಕ್ಕೆ ಅರ್ಥಹಾನಿಯಾಗದಾಗ ಲೋಪ

**ಆಗಮ**

ಸ್ವರ+ಸ್ವರ–ಮಧ್ಯದಲ್ಲಿ ಯಕಾರ ಅಥವಾ ವಕಾರಾಗಮ

**ಆದೇಶ**

ಸ್ವರ+ವ್ಯಂಜನ,
ವ್ಯಂಜನ+ವ್ಯಂಜನ

1. ಉತ್ತರಪದದ ಆದಿಯ ಕ ತ ಪ ಗಳು ಗ ದ ಬ ಗಳಾಗುತ್ತವೆ.
2. ಪ ಬ ಮ ಗಳಿಗೆ ವಕಾರ ಆದೇಶವಾಗುತ್ತದೆ.
3. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತವೆ.

## (೨) ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದಿರುವುದು ಪ್ರಕೃತಿಭಾವ

* * * * *

## ಅಭ್ಯಾಸ ಪ್ರಶ್ನೆಗಳು

೧. ಸಂಧಿಯೆಂದರೇನು?

೨. ದೇವರು + ಅಲ್ಲಿ, ಊರು + ಊರು, ಜಾತ್ರೆ + ಆಯಿತು, ಗುರು + ಅನ್ನು, ಹೊಲ + ಅನ್ನು ಇದನ್ನು ಕೂಡಿಸಿ ಬರೆದು ಯಾವ ಸಂಧಿ ಎಂಬುದನ್ನು ತಿಳಿಸಿರಿ.

೩. ಯಕಾರಾಗಮ ವಕಾರಾಗಮ ಸಂಧಿಗಳು ಎಲ್ಲೆಲ್ಲಿ ಬರುತ್ತವೆ, ತಿಳಿಸಿರಿ.

೪. ಪಿತೃ + ಅನ್ನು, ಮಾತೃ + ಅನ್ನು, ಮನೆ + ಅನ್ನು, ಗಿರಿ + ಅನ್ನು, ಸಿರಿ + ಅನ್ನು ಇವನ್ನು ಕೂಡಿಸಿ ಬರೆದು ಯಾವ ಸಂಧಿ ಎಂಬುದನ್ನು ತಿಳಿಸಿರಿ. ಇಲ್ಲಿ ಲೋಪ ಮಾಡಿದ್ದರೆ ಹೇಗೆ ರೂಪಗಳಾಗುತ್ತಿದ್ದವು?

೫. ಅವನಲ್ಲಿ, ಊರನ್ನು, ದೇವರಲ್ಲಿ, ಮನೆಯಲ್ಲಿ, ಗುರುವನ್ನು, ಮಾತೃವನ್ನು, ಶತ್ರುವನ್ನು, ಮನವನ್ನು ಈ ಪದಗಳಲ್ಲಿರುವ ಸಂಧಿಗಳನ್ನು ಬಿಡಿಸಿ ಬರೆದು ಯಾವ ಯಾವ ಸಂಧಿಗಳೆಂಬುದನ್ನು ಹೆಸರಿಸಿರಿ.

೬. ಈ ಕೆಳಗೆ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಶಬ್ದದಿಂದ ತುಂಬಿರಿ:–

(i) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಕತಪ ಗಳಿಗೆ ____________

(ii) ಮಳೆ + ______ = ಮಳೆಗಾಲ, ಇನಿದು + _______ = ಇಂಚರ
ನೀರ್ + ______ = ನೀರ್ವೊನಲ್, ಬೇರ್ + _______ = ಬೇರ್ವೆರಸಿ

(iii) ಆ ಎಂಬ ಶಬ್ದದ ಮುಂದೆ ಅ ಆ ಐ ಔ ಸ್ವರಗಳು ಬಂದರೆ ____________

(iv) ಸ್ವರದ ಮುಂದೆ ಸ್ವರ ಬಂದರೂ ಕೆಲವು ಕಡೆ ಲೋಪ, ಆಗಮ, ಆದೇಶಗಳು ಆಗುವುದಿಲ್ಲ. ಇದಕ್ಕೆ ______________

(v) ಸ್ವರಕ್ಕೆ ಸ್ವರವು ಪರವಾದಾಗ ಅರ್ಥಕ್ಕೆ ಹಾನಿ ಬಾರದಿದ್ದರೆ __________ ಸ್ವರವು ಲೋಪವಾಗುವುದು.

(vi) _______ ಸ್ವರಗಳ ಮುಂದೆ ಸ್ವರ ಬಂದರೆ ನಡುವೆ ಯಕಾರಾಗಮವಾಗುವುದು.

(vii) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಪಬಮ ಗಳಿಗೆ _______ ವು ಆದೇಶವಾಗಿ ಬರುವುದು.

(viii) ಭಾವಸೂಚಕಾವ್ಯಯಗಳ ಮುಂದೆ ಸ್ವರ ಬಂದರೆ __________

(ix) ಪ್ಲುತಕ್ಕೆ ಸ್ವರ ಪರವಾದರೆ ______________

೭. ಈ ಕೆಳಗಿನ ವಾಕ್ಯಗಳಲ್ಲಿ ದೋಷಗಳಿವೆ. ಅವನ್ನು ತಿದ್ದಿ ಹೇಳಿರಿ:–

(i) ಪ್ಲುತಸ್ವರವೆಂದರೆ, ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರ.

(ii) ಆಗಮ ಸಂಧಿಯೆಂದರೆ ಒಂದು ಅಕ್ಷರದ ಸ್ಥಳದಲ್ಲಿ ಬೇರೊಂದು ಅಕ್ಷರ ಬರುವುದು.

(iii) ವ್ಯಂಜನಗಳು ಅ ಕಾರದಿಂದ ಔ ಕಾರದವರೆಗೆ ಹದಿನಾಲ್ಕು.

(iv) ಒಂದು ವ್ಯಂಜನದ ಮುಂದೆ ಇನ್ನೊಂದು ವ್ಯಂಜನ ಬಂದಾಗ ಲೋಪಸಂಧಿಯಾಗುವುದು.

೮. ಈಕೆಳಗೆ ಬಿಟ್ಟಿರುವ ಸ್ಥಳಗಳ ಮುಂದೆ ಆವರಣದಲ್ಲಿ ಕೊಟ್ಟಿರುವ ಸರಿಯಾದ ಒಂದು ಉತ್ತರವನ್ನು ಆರಿಸಿ ಬರೆಯಿರಿ.

(i) ಊರೂರು=______ (ಲೋಪಸಂಧಿ, ಆಗಮ ಸಂಧಿ, ಆದೇಶಸಂಧಿ)

(ii) ಮನೆ+ಅನ್ನು=______(ಆಗಮ ಸಂಧಿ, ಆದೇಶಸಂಧಿ, ಲೋಪಸಂಧಿ)

(iii) 'ಅ' ಶಬ್ದದ ಮುಂದೆ ಅಕಾರ ಪರವಾದರೆ_______
(ಲೋಪಸಂಧಿ, ಆಗಮಸಂಧಿ, ಸಂಧಿಯಾಗುವುದಿಲ್ಲ)

(iv) ನಿಪಾತಾವ್ಯಯದ ಮುಂದೆ ಸ್ವರ ಬಂದರೆ______ ಎನಿಸುವುದು.
(ಪ್ರಕೃತಿಭಾವ, ಆಗಮ, ಆದೇಶ)

(v) ಇಕಾರಕ್ಕೆ ಸ್ವರ ಪರವಾದರೆ________
(ಯಕಾರಾಗಮ, ವಕಾರಾಗಮ, ಲೋಪವಾಗುವುದು)

(vi) ಸ್ವರಕ್ಕೆ ಸ್ವರ ಪರವಾದರೆ______ ಸ್ವರವು ಲೋಪವಾಗುವುದು.
(ಪೂರ್ವದ, ಮಧ್ಯದ, ಉತ್ತರದ)

(vii) ಪ್ಲುತಸ್ವರಕ್ಕೆ ಸ್ವರ ಪರವಾದರೆ _______ ಬರುವುದು.
(ಯಕಾರಾಗಮ, ವಕಾರಾಗಮ, ಪ್ರಕೃತಿಭಾವ)

(viii) ಪ್ಲುತಸ್ವರವೆಂದರೆ ________
(ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರ,
ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರ,
ಮೂರು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರ)

(ix) ಆದೇಶವೆಂದರೆ________
(ಒಂದು ಅಕ್ಷರದ ಸ್ಥಳದಲ್ಲಿ ಬರುವ ಬೇರೊಂದು ಅಕ್ಷರ,
ಹೊಸದಾಗಿ ಬರುವ ಅಕ್ಷರ, ಇಲ್ಲದಂತಾಗುವ ಅಕ್ಷರ)

* * * * *

# V – ಸಂಸ್ಕೃತ ಸಂಧಿಗಳು

## 1. ಸಂಸ್ಕೃತ ಸ್ವರ ಸಂಧಿಗಳು

**(೧) ರಾಮಾಯಣವು ಮಹೋನ್ನತ ಗ್ರಂಥ.**

**(೨) ಸೂರ್ಯೋದಯ ಸಮಯವು ಅತ್ಯಂತ ಮನೋಹರವಾದುದು.**

ಮೇಲಿನ ಈ ಎರಡೂ ವಾಕ್ಯಗಳು ಕನ್ನಡ ವಾಕ್ಯಗಳೇ ಅಲ್ಲವೆ? ಆದರೆ ಇದರಲ್ಲಿ ಸಂಸ್ಕೃತದಿಂದ ಬಂದ ಶಬ್ದಗಳೇ ಹೆಚ್ಚಾಗಿವೆ. '**ರಾಮಾಯಣ**' '**ಮಹೋನ್ನತ**' '**ಗ್ರಂಥ**' '**ಸೂರ್ಯೋದಯ**' '**ಸಮಯ**' '**ಅತ್ಯಂತ**' '**ಮನೋಹರ**' –ಹೀಗೆ ಈ ಏಳೂ ಶಬ್ದಗಳು ಸಂಸ್ಕೃತ ಶಬ್ದಗಳೇ ಆಗಿವೆ. ಹೀಗೆ ನಮ್ಮ ಭಾಷೆಯಲ್ಲಿ ಸಾವಿರಾರು ವರ್ಷಗಳಿಂದ ಸಂಸ್ಕೃತದ ಅನೇಕ ಶಬ್ದಗಳು ಬಂದು ಸೇರಿವೆ. ನಮ್ಮ ಕವಿಗಳು ತಮ್ಮ ಕಾವ್ಯಗಳಲ್ಲಿ ಲೆಕ್ಕವಿಲ್ಲದಷ್ಟು ಸಂಸ್ಕೃತ ಶಬ್ದಗಳನ್ನು ಸೇರಿಸಿ ಕಾವ್ಯ ಬರೆದಿದ್ದಾರೆ. ಆದ್ದರಿಂದ ಸಂಸ್ಕೃತದಿಂದ ಕನ್ನಡಕ್ಕೆ ಬಂದು ಬಳಸಲ್ಪಡುತ್ತಿರುವ ಶಬ್ದಗಳ ಸಂಧಿಕಾರ್ಯಗಳೇನೆಂಬುದನ್ನು ಕನ್ನಡ ಭಾಷಾಜ್ಞಾನದ ದೃಷ್ಟಿಯಿಂದ ತಿಳಿಯುವುದು ಉಪಯುಕ್ತವಾದುದು.

ಎರಡು ಸಂಸ್ಕೃತ ಶಬ್ದಗಳು ಸೇರಿ ಸಂಧಿಯಾದರೆ ಸಂಸ್ಕೃತ ಸಂಧಿಯೇ ಆಗುತ್ತದೆ. ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದದೊಡನೆ ಸೇರಿ ಸಂಧಿಯಾದರೆ ಕನ್ನಡ ಸಂಧಿಯೇ ಆಗುತ್ತದೆ.

ಸಂಸ್ಕೃತದಲ್ಲಿ ಸ್ವರಕ್ಕೆ ಸ್ವರ ಪರವಾಗಿ ಸ್ವರಸಂಧಿಗಳೂ, ವ್ಯಂಜನಕ್ಕೆ ವ್ಯಂಜನ ಪರವಾಗಿ ವ್ಯಂಜನ ಸಂಧಿಗಳೂ ಆಗುವುವು. ಮೊದಲು ಸ್ವರಸಂಧಿಗಳ ವಿಚಾರ ತಿಳಿಯೋಣ.

### (೧) ಸವರ್ಣ ದೀರ್ಘ ಸಂಧಿ

**(ಅ) ವಿದ್ಯಾಭ್ಯಾಸ ಮಾಡಿದನು.**

**(ಆ) ರಾಮಾಯಣವನ್ನು ಓದು.**

**(ಇ) ಹರೀಶ್ವರನು ಕನ್ನಡ ಕವಿ.**

**(ಈ) ಗುರೂಪದೇಶವನ್ನು ಪಡೆ.**

ಈ ವಾಕ್ಯಗಳಲ್ಲಿ '**ವಿದ್ಯಾಭ್ಯಾಸ**' '**ರಾಮಾಯಣ**' '**ಹರೀಶ್ವರ**' '**ಗುರೂಪದೇಶ**' ಈ ಶಬ್ದಗಳಲ್ಲಿ ಆಗಿರುವ ಸಂಧಿಕಾರ್ಯಗಳನ್ನು ಗಮನಿಸಿರಿ.

ವಿದ್ಯಾ + ಅಭ್ಯಾಸ = ವಿದ್ಯ್ + ಆ + ಭ್ಯಾಸ = ವಿದ್ಯಾಭ್ಯಾಸ (ಆ + ಅ)

ಇಲ್ಲಿ '**ಆ**' ಎಂಬ ಸ್ವರದ ಮುಂದೆ '**ಅ**' ಎಂಬ ಸ್ವರ ಬಂದಿದೆ. ಈ ಎರಡೂ ಸ್ವರಗಳು ಸವರ್ಣಸ್ವರಗಳು[20], ಅಂದರೆ ಸಮಾನ ಸ್ಥಾನದಲ್ಲಿ ಹುಟ್ಟಿದವುಗಳು. ಒಂದು ಹ್ರಸ್ವ, ಒಂದು ದೀರ್ಘ ಅಷ್ಟೆ.

ಇವು ಹೀಗೆ ಒಂದರ ಮುಂದೆ ಒಂದು ಬಂದಾಗ ಅವೆರಡೂ ಹೋಗಿ ಅವುಗಳ ಸ್ಥಾನದಲ್ಲಿ ಅದರದೇ ಒಂದು ದೀರ್ಘಸ್ವರವು ಬರುವುದು. ಹೀಗೆ ಬರುವುದು ಆದೇಶವೆಂದು ಹಿಂದೆ ತಿಳಿದಿದ್ದೀರಿ. ಇದರ ಹಾಗೆಯೇ ಹರೀಶ್ವರ ಶಬ್ದವು–

ಹರಿ + ಈಶ್ವರ = ಹರ್ + ಈ + ಶ್ವರ = ಹರೀಶ್ವರ–ಎಂಬಲ್ಲಿ (**ಇ + ಈ**)

**ಇ** ಕಾರದ ಮುಂದೆ **ಈ** ಕಾರ ಬಂದಿದೆ. ಇವೆರಡೂ ಹೋಗಿ ಅವುಗಳ ಸ್ಥಾನದಲ್ಲಿ '**ಈ**' ಎಂಬ ದೀರ್ಘಸ್ವರ ಆದೇಶವಾಗಿ ಬರುವುದು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು:–

**(20) ಸವರ್ಣಸ್ವರಗಳು ಒಂದರ ಮುಂದೊಂದು ಬಂದಾಗ ಅವೆರಡರ ಸ್ಥಾನದಲ್ಲಿ ಒಂದೇ ದೀರ್ಘಸ್ವರವು ಆದೇಶವಾಗಿ ಬರುವುದು. ಇದಕ್ಕೆ ಸವರ್ಣದೀರ್ಘಸಂಧಿಯೆಂದು ಹೆಸರು.**

ಉದಾಹರಣೆಗೆ:–

ದೇವ + ಅಸುರ = ದೇವಾಸುರ (ಅಕಾರಕ್ಕೆ ಅಕಾರ ಪರವಾಗಿ ಆಕಾರಾದೇಶ)
(ಅ + ಅ)
ಸುರ + ಅಸುರ = ಸುರಾಸುರ (ಅಕಾರಕ್ಕೆ ಅಕಾರ ಪರವಾಗಿ ಆಕಾರಾದೇಶ)
(ಅ + ಅ)
ಮಹಾ + ಆತ್ಮಾ = ಮಹಾತ್ಮ (ಆಕಾರಕ್ಕೆ ಆಕಾರ ಪರವಾಗಿ ಒಂದು ದೀರ್ಘಸ್ವರ ಆದೇಶ)
(ಆ + ಆ)
ಕವಿ + ಇಂದ್ರ = ಕವೀಂದ್ರ (ಇಕಾರಕ್ಕೆ ಇಕಾರ ಪರವಾಗಿ ಈಕಾರಾದೇಶ)
(ಇ + ಇ)
ಗಿರಿ + ಈಶ = ಗಿರೀಶ (ಇಕಾರಕ್ಕೆ ಈಕಾರ ಪರವಾಗಿ ಈಕಾರಾದೇಶ)
(ಇ + ಈ)
ಲಕ್ಷ್ಮೀ + ಈಶ = ಲಕ್ಷ್ಮೀಶ (ಈಕಾರಕ್ಕೆ ಈಕಾರಪರವಾಗಿ ಈಕಾರಾದೇಶ)
(ಈ + ಈ)

---

[20] ಅಆ, ಇಈ, ಉಊ, ಋೠ ಈ ಸ್ವರಗಳು ಸವರ್ಣ ಸ್ವರಗಳು. ಅಅ, ಅಆ, ಆಅ, ಆಅ–ಹೀಗೆ ಬಂದರೂ ಸವರ್ಣ ಸ್ವರಗಳು. ಈಈ, ಇಇ, ಈಇ, ಇಈ–ಹೀಗೆ ಬಂದರೂ ಸವರ್ಣ ಸ್ವರಗಳು. ಇದರ ಹಾಗೆಯೇ ಉಊ, ಋೠ ಗಳ ಸವರ್ಣ ಸ್ವರಗಳ ವಿಚಾರ ಕೂಡ.

ಗುರು + ಉಪದೇಶ = ಗರೂಪದೇಶ (ಉಕಾರಕ್ಕೆ ಉಕಾರ ಪರವಾಗಿ ಊಕಾರಾದೇಶ)
(ಉ + ಉ)
ವಧೂ + ಉಪೇತ = ವಧೂಪೇತ (ಊಕಾರಕ್ಕೆ ಉಕಾರಪರವಾಗಿ ಊಕಾರಾದೇಶ)
(ಊ + ಉ)

## (೨) ಗುಣಸಂಧಿ

**(ಅ) ಸುರೇಶನು** ಬಂದನು.
**(ಆ) ದೇವೇಂದ್ರನ** ಸಭೆ.
**(ಇ) ಮಹೇಶನನ್ನು** ನೋಡು.
**(ಈ) ಸೂರ್ಯೋದಯ**ವಾಯಿತು.
**(ಉ) ವಾಲ್ಮೀಕಿ ಮಹರ್ಷಿಗಳು** ಬಂದರು

ಈ ವಾಕ್ಯಗಳಲ್ಲಿರುವ **ಸುರೇಶ, ದೇವೇಂದ್ರ, ಮಹೇಶ, ಸರ್ಯೋದಯ, ಮಹರ್ಷಿ** ಈ ಶಬ್ದಗಳನ್ನು ಬಿಡಿಸಿ ಬರೆದರೆ ಹೇಗಾಗುವುವು ನೋಡಿರಿ.

ಸುರ + ಈಶ = ಸುರೇಶ (ಅ + ಈ = ಏ)
(ಅ + ಈ)
ದೇವ + ಇಂದ್ರ = ದೇವೇಂದ್ರ (ಅ + ಇ = ಏ)
(ಅ + ಇ)
ಮಹಾ + ಈಶ = ಮಹೇಶ (ಆ + ಈ = ಏ)
(ಆ + ಈ)
ಸೂರ್ಯ + ಉದಯ = ಸೂರ್ಯೋದಯ (ಅ + ಉ = ಓ)
(ಅ + ಉ)
ಮಹಾ + ಋಷಿ = ಮಹರ್‌ಷಿ (ಆ + ಋ = ಅರ್)
(ಆ + ಋ)

ಎಲ್ಲಾ ಉದಾಹರಣೆಗಳಲ್ಲೂ ಪೂರ್ವದ ಸ್ವರವು '**ಅ**' ಅಥವಾ '**ಆ**' ಆಗಿವೆ. ಪರದಲ್ಲಿ (ಎದುರಿನಲ್ಲಿ) **ಇ, ಈ, ಉ, ಋ** ಇತ್ಯಾದಿ ಸ್ವರಗಳಿವೆ. **ಇ** ಅಥವಾ **ಈ** ಪರವಾದಲ್ಲೆಲ್ಲಾ '**ಏ**' ಕಾರ ಬಂದಿದೆ. '**ಉ**' ಪರವಾದಲ್ಲಿ '**ಓ**' ಕಾರ ಬಂದಿದೆ. '**ಋ**' ಪರವಾದಲ್ಲಿ '**ಅರ್**' ಕಾರ ಬಂದಿದೆ. ಅಂದರೆ ಪೂರ್ವದ ಮತ್ತು ಪರದ ಎರಡೂ ಸ್ವರಗಳು ಹೋಗಿ ಅವುಗಳ ಸ್ಥಾನದಲ್ಲಿ '**ಏ**' '**ಓ**' '**ಅರ್**' ಗಳು ಆದೇಶಗಳಾಗಿ ಬಂದಿವೆ ಎಂದ ಹಾಗಾಯಿತು. ಇದಕ್ಕೆ ಸಾಮಾನ್ಯ ಸೂತ್ರವನ್ನು ಹೀಗೆ ಹೇಳಬಹುದು.

**(21) ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, ಋ ಕಾರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ಗುಣಸಂಧಿ' ಎಂದು ಹೆಸರು.**

ಉದಾಹರಣೆಗೆ:–

ಸುರ + ಇಂದ್ರ = ಸುರೇಂದ್ರ (ಅಕಾರಕ್ಕೆ ಇಕಾರ ಪರವಾಗಿ ಏಕಾರಾದೇಶ)
(ಅ + ಇ)

ಧರಾ + ಇಂದ್ರ = ಧರೇಂದ್ರ (ಆಕಾರಕ್ಕೆ ಇಕಾರ ಪರವಾಗಿ ಏಕಾರಾದೇಶ)
(ಆ + ಇ)

ಮಹಾ + ಈಶ್ವರ = ಮಹೇಶ್ವರ (ಆಕಾರಕ್ಕೆ ಈಕಾರ ಪರವಾಗಿ ಏಕಾರಾದೇಶ)
(ಆ + ಈ)

ಚಂದ್ರ + ಉದಯ = ಚಂದ್ರೋದಯ (ಅಕಾರಕ್ಕೆ ಉಕಾರ ಪರವಾಗಿ ಓಕಾರಾದೇಶ)
(ಅ + ಉ)

ಏಕ + ಊನ = ಏಕೋನ (ಅಕಾರಕ್ಕೆ ಊಕಾರ ಪರವಾಗಿ ಓಕಾರಾದೇಶ)
(ಅ + ಊ)

ದೇವ + ಋಷಿ = ದೇವರ್ಷಿ (ಅಕಾರಕ್ಕೆ ಋಕಾರ ಪರವಾಗಿ 'ಅರ್' ಆದೇಶ)
(ಅ + ಋ)

ಮಹಾ + ಋಷಿ = ಮಹರ್ಷಿ (ಆಕಾರಕ್ಕೆ ಋಕಾರ ಪರವಾಗಿ 'ಅರ್' ಆದೇಶ)
(ಆ + ಋ)

## (೩) ವೃದ್ಧಿ ಸಂಧಿ

(೧) ಅವನು **ಏಕೈಕ** ವೀರನು.
(೨) ಕೃಷ್ಣದೇವರಾಯ **ಅಷ್ಟೈಶ್ವರ್ಯ**ದಿಂದ ಕೂಡಿದ್ದನು.
(೩) ಹಿಮಾಲಯದಲ್ಲಿ **ವನೌಷಧಿ**ಗಳುಂಟು.
(೪) ನಾರಣಪ್ಪ **ಮಹೌನ್ನತ್ಯ**ದಿಂದ ಕೂಡಿದ ಕವಿ.

ಈ ಮೇಲಿನ ವಾಕ್ಯಗಳಲ್ಲಿ ಬಂದಿರುವ '**ಏಕೈಕ**', '**ಅಷ್ಟೈಶ್ವರ್ಯ**', '**ವನೌಷದಿ**', '**ಮಹೌನ್ನತ್ಯ**' ಪದಗಳನ್ನು ಬಿಡಿಸಿ ಬರೆದರೆ ಅವು ಈ ಕೆಳಗಿನಂತೆ ಆಗುವುವು:–

ಏಕ + ಏಕ = ಏಕ್ + ಐಕ (ಅ + ಏ + ಐ)
(ಅ + ಏ)

ಅಷ್ಟ + ಐಶ್ವರ್ಯ = ಅಷ್ಟ್ + ಐಶ್ವರ್ಯ = ಅಷ್ಟೈಶ್ವರ್ಯ (ಅ + ಐ = ಐ)
(ಅ + ಐ)

ವನ + ಓಷಧಿ = ವನ್ + ಔಷಧಿ = ವನೌಷಧಿ (ಅ + ಓ = ಔ)
(ಅ + ಓ)
ಮಹಾ + ಔನ್ನತ್ಯ = ಮಹ್ + ಔನ್ನತ್ಯ = ಮಹೌನ್ನತ್ಯ (ಆ + ಔ = ಔ)
(ಆ + ಔ)

ಪೂರ್ವದಲ್ಲಿ ಎಲ್ಲ ಕಡೆಗೂ '**ಅ**' ಅಥವಾ '**ಆ**' ಸ್ವರಗಳಿವೆ. ಎದುರಿಗೆ **ಏ, ಐ, ಓ, ಔ** ಪರವಾಗಿವೆ. **ಏ** ಅಥವಾ **ಐ** ಪರವಾದಾಗ ಒಂದು '**ಐ**' ಕಾರವೂ, **ಓ** ಅಥವಾ **ಔ** ಪರವಾದಾಗ ಒಂದು '**ಔ**' ಕಾರವೂ ಆದೇಶಗಳಾಗಿ ಅಂದರೆ ಆ ಎರಡೂ ಸ್ವರಗಳ ಸ್ಥಾನದಲ್ಲಿ ಬಂದಿವೆ. ಹಾಗಾದರೆ ಇದರ ಸೂತ್ರವನ್ನು ಹೀಗೆ ಹೇಳಬಹುದು:–

**(22) [21]ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಯೆನ್ನುವರು.**

ಉದಾಹರಣೆಗೆ:–
ಲೋಕ + ಏಕವೀರ = ಲೋಕೈಕವೀರ (ಅಕಾರಕ್ಕೆ ಏಕಾರ ಪರವಾಗಿ ಐಕಾರಾದೇಶ)
(ಅ + ಏ)
ಜನ + ಐಕ್ಯ = ಜನೈಕ್ಯ (ಅಕಾರಾಕ್ಕೆ ಐಕಾರ ಪರವಾಗಿ ಐಕಾರಾದೇಶ)
(ಅ + ಐ)
ವಿದ್ಯಾ + ಐಶ್ವರ್ಯ = ವಿದ್ಯೈಶ್ವರ್ಯ (ಆಕಾರಕ್ಕೆ ಐಕಾರ ಪರವಾಗಿ ಐಕಾರಾದೇಶ)
(ಆ + ಐ)
ಜಲ + ಓಘ = ಜಲೌಘ (ಅಕಾರಕ್ಕೆ ಓಕಾರ ಪರವಾಗಿ ಔಕಾರಾದೇಶ)
(ಅ + ಓ)
ಘನ + ಔದಾರ್ಯ = ಘನೌದಾರ್ಯ (ಅಕಾರಕ್ಕೆ ಔಕಾರ ಪರವಾಗಿ ಔಕಾರಾದೇಶ)
(ಅ + ಔ)
ಮಹಾ + ಔದಾರ್ಯ = ಮಹೌದಾರ್ಯ (ಆಕಾರಕ್ಕೆ ಔಕಾರ ಪರವಾಗಿ ಔಕಾರಾದೇಶ)
(ಆ + ಔ)

---

[21] ಅ ಆ ಕಾರಗಳಿಗೆ ಎಂದರೆ, ಅ ಅಥವಾ ಆ ಕಾರಗಳಲ್ಲಿ ಯಾವುದಾದರೊಂದು ಸ್ವರಕ್ಕೆ ಎಂದರ್ಥ. ಏ ಐ ಕಾರಗಳು ಪರವಾದರೆ ಎಂದರೆ, ಏ ಅಥವಾ ಐ ಕಾರಗಳಲ್ಲಿ ಯಾವುದಾದರೂ ಒಂದು ಪರವಾದರೆ ಎಂದು ಅರ್ಥ.

## (೪) ಯಣ್ ಸಂಧಿ

ಸಂಸ್ಕೃತ ವ್ಯಾಕರಣದಲ್ಲಿ ಕೆಲವು ಸಂಜ್ಞೆಗಳನ್ನು ಮಾಡಿಕೊಂಡಿದ್ದಾರೆ. ಅದರ ಪ್ರಕಾರ '**ಯಣ್**' ಎಂದರೆ "**ಯ ವ ರ ಲ**" ಈ ನಾಲ್ಕು ವ್ಯಂಜನಗಳು. '**ಯಣ್**' ಸಂಧಿಯೆಂದರೆ ಈ ನಾಲ್ಕು ಅಕ್ಷರಗಳು ಆದೇಶವಾಗಿ ಬರುವುದೇ ಆಗಿದೆ. ಈ ಅಕ್ಷರಗಳು ಯಾವ ಅಕ್ಷರಕ್ಕೆ ಆದೇಶವಾಗಿ ಬರುತ್ತವೆಂಬುದನ್ನು ನೋಡಿರಿ:–

(೧) ಅವನು **ಅತ್ಯಂತ** ಪರಾಕ್ರಮಿ.
(೨) ಈ **ಮನ್ವಂತರ**ದಲ್ಲಿ ನಡೆಯಿತು.
(೩) ನಮ್ಮದು **ಪಿತ್ರಾರ್ಜಿತ**ವಾದ ಆಸ್ತಿ.

ಈ ಮೂರು ವಾಕ್ಯಗಳಲ್ಲಿ ಬಂದಿರುವ '**ಅತ್ಯಂತ**' '**ಮನ್ವಂತರ**' '**ಪಿತ್ರಾರ್ಜಿತ**' ಈ ಶಬ್ದಗಳನ್ನು ಬಿಡಿಸಿ ಬರೆದರೆ:–

(೧) ಅತಿ + ಅಂತ = ಅತ್ + ಯ್ + ಅಂತ = ಅತ್ಯಂತ (ಇ + ಅ = ಯ್ಅ)
ಇಲ್ಲಿ ಇಕಾರದ ಸ್ಥಳದಲ್ಲಿ 'ಯ್' ಕಾರಾದೇಶವಾಗಿದೆ.
(೨) ಮನು + ಅಂತರ = ಮನ್ವ್ + ಅಂತರ = ಮನ್ವಂತರ (ಉ + ಅ =ವ್ಅ)
ಇಲ್ಲಿ ಉಕಾರದ ಸ್ಥಾನದಲ್ಲಿ 'ವ್' ಕಾರಾದೇಶವಾಗಿದೆ.
(೩) ಪಿತೃ + ಆರ್ಜಿತ = ಪಿತ್ರ್ + ಆರ್ಜಿತ = ಪಿತ್ರಾರ್ಜಿತ (ಋ + ಆ = ರ್ಆ)
ಇಲ್ಲಿ ಋಕಾರದ ಸ್ಥಾನದಲ್ಲಿ 'ರ್' ಕಾರಾದೇಶವಾಗಿದೆ.

ಹಾಗಾದರೆ ಪೂರ್ವದಲ್ಲಿರುವ **ಇ, ಉ, ಋ** ಕಾರಗಳಿಗೆ, ಕ್ರಮವಾಗಿ **ಯ್, ವ್, ರ್** ಗಳು ಆದೇಶವಾಗಿ ಬಂದಿವೆಯೆಂದ ಹಾಗಾಯಿತು. ಎದುರಿಗೆ ಎಂಥ ಸ್ವರಗಳು ಇರಬೇಕೆಂಬುದಕ್ಕೂ ಒಂದು ನೇಮವಿದೆ. **ಅತಿ + ಇಚ್ಛಾ** ಹೀಗೆ ಇಕಾರದ ಮುಂದೆ ಇಕಾರವೇ ಬಂದಿದ್ದರೆ **ಅತೀಚ್ಛಾ** ಎಂದು '**ಸವರ್ಣದೀರ್ಘ**' ಸಂಧಿಯಾಗುತ್ತಿತ್ತು. ಆದ್ದರಿಂದ ಸವರ್ಣಸ್ವರ ಎದುರಿಗೆ ಬರಬಾರದೆಂದ ಹಾಗಾಯಿತು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(23) [22]ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ ಈ ಕಾರಗಳಿಗೆ 'ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' (ರೇಫ)ವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ ಯಣ್ ಸಂಧಿಯೆಂದು ಹೆಸರು.**

---

[22] 'ಯಣ್' ಎಂದರೆ 'ಯ ವ ರ ಲ' ಈ ನಾಲ್ಕು ಅಕ್ಷರಗಳೆಂದು ಹಿಂದೆ ತಿಳಿಸಿದೆಯಷ್ಟೆ. ಲ ಕಾರವು ಆದೇಶವಾಗಿ ಬರುವ ಉದಾಹರಣೆಗಳು ಕನ್ನಡ ಭಾಷೆಯಲ್ಲಿ ಇಲ್ಲವಾದ್ದರಿಂದ ಸೂತ್ರದಲ್ಲಿ ಅದನ್ನು ಕೈಬಿಟ್ಟಿದೆ.

ಉದಾಹರಣೆಗೆ:–

ಅತಿ + ಅವಸರ = ಅತ್ಯವಸರ (ಇಕಾರಕ್ಕೆ ಯ್ ಕಾರಾದೇಶ)
(ಇ + ಅ)
ಜಾತಿ + ಅತೀತ = ಜಾತ್ಯಾತೀತ (ಇಕಾರಕ್ಕೆ ಯ್ ಕಾರಾದೇಶ)
(ಇ + ಅ)
ಕೋಟಿ + ಅಧೀಷ = ಕೋಟ್ಯಧೀಶ (ಇಕಾರಕ್ಕೆ ಯ್ ಕಾರಾದೇಶ)
(ಇ + ಅ)
ಗತಿ + ಅಂತರ = ಗತ್ಯಂತರ ( " )
(ಇ + ಅ)
ಪ್ರತಿ + ಉತ್ತರ = ಪ್ರತ್ಯುತ್ತರ ( " )
(ಇ + ಉ)
ಪತಿ + ಅರ್ಥ = ಪತ್ಯರ್ಥ ( " )
(ಇ + ಅ)
ಅತಿ + ಆಶೆ = ಅತ್ಯಾಶೆ ( " )
(ಇ + ಆ)
ಅಧಿ + ಆತ್ಮ = ಅಧ್ಯಾತ್ಮ ( " )
(ಇ + ಆ)
ಗುರು + ಆಜ್ಞೆ = ಗುರ್ವಾಜ್ಞೆ (ಉಕಾರಕ್ಕೆ ವ್ ಕಾರಾದೇಶ)
(ಉ + ಆ)
ಮನು + ಆದಿ = ಮನ್ವಾದಿ (ಉಕಾರಕ್ಕೆ ವ್ ಕಾರಾದೇಶ)
(ಉ + ಆ)
ವಧೂ + ಆಭರಣ = ವಧ್ವಾಭರಣ (ಊಕಾರಕ್ಕೆ ವ್ ಕಾರಾದೇಶ)
(ಊ + ಆ)
ವಧೂ + ಅನ್ವೇಷಣ = ವಧ್ವನ್ವೇಷಣ (ಊಕಾರಕ್ಕೆ ವ್ ಕಾರಾದೇಶ)
(ಊ + ಅ)
ಪಿತೃ + ಅರ್ಥ = ಪಿತ್ರರ್ಥ (ಋಕಾರಕ್ಕೆ ರ್ ಕಾರಾದೇಶ)
(ಋ + ಅ)
ಮಾತೃ + ಅಂಶ = ಮಾತ್ರಂಶ ( " )
(ಋ + ಅ)
ಕರ್ತೃ + ಅರ್ಥ = ಕರ್ತ್ರರ್ಥ ( " )
(ಋ + ಅ)

# 2. ಸಂಸ್ಕೃತ ವ್ಯಂಜನ ಸಂಧಿಗಳು

## (೧) ಜಶ್ತ್ವಸಂಧಿ

'**ಜಶ್**' ಎಂದರೆ ಸಂಸ್ಕೃತ ವ್ಯಾಕರಣದಲ್ಲಿ **ಜಬಗಡದ** ಈ ಐದು **ವ್ಯಂಜನಗಳನ್ನು** ತಿಳಿಸುವ ಒಂದು ಸಂಜ್ಞೆ. '**ಜಶ್ತ್ವ**' ಎಂದರೆ ಈ ಐದು ವರ್ಣಗಳಾದ **ಜಬಗಡದ** ವ್ಯಂಜನಗಳು ಆದೇಶವಾಗಿ ಬರುವುದು ಎಂದು ಅರ್ಥ. ಯಾವ ಅಕ್ಷರಕ್ಕೆ ಇವು ಆದೇಶವಾಗಿ ಬರುತ್ತವೆ? ಎಂಬ ಬಗೆಗೆ ತಿಳಿಯೋಣ.

(೧) **ದಿಗಂತ**ದಲ್ಲಿ ಪಸರಿಸಿತು.
(೨) **ಅಜಂತ** ಎಂದರೆ ಸ್ವರಾಂತ ಎಂದು ಸಂಜ್ಞೆ.
(೩) **ಷಣ್ಮುಖನಿಗೆ ಷಡಾನನ** ಎಂಬ ಹೆಸರೂ ಉಂಟು.
(೪) ಆ ಹುಡುಗನ ಹೆಸರು **ಸದಾನಂದ** ಎಂದು.
(೫) **ಅಬ್ಧಿ** ಎಂದರೆ ಸಾಗರಕ್ಕೆ ಹೆಸರು.

**ಈ ವಾಕ್ಯಗಳಲ್ಲಿ ಬಂದಿರುವ 'ದಿಗಂತ', 'ಅಜಂತ', 'ಷಡಾನನ', 'ಸದಾನಂದ', 'ಅಬ್ಧಿ'** ಈ ಶಬ್ದಗಳನ್ನು ಬಿಡಿಸಿ ಬರೆದರೆ__

ದಿಕ್ + ಅಂತ = ದಿಗ್ + ಅಂತ = ದಿಗಂತ (ಪೂರ್ವದ ಕಕಾರಕ್ಕೆ ಗಕಾರಾದೇಶ)
(ಕ್ + ಅ = ಗ್ಅ)
ಅಚ್ + ಅಂತ = ಅಜ್ + ಅಂತ = ಅಜಂತ (ಚಕಾರಕ್ಕೆ ಜಕಾರಾದೇಶ)
(ಚ್ + ಅ = ಜ್ಅ)
ಷಟ್ + ಆನನ = ಷಡ್ + ಆನನ = ಷಡಾನನ (ಟಕಾರಕ್ಕೆ ಡಕಾರಾದೇಶ)
(ಟ್ + ಅ = ಡ್ಅ)
ಸತ್ + ಆನಂದ = ಸದ್ + ಆನಂದ = ಸದಾನಂದ (ತಕಾರಕ್ಕೆ ದಕಾರಾದೇಶ)
(ತ್ + ಆ = ದ್ಆ)
ಅಪ್ + ಧಿ = ಅಬ್ + ಧಿ = ಅಬ್ಧಿ (ಪಕಾರಕ್ಕೆ ಬಕಾರಾದೇಶ)
(ಪ್ + ಧಿ = ಬ್ಧಿ)

ಮೇಲಿನ ಈ ಐದೂ ಉದಾಹರಣೆಗಳನ್ನು ಲಕ್ಷ್ಯವಿಟ್ಟು ನೋಡಿದಾಗ, ಪೂರ್ವಶಬ್ದದ ಅಂತ್ಯದಲ್ಲಿರುವ **ಕ್, ಚ್, ಟ್, ತ್, ಪ್** ಗಳಿಗೆ ಕ್ರಮವಾಗಿ **ಗ್, ಜ್, ಡ್, ದ್, ಬ್** ಗಳು ಆದೇಶಗಳಾಗಿ ಬಂದಿವೆ. ಈ ಪೂರ್ವ ಶಬ್ದದಲ್ಲಿರುವ ವರ್ಗಪ್ರಥಮವರ್ಣಗಳಿಗೆ ಅದೇ ವರ್ಗದ ಮೂರನೆಯ ವರ್ಣಗಳು ಆದೇಶಗಳಾಗಿ ಬರುವ ಸಂಧಿಯು ಸಂಸ್ಕೃತ ಶಬ್ದಗಳೇ ಎರಡೂ ಆಗಿದ್ದಾಗ ಮಾತ್ರ ಬರುವುದು. ಕನ್ನಡದಲ್ಲೂ '**ಕತಪ**' ಗಳಿಗೆ '**ಗದಬ**' ಗಳು ಆದೇಶವಾಗಿ ಬರುವುದುಂಟು. ಆದರೆ '**ಕತಪ**' ಗಳು ಉತ್ತರಪದದ ಆದಿಯಲ್ಲಿರಬೇಕು. ಇದು ಕೇವಲ ಕನ್ನಡದ ಆದೇಶಸಂಧಿಯೆಂದು ತಿಳಿಯಬೇಕು. ಹೀಗೆ ಪೂರ್ವ ಶಬ್ದದ ಕೊನೆಯ

**ಕಚಟತಪ** ಗಳಿಗೆ **ಗಜಡದಬ** ಗಳು ಆದೇಶವಾಗಿ ಬರುವುದೇ **ಜಶ್ತ್ವಸಂಧಿಯೆನಿಸುವುದು.** ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(24) ಪೂರ್ವಶಬ್ದದ ಕೊನೆಯಲ್ಲಿರುವ ಕಚಟತಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ (ಎದುರಿಗೆ ಬಂದರೂ) ಪ್ರಾಯಶಃ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಜಶ್ತ್ವಸಂಧಿಯೆನ್ನುವರು. ಪ್ರಾಯಶಃ ಎಂದು ಹೇಳಿರುವುದರಿಂದ ಕಖ, ಚಛ, ಟಠ, ತಥ, ಪಫ, ಸ, ಷ, ಙ, ಞ, ಣ, ನ, ಮ ಅಕ್ಷರಗಳು ಪರವಾದರೆ (ಎದುರಿಗೆ ಬಂದರೆ) ಮೂರನೆಯ ಅಕ್ಷರಗಳು ಆದೇಶವಾಗಿ ಕೆಲವು ಕಡೆ ಬರುವುದಿಲ್ಲ. ಅಂದರೆ ಜಶ್ತ್ವಸಂಧಿಯಾಗುವುದಿಲ್ಲ.**

ಉದಾಹರಣೆಗೆ:–

| | | | | | | | | |
|---|---|---|---|---|---|---|---|---|
| ವಾಕ್ | + | ದೇವಿ | = | ವಾಗ್‌ದೇವಿ | = | ವಾಗ್ದೇವಿ | (ಕಕಾರಕ್ಕೆ ಗಕಾರಾದೇಶ) |
| ವಾಕ್ | + | ದಾನ | = | ವಾಗ್‌ದಾನ | = | ವಾಗ್ದಾನ | ( ” ) |
| ವಾಕ್ | + | ಅಧಿಪ | = | ವಾಗ್‌ಅಧಿಪ | = | ವಾಗಧಿಪ | ( ” ) |
| ದಿಕ್ | + | ದೇಶ | = | ದಿಗ್‌ದೇಶ | = | ದಿಗ್ದೇಶ | ( ” ) |
| ದಿಕ್ | + | ದಿಗಂತ | = | ದಿಗ್‌ದಿಗಂತ | = | ದಿಗ್ದಿಗಂತ | ( ” ) |
| ದಿಕ್ | + | ದೇವತೆ | = | ದಿಗ್‌ದೇವತೆ | = | ದಿಗ್ದೇವತೆ | ( ” ) |
| [23]ಅಚ್ | + | ಅಂತ | = | ಅಜ್‌ಅಂತ | = | ಅಜಂತ | (ಚಕಾರಕ್ಕೆ ಜಕಾರಾದೇಶ) |
| ಅಚ್ | + | ಆದಿ | = | ಅಜ್‌ಆದಿ | = | ಅಜಾದಿ | ( ” ) |
| ಷಟ್ | + | ಆನನ | = | ಷಡ್‌ಆನನ | = | ಷಡಾನನ | (ಟಕಾರಕ್ಕೆ ಡಕಾರಾದೇಶ) |
| ಷಟ್ | + | ಅಂಗ | = | ಷಡ್‌ಅಂಗ | = | ಷಡಂಗ | ( ” ) |
| ಷಟ್ | + | ಅಂಗನೆ | = | ಷಡ್‌ಅಂಗನೆ | = | ಷಡಂಗನೆ | ( ” ) |
| ವಿರಾಟ್ | + | ರೂಪ | = | ವಿರಾಡ್‌ರೂಪ | = | ವಿರಾಡ್ರೂಪ | ( ” ) |
| ಸತ್ | + | ಉದ್ದೇಶ | = | ಸದ್‌ಉದ್ದೇಶ | = | ಸದುದ್ದೇಶ | (ತಕಾರಕ್ಕೆ ದಕಾರಾದೇಶ) |
| ಸತ್ | + | ಉತ್ತರ | = | ಸದ್‌ಉತ್ತರ | = | ಸದುತ್ತರ | ( ” ) |
| ಚಿತ್ | + | ಆನಂದ | = | ಚಿದ್‌ಆನಂದ | = | ಚಿದಾನಂದ | ( ” ) |
| ಸತ್ | + | ಭಾವ | = | ಸದ್‌ಭಾವ | = | ಸದ್ಭಾವ | ( ” ) |
| ಸತ್ | + | ಉದ್ಯೋಗ | = | ಸದ್‌ಉದ್ಯೋಗ | = | ಸದುದ್ಯೋಗ | ( ” ) |
| [24]ಅಪ್ | + | ಜ | = | ಅಬ್‌ಜ | = | ಅಬ್ಜ | (ಪಕಾರಕ್ಕೆ ಬಕಾರಾದೇಶ) |
| [25]ಅಪ್ | + | ದ | = | ಅಬ್‌ದ | = | ಅಬ್ದ | (ಪಕಾರಕ್ಕೆ ಬಕಾರಾದೇಶ) |

[23] ಅಚ್ ಎಂದರೆ ಸಂಸ್ಕೃತ ವ್ಯಾಕರಣದಲ್ಲಿ ಸ್ವರ ಎಂದು ಅರ್ಥ. ‘ಅಜಂತ’ ಎಂದರೆ ಸ್ವರಾಂತವೆಂದು ತಿಳಿಯಬೇಕು.

[24] ಅಬ್ಜ=ಕಮಲ

[25] ಅಬ್ದ=ಮೋಡ

| | | | | | | | | |
|---|---|---|---|---|---|---|---|---|
| [26]ಅಪ್ | + | ಅಂಶ | = | ಅಬ್‌ಅಂಶ | = | ಅಬಂಶ | | (ಪಕಾರಕ್ಕೆ ಬಕಾರಾದೇಶ) |
| [27]ಅಪ್ | + | ಧಿ | = | ಅಬ್‌ಧಿ | = | ಅಬ್ಧಿ | | (ಪಕಾರಕ್ಕೆ ಬಕಾರಾದೇಶ) |

## ಜಶ್ತ್ವಸಂಧಿಯಾಗದಿರುವುದಕ್ಕೆ ಉದಾಹರಣೆಗಳು

ದಿಕ್+ಚಕ್ರ=ದಿಕ್ಚಕ್ರ
ದಿಕ್+ತಟ=ದಿಕ್ತಟ
ಸತ್+ಕವಿ=ಸತ್ಕವಿ
ದಿಕ್+ಸೂಚಿ=ದಿಕ್ಸೂಚಿ
ವಾಕ್+ಪತಿ=ವಾಕ್ಪತಿ

} ಇಲ್ಲಿ ಎಲ್ಲಿಯೂ ಮೂರನೆಯ ವರ್ಣದ ಆದೇಶವಿಲ್ಲ

## (೨) ಶ್ಚುತ್ವ ಸಂಧಿ

**'ಶ್ಚು'** ಎಂದರೆ **ಶಕಾರ ಚವರ್ಗಾಕ್ಷರಗಳು. (ಶ್=ಶಕಾರ, ಚು=ಚ ಛ ಜ ಝ ಞ)** ಈ ಆರು ಅಕ್ಷರಗಳೇ **'ಶ್ಚು'** ಎಂಬ ಸಂಜ್ಞೆಯಿಂದ ಸಂಸ್ಕೃತ ವ್ಯಾಕರಣದಲ್ಲಿ ಕರೆಯಿಸಿಕೊಳ್ಳುತ್ತವೆ. ಇವುಗಳು ಆದೇಶವಾಗಿ ಬರುವುದೇ **ಶ್ಚುತ್ವಸಂಧಿ** ಎನಿಸುವುದು. ಹಾಗಾದರೆ ಇವು ಯಾವ ಅಕ್ಷರಗಳಿಗೆ ಯಾವಾಗ ಅದೇಶವಾಗಿ ಬರುತ್ತವೆಂಬುದನ್ನು ಯೋಚಿಸೋಣ.

ಮನಸ್ + ಶುದ್ಧಿ = ಮನಶ್ + ಶುದ್ಧಿ = ಮನಶ್ಶುದ್ಧಿ
(ಸಕಾರಕ್ಕೆ ಶಕಾರ ಪರವಾಗಿ ಸಕಾರಕ್ಕೆ ಶಕಾರಾದೇಶ)
ಯಶಸ್ + ಚಂದ್ರಿಕೆ = ಯಶಶ್ + ಚಂದ್ರಿಕೆ = ಯಶಶ್ಚಂದ್ರಿಕೆ
(ಸಕಾರಕ್ಕೆ ಚಕಾರ ಪರವಾಗಿ ಸಕಾರಕ್ಕೆ ಶಕಾರಾದೇಶ)
ಲಸತ್ + ಚಿತ್ರ = ಲಸಚ್ + ಚಿತ್ರ = ಲಸಚ್ಚಿತ್ರ
(ತಕಾರಕ್ಕೆ ಚಕಾರ ಪರವಾಗಿ ತಕಾರಕ್ಕೆ ಚಕಾರಾದೇಶ)
ಸತ್ + ಚಿತ್ರ = ಸಚ್ + ಚಿತ್ರ = ಸಚ್ಚಿತ್ರ
(ತಕಾರಕ್ಕೆ ಚಕಾರ ಪರವಾಗಿ ತಕಾರಕ್ಕೆ ಚಕಾರಾದೇಶ)
ಬೃಹತ್ + ಛತ್ರ = ಬೃಹಚ್ + ಛತ್ರ = ಬೃಹಚ್ಛತ್ರ
(ತಕಾರಕ್ಕೆ ಛಕಾರ ಪರವಾಗಿ, ತಕಾರಕ್ಕೆ ಚಕಾರಾದೇಶ)

ಮೇಲಿನ ಎಲ್ಲ ಉದಾಹರಣೆಗಳನ್ನು ಗಮನವಿಟ್ಟು ನೋಡಿರಿ. ಶಬ್ದದ ಅಂತ್ಯದಲ್ಲಿ ಸಕಾರ ಇಲ್ಲವೆ ತವರ್ಗದಲ್ಲಿನ ಐದು ಅಕ್ಷರಗಳಲ್ಲಿ ಯುವುದಾದರೊಂದು ಅಕ್ಷರವಿರುತ್ತದೆ. ಪರದಲ್ಲಿ (ಎದುರಿನಲ್ಲಿ) ಶಕಾರ ಇಲ್ಲವೆ ಚವರ್ಗದಲ್ಲಿನ ಯಾವುದಾದರೊಂದು ಅಕ್ಷರವಿದೆ. ಹೀಗೆ ಇವು

---

[26] ಅಬಂಶ=ನೀರಿನ ಅಂಶ

[27] ಅಬ್ಧಿ=ಸಮುದ್ರ (ಅಪ್ ಅಂದರೆ ನೀರು)

ಒಂದಕ್ಕೊಂದು ಸಂಧಿಸಿದಾಗ 'ಸ' ಕಾರವಿದ್ದಲ್ಲೆಲ್ಲ **ಶಕಾರವು, ತವರ್ಗದ** ಅಕ್ಷರಗಳಿದ್ದಲ್ಲೆಲ್ಲ **ಚವರ್ಗದ** ಅಕ್ಷರಗಳು ಆದೇಶಗಳಾಗಿ ಬಂದಿವೆ. ಅಂದರೆ–

**ಸ ತ ಥ ದ ಧ ನ** ಗಳಿಗೆ––

**ಶ ಚ ಛ ಜ ಝ ಞ** ಅಕ್ಷರಗಳು ಆದೇಶವಾಗಿ ಬರುತ್ತವೆ ಎಂದ ಹಾಗಾಯಿತು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು:–

**(25) ಸಕಾರತವರ್ಗಾಕ್ಷರಗಳಿಗೆ ಶಕಾರ ಚವರ್ಗಾಕ್ಷರಗಳು ಪರವಾದಾಗ (ಎದುರಿಗೆ ಬಂದಾಗ) ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ.**

ಪಯಸ್ + ಶಯನ = ಪಯಶ್ + ಶಯನ = ಪಯಶ್ಶಯನ
(ಸಕಾರಕ್ಕೆ ಶಕಾರ ಪರವಾಗಿ ಸಕಾರಕ್ಕೆ ಶಕಾರಾದೇಶ)
ಮನಸ್ + ಚಂಚಲ = ಮನಶ್ + ಚಂಚಲ = ಮನಶ್ಚಂಚಲ
(ಸಕಾರಕ್ಕೆ ಚಕಾರ ಪರವಾಗಿ ಸಕಾರಕ್ಕೆ ಶಕಾರಾದೇಶ)
ಮನಸ್ + ಚಾಪಲ್ಯ = ಮನಶ್ + ಚಾಪಲ್ಯ = ಮನಶ್ಚಾಪಲ್ಯ
(ಸಕಾರಕ್ಕೆ ಚಕಾರ ಪರವಾಗಿ ಸಕಾರಕ್ಕೆ ಶಕಾರಾದೇಶ)
ಶರತ್ + ಚಂದ್ರ = ಶರಚ್ + ಚಂದ್ರ = ಶರಚ್ಚಂದ್ರ
(ತಕಾರಕ್ಕೆ ಚಕಾರ ಪರವಾಗಿ ತಕಾರಕ್ಕೆ ಚಕಾರಾದೇಶ)
ಜಗತ್ + ಜ್ಯೋತಿ = ಜಗಚ್ + ಜ್ಯೋತಿ = ಜಗಜ್ಜ್ಯೋತಿ
(ತಕಾರಕ್ಕೆ ಜಕಾರ ಪರವಾಗಿ ತಕಾರಕ್ಕೆ ಚಕಾರಾದೇಶ, ಅನಂತರ ಜಕಾರಾದೇಶ)
ಯಶಸ್ + ಶರೀರಿ = ಯಶಶ್ + ಶರೀರಿ = ಯಶಶ್ಶರೀರಿ

ಇದರ ಹಾಗೆ–**ಚಲಚ್ಚಿತ್ರ, ಚಲಚ್ಚಾಮರ, ಜ್ವಲಜ್ಜ್ಯೋತಿ, ಬೃಹಜ್ಜ್ಯೋತಿ, ಮನಶ್ಶಾಂತಿ, ಮನಶ್ಚಪಲ** ಇತ್ಯಾದಿಗಳು.

## (೩) ಅನುನಾಸಿಕ ಸಂಧಿ

**ಙ, ಞ, ಣ, ನ, ಮ**–ಈ ಐದು ಅಕ್ಷರಗಳು ಅನುನಾಸಿಕಾಕ್ಷರಗಳೆಂದು ಹಿಂದಿನ ಸಂಜ್ಞಾಪ್ರಕರಣದಲ್ಲಿ ತಿಳಿಸಿದೆ. ಈ ಅನುನಾಸಿಕಾಕ್ಷರಗಳು ಆದೇಶವಾಗಿ ಬರುವ ಸಂಧಿಯೇ ಅನುನಾಸಿಕ ಸಂಧಿಯೆನಿಸುವುದು. ಹಾಗಾದರೆ ಇವು ಯಾವ ಅಕ್ಷರಕ್ಕೆ ಯಾವಾಗ ಆದೇಶವಾಗಿ ಬರುತ್ತವೆ? ಯಾವ ಅಕ್ಷರ ಪರವಾಗಿರಬೇಕು? ಎಂಬ ಬಗೆಗೆ ತಿಳಿಯೋಣ.

(೧) ವಾಕ್ + ಮಯ = ವಾಙ್ + ಮಯ = ವಾಙ್ಮಯ
(ಇಲ್ಲಿ ಕಕಾರಕ್ಕೆ ಮಕಾರ ಪರವಾಗಿ ಕಕಾರಕ್ಕೆ ಙಕಾರಾದೇಶವಾಗಿದೆ)
(೨) ಷಟ್ + ಮುಖ = ಷಣ್ + ಮುಖ = ಷಣ್ಮುಖ
(ಇಲ್ಲಿ ಟಕಾರಕ್ಕೆ ಮಕಾರ ಪರವಾಗಿ ಟಕಾರಕ್ಕೆ ಣಕಾರಾದೇಶವಾಗಿದೆ)

(ಖ) ಸತ್ + ಮಾನ = ಸನ್ + ಮಾನ = ಸನ್ಮಾನ
(ಇಲ್ಲಿ ತಕಾರಕ್ಕೆ ಮಕಾರ ಪರವಾಗಿ ತಕಾರಕ್ಕೆ ನಕಾರಾದೇಶವಾಗಿದೆ)
(ಳ) ಅಪ್ + ಮಯ = ಅಮ್ + ಮಯ = ಅಮ್ಮಯ[28]
(ಇಲ್ಲಿ ಪಕಾರಕ್ಕೆ ಮಕಾರ ಪರವಾಗಿ ಪಕಾರಕ್ಕೆ ಮಕಾರಾದೇಶವಾಗಿದೆ)

ಮೇಲಿನ ಈ ಉದಾಹರಣೆಗಳನ್ನು ಅವಲೋಕಿಸಿದಾಗ ಪೂರ್ವಶಬ್ದದ ಕೊನೆಯಲ್ಲೆಲ್ಲ ವರ್ಗದ ಮೊದಲನೆಯ ಅಕ್ಷರಗಳಾದ **ಕ್, ಟ್, ತ್, ಪ್** ಇತ್ಯಾದಿ ಅಕ್ಷರಗಳಿವೆ. ಎದುರಿಗೆ ಅನುನಾಸಿಕಾಕ್ಷರ ಬಂದಿದೆ. ಆದ ಕಾರಣದಿಂದ ಈ ವರ್ಗದ ಮೊದಲನೆಯ ಅಕ್ಷರಗಳಾದ **ಕ ಟ ತ ಪ** ಇತ್ಯಾದಿ ವ್ಯಂಜನಗಳಿಗೆ ಅದೇ ವರ್ಗದ ಅನುನಾಸಿಕಾಕ್ಷರ (ಐದನೆಯ ವರ್ಣ) ಆದೇಶವಾಗಿ ಬಂದಿದೆಯೆಂದು ತಿಳಿಯಬೇಕು. ಅಂದರೆ ವರ್ಗದ ಮೊದಲನೆಯ ವ್ಯಂಜನಕ್ಕೆ ಅದರದೇ ಆದ ಅನುನಾಸಿಕಾಕ್ಷರ ಬರುವಿಕೆಯೇ ಅನುನಾಸಿಕ ಸಂಧಿಯೆನಿಸುವುದು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು:–

**(26) ವರ್ಗ ಪ್ರಥಮ ವರ್ಣಗಳಿಗೆ ಯಾವ ಅನುನಾಸಿಕಾಕ್ಷರ ಪರವಾದರೂ, ಅವುಗಳಿಗೆ ಅಂದರೆ ಕ ಚ ಟ ತ ಪ ವ್ಯಂಜನಗಳಿಗೆ ಕ್ರಮವಾಗಿ ಙ ಞ ಣ ನ ಮ ವ್ಯಂಜನಗಳು ಆದೇಶಗಳಾಗಿ ಬರುತ್ತವೆ.**[29]

ಉದಾಹರಣೆಗೆ:– ದಿಕ್ + ನಾಗ = ದಿಙ್ + ನಾಗ = ದಿಙ್ನಾಗ[30]
(ಕಕಾರಕ್ಕೆ ನಕಾರ ಪರವಾಗಿ ಙಕಾರಾದೇಶ)
ಷಟ್ + ಮಾಸ = ಷಣ್ + ಮಾಸ = ಷಣ್ಮಾಸ
(ಟಕಾರಕ್ಕೆ ಮಕಾರ ಪರವಾಗಿ ಣಕಾರಾದೇಶ)
ವಾಕ್ + ಮಾಧುರ್ಯ = ವಾಙ್ + ಮಾಧುರ್ಯ = ವಾಙ್ಮಾಧುರ್ಯ[31]
(ಕಕಾರಕ್ಕೆ ಮಕಾರ ಪರವಾಗಿ ಙಕಾರಾದೇಶ)
ಚಿತ್ + ಮಯ = ಚಿನ್ + ಮಯ = ಚಿನ್ಮಯ
(ತಕಾರಕ್ಕೆ ಮಕಾರ ಪರವಾಗಿ ನಕಾರಾದೇಶ)
ಚಿತ್ + ಮೂಲ = ಚಿನ್ + ಮೂಲ = ಚಿನ್ಮೂಲ
(ತಕಾರಕ್ಕೆ ಮಕಾರಪರವಾಗಿ ನಕಾರಾದೇಶ)
ಸತ್ + ಮಣಿ = ಸನ್ + ಮಣಿ = ಸನ್ಮಣಿ
(ತಕಾರಕ್ಕೆ ಮಕಾರ ಪರವಾಗಿ ನಕಾರಾದೇಶ)

---

[28] ಅಪ್ಮಯ=ನೀರಿನ ಮಯ, ಅಂದರೆ ಜಲಮಯ ಎಂದು ಅರ್ಥ.

[29] ಚಕಾರಕ್ಕೆ ಞ ಕಾರ ಆದೇಶವಾಗಿ ಬರುವ ಉದಾಹರಣೆಗಳು ಪ್ರಸಿದ್ಧವಲ್ಲವಾದ್ದರಿಂದ ಆ ಉದಾಹರಣೆ ಕೊಟ್ಟಿಲ್ಲ.

[30] ದಿಙ್ನಾಗ=ದಿಕ್ಕುಗಳಲ್ಲಿರುವ ಆನೆ (ಅಷ್ಟದಿಗ್ಗಜಗಳು)

[31] ವಾಙ್ಮಾಧುರ್ಯ=ಮಾತಿನ ಮಾಧುರ್ಯ.

ಇದರಂತೆ, **ವಾಙ್ಮೂಲ**[32]**, ವಾಙ್ಮಾನಸ, ಉನ್ಮಾದ, ತನ್ಮಯ** ಇತ್ಯಾದಿ

## VI – ಸಾರಾಂಶ

**ಇದುವರೆಗೆ ಸಂಸ್ಕೃತ ಸ್ವರಸಂಧಿ ವ್ಯಂಜನಸಂಧಿಗಳ ಬಗೆಗೆ ಹಲವಾರು ವಿಷಯಗಳನ್ನು ತಿಳಿದಿರುವಿರಿ. ಅದರ ಸಾರಾಂಶವನ್ನು ಈ ಕೆಳಗಿನ ಗೆರೆಗಳಿಂದ ಸೂಚಿಸಿರುವ ರೀತಿಯನ್ನು ನೋಡಿ ನೆನಪಿನಲ್ಲಿಡಿರಿ.**

### ಸಂಸ್ಕೃತ ಸಂಧಿಗಳು

**ಸ್ವರಸಂಧಿಗಳು**

**(i) ಸವರ್ಣದೀರ್ಘಸಂಧಿ**
**(ದೀರ್ಘಸ್ವರಾದೇಶ)**

**(ii) ಗುಣಸಂಧಿ**
**(ಏ, ಓ, ಅರ್ ಆದೇಶ)**

**(iii) ವೃದ್ಧಿಸಂಧಿ**
**(ಐ, ಔ ಆದೇಶ)**

**(iv) ಯಣ್‌ಸಂಧಿ**
**(ಯ, ವ, ರ ಆದೇಶ)**

**ವ್ಯಂಜನಸಂಧಿಗಳು**

**(i) ಜಶ್ತ್ವಸಂಧಿ**
**(ಜಬಗಡದ ಆದೇಶ)**

**(ii) ಶ್ಚುತ್ವಸಂಧಿ**
**(ಶಕಾರ ಚವರ್ಗಾದೇಶ)**

**(iii) ಅನುನಾಸಿಕಸಂಧಿ**
**(ಙ,ಞ,ಣ,ನ,ಮ ಗಳ ಆದೇಶ)**

* * * * *

[32] ವಾಙ್ಮೂಲ=ಮಾತಿನ ಮೂಲ; ವಾಙ್ಮಾನಸ=ಮಾತು, ಮನಸ್ಸು; ಉನ್ಮಾದ=ವಿಶೇಷ ಮದದಿಂದ ಕೂಡಿದ; ತನ್ಮಯ=ಬೆರೆಯುವಿಕೆ.

## ಅಭ್ಯಾಸ ಪ್ರಶ್ನೆಗಳು

(೧) ರಾಮಾಯಣ, ದೇವಾಸುರ, ಅಮರಾರಿ, ಪರಬಲಾಂತಕ, ಭಕ್ತ್ಯಾದಿ, ವಧೂಪೇತ, ಹರೀಶ್ವರ, ಯತೀಶ್ವರ, ಮುನೀಶ್ವರ–ಈ ಸವರ್ಣದೀರ್ಘಸಂಧಿಗಳನ್ನು ಬಿಡಿಸಿ ಬರೆಯಿರಿ.

(೨) ದೇವೇಂದ್ರ, ಸುರೇಶ, ಮಹೇಶ, ಲೋಕೇಶ, ದೇವೇಶ, ಸೂರ್ಯೋದಯ, ಚಂದ್ರೋದಯ, ಭಾಗ್ಯೋದಯ, ದೇವೋನ್ಮಾದ, ಭೋಗೋನ್ಮಾದ, ದೇವರ್ಷಿ, ಮಹರ್ಷಿ, ವಸಂತರ್ತು, ರಾಜರ್ಷಿ–ಈ ಗುಣಸಂಧಿಗಳನ್ನು ಬಿಡಿಸಿ ಬರೆಯಿರಿ.

(೩) ಲೋಕೈಕವೀರ, ಅತ್ಯಂತ, ಗತ್ಯಂತರ, ಮನ್ವಂತರ, ಏಕೈಕ, ದಿಗಂತ, ಸದಾನಂದ, ಸನ್ಮಾನ–ಈ ಶಬ್ದಗಳಲ್ಲಿ ವೃದ್ಧಿ, ಯಣ್, ಜಶ್ತ್ವ, ಅನುನಾಸಿಕ ಸಂಧಿಗಳಾದ ಉದಾಹರಣೆಗಳಿವೆ. ಅವುಗಳನ್ನು ಗುರುತಿಸಿ.

(೪) ಬಿಟ್ಟಿರುವ ಸ್ಥಳಗಳನ್ನು ಪೂರ್ಣಗೊಳಿಸಿರಿ:–

(i) ಸವರ್ಣಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ____________ ಸ್ವರವು ಆದೇಶವಾಗಿ ಬರುವುದು.

(ii) ಗುಣಸಂಧಿಯಲ್ಲಿ ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ __________ ಕಾರವೂ, ______ ಕಾರಗಳು ಪರವಾದರೆ ಓ ಕಾರವೂ, ಋ ಕಾರವು ಪರವಾದರೆ ______ ಕಾರವೂ ಆದೇಶವಾಗಿ ಬರುವುವು.

(iii) ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ _____ ಕಾರವು ಆದೇಶವಾಗಿ ಬರುವುದು. ಇದಕ್ಕೆ ___________________ ಸಂಧಿಯೆನ್ನುವರು.

(iv) ಅ ಆ ಕಾರಗಳಿಗೆ ಓ ಔ ಕಾರಗಳು ಪರವಾಗಿ______ ಕಾರವು ಆದೇಶವಾಗಿ ಬರುವುದಕ್ಕೆ______ ಸಂಧಿಯೆನ್ನುವರು.

(೫) ಕೆಳಗೆ ಕೆಲವು ಸಂಧಿಗಳನ್ನು ಬಿಡಿಸಿ ಬರೆದಿದೆ. ಅದನ್ನು ಕೂಡಿಸಿ ಬರೆದು ಮುಂದೆ ಆವರಣದಲ್ಲಿ ಕೊಟ್ಟಿರುವ ಒಂದು ಸರಿಯುತ್ತರವನ್ನು ಹೇಳಿರಿ:–

ಅತಿ + ಆಸೆ _______________ (ಸವರ್ಣದೀರ್ಘ, ಜಶ್ತ್ವ, ಯಣ್)

ಸತ್ಯ + ಅರ್ಥ ______________ (ಯಣ್, ಸವರ್ಣದೀರ್ಘ, ಗುಣ)

ಚಿತ್ + ಆನಂದ _____________ (ಜಶ್ತ್ವ, ಅನುನಾಸಿಕ, ಸವರ್ಣದೀರ್ಘ)

(೬) ಈ ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳಿವೆ. ಆ ತಪ್ಪುಗಳನ್ನು ಸರಿಪಡಿಸಿರಿ:–

(i) ಶಬ್ದಾಂತದಲ್ಲಿರುವ ಇಕಾರಕ್ಕೆ ಸವರ್ಣವಲ್ಲದ ಸ್ವರ ಪರವಾದರೆ ವಕಾರವು ಆದೇಶವಾಗಿ ಬರುವುದು.

(ii) ವರ್ಗಪ್ರಥಮ ವರ್ಣಗಳಿಗೆ ಯಾವ ಅನುನಾಸಿಕಾಕ್ಷರವು ಪರವಾದರೂ ಅದೇ ವರ್ಗದ ಮೂರನೆಯ ವರ್ಣವು ಆದೇಶವಾಗಿ ಬರುವುದು.

(iii) ಅ ಆ ಕಾರಗಳಿಗೆ ಏ ಐ ಕಾರಗಳು ಪರವಾಗಿ ಐ ಕಾರವು ಆದೇಶವಾಗಿ ಬರುವುದಕ್ಕೆ ಗುಣಸಂಧಿಯೆನ್ನುವರು.

(iv) ಶಬ್ದಾಂತದಲ್ಲಿರುವ ವರ್ಗ ಪ್ರಥಮ ವರ್ಣಗಳಿಗೆ ಅದೇ ವರ್ಗದ ಮೂರನೆಯ ವರ್ಣ ಆದೇಶವಾಗಿ ಬರುವ ಸಂಧಿಗೆ ಶ್ಚುತ್ವಸಂಧಿಯೆನ್ನುವರು.

(v) ಶಬ್ದಾಂತ್ಯದಲ್ಲಿರುವ ಇ ಉ ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಕ್ರಮವಾಗಿ ಯ, ವ, ರ ವ್ಯಂಜನಗಳು ಆದೇಶವಾಗಿ ಬರುವ ಸಂಧಿಗೆ ಸವರ್ಣದೀರ್ಘಸಂಧಿಯೆನ್ನುವರು.

* * * * *

## ಅಧ್ಯಾಯ ೩

# ದೇಶ್ಯ–ಅನ್ಯದೇಶ್ಯ–ತತ್ಸಮ–ತದ್ಭವ ಪ್ರಕರಣ

ಯಾವುದೇ ದೇಶದ ಭಾಷೆಯಾಗಲಿ, ಅದು ತನ್ನ ಸುತ್ತಮುತ್ತಣ ಬೇರೆ ಬೇರೆ ಭಾಷೆಗಳ ಸಂಬಂಧವನ್ನು ಪಡೆಯುತ್ತಾ, ಆಯಾ ಭಾಷೆಯ ಶಬ್ದಗಳನ್ನು ತನ್ನಲ್ಲಿ ಸೇರಿಸಿಕೊಂಡು ಬೆಳೆಯುತ್ತದೆ. ನಾವಾಡುವ ಕನ್ನಡ ಭಾಷೆಯಲ್ಲೂ ಈ ತತ್ತ್ವಕ್ಕನುಗುಣವಾಗಿ ಅನೇಕ ಶಬ್ದಗಳು ಸೇರಿವೆ. ನಮ್ಮ ಕನ್ನಡ ಶಬ್ದಗಳೂ ಕೂಡ ಬೇರೆ ಬೇರೆ ಭಾಷೆಗಳಲ್ಲೂ ಸೇರಿವೆ. ಭಾಷೆಗಳು ಹೀಗೆ ಕೊಡುಕೊಳ್ಳುವ ವ್ಯವಹಾರದಿಂದ ಬೆಳೆಯುತ್ತವೆ. ಬೇರೆ ಭಾಷೆಗಳಿಂದ ಹೀಗೆ ಶಬ್ದಗಳನ್ನು ಸೇರಿಸಿಕೊಂಡರೂ ತನ್ನ ಮೂಲ ಶಬ್ದಗಳನ್ನು ಮಾತ್ರ ಕೈಬಿಡಬಾರದು. ಅವೂ ಇರಬೇಕು; ಪರಭಾಷಾ ಶಬ್ದಗಳೂ ಇರಬೇಕು. ಆಗಲೆ ಭಾಷೆಯ ಸಂಪತ್ತು ಹೆಚ್ಚುವುದು. ಈ ಕೆಳಗಿನ ಒಂದು ಉದಾಹರಣೆಯನ್ನು ಗಮನಿಸಿರಿ:–

**"ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು."**

ಈ ವಾಕ್ಯವು ಕನ್ನಡ ಭಾಷೆಯ ವಾಕ್ಯವಾದರೂ, ಕನ್ನಡ ಶಬ್ದಗಳ ಜೊತೆಗೆ ಬೇರೆ ಬೇರೆ ಭಾಷೆಗಳ ಶಬ್ದಗಳೂ ಇದರಲ್ಲಿ ಹೆಚ್ಚಾಗಿವೆ.

(i) **ಮೋಟಾರು** – ಇದು ಇಂಗ್ಲೀಷ್ ಭಾಷೆಯಿಂದ ಬಂದ ಶಬ್ದ.

(ii) **ಜಬರ್ದಸ್ತ್** – ಇದು ಹಿಂದೀ ಭಾಷೆಯಿಂದ ಬಂದ ಶಬ್ದ.

(iii) **ಜೀವನ ಮುಖ್ಯ** – ಈ ಶಬ್ದಗಳು ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು.

(iv) **ಓಡಾಡು, ಗುರಿ, ನಾವು, ತಿಳಿಯಬೇಕು** – ಇವು ಕನ್ನಡ ಭಾಷೆಯ ಶಬ್ದಗಳು.

ಅಲ್ಲದೆ–**ಅಲ್ಲಿ, ಇಂದ, ಇನ, ಇಗೆ, ಉ**–ಇತ್ಯಾದಿ ಕನ್ನಡ ಪ್ರತ್ಯಯಗಳು ಇಂಗ್ಲೀಷ್, ಹಿಂದಿ, ಸಂಸ್ಕೃತ ಶಬ್ದಗಳ ಮುಂದೆ ಬಂದು, ಅವನ್ನು ಕನ್ನಡ ಶಬ್ದಗಳನ್ನಾಗಿ ಮಾಡಿವೆ.

ಮೇಲಿನ ಉದಾಹರಣೆಯಿಂದ ನಮ್ಮ ಕನ್ನಡ ಭಾಷೆಯಲ್ಲಿ ಪರ ಭಾಷೆಯ ಶಬ್ದಗಳು ಸೇರಿಕೊಂಡಿವೆ ಎಂಬುದು ಗೊತ್ತಾಗುವುದು. ನಮ್ಮ ಕನ್ನಡ ಭಾಷೆ ದ್ರಾವಿಡ ವರ್ಗಕ್ಕೆ ಸೇರಿದ ಭಾಷೆಯೆಂದು ತಿಳಿದಿದ್ದೀರಿ. ಸಂಸ್ಕೃತ ಭಾಷೆ ಆರ್ಯರ ಭಾಷೆ. ಆರ್ಯರಿಗೂ ದ್ರಾವಿಡರಿಗೂ ಬಹು ಪ್ರಾಚೀನ ಕಾಲದಿಂದಲೇ ಸಂಬಂಧ ಬೆಳೆದು, ಅವರಾಡುತ್ತಿದ್ದ ಸಂಸ್ಕೃತ–ಪ್ರಾಕೃತ ಭಾಷೆಗಳ ಶಬ್ದಗಳು ವಿಶೇಷವಾಗಿ ಅಂದಿನಿಂದಲೇ ಸೇರುತ್ತ ಬಂದವು. ಅನಂತರ ಬೇರೆ ಬೇರೆ ವಿದೇಶೀಯರ ಸಂಪರ್ಕದಿಂದ, ಪಾರ್ಸಿ ಭಾಷಾ ಶಬ್ದಗಳೂ, ಇಂಗ್ಲೀಷ್, ಪೋರ್ಚುಗೀಸ್ ಭಾಷಾಶಬ್ದಗಳೂ ಸೇರಿಹೋದವು. ಹೀಗೆ ಬೇರೆ ಬೇರೆ ಭಾಷೆಗಳಿಂದ ಬಂದ ಶಬ್ದಗಳಾವುವು? ನಮ್ಮ ಅಚ್ಚಗನ್ನಡ ಭಾಷಾಶಬ್ದಗಳಾವುವು? ಎಂಬುದನ್ನು ಸ್ಥೂಲವಾಗಿ ತಿಳಿಯಬಹುದು.

ಅಚ್ಚಗನ್ನಡ ಶಬ್ದಗಳನ್ನು '**ದೇಶ್ಯ**' ಶಬ್ದಗಳೆನ್ನುತ್ತೇವೆ. ಉಳಿದವುಗಳನ್ನು '**ಅನ್ಯದೇಶ್ಯ**' ಶಬ್ದಗಳೆನ್ನುತ್ತೇವೆ. ಅಲ್ಲದೆ ಸಂಸ್ಕೃತ–ಪ್ರಾಕೃತ ಶಬ್ದಗಳನೇಕವನ್ನು ಕನ್ನಡಭಾಷೆಯ ಗುಣಕ್ಕನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆಗಳಿಂದ ಮತ್ತು ಹೆಚ್ಚಿನ ವ್ಯತ್ಯಾಸಗಳಿಂದ ಮಾರ್ಪಡಿಸಿಕೊಂಡು, ಅವಕ್ಕೆ ತದ್ಭವಗಳು ಎಂಬ ಹೆಸರಿಟ್ಟಿದ್ದೇವೆ. ಕೆಲವು ಸಂಸ್ಕೃತ ಶಬ್ದಗಳನ್ನು ಯಾವ ವ್ಯತ್ಯಾಸವನ್ನೂ ಮಾಡದೆ ಅದೇ ಅರ್ಥದಲ್ಲಿ ಉಪಯೋಗಿಸುತ್ತೇವೆ. ಅವನ್ನು ತತ್ಸಮಗಳು ಎನ್ನುತ್ತೇವೆ. ಈಗ ಈ ಎಲ್ಲಾ ದೇಶ್ಯ, ಅನ್ಯದೇಶ್ಯ, ತತ್ಸಮ, ತದ್ಭವಗಳ ವಿಚಾರವಾಗಿ ಸ್ಥೂಲವಾಗಿ ತಿಳಿದುಕೊಳ್ಳೋಣ.

## I – ದೇಶ್ಯ ಅಚ್ಚಗನ್ನಡ ಶಬ್ದಗಳು

ಮನೆ, ಹೊಲ, ಗದ್ದೆ, ಹಿತ್ತಿಲು, ಕದ, ಮರ, ಗಿಡ, ನೆಲ, ಆಳು, ತೆಂಕಣ, ಮೂಡಣ, ಪಡುವಣ, ಬಡಗಣ, ತೆವರು, ತಗ್ಗು, ಇಳಿ, ನೇಸರು, ತಿಂಗಳು, ಕಲ್ಲು, ನೆಲ್ಲು, ಹೊಳೆ, ಹೋಗು, ಹೊಗು, ಬರು, ತಿನ್ನು, ಒಂದು, ಎರಡು, ನೂರು, ಹೆಚ್ಚು, ಕಡಿಮೆ, ಮೆಲ್ಲಗೆ, ಚೆನ್ನಾಗಿ, ತಿಳಿವಳಿಕೆ, ನಡೆವಳಿಕೆ, ನೀರು, ಮೀನು, ಬಾನು, ಬೋನ, ಅರಸು, ಹುಡುಕು, ಅಗಿ, ಅಲರು, ಅರೆ, ನುರಿ, ಉಡು, ತೊಡು, ಕೈ, ಕಾಲು, ಬಾಯಿ, ಕಣ್ಣು, ತಲೆ, ಕಿವಿ, ಮೂಗು, ಕೆನ್ನೀರು, ಬೆನ್ನೀರು, ಬೆಚ್ಚಗೆ, ತಣ್ಣಗೆ, ಕಮ್ಮಗೆ, ಸಣ್ಣ, ದೊಡ್ಡ, ಬಿಳಿದು, ಕರಿದು, ಹಿರಿದು, ಜೇನು, ತುಪ್ಪ, ಹಾಲು, ಮೊಸರು, ಮಜ್ಜಿಗೆ, ಅವು, ಕರು, ಆಕಳು, ತುರು, ನೆರೆ, ಸೇರು, ಕಾರು, ಹೀರು, ಸೋರು, ಸಾರು, ಹುಳಿ, ಹುರುಳಿ, ಹುಲ್ಲು, ರಾಗಿ, ಜೋಳ, ಬೆಲ್ಲ, ಎಳ್ಳು, ಎಣ್ಣೆ, ಬೆಣ್ಣೆ –ಇತ್ಯಾದಿಗಳು.

## II – ಅನ್ಯದೇಶ್ಯ ಶಬ್ದಗಳು

### (೧) ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು[33]

ಭೂಮಿ, ಪೃಥ್ವಿ, ನದಿ, ಆರ್ಯ, ಅನಾರ್ಯ, ರಾತ್ರಿ, ದಿವಸ, ಸಂಧ್ಯಾ, ಸಂಸ್ಥಾ, ರಾಮ, ಲಕ್ಷ್ಮಣ, ಭರತ, ಶತೃಘ್ನ, ಮಹಾಭಾರತ, ಕುಮಾರ, ಪಿತೃ, ಮಾತೃ, ಸಹೋದರ, ಸಹೋದರಿ, ಅಂಗ, ಅಂಗವಿಕಲ, ಸಂಗ, ಸಂಗಮ, ಸಮಾಗಮ, ದೇವತಾ, ಯಾತ್ರಾ, ದೇವಾಲಯ, ಋಷಿ, ಮುನಿ,

---

[33] ಸಂಸ್ಕೃತ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದಗಳನ್ನು ತಿಳಿಯಲು ಸ್ಥೂಲವಾಗಿ ಕೆಳಗಣ ವಿಷಯಗಳನ್ನು ನೆನಪಿನಲ್ಲಿಡಬೇಕು:–

(i) ಋ, ಶ, ಷ, ಕ್ಷ, ಜ್ಞ, ತ್ರ ವಿಸರ್ಗ, ಸ್ತ್ರೀ, ಸ್ತ್ರ ಅಕ್ಷರಗಳಿರುವ ಶಬ್ದಗಳು;

(ii) ಮಹಾಭಾರತ, ರಾಮಾಯಣಗಳೇ ಮೊದಲಾದ ಪುರಾಣ ಗ್ರಂಥಗಳಲ್ಲಿ ಬರುವ ವ್ಯಕ್ತಿ, ಸ್ಥಳ, ಪರ್ವತ, ನದಿ, ಋಷಿಗಳೇ ಮೊದಲಾದವರ ಹೆಸರುಗಳು ಮತ್ತು ಋತು, ಮಾಸ, ದಿವಸ, ನಕ್ಷತ್ರ, ಯೋಗ, ಕರಣಗಳು;

(iii) ವಿ, ಅ, ಅನ್, ಸು, ಸ, ನಿಸ್, ನಿರ್, ನಿಃ, ದುಃ, ದುಸ್, ದುರ್ ಇತ್ಯಾದಿ ಉಪಸರ್ಗ ಪೂರ್ವಕ ಶಬ್ದಗಳು, ಉದಾ:–ವಿಚಲಿತ, ಅಚಲಿತ, ದುರಾಚಾರ, ಅನಗತ್ಯ, ವಿಶೇಷ ... ... ... ಇತ್ಯಾದಿ;

(iv) ಇವಲ್ಲದೆ ಇನ್ನೂ ಅನೇಕ ಶಬ್ದಗಳಿವೆ. ಇಲ್ಲಿ ಹೇಳಿರುವುದು ಕೇವಲ ಸ್ಥೂಲಮಾತ್ರ.

ಋಣ, ಋತು, ವೇದ, ಪುರಾಣ, ಶಾಸ್ತ್ರ, ಶಾಸ್ತ್ರೀ, ಆಗಮ, ಉಪನಿಷತ್ತು, ಅರಣ್ಯ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚ, ತ್ರಯ, ದಶ, ಏಕ, ಅಷ್ಟ, ಸಪ್ತ, ಆದಿತ್ಯವಾರ, ಸೋಮವಾರ, ಮಂಗಳವಾರ, ಬುಧವಾರ, ನಕ್ಷತ್ರ, ಗ್ರಹ, ಗೃಹ, ಗೃಹಿಣೀ, ಗೃಹಸ್ಥ, ಬ್ರಹ್ಮಚಾರಿ, ವಿದ್ಯಾರ್ಥಿ, ಅನ್ನ, ಪಕ್ವಾನ್ನ, ತೀರ್ಥ, ಅಸಾಧ್ಯ, ಅಶಕ್ಯ, ಅಶಕ್ತ, ಅಶಕ್ತಿ, ನಿಶ್ಶಕ್ತಿ, ವಿಶೇಷ, ಜ್ಞಾನ, ವಿದ್ಯಾ, ವಿದ್ಯಾರ್ಜನೆ, ಶಾಲಾ, ವಿಶ್ವವಿದ್ಯಾಲಯ, ಘಟಿಕಾ, ಘಟಿಕೋತ್ಸವ, ವಿವಾಹ, ಲಗ್ನ, ಲಗ್ನಪತ್ರ, ಪುತ್ರ, ಮಿತ್ರ, ಕಳತ್ರ, ಆಗಮ, ಆದೇಶ, ಲೋಪ, ಅಗ್ರಹಾರ, ಪುರ, ಪುರಿ, ನಗರ, ಗ್ರಾಮ, ಅಧಿಕಾರ, ಮಂತ್ರಿ, ರಾಜನ್, ರಾಣಿ, ಚಕ್ರವರ್ತಿ, ಸಾಮಂತ, ಮಂಡಲೇಶ್ವರ, ಸಾಮ್ರಾಜ್ಯ, ಚಕ್ರಾಧಿಪತ್ಯ, ಶಬ್ದ, ಅಕ್ಷರ, ಪದ, ಪ್ರಕೃತಿ, ವಾಕ್ಯ, ಗ್ರಂಥ, ಸಂಪುಟ, ಮತ, ಧರ್ಮ, ಮೋಕ್ಷ, ಸ್ವರ್ಗ, ನರಕ, ವಿಷಯ, ಅಧ್ಯಾಯ, ಪ್ರಕರಣ, ಪರಿಚ್ಛೇದ, ಆಮ್ಲಜನಕ, ಜಲಜನಕ, ವಿಮಾನ, ಆಕಾಶ, ಫಲ, ಫಲಾಹಾರ, ಗಂಧ, ಚಂದನ, ಲೇಪನ, ಕುಂಕುಮ, ಶಿರ, ಹಸ್ತ, ಪಾದ, ನೇತ್ರ, ಮುಖ, ದಂತ, ಪಂಜ್ತಿ, ನಕ್ಷೆ, ಲೇಖನ, ಲೇಖ, ಪತ್ರ, ಶತ್ರು, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ನೈಋತ್ಯ, ಆಗ್ನೇಯ, ಈಶಾನ್ಯ, ವಾಯುವ್ಯ, ಆಕಾಶ, ಗಗನ, ವಾಯು, ವಾಯುಮಂಡಲ, ಜಗತ್, ಮಹಾ, ಉನ್ನತ, ಶಿಖರ, ರಾಶಿ, ಪುಂಜ, ಪುಷ್ಪ, ಪತ್ರಾವಳಿ, ಫಲಾವಳಿ, ಫಲ, ಭೋಜನ, ಭುಂಜನ, ಸರ್ಪ, ಉರಗ, ಔಷಧ, ವೈದ್ಯ, ಆಯುಷ್ಯ, ವರ್ಷ, ಯುಗ, ಶತ, ಶತಮಾನ, ಶತಕ, ವರ್ತಮಾನ, ಸಂಗ್ರಹ, ಯುದ್ಧ, ಗದಾ, ದಂಡ, ಬಾಣ, ಬಾಣಪ್ರಯೋಗ, ಧನು, ದರಿದ್ರ, ದೀನ, ದಲಿತ, ಮಾರ್ಗ, ಮಧ್ಯ, ಧೂಳಿ, ದ್ವಾರ, ಗುಹಾ, ಸಹಸ್ರ, ಪಾಡ್ಯಮೀ, ಏಕಾದಶೀ, ದ್ವಾದಶೀ, ದೀಕ್ಷಾ, ದೈನ್ಯ, ದಿನಾಂಕ, ಸ್ಮಾರಕ, ಪಕ್ಷ, ತಿಥಿ, ಪಂಚಾಂಗ, ಪಂಚಾಲ, ದ್ರೌಪದಿ, ಧೃತರಾಷ್ಟ್ರ, ಕಾವೇರಿ, ಕೃಷ್ಣಾ, ಗೋದಾವರಿ, ನರ್ಮದಾ, ಬ್ರಹ್ಮಪುತ್ರಾ, ಗಂಗಾ, ಯಮುನಾ, ಸರಸ್ವತಿ, ಶಿವ, ವಿಷ್ಣು, ಬ್ರಹ್ಮ, ಮಹೇಶ, ಈಶ್ವರ, ನಶ್ವರ –ಇತ್ಯಾದಿ.

## (೨) ಹಿಂದೂಸ್ಥಾನೀ ಭಾಷೆಯಿಂದ ಬಂದ ಶಬ್ದಗಳು

ಅರ್ಜಿ, ಕಚೇರಿ, ತಯಾರ್, ಬದಲ್, ಕಾರ್ಖಾನೆ, ಖಾನೇಷುಮಾರ್, ಸರ್ಕಾರ, ರೈತ, ಸಲಾಮು, ಕಾನೂನು, ಜಮೀನು, ಬದಲಾವಣೆ, ಚುನಾವಣೆ, ಮಂಜೂರು, ಹುಕುಂ, ದರ್ಬಾರು, ಅಸಲಿ, ನಕಲಿ, ರಸ್ತೆ, ಕುರ್ಚಿ, ಜಮೀನ್‌ದಾರ್, ಗುಲಾಮ, ಖಾಜಿ, ಸುಬೇದಾರ್, ದಫೇದಾರ್, ಹವಾಲ್ದಾರ್, ದಾಖಲ್, ದುಕಾನ್, ಅಮಲ್ದಾರ್, ಸವಾರ, ದವಾಖಾನೆ, ಕಾಗದ, ಬಂದೂಕ, ಹುಜೂರು, ಖಾವಂದ್, ಜನಾಬ್, ಮಹಲ್, ಕಿಲ್ಲಾ–ಮುಂತಾದವುಗಳು.

## (೩) ಇಂಗ್ಲೀಷಿನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಶಬ್ದಗಳು

ರೋಡ್, ರೈಲ್, ಕೋರ್ಟ್, ಬ್ಯಾಂಕ್, ಚೆಕ್, ಚಲನ್, ಲಾಯರ್, ಪಿಟೀಲ್, ಹಾರ್ಮೋನಿಯಂ, ಬೆಂಚ್, ಪ್ಲೇಗು, ಮೈಲು, ಪೋಲೀಸ್, ಪೋಸ್ಟ್, ಕಾರ್ಡು, ಕವರು, ಟಿಕೆಟ್, ಹೊಟೆಲ್, ಚೇರಮನ್, ರೂಂ, ಸ್ಕೂಲ್, ಕಾಲೇಜ್, ಯೂನಿವರ್ಸಿಟಿ, ರಿಕಾರ್ಡ್, ಆಕ್ಸಿಜನ್,

ಹೈಡ್ರೋಜನ್, ಆಸಿಡ್, ಫೀಸ್, ರಿಜಿಸ್ಟರ್, ಫರ್ನಿಚರ್, ಜೈಲ್, ಡ್ರೆಸ್, ಬೂಟ್ಸ್, ಫುಟ್‌ಪಾತ್, ಬೈಸ್‌ಕಲ್, ಸ್ಕೂಟರ್, ಜಾಮಿಟ್ರಿ, ಮಿಷನ್, ಡಿಗ್ರಿ, ಡಾಕ್ಟರ್, ಪ್ಲಾನ್, ಬ್ರೆಡ್, ಕಾಫೀ, ಟೀ, ಬೋರ್ಡ್, ಪೆಟ್ರೋಲ್, ಲೈಟ್, ಎಲೆಕ್ಟ್ರಿಕ್, ಡಿಪಾರ್ಟ್‌ಮೆಂಟ್, ಗವರ್ನಮೆಂಟ್, ಅಪಾಯಿಂಟ್‌ಮೆಂಟ್, ಆರ್ಡರ್, ಪ್ರೈಮರಿ, ಮಿಡಲ್, ನರ್ಸರಿ, ಹೈಸ್ಕೂಲ್, ಅಗ್ರಿಕಲ್ಚರ್, ಸೋಪ್, ಹ್ಯಾಂಡ್‌ಬಿಲ್, ಬುಕ್, ನೋಟ್ಸ್, ಪೇಜ್, ಎಸ್.ಎಸ್.ಎಲ್.ಸಿ., ಬಿ.ಎ., ಎಂ.ಎ., ಎಲ್‌ಎಲ್.ಬಿ., ಆನರ್ಸ್, ಮಾಷ್ಟರ್, ಲೆಕ್ಚರರ್, ಪ್ರೊಫೆಸರ್, ರೀಡರ್, ಲೈಬ್ರರಿ, ಪ್ರೆಸ್, ಡ್ರೈವರ್, ನಂಬರ್, ಮಾರ್ಕ್ಸ್, ಪಾಸ್, ಫೇಲ್, ಸೈನ್ಸ್, ಅಡ್ವಾನ್ಸ್, ಮ್ಯಾಪ್, ಸಿನೆಮಾ, ಫಿಲ್ಮ್, ಸರ್ಟಿಫಿಕೇಟ್, ಲೀವ್, ಎಜ್ಯುಕೇಷನ್, ಕಾಂಗ್ರೇಸ್, ಪಾರ್ಟಿ, ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್, ಹಾಕಿ, ಟ್ರೈನಿಂಗ್, ಕ್ರಾಪ್‌ಕಟಿಂಗ್, ಡಿಸ್ಟ್ರಿಕ್ಟ್, ಸರ್ಕಲ್, ಸೊಸೈಟಿ, ಮಿಲ್, ಪೆನ್ಸಿಲ್, ಪೆನ್, ಇಂಕ್, ಬಾಟಲ್, ಸ್ಪೀಡ್, ಸ್ವಿಚ್, ಲೈಟ್, ಬಲ್ಬ್–ಇತ್ಯಾದಿಗಳು.

## (ಳ) ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು

ಅಲಮಾರು, ಸಾಬೂನು, ಪಾದ್ರಿ, ಮೇಜು–ಇತ್ಯಾದಿಗಳು.

## (ೞ) ಸಂಸ್ಕೃತದಿಂದ ತಮ್ಮ ಮೂಲರೂಪವನ್ನು ವ್ಯತ್ಯಾಸಮಾಡಿಕೊಂಡು ಕನ್ನಡಕ್ಕೆ ಬಂದ ಶಬ್ದಗಳು

**ವಿಶೇಷ:–**[34]ಇದರಲ್ಲಿ ಅಲ್ಪಸ್ವಲ್ಪ ಬದಲಾವಣೆ ಹೊಂದಿದವು, ಹೆಚ್ಚು ಬದಲಾವಣೆ ಹೊಂದಿದವು ಎಂದು ಎರಡು ಭಾಗ ಮಾಡಬಹುದು.

(i) **ಅಲ್ಪಸ್ವಲ್ಪ ಬದಲಾವಣೆ ಹೊಂದಿ ಬಂದವುಗಳು:**

ಉದಾಹರಣೆಗೆ:– ಸೀತೆ, ಲಕ್ಷ್ಮಿ, ಮಾಲೆ, ದೇವತೆ, ರಾಜ, ಮಹ, ಯಶ, ಬೃಹತ್ತು, ಮಹತ್ತು, ವಿಪತ್ತು, ವಿಯತ್ತು, ಸರಿತ್ತು–ಇತ್ಯಾದಿಗಳು.

(ii) **ಹೆಚ್ಚು ಬದಲಾವಣೆ ಹೊಂದಿ ಬಂದವುಗಳು:**

ಉದಾಹರಣೆಗೆ:– ಸಕ್ಕರೆ, ಸಾವಿರ, ಬಸವ, ಸಂತೆ, ಪಟಕ, ಸರ, ತಾಣ, ದೀವಿಗೆ, ಬತ್ತಿ, ಬಸದಿ, ನಿಚ್ಚ, ಕಜ್ಜ, ಅಂಚೆ, ಕಂತೆ, ಅಜ್ಜ, ಕವಳ–ಇತ್ಯಾದಿಗಳು.

---

[34] ಅನೇಕ ಶಬ್ದಗಳು ತದ್ಭವ ರೂಪ ಹೊಂದಿ ನೇರವಾಗಿ ಸಂಸ್ಕೃತದಿಂದಲೇ ಬಂದಿಲ್ಲ. ಪ್ರಾಕೃತ ಎಂಬ ಭಾಷೆಯಿಂದಲೂ ಬಂದಿವೆ.

**ಸಂಸ್ಕೃತದಿಂದ ಅಸಂಖ್ಯಾತ ಪದಗಳು ಕನ್ನಡಕ್ಕೆ ತದ್ಭವ ರೂಪವಾಗಿ ಬಂದಿರುವುದರಿಂದ, ಅವುಗಳು ಕನ್ನಡಕ್ಕೆ ಬಂದ ಕ್ರಮವನ್ನು ವಿಸ್ತಾರವಾಗಿಯೇ ತಿಳಿಯಬೇಕಾದುದು ಅವಶ್ಯವಾದುದು. ಆ ಬಗೆಗೆ ಈಗ ವಿಚಾರ ಮಾಡೋಣ.**

## III – ತತ್ಸಮ ತದ್ಭವ ರೂಪಗಳು[35]

ಸಂಸ್ಕೃತ ಮತ್ತು ಪ್ರಾಕೃತಗಳಿಂದ ಆ ಭಾಷೆಯ ಶಬ್ದಗಳನ್ನು ಕನ್ನಡಕ್ಕೆ ತೆಗೆದುಕೊಳ್ಳುವಾಗ ಹಲಕೆಲವು ವ್ಯತ್ಯಾಸ ಮಾಡಿ ಕನ್ನಡಿಗರು ಕನ್ನಡಕ್ಕೆ ಸೇರಿಸಿಕೊಂಡಿದ್ದಾರೆಂದು ಈ ಹಿಂದೆಯೇ ವಿವರಿಸಲಾಗಿದೆ.

**(27) ತತ್ಸಮಗಳು–ಸಂಸ್ಕೃತದಿಂದ ವಿಕಾರ ಹೊಂದದೆ ಕನ್ನಡದಲ್ಲಿ ಬಳಸಲ್ಪಡುವ ಶಬ್ದಗಳು ತತ್ಸಮಗಳು. ತತ್ ಎಂದರೆ ಅದಕ್ಕೆ, ಸಮ ಎಂದರೆ ಸಮಾನವಾದುದು–ಇಲ್ಲಿ ಅದಕ್ಕೆ ಎಂದರೆ ಸಂಸ್ಕೃತಕ್ಕೆ ಸಮಾನ (ಎಂದು ಅರ್ಥ) ಇವನ್ನು ಕೆಲವರು 'ಸಮಸಂಸ್ಕೃತ' ಗಳೆಂದೂ ಕರೆಯುವರು (ಕನ್ನಡಕ್ಕೂ ಸಂಸ್ಕೃತಕ್ಕೂ ಇವು ಸಮಾನರೂಪಗಳೆಂದು ತಾತ್ಪರ್ಯ). ಅಲ್ಲದೆ ತದ್ಭವ ಶಬ್ದಗಳ ಸಂಸ್ಕೃತ ರೂಪಗಳನ್ನು 'ತತ್ಸಮ' ಗಳೆಂದೇ ಕರೆಯುವುದು ರೂಢಿಗೆ ಬಂದಿದೆ.**

ಉದಾಹರಣೆಗೆ:– ರಾಮ, ಭೀಮ, ಕಾಮ, ವಸಂತ, ಸೋಮ, ಚಂದ್ರ, ಸೂರ್ಯ, ಗ್ರಹ, ಕರ್ತೃ, ಶತ್ರು, ಸ್ತ್ರೀ, ಶ್ರೀ, ವನ, ಮಧು, ಕಮಲ, ಭುವನ, ಭವನ, ಶಯನ, ಶ್ರುತಿ, ಸ್ಮೃತಿ, ಶುದ್ಧಿ, ಸಿದ್ಧಿ, ಕವಿ, ಕಾವ್ಯ, ರವಿ, ಗಿರಿ, ಲಿಪಿ, ಪಶು, ಶಿಶು, ರಿಪು, ಭಾನು, ಯತಿ, ಮತಿ, ಪತಿ, ಗತಿ–ಇತ್ಯಾದಿ.

---

[35](i) ತತ್ಸಮ ತದ್ಭವಗಳ ವಿಚಾರವಾಗಿ ಈಗ ರೂಢಿಯಲ್ಲಿರುವ ವಿಚಾರಕ್ಕೂ ಕೇಶಿರಾಜಾದಿ ವ್ಯಾಕರಣಕಾರರ ವಿಭಿಪ್ರಾಯಕ್ಕೂ ಸ್ವಲ್ಪ ವ್ಯತ್ಯಾಸವಿದೆ. 'ತತ್ಸಮ' ಎಂದರೆ ಕನ್ನಡಕ್ಕೂ, ಸಂಸ್ಕೃತಕ್ಕೂ ಸಮವಾದ ಶಬ್ದ ಎಂದು ಅರ್ಥ. ಈ ಶಬ್ದಗಳನ್ನು ಕನ್ನಡ ಶಬ್ದದೊಡನೆಯೂ, ಸಂಸ್ಕೃತ ಶಬ್ದದೊಡನೆಯೂ ಸೇರಿಸಿ ಸಮಾಸ ಮಾಡಬಹುದು ಎಂಬುದೇ ಈ ಕನ್ನಡಕ್ಕೂ, ಸಂಸ್ಕೃತಕ್ಕೂ ಸಮ ಎಂಬರ್ಥದ ತಾತ್ಪರ್ಯ. ಈಗ ರೂಢಿಯಲ್ಲಿರುವ ತದ್ಭವದ ಸಂಸ್ಕೃತ ರೂಪವೇ 'ತತ್ಸಮ' ಎಂಬರ್ಥ ಆಗ ಇರಲಿಲ್ಲ. 'ತತ್ಸಮ' ಶಬ್ದಗಳನ್ನು ಕೇಶಿರಾಜನು ಮಣಿ, ಮಂಚ, ತೋರಣ ........ ಇತ್ಯಾದಿ ೨೧ ಶಬ್ದಗಳ ಪಟ್ಟಿ ಮಾಡಿ ಇವೇ 'ತತ್ಸಮ' ಎಂದು ಹೆಸರಿಸಿಬಿಟ್ಟಿದ್ದಾನೆ.

(ii) ಅಲ್ಪ ಸ್ವಲ್ಪ ವ್ಯತ್ಯಾಸದಿಂದ ಕನ್ನಡಕ್ಕೆ ಬಂದ ಶಬ್ದಗಳನ್ನೆಲ್ಲ ಕೇಶಿರಾಜನು ಸಮ ಸಂಸ್ಕೃತ ಎಂದು ಕರೆದಿದ್ದಾನೆ. ಉದಾಹರಣೆಗೆ:– ಮಾಲಾ–ಮಾಲೆ, ಸೀತಾ–ಸೀತೆ. ಈಗ ರೂಢಿಯಲ್ಲಿ ಸಮ ಸಂಸ್ಕೃತ ಎಂಬುದು ಬಳಕೆಯಿಲ್ಲ.

(iii) ವಿಶೇಷ ವ್ಯತ್ಯಾಸದಿಂದ ಅಂದರೆ ಸಂಸ್ಕೃತದ ತಮ್ಮ ಮೂಲ ರೂಪವನ್ನೇ ಕಳೆದುಕೊಂಡು ಕನ್ನಡಕ್ಕೇ ಬಂದವುಗಳೇ ತದ್ಭವಗಳು. ಉದಾಹರಣೆಗೆ:– ಶರ್ಕರಾ–ಸಕ್ಕರೆ, ವೃಷಭ–ಬಸವ__ ಇತ್ಯಾದಿ. ಇದೇ ಶಾಸ್ತ್ರೀಯವಾದ ಅಭಿಪ್ರಾಯ. ಈಗ ರೂಢಿಯಲ್ಲಿ ಈ ಅಭಿಪ್ರಾಯ ಸ್ವಲ್ಪ ಬದಲಾವಣೆ ಹೊಂದಿದೆ. ಸಂಸ್ಕೃತ ಶಬ್ದ ವಿಕಾರ ಹೊಂದಿದರೆ ತದ್ಭವವೆಂದು, ತದ್ಭವದ ಸಂಸ್ಕೃತ ರೂಪ ತತ್ಸಮವೆಂದೂ, ಯಾವ ವಿಕಾರವನ್ನೂ ಹೊಂದದಿರುವುದು ಕೂಡ ತತ್ಸಮವೆಂದೂ ಕರೆಯಲ್ಪಡುತ್ತಿದೆ.

**(28) ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ವಿಕಾರವನ್ನಾಗಲಿ, ಪೂರ್ಣ ವಿಕಾರವನ್ನಾಗಲಿ, ಹೊಂದಿ ಬಂದಿರುವ ಶಬ್ದಗಳನ್ನು ತದ್ಭವಗಳೆಂದು ಕರೆಯುವರು (ತತ್ ಎಂದರೆ ಅದರಿಂದ ಎಂದರೆ ಸಂಸ್ಕೃತದಿಂದ ಭವ ಎಂದರೆ ಹುಟ್ಟಿದ ಅಥವಾ ನಿಷ್ಪನ್ನವಾದ ಎಂದು ಅರ್ಥ).**

**(ಅಲ್ಪಸ್ವಲ್ಪ ವಿಕಾರ ಹೊಂದಿದ ಶಬ್ದಗಳನ್ನು ಸಮಸಂಸ್ಕೃತ ಎಂದು ಕರೆಯುವುದೂ ವಾಡಿಕೆ)**

ಉದಾಹರಣೆಗೆ:– ಮಾಲೆ, ಸೀತೆ, ಉಮೆ, ವೀಣೆ, ಅಜ್ಜ, ಬಂಜೆ, ಸಿರಿ, ಬಾವಿ, ದನಿ, ಜವನಿಕೆ, ನಿದ್ದೆ, ಗಂಟೆ, ಜೋಗಿ, ರಾಯ, ಕೀಲಾರ, ಪಟಕ, ಸಂತೆ, ಪಕ್ಕ, ಪಕ್ಕಿ, ಚಿತ್ತಾರ, ಬಟ್ಟ, ಆಸೆ, ಕತ್ತರಿ–ಇತ್ಯಾದಿ.

**(i) ಅಲ್ಪಸ್ವಲ್ಪ ವ್ಯತ್ಯಾಸ ಹೊಂದಿ ಕನ್ನಡಕ್ಕೆ ಬಂದಿರುವ ಸಂಸ್ಕೃತ ಶಬ್ದಗಳ ಪಟ್ಟಿ:–**

| **ಸಂಸ್ಕೃತ ರೂಪ** | **ವ್ಯತ್ಯಾಸ ರೂಪ** | **ಸಂಸ್ಕೃತ ರೂಪ** | **ವ್ಯತ್ಯಾಸ ರೂಪ** |
|---|---|---|---|
| ದಯಾ | ದಯೆ, ದಯ | ಗ್ರೀವಾ | ಗ್ರೀವೆ, ಗ್ರೀವ |
| ಕರುಣಾ | ಕರುಣೆ, ಕರುಣ | ಶಮಾ | ಶಮೆ |
| ನಾರೀ | ನಾರಿ | ವಧ | ವಧೆ |
| ನದೀ | ನದಿ | ಅಭಿಲಾಷ | ಅಭಿಲಾಷೆ |
| ವಧೂ | ವಧು | ಪ್ರಶ್ನ | ಪ್ರಶ್ನೆ |
| ಸರಯೂ | ಸರಯು | ಉದಾಹರಣೆ | ಉದಾಹರಣೆ |
| ಸ್ವಯಂಭೂ | ಸ್ವಯಂಭು | ಸರಸ್ವತೀ | ಸರಸ್ವತಿ |
| ಮಾಲಾ | ಮಾಲೆ | ಲಕ್ಷ್ಮೀ | ಲಕ್ಷ್ಮಿ |
| ಸೀತಾ | ಸೀತೆ | ಗೌರೀ | ಗೌರಿ |
| ಬಾಲಾ | ಬಾಲೆ | ಭಾಮಿನೀ | ಭಾಮಿನಿ |
| ಲೀಲಾ | ಲೀಲೆ | ಕಾಮಿನೀ | ಕಾಮಿನಿ |
| ಗಂಗಾ | ಗಂಗೆ | ಕುಮಾರೀ | ಕುಮಾರಿ |
| ನಿಂದಾ | ನಿಂದೆ | ಗೋದಾವರೀ | ಗೋದಾವರಿ |
| ಶಾಲಾ | ಶಾಲೆ | ಕಾವೇರೀ | ಕಾವೇರಿ |
| ರಮಾ | ರಮೆ | ಶಾಸ್ತ್ರೀ | ಶಾಸ್ತ್ರಿ |
| ಉಮಾ | ಉಮೆ | ಭಿಕ್ಷಾ | ಭಿಕ್ಷಾ, ಭಿಕ್ಷೆ |
| ದಮಾ | ದಮೆ | ಯಾತ್ರಾ | ಯಾತ್ರೆ |
| ಕ್ಷಮಾ | ಕ್ಷಮೆ | ಜ್ವಾಲಾ | ಜ್ವಾಲೆ |
| ಆಶಾ | ಆಶೆ | ರೇಖಾ | ರೇಖೆ |
| ಸಂಸ್ಥಾ | ಸಂಸ್ಥೆ | ಮುದ್ರಾ | ಮುದ್ರೆ |

| ಸಂಸ್ಕೃತ ರೂಪ | ವ್ಯತ್ಯಾಸ ರೂಪ | ಸಂಸ್ಕೃತ ರೂಪ | ವ್ಯತ್ಯಾಸ ರೂಪ |
|---|---|---|---|
| ನಿದ್ರಾ | ನಿದ್ರೆ | ದ್ರಾಕ್ಷಾ | ದ್ರಾಕ್ಷೆ |
| ಯವನಿಕಾ | ಯವನಿಕೆ | ಮಾತ್ರಾ | ಮಾತ್ರೆ |
| ದ್ರೌಪದೀ | ದ್ರೌಪದಿ | ಶಾಖಾ | ಶಾಖೆ |
| ವೇಳಾ | ವೇಳೆ | ವಾಲುಕಾ | ವಾಲುಕ |
| ಭಾಷಾ | ಭಾಷೆ | ಗಾಂಧಾರೀ | ಗಾಂಧಾರಿ |

–ಇತ್ಯಾದಿಗಳು

ಮೇಲಿನ ಎಲ್ಲ ಉದಾಹರಣೆಗಳಲ್ಲಿ ಮುಖ್ಯವಾಗಿ ಸಂಸ್ಕೃತದ '**ಆ**' ಕಾರಂತ ಶಬ್ದಗಳು '**ಎ**' ಕಾರಾಂತಗಳಾಗಿವೆ **(ಮಾಲಾ–ಮಾಲೆ** ಇತ್ಯಾದಿ); ಕೆಲವು '**ಅ**' ಕಾರಾಂತಗಳೂ '**ಎ**' ಕಾರಂತಗಳಾಗಿವೆ **(ವಧ–ವಧೆ)**; ಕೆಲವು ದೀರ್ಘಾಂತಗಳು ಹ್ರಸ್ವಾಂತಗಳಾಗಿವೆ **(ಲಕ್ಷ್ಮೀ–ಲಕ್ಷ್ಮಿ)**; ಕೆಲವು ಆಕಾರಂತಗಳು ಅಕಾರಾಂತಗಳಾಗಿಯೂ ಆಗಿವೆ **(ದಯಾ–ದಯ)**; ಹೀಗೆ ಸ್ಥೂಲವಾಗಿ ತಿಳಿಯಬಹುದು. ಹೀಗೆ ಅಲ್ಪಸ್ವಲ್ಪ ವ್ಯತ್ಯಾಸಗೊಂಡ ಮೇಲೆ ಇವು ಕನ್ನಡದ ಪ್ರಕೃತಿಗಳಾಗುವುವು. ಇವುಗಳ ಮೇಲೆ ಕನ್ನಡದ ಪ್ರತ್ಯಯಗಳನ್ನು ಹಚ್ಚಬಹುದು. (ಇಂಥವನ್ನೇ ಸಮ ಸಂಸ್ಕೃತಗಳೆಂದು ಕೆಲವರು ಕರೆಯುವರೆಂದು ಹಿಂದೆ ತಿಳಿಸಿದೆ).

**(ii) ಶಬ್ದದ ಕೊನೆಯಲ್ಲಿರುವ ಋಕಾರವು ಅ ಅರ ಎಂದು ವ್ಯತ್ಯಾಸಗೊಳ್ಳುವುವು. ಕೆಲವು ಎಕಾರಾಂತಗಳೂ ಆಗುವುವು. ಅನಂತರ ಕನ್ನಡ ಪ್ರಕೃತಿಗಳಾಗುವುವು.**

| ಸಂಸ್ಕೃತ ರೂಪ | ವ್ಯತ್ಯಾಸ ರೂಪ | ಸಂಸ್ಕೃತ ರೂಪ | ವ್ಯತ್ಯಾಸ ರೂಪ |
|---|---|---|---|
| ಕರ್ತೃ | ಕರ್ತ, ಕರ್ತಾರ | ನೇತೃ | ನೇತಾರ |
| ದಾತೃ | ದಾತ, ದಾತಾರ | ಸವಿತೃ | ಸವಿತಾರ |
| ಪಿತೃ | ಪಿತ, ಪಿತರ | ಭರ್ತೃ | ಭರ್ತಾರ |
| ಮಾತೃ | ಮಾತೆ | ಹೋತೃ | ಹೋತಾರ |

**(iii) ಕೆಲವು ನಕಾರಾಂತ ಶಬ್ದಗಳು ಕೊನೆಯ ನಕಾರವನ್ನು ಲೋಪ ಮಾಡಿಕೊಂಡು ಕನ್ನಡ ಪ್ರಕೃತಿಗಳಾಗುವುವು.**

| ಸಂಸ್ಕೃತ ರೂಪ | ವ್ಯತ್ಯಾಸ ರೂಪ | ಸಂಸ್ಕೃತ ರೂಪ | ವ್ಯತ್ಯಾಸ ರೂಪ |
|---|---|---|---|
| ರಾಜನ್ | ರಾಜ | ಬ್ರಹ್ಮನ್ | ಬ್ರಹ್ಮ |
| ಕರಿನ್ | ಕರಿ | ಪುರೂರವನ್ | ಪುರೂರವ |
| ಆತ್ಮನ್ | ಆತ್ಮ | ಯುವನ್ | ಯುವ |
| ಧಾಮನ್ | ಧಾಮ | ಮೂರ್ಧನ್ | ಮೂರ್ಧ |

**(iv) ಕೆಲವು ವ್ಯಂಜನಾಂತ ಶಬ್ದಗಳು ಕೊನೆಯ ವ್ಯಂಜನವನ್ನು ಲೋಪ ಮಾಡಿಕೊಂಡಾಗಲೀ ಅಥವಾ ಇನ್ನೊಂದು ಅದೇ ವ್ಯಂಜನ ಮತ್ತು ಉಕಾರದೊಡನಾಗಲೀ ವ್ಯತ್ಯಾಸಗೊಂಡು ಕನ್ನಡ ಪ್ರಕೃತಿಗಳಾಗುತ್ತವೆ.**

| **ಸಂಸ್ಕೃತ ರೂಪ** | **ಬದಲಾವಣೆಯಾದ ರೂಪಗಳು** | | |
|---|---|---|---|
| ಧನಸ್ | ಧನು | ಧನುಸ್ಸು | (ಸ್ + ಉ) |
| ಶಿರಸ್ | ಶಿರ | ಶಿರಸ್ಸು | (ಸ್ + ಉ) |
| ಯಶಸ್ | ಯಶ | ಯಶಸ್ಸು | (ಸ್ + ಉ) |
| ಮನಸ್ | ಮನ | ಮನಸ್ಸು | (ಸ್ + ಉ) |
| ತೇಜಸ್ | ತೇಜ | ತೇಜಸ್ಸು | (ಸ್ + ಉ) |
| ವಯಸ್ | ವಯ | ವಯಸ್ಸು | (ಸ್ + ಉ) |
| ಪಯಸ್ | ಪಯ | ಪಯಸ್ಸು | (ಸ್ + ಉ) |
| ಶ್ರೇಯಸ್ | ಶ್ರೇಯ | ಶ್ರೇಯಸ್ಸು | (ಸ್ + ಉ) |

**(v) ಕೆಲವು ಸಂಸ್ಕೃತದ ಪ್ರಥಮಾವಿಭಕ್ತ್ಯಂತ ಏಕವಚನಗಳು ತಮ್ಮ ಕೊನೆಯ ವ್ಯಂಜನದೊಡನೆ ಇನ್ನೊಂದು ಅದೇ ವ್ಯಂಜನ ಮತ್ತು ಉಕಾರ ಸೇರಿಸಿಕೊಂಡು ಕನ್ನಡದ ಪ್ರಕೃತಿಗಳಾಗುತ್ತವೆ.**

| **ಸಂಸ್ಕೃತದಲ್ಲಿ ಪ್ರಥಮಾ ಏಕವಚನದ ರೂಪ** | **ವಿಕಾರಗೊಂಡ ರೂಪ** | **ಸಂಸ್ಕೃತದಲ್ಲಿ ಪ್ರಥಮಾ ಏಕವಚನದ ರೂಪ** | **ವಿಕಾರಗೊಂಡ ರೂಪ** |
|---|---|---|---|
| ಪ್ರತಿಪತ್ | ಪ್ರತಿಪತ್ತು | ದಿಕ್ | ದಿಕ್ಕು |
| ಕ್ಷುತ್ | ಕ್ಷುತ್ತು | ತ್ವಕ್ | ತ್ವಕ್ಕು |
| ಸಂಪತ್ | ಸಂಪತ್ತು | ವಾಕ್ | ವಾಕ್ಕು |
| ವಿಯತ್ | ವಿಯತ್ತು | ಸಮಿತ್ | ಸಮಿತ್ತು |
| ವಿಪತ್ | ವಿಪತ್ತು | | |

**(vi) ಸಂಸ್ಕೃತದ ಪ್ರಥಮಾವಿಭಕ್ತಿಯ ಬಹುವಚನಾಂತವಾಗಿರುವ ಕೆಲವು ಪುಲ್ಲಿಂಗ ವ್ಯಂಜನಾಂತ ಶಬ್ದಗಳು ತಮ್ಮ ಕೊನೆಯ ವಿಸರ್ಗವನ್ನು ಲೋಪಮಾಡಿಕೊಂಡು ಕನ್ನಡದ ಪ್ರಕೃತಿಗಳಾಗುತ್ತವೆ.**

| **ಪ್ರಥಮಾ ವಿಭಕ್ತಿ ಬಹುವಚನ ರೂಪ** | | **ವಿಕಾರ ರೂಪ** | **ಪ್ರಥಮಾ ವಿಭಕ್ತಿ ಬಹುವಚನ ರೂಪ** | | **ವಿಕಾರ ರೂಪ** |
|---|---|---|---|---|---|
| ವಿದ್ವಾಂಸಃ | – | ವಿದ್ವಾಂಸ | ಭಗವಂತಃ | – | ಭಗವಂತ |
| ಹನುಮಂತಃ | – | ಹನುಮಂತ | ಶ್ರೀಮಂತಃ | – | ಶ್ರೀಮಂತ |
| ಶ್ವಾನಃ | – | ಶ್ವಾನ | | | |

**(vii) ಸಂಸ್ಕೃತದ ಕೆಲವು ವ್ಯಂಜನಾಂತ ಶಬ್ದಗಳು ಆ ವ್ಯಂಜನದ ಮುಂದೆ, ಒಂದು 'ಅ' ಕಾರದೊಡನೆ ಅಂದರೆ ಅಕಾರಾಂತಗಳಾಗಿ ಕನ್ನಡದ ಪ್ರಕೃತಿಗಳಾಗುತ್ತವೆ.**

| **ವ್ಯಂಜನಾಂತ ಸಂಸ್ಕೃತ ಶಬ್ದ** | **ವಿಕಾರಗೊಂಡ ರೂಪ** | **ವ್ಯಂಜನಾಂತ ಸಂಸ್ಕೃತ ಶಬ್ದ** | **ವಿಕಾರಗೊಂಡ ರೂಪ** |
|---|---|---|---|
| ದಿವ್ | ದಿವ | ವೇದವಿದ್ | ವೇದವಿದ |
| ಚತುರ್ | ಚತುರ | ಸಂಪದ್ | ಸಂಪದ |
| ಬುಧ್ | ಬುಧ | ಮರುತ್ | ಮರುತ |
| ಕುಕುಭ್ | ಕುಕುಭ | ಗುಣಭಾಜ್ | ಗುಣಭಾಜ |

ಈ ಮೇಲೆ ಇದುವರೆಗೆ ಹೇಳಿದ ಸಂಸ್ಕೃತದಿಂದ ಕನ್ನಡಕ್ಕೆ ಬರುವ ಶಬ್ದಗಳು ಕೊನೆಯಲ್ಲಿ ಅಲ್ಪಸ್ವಲ್ಪ ವಿಕಾರಹೊಂದಿದ ಬಗೆಗೆ ಸ್ಥೂಲವಾಗಿ ತಿಳಿದಿದ್ದೀರಿ. ಇವನ್ನು ಅಲ್ಪಸ್ವಲ್ಪ ವಿಕಾರವನ್ನು ಕೊನೆಯಲ್ಲಿ ಹೊಂದಿದ ತದ್ಭವ ಶಬ್ದಗಳೆಂದು ಹೇಳಬೇಕು (ಇವನ್ನು ಕೆಲವರು ಸಮಸಂಸ್ಕೃತ ಎಂದೂ ಹೇಳುವರೆಂದು ಹಿಂದೆ ತಿಳಿಸಿದೆ).

ಈಗ ಶಬ್ದದ ಮೊದಲು, ಮಧ್ಯದಲ್ಲಿಯೂ ಹೆಚ್ಚಾಗಿ ವಿಕಾರ ಹೊಂದಿದ ಅನೇಕ ಶಬ್ದಗಳ ಸ್ಥೂಲ ಪರಿಚಯ ಮಾಡಿಕೊಳ್ಳೋಣ.

**(viii) ಸಂಸ್ಕೃತದಲ್ಲಿ ಶ, ಷ ಗಳನ್ನು ಹೊಂದಿರುವ ಶಬ್ದಗಳು ಕನ್ನಡದಲ್ಲಿ ಸಕಾರವಾಗಿರುವ, ಮತ್ತು ಯಕಾರಕ್ಕೆ ಜಕಾರ ಬಂದಿರುವ ತದ್ಭವ ಶಬ್ದಗಳು (ಕನ್ನಡ ಪ್ರಕೃತಿಗಳು) ಆಗುತ್ತವೆ.**

| **ಸಂಸ್ಕೃತ ರೂಪ** | **ವಿಕಾರ ರೂಪ** | **ಸಂಸ್ಕೃತ ರೂಪ** | **ವಿಕಾರ ರೂಪ** | **ಸಂಸ್ಕೃತ ರೂಪ** | **ವಿಕಾರ ರೂಪ** |
|---|---|---|---|---|---|
| ಶಶಿ | ಸಸಿ | ಔಷಧ | ಔಸದ | ಯೋಧ | ಜೋದ |
| ಶಂಕಾ | ಸಂಕೆ | ಶೇಷಾ | ಸೇಸೆ | ಯುದ್ಧ | ಜುದ್ದ |
| ಶಾಂತಿ | ಸಾಂತಿ | ಮಷಿ | ಮಸಿ | ಯವಾ | ಜವೆ |

| ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ |
|---|---|---|---|---|---|
| ಆಕಾಶ | (i) ಆಗಸ | ಪಾಷಾಣ | ಪಾಸಾಣ | ವಿದ್ಯಾ | ಬಿಜ್ಜೆ |
| | (ii) ಆಕಾಸ | ಯಶ | ಜಸ | ವಂಧ್ಯಾ | ಬಂಜೆ |
| ಶಿರ | ಸಿರ | ಯವನಿಕಾ | ಜವನಿಕೆ | ಧ್ಯಾನ | ಜಾನ |
| ಕಲಶ | ಕಳಸ | ಯಮ | ಜವ | ಯತಿ | ಜತಿ |
| ಶೂಲ | ಸೂಲ | ಕಾರ್ಯ | ಕಜ್ಜ | ಯಂತ್ರ | ಜಂತ್ರ |
| ಶುಚಿ | ಸುಚಿ | ಯೌವನ | ಜವ್ವನ | ಯುಗ | ಜುಗ |
| ಅಂಕುಶ | ಅಂಕುಸ | ಯಾತ್ರಾ | ಜಾತ್ರೆ | ಯುಗ್ಮ | ಜುಗುಮ |
| ಶುಂಠಿ | ಸುಂಟಿ | ಯೋಗಿನ್ | ಜೋಗಿ | ವಿದ್ಯಾಧರ | ಬಿಜ್ಜೋದರ |
| ಪಶು | ಪಸು | ರಾಶಿ | ರಾಸಿ | ಉದ್ಯೋಗ | ಉಜ್ಜುಗ |
| ಹರ್ಷ | ಹರುಸ | ಶಾಣ | ಸಾಣೆ | ಸಂಧ್ಯಾ | ಸಂಜೆ |
| ವರ್ಷ | ವರುಸ | ಪರಶು | ಪರಸು | ದ್ಯೂತ | ಜೂಜು |
| ಭಾಷಾ | ಬಾಸೆ | ದಿಶಾ | ದೆಸೆ | | |
| ವೇಷ | ವೇಸ | ದಶಾ | ದಸೆ | | |

**(ix) ವರ್ಗದ ಪ್ರಥಮಾಕ್ಷರಗಳಿಂದ ಕೂಡಿದ ಅನೇಕ ಸಂಸ್ಕೃತ ಶಬ್ದಗಳು ಅದೇ ವರ್ಗದ ಮೂರನೆಯ ವರ್ಣಗಳಾಗುತ್ತವೆ. ಅವು ಇಂಥ ಸ್ಥಾನದಲ್ಲಿಯೇ ಇರಬೇಕೆಂಬ ನಿಯಮವಿಲ್ಲ.**

| ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ |
|---|---|---|---|---|---|
| ಡಮರುಕ | ಡಮರುಗ | ಸೂಚಿ | ಸೂಜಿ | ಜಾತಿ | ಜಾದಿ |
| ಆಕಾಶ | ಆಗಸ | ವಚಾ | ಬಜೆ | ವಸತಿ | ಬಸದಿ |
| ದೀಪಿಕಾ | ದೀವಿಗೆ | ಕಟಕ | ಕಡಗ | ಚತುರ | ಚದುರ |
| ಮಲ್ಲಿಕಾ | ಮಲ್ಲಿಗೆ | ಅಟವಿ | ಅಡವಿ | ಭೂತಿ | ಬೂದಿ |
| ಪೈತೃಕ | ಹೈತಿಗೆ | ತಟ | ತಡ | ದೂತಿ | ದೂದಿ |

**(x) ಸಂಸ್ಕೃತದಲ್ಲಿ ಮಹಾಪ್ರಾಣಾಕ್ಷರಗಳಿಂದ ಕೂಡಿದ ಅನೇಕ ಅಕ್ಷರಗಳು ಅಲ್ಪಪ್ರಾಣಗಳಾಗಿ ಕನ್ನಡ ಪ್ರಕೃತಿಗಳಾಗುತ್ತವೆ.**

| ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ | ಸಂಸ್ಕೃತ ರೂಪ | ವಿಕಾರ ರೂಪ |
|---|---|---|---|---|---|
| ಛಂದ | ಚಂದ | ಘಟಕ | ಗಡಗೆ | ಧನ | ದನ |
| ಛಾಂದಸ | ಚಾಂದಸ | ಘೋಷಣಾ | ಗೋಸಣೆ | ಧೂಪ | ದೂಪ |
| ಛವಿ | ಚವಿ | ಗೋಷ್ಠಿ | ಗೊಟ್ಟಿ | ನಿಧಾನ | ನಿದಾನ |
| ಕಂಠಿಕಾ | ಕಂಟಿಕೆ | ಘೂಕ | ಗೂಗೆ | ಧೂಸರ | ದೂಸರ |
| ಶುಂಠಿ | ಸುಂಟಿ | ಅರ್ಘ | ಅಗ್ಗ | ಧೂಳಿ | ದೂಳಿ |
| ಫಾಲ | ಪಾಲ | ಝುಟತಿ | ಜಡಿತಿ | ವಿಧಿ | ಬಿದಿ |
| ಫಣಿ | ಪಣಿ | ಢಕ್ಕೆ | ಡಕ್ಕೆ | ಕುಸುಂಭ | ಕುಸುಬೆ |
| ಘಂಟಾ | ಗಂಟೆ | ರೂಢಿ | ರೂಡಿ | | |

**(xi) ಸಂಸ್ಕೃತದ ಕೆಲವು ಖಕಾರವುಳ್ಳ ಶಬ್ದಗಳು ಗಕಾರಗಳಾಗಿ ಛಕಾರದ ಒತ್ತಿನಿಂದ ಕೂಡಿದ ಅಕ್ಷರವು ಅಲ್ಪಪ್ರಾಣದ ಒತ್ತಿನಿಂದ ಕೂಡಿ ಠಕಾರವು ಡಕಾರವಾಗಿ, ಛಕಾರವು ಸಕಾರವಾಗಿಯೂ, ಥಕಾರವು ದಕಾರವಾಗಿಯೂ ಮತ್ತು ಟಕಾರವಾಗಿಯೂ, ಹಕಾರವಾಗಿಯೂ ರೂಪಾಂತರ ಹೊಂದಿ ಕನ್ನಡ ಪ್ರಕೃತಿಗಳಾಗುತ್ತವೆ.**

ಉದಾಹರಣೆಗಳು:

| ಖಕಾರ ಗಕಾರವಾಗುವುದಕ್ಕೆ | | ಛಕಾರವು ಸಕಾರವಾಗಿರುವುದಕ್ಕೆ | | ಠಕಾರ ಡಕಾರವಾದುದಕ್ಕೆ | |
|---|---|---|---|---|---|
| ಮುಖ | ಮೊಗ | ಛುರಿಕಾ | ಸುರಿಗೆ | ಕುಠಾರ | ಕೊಡಲಿ |
| ವೈಶಾಖ | ಬೇಸಗೆ | ಛತ್ರಿಕಾ | ಸತ್ತಿಗೆ | ಮಠ | ಮಡ |

| ಥಕಾರವು ದಕಾರವಾದುದಕ್ಕೆ | | ಥಕಾರವು ಟಕಾರವಾದುದಕ್ಕೆ | | ಥಕಾರವು ಹಕಾರವಾದುದಕ್ಕೆ | |
|---|---|---|---|---|---|
| ವೀಥಿ | ಬೀದಿ | ಗ್ರಂಥಿ | ಗಂಟು | ಗಾಥೆ | ಗಾಹೆ |

**ಛಕಾರದ ಒತ್ತಕ್ಷರವು ಅಲ್ಪಪ್ರಾಣದ ಒತ್ತಿನಿಂದ ಕೂಡಿದುದಕ್ಕೆ**

ಇಚ್ಛಾ ಇಚ್ಚೆ

**ಇನ್ನೂ ಅನೇಕ ವಿಕಾರ ರೂಪಗಳನ್ನು ಈ ಕೆಳಗೆ ಗಮನಿಸಿರಿ:–**

| ಸಂಸ್ಕೃತ ರೂಪ | – | ವಿಕಾರ ರೂಪ | ಸಂಸ್ಕೃತ ರೂಪ | – | ವಿಕಾರ ರೂಪ |
|---|---|---|---|---|---|
| ಕಪಿಲೆ | – | ಕವಿಲೆ | ಕುರುಂಟ | – | ಗೋರಟೆ |
| ತ್ರಿಪದಿ | – | ತಿವದಿ | ಮಾನುಷ್ಯ | – | ಮಾನಸ |
| ಪಿಶುನ | – | ಹಿಸುಣ | ಮರೀಚ | – | ಮೆಣಸು |
| ಪಿಪ್ಪಲಿ | – | ಹಿಪ್ಪಲಿ | ಅನ್ಯಾಯ | – | ಅನ್ನೆಯ |
| ಪಾದುಕಾ | – | ಹಾವುಗೆ | ಸಾಹಸ | – | ಸಾಸ |
| ಪರವಶ | – | ಹರವಸ | ಗಹನ | – | ಗಾನ |
| ಕಬಳ | – | ಕವಳ | ಕುಕ್ಕುಟ | – | ಕೋಳಿ |
| ಸಿಬಿಕಾ | – | ಸಿವಿಗೆ | ನಿಷ್ಠಾ | – | ನಿಟ್ಟೆ |
| ವಶಾ | – | ಬಸೆ | ಅಮೃತ | – | ಅಮರ್ದು |
| ವಂಚನಾ | – | ಬಂಚನೆ | ಅಂಗುಷ್ಠ | – | ಉಂಗುಟ |
| ವಸಂತ | – | ಬಸಂತ | ಪಿಷ್ಟ | – | ಹಿಟ್ಟು |
| ವೀಣಾ | – | ಬೀಣೆ | ಇಷ್ಟಕಾ | – | ಇಟ್ಟಿಗೆ |
| ವೀರ | – | ಬೀರ | ಕೂಷ್ಮಾಂಡ | – | ಕುಂಬಳ |
| ವಾಲ | – | ಬಾಲ | ದಾಡಿಮ | – | ದಾಳಿಂಬೆ |
| ಶ್ರವಣ | – | ಸವಣ | ತೃತೀಯಾ | – | ತದಿಗೆ |
| ಪ್ರಸರ | – | ಪಸರ | ಚತುರ್ಥೀ | – | ಚೌತಿ |
| ಪತಿವ್ರತೆ | – | ಹದಿಬದೆ | ವರ್ಧಮಾನ | – | ಬದ್ದವಣ (ಔಡಲ) |
| ವೇತ್ರ | – | ಬೆತ್ತ | | | |
| ಸೂತ್ರಿಕಾ | – | ಸುತ್ತಿಗೆ | ವಿನಾಯಕ | – | ಬೆನಕ |
| ವೃಷಭ | – | ಬಸವ | ಸುರಪರ್ಣೀ | – | ಸುರಹೊನ್ನೆ |
| ವ್ಯಾಘ್ರ | – | ಬಗ್ಗ | ಮರುವಕ | – | ಮರುಗ |
| ರಕ್ಷಾ | – | ರಕ್ಕೆ | ಸರ್ವ | – | ಸಬ್ಬ |
| ಪಕ್ಷ | – | ಪಕ್ಕ | ಶ್ರೀಖಂಡ | – | ಸಿರಿಕಂಡ |
| ಲಕ್ಷ | – | ಲಕ್ಕ | ವೀರಶ್ರೀ | – | ಬೀರಸಿರಿ |
| ಅಕ್ಷರ | – | ಅಕ್ಕರ | ಆಂದೋಲಿಕಾ | – | ಅಂದಣ |
| ಭಿಕ್ಷಾ | – | ಬಿಕ್ಕೆ | ಬಾಹುವಲಯ | – | ಬಾಹುಬಳೆ |
| ಕ್ಷಪಣ | – | ಸವಣ | ತ್ರಿಗುಣ | – | ತಿಗುಣ |
| ಕ್ಷಾರ | – | ಕಾರ | ತ್ರಿವಳಿ | – | ತಿವಳಿ |
| ಯಮಳ | – | ಜವಳ | ವಲ್ಲಿ | – | ಬಳ್ಳಿ |

| ಸಂಸ್ಕೃತ ರೂಪ | – | ವಿಕಾರ ರೂಪ | ಸಂಸ್ಕೃತ ರೂಪ | – | ವಿಕಾರ ರೂಪ |
|---|---|---|---|---|---|
| ಚರ್ಮ | – | ಸಮ್ಮ | ವಸತಿ | – | ಬಸದಿ |
| ಚರ್ಮಕಾರ | – | ಸಮ್ಮಕಾರ | ಶೀರ್ಷಕ | – | ಸೀಸಕ |
| ಶಿಲ್ಪಿಗ | – | ಚಿಪ್ಪಿಗ | ವರ್ತಿ | – | ಬತ್ತಿ |
| ಶಷ್ಕುಲಿ | – | ಚಕ್ಕುಲಿ | ಕರ್ತರಿ | – | ಕತ್ತರಿ |
| ಹಂಸ | – | ಅಂಚೆ | ಶರ್ಕರಾ | – | ಸಕ್ಕರೆ |
| ತುಳಸಿ | – | ತೊಳಚಿ | ಕರ್ಕಶ | – | ಕಕ್ಕಸ |
| ಕಾಂಸ್ಯ | – | ಕಂಚು | ರಾಕ್ಷಸ | – | ರಕ್ಕಸ |
| ನಿತ್ಯ | – | ನಿಚ್ಚ | ಅರ್ಕ | – | ಎಕ್ಕ |
| ವಿಸ್ತಾರ | – | ಬಿತ್ತರ | ದ್ರೋಣಿ | – | ದೋಣಿ |
| ವ್ಯವಸಾಯ | – | ಬೇಸಾಯ | ಭ್ರಮರ | – | ಬವರ |
| ಶಯ್ಯಾ | – | ಸಜ್ಜೆ | ಪ್ರಭಾ | – | ಹಬೆ |
| ಜಟಾ | – | ಜಡೆ | ಪ್ರಣಿತೆ | – | ಹಣತೆ |
| ತೈಲಿಕ | – | ತೆಲ್ಲಿಗ | ಪುಸ್ತಕ | – | ಹೊತ್ತಗೆ |
| ಇಳಾ | – | ಎಳೆ | ಕುಸ್ತುಂಬರ | – | ಕೊತ್ತುಂಬರಿ |
| ಸ್ಪರ್ಶ | – | ಪರುಸ | ಬ್ರಹ್ಮ | – | ಬೊಮ್ಮ |
| ಸ್ಫಟಿಕ | – | ಪಳಿಗೆ | ರತ್ನ | – | ರನ್ನ |
| ಶ್ಮಶಾನ | – | ಮಸಣ | ಪ್ರಜ್ವಲ | – | ಪಜ್ಜಳ |
| ತಾಂಬೂಲ | – | ತಂಬುಲ | ಬಿಲ್ವಪತ್ರ | – | ಬೆಲ್ಲವತ್ತ |
| ಆರಾಮ | – | ಅರವೆ | ಕನ್ಯಕಾ | – | ಕನ್ನಿಕೆ |
| ಬಂಧೂಕ | – | ಬಂದುಗೆ | ಮೃತ್ಯು | – | ಮಿಳ್ತು |
| ಗೋಧೂಮ | – | ಗೋದುವೆ | ಕಾವ್ಯ | – | ಕಬ್ಬ |
| ಬರ್ಭೂರ | – | ಬೊಬ್ಬುಳಿ | ದಂಷ್ಟ್ರ | – | ದಾಡೆ |
| ಪ್ರಯಾಣ | – | ಪಯಣ | ಕಹಳಾ | – | ಕಾಳೆ |
| ದ್ವಿತೀಯಾ | – | ಬಿದಿಗೆ | ಋಷಿ | – | ರಿಸಿ |
| ಅಶೋಕ | – | ಅಸುಗೆ | ಮೃಗ | – | ಮಿಗ |
| ಉದ್ಯೋಗ | – | ಉಜ್ಜುಗ | ಭೃಂಗಾರ | – | ಬಿಂಗಾರ |
| ಸಂಜ್ಞಾ | – | ಸನ್ನೆ | ಪ್ರಗ್ರಹ | – | ಹಗ್ಗ |
| ಯಜ್ಞಾ | – | ಜನ್ನ | ಆಶ್ಚರ್ಯ | – | ಅಚ್ಚರಿ |
| ಕ್ರೌಂಚ | – | ಕೊಂಚೆ | ಸ್ವರ್ಗ | – | ಸಗ್ಗ |

| ಸಂಸ್ಕೃತ ರೂಪ | – | ವಿಕಾರ ರೂಪ | ಸಂಸ್ಕೃತ ರೂಪ | – | ವಿಕಾರ ರೂಪ |
|---|---|---|---|---|---|
| ಸುಧಾ | – | ಸೊದೆ | ಜ್ಯೋತಿಷ | – | ಜೋಯಿಸ |
| ಭುಜಂಗ | – | ಬೊಜಂಗ | ಅಮಾವಾಸ್ಯಾ | – | ಅಮಾಸೆ |
| ಕೌಪೀನ | – | ಕೋವಣ | ಧ್ವನಿ | – | ದನಿ |
| ಮಯೂರ | – | ಮೋರ | ಜ್ವರ | – | ಜರ |
| ಗೂರ್ಜರ | – | ಗುಜ್ಜರ | ಸರಸ್ವತಿ | – | ಸರಸತಿ |
| ಆರ್ಯ | – | ಅಜ್ಜ | ವರ್ಧಕಿ | – | ಬಡಗಿ |
| ವ್ಯವಹಾರ | – | ಬೇಹಾರ | ಕಾಷ್ಠ | – | ಕಡ್ಡಿ |
| ನಿಯಮ | – | ನೇಮ | ಚತುರ್ದಂತ | – | ಚೌದಂತ |
| ಪತ್ತನ | – | ಪಟ್ಟಣ | ದೃಷ್ಟಿ | – | ದಿಟ್ಟಿ |
| ಅತಸೀ | – | ಅಗಸೆ | ದಿಶಾಬಲಿ | – | ದೆಸೆಬಲಿ |
| ತ್ವರಿತ | – | ತುರಿಹ | ಏಕಶರ | – | ಎಕ್ಕಸರ |
| ಆಜ್ಞೆ | – | ಆಣೆ | ಚತುಷ್ಕ | – | ಚೌಕ |
| ಶಾಣ | – | ಸಾಣೆ | ಚತುರ್ವೇದಿ | – | ಚೌವೇದಿ |
| ಜೀರಿಕಾ | – | ಜೀರಿಗೆ | ಸಹದೇವ | – | ಸಾದೇವ |
| ವಿಜ್ಞಾನ | – | ಬಿನ್ನಣ | ಸಹವಾಸಿ | – | ಸಾವಾಸಿ |
| ಕಲಮಾ | – | ಕಳವೆ | ಮಹಾಪಾತಕ | – | ಮಾಪಾತಕ |
| ಕಂಬಲ | – | ಕಂಬಳಿ | ಪಂಜರಪಕ್ಷಿ | – | ಹಂಜರವಕ್ಕಿ |
| ಅರ್ಗಲ | – | ಅಗುಳಿ | ದಿಶಾಬಲಿ | – | ದೆಸೆವಲಿ |
| ಕುದ್ದಾಲ | – | ಗುದ್ದಲಿ | ರತ್ನಮಣಿ | – | ರನ್ನವಣಿ |
| ದ್ಯೂತ | – | ಜೂಜು | ಅಂತಃಪುರ | – | ಅಂತಪುರ |
| ಗ್ರಂಥಿ | – | ಗಂಟು | ಅಚ್ಚಮಲ್ಲಿಕಾ | – | ಅಚ್ಚಮಲ್ಲಿಗೆ |
| ಕುಕ್ಷಿ | – | ಕುಕ್ಕೆ | ಅಕ್ಷರಮಾಲಾ | – | ಅಕ್ಕರಮಾಲೆ |
| ಚರ್ಮಪಟ್ಟಿಕಾ | – | ಚಮ್ಮಟಿಗೆ | ಕ್ಷೀರಾಗಾರಾ | – | ಕೀಲಾರ |
| ದೇವಕುಲ | – | ದೇಗುಲ | ಗೂಢಾಗಾರ | – | ಗೂಡಾರ |
| ದೀಪಾವಳಿಕಾ | – | ದೀವಳಿಗೆ | | | |

ಹೀಗೆ ಅನೇಕ ಸಂಸ್ಕೃತ–ಪ್ರಾಕೃತ ಭಾಷಾಶಬ್ದಗಳು ಕನ್ನಡಕ್ಕೆ ಬರುವಾಗ ರೂಪಾಂತರ ಹೊಂದಿ ಬರುವುದನ್ನು ಇದುವರೆಗೆ ಸ್ಥೂಲವಾಗಿ ಹೇಳಲಾಗಿದೆ.

ಇದುವರೆಗೆ ಸಂಸ್ಕೃತದ ಅನೇಕ ಶಬ್ದಗಳು ರೂಪಾಂತರ ಹೊಂದಿ ಕನ್ನಡಕ್ಕೆ ಬಂದ ಬಗೆಗೆ ತಿಳಿದಿರುವಿರಿ. ಕನ್ನಡದ ಅನೇಕ ಶಬ್ದಗಳು ಕಾಲಕಾಲಕ್ಕೆ ರೂಪಾಂತರ ಹೊಂದಿವೆ.

ಹಳೆಗನ್ನಡದ ಅನೇಕ ಶಬ್ದಗಳು ಈಗಿನ ಕನ್ನಡದಲ್ಲಿ (ಹೊಸಗನ್ನಡದಲ್ಲಿ) ರೂಪಾಂತರ ಹೊಂದಿ ಪ್ರಯೋಗವಾಗುತ್ತಿವೆ. ಅವುಗಳ ಬಗೆಗೆ ಈಗ ಸ್ಥೂಲವಾಗಿ ಮುಖ್ಯವಾದ ಕೆಲವು ಅಂಶಗಳನ್ನು ನೀವು ಅವಶ್ಯ ತಿಳಿಯಬೇಕು.

**(1) ಪಕಾರಾದಿಯಾದ ಅನೇಕ ಶಬ್ದಗಳು ಹಕಾರಾದಿಯಾಗುತ್ತವೆ.**

| ಹಳಗನ್ನಡ | – | ಹೊಸಗನ್ನಡ | ಹಳಗನ್ನಡ | – | ಹೊಸಗನ್ನಡ |
|---|---|---|---|---|---|
| ಪಾಲ್ | – | ಹಾಲು | ಪಂಬಲಿಸು | – | ಹಂಬಲಿಸು |
| ಪಾವ್ | – | ಹಾವು | ಪಣೆ | – | ಹಣೆ |
| ಪಾಸು | – | ಹಾಸು | ಪರಡು | – | ಹರಡು |
| ಪರಿ | – | ಹರಿ | ಪರದ | – | ಹರದ |
| ಪರ್ಬು | – | ಹಬ್ಬು | ಪಲವು | – | ಹಲವು |
| ಪೊರಳ್ | – | ಹೊರಳು | ಪಲ್ಲಿಲಿ | – | ಹಲ್ಲಿಲ್ಲದ |
| ಪೊಳೆ | – | ಹೊಳೆ | ಪಲ್ಲಿಲಿವಾಯ್ | – | ಹಲ್ಲಿಲದ ಬಾಯಿ |
| ಪೊರೆ | – | ಹೊರೆ | ಪವ್ವನೆ | – | ಹವ್ವನೆ |
| ಪೂ | – | ಹೂ | ಪಳ್ಳ | – | ಹಳ್ಳ |
| ಪನಿ | – | ಹನಿ | ಪಕ್ಕಿ | – | ಹಕ್ಕಿ |
| ಪಿಂಡು | – | ಹಿಂಡು | ಪಗೆ | – | ಹಗೆ |
| ಪತ್ತು | – | ಹತ್ತು | ಪೊರಮಡು | | ಹೊರಹೊರಡು |
| ಪುಲಿ | – | ಹುಲಿ | ಪೆರ್ಚು | – | ಹೆಚ್ಚು |
| ಪಣ್ | – | ಹಣ್ಣು | ಪುಗು | – | ಹುಗು |
| ಪಂದೆ | – | ಹಂದೆ | ಪೊಗು | – | ಹೊಗು |
| ಪಂದರ | – | ಹಂದರ | ಪಿಂಗು | – | ಹಿಂಗು |
| ಪಗಲ್ | – | ಹಗಲು | ಪಿಂತೆ | – | ಹಿಂದೆ |
| ಪಂದಿ | – | ಹಂದಿ | ಪಳಿ | – | ಹಳಿ |
| ಪಂದೆ | – | ಹಂದೆ | ಪೋಳ್ | – | ಹೋಳು |
| ಪೊಸ | – | ಹೊಸ | ಪಲ್ಲಿ | – | ಹಲ್ಲಿ |
| ಪೋಗು | – | ಹೋಗು | ಪಲ್ | – | ಹಲ್ಲು |
| ಪರ್ಚು | – | ಹಂಚು | ಪಸಿ | – | ಹಸಿ |
| ಪರಸು | – | ಹರಸು | ಪಸುರ್ | – | ಹಸುರು |
| ಪೀರ್ | – | ಹೀರು | ಪಾಡು | – | ಹಾಡು |
| ಪುದುಗು | – | ಹುದುಗು | ಪುರ್ಬು | – | ಹುಬ್ಬು |
| ಪಿರಿಯ | – | ಹಿರಿಯ | ಪರ್ಬು | – | ಹಬ್ಬು |

| **ಹಳಗನ್ನಡ** | **–** | **ಹೊಸಗನ್ನಡ** | **ಹಳಗನ್ನಡ** | **–** | **ಹೊಸಗನ್ನಡ** |
|---|---|---|---|---|---|
| ಪದುಳ | – | ಹದುಳ | ಪೆರ್ಮೆ | – | ಹೆಮ್ಮೆ |
| ಪರ್ದು | – | ಹದ್ದು | ಪಿರಿದು | – | ಹಿರಿದು |
| ಪರ್ಬುಗೆ | – | ಹಬ್ಬುವಿಕೆ | | | |

ಮೇಲಿನ ಉದಾಹರಣೆಗಳಲ್ಲಿ ಕೆಲವು ಕಡೆ ಅಂತ್ಯದಲ್ಲಿರುವ **ಲ್ ವ್** ಎಂಬ ವ್ಯಂಜನಾಂತ ಶಬ್ದಗಳು ಉಕಾರಾಂತಗಳಾಗಿರುವುದನ್ನು ಗಮನಿಸಿರಿ. (ಉದಾ:– **ಪಾಲ್–ಹಾಲು, ಪಾವ್–ಹಾವು__**ಇತ್ಯಾದಿ)

ಈಗ ಕೊನೆಯ ವ್ಯಂಜನಗಳು ಯಾವ ಯಾವ ವ್ಯತ್ಯಾಸ ಹೊಂದುತ್ತವೆಂಬುದನ್ನು ತಿಳಿಯಿರಿ.

**(2) ನ, ಣ, ಲ, ರ, ಳ ವ್ಯಂಜನಗಳು ಅಂತ್ಯದಲ್ಲಿ ಉಳ್ಳ ಕೆಲವು ಶಬ್ದಗಳು ಉಕಾರಾಂತಗಳಾಗುತ್ತವೆ. ಕೆಲವು ಇದೇ ಇನ್ನೊಂದು ವ್ಯಂಜನದಿಂದ ಕೂಡಿ ದ್ವಿತ್ವ (ಒತ್ತಕ್ಷರ) ಗಳೆನಿಸುತ್ತವೆ. ಯಕಾರಾಂತಗಳು ಇಕಾರಾಂತಗಳಾಗುತ್ತವೆ ಮತ್ತು ದ್ವಿತ್ವವುಳ್ಳ ವುಗಳಾಗುತ್ತವೆ.**

ಉದಾಹರಣೆಗೆ:–

**(i) ನಕಾರಾಂತವು ಉಕಾರಾಂತವಾಗುವುದಕ್ಕೆ ಮತ್ತು ದ್ವಿತ್ವದೊಡನೆ ಉಕಾರಾಂತ ವಾಗುವುದಕ್ಕೆ:–**

| | |
|---|---|
| ನಾನ್– ನಾನು | ನೀನ್–ನೀನು |
| ಏನ್–ಏನು | ಅವನ್–ಅವನು |
| ಆನ್–ಆನು | ತಿನ್–ತಿನ್ನು |
| ಸೀನ್–ಸೀನು | ಪೊನ್–ಪೊನ್ನು (ಹೊನ್ನು) |
| ತಾನ್–ತಾನು | ಎನ್–ಎನ್ನು |

**(ii) ಣಕಾರಾಂತಗಳು ಉಕಾರಾಂತವಾಗುವುದಕ್ಕೆ ಮತ್ತು ದ್ವಿತ್ವದಿಂದ ಕೂಡಿದ ಉಕಾರಾಂತಗಳಾಗುವುದಕ್ಕೆ:–**

| | | |
|---|---|---|
| ಕಣ್–ಕಣ್ಣು | ಪುಣ್–ಹುಣ್ಣು | ಪೆಣ್–ಹೆಣ್ಣು |
| ಉಣ್–ಉಣ್ಣು | ಪಣ್–ಹಣ್ಣು | ಕಾಣ್–ಕಾಣು |
| ಮಣ್–ಮಣ್ಣು | ಮಾಣ್–ಮಾಣು | |

**(iii) ಲಕಾರಂತ ಶಬ್ದಗಳು ದ್ವಿತ್ವದಿಂದ ಕೂಡಿ ಉಕಾರಾಂತವಾಗುವುದಕ್ಕೆ ಮತ್ತು ದ್ವಿತ್ವವಿಲ್ಲದೆ ಉಕಾರಾಂತಗಳಾಗುವುದಕ್ಕೆ**

| | | | | | | | | |
|---|---|---|---|---|---|---|---|---|
| ಬಿಲ್ | – | ಬಿಲ್ಲು | ಅರಲ್ | – | ಅರಲು | ಸೊಲ್ | – | ಸೊಲ್ಲು |
| ನಿಲ್ | – | ನಿಲ್ಲು | ಸೋಲ್ | – | ಸೋಲು | ಕಾಲ್ | – | ಕಾಲು |
| ಕಲ್ | – | ಕಲ್ಲು | ಒರಲ್ | – | ಒರಲು | ಪಾಲ್ | – | ಪಾಲು |
| ಪುಲ್ | – | ಹುಲ್ಲು | ಜೋಲ್ | – | ಜೋಲು | ಸಿಡಿಲ್ | – | ಸಿಡಿಲು |
| ಕೊಲ್ | – | ಕೊಲ್ಲು | ನೂಲ್ | – | ನೂಲು | ಅರಿಲ್ | – | ಅರಿಲು |
| ಮಡಿಲ್ | – | ಮಡಿಲು | ಪೋಲ್ | – | ಪೋಲು | ನರಲ್ | – | ನರಲು |
| ಬಳಲ್ | – | ಬಳಲು | ಚಲ್ | – | ಚಲ್ಲು | | | |

**(iv) ಳಕಾರಾಂತಗಳಾದ ಶಬ್ದಗಳು ಉಕಾರಾಂತಗಳಾಗುವುದಕ್ಕೆ ಮತ್ತು ಇನ್ನೊಂದು ಳಕಾರದೊಡನೆ ಉಕಾರಾಂತಗಳಾಗುವುದಕ್ಕೆ**

| | | | | | | | | |
|---|---|---|---|---|---|---|---|---|
| ಮರಳ್ | – | ಮರಳು | ಉಗುಳ್ | – | ಉಗುಳು | ಉರುಳ್ | – | ಉರುಳು |
| ಮರುಳ್ | – | ಮರುಳು | ತಳ್ | – | ತಳ್ಳು | ಪೊರಳ್ | – | ಪೊರಳು |
| ಸೀಳ್ | – | ಸೀಳು | ಮುಳ್ | – | ಮುಳ್ಳು | ನುಸುಳ್ | – | ನುಸುಳು |
| ತಾಳ್ | – | ತಾಳು | ಜೊಳ್ | – | ಜೊಳ್ಳು | ಕೂಳ್ | – | ಕೂಳು |
| ಮುಸುಳ್ | – | ಮುಸುಳು | ಪುರುಳ್ | – | ಹುರುಳು | ಕೇಳ್ | – | ಕೇಳು |
| ಒರಳ್ | – | ಒರಳು | ಆಳ್ | – | ಆಳು | ಪಾಳ್ | – | ಹಾಳು |
| ಅರಳ್ | – | ಅರಳು | ಬಗುಳ್ | – | ಬಗುಳು | ಕಳ್ | – | ಕಳ್ಳು |
| ಬಾಳ್ | – | ಬಾಳು | | | (ಬೊಗಳು) | ಕೊಳ್ | – | ಕೊಳ್ಳು |

**(v) ರಕಾರಾಂತಗಳಾದ ಶಬ್ದಗಳು ಉಕಾರಾಂತಗಳಾಗುವುದಕ್ಕೆ**

| | |
|---|---|
| ನಾರ್–ನಾರು | ಬಸಿರ್–ಬಸಿರು |
| ಕಾರ್–ಕಾರು | ತಳಿರ್–ತಳಿರು |
| ಸೋರ್–ಸೋರು | ಮೊಸರ್–ಮೊಸರು |
| ಸೇರ್–ಸೇರು | ಬೆಮರ್–ಬೆವರು (ಬೆಮರು) |
| ತೆಮರ್–ತೆವರು | ಉಸಿರ್–ಉಸಿರು |

**(vi) ಯಕಾರಾಂತ ಶಬ್ದಗಳು ಇಕಾರಾಂತ ಮತ್ತು ದ್ವಿತ್ವದಿಂದ ಕೂಡಿದ ಇಕಾರಾಂತ ಗಳಾಗುವುದಕ್ಕೆ**

| | | |
|---|---|---|
| ತಾಯ್–ತಾಯಿ | ಕಾಯ್–ಕಾಯಿ | ಬಯ್–ಬಯ್ಯಿ |
| ನಾಯ್–ನಾಯಿ | ಕಯ್–ಕಯ್ಯಿ | ಪೊಯ್–ಪೊಯ್ಯಿ |
| ಸಾಯ್–ಸಾಯಿ | ಮೆಯ್–ಮೆಯ್ಯಿ | ನೆಯ್–ನೆಯ್ಯಿ |

**(vii) ಅನುಸ್ವಾರದಿಂದ ಕೂಡಿದ ಎಷ್ಟೋ ಶಬ್ದಗಳು ಅದಿಲ್ಲದೆ ಹೊಸಗನ್ನಡದಲ್ಲಿ ರೂಪಾಂತರವಾಗಿವೆ.**

| | | |
|---|---|---|
| ತೋಂಟ–ತೋಟ | ನೊರಂಜು–ನೊರಜು | ಸಿಡುಂಬು–ಸಿಡುಬು |
| ಕುಸುಂಬೆ–ಕುಸುಬೆ | ತುಳುಂಕು–ತುಳುಕು | ಸೇಂದು–ಸೇದು |
| ಪೊಸಂತಿಲ್–ಹೊಸತಿಲು | ಬಣಂಜಿಗ–ಬಣಜಿಗ | ಕರಂಡಗೆ–ಕರಡಗೆ |
| ಬಣಂಬೆ–ಬಣವೆ | ತುರುಂಬು–ತುರುಬು | ಜಿನುಂಗು–ಜಿನುಗು |
| ಕೊಡಂತಿ–ಕೊಡತಿ | ನಾಂದು–ನಾದು | ಮುಸುಂಕು–ಮುಸುಗು |
| ಕವುಂಕುಳ್–ಕಂಕುಳ | ಪಲುಂಬು–ಹಲುಬು | ಸೆರೆಂಗು–ಸೆರಗು |
| ಒರಂತೆ–ಒರತೆ | ಮೀಂಟು–ಮೀಟು | ಬೆಡಂಗು–ಬೆಡಗು |
| ತೋಂಟಿಗ–ತೋಟಿಗ | | |

**(viii) ಇನ್ನೂ ಕೆಲವು ರೂಪಾಂತರಗಳನ್ನು ನೋಡಿರಿ.**

| | |
|---|---|
| ಕಳ್ತೆ[36]–ಕರ್ತೆ–ಕತ್ತೆ | ಎಳ್ನೆಯ್–ಎಣ್ಣೆ |
| ಗಳ್ದೆ–ಗರ್ದೆ–ಗದ್ದೆ | ಬೆಳ್ನೆಯ್–ಬೆಣ್ಣೆ |
| ಪೊಳ್ತು–ಪೊತ್ತು–ಹೊತ್ತು | ಕಾಣ್ಕೆ–ಕಾಣಿಕೆ |
| ಅಪ್ಪುದು–ಅಹುದು–ಹೌದು | ಪೂಣ್ಕೆ–ಪೂಣಿಕೆ (ಹೂಣಿಕೆ) |
| ತನತ್ತು–ತನ್ನತು–ತನ್ನ | ಬಳಲ್ಕೆ–ಬಳಲಿಕೆ |
| ನಿನತ್ತು–ನಿನ್ನತು–ನಿನ್ನ | ಒರ್ಮೆ–ಒಮ್ಮೆ |
| ಎನಿತ್ತು–ಎನಿತು, ಎಸುಟು–ಎಷ್ಟು | ನುರ್ಗು–ನುಗ್ಗು |
| ಅನಿತ್ತು–ಅನಿತು, ಅಸುಟು–ಅಷ್ಟು | ತರ್ಗು–ತಗ್ಗು |
| ಚುರ್ಚು–ಚುಚ್ಚು | ಗುರ್ದು–ಗುದ್ದು |
| ಕರ್ಚು–ಕಚ್ಚು | ಪರ್ದು–ಹದ್ದು |
| ಬಿರ್ದು–ಬಿದ್ದು | ತೋರ್ಪ–ತೋರುವ |

---

[36] ಇಲ್ಲಿಯ ಳಕಾರವು ರಳಾಕ್ಷರವಾದರೂ ಹಾಗೆ ಬರೆದಿಲ್ಲ. ರಳ ಮತ್ತು ಕುಳಗಳ ನಿಯಮವನ್ನಾಗಲಿ, ಶಕಟರೇಫ ನಿಯಮವನ್ನಾಗಲಿ ಎಲ್ಲಿಯೂ ಪಾಲಿಸಿಲ್ಲ. ವಿದ್ಯಾರ್ಥಿಗಳ ದೃಷ್ಟಿಯಿಂದ ಅಷ್ಟೊಂದು ಸೂಕ್ಷ್ಮವಾಗಿ ವಿಚಾರ ಮಾಡದೆ ಸ್ಥೂಲವಾಗಿ ಹೇಳುವುದೇ ಮುಖ್ಯೋದ್ದೇಶ.

| | |
|---|---|
| ಉರ್ದು–ಉದ್ದು | ಕಾರ್ದ–ಕಾರಿದ |
| ಇರ್ಪ–ಇರುವ | ಅಲ್ಲಂ–ಅಲ್ಲ |
| ಪೀರ್ದಂ–ಹೀರಿದನು | ತಣ್ಣು–ತಂಪು |
| ಸೇರ್ದಂ–ಸೇರಿದನು | ತೆಳು–ತಿಳುವು |
| ಕರ್ಪು–ಕಪ್ಪು | ನೇರ್ಪು–ನೇರ |
| ಕೆರ್ಪು–ಕೆರ | ಕಲ್ತು–ಕಲಿತು |
| ಬೆಳ್ಪು–ಬಿಳುಪು | |

* * * * *

# ಅಧ್ಯಾಯ ೪

# ನಾಮಪದ* ಪ್ರಕರಣ

## (ನಾಮಪದ–ನಾಮಪ್ರಕೃತಿ–ನಾಮವಿಭಕ್ತಿಪ್ರತ್ಯಯ)

## I – ನಾಮಪದ

ನಾವು ಮಾತನಾಡುವ ಮಾತುಗಳಲ್ಲಿ ಅನೇಕ ಬಗೆಯ ಶಬ್ದಗಳಿರುತ್ತವೆ. ಆ ಶಬ್ದಗಳಿಗೆ ನಾವು ಬೇರೆ ಬೇರೆ ಹೆಸರು ಕೊಟ್ಟಿರುತ್ತೇವೆ. ಅಂದರೆ ಒಂದೊಂದು ಜಾತೀಯ ಶಬ್ದಗಳನ್ನು ಒಂದೊಂದು ಗುಂಪು ಮಾಡಿ ವ್ಯಾಕರಣದಲ್ಲಿ ಹೇಳುತ್ತೇವೆ. ಉದಾಹರಣೆಗೆ ಈ ಕೆಳಗಿನ ಮಾತುಗಳಲ್ಲಿಯ ಶಬ್ದಗಳನ್ನು ನೋಡಿರಿ.

1. ಆತನು ಮನೆಯನ್ನು ಚೆನ್ನಾಗಿ ಕಟ್ಟಿದನು.
2. ಒಕ್ಕಲಿಗರು ಕಷ್ಟದಿಂದ ಬೆಳೆಯನ್ನು ಬೆಳೆಯುವರು.

ಈ ವಾಕ್ಯಗಳಲ್ಲಿ:–

೧. **ಆತನು, ಮನೆಯನ್ನು, ಒಕ್ಕಲಿಗರು, ಕಷ್ಟದಿಂದ, ಬೆಳೆಯನ್ನು**–ಇವೆಲ್ಲ ನಾಮಪದಗಳು.
೨. **ಕಟ್ಟಿದನು, ಬೆಳೆಯುವರು**–ಇವು ಕ್ರಿಯಾಪದಗಳು.
೩. **ಚೆನ್ನಾಗಿ**–ಎಂಬುದು ಅವ್ಯಯ.

ಹೀಗೆ ನಾವು ಆಡುವ ಮಾತುಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ಮಾಡುತ್ತೇವೆ.
(೧) **ನಾಮಪದ** (೨) **ಕ್ರಿಯಾಪದ** (೩) **ಅವ್ಯಯ**–ಇವೇ ಆ ಮೂರು ಗುಂಪುಗಳು.

| | |
|---|---|
| ಮನೆಯನ್ನು | ಮನೆಯದೆಸೆಯಿಂದ |
| ಮನೆಯಿಂದ | ಮನೆಯ |
| ಮನೆಗೆ | ಮನೆಯಲ್ಲಿ |

ಇವೆಲ್ಲ '**ನಾಮಪದ**'ಗಳು. ಈ ಪದಗಳಲ್ಲೆಲ್ಲ '**ಮನೆ**' ಎಂಬುದು ಮೂಲರೂಪ. ಈ ಮೂಲರೂಪವಾದ '**ಮನೆ**' ಎಂಬ ಶಬ್ದವನ್ನು ನಾಮಪದದ ಮೂಲರೂಪ ಅಥವಾ '**ನಾಮಪ್ರಕೃತಿ**' ಎನ್ನುತ್ತೇವೆ.

**ಕಟ್ಟಿದನು‡, ಕಟ್ಟುವನು, ಕಟ್ಟುತ್ತಾನೆ, ಕಟ್ಟಿದರು, ಕಟ್ಟನು, ಕಟ್ಟುವಳು, ಕಟ್ಟಲಿ**–ಇವೆಲ್ಲ ಕ್ರಿಯಾಪದಗಳು. ಇವುಗಳಿಗೆ ಮೂಲರೂಪ, '**ಕಟ್ಟು**' ಎಂಬುದು. ಈ '**ಕಟ್ಟು**' ಎಂಬ ಮೂಲರೂಪವು ಕ್ರಿಯಾಪದದ ಮೂಲರೂಪ. ಇದಕ್ಕೆ '**ಧಾತು**' ಎಂಬ ಇನ್ನೊಂದು ಹೆಸರುಂಟು.

---

* 'ನಾಮ' ವೆಂದರೆ ವಸ್ತುಗಳ ಹೆಸರುಗಳು.

‡ ಕ್ರಿಯೆಯನ್ನು ಹೇಳುವುದೇ ಕ್ರಿಯಾಪದವೆನಿಸುವುದು.

**ಚೆನ್ನಾಗಿ, ನೆಟ್ಟಗೆ, ಮೆಲ್ಲಗೆ** ಮತ್ತು **ಆದರೆ**–ಇಂಥ ಕೆಲವು ಶಬ್ದಗಳು ಭಾಷೆಯಲ್ಲಿ ಬರುತ್ತವೆ. ಇವುಗಳು ಒಂದೇ ರೂಪವಾಗಿರುತ್ತವೆ. ನಾಮಪದ ಕ್ರಿಯಾಪದಗಳಂತೆ ಬೇರೆ ಬೇರೆ ರೂಪವನ್ನು ಹೊಂದುವುದಿಲ್ಲ. ಇವು ಬೇರಾವ ಮೂಲರೂಪದಿಂದಲೂ ಹುಟ್ಟಿಲ್ಲ. ಇವೇ ಮೂಲರೂಪಗಳು. ಇವುಗಳನ್ನು **ಅವ್ಯಯ**ವೆಂದು ಕರೆಯಬಹುದು.

ಹೀಗೆ ನಾವಾಡುವ ಮಾತುಗಳು, ಪದದ ಮೂರು ಗುಂಪುಗಳಾದ **ನಾಮಪದಗಳು, ಕ್ರಿಯಾಪದಗಳು ಇಲ್ಲವೆ ಅವ್ಯಯಗಳಾಗಿರುತ್ತವೆ;** ಇವುಗಳಲ್ಲಿ ಈಗ ನಾಮಪದಗಳ ವಿಚಾರವಾಗಿ ತಿಳಿಯೋಣ.

'**ಪದ**' ಎಂದರೆ ಮೂಲರೂಪ ಪ್ರಕೃತಿವೊಂದಕ್ಕೆ ಪ್ರತ್ಯಯ ಹತ್ತಿದ ರೂಪ. ಈ ಕೆಳಗೆ ನೋಡಿರಿ:–

| **ನಾಮ ಪ್ರಕೃತಿ** | **+** | **ನಾಮವಿಭಕ್ತಿಪ್ರತ್ಯಯ** | **=** | **ನಾಮಪದ** |
|---|---|---|---|---|
| ಮನೆ | + | ಉ | = | ಮನೆಯು |
| ಕಲ್ಲು | + | ಅನ್ನು | = | ಕಲ್ಲನ್ನು |
| ಹೊಲ | + | ಇಂದ | = | ಹೊಲದಿಂದ |
| ನೆಲ | + | ಕ್ಕೆ | = | ನೆಲಕ್ಕೆ |
| ಶಾಲೆ | + | ಅಲ್ಲಿ | = | ಶಾಲೆಯಲ್ಲಿ |

ಇಲ್ಲಿ **ಮನೆ, ಕಲ್ಲು, ಹೊಲ, ನೆಲ, ಶಾಲೆ**–ಮೊದಲಾದವು ನಾಮಪ್ರಕೃತಿಗಳು. **ಉ, ಅನ್ನು, ಇಂದ, ಕ್ಕೆ, ಅಲ್ಲಿ**–ಇವೆಲ್ಲ ನಾಮವಿಭಕ್ತಿಪ್ರತ್ಯಯಗಳು. **ಮನೆಯು, ಕಲ್ಲನ್ನು, ಹೊಲದಿಂದ, ನೆಲಕ್ಕೆ ಶಾಲೆಯಲ್ಲಿ**–ಇವೆಲ್ಲ ನಾಮಪದಗಳು

**(29) ನಾಮಪ್ರಕೃತಿ:–ನಾಮಪದದ ಮೂಲರೂಪವಾಗಿಯೂ, ಕ್ರಿಯೆಯ ಅರ್ಥವನ್ನು ಕೊಡದೆಯೂ ಇರುವ ಶಬ್ದವೇ ನಾಮಪ್ರಕೃತಿಯೆನಿಸುವುದು. ಇವಕ್ಕೆ ಪ್ರಾತಿಪದಿಕಗಳು ಎಂಬ ಹೆಸರೂ ಉಂಟು.**

ಉದಾಹರಣೆಗೆ:–ಮರ, ನೆಲ, ಮಣ್ಣು, ಉಪ್ಪು, ಹೂವು, ಬಳ್ಳಿ, ಕಾಯಿ, ಅಡವಿ, ನಗರ, ಪಟ್ಟಣ, ಜನ, ಹೆಣ್ಣು, ಗಂಡು, ಹುಡುಗ, ಶಿಶು, ಬಾಲಕ, ಮಂಚ, ಪುಸ್ತಕ, ಬಳಪ, ಸುಣ್ಣ, ಬಣ್ಣ, ಕಟ್ಟಿಗೆ, ದನ,–ಇತ್ಯಾದಿ.

**(30) ಪದ:–ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿ 'ಪದ' ಗಳೆನಿಸುವುವು.**

**(31) ನಾಮಪದ:–ನಾಮಪ್ರಕೃತಿಗಳಿಗೆ ನಾಮವಿಭಕ್ತಿ ಪ್ರತ್ಯಯಗಳು ಸೇರಿ 'ನಾಮಪದ' ಗಳೆನಿಸುವುವು.**

**(32) ವಿಭಕ್ತಿಪ್ರತ್ಯಯ:– ಸ್ವತಂತ್ರವಾಗಿ ಅರ್ಥವಿಲ್ಲದೆ, ನಾಮಪ್ರಕೃತಿಗಳ ಮುಂದೆ ಸೇರಿ, ಬೇರೆ ಬೇರೆ ಅರ್ಥವನ್ನುಂಟುಮಾಡುವ ಉ, ಅನ್ನು, ಇಂದ, ಗೆ, ಕ್ಕೆ, ದೆಸೆಯಿಂದ, ಅ, ಅಲ್ಲಿ, ಏ, ಇರಾ, ಈ, ಆ, ಇತ್ಯಾದಿಗಳಿಗೆ ವಿಭಕ್ತಿಪ್ರತ್ಯಯಗಳೆನ್ನುವರು.**

ಉದಾಹರಣೆಗೆ:–

| **ನಾಮಪ್ರಕೃತಿ** | **+** | **ನಾಮವಿಭಕ್ತಿಪ್ರತ್ಯಯ** | **=** | **ನಾಮಪದ** |
|---|---|---|---|---|
| ಹುಡುಗ | + | ಉ | = | ಹುಡುಗನು |
| ಮಂಚ | + | ಅನ್ನು | = | ಮಂಚವನ್ನು |
| ಬಟ್ಟೆ | + | ಇಂದ | = | ಬಟ್ಟೆಯಿಂದ |
| ದನ | + | ಕ್ಕೆ | = | ದನಕ್ಕೆ |
| ಮುದುಕ | + | ದೆಸೆಯಿಂದ | = | ಮುದುಕನ ದೆಸೆಯಿಂದ |
| ಅಕ್ಕ | + | ಅ | = | ಅಕ್ಕನ |
| ತಾಯಿ | + | ಅಲ್ಲಿ | = | ತಾಯಿಯಲ್ಲಿ |
| ತಂದೆ | + | ಏ | = | ತಂದೆಯೇ |
| ರಾಮ | + | ಆ | = | ರಾಮಾ |

ಮೇಲಿನ ಈ ನಾಮಪ್ರಕೃತಿಗಳಲ್ಲಿ ಹಲವಾರು ರೀತಿಯ ಶಬ್ದಗಳಿವೆ. ಮನುಷ್ಯರ, ಪ್ರಾಣಿಗಳ, ವಸ್ತುಗಳ–ಇತ್ಯಾದಿ ಅನೇಕ ಬಗೆಯ ಶಬ್ದಗಳಿರುವುದನ್ನು ಗಮನಿಸಿರಿ. ಇನ್ನೂ ಅನೇಕ ಬಗೆಯ ಶಬ್ದಗಳಿವೆ. ಅವುಗಳ ವಿವರವನ್ನು ಈ ಕೆಳಗೆ ನೋಡಿರಿ:–

## II – ನಾಮಪ್ರಕೃತಿಗಳು

**1. ಸಹಜವಾದ ನಾಮಪ್ರಕೃತಿಗಳು**

**(i) ಮನುಷ್ಯರ ಹೆಸರನ್ನು ಹೇಳುವಂಥವು**

**(ii) ಪ್ರಾಣಿಗಳ ಹೆಸರು ಹೇಳುವಂಥವು**

**(iii) ವಸ್ತುಗಳ ಗುಣ, ಸ್ವಭಾವಗಳನ್ನು ಹೇಳುವಂಥವು**

**(iv) ಕಾಲ, ಸ್ಥಾನ, ಅಳತೆ, ದಿಕ್ಕು, ಸಂಖ್ಯೆಗಳನ್ನು ಸೂಚಿಸುವ ಶಬ್ದಗಳು**

**2. ಸಾಧಿತ (ನಿಷ್ಪನ್ನ) ಗಳಾದ ನಾಮಪ್ರಕೃತಿಗಳು**

**(i) ಎರಡು ಮೂರು ಪದಗಳು ಸೇರಿ ಒಂದುಪದವಾಗುವ ಸಮಾಸಗಳು**

**(ii) ಕ್ರಿಯಾಪ್ರಕೃತಿ (ಧಾತು)ಯಿಂದ ಹುಟ್ಟಿದ ಕೃದಂತ ನಾಮಪ್ರಕೃತಿಗಳು**

**(iii) ತದ್ಧಿತಪ್ರತ್ಯಯ ಸೇರಿ ಉಂಟಾದ ತದ್ಧಿತಾಂತ ನಾಮಪ್ರಕೃತಿಗಳು**

ಈ ಮೇಲೆ ಸೂಚಿಸಿದಂತೆ ನಾಮಪ್ರಕೃತಿಗಳು ಮುಖ್ಯವಾಗಿ ಎರಡು ಬಗೆಯವು:

**(೧) ಸಹಜ ನಾಮಪ್ರಕೃತಿಗಳು (೨) ಸಾಧಿತಗಳಾದ ಸಮಾಸ, ಕೃದಂತ, ತದ್ಧಿತಾಂತಗಳು.**

**(೧) ಸಹಜ ನಾಮಪ್ರಕೃತಿಗಳು–**

ಉದಾಹರಣೆಗೆ:–ಹೊಲ, ನೆಲ, ಜನ, ಮನೆ, ಮರ, ಕಲ್ಲು, ಪೂರ್ವ, ಮೂಡಣ, ಎರಡು, ಕರಿದು, ದೊಡ್ಡ, ಸಣ್ಣ–ಇತ್ಯಾದಿಗಳು.

**(೨) ಸಾಧಿತ (ನಿಷ್ಪನ್ನ) ನಾಮಪ್ರಕೃತಿಗಳು–**

(i) **ಸಮಾಸಗಳು**[37]–ಮಳೆಗಾಲ, ದೊಡ್ಡಮರ, ಹೆಬ್ಬಾಗಿಲು, ಮುಕ್ಕಣ್ಣ, ಇಕ್ಕೆಲ, ಹೆಜ್ಜೇನು, ಹೆದ್ದೊರೆ–ಮುಂತಾದವು.

(ii) **ಕೃದಂತಗಳು**[38]–ಮಾಡಿದ, ಮಾಡುವಿಕೆ, ಮಾಟ, ಓಟ, ಓದುವ, ಓದಿದ, ತಿನ್ನುವ, ಇತ್ಯಾದಿಗಳು.

(iii) **ತದ್ಧಿತಾಂತಗಳು**[39]–ಒಕ್ಕಲಿಗ, ಗಾಣಿಗ, ಹಾವಾಡಿಗ, ಮೋಸಗಾರ, ಒಕ್ಕಲುಗಿತ್ತಿ, ಜಾಣೆ, ದೊಡ್ಡತನ, ಮಾಲೆಗಾರ–ಇತ್ಯಾದಿಗಳು.

ಮೇಲೆ ವಿವರಿಸಿರುವ ಸಮಾಸ, ಕೃದಂತ, ತದ್ಧಿತಾಂತಗಳನ್ನು ಮುಂದಿನ ಬೇರೆ ಬೇರೆ ಅಧ್ಯಾಯಗಳಲ್ಲಿ ವಿವರವಾಗಿ ತಿಳಿಯುವಿರಿ. ಈಗ ಸಹಜ ನಾಮಪ್ರಕೃತಿ, ವಿಭಕ್ತಿಪ್ರತ್ಯಯ, ನಾಮಪದಗಳ ವಿಚಾರ ತಿಳಿಯೋಣ.

**(33) ನಾಮವಾಚಕಪ್ರಕೃತಿಗಳಲ್ಲಿ ಮುಖ್ಯವಾಗಿ: (೧) ವಸ್ತುವಾಚಕಗಳು, (೨) ಗುಣವಾಚಕಗಳು, (೩) ಸಂಖ್ಯಾವಾಚಕಗಳು, (೪) ಸಂಖ್ಯೇಯವಾಚಕಗಳು, (೫) ಭಾವನಾಮಗಳು, (೬) ಪರಿಮಾಣವಾಚಕಗಳು, (೭) ಪ್ರಕಾರವಾಚಕಗಳು, (೮) ದಿಗ್ವಾಚಕಗಳು, (೯) ಸರ್ವನಾಮಗಳು –ಎಂದು ಅನೇಕ ಗುಂಪು ಮಾಡಬಹುದು.**

## (೧) ವಸ್ತುವಾಚಕಗಳು

**(34) ವಸ್ತುಗಳ ಹೆಸರನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕಗಳು.**

ಉದಾಹರಣೆಗೆ:– ಚೇತನವುಳ್ಳ ವಸ್ತುಗಳು–ಮನುಷ್ಯ, ಹೆಂಗಸು, ಬಸವ, ಕೃಷ್ಣ, ಮುದುಕ, ಎತ್ತು, ಎಮ್ಮೆ, ನರಿ, ನಾಯಿ–ಮುಂತಾದವು.

---

[37]ಸಮಾಸವೆಂದರೆ ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಗುಣವಾಗಿ ಸೇರಿ ಒಂದು ಪದವಾಗುವಿಕೆ. ಗಿಡಮರ, ಮರಗಾಲು, ಅರಮನೆ–ಇವು ಸಮಸ್ತ (ಸಮಾಸ) ಪದಗಳು. ಇವುಗಳಲ್ಲಿ ಗಿಡವೂ+ಮರವೂ=ಗಿಡಮರ ಎಂದೂ, ಮರದ+ಕಾಲು=ಮರಗಾಲು ಎಂದೂ, ಅರಸನ+ಮನೆ=ಅರಮನೆ ಎಂದೂ ಎರಡೆರಡು ಪದಗಳು ಸೇರಿರುವುದನ್ನು ಗಮನಿಸಿರಿ.

[38] ಧಾತುಗಳಿಗೆ (ಕ್ರಿಯಾಪ್ರಕೃತಿಗಳಿಗೆ) ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುವುವು. ಮಾಡು+ಅ=ಮಾಡುವ, ಇದರಂತೆ–ಹೋಗುವ, ಬರುವ, ನೋಟ, ಮಾಟ, ಓಟ ಇತ್ಯಾದಿ.

[39] ನಾಮಪದಗಳ ಮೇಲೆ ಹಲವಾರು ಅರ್ಥಗಳಲ್ಲಿ ಗಾರ, ಕಾರ, ಆಡಿಗ ಇತ್ಯಾದಿ ಪ್ರತ್ಯಯ ಸೇರಿ ಆದ– ಮೋಸಗಾರ, ಮಾಲೆಗಾರ, ಹಾವಾಡಿಗ, ಹೂವಾಡಿಗ, ಗಾಣಿಗ ಇತ್ಯಾದಿಗಳು ತದ್ಧಿತಾಂತಗಳು.

ಚೇತನವಿಲ್ಲದ ವಸ್ತುಗಳು–ಕಲ್ಲು, ಮರ, ನೆಲ, ಜಲ, ಎಲೆ, ಹೂ, ಹಣ್ಣು, ಕಾಯಿ, ಬೆಟ್ಟ, ಅಡವಿ, ಮಠ, ಮನೆ, ಶಾಲೆ,–ಮುಂತಾದವು.

ಈ ವಸ್ತುವಾಚಕಗಳನ್ನು **(1) ರೂಢನಾಮ, (2) ಅಂಕಿತನಾಮ, (3) ಅನ್ವರ್ಥಕನಾಮ**–ಎಂದು ಮೂರು ವಿಭಾಗ ಮಾಡಬಹುದು.

**(1) ರೂಢನಾಮ**–ರೂಢಿಯಿಂದ ಬಂದ ಸಾಮಾನ್ಯವಾಚಕಗಳು ರೂಢನಾಮಗಳು.

ಉದಾಹರಣೆಗೆ:–ನದಿ, ಪರ್ವತ, ಮನುಷ್ಯ, ಹೆಂಗಸು, ಹುಡುಗ, ಪಟ್ಟಣ, ದೇಶ–ಇತ್ಯಾದಿಗಳು.

ಇಲ್ಲಿ ಬಂದಿರುವ 'ನದಿ' ಇತ್ಯಾದಿ ಶಬ್ದಗಳು ಎಲ್ಲ ನದಿಗಳಿಗೂ ಅನ್ವಯಿಸುವ ಸಾಮಾನ್ಯವಾಚಕಗಳು.

**(2) ಅಂಕಿತನಾಮ–**ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತ ನಾಮಗಳು.

ಉದಾಹರಣೆಗೆ:–ಗಂಗಾ, ಬ್ರಹ್ಮಪುತ್ರಾ, ಕಾವೇರಿ, ಹಿಮಾಲಯ, ವಿಂದ್ಯಾದ್ರಿ, ರಾಮ, ಕೃಷ್ಣ, ಶಂಕರ, ರಂಗ, ಸಾವಿತ್ರಿ, ಬೆಂಗಳೂರು, ಭಾರತ, ಕರ್ನಾಟಕ, ಆಲ, ಬೇವು–ಇತ್ಯಾದಿಗಳು (ಇವೆಲ್ಲ ರೂಢನಾಮಗಳಿಗೆ ಇಟ್ಟ ಹಸರುಗಳೇ ಆಗಿವೆ).

**(3) ಅನ್ವರ್ಥಕನಾಮ**–ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥಕ ನಾಮಗಳು.

ಉದಾಹರಣೆಗೆ:–ಕುಂಟ, ಹೆಳವ, ಕಿವುಡ, ವ್ಯಾಪಾರಿ, ವಿದ್ವಾಂಸ, ರೋಗಿ, ಯೋಗಿ–ಇತ್ಯಾದಿಗಳು.

## (೨) ಗುಣವಾಚಕಗಳು

ಈ ಕೆಳಗಿನ ವಾಕ್ಯಗಳನ್ನು ಗಮನಿಸಿರಿ–

(೧) **ಕೆಂಪುಬಟ್ಟೆ**ಯನ್ನು ತಂದನು.
(೨) **ದೊಡ್ಡ ಕಲ್ಲು** ಇದೆ.
(೩) **ಚಿಕ್ಕಮಕ್ಕಳು** ಇರುತ್ತಾರೆ.
(೪) **ಹಳೆಯ ಅಕ್ಕಿ** ಬೇಕು
(೫) **ಕರಿಯ ನಾಯಿ** ಇದೆ

ಮೇಲಿನ ವಾಕ್ಯಗಳಲ್ಲಿ '**ಕೆಂಪು**' ಎಂಬುದು ಬಟ್ಟೆಯ ಬಣ್ಣದ ಗುಣವನ್ನೂ, '**ದೊಡ್ಡ**' ಎಂಬುದು ಕಲ್ಲಿನ ರೀತಿಯನ್ನೂ, '**ಚಿಕ್ಕ**' ಎಂಬುದು ಮಕ್ಕಳ ರೀತಿಯನ್ನೂ, '**ಹಳೆಯ**' ಎಂಬುದು ಅಕ್ಕಿಯ ಗುಣವನ್ನೂ, '**ಕರಿಯ**' ಎಂಬುದು ನಾಯಿಯ ಬಣ್ಣದ ರೀತಿಯನ್ನೂ ತಿಳಿಸುವ ಶಬ್ದಗಳು. ಇವುಗಳಿಗೆ **ವಿಶೇಷಣ**ಗಳೆಂದೂ ಹೆಸರು.

**(35) ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲಾ ಗುಣವಾಚಕಗಳೆನಿಸುವುವು.**

ಉದಾಹರಣೆಗೆ:–ದೊಡ್ಡ, ಚಿಕ್ಕ, ಕಿರಿದು, ಒಳ್ಳೆಯ, ಕೆಟ್ಟದು, ಬಿಳಿದು, ಕರಿದು, ಹೊಸದು, ಹಳೆಯ, ಪಿರಿದು, ಹಿರಿದು, ಕಿರಿದು, ಎಳದು–ಮೊದಲಾದವು.

**ಈ ವಿಶೇಷಣಗಳೆಲ್ಲ ಯಾವುದಕ್ಕೆ ಹೇಳಿದೆಯೋ ಅಂಥ ಶಬ್ದಗಳು ವಿಶೇಷ್ಯಗಳು.**

| **ವಿಶೇಷಣ** | **ವಿಶೇಷ್ಯ** |
|---|---|
| ಕರಿಯ | ನಾಯಿ |
| ದೊಡ್ಡ | ಕಲ್ಲು |
| ಚಿಕ್ಕ | ಮಗು |

ಇಲ್ಲಿ **ಕರಿಯ, ದೊಡ್ಡ, ಚಿಕ್ಕ** ಈ ಶಬ್ದಗಳೆಲ್ಲ ವಿಶೇಷಣಗಳು. **ನಾಯಿ, ಕಲ್ಲು, ಮಗು** ಇತ್ಯಾದಿ ಶಬ್ದಗಳೆಲ್ಲ ವಿಶೇಷ್ಯಗಳೆನಿಸುವುವು.

## (ಇ) ಸಂಖ್ಯಾವಾಚಕಗಳು

**(36) ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾವಾಚಕಗಳು**

ಉದಾಹರಣೆಗೆ:–ಒಂದು, ಎರಡು, ಹತ್ತು, ಸಾವಿರ, ಲಕ್ಷ–ಇತ್ಯಾದಿಗಳು.
(**ಒಂದು** ಮನೆ, **ಎರಡು** ಕುದುರೆ, **ಸಾವಿರ** ಆನೆ–ಹೀಗೆ ಸಂಖ್ಯಾವಾಚಕಗಳು ಗುಣವಾಚಕಗಳಂತೆ ನಾಮಪದಗಳಿಗೆ ವಿಶೇಷಣಗಳೂ ಆಗಿರುತ್ತವೆ).

## (ಈ) ಸಂಖ್ಯೇಯವಾಚಕಗಳು

**ಮೂವರು** ಮಕ್ಕಳು, **ನಾಲ್ವರು** ಶಾಸ್ತ್ರಿಗಳು, **ಐವರು** ವಿದ್ಯಾರ್ಥಿಗಳು–ಎಂಬ ಈ ವಾಕ್ಯಗಳಲ್ಲಿ **ಮೂವರು, ನಾಲ್ವರು, ಐವರು** ಮೊದಲಾದ ಶಬ್ದಗಳು ಈ ಲೆಕ್ಕದ ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ತಿಳಿಸುತ್ತದಲ್ಲವೆ? ಇಂಥ ಶಬ್ದಗಳಿಂದ ಸಂಖ್ಯೆಯೂ, ವಸ್ತುಗಳೂ ತಿಳಿವಳಿಕೆಗೆ ಬರುತ್ತವೆ.

**(37) ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೆಲ್ಲ ಸಂಖ್ಯೇಯವಾಚಕಗಳೆನಿಸುವುವು.**

| ಉದಾಹರಣೆಗೆ:– | **ಸಂಖ್ಯೆ** | **ಸಂಖ್ಯೇಯ** |
|---|---|---|
| | ಮೂರು | ಮೂವರು, ಮೂರನೆಯ |
| | ಎರಡು | ಇಬ್ಬರು, ಎರಡನೆಯ |
| | ಐದು | ಐವರು, ಐದನೆಯ |

## (೫) ಭಾವನಾಮಗಳು

**(38) ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೆಲ್ಲ ಭಾವನಾಮಗಳೆನಿಸುವುವು**[40]**.**

ಬಿಳಿದರ ಭಾವ – ಬಿಳುಪು (ತದ್ಧಿತಾಂತ ಭಾವನಾಮ)
ಕರಿದರ ಭಾವ – ಕಪ್ಪು (ತದ್ಧಿತಾಂತ ಭಾವನಾಮ)
ಹಿರಿದರ ಭಾವ – ಹಿರಿಮೆ (ತದ್ಧಿತಾಂತ ಭಾವನಾಮ)
ಪಿರಿದರ ಭಾವ – ಪೆರ್ಮೆ=(ಹೆಮ್ಮೆ) (ತದ್ಧಿತಾಂತ ಭಾವನಾಮ)
ನೋಡುವುದರ ಭಾವ – ನೋಟ (ಕೃದಂತ ಭಾವನಾಮ)
ಮಾಡುವುದರ ಭಾವ – ಮಾಟ (ಕೃದಂತ ಭಾವನಾಮ)
ಕೊಡುವುದರ ಭಾವ – ಕೂಟ (ಕೃದಂತ ಭಾವನಾಮ)

ಇದರ ಹಾಗೆ–**ಬೆಳ್ಪು** (ಹಳೆಗನ್ನಡ), **ಕರ್ಪು** (ಹಳೆಗನ್ನಡ), **ಕೆಂಪು**=ಕೆಚ್ಚನೆಯದರ **ಭಾವ, ಪೆಂಪು** (ಹಳೆಗನ್ನಡ) ಇವನ್ನೂ ತಿಳಿಯಬಹುದು.

## (೬) ಪರಿಮಾಣ ವಾಚಕಗಳು

(೧) **ಅಷ್ಟು** ದೊಡ್ಡ ಕಲ್ಲು (೨) **ಇಷ್ಟು** ಜನರ ಗುಂಪು (೩) **ಎಷ್ಟು** ಕಾಸುಗಳು? – ಇತ್ಯಾದಿ ವಾಕ್ಯಗಳಲ್ಲಿ **ಅಷ್ಟು, ಇಷ್ಟು, ಎಷ್ಟು**–ಇತ್ಯಾದಿ ಶಬ್ದಗಳು ಒಂದು ಗೊತ್ತಾದ ಅಳತೆ, ಸಂಖ್ಯೆಯನ್ನು ಹೇಳುವುದಿಲ್ಲ, ಅಂದರೆ ನಿರ್ದಿಷ್ಟಪಡಿಸಿದ ಅಳತೆ, ಸಂಖ್ಯೆ ಇಲ್ಲಿ ಇಲ್ಲ. ಇಂಥ ಶಬ್ದಗಳು ಕೇವಲ ಪರಿಮಾಣಗಳನ್ನು ಮಾತ್ರ ತಿಳಿಸುತ್ತವೆ. ಇಂಥ ಶಬ್ದಗಳನ್ನೇ **ಪರಿಮಾಣ ವಾಚಕಗಳು** ಎನ್ನುತ್ತಾರೆ.

**(39) ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ–ಇತ್ಯಾದಿಗಳನ್ನು ಹೇಳುವ ಶಬ್ದಗಳು ಪರಿಮಾಣವಾಚಕಗಳೆನಿಸುವುವು.**

ಉದಾಹರಣೆಗೆ:–ಅಷ್ಟು, ಇಷ್ಟು, ಹಲವು, ಕೆಲವು, ಅನಿತು, ಇನಿತು, ಎನಿತು, ಪಲವು–ಇತ್ಯಾದಿಗಳು.

**ಪರಿಮಾಣಕ್ಕೆ:**– ಹಲವು ದಿನಗಳು, ಕೆಲವು ಊರುಗಳು–ಇತ್ಯಾದಿ.

**ಗಾತ್ರಕ್ಕೆ:**– ಗುಡ್ಡದಷ್ಟು, ಆನೆಯಷ್ಟು, ಪಲ್ಲದನಿತು–ಇತ್ಯಾದಿ.

**ಅಳತೆಗೆ:**– ಅಷ್ಟು ದೂರ, ಇಷ್ಟು ಪುಸ್ತಕಗಳು–ಇತ್ಯಾದಿ.

---

[40]ಭಾವನಾಮಗಳಲ್ಲಿ ಧಾತುಗಳಿಂದ ಹುಟ್ಟತಕ್ಕವೆಲ್ಲ ಕೃದಂತಭಾವನಾಮಗಳೆಂದೂ, ನಾಮಪ್ರಕೃತಿ ಗಳಿಂದುಂಟಾಗುವ ಭಾವನಾಮಗಳನ್ನು 'ತದ್ಧಿತಾಂತ' ಭಾವನಾಮಗಳೆಂದೂ ಹೇಳುವರು. ಈ ವಿಷಯವನ್ನು ಆಯಾಪ್ರಕರಣಗಳಲ್ಲಿ ವಿವರವಾಗಿ ತಿಳಿಯುತ್ತೀರಿ. ಆ ವಿಷಯವನ್ನಿಲ್ಲಿ ಸ್ಥೂಲವಾಗಿ ತಿಳಿಸಿದೆ, ಅಷ್ಟೆ.

## (೭) ಪ್ರಕಾರವಾಚಕಗಳು

(೧) **ಅಂಥ** ಮನುಷ್ಯನುಂಟೇ? (೨) **ಅಂತಹ** ವಿಚಾರ ಬೇಡ. (೩) **ಎಂಥ** ಬಣ್ಣ. (೪) **ಇಂಥವರೂ** ಉಂಟೇ? – ಇತ್ಯಾದಿ ವಸ್ತುಗಳ ಸ್ಥಿತಿ, ರೀತಿಗಳನ್ನು ತಿಳಿಸುತ್ತವೆ.

**(40) ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳೆನಿಸುವುವು. ಇವೂ ಒಂದು ಬಗೆಯ ಗುಣವಾಚಕಗಳೇ ಅಹುದು.**

ಉದಾಹರಣೆಗೆ:– ಅಂಥ, ಅಂಥಹುದು, ಇಂಥ, ಇಂಥದು, ಇಂಥಹುದು, ಎಂತಹ, ಎಂಥ, ಅಂಥವನು, ಅಂಥವಳು, ಅಂಥದು, ಅಂತಹನು, ಇಂತಹನು, ಅಂತಹುದು–ಇತ್ಯಾದಿ.

## (೮) ದಿಗ್ವಾಚಕಗಳು

**(41) ದಿಕ್ಕುಗಳು (ನಿಟ್ಟುಗಳ) ಹೆಸರನ್ನು ಸೂಚಿಸುವ ಶಬ್ದಗಳೆಲ್ಲ ದಿಗ್ವಾಚಕಗಳೆನಿಸುವುವು.**

ಉದಾಹರಣೆಗೆ:– ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ವಾಯುವ್ಯ, ಆಗ್ನೇಯ, ನೈಋತ್ಯ, ಮೂಡಲು, ತೆಂಕಲು, ಬಡಗಲು, ಪಡುವಲು, ಆಚೆ, ಈಚೆ–ಇತ್ಯಾದಿಗಳು.

## (೯) ಸರ್ವನಾಮಗಳು

ಶ್ರೀರಾಮನು ಕಾಡಿಗೆ ಹೋದನು. **ಅವನ** ಸಂಗಡ ಸೀತಾಲಕ್ಷ್ಮಣರೂ ಹೊರಟರು. **ಅವರು ಅಲ್ಲಿ** ಪರ್ಣಶಾಲೆಯಲ್ಲಿ ವಾಸಿಸುತ್ತಿದ್ದರು.

ಈ ವಾಕ್ಯಗಳಲ್ಲಿ "**ಅವನ ಸಂಗಡ**" ಎಂದರೆ ರಾಮನ ಸಂಗಡ ಎಂದು ಅರ್ಥ. "**ಅವರು ಅಲ್ಲಿ**" ಎಂದರೆ ರಾಮಲಕ್ಷ್ಮಣಸೀತೆಯರು ಆ ಕಾಡಿನಲ್ಲಿ ಎಂದು ಅರ್ಥ. "**ಅವನು, ಅವರು, ಅಲ್ಲಿ**" ಇತ್ಯಾದಿ ಶಬ್ದಗಳು ನಾಮಪದಗಳ ಸ್ಥಾನದಲ್ಲಿ ಬಳಸುವ ಬೇರೊಂದು ಬಗೆಯ ಶಬ್ದಗಳು. ಹೀಗೆ ಸರ್ವ ವಸ್ತುವಾಚಕಗಳ ಸ್ಥಾನದಲ್ಲೂ ಅವಕ್ಕೆ ಬದಲಾಗಿ ಕೆಲವು ಬೇರೆ ಬಗೆಯ ಶಬ್ದಗಳನ್ನು ಪ್ರಯೋಗಿಸುತ್ತೇವೆ. ಇಂಥ ಶಬ್ದಗಳೇ ಸರ್ವನಾಮಗಳು.

**(42) ವಸ್ತುವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ನಿಂತು ಅವನ್ನು ಬೋಧಿಸುವ (ಸೂಚಿಸುವ) ಶಬ್ದಗಳೆಲ್ಲ ಸರ್ವನಾಮಗಳೆನಿಸುವುವು.**

ಉದಾಹರಣೆಗೆ:– ಅದು, ಇದು, ಯಾವುದು, ಎಲ್ಲಾ (ಎಲ್ಲ), ಏನು, ಅವನು, ಇವನು, ಯಾವನು, ಅವಳು, ಇವಳು, ಯಾವಳು, ತಾನು, ತಾವು, ನೀನು, ನೀವು, ಆವುದು, ಆರು,

ಆರ್*, ಏನು, ಏನ್*, ಆಂ (ಆನ್)*, ನಾಂ (ನಾನ್)*, ನೀಂ (ನೀನ್)* –ಇತ್ಯಾದಿಗಳು.

ಮೇಲಿನ ಉದಾಹರಣೆಗಳಲ್ಲಿ ಬಂದಿರುವ ಸರ್ವನಾಮಗಳನ್ನು ಮೂರು ಭಾಗ ಮಾಡಬಹುದು.

(೧) ಪುರುಷಾರ್ಥಕ ಸರ್ವನಾಮಗಳು.
(೨) ಪ್ರಶ್ನಾರ್ಥಕ ಸರ್ವನಾಮಗಳು.
(೩) ಆತ್ಮಾರ್ಥಕ ಸರ್ವನಾಮಗಳು.

### ೧. ಪುರುಷಾರ್ಥಕ ಸರ್ವನಾಮಗಳು

ಉದಾಹರಣೆಗೆ:–(i) **ನಾನು–ನಾವು** ಇವು ಉತ್ತಮ ಪುರುಷ ಸರ್ವನಾಮಗಳು.
(ii) **ನೀನು–ನೀವು** ಇವು ಮಧ್ಯಮ ಪುರುಷ ಸರ್ವನಾಮಗಳು.
(iii) **ಅವನು–ಅವರು**
**ಅವಳು–ಅವರು**
**ಅದು–ಅವು** } ಇವು ಪ್ರಥಮ ಪುರಷ ಸರ್ವನಾಮಗಳು

### ೨. ಪ್ರಶ್ನಾರ್ಥಕ ಸರ್ವನಾಮಗಳು

ಉದಾಹರಣೆಗೆ:– ಯಾವುದು, ಏನು, ಏತರದು, ಆವುದು, ಏನು, ಏನ್ ಇತ್ಯಾದಿಗಳು ಪ್ರಶ್ನಾರ್ಥಕ ಸರ್ವನಾಮಗಳು. (ಇವೆಲ್ಲ ಪ್ರಶ್ನೆಗೆ ಸಂಬಂಧಿಸಿದ ಸರ್ವನಾಮ ಶಬ್ದಗಳಾದ್ದರಿಂದ ಹಾಗೆ ಹೆಸರು).

### ೩. ಆತ್ಮಾರ್ಥಕ ಸರ್ವನಾಮಗಳು

ಉದಾಹರಣೆಗೆ:– ತಾನು–ತಾವು ಇವುಗಳನ್ನು ಆತ್ಮಾರ್ಥಕ ಸರ್ವನಾಮಗಳೆಂದು ಹೇಳುವುದು ವಾಡಿಕೆ.

ಇದುವರೆಗೆ ಹೇಳಿದ **(೧) ವಸ್ತುವಾಚಕ, (೨) ಗುಣವಾಚಕ, (೩) ಸಂಖ್ಯಾವಾಚಕ, (೪) ಸಂಖ್ಯೇಯವಾಚಕ, (೫) ಭಾವನಾಮ, (೬) ಪರಿಮಾಣವಾಚಕ, (೭) ಪ್ರಕಾರವಾಚಕ, (೮) ದಿಗ್ವಾಚಕ, (೯) ಸರ್ವನಾಮ**–ಪ್ರಕೃತಿಗಳು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಗಳಿಂದಲೂ, ಏಕವಚನ, ಬಹುವಚನ ಭೇದಗಳಿಂದಲೂ, ಉ, ಅನ್ನು, ಇಂದ, ಗೆ, ಕ್ಕೆ, ದೆಸೆಯಿಂದ, ಅ, ಅಲ್ಲಿ, ಏ‡, ಇರಾ‡, ಈ‡, ಆ‡, ಇತ್ಯಾದಿ ವಿಭಕ್ತಿ ಪ್ರತ್ಯಯಗಳಿಂದಲೂ ಅನೇಕ ರೂಪ ಭೇದಗಳನ್ನು ಭಾಷೆಯಲ್ಲಿ ಪಡೆಯುವುವು. ಅವುಗಳ ವಿವರವನ್ನು ಈಗ ತಿಳಿಯೋಣ.

---

* ಈ ಸರ್ವನಾಮಗಳೆಲ್ಲ ಹಳಗನ್ನಡದಲ್ಲಿ ಬಳಕೆಯಲ್ಲಿವೆ. ಹಳಗನ್ನಡ ಕಾವ್ಯಗಳನ್ನು ಓದುವ ವಿದ್ಯಾರ್ಥಿಗಳಾದ ನೀವು ಇವುಗಳ ಬಗೆಗೆ ತಿಳಿದಿರಬೇಕು.

‡ ಏ, ಇರಾ, ಈ, ಆ, ವಿಭಕ್ತಿಪ್ರತ್ಯಯಗಳು ಸರ್ವನಾಮಗಳಿಗೆ ಹತ್ತುವುದಿಲ್ಲ.

# III – ಲಿಂಗಗಳು

## (೧) ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ

(i) **ಭೀಮನು ಮಗನಿಗೆ** ಬುದ್ಧಿ ಹೇಳಿದನು.

(ii) **ಸೀತೆ** ಉಳಿದ **ಸ್ತ್ರೀಯರಿಗೆ** ಬುದ್ಧಿ ಹೇಳಿದಳು.

(iii) **ಕತ್ತೆ ಹುಲ್ಲನ್ನು** ಮೇಯುತ್ತದೆ.

ಮೇಲಿನ ವಾಕ್ಯಗಳಲ್ಲಿ ಭೀಮನು, ಮಗನಿಗೆ, ಸೀತೆ, ಸ್ತ್ರೀಯರಿಗೆ, ಹುಲ್ಲನ್ನು–ಎಂಬ ನಾಮ ಪದಗಳಲ್ಲಿ **ಭೀಮ, ಮಗ** – ಎಂಬೆರಡು ಶಬ್ದಗಳನ್ನು ಉಚ್ಚರಿಸಿದಾಗ ನಮ್ಮ ಮನಸ್ಸಿಗೆ '**ಗಂಡಸು**' ಎಂಬರ್ಥ ಹೊಳೆಯುವುದು. **ಸೀತೆ, ಸ್ತ್ರೀ** – ಎಂಬ ಶಬ್ದವನ್ನು ಅಂದಾಗ ಮನಸ್ಸಿಗೆ '**ಹೆಂಗಸು**' ಎಂಬ ಅರ್ಥ ಹೊಳೆಯುವುದು. **ಕತ್ತೆ, ಹುಲ್ಲು**–ಶಬ್ದಗಳನ್ನು ಪ್ರಯೋಗ ಮಾಡಿದಾಗ ಹೆಂಗಸಲ್ಲದ, ಗಂಡಸಲ್ಲದ ಬೇರೆ ಪದಾರ್ಥವೆಂಬರ್ಥವು ಬೋಧವಾಗುವುದು (ಹೊಳೆಯುವುದು). ಇದನ್ನು ನಪುಂಸಕಲಿಂಗವೆನ್ನುವರು. ಹಾಗಾದರೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಿಗೆ ಸೂತ್ರಗಳನ್ನು ಈ ಕೆಳಗಿನಂತೆ ಹೇಳಬಹುದು.

**(43) ಪುಲ್ಲಿಂಗ:– ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಎಂಬರ್ಥವು ಮನಸ್ಸಿಗೆ ಹೊಳೆಯುವುದೋ ಅದು ಪುಲ್ಲಿಂಗವೆನಿಸುವುದು.**

ಉದಾಹರಣೆಗೆ:– ದೊಡ್ಡವನು, ಮುದುಕ, ಕಳ್ಳ, ಮನುಷ್ಯ, ಶಂಕರ, ಬಸವ, ಹುಡುಗ, ಕೆಟ್ಟವನು, ಅರಸು, ಪ್ರಧಾನಿ, ಮಂತ್ರಿ, ಜಟ್ಟಿ, ಶಕ್ತಿವಂತ, ತಂದೆ, ಮಾವ, ಸಹೋದರ, ಅಣ್ಣ, ತಮ್ಮ, ಚಿಕ್ಕಪ್ಪ, ಸಚಿವ, ರಾಮ, ಕೃಷ್ಣ, ಶಂಕರಾಚಾರ್ಯ, ಮದುಮಗ, ದಾಸ, ಕವಿ, ವಿಮರ್ಶಕ,–ಇತ್ಯಾದಿ.

ಮೇಲಿನ ಯಾವ ಶಬ್ದವನ್ನು ಹೇಳಿದರೂ ನಮ್ಮ ಭಾವನೆಗೆ ಗಂಡಸು ಎಂಬರ್ಥ ಹೊಳೆಯುವುದು. ಆದ್ದರಿಂದ ಇವು ಪುಲ್ಲಿಂಗಗಳು.

**(44) ಸ್ತ್ರೀಲಿಂಗ:– ಯಾವ ಶಬ್ದ ಪ್ರಯೋಗ ಮಾಡಿದಾಗ ನಮ್ಮ ಭಾವನೆಗೆ 'ಹೆಂಗಸು' ಎಂಬ ಅರ್ಥವು ಹೊಳೆಯುವುದೋ ಅದು ಸ್ತ್ರೀಲಿಂಗವೆನಿಸುವುದು.**

ಉದಾಹರಣೆಗೆ:– ದೊಡ್ಡವಳು, ಮುದುಕಿ, ಅತ್ತೆ, ಚಿಕ್ಕಮ್ಮ, ದೊಡ್ಡಮ್ಮ, ಹೆಂಡತಿ, ತಂಗಿ, ಸಹೋದರಿ, ಪಾರ್ವತಿ, ಅಕ್ಕ, ಅರಸಿ, ರಾಣಿ, ತಾಯಿ, ಅಜ್ಜಿ, ವಿದುಷಿ, ಚಲುವೆ, ಒಕ್ಕಲುಗಿತ್ತಿ, ಹಾವಾಡಗಿತ್ತಿ, ಕೆಟ್ಟವಳು, ಒಳ್ಳೆಯವಳು, ಬ್ರಾಹ್ಮಣಿತಿ, ಉಪಾಧ್ಯಾಯಿ, ಅಧ್ಯಕ್ಷೆ, ಸಚಿವೆ, ಮಗಳು, ಬಾಲಿಕೆ, ಸ್ತ್ರೀ, ಹೆಂಗಸು–ಇತ್ಯಾದಿಗಳು.

**(45) ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಹೆಂಗಸು ಗಂಡಸು ಎರಡೂ ಅಲ್ಲದ ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕಲಿಂಗವೆನಿಸುವುದು.**

ಉದಾಹರಣೆಗೆ:- ಮನೆ, ನೆಲ, ಬೆಂಕಿ, ಗದ್ದೆ, ತೋಟ, ಕತ್ತೆ, ಕುದುರೆ, ಕೋಣ, ಎತ್ತು, ನರಿ, ನಾಯಿ, ಕಟ್ಟಿಗೆ, ಕಲ್ಲು, ಇಟ್ಟಿಗೆ, ಹಸು, ಗಿಳಿ, ಹದ್ದು, ಮಳೆ, ಮೋಡ, ಜಲ, ಹೊಳೆ, ಹಳ್ಳ, ಮಂಚ, ಪುಸ್ತಕ, ಎಲೆ, ಬಳ್ಳಿ, ಹೂ, ಹಣ್ಣು, ಕಾಯಿ, ಕಂಬ, ಮರ, ಗೋಡೆ, ಹಲಗೆ, ಬಳಪ, ಬೆಳ್ಳಿ, ಬಂಗಾರ, ಆಕಾಶ-ಇತ್ಯಾದಿಗಳು.

## (೨) ಪುನ್ನಪುಂಸಕಲಿಂಗ, ಸ್ತ್ರೀನಪುಂಸಕಲಿಂಗ, ನಿತ್ಯನಪುಂಸಕಲಿಂಗ

ಮೇಲೆ ಹೇಳಿದಂತೆ ಲಿಂಗಗಳು ಮೂರು ಬಗೆಯಾದರೂ ಒಮ್ಮೊಮ್ಮೆ ಕೆಲವು ಶಬ್ದಗಳನ್ನು **(೧) ಪುಲ್ಲಿಂಗನಪುಂಸಕಲಿಂಗಗಳಲ್ಲೂ, (೨) ಕೆಲವನ್ನು ಸ್ತ್ರೀನಪುಂಸಕಲಿಂಗಗಳಲ್ಲೂ, (೩) ಕೆಲವನ್ನು ನಿತ್ಯವಾಗಿ ನಪುಂಸಕಲಿಂಗಗಳಲ್ಲೂ, (೪) ಮತ್ತೆ ಕೆಲವನ್ನು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರರಲ್ಲೂ ಪ್ರಯೋಗ ಮಾಡುತ್ತೇವೆ.** ಅವುಗಳ ಬಗೆಗೆ ತಿಳಿಯೋಣ.

**(46) ಪುನ್ನಪುಂಸಕಲಿಂಗಗಳು:- ಸೂರ್ಯ, ಚಂದ್ರ, ಶನಿ, ಮಂಗಳ-ಇತ್ಯಾದಿ ಗ್ರಹವಾಚಕ ಶಬ್ದಗಳನ್ನು ಪುಲ್ಲಿಂಗದಂತೆಯೂ, ನಪುಂಸಕಲಿಂಗದಂತೆಯೂ, ಪ್ರಯೋಗಿಸುತ್ತೇವೆ. ಆದ್ದರಿಂದ ಇವನ್ನು ಪುನ್ನಪುಂಸಕಗಳೆಂದೂ ಕರೆಯುತ್ತೇವೆ.**

ಉದಾಹರಣೆಗೆ:-

| | |
|---|---|
| ಸೂರ್ಯ ಮೂಡಿತು | (ನಪುಂಸಕಲಿಂಗ) |
| ಸೂರ್ಯ ಮೂಡಿದನು | (ಪುಲ್ಲಿಂಗ) |
| ಶನಿಯು ಕಾಡುತ್ತದೆ | (ನಪುಂಸಕಲಿಂಗ) |
| ಶನಿಯು ಕಾಡುತ್ತಾನೆ | (ಪುಲ್ಲಿಂಗ) |
| ಚಂದ್ರೋದಯವಾಯಿತು | (ನಪುಂಸಕಲಿಂಗ) |
| ಚಂದ್ರ ಉದಯವಾದನು | (ಪುಲ್ಲಿಂಗ) |

(ಇಲ್ಲಿ ಸೂರ್ಯ, ಚಂದ್ರ, ಶನಿ-ಶಬ್ದಗಳು ಪುಲ್ಲಿಂಗ ನಪುಂಸಕಲಿಂಗಗಳೆರಡರಲ್ಲೂ ಪ್ರಯೋಗವಾಗಿರುವುದನ್ನು ಕಾಣಬಹುದು)

**(47) ಸ್ತ್ರೀನಪುಂಸಕಲಿಂಗಗಳು:- ದೇವತಾವಾಚಕಗಳಾದ ಶಬ್ದಗಳು ಸ್ತ್ರೀಲಿಂಗ ನಪುಂಸಕಲಿಂಗಗಳೆರಡರಲ್ಲೂ ಪ್ರಯೋಗಿಸಲ್ಪಡುತ್ತವೆ. ಇಂಥವನ್ನು ಸ್ತ್ರೀನಪುಂಸಕಲಿಂಗಗಳೆಂದು ಕರೆಯುವರು.**

| | | |
|---|---|---|
| ಉದಾಹರಣೆಗೆ:- | ದೇವತೆ ಒಲಿಯಿತು | (ನಪುಂಸಕಲಿಂಗ) |
| | ದೇವತೆ ಒಲಿದಳು | (ಸ್ತ್ರೀಲಿಂಗ) |
| | ಲಕ್ಷ್ಮಿ ಒಲೆ/ಒಲಿಯಿತು | (ನಪುಂಸಕಲಿಂಗ) |
| | ಲಕ್ಷ್ಮಿ ಒಲೆದಳು | (ಸ್ತ್ರೀಲಿಂಗ) |
| | ಸರಸ್ವತಿ ಕೃಪೆ ಮಾಡಿತು | (ನಪುಂಸಕಲಿಂಗ) |
| | ಸರಸ್ವತಿ ಕೃಪೆ ಮಾಡಿದಳು | (ಸ್ತ್ರೀಲಿಂಗ) |

ಹುಡುಗಿ ಓದುತ್ತದೆ (ನಪುಂಸಕಲಿಂಗ)
ಹುಡುಗಿ ಓದುವಳು (ಸ್ತ್ರೀಲಿಂಗ)

ಮೇಲೆ ಹೇಳಿರುವ **ದೇವತೆ, ಲಕ್ಷ್ಮಿ, ಸರಸ್ವತಿ, ಹುಡುಗಿ**–ಇತ್ಯಾದಿ ಶಬ್ದಗಳು ಸ್ತ್ರೀಲಿಂಗ ನಪುಂಸಕಲಿಂಗಗಳೆರಡರಲ್ಲೂ ಪ್ರಯೋಗಿಸಲ್ಪಟ್ಟಿರುವುದರಿಂದ ಇವು **ಸ್ತ್ರೀನಪುಂಸಕಲಿಂಗ** ಗಳೆಂದು ಕರೆಯಿಸಿಕೊಳ್ಳಲ್ಪಡುತ್ತವೆ.

**(48)** ನಿತ್ಯನಪುಂಸಕಲಿಂಗಗಳು:– **ಶಿಶು, ಮಗು, ದಂಡು, ಜನ**[41]**, ಕೂಸು – ಮೊದಲಾದ ಶಬ್ದಗಳು ಯಾವಾಗಲೂ ನಪುಂಸಕಲಿಂಗದಲ್ಲಿಯೇ ಪ್ರಯೋಗಿಸಲ್ಪಡುವುದರಿಂದ ಇವನ್ನು ನಿತ್ಯನಪುಂಸಕಲಿಂಗಗಳೆಂದು ಕರೆಯುವರು.**

ಉದಾಹರಣೆಗೆ:–

**ಶಿಶು** ಜನಿಸಿತು.
**ಮಗು** ಅಳುತ್ತದೆ.
**ಜನ** ಸೇರಿದೆ.
**ದಂಡು** ಬಂತು.
**ಕೂಸು** ಮಲಗಿದೆ.

**ಶಿಶು, ಕೂಸು, ಮಗು**–ಇವು ಗಂಡು ಮಗುವಾದರೂ ಆಗಿರಬಹುದು, ಹೆಣ್ಣಾದರೂ ಆಗಿರಬಹುದು. ಆದರೆ ಪ್ರಯೋಗ ಮಾತ್ರ ನಪುಂಸಕಲಿಂಗದಲ್ಲಿ ಎಂದು ತಿಳಿಯಬೇಕು. '**ಜನ**' ಎಂಬಲ್ಲಿ '**ಹೆಣ್ಣು, ಗಂಡು**' ಎರಡೂ ಆಗಿರಬಹುದು. ಆದರೆ ಪ್ರಯೋಗ ಮಾತ್ರ ನಪುಂಸಕ ಲಿಂಗದಲ್ಲಿ ಎಂದು ತಿಳಿಯಬೇಕು. '**ದಂಡು**' ಎಂಬುದರಲ್ಲಿ ಮನುಷ್ಯ, ಪ್ರಾಣಿ, ಹೆಂಗಸು ಏನಾದರೂ ಇರಬಹುದು. ಪ್ರಯೋಗ ಮಾತ್ರ ನಪುಂಸಕಲಿಂಗದಲ್ಲಿ. ಆದುದರಿಂದ **ಜನ, ದಂಡು, ಮಗು, ಶಿಶು**–ಇಂಥ ಶಬ್ದಗಳನ್ನು ನಿತ್ಯನಪುಂಸಕಲಿಂಗಗಳೆಂದು ತಿಳಿಯಬೇಕು.

## (೩) ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರರಲ್ಲೂ ಪ್ರಯೋಗವಾಗುವ ಶಬ್ದಗಳು

### [ವಾಚ್ಯಲಿಂಗ (ವಿಶೇಷ್ಯಾಧೀನಲಿಂಗಗಳು)]

(೧) **ನೀನು** ತಂದೆ. (ಇಲ್ಲಿ 'ನೀನು' ಶಬ್ದವು ಪುಲ್ಲಿಂಗ)
(೨) **ನೀನು** ತಾಯಿ. (ಇಲ್ಲಿ 'ನೀನು' ಶಬ್ದವು ಸ್ತ್ರೀಲಿಂಗ)
(೩) **ನೀನು** ಪಶು. (ಇಲ್ಲಿ 'ನೀನು' ಶಬ್ದವು ನಪುಂಸಕಲಿಂಗ)

---

[41]'ಜನ' ಶಬ್ದವು ನಪುಂಸಕಲಿಂಗವಾದರೂ, ದುರ್ಜನ, ಸಜ್ಜನ, ಕುಜನ, ಸುಜನ ಎಂಬ ಶಬ್ದಗಳು ಮಾತ್ರ ಪುಲ್ಲಿಂಗಗಳು. (ಜನ ಶಬ್ದವು ದುರ್, ಸತ್, ಕು, ಸು–ಇತ್ಯಾದಿ ಉಪಸರ್ಗಪೂರ್ವಕವಾದರೆ ಪುಲ್ಲಿಂಗವೆಂದು ತಿಳಿಯಬೇಕು. ಉಪಸರ್ಗ=ಪೂರ್ವಪ್ರತ್ಯಯ)

ಮೇಲಿನ ಉದಾಹರಣೆಗಳಲ್ಲಿ '**ನೀನು**' ಎಂಬ ಶಬ್ದವು ಯಾವುದಕ್ಕೆ ಹೇಳಲ್ಪಡುವುದೋ (ವಿಶೇಷಣವಾಗಿ ಹೇಳಲ್ಪಡುವುದೋ) ಅದೇ ಲಿಂಗವನ್ನು ಹೊಂದುತ್ತದೆ. ಆದರೆ ಆ ಶಬ್ದವು ವಿಶೇಷ್ಯದ ಲಿಂಗವನ್ನು ಹೊಂದುತ್ತದಾದ್ದರಿಂದ ಇದಕ್ಕೆ **ವಿಶೇಷ್ಯಾಧೀನಲಿಂಗವೆಂದೂ, ವಾಚ್ಯಲಿಂಗವೆಂದೂ** ಹೇಳುವರು.

'**ನೀನು ತಂದೆ**'–ಎಂಬಲ್ಲಿ '**ತಂದೆ**' ಎಂಬ ಪುಲ್ಲಿಂಗಕ್ಕೆ ಅಧೀನವಾದ್ದರಿಂದ ಅಲ್ಲಿ ಪುಲ್ಲಿಂಗವೆನಿಸಿದೆ.

'**ನೀನು ತಾಯಿ**'–ಎಂಬಲ್ಲಿ '**ತಾಯಿ**' ಎಂಬ ಸ್ತ್ರೀಲಿಂಗಕ್ಕೆ ಅಧೀನವಾದ್ದರಿಂದ ಅಲ್ಲಿ ಸ್ತ್ರೀಲಿಂಗವೆನಿಸಿದೆ.

'**ನೀನು ಪಶು**'–ಎಂಬಲ್ಲಿ '**ಪಶು**' ಎಂಬ ನಪುಂಸಕಲಿಂಗಕ್ಕೆ ಅಧೀನವಾದ್ದರಿಂದ ಅಲ್ಲಿ ನಪುಂಸಕಲಿಂಗವೆನಿಸಿದೆ.

ಆದ್ದರಿಂದ '**ನೀನು**' ಎಂಬುದಕ್ಕೆ ಸ್ವತಂತ್ರವಾಗಿ ಯಾವ ಲಿಂಗವನ್ನೂ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇಂಥ ಶಬ್ದಗಳಿಗೆಲ್ಲ **ವಿಶೇಷ್ಯಾಧೀನಲಿಂಗ ಅಥವಾ ವಾಚ್ಯಲಿಂಗ ಗಳೆಂದು** ಕರೆಯುವರು.

**(49) ವಾಚ್ಯಲಿಂಗ (ವಿಶೇಷ್ಯಾಧೀನಲಿಂಗಗಳು):– ನಾನು, ನೀನು, ತಾನು ಎಂಬ ಸರ್ವನಾಮಗಳೂ, ಒಳ್ಳೆಯ, ಕೆಟ್ಟ, ಬಿಳಿಯ, ಕರಿಯ ಮೊದಲಾದ ಗುಣವಾಚಕ ಶಬ್ದಗಳೂ, ಹಲವು, ಕೆಲವು, ಎಲ್ಲಾ–ಇತ್ಯಾದಿ ಶಬ್ದಗಳೂ ಮೂರು ಲಿಂಗಗಳಲ್ಲೂ ಒಂದೇರೀತಿ ಪ್ರಯೋಗಿಸಲ್ಪಡುವುದರಿಂದ ಇವನ್ನು ವಿಶೇಷ್ಯಾಧೀನಲಿಂಗಗಳು ಅಥವಾ ವಾಚ್ಯಲಿಂಗಗಳು ಎಂದು ಹೇಳುವರು.**

ಉದಾಹರಣೆಗೆ:– (i) '**ನಾನು**'–ಎಂಬುದಕ್ಕೆ–

| | |
|---|---|
| ನಾನು ದೊಡ್ಡವನು | (ಪುಲ್ಲಿಂಗ) |
| ನಾನು ದೊಡ್ಡವಳು | (ಸ್ತ್ರೀಲಿಂಗ) |
| ನಾನು ದೊಡ್ಡದೆಂದಿತು | (ನಪುಂಸಕಲಿಂಗ) |

(ii) '**ನೀನು**'–ಎಂಬುದಕ್ಕೆ–

| | |
|---|---|
| ನೀನು ಗಂಡಸು | (ಪುಲ್ಲಿಂಗ) |
| ನೀನು ಹೆಂಗಸು | (ಸ್ತ್ರೀಲಿಂಗ) |
| ನೀನು ಕಲ್ಲು | (ನಪುಂಸಕಲಿಂಗ) |

(iii) '**ತಾನು**'–ಎಂಬುದಕ್ಕೆ–

| | |
|---|---|
| ತಾನು ಚಿಕ್ಕವನೆಂದು ತಿಳಿದನು | (ಪುಲ್ಲಿಂಗ) |
| ತಾನು ಚಿಕ್ಕವಳೆಂದು ತಿಳಿದಳು | (ಸ್ತ್ರೀಲಿಂಗ) |
| ತಾನು ಸಣ್ಣದೆಂದು ಭಾವಿಸಿತು | (ನಪುಂಸಕಲಿಂಗ) |

(iv) '**ಒಳ್ಳೆಯ**'–ಎಂಬುದಕ್ಕೆ–

ಒಳ್ಳೆಯ ಹುಡುಗ (ಪುಲ್ಲಿಂಗ)
ಒಳ್ಳೆಯ ಹುಡುಗಿ (ಸ್ತ್ರೀಲಿಂಗ)
ಒಳ್ಳೆಯ ನಾಯಿ (ನಪುಂಸಕಲಿಂಗ)

(v) '**ಕೆಟ್ಟ**'–ಎಂಬುದಕ್ಕೆ–

ಕೆಟ್ಟ ಮನುಷ್ಯ (ಪುಲ್ಲಿಂಗ)
ಕೆಟ್ಟ ಹೆಂಗಸು (ಸ್ತ್ರೀಲಿಂಗ)
ಕೆಟ್ಟ ನಾಯಿ (ನಪುಂಸಕಲಿಂಗ)

(vi) '**ಎಲ್ಲಾ**'–ಎಂಬುದಕ್ಕೆ–

ಎಲ್ಲಾ ಗಂಡಸರು ಬಂದರು (ಪುಲ್ಲಿಂಗ)
ಎಲ್ಲಾ ಹೆಂಗಸರು ಬಂದರು (ಸ್ತ್ರೀಲಿಂಗ)
ಎಲ್ಲಾ ದನಗಳು ಹೋದವು (ನಪುಂಸಕಲಿಂಗ)

ಇದುವರೆಗೆ **(೧) ಪುಲ್ಲಿಂಗ (೨) ಸ್ತ್ರೀಲಿಂಗ (೩) ನಪುಂಸಕಲಿಂಗ (೪) ಪುನ್ನಪುಂಸಕಲಿಂಗ (೫) ಸ್ತ್ರೀನಪುಂಸಕಲಿಂಗ (೬) ನಿತ್ಯನಪುಂಸಕಲಿಂಗ (೭) ವಿಶೇಷ್ಯಾಧೀನಲಿಂಗ (ವಾಚ್ಯಲಿಂಗ)**–ಎಂಬ ಏಳು ಬಗೆಯ ಲಿಂಗವನ್ನು ನಾಮಪಕೃತಿಗಳು ಹೇಗೆ ಹೊಂದುತ್ತವೆಂಬ ಬಗೆಗೆ ತಿಳಿದಿದ್ದೀರಿ.

ಈಗ ಲಿಂಗದಿಂದ ಶಬ್ದಗಳ ಸ್ವರೂಪ ಹೇಗೆ ವ್ಯತ್ಯಾಸಗೊಳ್ಳುವುದೆಂಬುದನ್ನು ನೋಡೋಣ.

(i) **ಗುಣವಾಚಕ ಶಬ್ದಗಳು ಮೂರು ಲಿಂಗಗಳಲ್ಲೂ ಹೇಗೆ ವ್ಯತ್ಯಾಸಗೊಳ್ಳುತ್ತವೆ?**

| **ನಪುಂಸಕಲಿಂಗ** | **ಪುಲ್ಲಿಂಗ** | **ಸ್ತ್ರೀಲಿಂಗ** |
|---|---|---|
| ಒಳ್ಳಿತು (ಒಳ್ಳೆಯದು) | ಒಳ್ಳೆಯವನು | ಒಳ್ಳೆಯವಳು |

(ಪುಲ್ಲಿಂಗ, ಸ್ತ್ರೀಲಿಂಗಗಳಲ್ಲಿ ಒಳ್ಳಿತು ಎಂಬುದರ ಮುಂದೆ ಅವನು–ಅವಳು ಎಂಬ ಸರ್ವನಾಮಗಳೇ ಬರುತ್ತವೆ. ಒಳ್ಳಿತು+ಅವನು–ಒಳ್ಳೆಯವನು ಎಂಬಲ್ಲಿ ತುಕಾರಲೋಪ, ಳ ಕಾರದ ಮುಂದಿರುವ ಇ ಕಾರಕ್ಕೆ ಎ ಕಾರಾದೇಶವಾಗಿರುವುದನ್ನು ಗಮನಿಸಿರಿ).

| | | |
|---|---|---|
| ಇನಿದು (ಇನಿಯದು) | ಇನಿಯನು | ಇನಿಯಳು |
| ದೊಡ್ಡದು | ದೊಡ್ಡವನು | ದೊಡ್ಡವಳು |
| ಚಿಕ್ಕದು | ಚಿಕ್ಕವನು | ಚಿಕ್ಕವಳು |
| ಎಳದು (ಎಳೆಯದು) | ಎಳೆಯನು | ಎಳೆಯಳು |
| ಹಳೆದು (ಹಳೆಯದು) | ಹಳೆಯನು | ಹಳೆಯಳು |
| ಹೊಸತು (ಹೊಸದು) | ಹೊಸಬನು | ಹೊಸಬಳು |

ಮೇಲಿನ ಉದಾಹರಣೆಗಳಿಂದ ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ, **ಅವನು, ಅವಳು** ಎಂಬಲ್ಲಿ **ಅನು, ಅಳು**–ಎಂಬುವೂ, ಹೊಸತು ಎಂಬಲ್ಲಿ ಮಾತ್ರ '**ಬನು**' '**ಬಳು**' ಎಂಬುವೂ ಸೇರುವುದನ್ನು ಗಮನಿಸಿರಿ.

(ii) **ಸರ್ವನಾಮಗಳು ಮೂರು ಲಿಂಗಗಳಲ್ಲಿ ಹೇಗೆ ರೂಪ ಧರಿಸುತ್ತವೆಂಬುದನ್ನು ಗಮನಿಸಿರಿ.**

| **ನಪುಂಸಕಲಿಂಗ** | **ಪುಲ್ಲಿಂಗ** | **ಸ್ತ್ರೀಲಿಂಗ** |
|---|---|---|
| ಅದು | ಅವನು | ಅವಳು |
| ಇದು | ಇವನು (ಈತನು) | ಇವಳು (ಈಕೆ) |
| ಆವುದು | ಆವನು | ಆವಳು |
| ಯಾವುದು | ಯಾವನು | ಯಾವಳು |
| ನಾನು | ನಾನು | ನಾನು (ವಾಚ್ಯಲಿಂಗ) |
| ನೀನು | ನೀನು | ನೀನು (ವಾಚ್ಯಲಿಂಗ) |
| ತಾನು | ತಾನು | ತಾನು (ವಾಚ್ಯಲಿಂಗ) |

(iii) **ಸಂಖ್ಯಾವಾಚಕಗಳು ಮೂರು ಲಿಂಗಗಳಲ್ಲೂ ಹೇಗೆ ರೂಪ ಹೊಂದುತ್ತವೆಂಬುದನ್ನು ಗಮನಿಸಿರಿ.**

| **ನಪುಂಸಕಲಿಂಗ** | **ಪುಲ್ಲಿಂಗ** | **ಸ್ತ್ರೀಲಿಂಗ** |
|---|---|---|
| ಒಂದು | ಒಬ್ಬನು | ಒಬ್ಬಳು |
| ಎರಡು | ಇಬ್ಬರು | ಇಬ್ಬರು |
| ಮೂರು | ಮೂವರು | ಮೂವರು |

ಎರಡು ಮೊದಲ್ಗೊಂಡು ಮುಂದಿನ ಸಂಖ್ಯಾವಾಚಕಗಳು ಪುಲ್ಲಿಂಗ, ಸ್ತ್ರೀಲಿಂಗಗಳಲ್ಲಿ ಒಂದೇರೂಪ ಧರಿಸುವುವು.

(iv) **ಕೆಲವು ಅಕಾರಂತ ಪುಲ್ಲಿಂಗ ಶಬ್ದಗಳಿಗೆ ಸ್ತ್ರೀಲಿಂಗದಲ್ಲಿ ಇ, ಎ, ಪ್ರತ್ಯಯಗಳು ಸೇರಿ ಸ್ತ್ರೀಲಿಂಗಗಳೆನಿಸುತ್ತವೆ.**

ಉದಾಹರಣೆಗೆ:–

| **ಅಕಾರಾಂತ ಪುಲ್ಲಿಂಗ** | **ಸ್ತ್ರೀಲಿಂಗ ರೂಪಗಳು** |
|---|---|
| ಅರಸ | ಅರಸಿ (ಇ ಪ್ರತ್ಯಯ) |
| ಅಣುಗ | ಅಣುಗಿ (ಇ ಪ್ರತ್ಯಯ) |
| ನಿಡುಮೂಗ | ನಿಡುಮೂಗಿ* (ಇ ಪ್ರತ್ಯಯ) |

---

* ಬಹುವ್ರೀಹಿಸಮಾಸದಲ್ಲಿ ಹೀಗಾಗುತ್ತವೆ.

| | |
|---|---|
| ಜಾಣ | ಜಾಣೆ[ǂ] (ಎ ಪ್ರತ್ಯಯ) |
| ದಡ್ಡ | ದಡ್ಡೆ[ǂ] (ಎ ಪ್ರತ್ಯಯ) |
| ಹುಡುಗ | ಹುಡುಗಿ[ǂ] (ಇ ಪ್ರತ್ಯಯ) |
| ಮುದುಕ | ಮುದುಕಿ[ǂ] (ಇ ಪ್ರತ್ಯಯ) |

–ಇತ್ಯಾದಿಗಳು

## IV – ವಚನಗಳು

'**ವಚನ**' ಎಂದರೆ ಸಂಖ್ಯೆ. ವಸ್ತುಗಳನ್ನು ಒಂದು ಅಥವಾ ಇನ್ನೂ ಹೆಚ್ಚಾಗಿ ಲೆಕ್ಕ ಹೇಳುವುದುಂಟು. ಅಂಥ ಸಮಯದಲ್ಲಿ ವಸ್ತು ಅಥವಾ ವ್ಯಕ್ತಿ ಒಂದಾಗಿದ್ದರೆ ಅಂಥದನ್ನು '**ಏಕವಚನ**' ಎನ್ನುತ್ತೇವೆ. ಎರಡು ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ '**ಬಹುವಚನ**' ಎನ್ನುತ್ತೇವೆ.

**(50) ಒಂದು ವಸ್ತು ಎಂದು ಹೇಳುವ ಶಬ್ದಗಳೆಲ್ಲ ಏಕವಚನಗಳು. ಒಂದಕ್ಕಿಂತ ಹೆಚ್ಚಾದ ವಸ್ತುಗಳೆಂದು ತಿಳಿಸುವ ಶಬ್ದಕ್ಕೆ ಬಹುವಚನವೆನ್ನುತ್ತೇವೆ.**

ಕನ್ನಡ ಭಾಷೆಯಲ್ಲಿ ಏಕವಚನ ಬಹುವಚನಗಳೆಂದು ಎರಡೇ ವಚನಗಳು. ಸಂಸ್ಕೃತ ಭಾಷೆಯಲ್ಲಿ ಏಕವಚನ, ದ್ವಿವಚನ, ಬಹುವಚನಗಳೆಂದು ಮೂರು ಬಗೆಗಳುಂಟು. (ಕಣ್ಣುಗಳು, ಕಾಲುಗಳು, ಕೈಗಳು–ಇವು ದ್ವಿವಚನಗಳಾದರೂ ಇವಕ್ಕೆ ಕನ್ನಡದಲ್ಲಿ ದ್ವಿವಚನದ ಬೇರೆ ಪ್ರತ್ಯಯವಿಲ್ಲ. ಆದ್ದರಿಂದ ಒಂದಕ್ಕಿಂತ ಹೆಚ್ಚಾಗಿರುವುದೆಲ್ಲ ಬಹುವಚನವೆಂದೇ ಕರೆಯಲ್ಪಡುತ್ತವೆ).

ಉದಾಹರಣೆಗೆ:–

| **ಏಕವಚನ** | **ಬಹುವಚನ** |
|---|---|
| ಅರಸು | ಅರಸರು (ಅರಸು+ಅರು) |
| ಅರಸಿ | ಅರಸಿಯರು (ಅರಸಿ+ಅರು) |
| ನೀನು | ನೀವು (ನೀನು+ವು) |
| ನಾನು | ನಾವು (ನಾನು+ವು) |
| ಮರ | ಮರಗಳು (ಮರ+ಗಳು) |
| ಕಿವಿ | ಕಿವಿಗಳು (ಕಿವಿ+ಗಳು) |
| ಮನೆ | ಮನೆಗಳು (ಮನೆ+ಗಳು) |
| ಅಣ್ಣ | ಅಣ್ಣಂದಿರು (ಅಣ್ಣ+ಅಂದಿರು) |
| ತಂದೆ | ತಂದೆಗಳು (ತಂದೆ+ಗಳು) |
| ತಾಯಿ | ತಾಯಿಯರು (ತಾಯಿ+ಅರು) |

[ǂ]ಇವನ್ನು ತದ್ಧಿತಪ್ರತ್ಯಯಗಳೆಂದು ಹೇಳುವರು. ಆ ಪ್ರಕರಣದಲ್ಲಿ ಇದರ ಬಗೆಗೆ ಹೇಳಿದೆ.

ಮೇಲಿನ ಬಹುವಚನ ಉದಾಹರಣೆಗಳನ್ನು ಗಮನಿಸಿದಾಗ ಮುಖ್ಯವಾಗಿ ಗೊತ್ತಾಗುವ ವಿಷಯವೇನೆಂದರೆ –ನಾಮಪ್ರಕೃತಿಗಳನ್ನು ಬಹುವಚನದಲ್ಲಿ ಹೇಳಿದಾಗ ಅವುಗಳ ಮುಂದೆ ಅರು, ವು, ಗಳು, ಅಂದಿರು–ಇತ್ಯಾದಿ ಬಹುವಚನಸೂಚಕ ಆಗಮಗಳು ಬಂದಿರುವುವು. ಈ ಬಹುವಚನಸೂಚಕ ಆಗಮಗಳು ಯಾವ ಸ್ಥಳದಲ್ಲಿ ಬರುತ್ತವೆ ಎಂಬುದನ್ನು ಗಮನಿಸಿರಿ:–

**ಪ್ರಕೃತಿ + ಆಗಮ + ಪ್ರತ್ಯಯ = ನಾಮಪದ**
ಅರಸು + ಗಳು + ಉ = ಅರಸುಗಳು
ಅರಸು + ಗಳು + ಅನ್ನು = ಅರಸುಗಳನ್ನು
ಅರಸು + ಗಳು + ಇಂದ = ಅರಸುಗಳಿಂದ
ಅರಸು + ಅರುಗಳು + ಇಂದ = ಅರಸರುಗಳಿಂದ
ಅಣ್ಣ + ಅಂದಿರು + ಇಗೆ = ಅಣ್ಣಂದಿರಿಗೆ
ಅಣ್ಣ + ಅಂದಿರುಗಳು + ಇಗೆ = ಅಣ್ಣಂದಿರುಗಳಿಗೆ
ತಂದೆ + ಅರುಗಳು + ಅನ್ನು = ತಂದೆಯರುಗಳನ್ನು
ತಾಯಿ + ಅರುಗಳು + ಇಗೆ = ತಾಯಿಯರುಗಳಿಗೆ

ಈ ಉದಾಹರಣೆಗಳ ಮೇಲಿಂದ ತಿಳಿದುಬರುವುದೇನೆಂದರೆ ಮೇಲೆ ಹೇಳಿದ ಬಹುವಚನ ಸೂಚಕ ಆಗಮಗಳು ಪ್ರಕೃತಿಗೂ ಪ್ರತ್ಯಯಕ್ಕೂ (ನಾಮವಿಭಕ್ತಿಪ್ರತ್ಯಯಕ್ಕೂ) ಮಧ್ಯದಲ್ಲಿ ಬರುವುವೆಂಬಂಶ. ಹಾಗಾದರೆ ಮುಖ್ಯವಾಗಿ ಬರುವ ಈ ಆಗಮಗಳ ವಿಚಾರವನ್ನು ಕ್ರಮವಾಗಿ ತಿಳಿಯೋಣ.

**(51) ಬಹುವಚನದಲ್ಲಿ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ *ಅರು, ಗಳು, ಅರುಗಳು, ಅಂದಿರು, ಅಂದಿರುಗಳು, ಇರು, ವಿರು, ವು, ಅವು, ಕಳು, ವರು–ಇತ್ಯಾದಿ ಆಗಮಗಳು ಬರುತ್ತವೆ.**

ಉದಾಹರಣೆಗೆ:–

**(i) 'ಅರು' ಬರುವುದಕ್ಕೆ:– ಪುಲ್ಲಿಂಗ ಸ್ತ್ರೀಲಿಂಗಗಳೆರಡರಲ್ಲೂ, 'ಅರು' ಆಗಮವು ಬರುವುದು.**

ಅರಸು + ಅರು + ಉ = ಅರಸರು
ಅರಸು + ಅರು + ಅನ್ನು = ಅರಸರನ್ನು
ಹುಡುಗ + ಅರು + ಇಂದ = ಹುಡಗರಿಂದ

---

* ಹಳಗನ್ನಡದಲ್ಲಿ ಈ ಪ್ರತ್ಯಯಗಳೇ ಅರ್, ಗಳ್, ಅರ್ಗಳ್, ಅರ್ಕಳ್, ಅಂದಿರ್, ಅಂದಿರ್‌ಗಳ್, ಇರ್, ವಿರ್, ದಿರ್–ಇತ್ಯಾದಿ ರೂಪ ಧರಿಸುತ್ತವೆ. ಹೊಸಗನ್ನಡದಲ್ಲಿ ಇವೇ ಉಕಾರಾಂತಗಳಾಗುತ್ತವೆ. ಗಳ್ ಕೆಲವು ಕಡೆ ಕಳ್ ಆಗುತ್ತದೆ.

ಇದರಂತೆ–ಹುಡುಗರು, ಹುಡುಗಿಯರು, ಮುದುಕರನ್ನು, ಮುದುಕಿಯರನ್ನು, ದಾಸಿಯರಿಂದ, ದಾಸಿಯರಿಗೆ, ದಾಸರಲ್ಲಿ, ದಾಸರಿಗೆ, ಕಿರಿಯರನ್ನು, ಕಿರಿಯರಿಂದ, ಕಿರಿಯರಿಗೆ, ಹಿರಿಯರು, ಹಿರಿಯರನ್ನು, ಹಿರಿಯರಲ್ಲಿ–ಇತ್ಯಾದಿಗಳು.

**(ii) 'ಗಳು' ಬರುವುದಕ್ಕೆ:– ಈ ಆಗಮವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರರಲ್ಲೂ ಕೆಲವು ಕಡೆ ಬರುವುದುಂಟು.**

**(ಅ) ಪುಲ್ಲಿಂಗಕ್ಕೆ:** ತಂದೆ + ಗಳು + ಉ = ತಂದೆಗಳು[42]
ತಂದೆ + ಗಳು + ಅನ್ನು = ತಂದೆಗಳನ್ನು
ಗುರು + ಗಳು + ಇಂದ = ಗುರುಗಳಿಂದ

**(ಆ) ಸ್ತ್ರೀಲಿಂಗಕ್ಕೆ:** ಹೆಣ್ಣು + ಗಳು + ಉ = ಹೆಣ್ಣುಗಳು
ಹೆಣ್ಣು + ಗಳು + ಅನ್ನು = ಹೆಣ್ಣುಗಳನ್ನು
ಹೆಣ್ಣು + ಗಳು + ಇಂದ = ಹೆಣ್ಣುಗಳಿಂದ

ಇದರಂತೆ–ವಧುಗಳು, ಅಮ್ಮಗಳು, ಅಕ್ಕಗಳು–ಇತ್ಯಾದಿ.

**(iii) ಅರುಗಳು:– ಪುಲ್ಲಿಂಗ ಸ್ತ್ರೀಲಿಂಗಗಳೆರಡರಲ್ಲೂ ಈ 'ಅರುಗಳು' ಎಂಬ ಆಗಮವು ಬಹುವಚನದಲ್ಲಿ ಬರುವುದು.**

**(ಅ) ಸ್ತ್ರೀಲಿಂಗಕ್ಕೆ:–** ಸ್ತ್ರೀ + ಅರುಗಳು + ಉ = ಸ್ತ್ರೀಯರುಗಳು
ಹೆಂಗಸರು + ಅರುಗಳು + ಅನ್ನು = ಹೆಂಗಸರುಗಳನ್ನು
ತಾಯಿ + ಅರುಗಳು + ಇಂದ = ತಾಯಿಯರುಗಳಿಂದ

**(ಆ) ಪುಲ್ಲಿಂಗಕ್ಕೆ:–** ಪುರುಷ + ಅರುಗಳು + ಅನ್ನು = ಪುರುಷರುಗಳನ್ನು
ಪುರುಷ + ಅರುಗಳು + ಇಗೆ = ಪುರುಷರುಗಳಿಗೆ

ಇದರಂತೆ–ದೊಡ್ಡವರುಗಳು, ಚಿಕ್ಕವರುಗಳು, ತಂದೆಯರುಗಳು, ವಿದ್ವಾಂಸರುಗಳು, ಕಳ್ಳರುಗಳು, ಮೂರ್ಖರುಗಳು–ಇತ್ಯಾದಿ.

**(iv) ಅಂದಿರು:– ಈ ಆಗಮವು ಪುಲ್ಲಿಂಗ ಸ್ತ್ರೀಲಿಂಗಗಳೆರಡರಲ್ಲೂ ಬರುವುದುಂಟು.**

**(ಅ) ಪುಲ್ಲಿಂಗಕ್ಕೆ:–** ಅಣ್ಣ + ಅಂದಿರು + ಉ = ಅಣ್ಣಂದಿರು
ಅಣ್ಣ + ಅಂದಿರು + ಅನ್ನು = ಅಣ್ಣಂದಿರನ್ನು
ಅಣ್ಣ + ಅಂದಿರು + ಇಂದ = ಅಣ್ಣಂದಿರಿಂದ

ಇದರಂತೆ–ತಮ್ಮಂದಿರು, ಮಾವಂದಿರು, ಅಜ್ಜಂದಿರು–ಇತ್ಯಾದಿ.

---

[42]ತಂದೆಗಳು, ಗುರುಗಳು ಎಂಬಲ್ಲಿ ಇವು ಒಬ್ಬರನ್ನೇ ಕುರಿತು ಹೇಳಿದರೂ ಗೌರವಾರ್ಥದಲ್ಲಿ ಬಹುವಚನಸೂಚಕ ಆಗಮಗಳು ಬಂದು ಇವು ಬಹುವಚನದಂತೆಯೇ ಪ್ರಯೋಗಿಸಲ್ಪಡುತ್ತವೆ. ಆದ್ದರಿಂದ ಗೌರವದಲ್ಲಿ ಬಹುವಚನ ಪ್ರಯೋಗವೆಂದು ಭಾವಿಸಬೇಕು.

**(ಆ) ಸ್ತ್ರೀಲಿಂಗಕ್ಕೆ:–** ಅಕ್ಕ + ಅಂದಿರು + ಉ = ಅಕ್ಕಂದಿರು
ಅಕ್ಕ + ಅಂದಿರು + ಅನ್ನು = ಅಕ್ಕಂದಿರನ್ನು
ಇದರಂತೆ–ತಾಯಂದಿರು, ಅಮ್ಮಂದಿರು, ಸೊಸೆಯಂದಿರು–ಇತ್ಯಾದಿ.

**(v) ಅಂದಿರುಗಳು[43]:– ಅಂದಿರು ಎಂಬ ಆಗಮವು ಬಂದಿರುವೆಡೆಗಳಲ್ಲೆಲ್ಲಾ 'ಗಳು' ಎಂಬುದು ಮುಂದೆ ಸೇರಿ 'ಅಂದಿರುಗಳು' ಎಂದು ಆಗುವುದುಂಟು.**

ಉದಾಹರಣೆಗೆ:– ಅಣ್ಣಂದಿರುಗಳು, ಅಕ್ಕಂದಿರುಗಳನ್ನು, ತಾಯಂದಿರುಗಳಿಗೆ, ತಮ್ಮಂದಿರುಗಳಲ್ಲಿ –ಇತ್ಯಾದಿ.

**(vi) ಇರು:– ಹೆಂಡತಿ ಎಂಬ ಪ್ರಕೃತಿಯ ಮೇಲೆ 'ಇರು' ಎಂಬ ಆಗಮವು ಬಹುವಚನದಲ್ಲಿ ಬರುವುದು. ಆಗ 'ತಿ' ಎಂಬುದಕ್ಕೆ ಲೋಪ ಬರುವುದು.**

ಹೆಂಡತಿ + ಇರು + ಉ = ಹೆಂಡಿರು
ಹೆಂಡತಿ + ಇರು + ಅನ್ನು = ಹೆಂಡಿರನ್ನು – ಇತ್ಯಾದಿ.

**(vii) ವಿರು[44]:– ಸ್ತ್ರೀಲಿಂಗದಲ್ಲಿ ಮಾತ್ರ ಕ್ವಚಿತ್ತಾಗಿ ಈ ಪ್ರತ್ಯಯವು ಆಗಮವಾಗಿ ಬರುವುದು.**

ಉದಾಹರಣೆಗೆ:– ಅತ್ತೆವಿರು (ಅತ್ತೆವಿರ್ ಹಳಗನ್ನಡ ರೂಪ)
ತಾಯ್ವಿರು (ತಾಯ್ವಿರ್ ಹಳಗನ್ನಡ ರೂಪ)

**(viii) 'ವು':– ಕೇವಲ ಸರ್ವನಾಮ, ಗುಣವಾಚಕ, ನಪುಂಸಕಲಿಂಗ, ಬಹುವಚನ ದಲ್ಲಿ ಮಾತ್ರ ಈ 'ವು' ಎಂಬುದು ಆಗಮವಾಗಿ ಬರುವುದು. ಆಗ ಪ್ರಕೃತಿಯ ಕೊನೆಯ ಅಕ್ಷರವು (ವ್ಯಂಜನ ಸ್ವರ ಸಹಿತವಾದ ಗಣಿತಾಕ್ಷರವು) ಲೋಪವಾಗುವುದು.**

ಉದಾಹರಣೆಗೆ:– ಅದು + ವು + ಉ = ಅವು (ದುಕಾರಲೋಪ)
ಅದು + ವು + ಅನ್ನು = ಅವನ್ನು (ದುಕಾರಲೋಪ)
ಯಾವುದು + ವು + ಅನ್ನು = ಯಾವುವನ್ನು (ದುಕಾರಲೋಪ)
ಚಿಕ್ಕದು + ವು + ಅಕ್ಕೆ = ಚಿಕ್ಕವಕ್ಕೆ (ದುಕಾರಲೋಪ)
ಚಿಕ್ಕದು + ವು + ಉ = ಚಿಕ್ಕವು (ದುಕಾರಲೋಪ)
ದೊಡ್ಡದು + ವು + ಅನ್ನು = ದೊಡ್ಡವನ್ನು (ದುಲೋಪ)
ಎಲ್ಲ + ವು + ಅನ್ನು = ಎಲ್ಲವನ್ನು ( ಇಲ್ಲಿ ಯಾವಲೋಪವೂ ಇಲ್ಲ)

---

[43]'ಅಂದಿರು, ಅಂದಿರುಗಳು'–ಸೇರಿದ ಅಣ್ಣಂದಿರು, ಅಣ್ಣಂದಿರುಗಳು ಇವುಗಳ ಅರ್ಥದಲ್ಲಿ ಭೇದವಿಲ್ಲದಿದ್ದರೂ ಹಾಗೆ ಪ್ರಯೋಗಗಳು ಇರುತ್ತವೆ.

[44] 'ವಿರು' ಆಗಮವನ್ನುಳ್ಳ ಅಥವಾ 'ವಿರ್' ಆಗಮವನ್ನುಳ್ಳ ಬಹುವಚನ ರೂಪಗಳು ಹಳಗನ್ನಡದಲ್ಲಿ ಮಾತ್ರ ಕಂಡುಬರುತ್ತವೆ. ಕೇಶಿರಾಜನು ಶಬ್ದಮಣಿದರ್ಪಣದ ಸೂತ್ರ ೧೦೧ ರಲ್ಲಿ ಹೇಳಿದ್ದಾನೆ.

ಮೇಲೆ ಹೇಳಿರುವ '**ವು**' ಎಂಬ ಬಹುವಚನ ಸೂಚಕ ಆಗಮ ಬಂದಲ್ಲೆಲ್ಲ '**ವು**' ಕಾರದ ಮುಂದೆ '**ಗಳು**' ಎಂಬುದೂ ಸಾಮಾನ್ಯವಾಗಿ ಬರುವುದುಂಟು. ಆದರೆ '**ಯಾವುದು?**' ಎಂಬ ಪ್ರಶ್ನಾರ್ಥಕ ಸರ್ವನಾಮದ ಮುಂದೆ ಬರುವುದಿಲ್ಲ.

ಉದಾಹರಣೆಗೆ:– ಅದು + ವು + ಗಳು + ಉ = ಅವುಗಳು
ಅದು + ವು + ಗಳು + ಅನ್ನು = ಅವುಗಳನ್ನು
ಅದು + ವು + ಗಳು + ಇಂದ = ಅವುಗಳಿಂದ
ಅದು + ವು + ಗಳು + ಇಗೆ = ಅವುಗಳಿಗೆ
ಇದರಂತೆ–ದೊಡ್ಡವುಗಳು ಚಿಕ್ಕವುಗಳು ಎಲ್ಲವುಗಳು–ಇತ್ಯಾದಿ.

**(ix) 'ಅವು' :– ನಪುಂಸಕಲಿಂಗದಲ್ಲಿ ಕೆಲವು ಕಡೆ 'ಅವು' ಎಂಬುದು ಆಗಮವಾಗಿ ಬರುವುದುಂಟು.**

ಉದಾಹರಣೆಗೆ:– ಇನಿದು + ಅವು + ಉ = ಇನಿಯವು
ಇನಿದು + ಅವು + ಅನ್ನು = ಇನಿಯವನ್ನು
ಕಿರಿದು + ಅವು + ಅಕ್ಕೆ = ಕಿರಿಯವಕ್ಕೆ
ಹಿರಿದು + ಅವು + ಅನ್ನು = ಹಿರಿಯವನ್ನು–ಇತ್ಯಾದಿಗಳು.

**(x) 'ಕಳು':– ಮಗು, ಮಗಳು, ಮಗ–ಈ ಮೂರು ಪ್ರಕೃತಿಗಳ ಮೇಲೆ ಬಹುವಚನದಲ್ಲಿ 'ಕಳು' ಎಂಬುದು ಆಗಮವಾಗಿ ಬರುವುದು. ಆಗ ಗು, ಗಳು, ಗ, ಎಂಬುದಕ್ಕೆ 'ಕ್' ಎಂಬ ಅಕ್ಷರ ಆದೇಶವಾಗುವುದು.**

ಉದಾಹರಣೆಗೆ:–

ಮಗು + ಕಳು + ಉ = ಮಕ್ + ಕಳು + ಉ = ಮಕ್ಕಳು
ಮಗಳು + ಕಳು + ಇಂದ = ಮಕ್ + ಕಳು + ಇಂದ = ಮಕ್ಕಳಿಂದ
ಮಗ + ಕಳು + ಅನ್ನು = ಮಕ್ + ಕಳು + ಅನ್ನು = ಮಕ್ಕಳನ್ನು–ಇತ್ಯಾದಿ

**(xi) 'ವರು':– ಸಂಖ್ಯೇಯವಾಚಕಗಳಲ್ಲಿ ಮಾತ್ರ 'ವರು' ಎಂಬುದು ಆಗಮವಾಗಿ ಬರುವುದು.**

ಉದಾಹರಣೆಗೆ:– ಮೂರು + ವರು + ಅನ್ನು = ಮೂವರನ್ನು
ಮೂರು + ವರು + ಉ = ಮೂವರು
ನಾಲ್ಕು + ವರು + ಇಂದ = ನಾಲ್ವರಿಂದ[45]

ಇದರಂತೆ–ಇರ್ವರು, ಐವರು, ನೂರ್ವರು, ನಾಲ್ವರು, ಸಾಸಿರ್ವರು, ಐನೂರ್ವರು–ಇತ್ಯಾದಿ. (ಇರ್ವರು ಎಂಬಲ್ಲಿ ಎರಡು ಎಂಬುದು 'ಇರ್' ಎಂದೂ, ಮೂವರು ಎಂಬಲ್ಲಿ ಮೂರು

---

[45] ನಾಲ್ಕು+ವರು+ಇಂದ–ಇಲ್ಲಿ ನಾಲ್ಕು ಎಂಬಲ್ಲಿ ಕೊನೆಯ ಸಂಯುಕ್ತಾಕ್ಷರ 'ಲ್ಕು' ಎಂಬುದು ಲಕಾರವಾಗಿ 'ನಾಲ್' ಎಂದು ಉಳಿಯುವುದು.

ಎಂಬುದು 'ಮೂ' ಎಂದೂ, ಸಾಸಿರ್ವರು ಎಂಬಲ್ಲಿ ಸಾಸಿರ ಎಂಬುದು ಸಾಸಿರ್ ಎಂದೂ ಉಳಿಯುವುದು. ಐನೂರ್ವರು ಎಂಬಲ್ಲಿ ಐನೂರ್ ಎಂದೂ ಉಳಿಯುವುದು.)

# V – ವಿಭಕ್ತಿ ಪ್ರತ್ಯಯಗಳು

ಇದುವರೆಗೆ ನಾಮಪ್ರಕೃತಿ, ಲಿಂಗ ಮತ್ತು ವಚನಗಳ ಬಗೆಗೆ ಅರಿತಿರುವಿರಿ. ಈ ನಾಮಪ್ರಕೃತಿಗಳಿಗೆ ೮ ವಿಧವಾದ ವಿಭಕ್ತಿಪ್ರತ್ಯಯಗಳು[46] ಅನೇಕ ಕಾರಕಾರ್ಥಗಳಲ್ಲಿ ಸೇರುವುವು. ಈಗ ಹಾಗೆ ಬರುವ ಪ್ರತ್ಯಯಗಳಾವುವು? ಅವುಗಳ ಪ್ರಯೋಜನವೇನು ಎಂಬುದನ್ನು ತಿಳಿಯೋಣ. ಈ ಕೆಳಗಿನ ವಾಕ್ಯಗಳನ್ನು ನೋಡಿರಿ:–

"**ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು**" ಈ ವಾಕ್ಯವು–ಭೀಮ, ತಾನು, ಬಲಗಾಲು, ಚೆಂಡು–ಹೀಗೆ ಕೇವಲ ನಾಮಪ್ರಕೃತಿಗಳನ್ನೇ ಹೇಳಿ ಒದೆದನು ಎಂದಿದ್ದರೆ ಅರ್ಥವಾಗುತ್ತಿರಲಿಲ್ಲ.

"**ಭೀಮ, ತಾನು, ಬಲಗಾಲು, ಚೆಂಡು**" ಈ ನಾಲ್ಕು ಪ್ರಕೃತಿಗಳಿಗೆ ಪರಸ್ಪರ ವಾಕ್ಯದಲ್ಲಿ ಒಂದು ಸಂಬಂಧವಿದೆ. ಈ ಸಂಬಂಧವನ್ನು ಪ್ರತ್ಯಯಗಳು ಉಂಟುಮಾಡುತ್ತವೆ. ಹೇಗೆಂಬುದನ್ನು ನೋಡಿರಿ.

'**ಭೀಮ**' ಎಂಬ ಪ್ರಕೃತಿಯ ಮೇಲೆ '**ಉ**' ಪ್ರತ್ಯಯ ಸೇರಿದಾಗ '**ಭೀಮನು**' ಎಂಬ ಕರ್ತೃಪದವಾಗಿ ಒದೆಯುವ ಕೆಲಸ ಮಾಡಿದನು ಎಂಬ ಅರ್ಥವು ಹೊಳೆಯುವುದು–ಮುಂದಿನ ಪ್ರಶ್ನೆ '**ಏನನ್ನು**' ಒದೆದನು? ಎಂಬುದು. ಆಗ '**ಚೆಂಡು**' ಎಂಬ ಪ್ರಕೃತಿಯಮೇಲೆ ಕರ್ಮಾರ್ಥದ '**ಅನ್ನು**' ಪ್ರತ್ಯಯ ಸೇರಿ '**ಚೆಂಡನ್ನು**' ಎಂಬ ಕರ್ಮಪದವಾಯಿತು. ಒದೆಯುವುದಕ್ಕೆ ಇದು ಕರ್ಮವಾಯಿತು. ಇದರಂತೆ ಮುಂದೆ **ಯಾವುದರಿಂದ?** ಎಂಬ ಪ್ರಶ್ನೆ ಹುಟ್ಟುವುದು. ಆಗ '**ಬಲಗಾಲು**' ಎಂಬ ಪ್ರಕೃತಿಯ ಮುಂದೆ ಸಾಧನಾರ್ಥಕ (ಕರಣಾರ್ಥಕ) '**ಇಂದ**' ಪ್ರತ್ಯಯವು ಸೇರಿ '**ಬಲಗಾಲಿನಿಂದ**' ಎಂಬ ಕರಣಾರ್ಥಕ ಪದದ ಸಂಬಂಧವುಟಾಯಿತು. '**ತಾನು**' ಎಂಬ ಪ್ರಕೃತಿಯ ಮೇಲೆ '**ಅ**' ಎಂಬ ಸಂಬಂಧಾರ್ಥಕ ಪ್ರತ್ಯಯ ಸೇರಿ '**ತನ್ನ**' ಸಂಬಂಧವಾದ ಬಲಗಾಲಿ ನಿಂದ ಎಂಬ ಸಂಬಂಧವು ಸೂಚಿತವಾಗುವುದು.

ಇಲ್ಲಿ ಬಂದಿರುವ ನಾಲ್ಕು ಪ್ರಕೃತಿಗಳ ಮೇಲೂ–

೧. '**ಭೀಮನು**' ಎಂಬಲ್ಲಿಯ '**ಉ**' ಪ್ರತ್ಯಯ **ಕರ್ತೃಾರ್ಥ**ದಲ್ಲೂ,

೨. '**ಚೆಂಡನ್ನು**' ಎಂಬಲ್ಲಿಯ '**ಅನ್ನು**' ಪ್ರತ್ಯಯ **ಕರ್ಮಾರ್ಥ**ದಲ್ಲೂ,

[46]ವಿಭಕ್ತಿಪ್ರತ್ಯಯಗಳು ಏಳು ಮಾತ್ರ. ಸಂಬೋಧನೆಯನ್ನು ಸೇರಿಸಿದರೆ ಎಂಟಾಗುವುವು. ಆದರೆ ಸಂಬೋಧನೆಯು ಪ್ರಥಮಾ ವಿಭಕ್ತಿಯಲ್ಲಿಯೇ ಸೇರಿ ಸಂಬೋಧನಾ ಪ್ರಥಮಾವಿಭಕ್ತಿಯೆನಿಸುವುದು. ಇಲ್ಲಿ ಸ್ಪಷ್ಟತೆಗೋಸುಗ ೮ ವಿಭಕ್ತಿಯೆಂದು ಹೇಳಿದೆ. ಇವುಗಳಲ್ಲಿ ಷಷ್ಠೀ, ಸಂಬೋಧನೆಯನ್ನುಳಿದು ಉಳಿದ ಆರು ವಿಭಕ್ತಿಗಳು ಕಾರಕಾರ್ಥಗಳೆನಿಸುವುವು.

ಇ. '**ತನ್ನ**' ಎಂಬಲ್ಲಿಯ '**ಅ**' ಪ್ರತ್ಯಯ **ಸಂಬಂಧ**ದಲ್ಲೂ,

ಈ. '**ಬಲಗಾಲಿನಿಂದ**' ಎಂಬಲ್ಲಿಯ '**ಇಂದ**' ಪ್ರತ್ಯಯ **ಸಾಧನಾರ್ಥ**ದಲ್ಲೂ ಎಂದರೆ ಕರಣಾರ್ಥದಲ್ಲೂ ಸೇರಿ ವಾಕ್ಯದಲ್ಲಿ ಪರಸ್ಪರ ಸಂಬಂಧವನ್ನುಂಟುಮಾಡುವುವು.

ಕೇವಲ ಪ್ರಕೃತಿಗಳನ್ನೇ ಪ್ರಯೋಗ ಮಾಡುವುದು ಸಾಧ್ಯವಿಲ್ಲ. ಪ್ರಯೋಗ ಮಾಡಲೂ ಬಾರದು ಎಂಬುದು ಮೇಲಿನ ವಿವರಣೆಯಿಂದ ಅರ್ಥವಾಗುವುದು. ಅಲ್ಲದೆ **ಉ, ಅನ್ನು, ಇಂದ,**–ಇತ್ಯಾದಿ ಪ್ರತ್ಯಯಗಳೂ ಪ್ರಯೋಗಕ್ಕೆ ಯೋಗ್ಯವಲ್ಲ. ಕೆಲವು ಕಡೆ ವಾಕ್ಯಗಳಲ್ಲಿ ವಿಭಕ್ತಿಪ್ರತ್ಯಯವು ಇಲ್ಲದಂತೆ ಕಂಡುಬಂದರೂ ಅವು ಬಂದು ಲೋಪವಾಗಿವೆಯೆಂದು ಭಾವಿಸಬೇಕು.

ಉದಾಹರಣೆಗೆ:–

"**ಭೀಮನು ಚೆಂಡನ್ನು ಎಸೆದನು**" –ಎಂಬ ವಾಕ್ಯವು "**ಭೀಮ ಚೆಂಡನ್ನು ಎಸೆದನು**"–ಹೀಗೆ ಪ್ರಯೋಗಿಸಲ್ಪಟ್ಟರೆ '**ಭೀಮ**' ಎಂಬುದರ ಮೇಲೆ ವಿಭಕ್ತಿಪ್ರತ್ಯಯವೇ ಬಂದಿಲ್ಲವೆಂದು ಹೇಳಲಾಗದು. ಆದರೆ ಅಲ್ಲಿ '**ಉ**' ಎಂಬ ವಿಭಕ್ತಿಪ್ರತ್ಯಯ ಬಂದು ಲೋಪವಾಗಿದೆ ಎಂದು ತಿಳಿಯಬೇಕು. ಹಾಗಾದರೆ ವಿಭಕ್ತಿಪ್ರತ್ಯಯವೆಂದರೇನು? ಎಂಬ ಬಗೆಗೆ ಕೆಳಗಿನಂತೆ ಸೂತ್ರವನ್ನು ಹೇಳಬಹುದು.

**(52) ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಾಧಿಕಾರಕಾರ್ಥಗಳನ್ನು ವಿಭಾಗಿಸಿಕೊಡುವ ಶಬ್ದರೂಪವೇ ವಿಭಕ್ತಿ ಎನಿಸುವುದು.**

ಷಷ್ಠೀವಿಭಕ್ತಿಯು ಕಾರಕಾರ್ಥಗಳಲ್ಲಿ ಸೇರಿಲ್ಲ. ಅದರ ಹಾಗೆ ಸಂಬೋಧನಾ ವಿಭಕ್ತಿಯೂ ಸೇರಿಲ್ಲ. ಕೇವಲ **ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮೀ, ಸಪ್ತಮೀ** ಈ ಆರು ವಿಭಕ್ತಿಗಳೇ ಕಾರಕಾರ್ಥಗಳನ್ನು ವಿಭಾಗಿಸಿ ಕೊಡುವಂಥವುಗಳು. ಅವುಗಳ ವಿಷಯವನ್ನು ಈಗ ತಿಳಿಯೋಣ.

## ವಿಭಕ್ತಿಗಳು–ಕಾರಕಾರ್ಥಗಳು–ಪ್ರತ್ಯಯಗಳು–ಪದಗಳು

| ಸಂಖ್ಯೆ | ವಿಭಕ್ತಿಗಳು | ಅರ್ಥಗಳು (ಕಾರಕಾರ್ಥಗಳು) | ವಿಭಕ್ತಿಪ್ರತ್ಯಯ | | ಹೊಸಗನ್ನಡ ನಾಮಪದಗಳು | | ಹಳಗನ್ನಡ ನಾಮಪದಗಳು | |
|---|---|---|---|---|---|---|---|---|
| | | | ಹೊಸಗನ್ನಡ | ಹಳಗನ್ನಡ | ಏಕವಚನ | ಬಹುವಚನ | ಏಕವಚನ | ಬಹುವಚನ |
| ೧ | ಪ್ರಥಮಾ[47] | ಕರ್ತ್ರರ್ಥ | ಉ | ಮ್ | ರಾಮನು | ರಾಮರು | ರಾಮಮ್ | ರಾಮರ್ |
| ೨ | ದ್ವಿತೀಯಾ | ಕರ್ಮಾರ್ಥ | ಅನ್ನು | ಅಂ | ರಾಮನನ್ನು | ರಾಮರನ್ನು | ರಾಮನಂ | ರಾಮರಂ |
| ೩ | ತೃತೀಯಾ | ಕರಣಾರ್ಥ (ಸಾಧನಾರ್ಥ) | ಇಂದ | ಇಂ, ಇಂದು, ಇಂದೆ | ರಾಮನಿಂದ | ರಾಮರಿಂದ | ರಾಮನಿಂ ರಾಮನಿಂದಂ ರಾಮನಿಂದೆ | ರಾಮರಿಂ ರಾಮರಿಂದಂ ರಾಮರಿಂದೆ |
| ೪ | ಚತುರ್ಥೀ | ಸಂಪ್ರದಾನ (ಕೊಡುವಿಕೆ) | ಗೆ, ಇಗೆ, ಕ್ಕೆ, ಅಕ್ಕೆ[48] | ಗೆ, ಕೆ, ಕ್ಕೆ | ರಾಮನಿಗೆ | ರಾಮರಿಗೆ | ರಾಮಂಗೆ | ರಾಮರ್ಗೆ |

[47] ಪ್ರಥಮಾವಿಭಕ್ತಿಪ್ರತ್ಯಯವು ಹೊಸಗನ್ನಡ–ಹಳಗನ್ನಡ ಎರಡರಲ್ಲೂ ಇಲ್ಲವೆಂದೂ, ಪ್ರಕೃತಿಗಳೇ ಪ್ರಥಮಾವಿಭಕ್ತ್ಯಂತ ರೂಪಗಳಾಗಿರುತ್ತವೆಂದೂ ಆಧುನಿಕ ಭಾಷಾಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.

[48] ಕೆಲವುಕಡೆ ವಿಭಕ್ತಿಪ್ರತ್ಯಯಗಳು ಮೂರು ನಾಲ್ಕು ಇದ್ದು ಒಂದೇ ಪ್ರಕೃತಿಯ ಮೇಲೆ ಅವೆಲ್ಲವೂ ಬರುತ್ತವೆಂದು ತಿಳಿಯಬಾರದು. ಒಂದೊಂದು ಕಡೆಯಲ್ಲಿ ಒಂದೊಂದು ವಿಭಕ್ತಿಪ್ರತ್ಯಯ ಬರುತ್ತದೆಂದು ತಿಳಿಯಬೇಕು. ಹಳಗನ್ನಡದಲ್ಲಿ ತೃತೀಯಾ ವಿಭಕ್ತಿಪ್ರತ್ಯಯವು 'ಎ' ಎಂದು ಕೆಲವುಕಡೆ ಅಕಾರಾಂತ ನಪುಂಸಕಲಿಂಗ ಶಬ್ದಗಳಿಗೆ ಮಾತ್ರ ಬರುವುದು. ಉದಾಹರಣೆಗೆ:– ಕ್ರಮದೆ, ನಯದೆ–ಇತ್ಯಾದಿ.

| ಸಂಖ್ಯೆ | ವಿಭಕ್ತಿಗಳು | ಅರ್ಥಗಳು (ಕಾರಕಾರ್ಥಗಳು) | ವಿಭಕ್ತಿಪ್ರತ್ಯಯ | | ಹೊಸಗನ್ನಡ ನಾಮಪದಗಳು | | ಹಳಗನ್ನಡ ನಾಮಪದಗಳು | |
|---|---|---|---|---|---|---|---|---|
| | | | ಹೊಸಗನ್ನಡ | ಹಳಗನ್ನಡ | ಏಕವಚನ | ಬಹುವಚನ | ಏಕವಚನ | ಬಹುವಚನ |
| ೫ | ಪಂಚಮೀ[49] | ಅಪಾದಾನ<br>(ಅಗಲಿಕೆ) | ದೆಸೆಯಿಂದ | ಅತ್ತಣಿಂ,<br>ಅತ್ತಣಿಂದಂ<br>ಅತ್ತಣಿಂದೆ | ರಾಮನ<br>ದೆಸೆಯಿಂದ | ರಾಮರ<br>ದೆಸೆಯಿಂದ | ರಾಮನತ್ತಣಿಂ<br>ರಾಮನತ್ತಣಿಂದಂ<br>ರಾಮನತ್ತಣಿಂದೆ | ರಾಮರತ್ತಣಿಂ<br>ರಾಮರತ್ತಣಿಂದಂ<br>ರಾಮರತ್ತಣಿಂದೆ |
| ೬ | ಷಷ್ಠೀ[50] | ಸಂಬಂಧ | ಅ | ಅ | ರಾಮನ | ರಾಮರ | ರಾಮನ | ರಾಮರ |
| ೭ | ಸಪ್ತಮೀ | ಅಧಿಕರಣ | ಅಲ್ಲಿ,<br>ಅಲಿ,<br>ಒಳು, ಎ | ಒಳ್ | ರಾಮನಲ್ಲಿ<br>ರಾಮನಲಿ<br>ರಾಮನೊಳು | ರಾಮರಲ್ಲಿ<br>ರಾಮರಲಿ<br>ರಾಮರೊಳು | ರಾಮನೊಳ್ | ರಾಮರೊಳ್ |
| ೮ | ಸಂಬೋಧನಾ[51] | ಕರೆಯುವಿಕೆ<br>(ಅಭಿಮುಖೀಕರಣ) | ಆ, ಇರಾ,<br>ಏ, ಈ | ಆ, ಇರಾ,<br>ಏ, ಈ | ರಾಮಾ<br>ರಾಮನೇ | ರಾಮರಿರಾ<br>ರಾಮರುಗಳೇ | ರಾಮಾ<br>ರಾಮನೇ | ರಾಮರಿರಾ<br>ರಾಮರ್ಗಳಿರಾ |

[49] ಪಂಚಮೀವಿಭಕ್ತಿಪ್ರತ್ಯಯವು ಕನ್ನಡದಲ್ಲಿ ಇಲ್ಲವೆಂದೂ, ಅದರ ಕಾರ್ಯವನ್ನು ತೃತೀಯಾ ವಿಭಕ್ತಿಪ್ರತ್ಯಯವೇ ಮಾಡುವುದೆಂದೂ, ಸಂಸ್ಕೃತ ವ್ಯಾಕರಣದಲ್ಲಿದ್ದ ಹಾಗೆ ಕನ್ನಡದಲ್ಲೂ ಪಂಚಮೀ ವಿಭಕ್ತಿ ಇರಬೇಕೆಂದು ತಿಳಿದು ಕನ್ನಡ ವ್ಯಾಕರಣಕಾರರು ಹಿಂದಿನಿಂದಲೂ ಆ ವಿಭಕ್ತಿಯನ್ನು ಹೇಳುತ್ತ ಬಂದಿರುವರೆಂದೂ ಆಧುನಿಕ ವಿದ್ವಾಂಸರ ಮತ.

[50] ಷಷ್ಠೀವಿಭಕ್ತಿಗೆ ಸಂಬಂಧಾನ್ವಯವಲ್ಲದೆ ಕಾರಕಾನ್ವಯವಿಲ್ಲ. ಎಲ್ಲ ಕಾರಕಾರ್ಥಗಳ ಸಂಬಂಧದಲ್ಲೂ ಷಷ್ಠೀವಿಭಕ್ತಿ ಬರುತ್ತದಾದ್ದರಿಂದ ಇದು ನೇರವಾಗಿ ಕಾರಕಾರ್ಥವಿಲ್ಲದ್ದೆಂದು ತಿಳಿಯಬೇಕು.

[51] ಸಂಬೋಧನೆಯೆಂಬುದು ಎಂಟನೆಯ ವಿಭಕ್ತಿಯಲ್ಲ. ಇದನ್ನು ಪ್ರಥಮೆಯಲ್ಲಿಯೇ ಸೇರಿಸುವರು. ಇದು ಕಾರಕಾರ್ಥವಲ್ಲ. 'ಇರಾ' ಪ್ರತ್ಯಯ ಬಹುವಚನದಲ್ಲಿ ಮಾತ್ರ ಬರುವುದು.

ವಿಭಕ್ತಿಪ್ರತ್ಯಯಗಳು ನಾಮಪ್ರಕೃತಿಗಳ ಮೇಲೆ ಸೇರುವಾಗ ಬರುವ ಕೆಲವು ಆಗಮಾಕ್ಷರಗಳನ್ನು ಈಗ ನೋಡೋಣ.

['**ಆಗಮಾಕ್ಷರ**' ಎಂದರೆ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವ (ಹೊಸದಾಗಿ ಬರುವ) ಅಕ್ಷರ ಅಥವಾ ಅಕ್ಷರಗಳು.]

### (೧) 'ಅ' ಕಾರಾಂತ ನಾಮಪ್ರಕೃತಿ 'ಅಣ್ಣ' ಶಬ್ದ–

| | | | | | | | | | | | | | ಏಕವಚನ | ಬಹುವಚನ |
|---|---|---|---|---|---|---|---|---|---|---|---|---|---|---|
| ಪ್ರಥಮಾ | – | ಅಣ್ಣ | + | ಉ | = | ಅಣ್ಣ | + | ನ್ | + | ಉ | = | | ಅಣ್ಣನು | ಅಣ್ಣಂದಿರು |
| ದ್ವಿತೀಯಾ | – | ಅಣ್ಣ | + | ಅನ್ನು | = | ಅಣ್ಣ | + | ನ್ | + | ಅನ್ನು | = | | ಅಣ್ಣನನ್ನು | ಅಣ್ಣಂದಿರನ್ನು |
| ತೃತೀಯಾ | – | ಅಣ್ಣ | + | ಇಂದ | = | ಅಣ್ಣ | + | ನ್ | + | ಇಂದ | = | | ಅಣ್ಣನಿಂದ | ಅಣ್ಣಂದಿರಿಂದ |
| ಚತುರ್ಥೀ | – | ಅಣ್ಣ | + | ಇಗೆ | = | ಅಣ್ಣ | + | ನ್ | + | ಇಗೆ | = | | ಅಣ್ಣನಿಗೆ | ಅಣ್ಣಂದಿರಿಗೆ |
| ಪಂಚಮೀ | – | ಅಣ್ಣ | + | ದೆಸೆಯಿಂದ | = | ಅಣ್ಣ | + | ನ್ | + | ದೆಸೆಯಿಂದ | = | | ಅಣ್ಣನ ದೆಸೆಯಿಂದ | ಅಣ್ಣಂದಿರ ದೆಸೆಯಿಂದ |
| ಷಷ್ಠೀ | – | ಅಣ್ಣ | + | ಅ | = | ಅಣ್ಣ | + | ನ್ | + | ಅ | = | | ಅಣ್ಣನ | ಅಣ್ಣಂದಿರ |
| ಸಪ್ತಮೀ | – | ಅಣ್ಣ | + | ಅಲ್ಲಿ | = | ಅಣ್ಣ | + | ನ್ | + | ಅಲ್ಲಿ | = | | ಅಣ್ಣನಲ್ಲಿ | ಅಣ್ಣಂದಿರಲ್ಲಿ |
| ಸಂಬೋಧನಾ | – | ಅಣ್ಣ | + | ಏ | = | ಅಣ್ಣ | + | ನ್ | + | ಏ | = | | ಅಣ್ಣನೇ | ಅಣ್ಣಂದಿರೇ |
| | | ಅಣ್ಣ | + | ಆ | = | ಅಣ್ಣ | + | | | ಆ | = | | ಅಣ್ಣಾ | ಅಣ್ಣಂದಿರಾ |

'**ಅಣ್ಣ**' ಎಂಬ ಅಕಾರಾಂತ ಪುಲ್ಲಿಂಗದಲ್ಲಿ ಏಕವಚನದಲ್ಲಿ ವಿಭಕ್ತಿಪ್ರತ್ಯಯಗಳು ಎಲ್ಲ ಕಡೆಗೂ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ '**ನ**' ಕಾರವು ಆಗಮವಾಗಿ ಬರುತ್ತದೆ. ಸಂಬೋಧನೆಯಲ್ಲಿ '**ಆ**' ಪ್ರತ್ಯಯ ಪರವಾದಾಗ ಮಾತ್ರ '**ನ**' ಕಾರಾಗಮವಾಗುವುದಿಲ್ಲ.

### (೨) 'ಅ' ಕಾರಾಂತ ಸ್ತ್ರೀಲಿಂಗ 'ಅಕ್ಕ' ಶಬ್ದ–

| | | | | | | | | | | | | | ಏಕವಚನ | ಬಹುವಚನ |
|---|---|---|---|---|---|---|---|---|---|---|---|---|---|---|
| ಪ್ರಥಮಾ | – | ಅಕ್ಕ | + | ಉ | = | ಅಕ್ಕ | + | ನ್ | + | ಉ | = | | ಅಕ್ಕನು | ಅಕ್ಕಂದಿರು |
| ದ್ವಿತೀಯಾ | – | ಅಕ್ಕ | + | ಅನ್ನು | = | ಅಕ್ಕ | + | ನ್ | + | ಅನ್ನು | = | | ಅಕ್ಕನನ್ನು | ಅಕ್ಕಂದಿರನ್ನು |
| ತೃತೀಯಾ | – | ಅಕ್ಕ | + | ಇಂದ | = | ಅಕ್ಕ | + | ನ್ | + | ಇಂದ | = | | ಅಕ್ಕನಿಂದ | ಅಕ್ಕಂದಿರಿಂದ |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಚತುರ್ಥೀ | – | ಅಕ್ಕ | + | ಇಗೆ | = | ಅಕ್ಕ | + | ನ್ | + | ಇಗೆ | = | ಅಕ್ಕನಿಗೆ | ಅಕ್ಕಂದಿರಿಗೆ |
| ಪಂಚಮೀ | – | ಅಕ್ಕ | + | ದೆಸೆಯಿಂದ | = | ಅಕ್ಕ | + | ನ್ | + | ದೆಸೆಯಿಂದ | = | ಅಕ್ಕನ ದೆಸೆಯಿಂದ | ಅಕ್ಕಂದಿರ ದೆಸೆಯಿಂದ |
| ಷಷ್ಠೀ | – | ಅಕ್ಕ | + | ಅ | = | ಅಕ್ಕ | + | ನ್ | + | ಅ | = | ಅಕ್ಕನ | ಅಕ್ಕಂದಿರ |
| ಸಪ್ತಮೀ | – | ಅಕ್ಕ | + | ಅಲ್ಲಿ | = | ಅಕ್ಕ | + | ನ್ | + | ಅಲ್ಲಿ | = | ಅಕ್ಕನಲ್ಲಿ | ಅಕ್ಕಂದಿರಲ್ಲಿ |
| ಸಂಬೋಧನಾ | – | ಅಕ್ಕ | + | ಏ | = | ಅಕ್ಕ | + | ನ್ | + | ಏ | = | ಅಕ್ಕನೇ | ಅಕ್ಕಂದಿರೇ |
| | | ಅಕ್ಕ | + | ಆ | = | ಅಕ್ಕ | + | | | ಆ | = | ಅಕ್ಕಾ | ಅಕ್ಕಂದಿರಾ |

ಪುಲ್ಲಿಂಗದಂತೆಯೇ ಈ ಸ್ತ್ರೀಲಿಂಗ ಅಕಾರಾಂತ ಪ್ರಕೃತಿಯ ಮೇಲೆ ಏಕವಚನದಲ್ಲಿ ವಿಭಕ್ತಿಪ್ರತ್ಯಯಗಳು ಸೇರುವಾಗ ಬಹುಶಃ ಎಲ್ಲ ಕಡೆಗೂ '**ನ**' ಕಾರಾಗಮ ಬಂದಿರುವುದನ್ನು ಕಾಣಬಹುದು. ಸಂಬೋಧನೆಯಲ್ಲಿ '**ಆ**' ವಿಭಕ್ತಿಪ್ರತ್ಯಯ ಸೇರಿದಾಗ ಮಾತ್ರ '**ನ**' ಕಾರಾಗಮವಿಲ್ಲ[52].

ಮೇಲೆ ತಿಳಿಸಿದಂತೆ ಸಾಮಾನ್ಯವಾಗಿ ಅಕಾರಾಂತ ಪುಲ್ಲಿಂಗ, ಸ್ತ್ರೀಲಿಂಗಗಳಲ್ಲಿ ಏಕವಚನದ ವಿಭಕ್ತಿಪ್ರತ್ಯಯಗಳು ಸೇರುವಾಗ 'ನ'ಕಾರವು ಆಗಮವಾಗುತ್ತದೆಂದು ತಿಳಿಯಬೇಕು. ಬಹುವಚನ ದಲ್ಲಿ ಬರುವುದಿಲ್ಲ. ಅಲ್ಲಿ ಬೇರೆ ಬಹುವಚನ ಸೂಚಕ ಆಗಮವು ಬರುವುದನ್ನು ಹಿಂದೆಯೇ ತಿಳಿಸಿದೆ.

ಈಗ ಇನ್ನೊಂದು ಬಗೆಯ ಆಗಮ ಬರುವುದನ್ನು ಕೆಳಗಿನ ಅಕಾರಾಂತ ನಪುಂಸಕಲಿಂಗದಲ್ಲಿ ಗಮನಿಸಿರಿ.

### (೩) 'ಮರ' ಎಂಬ 'ಅ' ಕಾರಾಂತ ನಪುಂಸಕಲಿಂಗ ಪ್ರಕೃತಿ–

| ವಿಭಕ್ತಿ | | | | | | | | | | | | ಏಕವಚನ | ಬಹುವಚನ |
|---|---|---|---|---|---|---|---|---|---|---|---|---|---|
| ಪ್ರಥಮಾ | – | ಮರ | + | ಉ | = | ಮರ | + | ವ | + | ಉ | = | ಮರವು | ಮರಗಳು |
| ದ್ವಿತೀಯಾ | – | ಮರ | + | ಅನ್ನು | = | ಮರ | + | ವ | + | ಅನ್ನು | = | ಮರವನ್ನು | ಮರಗಳನ್ನು |
| ತೃತೀಯಾ | – | ಮರ | + | ಇಂದ | = | ಮರ | + | ದ | + | ಇಂದ | = | ಮರದಿಂದ | ಮರಗಳಿಂದ |
| ಚತುರ್ಥೀ | – | ಮರ | + | ಕ್ಕೆ | = | ಮರ | + | | + | ಕ್ಕೆ, ಇಗೆ | = | ಮರಕ್ಕೆ | ಮರಗಳಿಗೆ |

---

[52] ಅಣ್ಣ, ಅಕ್ಕ ಎಂಬ ಶಬ್ದಗಳ ಹಳಗನ್ನಡ ಏಕವಚನದ ರೂಪಗಳು ಕ್ರಮವಾಗಿ ಕೆಳಗಿನಂತಾಗುತ್ತವೆ. ಅಣ್ಣಂ, ಅಣ್ಣನಂ, ಅಣ್ಣನಿಂ, (ಅಣ್ಣನಿಂದಂ, ಅಣ್ಣನಿಂದೆ), ಅಣ್ಣಂಗೆ, ಅಣ್ಣನತ್ತಣಿಂ, (ಅಣ್ಣನತ್ತಣಿಂದಂ, ಅಣ್ಣನತ್ತಣಿಂದೆ), ಅಣ್ಣನ, ಅಣ್ಣನೊಳ್, ಅಣ್ಣಾ, ಅಣ್ಣನೇ–ಇತ್ಯಾದಿ, ಅಕ್ಕಂ, ಅಕ್ಕನಂ, ಅಕ್ಕನಿಂ, (ಅಕ್ಕನಿಂದಂ, ಅಕ್ಕನಿಂದೆ), ಅಕ್ಕಂಗೆ, ಅಕ್ಕನತ್ತಣಿಂ, ಅಕ್ಕನತ್ತಣಿಂದಂ, ಅಕ್ಕನತ್ತಣಿಂದೆ, ಅಕ್ಕನ, ಅಕ್ಕನೊಳ್, ಅಕ್ಕಾ, ಅಕ್ಕನೇ–ಇತ್ಯಾದಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| **ಪಂಚಮೀ** | **–** | **ಮರ** | **+** | **ದೆಸೆಯಿಂದ** | **=** | **ಮರ** | **+** | **ದ** | **+** | **ದೆಸೆಯಿಂದ** | **=** | **ಮರದ ದೆಸೆಯಿಂದ** | **ಮರಗಳ ದೆಸೆಯಿಂದ** |
| **ಷಷ್ಠೀ** | **–** | **ಮರ** | **+** | **ಅ** | **=** | **ಮರ** | **+** | **ದ** | **+** | **ಅ** | **=** | **ಮರದ** | **ಮರಗಳ** |
| **ಸಪ್ತಮೀ** | **–** | **ಮರ** | **+** | **ಅಲ್ಲಿ** | **=** | **ಮರ** | **+** | **ದ** | **+** | **ಅಲ್ಲಿ** | **=** | **ಮರದಲ್ಲಿ** | **ಮರಗಳಲ್ಲಿ** |
| **ಸಂಬೋಧನಾ** | **–** | **ಮರ** | **+** | **ವ** | **=** | **ಮರ** | **+** | **ವ** | **+** | **ಏ** | **=** | **ಮರವೇ** | **ಮರಗಳಿರಾ** |

'**ಮರ**' ಎಂಬ ಅಕಾರಾಂತ ನಪುಂಸಕಲಿಂಗ ನಾಮಪ್ರಕೃತಿಯ ಮೇಲೆ ೮ ವಿಧವಾದ ನಾಮವಿಭಕ್ತಿಪ್ರತ್ಯಯಗಳನ್ನು ಹಚ್ಚಿದಾಗ ಪ್ರಥಮಾ, ದ್ವಿತೀಯಾ, ಸಂಬೋಧನೆಗಳಲ್ಲಿ 'ವ' ಕಾರವೂ, ಚತುರ್ಥಿಯನ್ನುಳಿದು ಬೇರೆ ಕಡೆಗಳಲ್ಲಿ 'ದ' ಕಾರವೂ ಆಗಮಗಳಾಗಿ ಬಂದಿವೆ ಎಂಬುದನ್ನು ಗಮನಿಸಿರಿ.

**ಆದ್ದರಿಂದ ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳ ಮೇಲೆ ಏಕವಚನದಲ್ಲಿ ವಿಭಕ್ತಿ ಪ್ರತ್ಯಯಗಳು ಸೇರುವಾಗ ಪ್ರಾಯಶಃ ಪ್ರಥಮಾ, ದ್ವಿತೀಯಾ, ಸಂಬೋಧನಗಳಲ್ಲಿ 'ವ' ಕಾರವೂ, ತೃತೀಯಾ, ಪಂಚಮೀ, ಷಷ್ಠೀ, ಸಪ್ತಮಿಗಳಲ್ಲಿ 'ದ' ಕಾರವೂ ಆಗಮವಾಗಿ ಬರುವುವು.**

ಪ್ರಾಯಶಃ ಬರುವುವು ಎಂದು ಹೇಳಿರುವುದರಿಂದ ಪ್ರಾಣಿವಾಚಕಗಳಾದ ಅಕಾರಾಂತ ನಪುಂಸಕಲಿಂಗಗಳಲ್ಲಿ ಕೆಲವು ಕಡೆ ದಕಾರವು ಬರುವುದಿಲ್ಲ.

ಉದಾಹರಣೆಗೆ:–

**ಅಕಾರಾಂತ ನಪುಂಸಕಲಿಂಗ ಕೋಣಶಬ್ದ:–** ಕೋಣವು, ಕೋಣನನ್ನು, ಕೋಣನಿಂದ, ಕೋಣನಿಗೆ, ಕೋಣನ ದೆಸೆಯಿಂದ, ಕೋಣನ, ಕೋಣನಲ್ಲಿ, ಕೋಣವೇ (ಕೋಣನೇ)

**ಅಕಾರಾಂತ ನಪುಂಸಕಲಿಂಗ ಗರುಡ ಶಬ್ದ:–** ಗರುಡವು, ಗರುಡನನ್ನು, ಗರುಡನಿಂದ, ಗರುಡನಿಗೆ, ಗರುಡನ ದೆಸೆಯಿಂದ, ಗರುಡನ, ಗರುಡನಲ್ಲಿ, ಗರುಡವೇ (ಗರುಡನೇ).

ಮೇಲಿನ '**ಕೋಣ**' '**ಗರುಡ**' ಈ ಎರಡೂ ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳ ಮೇಲೆ **ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮಿ, ಷಷ್ಠೀ, ಸಪ್ತಮೀ** ಗಳಲ್ಲಿ ಪುಲ್ಲಿಂಗದಂತೆ **ನಕಾರಾಗಮವೂ,** ಪ್ರಥಮಾ ಮತ್ತು ಸಂಬೋಧನೆಗಳಲ್ಲಿ '**ವ**' ಕಾರವೂ, ಸಂಬೋಧನೆಯಲ್ಲಿ ವಿಕಲ್ಪದಿಂದ[53] '**ನ**' ಕಾರವೂ, ತೃತೀಯೇಯಲ್ಲಿ ವಿಕಲ್ಪದಿಂದ '**ಕೋಣದಿಂದ**', '**ಗರುಡದಿಂದ**' ಎಂದು ಆದಾಗ '**ದ**' ಕಾರವೂ ಆಗಮಗಳಾಗುತ್ತವೆಂದು ತಿಳಿಯಬೇಕು.

### (೪) 'ಇನ' ಎಂಬ ಆಗಮ ಬರುವ ವಿಚಾರ

ಗುರು, ಊರು, ಮಗು, ವಧು–ಮೊದಲಾದ ಉಕಾರಾಂತ ಪ್ರಕೃತಿಗಳಿಗೆ ತೃತೀಯಾ, ಪಂಚಮಿ, ಷಷ್ಠೀ, ಸಪ್ತಮೀ ವಿಭಕ್ತಿಗಳಲ್ಲಿ 'ಇನ' ಎಂಬ ಆಗಮ ವಿಕಲ್ಪವಾಗಿ ಬರುವುದು.

---

[53] ವಿಕಲ್ಪ ಎಂದರೆ ಯಾವುದೇ ಒಂದು ಹೇಳಿದ ಕಾರ್ಯವು ಕೆಲವು ಕಡೆ ಬರುವುದು, ಕೆಲವು ಕಡೆ ಬರದಿರುವುದು, ಕೆಲವು ಕಡೆ ಬೇರೆ ಕಾರ್ಯ ಬರುವುದು ಎಂದೂ ಅರ್ಥ.

(ವಿಕಲ್ಪವಾಗಿ ಬರುವುದೆಂದು ಹೇಳಿರುವುದರಿಂದ ಬೇರೊಂದು ಆಗಮವೂ ಬರುವುದೆಂದು ತಿಳಿಯಬೇಕು. ಅಥವಾ ಯಾವ ಆಗಮವೂ ಬಾರದೆ ಇರುವುದೆಂದೂ ತಿಳಿಯಬೇಕು).

ಉದಾಹರಣೆಗೆ:–

| | | | | |
|---|---|---|---|---|
| ತೃತೀಯಾ | (i) | ಗುರುವಿನಿಂದ | (ಇನಾಗಮ) | ಗುರುವಿನಿಂದ (ವಕಾರಾಗಮ) |
| | (ii) | ಊರಿನಿಂದ | (ಇನಾಗಮ) | ಊರಿಂದ (ಯಾವ ಆಗಮವೂ ಇಲ್ಲ) |
| | (iii) | ವಧುವಿನಿಂದ | (ಇನಾಗಮ) | ವಧುವಿನಿಂದ (ವಕಾರಾಗಮ) |
| | (iv) | ಮಗುವಿನಿಂದ | (ಇನಾಗಮ) | ಮಗುವಿನಿಂದ (ವಕಾರಾಗಮ) |
| ಪಂಚಮೀ | (i) | ಗುರುವಿನದೆಸೆಯಿಂದ | (ಇನಾಗಮ) | –– |
| | (ii) | ಊರಿನದೆಸೆಯಿಂದ | (ಇನಾಗಮ) | ಊರದೆಸೆಯಿಂದ (ಯಾವ ಆಗಮವೂ ಇಲ್ಲ) |
| | (iii) | ವಧುವಿನದೆಸೆಯಿಂದ | (ಇನಾಗಮ) | –– |
| | (iv) | ಮಗುವಿನದೆಸೆಯಿಂದ | (ಇನಾಗಮ) | –– |
| ಷಷ್ಠೀ | (i) | ಗುರುವಿನ | (ಇನಾಗಮ) | –– |
| | (ii) | ಊರಿನ | (ಇನಾಗಮ) | ಊರ (ಯಾವ ಆಗಮವೂ ಇಲ್ಲ) |
| | (iii) | ವಧುವಿನ | (ಇನಾಗಮ) | –– |
| | (iv) | ಮಗುವಿನ | (ಇನಾಗಮ) | –– |
| ಸಪ್ತಮೀ | (i) | ಗುರುವಿನಲ್ಲಿ | (ಇನಾಗಮ) | –– |
| | (ii) | ಊರಿನಲ್ಲಿ | (ಇನಾಗಮ) | ಊರಲ್ಲಿ(ಯಾವ ಆಗಮವೂ ಇಲ್ಲ) |
| | (iii) | ವಧುವಿನಲ್ಲಿ | (ಇನಾಗಮ) | –– |
| | (iv) | ಮಗುವಿನಲ್ಲಿ | (ಇನಾಗಮ) | –– |

**(ಇ) 'ಅರ' ಎಂಬಾಗಮ ಬರುವ ವಿಚಾರ**

(i) ಉಕಾರಾಂತಗಳಾದ **ಹಿರಿದು, ಕಿರಿದು** ಮುಂತಾದ ಗುಣವಾಚಕ ಶಬ್ದಗಳು, (ii) **ಒಂದು** ಎಂಬ ಸಂಖ್ಯಾವಾಚಕ ಪದ (iii) **ಅದು, ಇದು** ಮುಂತಾದ ಸರ್ವನಾಮ (iv) **ಕೊಡುವುದು, ಹೋಗುವುದು** ಇತ್ಯಾದಿ '**ಉದು**' ಪ್ರತ್ಯಯಾಂತ ಕೃದಂತಗಳಿಗೆ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿಗಳಲ್ಲಿ '**ಅರ**' ಎಂಬಾಗಮವು ಬರುವುದು.
ಉದಾಹರಣೆಗೆ:–

**(i) ಗುಣವಾಚಕಗಳು – ಹಿರಿದು, ಕಿರಿದು–ಇತ್ಯಾದಿ**

| **ವಿಭಕ್ತಿ** | ಶಬ್ದ:– **ಹಿರಿದು** | | | | | | | |
|---|---|---|---|---|---|---|---|---|
| **ತೃತೀಯಾ** | ಹಿರಿದು | + | ಅರ | + | ಇಂದ | = | ಹಿರಿದರಿಂದ | (ಅರ ಆಗಮ) |
| **ಪಂಚಮೀ** | ಹಿರಿದು | + | ಅರ | + | ದೆಸೆಯಿಂದ | = | ಹಿರಿದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಹಿರಿದು | + | ಅರ | + | ಅ | = | ಹಿರಿದರ | (ಅರ ಆಗಮ) |

| | | | | | | | | |
|---|---|---|---|---|---|---|---|---|
| **ಸಪ್ತಮೀ** | ಹಿರಿದು | + | ಅರ | + | ಅಲ್ಲಿ | = | ಹಿರಿದರಲ್ಲಿ | (ಅರ ಆಗಮ) |

### ಶಬ್ದ:– **ಕಿರಿದು**

| | | | | | | | | |
|---|---|---|---|---|---|---|---|---|
| **ತೃತೀಯಾ** | ಕಿರಿದು | + | ಅರ | + | ಇಂದ | = | ಕಿರಿದರಿಂದ | (ಅರ ಆಗಮ) |
| **ಪಂಚಮೀ** | ಕಿರಿದು | + | ಅರ | + | ದೆಸೆಯಿಂದ | = | ಕಿರಿದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಕಿರಿದು | + | ಅರ | + | ಅ | = | ಕಿರಿದರ | (ಅರ ಆಗಮ) |
| **ಸಪ್ತಮೀ** | ಕಿರಿದು | + | ಅರ | + | ಅಲ್ಲಿ | = | ಕಿರಿದರಲ್ಲಿ | (ಅರ ಆಗಮ) |

### (ii) ಸಂಖ್ಯಾವಾಚಕ – ಒಂದು

| | | | | | | | | |
|---|---|---|---|---|---|---|---|---|
| **ತೃತೀಯಾ** | ಒಂದು | + | ಅರ | + | ಇಂದ | = | ಒಂದರಿಂದ | (ಅರ ಆಗಮ) |
| **ಪಂಚಮೀ** | ಒಂದು | + | ಅರ | + | ದೆಸೆಯಿಂದ | = | ಒಂದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಒಂದು | + | ಅರ | + | ಅ | = | ಒಂದರ | (ಅರ ಆಗಮ) |
| **ಸಪ್ತಮೀ** | ಒಂದು | + | ಅರ | + | ಅಲ್ಲಿ | = | ಒಂದರಲ್ಲಿ | (ಅರ ಆಗಮ) |

### (iii) ಸರ್ವನಾಮ – ಅದು, ಇದು–ಇತ್ಯಾದಿಗಳು

### ಶಬ್ದ:– **ಅದು**

| | | | | | | | | |
|---|---|---|---|---|---|---|---|---|
| **ತೃತೀಯಾ** | ಅದು | + | ಅರ | + | ಇಂದ | = | ಅದರಿಂದ | (ಅರ ಆಗಮ) |
| **ಪಂಚಮೀ** | ಅದು | + | ಅರ | + | ದೆಸೆಯಿಂದ | = | ಅದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಅದು | + | ಅರ | + | ಅ | = | ಅದರ | (ಅರ ಆಗಮ) |
| **ಸಪ್ತಮೀ** | ಅದು | + | ಅರ | + | ಅಲ್ಲಿ | = | ಅದರಲ್ಲಿ | (ಅರ ಆಗಮ) |

### **ಶಬ್ದ:– ಇದು**

| | | | | | | | | |
|---|---|---|---|---|---|---|---|---|
| **ತೃತೀಯಾ** | ಇದು | + | ಅರ | + | ಇಂದ | = | ಇದರಿಂದ | (ಅರ ಆಗಮ) |
| **ಪಂಚಮೀ** | ಇದು | + | ಅರ | + | ದೆಸೆಯಿಂದ | = | ಇದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಇದು | + | ಅರ | + | ಅ | = | ಇದರ | (ಅರ ಆಗಮ) |
| **ಸಪ್ತಮೀ** | ಇದು | + | ಅರ | + | ಅಲ್ಲಿ | = | ಇದರಲ್ಲಿ | (ಅರ ಆಗಮ) |

### (iv) 'ಉದು' ಪ್ರತ್ಯಯಾಂತ ಕೃದಂತಗಳು – ಕೊಡುವುದು, ಹೋಗುವುದು–ಇತ್ಯಾದಿ

### ಶಬ್ದ:– **ಕೊಡುವುದು**

| | | | | | | | | |
|---|---|---|---|---|---|---|---|---|
| **ತೃತೀಯಾ** | ಕೊಡುವುದು | + | ಅರ | + | ಇಂದ | = | ಕೊಡುವುದರಿಂದ | (ಅರ ಆಗಮ) |
| **ಪಂಚಮಿ** | ಕೊಡುವುದು | + | ಅರ | + | ದೆಸೆಯಿಂದ | = | ಕೊಡುವುದರದೆಸೆಯಿಂದ | (ಅರ ಆಗಮ) |
| **ಷಷ್ಠೀ** | ಕೊಡುವುದು | + | ಅರ | + | ಅ | = | ಕೊಡುವುದರ | (ಅರ ಆಗಮ) |
| **ಸಪ್ತಮೀ** | ಕೊಡುವುದು | + | ಅರ | + | ಅಲ್ಲಿ | = | ಕೊಡುವುದರಲ್ಲಿ | (ಅರ ಆಗಮ) |

### ಶಬ್ದ:– **ಹೋಗುವುದು**

| | | | | | | | | |
|---|---|---|---|---|---|---|---|---|
| **ತೃತೀಯಾ** | **ಹೋಗು**ವುದು | + | ಅರ | + | ಇಂದ | = | ಹೋಗುವುದರಿಂದ | (ಅರ ಆಗಮ) |
| **ಪಂಚಮೀ** | **ಹೋಗು**ವುದು | + | ಅರ | + | ದೆಸೆಯಿಂದ | = | ಹೋಗುವುದರ ದೆಸೆಯಿಂದ | (ಅರ ಆಗಮ) |
| **ಷಷ್ಠೀ** | **ಹೋಗು**ವುದು | + | ಅರ | + | ಅ | = | ಹೋಗುವುದರ | (ಅರ ಆಗಮ) |
| **ಸಪ್ತಮೀ** | **ಹೋಗು**ವುದು | + | ಅರ | + | ಅಲ್ಲಿ | = | ಹೋಗುವುದರಲ್ಲಿ | (ಅರ ಆಗಮ) |

ಇದುವರೆಗೆ ಪ್ರಕೃತಿಗಳಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ಏಕವಚನದಲ್ಲಿ ಬರುವ '**ನ**' '**ದ**' '**ಇನ**' '**ಅರ**' ಎಂಬ ಆಗಮಗಳ ಸ್ಥೂಲಪರಿಚಯ ಮಾಡಿಕೊಂಡಿದ್ದೀರಿ. '**ವ**' ಕಾರಾಗಮವಂತೂ ವಿಭಕ್ತಿಪ್ರತ್ಯಯ ಸೇರುವಲ್ಲಷ್ಟೇ ಅಲ್ಲ. ಸಂಧಿಯ ನಿಯಮದಂತೆ ಅದು ಬರಬೇಕಾದಲ್ಲೆಲ್ಲ ಬಂದೇ ಬರುತ್ತದೆ.

**(೬) ಈಗ ಚತುರ್ಥೀ ಸಪ್ತಮೀ ಸಂಬೋಧನೆ ಮೊದಲಾದ ವಿಭಕ್ತಿಪ್ರತ್ಯಯಗಳನ್ನು ಒಂದಕ್ಕಿಂತ ಹೆಚ್ಚಾಗಿ ಹೇಳಿದೆ. ಎಲ್ಲಿ ಎಲ್ಲಿ ಯಾವ ಯಾವ ವಿಭಕ್ತಿಪ್ರತ್ಯಯ ಬರುತ್ತದೆಂಬುದನ್ನು ತಿಳಿಯೋಣ.**

**(i) ಚತುರ್ಥಿ "ಗೆ–ಇಗೆ ಕ್ಕೆ–ಅಕ್ಕೆ" ವಿಭಕ್ತಿಗಳು.**

(ಅ) ಗೆ:– ಹರಿಗೆ, ದೊರೆಗೆ, ಲಕ್ಷ್ಮಿಗೆ, ಕೈಗೆ, ಮೈಗೆ, ವಿಧಿಗೆ, ಅತ್ತೆಗೆ, ತಾಯಿಗೆ, ಮನೆಗೆ.

(ಆ) ಎ, ಐ ಕಾರಾಂತ ಪ್ರಕೃತಿಗಳಿಗೆ ಸಾಮಾನ್ಯವಾಗಿ 'ಗೆ' ಪ್ರತ್ಯಯ ಬರುವುದು.

(ಇ) ಇಗೆ:– ರಾಮನಿಗೆ, ಭೀಮನಿಗೆ, ಕಾಮನಿಗೆ, ದೇವರಿಗೆ, ಬ್ರಾಹ್ಮಣನಿಗೆ, ರಾಮರಿಗೆ, ಭೀಮರಿಗೆ, ಕಾಮರಿಗೆ, ಬ್ರಾಹ್ಮಣರಿಗೆ, ದೇವರಿಗೆ, ಕರುವಿಗೆ, ಹಸುವಿಗೆ, ಅಕ್ಕನಿಗೆ, ಕರುಗಳಿಗೆ, ಹಸುಗಳಿಗೆ, ಅಕ್ಕಂದಿರುಗಳಿಗೆ.

**(ಸಾಮಾನ್ಯವಾಗಿ ಅಕಾರಂತ, ಉಕಾರಾಂತ, ಪ್ರಕೃತಿಗಳಿಗೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳ ಏಕವಚನ, ಬಹುವಚನಗಳೆರಡರಲ್ಲೂ 'ಇಗೆ' ಎಂಬ ಚತುರ್ಥೀವಿಭಕ್ತಿಪ್ರತ್ಯಯ ಬರುವುದು)**

(ಈ) ಕ್ಕೆ:– ನೆಲಕ್ಕೆ, ಹೊಲಕ್ಕೆ, ಕಣಕ್ಕೆ, ತಿಲಕ್ಕೆ, ತೈಲಕ್ಕೆ, ಪುಸ್ತಕಕ್ಕೆ, – ಇತ್ಯಾದಿ.

**(ಸಾಮಾನ್ಯವಾಗಿ ಅಕಾರಾಂತ ನಪುಂಸಕಲಿಂಗಕ್ಕೆ 'ಕ್ಕೆ' ಎಂಬ ವಿಭಕ್ತಿಪ್ರತ್ಯಯುವು ಬರುವುದು.)**

(ಉ) ಅಕ್ಕೆ:– ಒಂದು+ಅಕ್ಕೆ=ಒಂದಕ್ಕೆ. ಇದರಂತೆ– ಎರಡಕ್ಕೆ, ಹತ್ತಕ್ಕೆ, ಎಷ್ಟಕ್ಕೆ, ಅಷ್ಟಕ್ಕೆ –ಇತ್ಯಾದಿ.

**(ಸಾಮಾನ್ಯವಾಗಿ 'ಅಕ್ಕೆ' ಪ್ರತ್ಯಯುವು 'ಉ' ಕಾರಾಂತಗಳಾದ ನಪುಂಸಕಲಿಂಗ ಪ್ರಕೃತಿಗಳ ಮೇಲೆ ಬರುತ್ತದೆಂದು ತಿಳಿಯುಬೇಕು.)**

**(ii) ಸಂಬೋಧನೆಯ 'ಆ, ಏ, ಇರಾ, ಈ' ಪ್ರತ್ಯಯಗಳು ಎಲ್ಲೆಲ್ಲಿ ಬರುತ್ತವೆಂಬುದನ್ನು ಗಮನಿಸಿರಿ.**

(ಅ) ಆ$_3$[54] :– ರಾಮಾ$_3$, ಅಣ್ಣಾ$_3$, ಭೀಮಾ$_3$, ಕೌರವಾ$_3$, ಅಕ್ಕಾ$_3$, ಇತ್ಯಾದಿ ಅಕಾರಾಂತ ಪುಲ್ಲಿಂಗ, ಸ್ತ್ರೀಲಿಂಗ ಪ್ರಕೃತಿಗಳ ಮೇಲೆ ಸಂಬೋಧನೆಯ '**ಆ**' ಕಾರವು ಏಕವಚನ ದಲ್ಲಿ ಮಾತ್ರ ಬರುವುದೆಂದು ತಿಳಿಯಬೇಕು.

(ಆ) ಏ$_3$, ಈ$_3$ :– ರಾಮನೇ$_3$, ಅಣ್ಣನೇ$_3$, ಭೀಮನೇ$_3$, ಕೌರವನೇ$_3$, ತಾಯಿಯೇ$_3$, ಅಜ್ಜಿಯೇ$_3$ –ಇತ್ಯಾದಿ. ತಂಗೀ$_3$, ತಾಯೀ$_3$–ಇಲ್ಲಿ '**ಈ**' ಬಂದಿದೆ.

ಅಕಾರಾಂತ ಪುಲ್ಲಿಂಗದಲ್ಲಿ ನಕಾರಾಗಮ ಬಂದಲ್ಲೆಲ್ಲ ಮತ್ತು ಇಕಾರಾಂತ ಸ್ತ್ರೀಲಿಂಗಗಳಲ್ಲಿ, ನಪುಂಸಕಲಿಂಗಗಳಲ್ಲಿ, ಉಕಾರಾಂತ ಪುಲ್ಲಿಂಗದಲ್ಲಿ 'ಏ$_3$' ಎಂಬ ಸಂಬೋಧನಾ ವಿಭಕ್ತಿಯು ಸಾಮಾನ್ಯವಾಗಿ ಎಲ್ಲ ಕಡೆಗೂ ಬರುತ್ತದೆ.

(ಇ) ಇರಾ$_3$:– ಅಣ್ಣಂದಿರಾ$_3$, ತಾಯಂದಿರಾ$_3$, ರಾಮರುಗಳಿರಾ$_3$, ಮರಗಳಿರಾ$_3$, ತಾಯಿಯರುಗಳಿರಾ$_3$, ಅಕ್ಕಂದಿರುಗಳಿರಾ$_3$, ವನಗಳಿರಾ$_3$, ವಧುಗಳಿರಾ$_3$, ಗಿಡಗಳಿರಾ$_3$, ಕಮಲಗಳಿರಾ$_3$, ಕೋಗಿಲೆಗಳಿರಾ$_3$, ದೇವರುಗಳಿರಾ$_3$–ಇತ್ಯಾದಿ.

(ಬಹುವಚನದಲ್ಲಿ ಸಾಮಾನ್ಯವಾಗಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗದ ಎಲ್ಲ ಪ್ರಕೃತಿಗಳ ಮೇಲೂ, '**ಇರಾ$_3$**' ಪ್ರತ್ಯಯವು ಸೇರುವುದು. ಆಗ ಬಹುವಚನ ಸೂಚಕ **ಅರು, ಗಳು, ಅರುಗಳು, ಅಂದಿರು, ಅಂದಿರುಗಳು**–ಇತ್ಯಾದಿ ಪ್ರತ್ಯಯಗಳು ಆಗಮಗಳಾಗಿ ಬರುತ್ತವೆ.)

**(iii) ಸಪ್ತಮೀಯಲ್ಲಿ ಅಲ್ಲಿ, ಅಲಿ, ಒಳು, ಎ–ಎಂದು ನಾಲ್ಕು ವಿಧವಾದ ವಿಭಕ್ತಿ ಪ್ರತ್ಯಯಗಳನ್ನು ಹೇಳಿರುವೆವಷ್ಟೆ. ಅವು ಎಲ್ಲೆಲ್ಲಿ ಬರುವುವೆಂಬುದನ್ನು ಗಮನಿಸಿರಿ.**

(ಅ) **ಅಲ್ಲಿ:–** ರಾಮನಲ್ಲಿ, ಭೀಮನಲ್ಲಿ, ತಾಯಿಯಲ್ಲಿ, ಅಕ್ಕನಲ್ಲಿ, ಮರದಲ್ಲಿ, ನೆಲದಲ್ಲಿ–ಇತ್ಯಾದಿ.

(ಸಾಮಾನ್ಯವಾಗಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗದ ಎಲ್ಲ ಪ್ರಕೃತಿಗಳ ಮೇಲು '**ಅಲ್ಲಿ**' ಎಂಬ ವಿಭಕ್ತಿಪ್ರತ್ಯಯವು ಸೇರುವುದು.)

(ಆ) **ಅಲಿ:–** ರಾಮನಲಿ, ಭೀಮನಲಿ, ಮರದಲಿ, ಹೊಲದಲಿ, ನೆಲದಲಿ, ಕಲ್ಲಿನಲಿ, ಮುಳ್ಳಿನಲಿ–ಇತ್ಯಾದಿ.

(ಸಾಮಾನ್ಯವಾಗಿ ನಡುಗನ್ನಡ ಶೈಲಿಯ ಬರವಣಿಗೆಯಲ್ಲಿ '**ಅಲಿ**' ಪ್ರತ್ಯಯದ ಪ್ರಯೋಗ ವಿಶೇಷ. ಹೊಸಗನ್ನಡದಲ್ಲೂ ಕೆಲವರು ಪ್ರಯೋಗಿಸುತ್ತಾರೆ. ಇದೂ ಕೂಡ ಸಾಮಾನ್ಯವಾಗಿ ಎಲ್ಲಾ ಪ್ರಕೃತಿಗಳ ಮೇಲೂ ಬರುತ್ತದೆ.)

---

[54]'ಆ' ಹೀಗೆ ಆಕಾರದ ಕೆಳಗೆ '3' ನ್ನು ಬರೆದು ತೋರಿಸಿರುವುದರ ಉದ್ದೇಶ ಹಿಂದೆ ಸಂಜ್ಞಾಪ್ರಕರಣದಲ್ಲಿ ತಿಳಿಸಿರುವಂತೆ 'ಪ್ಲುತಸ್ವರ' ಎಂಬುದರ ಗುರುತಿಗಾಗಿ. ಆ ಆಕಾರವು ದೀರ್ಘಸ್ವರಮಾತ್ರ ಅಲ್ಲ. 3 ಮಾತ್ರೆಗಳ ಕಾಲದವರೆಗೆ ಎಳೆದು ಹೇಳುವ ಪ್ಲುತಸ್ವರವೆಂಬ ತಿಳಿವಳಿಕೆಗಾಗಿ. ಗ್ರಂಥಾದಿಗಳಲ್ಲಿ ಹಾಗೆ ಬರೆಯುವುದಿಲ್ಲ. ವ್ಯಾಕರಣದ ಈ ಪುಸ್ತಕದಲ್ಲಿ ಹಾಗೆ ಬರೆದಿರುವುದು ಕೇವಲ ತಿಳಿವಳಿಕೆಗಾಗಿ ಮಾತ್ರ.

(ಇ) **ಒಳು:–** ರಾಮನೊಳು, ಭೀಮನೊಳು, ಮರದೊಳು, ಕಲ್ಲಿನೊಳು, ಮನೆಯೊಳು, ರಾಮರೊಳು, ಭೀಮರೊಳು, ಮರಗಳೊಳು, ಕಲ್ಲುಗಳೊಳು, ಮನೆಗಳೊಳು, ಅಮ್ಮನೊಳು, ಅಕ್ಕನೊಳು, ಅಮ್ಮಂದಿರೊಳು, ಅಕ್ಕಂದಿರೊಳು–ಹೀಗೆ ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕಲಿಂಗ ಮೂರರ ಏಕವಚನ, ಬಹುವಚನಗಳಲ್ಲೂ '**ಒಳು**' ಸಪ್ತಮೀ ವಿಭಕ್ತಿಯನ್ನು ಬಳಸುವುದುಂಟು. ಮುಖ್ಯವಾಗಿ ನಡುಗನ್ನಡ ಶೈಲಿಯಲ್ಲಿ ಇದು ವಿಶೇಷವಾಗಿ ಕಂಡುಬರುತ್ತದೆ. ಹೊಸಗನ್ನಡದಲ್ಲೂ ಬಳಸುತ್ತಾರೆ.

(ಈ) **ಏ:–** ಮೇಲೆ, ಕೆಳಗೆ, ಒಳಗೆ, ಹೊರಗೆ, ಹಿಂದೆ, ಮುಂದೆ–ಇತ್ಯಾದಿ ದಿಗ್ವಾಚಕಗಳ ಮೇಲೆ '**ಏ**' ಎಂಬ ಸಪ್ತಮೀ ವಿಭಕ್ತಿಪ್ರತ್ಯಯವು ಪ್ರಯೋಗಿಸಲ್ಪಡುವುದು.

**(೭) ಈಗ, 'ತಾನು, ನಾನು, ನೀನು, ಏನು' ಇತ್ಯಾದಿ ಸರ್ವನಾಮಗಳ ಮೇಲೆ ವಿಭಕ್ತಿಪ್ರತ್ಯಯಗಳು ಸೇರುವಾಗ ಆಗುವ ರೂಪಾಂತರಗಳನ್ನು ನೋಡೋಣ.** (ಸರ್ವನಾಮಗಳಿಗೆ ಸಂಬೋಧನಾವಿಭಕ್ತಿ ಪ್ರತ್ಯಯಗಳು ಸೇರುವುದಿಲ್ಲವೆಂಬುದನ್ನು ಜ್ಞಾಪಕದಲ್ಲಿಡಬೇಕು.)

**(ಅ) 'ತಾನು' ಸರ್ವನಾಮ ಪ್ರಕೃತಿ**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| **ಪ್ರಥಮಾವಿಭಕ್ತಿ** | – | ತಾನು+ಉ=ತಾನು | ತಾನು+ವ+ಉ=ತಾವು |
| **ದ್ವಿತೀಯಾವಿಭಕ್ತಿ** | – | ತಾನು+ಅನ್ನು=ತನ್ನನ್ನು | ತಾನು+ಅನ್ನು=ತಮ್ಮನ್ನು |
| **ತೃತೀಯಾವಿಭಕ್ತಿ** | – | ತಾನು+ಇಂದ=ತನ್ನಿಂದ | ತಾನು+ಇಂದ=ತಮ್ಮಿಂದ |
| **ಚತುರ್ಥೀವಿಭಕ್ತಿ** | – | ತಾನು+ಗೆ=ತನಗೆ | ತಾನು+ಗೆ=ತಮಗೆ |
| **ಪಂಚಮೀವಿಭಕ್ತಿ** | – | ತಾನು+ದೆಸೆಯಿಂದ=ತನ್ನದೆಸೆಯಿಂದ | ತಾನು+ದೆಸೆಯಿಂದ=ತಮ್ಮದೆಸೆಯಿಂದ |
| **ಷಷ್ಠೀವಿಭಕ್ತಿ** | – | ತಾನು+ಅ=ತನ್ನ | ತಾನು+ಅ=ತಮ್ಮ |
| **ಸಪ್ತಮೀವಿಭಕ್ತಿ** | – | ತಾನು+ಅಲ್ಲಿ=ತನ್ನಲ್ಲಿ | ತಾನು+ಅಲ್ಲಿ=ತಮ್ಮಲ್ಲಿ |

**ಇದರ ಹಾಗೆಯೇ 'ನೀನು' ಶಬ್ದ**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| **ಪ್ರಥಮಾವಿಭಕ್ತಿ** | – | ನೀನು (ನೀನು+ಉ) | ನೀವು |
| **ದ್ವಿತೀಯಾವಿಭಕ್ತಿ** | – | ನಿನ್ನನ್ನು | ನಿಮ್ಮನ್ನು |
| **ತೃತೀಯಾವಿಭಕ್ತಿ** | – | ನಿನ್ನಿಂದ | ನಿಮ್ಮಿಂದ |
| **ಚತುರ್ಥೀವಿಭಕ್ತಿ** | – | ನಿನಗೆ | ನಿಮಗೆ |
| **ಪಂಚಮೀವಿಭಕ್ತಿ** | – | ನಿನ್ನ ದೆಸೆಯಿಂದ | ನಿಮ್ಮ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ನಿನ್ನ | ನಿಮ್ಮ |
| **ಸಪ್ತಮೀವಿಭಕ್ತಿ** | – | ನಿನ್ನಲ್ಲಿ | ನಿಮ್ಮಲ್ಲಿ |

**ಇದರ ಹಾಗೆಯೇ 'ನಾನು' ಶಬ್ದ**

| ವಿಭಕ್ತಿ | ಏಕವಚನ | ಬಹುವಚನ |
|---|---|---|

| | | | |
|---|---|---|---|
| **ಪ್ರಥಮಾವಿಭಕ್ತಿ** | – | ನಾನು | ನಾವು |
| **ದ್ವಿತೀಯಾವಿಭಕ್ತಿ** | – | ನನ್ನನ್ನು | ನಮ್ಮನ್ನು |
| **ತೃತೀಯಾವಿಭಕ್ತಿ** | – | ನನ್ನಿಂದ | ನಮ್ಮಿಂದ |
| **ಚತುರ್ಥೀವಿಭಕ್ತಿ** | – | ನನಗೆ | ನಮಗೆ |
| **ಪಂಚಮೀವಿಭಕ್ತಿ** | – | ನನ್ನ ದೆಸೆಯಿಂದ | ನಮ್ಮ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ನನ್ನ | ನಮ್ಮ |
| **ಸಪ್ತಮೀವಿಭಕ್ತಿ** | – | ನನ್ನಲ್ಲಿ | ನಮ್ಮಲ್ಲಿ |

**ಇದರ ಹಾಗೆಯೇ 'ಏನು' ಶಬ್ದ**

| **ವಿಭಕ್ತಿ** | | **ಏಕವಚನ** | **ಬಹುವಚನ** |
|---|---|---|---|
| **ಪ್ರಥಮಾವಿಭಕ್ತಿ** | – | ಏನು | (**'ಏನು' ಶಬ್ದದ** ಬಹುವಚನ **ರೂಪವಿಲ್ಲ)** |
| **ದ್ವಿತೀಯಾವಿಭಕ್ತಿ** | – | ಏನನ್ನು | |
| **ತೃತೀಯಾವಿಭಕ್ತಿ** | – | ಏತರಿಂದ | |
| **ಚತುರ್ಥೀವಿಭಕ್ತಿ** | – | ಏತಕ್ಕೆ | |
| **ಪಂಚಮೀವಿಭಕ್ತಿ** | – | ಏತರ ದೆಸೆಯಿಂದ | |
| **ಷಷ್ಠೀವಿಭಕ್ತಿ** | – | ಏತರ | |
| **ಸಪ್ತಮೀವಿಭಕ್ತಿ** | – | ಏತರಲ್ಲಿ | |

ಮೇಲಿನ ತಾನು, ನಾನು, ನೀವು, ಏನು ಶಬ್ದಗಳ ಸಿದ್ಧರೂಪ ನೋಡಿದರೆ–ತಾನು, ನೀನು, ನಾನು ಶಬ್ದಗಳು ಪ್ರಥಮಾವಿಭಕ್ತಿಯನ್ನುಳಿದು ಉಳಿದ ವಿಭಕ್ತಿಪ್ರತ್ಯಯಗಳು ಸೇರುವಾಗ ಕ್ರಮವಾಗಿ ತನ್ನ, ನಿನ್ನ, ನನ್ನ–ಎಂಬ ರೂಪ ಧರಿಸಿ ವಿಭಕ್ತಿಪ್ರತ್ಯಯಗಳನ್ನು ಹೊಂದುತ್ತವೆ. ಚತುರ್ಥೀವಿಭಕ್ತಿ ಪ್ರತ್ಯಯ ಸೇರುವಾಗ ಮಾತ್ರ ತನ, ನಿನ, ನನ–ರೂಪ ಧರಿಸುತ್ತವೆ. '**ಏನು**' ಎಂಬ ಪ್ರಶ್ನಾರ್ಥಕ ಸರ್ವನಾಮವು ಪ್ರಥಮಾ, ದ್ವಿತೀಯಾ, ಚತುರ್ಥೀ ವಿಭಕ್ತಿಗಳನ್ನುಳಿದು ಉಳಿದ ಕಡೆಗೆ '**ಏತರ**' ಎಂದೂ, ದ್ವಿತೀಯೆಯಲ್ಲಿ '**ಏನು**' ಎಂದೂ, ಚತುರ್ಥೀಯಲ್ಲಿ ಮಾತ್ರ '**ಏತ**' ಎಂದೂ ರೂಪ ಧರಿಸಿ ವಿಭಕ್ತಿಪ್ರತ್ಯಯ ಹೊಂದುತ್ತವೆ.

**(೮) ದೊಡ್ಡದು, ಸಣ್ಣದು ಮೊದಲಾದ ಗುಣವಾಚಕಗಳು ವಿಭಕ್ತಿಪ್ರತ್ಯಯಗಳನ್ನು ಹೊಂದುವಾಗ ಆಗುವ ವ್ಯಾಕರಣ ಕ್ರಿಯೆಯನ್ನು ಈ ಕೆಳಗೆ ನೋಡಿರಿ:–**

**(ಅ) 'ದೊಡ್ಡದು' ಶಬ್ದ ಪುಲ್ಲಿಂಗದಲ್ಲಿ:–**

| **ವಿಭಕ್ತಿ** | | **ಏಕವಚನ** | **ಬಹುವಚನ** |
|---|---|---|---|
| **ಪ್ರಥಮಾ** | – | ದೊಡ್ಡ+ಅವನು+ಉ=ದೊಡ್ಡವನು | ದೊಡ್ಡ+ಅವರು+ಉ=ದೊಡ್ಡವರು |
| **ದ್ವಿತೀಯಾ** | – | ದೊಡ್ಡ+ಅವನು+ಅನ್ನು=ದೊಡ್ಡವನನ್ನು | ದೊಡ್ಡ+ಅವರು+ಅನ್ನು=ದೊಡ್ಡವರನ್ನು |
| **ತೃತೀಯಾ** | – | ದೊಡ್ಡ+ಅವನು+ಇಂದ=ದೊಡ್ಡವನಿಂದ | ದೊಡ್ಡ+ಅವರು+ಇಂದ=ದೊಡ್ಡವರಿಂದ |
| **ಚತುರ್ಥೀ** | – | ದೊಡ್ಡ+ಅವನು+ಇಗೆ=ದೊಡ್ಡವನಿಗೆ | ದೊಡ್ಡ+ಅವರು+ಇಗೆ=ದೊಡ್ಡವರಿಗೆ |
| **ಪಂಚಮೀ** | – | ದೊಡ್ಡ+ಅವನು+ದೆಸೆಯಿಂದ=ದೊಡ್ಡವನ | ದೊಡ್ಡ+ಅವರು+ದೆಸೆಯಿಂದ=ದೊಡ್ಡವರ |

| | | | |
|---|---|---|---|
| | | ದೆಸೆಯಿಂದ | ದೆಸೆಯಿಂದ |
| **ಷಷ್ಠೀ** | – | ದೊಡ್ಡ+ಅವನು+ಅ=ದೊಡ್ಡವನ | ದೊಡ್ಡ+ಅವರು+ಅ=ದೊಡ್ಡವರ |
| **ಸಪ್ತಮೀ** | – | ದೊಡ್ಡ+ಅವನು+ಅಲ್ಲಿ=ದೊಡ್ಡವನಲ್ಲಿ | ದೊಡ್ಡ+ಅವರು+ಅಲ್ಲಿ=ದೊಡ್ಡವರಲ್ಲಿ |
| **ಸಂಬೋಧನಾ** | – | ದೊಡ್ಡ+ಅವನು+ಏ=ದೊಡ್ಡವನೇ | ದೊಡ್ಡ+ಅವರು+ಏ=ದೊಡ್ಡವರೇ |

## (ಆ) 'ಸಣ್ಣದು' ಶಬ್ದ ಪುಲ್ಲಿಂಗದಲ್ಲಿ:–

| **ವಿಭಕ್ತಿ** | | **ಏಕವಚನ** | **ಬಹುವಚನ** |
|---|---|---|---|
| **ಪ್ರಥಮಾ** | – | ಸಣ್ಣ+ಅವನು+ಉ=ಸಣ್ಣವನು | ಸಣ್ಣ+ಅವರು+ಉ=ಸಣ್ಣವರು |
| **ದ್ವಿತೀಯಾ** | – | ಸಣ್ಣ+ಅವನು+ಅನ್ನು=ಸಣ್ಣವನನ್ನು | ಸಣ್ಣ+ಅವರು+ಅನ್ನು=ಸಣ್ಣವರನ್ನು |
| **ತೃತೀಯಾ** | – | ಸಣ್ಣ+ಅವನು+ಇಂದ=ಸಣ್ಣವನಿಂದ | ಸಣ್ಣ+ಅವರು+ಇಂದ=ಸಣ್ಣವರಿಂದ |
| **ಚತುರ್ಥೀ** | – | ಸಣ್ಣ+ಅವನು+ಇಗೆ=ಸಣ್ಣವನಿಗೆ | ಸಣ್ಣ+ಅವರು+ಇಗೆ=ಸಣ್ಣವರಿಗೆ |
| **ಪಂಚಮೀ** | – | ಸಣ್ಣ+ಅವನು+ದೆಸೆಯಿಂದ=ಸಣ್ಣವನ ದೆಸೆಯಿಂದ | ಸಣ್ಣ+ಅವರು+ದೆಸೆಯಿಂದ=ಸಣ್ಣವರ ದೆಸೆಯಿಂದ |
| **ಷಷ್ಠೀ** | – | ಸಣ್ಣ+ಅವನು+ಅ=ಸಣ್ಣವನ | ಸಣ್ಣ+ಅವರು+ಅ=ಸಣ್ಣವರ |
| **ಸಪ್ತಮೀ** | – | ಸಣ್ಣ+ಅವನು+ಅಲ್ಲಿ=ಸಣ್ಣವನಲ್ಲಿ | ಸಣ್ಣ+ಅವರು+ಅಲ್ಲಿ=ಸಣ್ಣವರಲ್ಲಿ |
| **ಸಂಬೋಧನಾ** | – | ಸಣ್ಣ+ಅವನು+ಏ=ಸಣ್ಣವನೇ | ಸಣ್ಣ+ಅವರು+ಏ=ಸಣ್ಣವರೇ |

## ಇದರ ಹಾಗೆಯೇ 'ಚಿಕ್ಕ' ಶಬ್ದ ಪುಲ್ಲಿಂಗದಲ್ಲಿ:–

| **ವಿಭಕ್ತಿ** | | **ಏಕವಚನ** | **ಬಹುವಚನ** |
|---|---|---|---|
| **ಪ್ರಥಮಾ** | – | ಚಿಕ್ಕ+ಅವನು+ಉ=ಚಿಕ್ಕವನು | ಚಿಕ್ಕ+ಅವರು+ಉ=ಚಿಕ್ಕವರು |
| **ದ್ವಿತೀಯಾ** | – | ಚಿಕ್ಕ+ಅವನು+ಅನ್ನು=ಚಿಕ್ಕವನನ್ನು | ಚಿಕ್ಕ+ಅವರು+ಅನ್ನು=ಚಿಕ್ಕವರನ್ನು |
| **ತೃತೀಯಾ** | – | ಚಿಕ್ಕ+ಅವನು+ಇಂದ=ಚಿಕ್ಕವನಿಂದ | ಚಿಕ್ಕ+ಅವರು+ಇಂದ=ಚಿಕ್ಕವರಿಂದ |
| **ಚತುರ್ಥೀ** | – | ಚಿಕ್ಕ+ಅವನು+ಇಗೆ=ಚಿಕ್ಕವನಿಗೆ | ಚಿಕ್ಕ+ಅವರು+ಇಗೆ=ಚಿಕ್ಕವರಿಗೆ |
| **ಪಂಚಮೀ** | – | ಚಿಕ್ಕ+ಅವನು+ದೆಸೆಯಿಂದ=ಚಿಕ್ಕವನ ದೆಸೆಯಿಂದ | ಚಿಕ್ಕ+ಅವರು+ದೆಸೆಯಿಂದ=ಚಿಕ್ಕವರ ದೆಸೆಯಿಂದ |
| **ಷಷ್ಠೀ** | – | ಚಿಕ್ಕ+ಅವನು+ಅ=ಚಿಕ್ಕವನ | ಚಿಕ್ಕ+ಅವರು+ಅ=ಚಿಕ್ಕವರ |
| **ಸಪ್ತಮೀ** | – | ಚಿಕ್ಕ+ಅವನು+ಅಲ್ಲಿ=ಚಿಕ್ಕವನಲ್ಲಿ | ಚಿಕ್ಕ+ಅವರು+ಅಲ್ಲಿ=ಚಿಕ್ಕವರಲ್ಲಿ |
| **ಸಂಬೋಧನಾ** | – | ಚಿಕ್ಕ+ಅವನು+ಏ=ಚಿಕ್ಕವನೇ | ಚಿಕ್ಕ+ಅವರು+ಏ=ಚಿಕ್ಕವರೇ |

ಮೇಲಿನ **ದೊಡ್ಡದು, ಸಣ್ಣದು, ಚಿಕ್ಕದು** ಶಬ್ದಗಳು ಪುಲ್ಲಿಂಗದಲ್ಲಿ **ದೊಡ್ಡ, ಸಣ್ಣ, ಚಿಕ್ಕ,** ಎಂದಾಗಿ, ಏಕವಚನದಲ್ಲಿ '**ಅವನು**' ಎಂಬುದೂ, ಬಹುವಚನದಲ್ಲಿ '**ಅವರು**' ಎಂಬುದೂ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುತ್ತವೆ. ಪಂಚಮೀಯಲ್ಲಿ '**ಅವನು**' ಎಂಬುದು '**ಅವನ**' ಎಂದೂ, '**ಅವರು**' ಎಂಬುದು '**ಅವರ**' ಎಂದೂ ಉಳಿಯುವುದು.

**(೯) ಇವೇ ದೊಡ್ಡದು, ಸಣ್ಣದು, ಚಿಕ್ಕದು ಶಬ್ದಗಳು ಸ್ತ್ರೀಲಿಂಗದಲ್ಲಿ ಹೇಗಾಗುತ್ತವೆಂಬುದನ್ನು ಕೆಳಗೆ ನೋಡಿರಿ:–**

**(ಅ) 'ದೊಡ್ಡದು' ಶಬ್ದ ಸ್ತ್ರೀಲಿಂಗದಲ್ಲಿ:–**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| ಪ್ರಥಮಾ | – | ದೊಡ್ಡ+ಅವಳು+ಉ=ದೊಡ್ಡವಳು | ದೊಡ್ಡ+ಅವರು+ಉ=ದೊಡ್ಡವರು |
| ದ್ವಿತೀಯಾ | – | ದೊಡ್ಡ+ಅವಳು+ಅನ್ನು=ದೊಡ್ಡವಳನ್ನು | ದೊಡ್ಡ+ಅವರು+ಅನ್ನು=ದೊಡ್ಡವರನ್ನು |
| ತೃತೀಯಾ | – | ದೊಡ್ಡ+ಅವಳು+ಇಂದ=ದೊಡ್ಡವಳಿಂದ | ದೊಡ್ಡ+ಅವರು+ಇಂದ=ದೊಡ್ಡವರಿಂದ |
| ಚತುರ್ಥೀ | – | ದೊಡ್ಡ+ಅವಳು+ಗೆ=ದೊಡ್ಡವಳಿಗೆ | ದೊಡ್ಡ+ಅವರು+ಇಗೆ=ದೊಡ್ಡವರಿಗೆ |
| ಪಂಚಮೀ | – | ದೊಡ್ಡ+ಅವಳು+ದೆಸೆಯಿಂದ=ದೊಡ್ಡವಳ ದೆಸೆಯಿಂದ | ದೊಡ್ಡ+ಅವರು+ದೆಸೆಯಿಂದ=ದೊಡ್ಡವರ ದೆಸೆಯಿಂದ |
| ಷಷ್ಠೀ | – | ದೊಡ್ಡ+ಅವಳು+ಅ=ದೊಡ್ಡವಳ | ದೊಡ್ಡ+ಅವರು+ಅ=ದೊಡ್ಡವರ |
| ಸಪ್ತಮೀ | – | ದೊಡ್ಡ+ಅವಳು+ಅಲ್ಲಿ=ದೊಡ್ಡವಳಲ್ಲಿ | ದೊಡ್ಡ+ಅವರು+ಅಲ್ಲಿ=ದೊಡ್ಡವರಲ್ಲಿ |
| ಸಂಬೋಧನಾ | – | ದೊಡ್ಡ+ಅವಳು+ಏ=ದೊಡ್ಡವಳೇ | ದೊಡ್ಡ+ಅವರು+ಏ=ದೊಡ್ಡವರೇ |

**(ಆ) ಇದರ ಹಾಗೆಯೇ 'ಸಣ್ಣದು' ಶಬ್ದ ಸ್ತ್ರೀಲಿಂಗದಲ್ಲಿ**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| ಪ್ರಥಮಾವಿಭಕ್ತಿ | – | ಸಣ್ಣವಳು | ಸಣ್ಣವರು |
| ದ್ವಿತೀಯಾವಿಭಕ್ತಿ | – | ಸಣ್ಣವಳನ್ನು | ಸಣ್ಣವರನ್ನು |
| ತೃತೀಯಾವಿಭಕ್ತಿ | – | ಸಣ್ಣವಳಿಂದ | ಸಣ್ಣವರಿಂದ |
| ಚತುರ್ಥೀವಿಭಕ್ತಿ | – | ಸಣ್ಣವಳಿಗೆ | ಸಣ್ಣವರಿಗೆ |
| ಪಂಚಮೀವಿಭಕ್ತಿ | – | ಸಣ್ಣವಳ ದೆಸೆಯಿಂದ | ಸಣ್ಣವರ ದೆಸೆಯಿಂದ |
| ಷಷ್ಠೀವಿಭಕ್ತಿ | – | ಸಣ್ಣವಳ | ಸಣ್ಣವರ |
| ಸಪ್ತಮೀವಿಭಕ್ತಿ | – | ಸಣ್ಣವಳಲ್ಲಿ | ಸಣ್ಣವರಲ್ಲಿ |
| ಸಂಬೋಧನಾ | – | ಸಣ್ಣವಳೇ | ಸಣ್ಣವರೇ |

**(ಇ) 'ಚಿಕ್ಕದು' ಶಬ್ದ ಸ್ತ್ರೀಲಿಂಗದಲ್ಲಿ (ಮೇಲಿನವುಗಳ ಹಾಗೆಯೇ)**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| ಪ್ರಥಮಾವಿಭಕ್ತಿ | – | ಚಿಕ್ಕವಳು | ಚಿಕ್ಕವರು |
| ದ್ವಿತೀಯಾವಿಭಕ್ತಿ | – | ಚಿಕ್ಕವಳನ್ನು | ಚಿಕ್ಕವರನ್ನು |
| ತೃತೀಯಾವಿಭಕ್ತಿ | – | ಚಿಕ್ಕವಳಿಂದ | ಚಿಕ್ಕವರಿಂದ |
| ಚತುರ್ಥೀವಿಭಕ್ತಿ | – | ಚಿಕ್ಕವಳಿಗೆ | ಚಿಕ್ಕವರಿಗೆ |
| ಪಂಚಮೀವಿಭಕ್ತಿ | – | ಚಿಕ್ಕವಳ ದೆಸೆಯಿಂದ | ಚಿಕ್ಕವರ ದೆಸೆಯಿಂದ |
| ಷಷ್ಠೀವಿಭಕ್ತಿ | – | ಚಿಕ್ಕವಳ | ಚಿಕ್ಕವರ |
| ಸಪ್ತಮೀವಿಭಕ್ತಿ | – | ಚಿಕ್ಕವಳಲ್ಲಿ | ಚಿಕ್ಕವರಲ್ಲಿ |

| | | |
|---|---|---|
| **ಸಂಬೋಧನಾ** | – ಚಿಕ್ಕವಳೇ | ಚಿಕ್ಕವರೇ |

ಮೇಲಿನ ಈ ಮೂರು **ದೊಡ್ಡದು, ಸಣ್ಣದು, ಚಿಕ್ಕದು** ಶಬ್ದಗಳ ಸ್ತ್ರೀಲಿಂಗದ ಉದಾಹರಣೆಗಳನ್ನು ನೋಡಿದರೆ, ಕ್ರಮವಾಗಿ ಇವು **ದೊಡ್ಡ, ಚಿಕ್ಕ, ಸಣ್ಣ**–ಎಂಬ ರೂಪಧರಿಸಿ ವಿಭಕ್ತಿಪ್ರತ್ಯಯ ಹೊಂದುವಾಗ '**ಅವಳು**' ಎಂಬುದು ಏಕವಚನದಲ್ಲೂ, '**ಅವರು**' ಎಂಬುದು ಬಹುವಚನದಲ್ಲೂ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ ಆಗಮಗಳಾಗಿ ಬರುವುವು. ಪಂಚಮೀವಿಭಕ್ತಿಪ್ರತ್ಯಯ ಹತ್ತುವಾಗ '**ಅವಳು**' ಎಂಬುದು '**ಅವಳ**' ಎಂದೂ, '**ಅವರು**' ಎಂಬುದು '**ಅವರ**' ಎಂದೂ ಉಳಿಯುವುವು.

**(೧೦) ನಪುಂಸಕಲಿಂಗದಲ್ಲಿ ಈ ದೊಡ್ಡದು, ಸಣ್ಣದು, ಚಿಕ್ಕದು ಶಬ್ದಗಳು ಹೇಗಾಗುತ್ತವೆ ನೋಡಿರಿ:–**

**(ಅ) 'ದೊಡ್ಡದು' ಶಬ್ದ ನಪುಂಸಕಲಿಂಗದಲ್ಲಿ**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| **ಪ್ರಥಮಾವಿಭಕ್ತಿ** | – | ದೊಡ್ಡದು | ದೊಡ್ಡವು |
| **ದ್ವಿತೀಯಾವಿಭಕ್ತಿ** | – | ದೊಡ್ಡದನ್ನು | ದೊಡ್ಡವನ್ನು |
| **ತೃತೀಯಾವಿಭಕ್ತಿ** | – | ದೊಡ್ಡದರಿಂದ | ದೊಡ್ಡವುಗಳಿಂದ |
| **ಚತುರ್ಥೀವಿಭಕ್ತಿ** | – | ದೊಡ್ಡದಕ್ಕೆ | ದೊಡ್ಡವುಗಳಿಗೆ |
| **ಪಂಚಮೀವಿಭಕ್ತಿ** | – | ದೊಡ್ಡದರ ದೆಸೆಯಿಂದ | ದೊಡ್ಡವುಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ದೊಡ್ಡದರ | ದೊಡ್ಡವುಗಳ |
| **ಸಪ್ತಮೀವಿಭಕ್ತಿ** | – | ದೊಡ್ಡದರಲ್ಲಿ | ದೊಡ್ಡವುಗಳಲ್ಲಿ |
| **ಸಂಬೋಧನಾ** | – | ದೊಡ್ಡದೇ | ದೊಡ್ಡವುಗಳೇ |

**(ಆ) ಸಣ್ಣದು, ಚಿಕ್ಕದು ಶಬ್ದಗಳು ನಪುಂಸಕಲಿಂಗದಲ್ಲಿ**

| ವಿಭಕ್ತಿ | | ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|---|---|
| **ಪ್ರಥಮಾವಿಭಕ್ತಿ** | – | ಸಣ್ಣದು | ಸಣ್ಣವು | ಚಿಕ್ಕದು | ಚಿಕ್ಕವು |
| **ದ್ವಿತೀಯಾವಿಭಕ್ತಿ** | – | ಸಣ್ಣದನ್ನು | ಸಣ್ಣವನ್ನು | ಚಿಕ್ಕದನ್ನು | ಚಿಕ್ಕವುಗಳನ್ನು |
| **ತೃತೀಯಾವಿಭಕ್ತಿ** | – | ಸಣ್ಣದರಿಂದ | ಸಣ್ಣವುಗಳಿಂದ | ಚಿಕ್ಕದರಿಂದ | ಚಿಕ್ಕವುಗಳಿಂದ |
| **ಚತುರ್ಥೀವಿಭಕ್ತಿ** | – | ಸಣ್ಣದಕ್ಕೆ | ಸಣ್ಣವುಗಳಿಗೆ | ಚಿಕ್ಕದಕ್ಕೆ | ಚಿಕ್ಕವುಗಳಿಗೆ |
| **ಪಂಚಮೀವಿಭಕ್ತಿ** | – | ಸಣ್ಣದರ ದೆಸೆಯಿಂದ | ಸಣ್ಣವುಗಳ ದೆಸೆಯಿಂದ | ಚಿಕ್ಕದರ ದೆಸೆಯಿಂದ | ಚಿಕ್ಕವುಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಸಣ್ಣದರ | ಸಣ್ಣವುಗಳ | ಚಿಕ್ಕದರ | ಚಿಕ್ಕವುಗಳ |
| **ಸಪ್ತಮೀವಿಭಕ್ತಿ** | – | ಸಣ್ಣದರಲ್ಲಿ | ಸಣ್ಣವುಗಳಲ್ಲಿ | ಚಿಕ್ಕದರಲ್ಲಿ | ಚಿಕ್ಕವುಗಳಲ್ಲಿ |
| **ಸಂಬೋಧನಾ** | – | ಸಣ್ಣದೇ | ಸಣ್ಣವುಗಳೇ | ಚಿಕ್ಕದೇ | ಚಿಕ್ಕವುಗಳೇ |

ಮೇಲೆ ವಿವರಿಸಿದಂತೆ ನಪುಂಸಕಲಿಂಗದಲ್ಲಿ ಈ ಮೂರು ಗುಣವಾಚಕ ಶಬ್ದಗಳು ಎಲ್ಲ ವಿಭಕ್ತಿಗಳ ಏಕವಚನದಲ್ಲಿ ಇದ್ದ ಹಾಗೆಯೇ ಇದ್ದು, ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿಗಳಲ್ಲಿ '**ಅರ**' ಎಂಬ '**ಆಗಮ**' ವನ್ನು ಹೊಂದಿ ವಿಭಕ್ತಿಪ್ರತ್ಯಯಗಳನ್ನು ಧರಿಸಿರುತ್ತವೆ. ಬಹುವಚನದಲ್ಲಿ ಎಲ್ಲ ಕಡೆಗೂ, ದೊಡ್ಡ, ಸಣ್ಣ, ಚಿಕ್ಕ ರೂಪ ಧರಿಸಿ ಪ್ರಥಮೆಯಲ್ಲಿ '**ಅವು**' ಎಂಬಾಗಮವನ್ನೂ, ಉಳಿದ ಎಲ್ಲ ಕಡೆಗೂ '**ಅವುಗಳು**' ಎಂಬಾಗಮವನ್ನೂ ಧರಿಸಿ ವಿಭಕ್ತಿ ಪ್ರತ್ಯಯಗಳನ್ನು ಧರಿಸುತ್ತವೆ.

ಮೂಡಲು, ತೆಂಕಲು, ಪಡುವಲು, ಬಡಗು, ಮುಂದು, ಹಿಂದು, ನಡುವೆ, ಅತ್ತ, ಇತ್ತ, ಎತ್ತ ಮುಂತಾದ ದಿಗ್ವಾಚಕ ಶಬ್ದಗಳಿಗೆ '**ಅಣ**' ಎಂಬುದು ಆಗಮವಾಗಿ ಬರುವುದು.

ಉದಾಹರಣೆಗೆ:– ಮೂಡಣ, ಪಡುವಣ, ತೆಂಕಣ, ಬಡಗಣ, ನಡುವಣ, ಅತ್ತಣ, ಇತ್ತಣ, ಎತ್ತಣ. ಹೀಗೆ '**ಅಣ**' ಆಗಮವು ಬಂದನಂತರ ವಿಭಕ್ತಿಪ್ರತ್ಯಯಗಳು ಸೇರುವುವು.

**(೧೧) ಈಗ ಮುಖ್ಯವಾದ ಕೆಲವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿನ ಶಬ್ದಗಳ ಸಿದ್ಧರೂಪಗಳನ್ನು ಏಕವಚನ ಬಹುವಚನಗಳೆರಡರಲ್ಲೂ ನೋಡಿರಿ.**

| | | (ಅ) ಅಕಾರಾಂತ ಪುಲ್ಲಿಂಗ 'ಹುಡುಗ' ಶಬ್ದ | | (ಆ) ಅಕಾರಾಂತ ಪುಲ್ಲಿಂಗ 'ಮನುಷ್ಯ' ಶಬ್ದ | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಹುಡುಗ(ನು) | ಹುಡುಗರು | ಮನುಷ್ಯ(ನು) | ಮನುಷ್ಯರು |
| **ದ್ವಿತೀಯಾವಿಭಕ್ತಿ** | – | ಹುಡುಗನನ್ನು | ಹುಡುಗರನ್ನು | ಮನುಷ್ಯನನ್ನು | ಮನುಷ್ಯರನ್ನು |
| **ತೃತೀಯಾವಿಭಕ್ತಿ** | – | ಹುಡುಗನಿಂದ | ಹುಡುಗರಿಂದ | ಮನುಷ್ಯನಿಂದ | ಮನುಷ್ಯರಿಂದ |
| **ಚತುರ್ಥೀವಿಭಕ್ತಿ** | – | ಹುಡುಗನಿಗೆ | ಹುಡುಗರಿಗೆ | ಮನುಷ್ಯನಿಗೆ | ಮನುಷ್ಯರಿಗೆ |
| **ಪಂಚಮೀವಿಭಕ್ತಿ** | – | ಹುಡುಗನ ದೆಸೆಯಿಂದ | ಹುಡುಗರ ದೆಸೆಯಿಂದ | ಮನುಷ್ಯನ ದೆಸೆಯಿಂದ | ಮನುಷ್ಯರ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಹುಡುಗನ | ಹುಡುಗರ | ಮನುಷ್ಯನ | ಮನುಷ್ಯರ |
| **ಸಪ್ತಮೀವಿಭಕ್ತಿ** | – | ಹುಡುಗನಲ್ಲಿ | ಹುಡುಗರಲ್ಲಿ | ಮನುಷ್ಯನಲ್ಲಿ | ಮನುಷ್ಯರಲ್ಲಿ |
| **ಸಂಬೋಧನಾ** | – | ಹುಡುಗನೇ<br>ಹುಡುಗಾ | ಹುಡುಗರಿರಾ<br>ಹುಡುಗರುಗಳಿರಾ | ಮನುಷ್ಯನೇ<br>ಮನುಷ್ಯಾ | ಮನುಷ್ಯರೇ<br>ಮನುಷ್ಯರುಗಳಿರಾ |

ಇದರ ಹಾಗೆಯೇ–**ಗಾಣಿಗ, ಒಕ್ಕಲಿಗ, ವೋಸಗಾರ, ಶಂಕರ, ರಾಮ**–ಮುಂತಾದ ಶಬ್ದಗಳನ್ನು ಹೇಳಬಹುದು.

| | | (ಇ) ಇಕಾರಾಂತ ಪುಲ್ಲಿಂಗ 'ಕವಿ' ಶಬ್ದ | | (ಈ) ಇಕಾರಾಂತ ಪುಲ್ಲಿಂಗ 'ಹರಿ' ಶಬ್ದ | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಕವಿ (ಯು) | ಕವಿಗಳು | ಹರಿ(ಯು) | ಹರಿಗಳು |

| | | | | | |
|---|---|---|---|---|---|
| **ದ್ವಿತೀಯಾವಿಭಕ್ತಿ** | – | ಕವಿಯನ್ನು | ಕವಿಗಳನ್ನು | ಹರಿಯನ್ನು | ಹರಿಗಳನ್ನು |
| **ತೃತೀಯಾವಿಭಕ್ತಿ** | – | ಕವಿಯಿಂದ | ಕವಿಗಳಿಂದ | ಹರಿಯಿಂದ | ಹರಿಗಳಿಂದ |
| **ಚತುರ್ಥೀವಿಭಕ್ತಿ** | – | ಕವಿಗೆ | ಕವಿಗಳಿಗೆ | ಹರಿಗೆ | ಹರಿಗಳಿಗೆ |
| **ಪಂಚಮೀವಿಭಕ್ತಿ** | – | ಕವಿಯ ದೆಸೆಯಿಂದ | ಕವಿಗಳ ದೆಸೆಯಿಂದ | ಹರಿಯ ದೆಸೆಯಿಂದ | ಹರಿಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಕವಿಯ | ಕವಿಗಳ | ಹರಿಯ | ಹರಿಗಳ |
| **ಸಪ್ತಮೀವಿಭಕ್ತಿ** | – | ಕವಿಯಲ್ಲಿ | ಕವಿಗಳಲ್ಲಿ | ಹರಿಯಲ್ಲಿ | ಹರಿಗಳಲ್ಲಿ |
| **ಸಂಬೋಧನಾ** | – | ಕವಿಯೇ | { ಕವಿಗಳೇ / ಕವಿಗಳಿರಾ | ಹರಿಯೇ | { ಹರಿಗಳೇ / ಹರಿಗಳಿರಾ |

**(ಉ) ಉಕಾರಾಂತ ಪುಲ್ಲಿಂಗ 'ಗುರು' ಶಬ್ದ** **(ಊ) ಉಕಾರಾಂತ ಪುಲ್ಲಿಂಗ 'ಮನು' ಶಬ್ದ**

| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
|---|---|---|---|---|---|
| **ಪ್ರಥಮಾವಿಭಕ್ತಿ** | – | ಗುರು (ವು) | ಗುರುಗಳು | ಮನು (ವು) | ಮನುಗಳು |
| **ದ್ವಿತೀಯಾವಿಭಕ್ತಿ** | – | ಗುರುವನ್ನು | ಗುರುಗಳನ್ನು | ಮನುವನ್ನು | ಮನುಗಳನ್ನು |
| **ತೃತೀಯಾವಿಭಕ್ತಿ** | – | { ಗುರುವಿಂದ / ಗರುವಿನಿಂದ | ಗುರುಗಳಿಂದ | { ಮನುವಿನಿಂದ / ಮನುವಿಂದ | ಮನುಗಳಿಂದ |
| **ಚತುರ್ಥೀವಿಭಕ್ತಿ** | – | ಗುರುವಿಗೆ | ಗುರುಗಳಿಗೆ | ಮನುವಿಗೆ | ಮನುಗಳಿಗೆ |
| **ಪಂಚಮೀವಿಭಕ್ತಿ** | – | ಗುರುವಿನ ದೆಸೆಯಿಂದ | ಗುರುಗಳ ದೆಸೆಯಿಂದ | ಮನುವಿನ ದೆಸೆಯಿಂದ | ಮನುಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಗುರುವಿನ | ಗುರುಗಳ | ಮನುವಿನ | ಮನುಗಳ |
| **ಸಪ್ತಮೀವಿಭಕ್ತಿ** | – | ಗುರುವಿನಲ್ಲಿ | ಗುರುಗಳಲ್ಲಿ | ಮನುವಿನಲ್ಲಿ | ಮನುಗಳಲ್ಲಿ |
| **ಸಂಬೋಧನಾ** | – | ಗರುವೇ | { ಗುರುಗಳೇ / ಗುರುಗಳಿರಾ | ಮನುವೇ | { ಮನುಗಳೇ / ಮನುಗಳಿರಾ |

**(ಋ) ಋಕಾರಾಂತ ಪುಲ್ಲಿಂಗ 'ಪಿತೃ' ಶಬ್ದ** **(ೠ) ಋಕಾರಾಂತ ಪುಲ್ಲಿಂಗ 'ಭ್ರಾತೃ' ಶಬ್ದ**

| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
|---|---|---|---|---|---|
| **ಪ್ರಥಮಾವಿಭಕ್ತಿ** | – | ಪಿತೃ (ವು) | ಪಿತೃಗಳು | ಭ್ರಾತೃ (ವು) | ಭ್ರಾತೃಗಳು |
| **ದ್ವಿತೀಯಾವಿಭಕ್ತಿ** | – | ಪಿತೃವನ್ನು | ಪಿತೃಗಳನ್ನು | ಭ್ರಾತೃವನ್ನು | ಭ್ರಾತೃಗಳನ್ನು |
| **ತೃತೀಯಾವಿಭಕ್ತಿ** | – | { ಪಿತೃವಿಂದ / ಪಿತೃವಿನಿಂದ | ಪಿತೃಗಳಿಂದ | { ಭ್ರಾತೃವಿನಿಂದ / ಭ್ರಾತೃವಿಂದ | ಭ್ರಾತೃಗಳಿಂದ |
| **ಚತುರ್ಥೀವಿಭಕ್ತಿ** | – | ಪಿತೃವಿಗೆ | ಪಿತೃಗಳಿಗೆ | ಭ್ರಾತೃವಿಗೆ | ಭ್ರಾತೃಗಳಿಗೆ |
| **ಪಂಚಮೀವಿಭಕ್ತಿ** | – | ಪಿತೃವಿನ | ಪಿತೃಗಳ | ಭ್ರಾತೃವಿನ | ಭ್ರಾತೃಗಳ |

| | | | | | |
|---|---|---|---|---|---|
| | | ದೆಸೆಯಿಂದ | ದೆಸೆಯಿಂದ | ದೆಸೆಯಿಂದ | ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಪಿತೃವಿನ | ಪಿತೃಗಳ | ಭ್ರಾತೃವಿನ | ಭ್ರಾತೃಗಳ |
| **ಸಪ್ತಮೀವಿಭಕ್ತಿ** | – | ಪಿತೃವಿನಲ್ಲಿ | ಪಿತೃಗಳಲ್ಲಿ | ಭ್ರಾತೃವಿನಲ್ಲಿ | ಭ್ರಾತೃಗಳಲ್ಲಿ |
| **ಸಂಬೋಧನಾ** | – | ಪಿತೃವೇ | ಪಿತೃಗಳೇ<br>ಪಿತೃಗಳಿರಾ | ಭ್ರಾತೃವೇ | ಭ್ರಾತೃಗಳೇ<br>ಭ್ರಾತೃಗಳಿರಾ |

## ಸ್ತ್ರೀಲಿಂಗ ಶಬ್ದಗಳು

| | | (ಅ) ಅಕಾರಾಂತ ಸ್ತ್ರೀಲಿಂಗ 'ಅಕ್ಕ' ಶಬ್ದ | | (ಆ) ಅಕಾರಾಂತ ಸ್ತ್ರೀಲಿಂಗ 'ಅಮ್ಮ' ಶಬ್ದ | |
|---|---|---|---|---|---|
| ವಿಭಕ್ತಿ | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಅಕ್ಕ (ನು) | ಅಕ್ಕಂದಿರು | ಅಮ್ಮ (ನು) | ಅಮ್ಮಂದಿರು |
| **ದ್ವಿತೀಯಾವಿಭಕ್ತಿ** | – | ಅಕ್ಕನನ್ನು | ಅಕ್ಕಂದಿರನ್ನು | ಅಮ್ಮನನ್ನು | ಅಮ್ಮಂದಿರನ್ನು |
| **ತೃತೀಯಾವಿಭಕ್ತಿ** | – | ಅಕ್ಕನಿಂದ | ಅಕ್ಕಂದಿರಿಂದ | ಅಮ್ಮನಿಂದ | ಅಮ್ಮಂದಿರಿಂದ |
| **ಚತುರ್ಥೀವಿಭಕ್ತಿ** | – | ಅಕ್ಕನಿಗೆ | ಅಕ್ಕಂದಿರಿಗೆ | ಅಮ್ಮನಿಗೆ | ಅಮ್ಮಂದಿರಿಗೆ |
| **ಪಂಚಮೀವಿಭಕ್ತಿ** | – | ಅಕ್ಕನ ದೆಸೆಯಿಂದ | ಅಕ್ಕಂದಿರ ದೆಸೆಯಿಂದ | ಅಮ್ಮನ ದೆಸೆಯಿಂದ | ಅಮ್ಮಂದಿರ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಅಕ್ಕನ | ಅಕ್ಕಂದಿರ | ಅಮ್ಮನ | ಅಮ್ಮಂದಿರ |
| **ಸಪ್ತಮೀವಿಭಕ್ತಿ** | – | ಅಕ್ಕನಲ್ಲಿ | ಅಕ್ಕಂದಿರಲ್ಲಿ | ಅಮ್ಮನಲ್ಲಿ | ಅಮ್ಮಂದಿರಲ್ಲಿ |
| **ಸಂಬೋಧನಾ** | – | ಅಕ್ಕನೇ<br>ಅಕ್ಕಾ | ಅಕ್ಕಂದಿರಾ<br>ಅಕ್ಕಗಳಿರಾ | ಅಮ್ಮಾ | ಅಮ್ಮಂದಿರಾ<br>ಅಮ್ಮಂದಿರುಗಳಿರಾ |

| | | (ಅ) ಇಕಾರಾಂತ ಸ್ತ್ರೀಲಿಂಗ 'ಅಜ್ಜಿ' ಶಬ್ದ | | (ಆ) ಈಕಾರಾಂತ ಸ್ತ್ರೀಲಿಂಗ 'ಸ್ತ್ರೀ' ಶಬ್ದ | |
|---|---|---|---|---|---|
| ವಿಭಕ್ತಿ | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಅಜ್ಜಿ (ಯು) | ಅಜ್ಜಿಯರು | ಸ್ತ್ರೀ (ಯು) | ಸ್ತ್ರೀಯರು |
| **ದ್ವಿತೀಯಾವಿಭಕ್ತಿ** | – | ಅಜ್ಜಿಯನ್ನು | ಅಜ್ಜಿಯರನ್ನು | ಸ್ತ್ರೀಯನ್ನು | ಸ್ತ್ರೀಯರನ್ನು |
| **ತೃತೀಯಾವಿಭಕ್ತಿ** | – | ಅಜ್ಜಿಯಿಂದ | ಅಜ್ಜಿಯರಿಂದ | ಸ್ತ್ರೀಯಿಂದ | ಸ್ತ್ರೀಯರಿಂದ |
| **ಚತುರ್ಥೀವಿಭಕ್ತಿ** | – | ಅಜ್ಜಿಗೆ | ಅಜ್ಜಿಯರಿಗೆ | ಸ್ತ್ರೀಗೆ | ಸ್ತ್ರೀಯರಿಗೆ |
| **ಪಂಚಮೀವಿಭಕ್ತಿ** | – | ಅಜ್ಜಿಯ ದೆಸೆಯಿಂದ | ಅಜ್ಜಿಯರ ದೆಸೆಯಿಂದ | ಸ್ತ್ರೀಯ ದೆಸೆಯಿಂದ | ಸ್ತ್ರೀಯರ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಅಜ್ಜಿಯ | ಅಜ್ಜಿಯರ | ಸ್ತ್ರೀಯ | ಸ್ತ್ರೀಯರ |
| **ಸಪ್ತಮೀವಿಭಕ್ತಿ** | – | ಅಜ್ಜಿಯಲ್ಲಿ | ಅಜ್ಜಿಯರಲ್ಲಿ | ಸ್ತ್ರೀಯಲ್ಲಿ | ಸ್ತ್ರೀಯರಲ್ಲಿ |
| **ಸಂಬೋಧನಾ** | – | ಅಜ್ಜೀ | ಅಜ್ಜಿಯರಿರಾ | ಸ್ತ್ರೀಯೇ | ಸ್ತ್ರೀಯರಿರಾ |

| | | | | | |
|---|---|---|---|---|---|
| | | ಅಜ್ಜಿಯೇ | ಅಜ್ಜಿಯರುಗಳಿರಾ | | ಸ್ತ್ರೀಯರುಗಳಿರಾ |

| | | **(ಉ) ಉಕಾರಾಂತ ಸ್ತ್ರೀಲಿಂಗ 'ವಧು' ಶಬ್ದ** | | **(ಊ) ಋಕಾರಾಂತ ಸ್ತ್ರೀಲಿಂಗ 'ಮಾತೃ' ಶಬ್ದ** | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ವಧು (ವು) | ವಧುಗಳು | ಮಾತೃ (ವು) | ಮಾತೃಗಳು |
| **ದ್ವಿತೀಯಾವಿಭಕ್ತಿ** | – | ವಧುವನ್ನು | ವಧುಗಳನ್ನು | ಮಾತೃವನ್ನು | ಮಾತೃಗಳನ್ನು |
| **ತೃತೀಯಾವಿಭಕ್ತಿ** | – | ವಧುವಿನಿಂದ | ವಧುಗಳಿಂದ | ಮಾತೃವಿನಿಂದ<br>ಮಾತೃವಿಂದ | ಮಾತೃಗಳಿಂದ |
| **ಚತುರ್ಥೀವಿಭಕ್ತಿ** | – | ವಧುವಿಗೆ | ವಧುಗಳಿಗೆ | ಮಾತೃವಿಗೆ | ಮಾತೃಗಳಿಗೆ |
| **ಪಂಚಮೀವಿಭಕ್ತಿ** | – | ವಧುವಿನ ದೆಸೆಯಿಂದ | ವಧುಗಳ ದೆಸೆಯಿಂದ | ಮಾತೃವಿನ ದೆಸೆಯಿಂದ | ಮಾತೃಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ವಧುವಿನ | ವಧುಗಳ | ಮಾತೃವಿನ | ಮಾತೃಗಳ |
| **ಸಪ್ತಮೀವಿಭಕ್ತಿ** | – | ವಧುವಿನಲ್ಲಿ | ವಧುಗಳಲ್ಲಿ | ಮಾತೃವಿನಲ್ಲಿ | ಮಾತೃಗಳಲ್ಲಿ |
| **ಸಂಬೋಧನಾ** | – | ವಧುವೇ | ವಧುಗಳೇ<br>ವಧುಗಳಿರಾ | ಮಾತೃವೇ | ಮಾತೃಗಳೇ<br>ಮಾತೃಗಳಿರಾ |

| | | **(ಋ) ಎಕಾರಾಂತ ಸ್ತ್ರೀಲಿಂಗ 'ಅತ್ತೆ' ಶಬ್ದ** | | **(ೠ) ಎಕಾರಾಂತ ಸ್ತ್ರೀಲಿಂಗ 'ಸೊಸೆ' ಶಬ್ದ** | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಅತ್ತೆ (ಯು) | ಅತ್ತೆಯರು | ಸೊಸೆ (ಯು) | ಸೊಸೆಯರು |
| **ದ್ವಿತೀಯಾವಿಭಕ್ತಿ** | – | ಅತ್ತೆಯನ್ನು | ಅತ್ತೆಯವರನ್ನು | ಸೊಸೆಯನ್ನು | ಸೊಸೆಯವರನ್ನು |
| **ತೃತೀಯಾವಿಭಕ್ತಿ** | – | ಅತ್ತೆಯಿಂದ | ಅತ್ತೆಯರುಗಳಿಂದ | ಸೊಸೆಯಿಂದ | ಸೊಸೆಯರುಗಳಿಂದ<br>ಸೊಸೆಯರಿಂದ |
| **ಚತುರ್ಥೀವಿಭಕ್ತಿ** | – | ಅತ್ತೆಗೆ | ಅತ್ತೆಯರುಗಳಿಗೆ | ಸೊಸೆಗೆ | ಸೊಸೆಯರುಗಳಿಗೆ<br>ಸೊಸೆಯರಿಗೆ |
| **ಪಂಚಮೀವಿಭಕ್ತಿ** | – | ಅತ್ತೆಯ ದೆಸೆಯಿಂದ | ಅತ್ತೆಯರುಗಳ ದೆಸೆಯಿಂದ | ಸೊಸೆಯ ದೆಸೆಯಿಂದ | ಸೊಸೆಯರ ದೆಸೆಯಿಂದ<br>ಸೊಸೆಯರುಗಳ ದೆಸೆಯಿಂದ |

| | | | | | |
|---|---|---|---|---|---|
| **ಷಷ್ಠೀವಿಭಕ್ತಿ** | – | ಅತ್ತೆಯ | ಅತ್ತೆಯರ<br>ಅತ್ತೆಯರುಗಳ | ಸೊಸೆಯ | ಸೊಸೆಯರ<br>ಸೊಸೆಯರುಗಳ |
| **ಸಪ್ತಮೀವಿಭಕ್ತಿ** | – | ಅತ್ತೆಯಲ್ಲಿ | ಅತ್ತೆಯರಲ್ಲಿ<br>ಅತ್ತೆಯರುಗಳಲ್ಲಿ | ಸೊಸೆಯಲ್ಲಿ | ಸೊಸೆಯರಲ್ಲಿ<br>ಸೊಸೆಯರುಗಳಲ್ಲಿ |
| **ಸಂಬೋಧನಾ** | – | ಅತ್ತೆಯೇ | ಅತ್ತೆಯರುಗಳೇ<br>ಅತ್ತೆಯರುಗಳಿರಾ | ಸೊಸೆಯೇ | ಸೊಸೆಯರಿರಾ<br>ಸೊಸೆಯರುಗಳೇ |

## ನಪುಂಸಕಲಿಂಗದ ಶಬ್ದಗಳು

| | | (ಅ) ಅಕಾರಾಂತ ನಪುಂಸಕಲಿಂಗ 'ನೆಲ' ಶಬ್ದ | | (ಆ) ಅಕಾರಾಂತ ನಪುಂಸಕಲಿಂಗ 'ಪುಸ್ತಕ' ಶಬ್ದ | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ನೆಲ (ವು) | ನೆಲಗಳು | ಪುಸ್ತಕ (ವು) | ಪುಸ್ತಕಗಳು |
| **ದ್ವಿತೀಯಾವಿಭಕ್ತಿ** | – | ನೆಲವನ್ನು | ನೆಲಗಳನ್ನು | ಪುಸ್ತಕವನ್ನು | ಪುಸ್ತಕಗಳನ್ನು |
| **ತೃತೀಯಾವಿಭಕ್ತಿ** | – | ನೆಲದಿಂದ | ನೆಲಗಳಿಂದ | ಪುಸ್ತಕದಿಂದ | ಪುಸ್ತಕಗಳಿಂದ |
| **ಚತುರ್ಥೀವಿಭಕ್ತಿ** | – | ನೆಲಕ್ಕೆ | ನೆಲಗಳಿಗೆ | ಪುಸ್ತಕಕ್ಕೆ | ಪುಸ್ತಕಗಳಿಗೆ |
| **ಪಂಚಮೀವಿಭಕ್ತಿ** | – | ನೆಲದ<br>ದೆಸೆಯಿಂದ | ನೆಲಗಳ<br>ದೆಸೆಯಿಂದ | ಪುಸ್ತಕದ<br>ದೆಸೆಯಿಂದ | ಪುಸ್ತಕಗಳ<br>ದೆಸೆಯಿಂದ |
| **ಷಷ್ಠೀವಿಭಕ್ತಿ** | – | ನೆಲದ | ನೆಲಗಳ | ಪುಸ್ತಕದ | ಪುಸ್ತಕಗಳ |
| **ಸಪ್ತಮೀವಿಭಕ್ತಿ** | – | ನೆಲದಲ್ಲಿ | ನೆಲಗಳಲ್ಲಿ | ಪುಸ್ತಕದಲ್ಲಿ | ಪುಸ್ತಕಗಳಲ್ಲಿ |
| **ಸಂಬೋಧನಾ** | – | ನೆಲವೇ | ನೆಲಗಳೇ | ಪುಸ್ತಕವೇ | ಪುಸ್ತಕಗಳೇ |

**ಇದರಂತೆ ಹೊಲ, ಮೊಲ, ಜೋಳ, ತೋಳ, ಬೆಟ್ಟ–ಇತ್ಯಾದಿ ಶಬ್ದಗಳನ್ನು ನಡೆಯಿಸಬೇಕು.**

| | | (ಇ) ಇಕಾರಾಂತ ನಪುಂಸಕಲಿಂಗ 'ನಾಯಿ' ಶಬ್ದ | | (ಈ) ಇಕಾರಾಂತ ನಪುಂಸಕಲಿಂಗ 'ಗಿರಿ' ಶಬ್ದ | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ನಾಯಿ (ಯು) | ನಾಯಿಗಳು | ಗಿರಿ (ಯು) | ಗಿರಿಗಳು |
| **ದ್ವಿತೀಯಾವಿಭಕ್ತಿ** | – | ನಾಯಿಯನ್ನು | ನಾಯಿಗಳನ್ನು | ಗಿರಿಯನ್ನು | ಗಿರಿಗಳನ್ನು |
| **ತೃತೀಯಾವಿಭಕ್ತಿ** | – | ನಾಯಿಯಿಂದ | ನಾಯಿಗಳಿಂದ | ಗಿರಿಯಿಂದ | ಗಿರಿಗಳಿಂದ |
| **ಚತುರ್ಥೀವಿಭಕ್ತಿ** | – | ನಾಯಿಗೆ | ನಾಯಿಗಳಿಗೆ | ಗಿರಿಗೆ | ಗಿರಿಗಳಿಗೆ |
| **ಪಂಚಮೀವಿಭಕ್ತಿ** | – | ನಾಯಿಯ<br>ದೆಸೆಯಿಂದ | ನಾಯಿಗಳ<br>ದೆಸೆಯಿಂದ | ಗಿರಿಯ<br>ದೆಸೆಯಿಂದ | ಗಿರಿಗಳ<br>ದೆಸೆಯಿಂದ |
| **ಷಷ್ಠೀವಿಭಕ್ತಿ** | – | ನಾಯಿಯ | ನಾಯಿಗಳ | ಗಿರಿಯ | ಗಿರಿಗಳ |
| **ಸಪ್ತಮೀವಿಭಕ್ತಿ** | – | ನಾಯಿಯಲ್ಲಿ | ನಾಯಿಗಳಲ್ಲಿ | ಗಿರಿಯಲ್ಲಿ | ಗಿರಿಗಳಲ್ಲಿ |

| | | | | | |
|---|---|---|---|---|---|
| **ಸಂಬೋಧನಾ** | – | ನಾಯಿಯೇ | ನಾಯಿಗಳಿರಾ<br>ನಾಯಿಗಳೇ | ಗಿರಿಯೇ | ಗಿರಿಗಳೇ<br>ಗಿರಿಗಳಿರಾ |

**ಇದರಂತೆ ಕರಿ, ಮರಿ, ಕುರಿ, ಹೋರಿ, ಗಿಳಿ, ನದಿ, ನರಿ, ಸಿರಿ–ಈ ಶಬ್ದಗಳನ್ನು ನಡೆಯಿಸಬೇಕು.**

| | | **(ಉ) ಉಕಾರಾಂತ ನಪುಂಸಕ ಲಿಂಗ 'ಕರು' ಶಬ್ದ** | | **(ಊ) ಉಕಾರಾಂತ ನಪುಂಸಕ ಲಿಂಗ 'ಕಲ್ಲು' ಶಬ್ದ** | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | – | ಕರು (ವು) | ಕರುಗಳು | ಕಲ್ಲು | ಕಲ್ಲುಗಳು |
| **ದ್ವಿತೀಯಾವಿಭಕ್ತಿ** | – | ಕರುವನ್ನು | ಕರುಗಳನ್ನು | ಕಲ್ಲನ್ನು | ಕಲ್ಲುಗಳನ್ನು |
| **ತೃತೀಯಾವಿಭಕ್ತಿ** | – | ಕರುವಿನಿಂದ<br>ಕರುವಿಂದ | ಕರುಗಳಿಂದ | ಕಲ್ಲಿಂದ<br>ಕಲ್ಲಿನಿಂದ | ಕಲ್ಲುಗಳಿಂದ |
| **ಚತುರ್ಥೀವಿಭಕ್ತಿ** | – | ಕರುವಿಗೆ | ಕರುಗಳಿಗೆ | ಕಲ್ಲಿಗೆ | ಕಲ್ಲುಗಳಿಗೆ |
| **ಪಂಚಮೀವಿಭಕ್ತಿ** | – | ಕರುವಿನ ದೆಸೆಯಿಂದ | ಕರುಗಳ ದೆಸೆಯಿಂದ | ಕಲ್ಲಿನ ದೆಸೆಯಿಂದ | ಕಲ್ಲುಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಕರುವಿನ | ಕರುಗಳ | ಕಲ್ಲಿನ | ಕಲ್ಲುಗಳ |
| **ಸಪ್ತಮೀವಿಭಕ್ತಿ** | – | ಕರುವಿನಲ್ಲಿ | ಕರುಗಳಲ್ಲಿ | ಕಲ್ಲಿನಲ್ಲಿ | ಕಲ್ಲುಗಳಲ್ಲಿ |
| **ಸಂಬೋಧನಾ** | – | ಕರುವೇ | ಕರುಗಳೇ<br>ಕರುಗಳಿರಾ | ಕಲ್ಲೇ | ಕಲ್ಲುಗಳೇ |

**ಇದರಂತೆ ಕಣ್ಣು, ಮಣ್ಣು, ತುರು–ಇತ್ಯಾದಿ ಶಬ್ದಗಳನ್ನು ನಡೆಯಿಸಬೇಕು.**

| | | **(ಋ) ಎಕಾರಾಂತ ನಪುಂಸಕಲಿಂಗ 'ಮನೆ' ಶಬ್ದ** | | **(ೠ)ಎಕಾರಾಂತ ನಪುಂಸಕಲಿಂಗ 'ನನೆ' ಶಬ್ದ (ನನೆ–ಹೂವು)** | |
|---|---|---|---|---|---|
| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| **ಪ್ರಥಮಾವಿಭಕ್ತಿ** | - | ಮನೆ(ಯು) | ಮನೆಗಳು | ನನೆ (ಯು) | ನನೆಗಳು |
| **ದ್ವಿತೀಯಾವಿಭಕ್ತಿ** | - | ಮನೆಯನ್ನು | ಮನೆಗಳನ್ನು | ನನೆಯನ್ನು | ನನೆಗಳನ್ನು |
| **ತೃತೀಯಾವಿಭಕ್ತಿ** | - | ಮನೆಯಿಂದ | ಮನೆಗಳಿಂದ | ನನೆಯಿಂದ | ನನೆಗಳಿಂದ |
| **ಚತುರ್ಥೀವಿಭಕ್ತಿ** | - | ಮನೆಗೆ | ಮನೆಗಳಿಗೆ | ನನೆಗೆ | ನನೆಗಳಿಗೆ |
| **ಪಂಚಮೀವಿಭಕ್ತಿ** | - | ಮನೆಯ ದೆಸೆಯಿಂದ | ಮನೆಗಳ ದೆಸೆಯಿಂದ | ನನೆಯ ದೆಸೆಯಿಂದ | ನನೆಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | - | ಮನೆಯ | ಮನೆಗಳ | ನನೆಯ | ನನೆಗಳ |

| | | | | | |
|---|---|---|---|---|---|
| **ಸಪ್ತಮೀವಿಭಕ್ತಿ** | – | ಮನೆಯಲ್ಲಿ | ಮನೆಗಳಲ್ಲಿ | ನನೆಯಲ್ಲಿ | ನನೆಗಳಲ್ಲಿ |
| **ಸಂಬೋಧನಾ** | – | ಮನೆಯೇ | ಮನೆಗಳೇ | ನನೆಯೇ | ನನೆಗಳೇ / ನನೆಗಳಿರಾ |

**ಇದರಂತೆ ಕೆರೆ, ತೆರೆ, ಅಲೆ, ಗೆರೆ, ತಿರೆ, ತೊರೆ, ಮಲೆ–ಇತ್ಯಾದಿ ಶಬ್ದಗಳನ್ನು ನಡೆಯಿಸಬೇಕು.**

**(ಎ) ಐಕಾರಾಂತ ನಪುಂಸಕಲಿಂಗ 'ಕೈ' ಶಬ್ದ** **(ಏ) ಐಕಾರಾಂತ ನಪುಂಸಕಲಿಂಗ 'ಮೈ' ಶಬ್ದ**

| **ವಿಭಕ್ತಿ** | | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
|---|---|---|---|---|---|
| **ಪ್ರಥಮಾವಿಭಕ್ತಿ** | – | ಕೈ (ಯು) | ಕೈಗಳು | ಮೈ(ಯು) | ಮೈಗಳು |
| **ದ್ವಿತೀಯಾವಿಭಕ್ತಿ** | – | ಕೈಯನ್ನು | ಕೈಗಳನ್ನು | ಮೈಯನ್ನು | ಮೈಗಳನ್ನು |
| **ತೃತೀಯಾವಿಭಕ್ತಿ** | – | ಕೈಯಿಂದ | ಕೈಗಳಿಂದ | ಮೈಯಿಂದ | ಮೈಗಳಿಂದ |
| **ಚತುರ್ಥೀವಿಭಕ್ತಿ** | – | ಕೈಗೆ | ಕೈಗಳಿಗೆ | ಮೈಗೆ | ಮೈಗಳಿಗೆ |
| **ಪಂಚಮೀವಿಭಕ್ತಿ** | – | ಕೈಯ ದೆಸೆಯಿಂದ | ಕೈಗಳ ದೆಸೆಯಿಂದ | ಮೈಯ ದೆಸೆಯಿಂದ | ಮೈಗಳ ದೆಸೆಯಿಂದ |
| **ಷಷ್ಠೀವಿಭಕ್ತಿ** | – | ಕೈಯ | ಕೈಗಳ | ಮೈಯ | ಮೈಗಳ |
| **ಸಪ್ತಮೀವಿಭಕ್ತಿ** | – | ಕೈಯಲ್ಲಿ | ಕೈಗಳಲ್ಲಿ | ಮೈಯಲ್ಲಿ | ಮೈಗಳಲ್ಲಿ |
| **ಸಂಬೋಧನಾ** | – | ಕೈಯೇ | ಕೈಗಳೇ | ಮೈಯೇ | ಮೈಗಳೇ |

**'ಏನು' ಎಂಬ ಪ್ರಶ್ನಾರ್ಥಕ ಸರ್ವನಾಮವು ಏಕವಚನದಲ್ಲಿ ಮಾತ್ರ ವಿಭಕ್ತಿಪ್ರತ್ಯಯಗಳನ್ನು ಹೊಂದುತ್ತದೆ.** (ಸಂಬೋಧನೆಯಲ್ಲಿ ಯಾವ ಸರ್ವನಾಮಗಳಿಗೂ ವಿಭಕ್ತಿಪ್ರತ್ಯಯ ಹತ್ತುವುದಿಲ್ಲ.)

**(ಐ) ಪ್ರಶ್ನಾರ್ಥಕ ಸರ್ವನಾಮ 'ಏನು' ಶಬ್ದ**

| **ವಿಭಕ್ತಿ** | | **ಏಕವಚನ** | **ಬಹುವಚನ** |
|---|---|---|---|
| **ಪ್ರಥಮಾವಿಭಕ್ತಿ** | – | ಏನು | |
| **ದ್ವಿತೀಯಾವಿಭಕ್ತಿ** | – | ಏನನ್ನು | **ಈ ಶಬ್ದವು ಬಹುವಚನದಲ್ಲಿ ವಿಭಕ್ತಿಪ್ರತ್ಯಯಗಳನ್ನು ಹೊಂದುವುದಿಲ್ಲ** |
| **ತೃತೀಯಾವಿಭಕ್ತಿ** | – | ಏತರಿಂದ | |
| **ಚತುರ್ಥೀವಿಭಕ್ತಿ** | – | ಏತಕ್ಕೆ | |
| **ಪಂಚಮೀವಿಭಕ್ತಿ** | – | ಏತರ ದೆಸೆಯಿಂದ | |
| **ಷಷ್ಠೀವಿಭಕ್ತಿ** | – | ಏತರ | |
| **ಸಪ್ತಮೀವಿಭಕ್ತಿ** | – | ಏತರಲ್ಲಿ | |

**(ಒ) ಎಲ್ಲಾ (ಎಲ್ಲ) ಸರ್ವನಾಮ ಶಬ್ದ ರೂಪಗಳು**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| ಪ್ರಥಮಾವಿಭಕ್ತಿ | – | ಎಲ್ಲ (ಎಲ್ಲಾ) (ಎಲ್ಲದು) | ಎಲ್ಲವು |
| ದ್ವಿತೀಯಾವಿಭಕ್ತಿ | – | ಎಲ್ಲದನ್ನು | ಎಲ್ಲವನ್ನು |
| ತೃತೀಯಾವಿಭಕ್ತಿ | – | ಎಲ್ಲದರಿಂದ | ಎಲ್ಲವುಗಳಿಂದ |
| ಚತುರ್ಥೀವಿಭಕ್ತಿ | – | ಎಲ್ಲದಕ್ಕೆ | ಎಲ್ಲವುಗಳಿಗೆ |
| ಪಂಚಮೀವಿಭಕ್ತಿ | – | ಎಲ್ಲದರ ದೆಸೆಯಿಂದ | ಎಲ್ಲವುಗಳ ದೆಸೆಯಿಂದ |
| ಷಷ್ಠೀವಿಭಕ್ತಿ | – | ಎಲ್ಲದರ | ಎಲ್ಲವುಗಳ |
| ಸಪ್ತಮೀವಿಭಕ್ತಿ | – | ಎಲ್ಲದರಲ್ಲಿ | ಎಲ್ಲವುಗಳಲ್ಲಿ |

ಮೇಲಿನ ಉದಾಹರಣೆಗಳನ್ನು ಅವಲೋಕಿಸಿದಾಗ 'ಏನು' ಶಬ್ದ ತೃತೀಯಾ ಮೊದಲ್ಗೊಂಡು ಎಲ್ಲ ವಿಭಕ್ತಿಪ್ರತ್ಯಯ ಹತ್ತುವಾಗ 'ಏತರ' ಎಂದು ರೂಪ ಧರಿಸುವುದು. 'ಎಲ್ಲಾ' (ಎಲ್ಲ) ಶಬ್ದದ ಮುಂದೆ ಎಲ್ಲ ವಿಭಕ್ತಿಗಳಲ್ಲೂ ಏಕವಚನದಲ್ಲಿ 'ಅದು' ಮತ್ತು ಬಹುವಚನದಲ್ಲಿ 'ಅವು' ಎಂಬುವು ಬಂದು ವಿಭಕ್ತಿಪ್ರತ್ಯಯಗಳು ಮುಂದೆ ಹತ್ತುತ್ತವೆ. ಪ್ರಥಮೆಯಲ್ಲಿ ಮಾತ್ರ ಪ್ರಕೃತಿರೂಪವೇ ಉಳಿಯುವುದು.

**(ಓ) ಮೂಡಲು, ಪಡುವಲು, ತೆಂಕಲು, ಬಡಗು**
**–ಮುಂತಾದ ದಿಗ್ವಾಚಕ ಶಬ್ದಗಳ ಸಿದ್ಧರೂಪಗಳು:–**

| ವಿಭಕ್ತಿ | | ಏಕವಚನ | ಬಹುವಚನ |
|---|---|---|---|
| ಪ್ರಥಮಾವಿಭಕ್ತಿ | – | ಮೂಡಲು+ಅಣ+ಉ=ಮೂಡಣವು | ಮೂಡಣಗಳು |
| ದ್ವಿತೀಯಾವಿಭಕ್ತಿ | – | ಮೂಡಲು+ಅಣ+ಅನ್ನು=ಮೂಡಣವನ್ನು | ಮೂಡಣಗಳನ್ನು |
| ತೃತೀಯಾವಿಭಕ್ತಿ | – | ಮೂಡಲು+ಅಣ+ಇಂದ=ಮೂಡಣಿಂದ (ಮೂಡಲು+ಅಣ+ಇಂದ=ಮೂಡಣದಿಂದ) | ಮೂಡಣಗಳಿಂದ |
| ಚತುರ್ಥೀವಿಭಕ್ತಿ | – | ಮೂಡಲು+ಅಣ+ಕ್ಕೆ=ಮೂಡಣಕ್ಕೆ | ಮೂಡಣಗಳಿಗೆ |
| ಪಂಚಮೀವಿಭಕ್ತಿ | – | ಮೂಡಲು+ಅಣ+ದೆಸೆಯಿಂದ=ಮೂಡಣದ ದೆಸೆಯಿಂದ, (ಮೂಡಣದೆಸೆಯಿಂದ) | ಮೂಡಣಗಳ ದೆಸೆಯಿಂದ |
| ಷಷ್ಠೀವಿಭಕ್ತಿ | – | ಮೂಡಲು+ಅಣ+ದ+ಅ=ಮೂಡಣದ | ಮೂಡಣಗಳ |
| ಸಪ್ತಮೀವಿಭಕ್ತಿ | – | ಮೂಡಲು+ಅಣ+ದ+ಅಲ್ಲಿ=ಮೂಡಣದಲ್ಲಿ | ಮೂಡಣಗಳಲ್ಲಿ |

**ಸಂಬೋಧನಾ** – ಮೂಡಲು+ಅಣ+ಏ=ಮೂಡಣವೇ ಮೂಡಣಗಳಿರಾ, ಮೂಡಣಗಳೇ

ಮೂಡಲು ಶಬ್ದಕ್ಕೆ ವಿಭಕ್ತಿಪ್ರತ್ಯಯಗಳು ಸೇರುವಾಗ '**ಅಣ**' ಎಂಬಾಗಮವು ಬರುವುದು. ಕೊನೆಯ '**ಲು**' ಕಾರವು ಲೋಪ ಹೊಂದುವುದು. ಬಡಗು ಶಬ್ದದ '**ಗು**' ಅಕ್ಷರಕ್ಕೆ ಲೋಪ ತೃತೀಯಾ, ಪಂಚಮೀಗಳಲ್ಲಿ ವಿಕಲ್ಪದಿಂದಲೂ, ಷಷ್ಠೀ, ಸಪ್ತಮೀಗಳಲ್ಲಿ ನಿತ್ಯವಾಗಿಯೂ '**ಅಣ**' ಪ್ರತ್ಯಯಕ್ಕೂ ವಿಭಕ್ತಿಪ್ರತ್ಯಯಕ್ಕೂ ಮಧ್ಯದಲ್ಲಿ '**ದ**' ಪ್ರತ್ಯಯವು ಆಗಮವಾಗಿ ಬರುವುದು. ಇದರ ಹಾಗೆಯೇ ಪಡುವಲು, ಬಡಗು, ತೆಂಕಲು ಶಬ್ದಗಳನ್ನು ನಡೆಯಿಸಬೇಕು.

# VI – ನಾಮಪ್ರಕೃತಿಗಳಿಗೆ ನಾಮವಿಭಕ್ತಿಪ್ರತ್ಯಯಗಳು ಬರುವ ಅರ್ಥಗಳು ಮತ್ತು ಪ್ರಯೋಗಗಳು

ಇದುವರೆಗೆ ನೀವು ನಾಮಪ್ರಕೃತಿಗಳಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ಆಗುವ ಕಾರ್ಯಗಳಾವುವೆಂಬುದನ್ನು ಸ್ಥೂಲವಾಗಿ ತಿಳಿದಿರಿ. ಯಾವ ವಿಭಕ್ತಿಪ್ರತ್ಯಯವು ಯಾವ ಕಾರಕಾರ್ಥದಲ್ಲಿ ಬರುವುದೆಂಬುದನ್ನು ಸ್ಥೂಲವಾಗಿ ತಿಳಿದಿರಿ. ಆ ವಿಷಯವನ್ನು ಇನ್ನೊಮ್ಮೆ ಜ್ಞಾಪಿಸಿಕೊಳ್ಳಿರಿ.

'**ಉ**'–ಎಂಬ ಪ್ರಥಮಾವಿಭಕ್ತಿಯು **ಕರ್ತ್ರರ್ಥದಲ್ಲೂ** (ಕರ್ತೃವಿನ ಅರ್ಥದಲ್ಲೂ),
'**ಅನ್ನು**'–ಎಂಬ ದ್ವಿತೀಯಾವಿಭಕ್ತಿಯು **ಕರ್ಮಾರ್ಥದಲ್ಲೂ,**
'**ಇಂದ**'–ಎಂಬ ತೃತೀಯಾವಿಭಕ್ತಿಯು **ಕರಣ** ಎಂದರೆ **ಸಾಧನದ** ಅರ್ಥದಲ್ಲೂ,
'**ಗೆ, ಇ, ಕ್ಕೆ, ಅಕ್ಕೆ**'–ಇತ್ಯಾದಿ ಚತುರ್ಥೀವಿಭಕ್ತಿಗಳು **ಸಂಪ್ರದಾನ(ಕೊಡುವಿಕೆ)**ದ ಅರ್ಥದಲ್ಲೂ,
'**ದೆಸೆಯಿಂದ**'–ಎಂಬ ಪಂಚಮೀವಿಭಕ್ತಿಯು **ಅಪಾದಾನ (ಅಗಲುವಿಕೆ)** ದ ಅರ್ಥದಲ್ಲೂ,
'**ಅ**'–ಎಂಬ ಷಷ್ಠೀವಿಭಕ್ತಿಯು ಎಲ್ಲ **ಅರ್ಥಗಳ** ಸಂಬಂಧದಲ್ಲೂ,
'**ಅಲ್ಲಿ, ಒಳು**'–ಇತ್ಯಾದಿ ಸಪ್ತಮೀ ವಿಭಕ್ತಿಗಳು **ಅಧಿಕರಣ (ಆಧಾರ)**ದ ಅರ್ಥದಲ್ಲೂ,
'**ಆ, ಏ, ಈ, ಇರಾ**'–ಇತ್ಯಾದಿ ಸಂಬೋಧನಾವಿಭಕ್ತಿಗಳು **ಕರೆಯುವಿಕೆ (ಅಭಿಮುಖೀಕರಣ)** ಯಲ್ಲೂ ಬರುತ್ತವೆ.

ಈಗ ಈ ವಿಭಕ್ತಿಪ್ರತ್ಯಯಗಳು ಒಮ್ಮೊಮ್ಮೆ ಬೇರೆಬೇರೆ ಅರ್ಥಗಳಲ್ಲೂ ಬರುತ್ತವೆ ಎಂಬ ವಿಷಯವನ್ನು ತಿಳಿಯೋಣ.

### (೧) ಪ್ರಥಮಾವಿಭಕ್ತಿ:–

#### (ಅ) ಕರ್ತ್ರರ್ಥಕ್ಕೆ–

(i) ***ಕೂಸು ಮಲಗಿತು**–ಇಲ್ಲಿ ಮಲಗುವ ಕ್ರಿಯೆಯನ್ನು ಕೂಸು ಮಾಡಿದುದರಿಂದ ಅದೇ ಕರ್ತೃ ಪದವಾಗಿ ಪ್ರಥಮಾವಿಭಕ್ತಿಯನ್ನು ಪಡೆಯಿತು. ಇದು **ಅಕರ್ಮಕವಾಕ್ಯ.**

(ii) ***ಮಗು ಹಾಲನ್ನು ಕುಡಿಯಿತು**–ಹಾಲನ್ನು ಕಡಿಯುವ ಕಾರ್ಯ ಮಾಡಿದುದು ಮಗು ವಾದ್ದರಿಂದ ಅದೇ ಕರ್ತೃಪದವಾಗಿ ಪ್ರಥಮಾವಿಭಕ್ತ್ಯಂತವಾಯಿತು. ಇದು ಸಕರ್ಮಕವಾಕ್ಯ.

**(ಆ) ಕರ್ಮಾರ್ಥದಲ್ಲಿ ಪ್ರಥಮಾವಿಭಕ್ತಿ ಬರುವುದಕ್ಕೆ–**

(iii) **ಹುಡುಗನಿಂದ ಪುಸ್ತಕವು ಓದಲ್ಪಟ್ಟಿತು**–ಇಲ್ಲಿ ಓದುವ ಕಾರ್ಯಕ್ಕೆ ಹುಡುಗನೇ ಕರ್ತೃವಾದರೂ, ಹುಡುಗ ಎಂಬುದರ ಮೇಲೆ ಪ್ರಥಮಾವಿಭಕ್ತಿ ಬರದೆ ಕರ್ಮವಾದ 'ಪುಸ್ತಕ' ಎಂಬ ಪ್ರಕೃತಿಯ ಮೇಲೆ ಪ್ರಥಮಾವಿಭಕ್ತಿ ಬಂದಿದೆ.

### (೨) ದ್ವಿತೀಯಾವಿಭಕ್ತಿ:–

**(ಅ) ಕರ್ಮದಲ್ಲಿ ದ್ವಿತೀಯೆ ಬರುವುದಕ್ಕೆ–**

(i) ಹುಡುಗನು ಪುಸ್ತಕವನ್ನು ಓದಿದನು.

(ii) ಮಕ್ಕಳು ಶಾಲೆಯನ್ನು ಕಟ್ಟಿದರು. – ಈ ಎರಡೂ ವಾಕ್ಯಗಳಲ್ಲಿ '**ಪುಸ್ತಕ**' '**ಶಾಲೆ**' ಎಂಬುವು ಕರ್ಮಪ್ರಕೃತಿಗಳು. ಅವುಗಳ ಮೇಲೆ ದ್ವಿತೀಯಾವಿಭಕ್ತಿ ಬಂದಿದೆ.

**(ಆ) ಒಂದು ಕಾರ್ಯ ಸತತವಾಗಿ (ಎಡಬಿಡದೆ) ನಡೆಯಿತು ಎಂಬರ್ಥದಲ್ಲಿ ದ್ವಿತೀಯಾವಿಭಕ್ತಿ ಬರುವುದು.**

(i) ಅವನು ಹರದಾರಿಯನ್ನು ನಡೆದನು.

(ii) ರಾಮನು ಎರಡು ಗಾವುದಗಳನ್ನು ಓಡಿದನು. – ಇಲ್ಲಿ ಹರದಾರಿ, ಗಾವುದ ಗಳನ್ನು ನಡೆಯುವ, ಓಡುವ ಕಾರ್ಯ ಅವಿಚ್ಛಿನ್ನವಾಗಿ (ಸತತವಾಗಿ) ನಡೆಯಿತು. ಆದುದರಿಂದ **ಹರದಾರಿ, ಗಾವುದ**–ಇತ್ಯಾದಿ ಪ್ರಕೃತಿಗಳ ಮೇಲೆ ದ್ವಿತೀಯಾವಿಭಕ್ತಿ ಬಂದಿದೆ.

**(ಇ) ಕರೆ, ಬೇಡು, ಕೇಳು–ಇತ್ಯಾದಿ ಧಾತುಗಳಿಗೆ ಎರಡು ಕರ್ಮಗಳು (ದ್ವಿಕರ್ಮಗಳು) ಬರುವುದುಂಟು.** ಉದಾಹರಣೆಗೆ:–

(i) ¶ಹಸುವನ್ನು ಹಾಲನ್ನು ಕರೆದನು.

(ii) ಅರಸನನ್ನು ಹಣವನ್ನು ಬೇಡಿದನು.

---

* ಕೂಸು, ಮಗು – ಇವೆರಡೂ ಉಕಾರಾಂತ ನಪುಂಸಕಲಿಂಗ ಪ್ರಕೃತಿಗಳು. ಕೂಸು+ಉ=ಕೂಸು; ಮಗು+ಉ=ಮಗು–ಎಂದೇ ಅವುಗಳ ರೂಪಗಳು. ಪ್ರಥಮಾವಿಭಕ್ತಿ ಪ್ರತ್ಯಯ ಬಂದು ಲೋಪವಾಗಿದೆ ಎಂದು ತಿಳಿಯಬೇಕು. ಮಗು+ಉ=ಮಗುವು – ಎಂದೂ ಹೇಳಬಹುದು. ಆಗ ಮಧ್ಯದಲ್ಲಿ 'ವ' ಕಾರಾಗಮವಾಗಿದೆ ಯೆಂದು ಭಾವಿಸಬೇಕು.

¶ ಈ ಮೂರು ಉದಾಹರಣೆಗಳಲ್ಲಿ ಹಾಲನ್ನು, ಹಣವನ್ನು, ಆಶೀರ್ವಾದವನ್ನು ಎಂಬಿವೇ ಮುಖ್ಯ ಕರ್ಮಪದಗಳು. ಈ ವಾಕ್ಯಗಳು ಕ್ರಮವಾಗಿ ಹಸುವಿನಿಂದ ಹಾಲನ್ನು ಕರೆದನು, ಅರಸನಿಂದ ಹಣವನ್ನು ಬೇಡಿದನು. ಗುರುವಿನಿಂದ ಆಶೀರ್ವಾದವನ್ನು ಬೇಡಿದನು. ಹೀಗೂ ಆಗಬಹುದು.

(iii) ಗುರುವನ್ನು ಆಶೀರ್ವಾದವನ್ನು ಕೇಳಿದನು.

**(೩) ತೃತೀಯಾವಿಭಕ್ತಿ:–**

**(ಅ) ಕರಣಾರ್ಥದಲ್ಲಿ–**

(i) ಕೊಡಲಿಯಿಂದ ಮರವನ್ನು ಕಡಿದನು.

(ii) ಲೆಕ್ಕಣಿಕೆಯಿಂದ ಅಕ್ಷರವನ್ನು ಬರೆದನು. –ಇಲ್ಲಿ ಸಾಧನಗಳಾದ ಕೊಡಲಿ, ಲೆಕ್ಕಣಿಕೆ ಎಂಬ ಪ್ರಕೃತಿಗಳ ಮೇಲೆ '**ಇಂದ**' ಎಂಬ ತೃತೀಯಾವಿಭಕ್ತಿ ಬಂದಿದೆ.

**(ಆ) ಕರ್ಮಣೀಪ್ರಯೋಗದಲ್ಲಿ ಕರ್ತ್ರರ್ಥದಲ್ಲಿ ತೃತೀಯಾವಿಭಕ್ತಿ ಬರುವುದು.–**

(i) ಹುಡಗನಿಂದ ಪುಸ್ತಕವು ಓದಲ್ಪಟ್ಟಿತು.

(ii) ಮಕ್ಕಳಿಂದ ಶಾಲೆಯು ಕಟ್ಟಲ್ಪಟ್ಟಿತು. –ಇಲ್ಲಿ **ಹುಡುಗನು, ಮಕ್ಕಳು** ಎಂಬೆರಡೂ ಪದಗಳು ಓದುವ, ಕಟ್ಟುವ ಕಾರ್ಯದ ಕರ್ತೃಗಳು. ಆದುದರಿಂದ ಇವುಗಳ ಮೇಲೆ ತೃತೀಯಾವಿಭಕ್ತಿ ಬಂದಿದೆ.

**(ಇ) ಕಾರಣಾರ್ಥದಲ್ಲೂ ತೃತೀಯಾವಿಭಕ್ತಿಯು ಬರುವುದು:–**

(i) ವಿದ್ಯಾಭ್ಯಾಸದಿಂದ ಯಶಸ್ಸು ಸಿಗುವುದು.

(ii) ದುಡಿಮೆಯಿಂದ ಹಣ ಸಿಗುವುದು. –ಯಶಸ್ಸು ದೊರೆಯಲು ವಿದ್ಯಾಭ್ಯಾಸವೂ, ಹಣ ಸಿಗುವುದಕ್ಕೆ ದುಡಿಮೆಯೂ ಕಾರಣಗಳಾದ್ದರಿಂದ ಈ ಕಾರಣಾರ್ಥಗಳಲ್ಲಿ ತೃತೀಯಾವಿಭಕ್ತಿ ಬಂದಿದೆ.

**(ಈ) ಲಕ್ಷಣಕಾರ್ಯದಿಂದ ಕಾರಣವನ್ನು ತಿಳಿಯುವಿಕೆಯಲ್ಲಿ ತೃತೀಯಾವಿಭಕ್ತಿ ಬರುವುದು:–**

(i) ಹೊಗೆಯಿಂದ ಬೆಂಕಿಯನ್ನು ತಿಳಿದನು.

(ii) ಪರಿಮಳದಿಂದ ಹೂವನ್ನು ಅರಿದನು. – ಬೆಂಕಿ ಇದೆ ಎಂದು ತಿಳಿಯಲು **ಹೊಗೆಯೂ,** ಹೂವಿದೆ ಎಂದು ತಿಳಿಯಲು **ಪರಿಮಳವೂ** ಕಾರಣಗಳಾದ್ದರಿಂದ **ಹೊಗೆ, ಪರಿಮಳ** ಎಂಬ ಶಬ್ದಗಳ ಮೇಲೆ ತೃತೀಯಾವಿಭಕ್ತಿ ಬಂದಿದೆ.

**(ಉ) ಒಂದು ಕೆಲಸವು ಎಡಬಿಡದೆ ನಡೆಯಿತು ಎಂದು ತೋರುವಾಗ ತೃತೀಯಾವಿಭಕ್ತಿ ಬರುವುದು–**

(i) ನಮ್ಮ ಮಗನು ವರ್ಷದಿಂದ ಆ ಗ್ರಂಥ ಓದಿದನು.

(ii) ಒಂದು ತಿಂಗಳಿಂದ ಸಾಧನೆ ಮಾಡಿದ್ದೇನೆ.–ಇಲ್ಲಿ ಓದುವ ಕಾರ್ಯ, ಸಾಧಿಸಿದ ಕಾರ್ಯಗಳೆರಡೂ ವರ್ಷದಿಂದ ಮತ್ತು ತಿಂಗಳಿಂದ ಅವಿಚ್ಛಿನ್ನವಾಗಿ ನಡೆದಿವೆ. ಆದುದರಿಂದ ವರ್ಷ, ತಿಂಗಳು–ಈ ಎರಡೂ ಪ್ರಕೃತಿಗಳ ಮೇಲೆ '**ಇಂದ**' ಎಂಬ ತೃತೀಯಾವಿಭಕ್ತಿಪ್ರತ್ಯಯ ಬಂದಿದೆ.

**(ಊ) ಸಕರ್ಮಕಧಾತುವು ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯಕರ್ತೃವಾಚಕದ ಮೇಲೆ ತೃತೀಯಾವಿಭಕ್ತಿಯು ಬರುವುದು.–**

(i) ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿಸಿದನು.

(ii) ತಾಯಿಯು ಮಕ್ಕಳಿಂದ ಪಾಠವನ್ನು ಓದಿಸಿದಳು. – ಇಲ್ಲಿ ಶಿಲ್ಪಿಗಳು, ಮಕ್ಕಳು ಎಂಬಿವು **ಪ್ರೇರ್ಯಕರ್ತೃ** ಅಂದರೆ ಇನ್ನೊಬ್ಬರ ಪ್ರೇರಣೆಯಿಂದ ಕಾರ್ಯಮಾಡಿದವರು. ಅಂಥ ಪ್ರಕೃತಿಗಳಾದ **ಶಿಲ್ಪಿಗಳು, ಮಕ್ಕಳು**–ಎಂಬ ಪ್ರಕೃತಿಗಳ ಮೇಲೆ '**ಇಂದ**' ಎಂಬ ತೃತೀಯಾ ವಿಭಕ್ತಿ ಬಂದಿದೆ.

**(೪) ಚತುರ್ಥೀವಿಭಕ್ತಿ:–**

**(ಅ) ಸಂಪ್ರದಾನಾರ್ಥ:– ಸಂಪ್ರದಾನಾರ್ಥದಲ್ಲಿ ಎಂದರೆ ಕೊಡುವ ವಸ್ತುವು ಯಾರನ್ನು ಸೇರುವುದೋ ಅಲ್ಲಿ ಚತುರ್ಥೀವಿಭಕ್ತಿ ಬರುವುದು.**

(i) ಮಕ್ಕಳಿಗೆ ತಿಂಡಿಯನ್ನು ಹಂಚಿದರು.

(ii) ವಿದ್ಯಾರ್ಥಿಗಳಿಗೆ ಗುರುಗಳು ಜ್ಞಾನವನ್ನು ನೀಡಿದರು. –ಇಲ್ಲಿ ತಿಂಡಿಯು ಮಕ್ಕಳಿಗೂ, ಜ್ಞಾನವು ವಿದ್ಯಾರ್ಥಿಗಳಿಗೂ ಸೇರಿತು. ಆದುದರಿಂದ **ಮಕ್ಕಳು*** **ವಿದ್ಯಾರ್ಥಿ** ಎಂಬ ಪ್ರಕೃತಿಗಳ ಮೇಲೆ '**ಇಗೆ**' ಎಂಬ ಚತುರ್ಥೀವಿಭಕ್ತಿಪ್ರತ್ಯಯ ಬಂದಿದೆ.

**(ಆ) ಯಾವುದಾದರೂ ಒಂದು ಉದ್ದೇಶ ಅಥವಾ ಕಾರಣವಿದ್ದಾಗ ಆ ಶಬ್ದಗಳಿಗೆ ಚತುರ್ಥೀವಿಭಕ್ತಿ ಬರುವುದು.**

**(1) ಉದ್ದೇಶಕ್ಕೆ–**

(ಅ) ವಿದ್ಯಾರ್ಥಿಗಳು ಶಾಲೆಗೆ ಓದಲು ಹೋಗುತ್ತಾರೆ.

(ಆ) ತಿರುಕರು ಭಿಕ್ಷೆಗೆ ಮನೆಮನೆ ತಿರುಗುತ್ತಾರೆ.

(ಇ) ಈ ಮರವು ತೇರಿಗೆ ಬೇಕಾಗಿದೆ.

(ಉ) ಈ ಬಂಗಾರವು ಬಳೆಗೆ ಬೇಕು.

ಮೇಲಿನ ನಾಲ್ಕು ಉದಾಹರಣೆಗಳಲ್ಲೂ ಶಾಲೆಗೆ, ಭಿಕ್ಷೆಗೆ, ತೇರಿಗೆ, ಬಳೆಗೆ– ಇತ್ಯಾದಿ ಉದ್ದೇಶ ವಾಚಕಗಳು ಚತುರ್ಥೀವಿಭಕ್ತಿಯಿಂದ ಕೂಡಿರುವುದನ್ನು ಗಮನಿಸಿರಿ.

**(2) ಕಾರಣಕ್ಕೆ–**

(ಅ) ದುರ್ಬುದ್ಧಿ ಹುಟ್ಟುವುದು ಕೇಡಿಗೆ.

(ಆ) ಆಗುವುದೆಲ್ಲ ಒಳ್ಳೆಯದಕ್ಕೆ.

(ಇ) ದುಡಿಯುತ್ತಿರುವುದು ಹೊಟ್ಟೆಗೆ ಮತ್ತು ಬಟ್ಟೆಗೆ.

ಮೇಲಿನ ಉದಾಹರಣೆಗಳಲ್ಲಿ ಕಾರಣಾರ್ಥಕ ಪದಗಳಾದ–ಕೇಡಿಗೆ, ಒಳ್ಳೆಯದಕ್ಕೆ, ಹೊಟ್ಟೆಗೆ, ಬಟ್ಟೆಗೆ–ಎಂಬ ಪದಗಳು ಚತುರ್ಥೀವಿಭಕ್ತ್ಯಂತಗಳಾಗಿರುವುದನ್ನು ಗಮನಿಸಿರಿ.

---

* 'ಮಗು' ಎಂಬುದರ ಬಹುವಚನ ರೂಪವೇ 'ಮಕ್ಕಳು' ಎಂಬ ಶಬ್ದರೂಪವಾಗಿದೆ.

**(ಇ) ಸಾಮಾನ್ಯವಾಗಿ ಅಸಹನೆ, ದ್ರೋಹ, ಮಾತ್ಸರ್ಯ, ಭಯ, ಆಧಿಕ್ಯ (ಹೆಚ್ಚೆಂದು ತೋರುವಿಕೆ), ಸ್ವಭಾವ, ನಮಸ್ಕಾರ, ಹಿತ, ಅಹಿತ, ಹೋಲಿಕೆ ಮೊದಲಾದುವು ತೋರುವಾಗಲೂ ಚತುರ್ಥೀವಿಭಕ್ತಿಯು ಬರುವುದುಂಟು.**

(1) **ಅಸಹನೆಗೆ:–** ವ್ಯಾಪಾರಿಗೆ ವ್ಯಾಪಾರಿಯು ಹೊಟ್ಟೆಕಿಚ್ಚು ತೋರುವನು.

(2) **ದ್ರೋಹಕ್ಕೆ–** ದುರ್ಜನರು ಸಜ್ಜನರಿಗೆ ದ್ರೋಹ ಬಗೆಯುವರು.

(3) **ಮಾತ್ಸರ್ಯಕ್ಕೆ:–** ಸವತಿಗೆ ಸವತಿಯು ಮಾತ್ಸರ್ಯ ತೋರುವಳು.

(4) **ಭಯಕ್ಕೆ:–** ಸತ್ಪುರುಷರು ಪಾಪಕ್ಕೆ ಅಂಜುವರು.

(5) **ಆಧಿಕ್ಯ:–** ಇದು ಅದಕ್ಕೆ ದೊಡ್ಡದು. (ಇದು ಅದಕ್ಕಿಂತ ದೊಡ್ಡದು)
(ಇದು ಅದಕ್ಕೂ ದೊಡ್ಡದು♣).

(6) **ಸ್ವಭಾವ:–** ಮಕ್ಕಳಿಗೆ ಚಾಪಲ್ಯ ಸಹಜವಾದುದು.

(7) **ಅಹಿತಕ್ಕೆ:–** ಲೋಕಕ್ಕೆ ಮಳೆಯಾಗದಿರುವುದು ಅಹಿತವಾದದ್ದು.

(8) **ಹಿತಕ್ಕೆ:–** ರೋಗಿಗೆ ಔಷಧವೇ ಹಿತವಾದದ್ದು.

(9) **ಹೋಲಿಕೆಗೆ:–** ದೇವೇಂದ್ರನಿಗೆ ದುಷ್ಯಂತನು ಸಮಾನನು.

**(ಈ) ತಿನ್ನು, ಉಣ್ಣು, ಕುಡಿ, ಕಲಿ, ಮೊದಲಾದ ಅಶನಾರ್ಥಕ, ಬೋಧನಾರ್ಥಕ ಧಾತುಗಳಿಗೆ ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯಗಳು ಬಂದು ತಿನ್ನಿಸು, ಉಣ್ಣಿಸು, ಕುಡಿಸು, ಬೋಧಿಸು ಎಂಬುವಾಗಿ ಅವು ಆಖ್ಯಾತ ಪ್ರತ್ಯಯ ಹೊಂದಿ ಕ್ರಿಯಾಪದಗಳಾದಾಗ ಪ್ರೇರ್ಯಕರ್ತೃವಾಚಕದ ಮೇಲೆ ಚತುರ್ಥೀವಿಭಕ್ತಿ ಪ್ರತ್ಯಯ ಬರುವುದು.**

ಉದಾಹರಣೆಗೆ:– ¶**ತಾಯಿಯು ಮಗುವಿಗೆ ತಿಂಡಿಯನ್ನು ತಿನಿಸಿದಳು.** –ಇಲ್ಲಿ ಮಗುವಿಗೆ ತಿಂಡಿಯನ್ನು ತಿನ್ನುವಂತೆ ಮಾಡಿದಳಾದ್ದರಿಂದ ಮಗುವು **ಪ್ರೇರ್ಯಕರ್ತೃವಾಯಿತು.** ತಾಯಿ **ಪ್ರೇರಣಕರ್ತೃ.** ಪ್ರೇರ್ಯಕರ್ತೃವಾದ '**ಮಗು**' ಪ್ರಕೃತಿಯ ಮೇಲೆ ಚತುರ್ಥೀವಿಭಕ್ತಿ ಬಂದಿದೆ. ಇದರಂತೆ–

ತಂದೆ ಮಗನಿಗೆ ಹಾಲು ಕುಡಿಸಿದನು.
ಅಕ್ಕ ತನ್ನ ಮಗನಿಗೆ ಅನ್ನವನ್ನು ಉಣ್ಣಿಸಿದಳು.
ಉಪಾಧ್ಯಾಯರು ಶಿಷ್ಯರಿಗೆ ಪಾಠ ಕಲಿಸಿದರು.

– ಇಲ್ಲಿ **ಮಗ, ಶಿಷ್ಯ**–ಎಂಬಿವು ಪ್ರೇರ್ಯಕರ್ತೃಗಳಾದ್ದರಿಂದ ಅವುಗಳ ಮೇಲೆ ಚತುರ್ಥೀವಿಭಕ್ತಿ ಬಂದಿದೆ.

---

♣ ಅದಕ್ಕೂ ದೊಡ್ಡದು. (ಅದಕ್ಕೆ+ಊ=ಅದಕ್ಕೂ. ಇಲ್ಲಿ 'ಉ' ಎಂಬುದು ಅವ್ಯಯ). ಅದಕ್ಕಿಂತ ದೊಡ್ಡದು– ಇತ್ಯಾದಿಯಾಗಿಯೂ ಹೇಳುವುದುಂಟು. (ಅದಕ್ಕೆ+ಇಂತ=ಅದಕ್ಕಿಂತ – ಇಲ್ಲಿ 'ಇಂತ' ಎಂಬುದು ಚತುರ್ಥೀವಿಭಕ್ತಿಯ ಮುಂದೆ ಬರುವುದುಂಟು),

¶ ಮಗುವು ತಿಂಡಿಯನ್ನು ತಿಂದಿತು. ಹೀಗೆ ಇದ್ದಿದ್ದರೆ ಮಗುವೇ ಪ್ರಧಾನ ಕರ್ತೃವಾಗುತ್ತಿತ್ತು.

### (೫) ಪಂಚಮೀವಿಭಕ್ತಿ:–

**(ಅ) ಅಪಾದಾನಾರ್ಥ:– ಅಪಾದಾನ (ಅಗಲುವಿಕೆ) ತೋರುವಾಗ ಯಾವುದರ ದೆಸೆಯಿಂದ ಅಗಲಿಕೆಯುಂಟಾಯಿತೋ ಆ ಪ್ರಕೃತಿಯ ಮೇಲೆ ಪಂಚಮಿಯ 'ದೆಸೆಯಿಂದ' ಎಂಬ ಪ್ರತ್ಯಯ ಬರುವುದು.**

(i) ಮರದದೆಸೆಯಿಂದ ಹಣ್ಣು ಉದುರಿತು.

(ii) ಆಕಾಶದದೆಸೆಯಿಂದ ಮಳೆ ಬಿದ್ದಿತು. –ಇಲ್ಲಿ ಮರ ಮತ್ತು ಆಕಾಶಗಳ ದೆಸೆಯಿಂದ **ಹಣ್ಣು, ಮಳೆಗಳು** ಅಗಲಿಕೆ (ಅಪಾದಾನ) ಗೊಂಡುವಾದ್ದರಿಂದ ಆ ಪ್ರಕೃತಿಗಳ ಮೇಲೆ '**ದೆಸೆಯಿಂದ**' ಎಂಬ ಪಂಚಮೀವಿಭಕ್ತಿ ಬಂದಿತು.

**(ಆ) ನಿಮಿತ್ತ ಕಾರಣ ತೋರುವಾಗ ಪಂಚಮೀವಿಭಕ್ತಿ ಬರುವುದು.**

(i) ಬೆಂಕಿಯ ದೆಸೆಯಿಂದ ಹೊಗೆ ಹೊರಟಿತು.

(ii) ಜ್ಞಾನದ ದೆಸೆಯಿಂದಲೇ ಮೋಕ್ಷ ಸಿಗುವುದು. –ಇಲ್ಲಿ ಹೊಗೆ ಹೊರಡಲು ಬೆಂಕಿ ಕಾರಣ, ಮೋಕ್ಷ ದೊರೆಯಲು ಜ್ಞಾನ ಕಾರಣ; ಆದ್ದರಿಂದ **ಬೆಂಕಿ, ಜ್ಞಾನ,** ಎಂಬ ಪ್ರಕೃತಿಗಳ ಮೇಲೆ '**ದೆಸೆಯಿಂದ**' ಎಂಬ ಪಂಚಮೀವಿಭಕ್ತಿ ಬಂದಿದೆ.

**(ಇ) 'ಭಯ' ತೋರುವಾಗ ಯಾವುದರಿಂದ ಭಯವು ತೋರುವುದೋ ಅದರ ಮೇಲೆ ಪಂಚಮೀವಿಭಕ್ತಿ ಬರುವುದು.**

(i) ಕಳ್ಳರ ದೆಸೆಯಿಂದ ಅಂಜಿಕೆ.

(ii) ಜೇಬುಗಳ್ಳರ ದೆಸೆಯಿಂದ ಹೆದರಿಕೆಯಾಗುವುದು.

(iii) ಹುಲಿಯ ದೆಸೆಯಿಂದ ಅಳುಕಾಗುವುದು. –ಇಲ್ಲಿ **ಕಳ್ಳ, ಜೇಬುಗಳ್ಳ, ಹುಲಿ**–ಈ ಮೂರು ಭಯವನ್ನುಂಟುಮಾಡುವಂಥವು; ಆದ್ದರಿಂದ ಆ ಪ್ರಕೃತಿಗಳ ಮೇಲೆ ಪಂಚಮೀವಿಭಕ್ತಿ ಬಂದಿದೆ.*

### (೬) ಷಷ್ಠೀವಿಭಕ್ತಿ:–

**ಎಲ್ಲೆಲ್ಲಿ ಸಂಬಂಧ ತೋರುವುದೋ, ಅಲ್ಲೆಲ್ಲ ಷಷ್ಠೀವಿಭಕ್ತಿ ಬರುವುದು. ಉಳಿದ ಆರೂ ವಿಭಕ್ತಿಗಳ ಕಾರಕಾರ್ಥಸಂಬಂಧದಲ್ಲೆಲ್ಲ ಇದು ಬರುವುದರಿಂದ 'ಷಷ್ಠೀ' ಎಂಬುದು ಪ್ರತ್ಯೇಕ ಕಾರಕ ವಿಭಕ್ತಿಯಲ್ಲವೆಂದು ತಿಳಿಯಬೇಕು.**

ಉದಾಹರಣೆಗೆ:–

| | |
|---|---|
| ಭೂಮಿಯ ಅರಸು. | ಕಾಲ ಕಡಗ. |
| ಗಿಳಿಯ ಹಿಂಡು. | ಮನೆಯ ಹಂಚು. |
| ಆನೆಯ ಬಳಗ. | ದೇವರ ಗುಡಿ. |

---

* ಭಯಕ್ಕೆ ಕಾರಣವಾದ ವಸ್ತುಗಳ ಮೇಲೆ ಪಂಚಮೀವಿಭಕ್ತಿ ಬರುವುದೆಂಬುದರಿಂದ ಇದನ್ನು ಕಾರಣ (ನಿಮಿತ್ತ) ವಿಭಾಗದಲ್ಲೇ ಸೇರಿಸಬಹುದು. ಆದರೂ ಸ್ಪಷ್ಟತೆಗೋಸುಗ ಭಾಗ ಮಾಡಿದೆಯಷ್ಟೆ.

ಕೈಯ ಬೆರಳು. ಜನರ ಸಂತೆ.
ಶಂಕರನ ಬಳಗ. ಮಸಿಯ ಬರಹ.
ಪುಸ್ತಕದ ಹಾಳೆ. ತೇರಿನ ಕಳಸ.

ಮೇಲಿನ ಉದಾಹರಣೆಗಳನ್ನು ಅವಲೋಕಿಸಿದರೆ ಸಂಬಂಧವೆಂಬುದು ಅನಂತವೆಂದು ತಿಳಿಯದಿರದು. ಅರಸನಿಗೆ ಭೂಮಿಯ ಸಂಬಂಧ, ಹಿಂಡಿಗೆ ಗಿಳಿಯ ಸಂಬಂಧ, ಬಳಗಕ್ಕೆ ಆನೆಯ ಸಂಬಂಧ...... ಹೀಗೆ ಎಲ್ಲೆಲ್ಲಿ ಸಂಬಂಧವಿರುವುದೋ ಅಲ್ಲೆಲ್ಲ ಷಷ್ಠೀವಿಭಕ್ತಿ ಬರುವುದು.

### (೭) ಸಪ್ತಮೀವಿಭಕ್ತಿ:–

**(ಅ) ಅಧಿಕರಣಾರ್ಥದಲ್ಲಿ ಸಪ್ತಮೀವಿಭಕ್ತಿ ಪ್ರತ್ಯಯ ಬರುವುದು. –** ಅಧಿಕರಣವೆಂದರೆ ಆಧಾರವೆಂದರ್ಥ. 'ಜೇಬಿನಲ್ಲಿ ದುಡ್ಡು ಇದೆ' ಎಂಬಲ್ಲಿ ಜೇಬು ಆಧಾರ ಅಥವಾ ಅಧಿಕರಣ. ದುಡ್ಡು ಆಧೇಯ.

(i) **ಪುಸ್ತಕದಲ್ಲಿ ವಿವರಣೆಯಿದೆ.** – ವಿವರಣೆಗೆ ಪುಸ್ತಕ ಆಧಾರ, ವಿವರಣೆ ಆಧೇಯ.

(ii) **ಕಣಜದಲ್ಲಿ ಕಾಳು ತುಂಬಿದೆ.** – ಕಾಳಿಗೆ ಕಣಜ ಆಧಾರ, ಕಾಳು ಆಧೇಯ.

(iii) **ಶಾಲೆಯಲ್ಲಿ ಮಕ್ಕಳು ಇದ್ದಾರೆ.** – ಶಾಲೆ ಆಧಾರ, ಮಕ್ಕಳು ಆಧೇಯ. ಇದರಂತೆ–ಆಕಾಶದಲ್ಲಿ ಪಕ್ಷಿಗಳ ಹಾರಾಟ, ಕಾಡಿನಲ್ಲಿ ಮೃಗಗಳ ಬಳಗ, ಸಮುದ್ರದಲ್ಲಿ ಮೀನುಗಳಿವೆ. –ಇತ್ಯಾದಿ.

**(ಆ) ಗುಂಪಿನಿಂದ (ಸಮುದಾಯದಿಂದ) ಒಂದನ್ನು ಬೇರ್ಪಡಿಸಿ ಹೇಳುವಾಗ ಗುಂಪಿನ ಶಬ್ದದ ಮೇಲೆ ಸಪ್ತಮೀವಿಭಕ್ತಿಪ್ರತ್ಯಯ ಬರುವುದು.**

(i) ಊರುಗಳಲ್ಲಿ ನಮ್ಮೂರೇ ಚೆಂದ.

(ii) ರಾಷ್ಟ್ರಗಳಲ್ಲಿ ನಮ್ಮ ರಾಷ್ಟ್ರವೇ ಚೆಂದ.

(iii) ಮನುಷ್ಯರಲ್ಲಿ ಸಾಹಸಿಯೇ ಶ್ರೇಷ್ಠ.

(iv) ಹಣ್ಣುಗಳಲ್ಲಿ ಮಾವಿನ ಹಣ್ಣು ರುಚಿ. –ಇಲ್ಲಿ ಸಮುದಾಯ ವಾಚಕಗಳಾದ **ಊರು, ರಾಷ್ಟ್ರ, ಮನುಷ್ಯ, ಹಣ್ಣು**–ಇತ್ಯಾದಿ ಪ್ರಕೃತಿಗಳ ಮುಂದೆ ಸಪ್ತಮೀವಿಭಕ್ತಿ ಬಂದಿದೆ.

**(ಇ) ನಿಪುಣ, ಕುಶಲ, ಸಾಧು, ಚತುರ–ಇತ್ಯಾದಿ ಅರ್ಥಗಳು ತೋರುವಾಗ ಸಪ್ತಮೀವಿಭಕ್ತಿಯು ಬರುವುದು.**

ಉದಾಹರಣೆಗೆ:– (i) ಮಾತಿನಲ್ಲಿ ನಿಪುಣ. (ii) ಹುಡುಗರಲ್ಲಿ ಸಾಧು.
(iii) ಕಾರ್ಯದಲ್ಲಿ ಕುಶಲ. (iv) ಕೆಲಸದಲ್ಲಿ ಚತುರ.

### (೮) ಸಂಬೋಧನಾವಿಭಕ್ತಿ:–

**ಕರೆಯುವಿಕೆ=ಅಭಿಮುಖೀಕರಣ**–ದೂರದಲ್ಲಿದ್ದವರನ್ನಾಗಲಿ, ಸಮೀಪದಲ್ಲಿದ್ದವರನ್ನಾಗಲಿ ಕರೆಯುವಾಗ ಮತ್ತು ಮೊರೆಯಿಡುವಾಗ, ಏನನ್ನಾದರೂ ಕುರಿತು ಹೇಳುವಾಗ ಸಂಬೋಧನೆಯ **ಅ, ಏ, ಈ, ಇರಾ** ಇತ್ಯಾದಿ ವಿಭಕ್ತಿಪ್ರತ್ಯಯಗಳು ಏಕವಚನ, ಬಹುವಚನಗಳಲ್ಲಿ ಬರುವುದುಂಟು.

ಉದಾಹರಣೆಗೆ:–

| | | |
|---|---|---|
| (i) | *ಮಗುವೇ$_3$ ಇತ್ತಬಾ. | (ಏಕಾರ ವಿಭಕ್ತಿಪ್ರತ್ಯಯ) |
| (ii) | ಅಕ್ಕಾ$_3$ ಬೇಗ ಬಾ. | (ಆಕಾರ ವಿಭಕ್ತಿಪ್ರತ್ಯಯ) |
| (iii) | ತಂಗೀ$_3$ ಇಲ್ಲಿ ಬಾ. | (ಈಕಾರ ವಿಭಕ್ತಿಪ್ರತ್ಯಯ) |
| (iv) | ದೇವರೇ$_3$ ಕಾಪಾಡು. | (ಏಕಾರ ವಿಭಕ್ತಿಪ್ರತ್ಯಯ) |
| (v) | ಅಣ್ಣಾ$_3$ ತಂದೆ ಹೀಗೆ ಹೇಳಿದನು. | (ಆಕಾರ ವಿಭಕ್ತಿಪ್ರತ್ಯಯ) |
| (vi) | ಅಣ್ಣಂದಿರಾ$_3$ ಬನ್ನಿರಿ. | (ಇರಾ ಕಾರ ವಿಭಕ್ತಿಪ್ರತ್ಯಯ) |

# VII – ವಿಭಕ್ತಿಪಲ್ಲಟ

**(53) ನಾವು ಮಾತಾನಾಡುವಾಗ ಶಬ್ದಗಳಿಗೆ ಪ್ರಕೃತಿಗಳಿಗೆ ಯಾವಯಾವ ವಿಭಕ್ತಿಪ್ರತ್ಯಯಗಳನ್ನು ಹಚ್ಚಿ ಹೇಳಬೇಕೋ ಅದನ್ನು ಬಿಟ್ಟು ಬೇರೆ ವಿಭಕ್ತಿಪ್ರತ್ಯಯಗಳನ್ನು ಹಚ್ಚಿ ಹೇಳುವುದುಂಟು. ಹೀಗೆ ಬರಬೇಕಾದ ವಿಭಕ್ತಿಪ್ರತ್ಯಯಕ್ಕೆ ಪ್ರತಿಯಾಗಿ ಬೇರೊಂದು ವಿಭಕ್ತಿಪ್ರತ್ಯಯ ಬರುವಂತೆ ಹೇಳುವುದೇ 'ವಿಭಕ್ತಿ ಪಲ್ಲಟ' ವೆನಿಸುವುದು.**

ಉದಾಹರಣೆಗೆ:–

(ಅ) (i) ಬಂಡಿಯನ್ನು ಹತ್ತಿದನು.
(ii) ಊರನ್ನು ಸೇರಿದನು.
(iii) ಬೆಟ್ಟವನ್ನು ಹತ್ತಿದನು.

ಹೀಗೆ ದ್ವಿತೀಯಾ ವಿಭಕ್ತಿಯನ್ನು ಸೇರಿಸಿ ಹೇಳಬೇಕಾದ ಕಡೆಗಳಲ್ಲಿ–

(i) ಬಂಡಿಗೆ ಹತ್ತಿದನು.
(ii) ಊರಿಗೆ ಸೇರಿದನು.
(iii) ಬೆಟ್ಟಕ್ಕೆ ಹತ್ತಿದನು.

---

* ಮಗುವೇ$_3$–ಹೀಗೆ '3' ನ್ನು ಬರೆದಿರುವುದು ಇಲ್ಲಿರುವ ಸ್ವರವೇ (ಏ ಎಂಬ ಸ್ವರ) ಸಂಬೋಧನಾ ವಿಭಕ್ತಿಯೆಂದೂ, ಇದು ಪ್ಲುತಸ್ವರ (ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡಬೇಕಾದ ಸ್ವರ) ವೆಂದೂ ತಿಳಿಯಲೋಸುಗ ಮಾತ್ರ. ಅನ್ಯತ್ರ ಹೀಗೆ ಬರೆಯುವ ಪರಿಪಾಠವಿಲ್ಲ. ಇಲ್ಲಿ ತಿಳಿವಳಿಕೆಗೋಸುಗ ಮಾತ್ರ ತೋರಿಸಲಾಗಿದೆ.

ಹೀಗೆ ಚತುರ್ಥೀವಿಭಕ್ತಿಯನ್ನು ಸೇರಿಸಿ ಹೇಳುವುದು ವಾಡಿಕೆ. **ಆದ್ದರಿಂದ ಇಲ್ಲಿ ದ್ವಿತೀಯಾರ್ಥದಲ್ಲಿ ಚತುರ್ಥೀವಿಭಕ್ತಿ ಬಂದಿದೆಯೆಂದು ತಿಳಿಯಬೇಕು.**

(ಆ) (i) ಮರದ ದೆಸೆಯಿಂದ ಹಣ್ಣು ಉದುರಿತು.
(ii) ಆತನ ದೆಸೆಯಿಂದ ಕೇಡಾಯಿತು.
ಹೀಗೆ ಪಂಚಮೀವಿಭಕ್ತಿ ಬರುವೆಡೆಗಳಲ್ಲಿ–
(i) ಮರದಿಂದ ಹಣ್ಣು ಉದುರಿತು.
(ii) ಆತನಿಂದ ಕೇಡಾಯಿತು.

ಇತ್ಯಾದಿ ತೃತೀಯಾವಿಭಕ್ತಿಯನ್ನು ಸೇರಿಸಿ ಹೇಳುವುದುಂಟು. **ಆದ್ದರಿಂದ ಇದನ್ನು ಪಂಚಮೀ ಅರ್ಥದಲ್ಲಿ ತೃತೀಯಾವಿಭಕ್ತಿ ಪಲ್ಲಟವಾಗಿದೆಯೆಂದು ತಿಳಿಯಬೇಕು.**

(ಇ) (i) ಮನೆಯ ಯಜಮಾನ.
(ii) ನಮ್ಮ ಉಪಾಧ್ಯಾಯರು.
ಹೀಗೆ ಷಷ್ಠೀವಿಭಕ್ತಿಯು ಬರಬೇಕಾದೆಡೆಯಲ್ಲಿ–
(i) ಮನೆಗೆ ಯಜಮಾನ.
(ii) ನಮಗೆ ಉಪಾಧ್ಯಾಯರು.

ಇತ್ಯಾದಿ ಚತುರ್ಥೀವಿಭಕ್ತಿಯನ್ನು ಸೇರಿಸಿ ಹೇಳುವುದುಂಟು. **ಆದುದರಿಂದ ಇದನ್ನು ಷಷ್ಠೀ ಅರ್ಥದಲ್ಲಿ ಚತುರ್ಥೀವಿಭಕ್ತಿ ಪಲ್ಲಟವಾಗಿ ಬಂದಿದೆಯೆಂದು ತಿಳಿಯಬೇಕು.**

(ಉ) (i) ಹಳ್ಳದಲ್ಲಿ ಬಿದ್ದನು.
(ii) ಅವನಲ್ಲಿ ಸಾಮರ್ಥ್ಯವಿಲ್ಲ.
ಹೀಗೆ ಸಪ್ತಮೀವಿಭಕ್ತಿ ಬರಬೇಕಾದ ಕಡೆಗಳಲ್ಲಿ–
(i) ಹಳ್ಳಕ್ಕೆ ಬಿದ್ದನು.
(ii) ಅವನಿಗೆ ಸಾಮರ್ಥ್ಯವಿಲ್ಲ.

ಇತ್ಯಾದಿ ಪಂಚಮೀವಿಭಕ್ತ್ಯಂತವಾಗಿ ಹೇಳುವುದು ವಾಡಿಕೆ. **ಇದನ್ನು ಸಪ್ತಮೀ ಅರ್ಥದಲ್ಲಿ ಪಂಚಮೀವಿಭಕ್ತಿ ಪಲ್ಲಟವೆಂದು ತಿಳಿಯಬೇಕು.**

## VIII – ಸಾರಾಂಶ

**ನಾಮಪ್ರಕೃತಿಗಳು**

**ಸಹಜನಾಮ ಪ್ರಕೃತಿ** | **ಸಾಧಿತನಾಮ ಪ್ರಕೃತಿ**

(i) ವಸ್ತುಗಳ ಹೆಸರು ಹೇಳುವ ವಸ್ತುವಾಚಕಗಳು
(ii) ವಸ್ತುಗಳ ಗುಣವನ್ನು ಹೇಳುವ ಗುಣವಾಚಕಗಳು
(iii) ಸಂಖ್ಯಾವಾಚಕಗಳು
(iv) ಸಂಖ್ಯೇಯವಾಚಕಗಳು
(v) ಪರಿಮಾಣವಾಚಕಗಳು
(vi) ಪ್ರಕಾರವಾಚಕಗಳು
(vii) ದಿಗ್ವಾಚಕಗಳು
(viii) ಭಾವನಾಮಗಳು
(ix) ಸರ್ವನಾಮಗಳು

(i) ಕೃದಂತ
(ii) ತದ್ಧಿತಾಂತ
(iii) ಸಮಾಸಗಳು

ಮೇಲಿನ ಈ ೯ ತರದ ಸಹಜನಾಮ ಪ್ರಕೃತಿಗಳಿಗೂ, ಸಾಧಿತಗಳಾದ ಕೃದಂತ, ತದ್ಧಿತಾಂತ, ಸಮಾಸ ನಾಮಪ್ರಕೃತಿಗಳ ಮೇಲೂ ನಾಮವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದಗಳೆನಿಸುತ್ತವೆ. ಇವುಗಳಿಗೆ ಲಿಂಗ ವಚನಗಳೂ ಉಂಟು.

## ನಾಮಪದಗಳು

**ಲಿಂಗ**
(i) ಪುಲ್ಲಿಂಗ
(ii) ಸ್ತ್ರೀಲಿಂಗ
(iii) ನಪುಂಸಕಲಿಂಗ
(iv) ಪುನ್ನಪುಂಸಕಲಿಂಗ
(v) ಸ್ತ್ರೀನಪುಂಸಕಲಿಂಗ
(vi) ವಾಚ್ಯಲಿಂಗ (ವಿಶೇಷ್ಯಾಧೀನಲಿಂಗ)

**ವಚನ**
(i) ಏಕವಚನ (ಒಂದು ವಸ್ತು)
(ii) ಬಹುವಚನ (ಒಂದಕ್ಕಿಂತ ಹೆಚ್ಚು ವಸ್ತು)

**ವಿಭಕ್ತಿಗಳು**
(i) ಪ್ರಥಮಾ (ಉ)
(ii) ದ್ವಿತೀಯಾ (ಅನ್ನು)
(iii) ತೃತೀಯಾ (ಇಂದ)
(iv) ಚತುರ್ಥೀ (ಗೆ, ಇಗೆ, ಕ್ಕೆ, ಅಕ್ಕೆ)
(v) ಪಂಚಮೀ (ದೆಸೆಯಿಂದ)
(vi) ಷಷ್ಠೀ (ಅ)
(vii) ಸಪ್ತಮೀ

**(ಅಲ್ಲಿ, ಅಲಿ, ಒಳು, ಎ)**

**(viii) ಸಂಬೋಧನಾ**

**(ಆ, ಏ, ಇರಾ, ಈ)**

**(ಅ) ಮೇಲೆ ಹೇಳಿದ ಎಲ್ಲ ವಿಭಕ್ತಿಪ್ರತ್ಯಯಗಳು ಪ್ರಕೃತಿಗಳ ಮೇಲೆ ಸೇರುವಾಗ ಆಗುವ ರೂಪಾಂತರಗಳು:– ಮುಖ್ಯವಾಗಿ ದ, ವ, ನ, ಇನ, ಅರ ಆಗಮಗಳು ಏಕವಚನದಲ್ಲೂ,**

**(ಆ) ಬಹುವಚನದಲ್ಲಿ–ಗಳು, ಅರು, ಅರುಗಳು, ಅಂದಿರು, ಅಂದಿರುಗಳು, ಇರು, ವಿರು, ವು, ಅವು, ಕಳು, ವರು–ಇತ್ಯಾದಿಗಳೂ ಬರುತ್ತವೆ.**

**(ಇ) ಮುಖ್ಯವಾದ ಕೆಲವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಪ್ರಕೃತಿಗಳು ವಿಭಕ್ತಿಪ್ರತ್ಯಯ ಸೇರಿ ಯಾವ ರೂಪ ಪಡೆಯುತ್ತವೆಂಬ ಬಗೆಗೆ ತಿಳಿದಿದ್ದೀರಿ.**

**(ಈ) ಪ್ರಯೋಗ ವಿಧಾನದಲ್ಲಿ ಯಾವ ಯಾವ ಅರ್ಥದಲ್ಲಿ ವಿಭಕ್ತಿಪ್ರತ್ಯಯಗಳು ಪ್ರಕೃತಿಯ ಮೇಲೆ ಸೇರುತ್ತವೆಂಬ ಬಗೆಗೆ ತಿಳಿದಿದ್ದೀರಿ.**

**(ಉ) ವಿಭಕ್ತಿ ಪ್ರತ್ಯಯಗಳು ಪಲ್ಲಟವಾಗಿ ಬೇರೆಬೇರೆ ಅರ್ಥಗಳಲ್ಲಿ ಹೇಗೆ ಸೇರುತ್ತವೆಂಬುದನ್ನು ತಿಳಿದಿದ್ದೀರಿ.**

* * * * *

## <u>ಅಭ್ಯಾಸ ಪ್ರಶ್ನೆಗಳು</u>

(೧) ಅಪ್ಪಾ, ನನಗೆ ತಪಸ್ಸಿನ ಮೇಲೆ ಮನಸ್ಸಾಗಿದೆ. ಈ ವಯಸ್ಸಿನಲ್ಲಿ ಅರಣ್ಯವಾಸವು ನಮ್ಮ ಕುಲಕ್ಕೆ ಬಂದದ್ದು. ನಾನೂ ಬೇಕಾದಷ್ಟು ಕಾಲ ನಿಮ್ಮೊಡನೆ ಇದ್ದೆನು.
–ಈ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಶಬ್ದಗಳಾವುವು?

(೨) ವಸ್ತುವಾಚಕ, ಗುಣವಾಚಕ, ಶಬ್ದಗಳೆಂದರೇನು? ಹತ್ತು ಹತ್ತು ಶಬ್ದಗಳ ಪಟ್ಟಿ ಮಾಡಿರಿ.

(೩) ಉತ್ತರ, ಮಾಡಲು, ಅತ್ತ, ಅವನು, ಕುರುಡ, ಕಲ್ಲು, ಅಷ್ಟು, ಅಂಥ, ಮೂರನೆಯ–ಈ ಪ್ರಕೃತಿಗಳು ಯಾವ ಯಾವ ಗುಂಪಿಗೆ ಸೇರುವ ನಾಮಪ್ರಕೃತಿಗಳು?

(೪) ಜನ, ಮಗು, ಕೋಣ, ಸೂರ್ಯ, ಶನಿ, ನಾನು, ನೀನು–ಈ ಪ್ರಕೃತಿಗಳು ಯಾವ ಯಾವ ಲಿಂಗಗಳು?

(೫) ಮನೆಯನ್ನು, ದೇವರಲ್ಲಿ, ಪುಸ್ತಕವು, ಕಲ್ಲಿಗೆ, ಹುಲಿಯದೆಸೆಯಿಂದ, ದೇವರೇ, ಮಕ್ಕಳಿರಾ, ಮಂಚದಿಂದ, ನೆಲಕ್ಕೆ, ಗುರುವಿಗೆ–ಈ ಪದಗಳ ಪ್ರಕೃತಿ ಪ್ರತ್ಯಯಗಳನ್ನು ಬಿಡಿಸಿ ಬರೆದು ಆ ಪ್ರತ್ಯಯಗಳು ಯಾವ ವಿಭಕ್ತಿಗಳು? ಅವುಗಳ ಅರ್ಥವೇನು ತಿಳಿಸಿರಿ.

(೬) ತಮ್ಮಂದಿರು, ಅಕ್ಕಂದಿರುಗಳು, ತಾಯಿಯರು, ಈ ಪದಗಳಲ್ಲಿರುವ ಪ್ರಕೃತಿ–ಪ್ರತ್ಯಯ–

ಆಗಮಗಳು ಯಾವುವೆಂಬುದನ್ನು ಬಿಡಿಸಿ ಬರೆದು ತೋರಿಸಿರಿ.

(೭) (ಅ) ರಾಮ–ಕಾಡು ಒಂದು ಪರ್ಣಶಾಲೆ–ಕಟ್ಟಿಕೊಂಡು ವಾಸಿಸುತ್ತಿದ್ದನು.

(ಆ) ಮೀನು–ನೀರು–ವಾಸಮಾಡುತ್ತದೆ.

–ಮೇಲಿನ ಈ ಎರಡೂ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ ನಾಮಪ್ರಕೃತಿಗಳಿಗೆ ಯಾವ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿದರೆ, ವಾಕ್ಯವು ಅರ್ಥವತ್ತಾಗುವುದು? ವಿಭಕ್ತಿಪ್ರತ್ಯಯವನ್ನು ಸೇರಿಸಿ ಬರೆಯಿರಿ.

(೮) (ಅ) ಅವನು ಮನೆ ಇಲ್ಲ (ಆ) ತಾಯಿ ದೇವರು ತಿಳಿ.

–ಇವನ್ನು ಅರ್ಥಪೂರ್ಣವಾದ ವಾಕ್ಯಗಳನ್ನಾಗಿ ಮಾಡಿರಿ.

(೯) ಕೆಳಗಿನ ಪದಗಳ ಮುಂದೆ ಬಿಟ್ಟಿರುವ ಸ್ಥಳದಲ್ಲಿ ಮುಂದೆ ಆವರಣದಲ್ಲಿ ಕೊಟ್ಟಿರುವ ಒಂದು ಸರಿಯಾದ ಉತ್ತರವನ್ನು ಹುಡುಕಿ ಬರೆಯಿರಿ.

(i) ನಾನು ಎಂಬುದು_______ (ವಾಚ್ಯಲಿಂಗ, ನಪುಂಸಕಲಿಂಗ, ಪುಲ್ಲಿಂಗ)

(ii) ಅವನು ಎಂಬುದು_______ (ಗುಣವಾಚಕ, ಭಾವನಾಮ, ಸರ್ವನಾಮ)

(iii) ಮಕ್ಕಳಿರಾ, ಎಂಬುದು____ (ಚತುರ್ಥೀವಿಭಕ್ತಿ, ತೃತೀಯಾವಿಭಕ್ತಿ, ಸಂಬೋಧನಾ ವಿಭಕ್ತ್ಯಂತ ಪದ)

(iv) ಅತ್ತ ಎಂಬುದು_____ (ಪರಿಮಾಣವಾಚಕ, ದಿಗ್ವಾಚಕ, ಸರ್ವನಾಮ)

(v) ಕೊಡಲಿಯಿಂದ ಎಂಬ ಪದವು______ (ಪಂಚಮೀ, ತೃತೀಯಾ, ಸಪ್ತಮೀ ವಿಭಕ್ತ್ಯಂತವಾಗಿದೆ)

(vi) ಸಂಪ್ರದಾನಾರ್ಥದಲ್ಲಿ______ (ತೃತೀಯಾ, ಚತುರ್ಥೀ, ಪಂಚಮೀವಿಭಕ್ತಿ ಬರುವುದು)

(vii) ಸರಸ್ವತಿ ಒಲಿದಳು. ಇಲ್ಲಿ 'ಸರಸ್ವತಿ' ಎಂಬ ಪ್ರಕೃತಿಯು____ (ನಪುಂಸಕಲಿಂಗ, ಸ್ತ್ರೀಲಿಂಗ, ಸ್ತ್ರೀನಪುಂಸಕಲಿಂಗ)

(viii) ಹೂವಾಡಗಿತ್ತಿ ಎಂಬುದು_____ (ಸ್ತ್ರೀಲಿಂಗ, ನಪುಂಸಕಲಿಂಗ, ಪುಲ್ಲಿಂಗ)

(ix) ಹುಡುಗ ಎಂಬುದು_____ (ವಾಚ್ಯಲಿಂಗ, ನಪುಂಸಕಲಿಂಗ, ಪುಲ್ಲಿಂಗ)

(x) ಹುಡುಗಿ ಎಂಬುದು_____ (ಅಂಕಿತನಾಮ, ಅನ್ವರ್ಥನಾಮ, ರೂಢನಾಮ)

(೧೦) ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳಿವೆ. ಅವನ್ನು ತಿದ್ದಿ ಸರಿಪಡಿಸಿರಿ:–

(i) ನಾನು, ನಾವು, ನೀನು, ನೀವು–ಎಂಬುವು ಪುಲ್ಲಿಂಗಗಳು.

(ii) ಪದಕ್ಕೆ ಪ್ರತ್ಯಯ ಸೇರಿ ಪದವೆನಿಸುವುದು.

(iii) ಕರ್ತರಿ ಪ್ರಯೋಗದಲ್ಲಿ ಕರ್ಮಾರ್ಥದಲ್ಲಿ ಪ್ರಥಮಾವಿಭಕ್ತಿ ಬರುವುದು.

(iv) ಧಾತುಗಳಮೇಲೆ ನಾಮ ವಿಭಕ್ತಿಪ್ರತ್ಯಯಗಳು ಸೇರಿ ನಾಮಪದಗಳೆನಿಸುವುವು.

(v) ಅವನು, ಅವಳು, ಅದು, ಅವು–ಇವು ಮಧ್ಯಮ ಪುರುಷ ಸರ್ವನಾಮಗಳು.

(vi) ನಾಮಪದದ ಮೂಲರೂಪಕ್ಕೆ ಕ್ರಿಯಾಪ್ರಕೃತಿಯೆನ್ನುವರು.

(vii) ಸಂಬೋಧನೆಯಲ್ಲಿ ಬರುವ ಕೊನೆಯ ಸ್ವರವು ದೀರ್ಘಸ್ವರವೆನಿಸುವುದು.

(viii) ಪ್ಲುತಸ್ವರವೆಂದರೆ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರ.

(ix) ಜನ ಶಬ್ದವು ಪುಲ್ಲಿಂಗ.

(x) ಸೂರ್ಯ ಶಬ್ದವು ನಪುಂಸಕಲಿಂಗ.

* * * * *

## ಅಧ್ಯಾಯ ೫

# ಕ್ರಿಯಾಪದ ಪ್ರಕರಣ

## I - ಕ್ರಿಯಾಪ್ರಕೃತಿ (ಧಾತು)

ಹಿಂದಿನ ಅಧ್ಯಾಯದಲ್ಲಿ, ನಾಮಪ್ರಕೃತಿ–ನಾಮವಿಭಕ್ತಿಪ್ರತ್ಯಯ–ನಾಮಪದ ಎಂದರೇನು? ಪ್ರಕೃತಿಗಳ ವಿಧಗಳು, ಪ್ರತ್ಯಯಗಳ ವಿಧಗಳು ಇವುಗಳ ಬಗೆಗೆ ತಿಳಿದಿದ್ದೀರಿ. ಈಗ ನಾಮಪದ ಗಳ ಹಾಗೆಯೇ ಇನ್ನೊಂದು ರೀತಿಯ ಪದಗಳ ವಿಚಾರವನ್ನು ತಿಳಿಯೋಣ. ಪದವೆಂದರೆ ಪ್ರಕೃತಿಗೆ ಪ್ರತ್ಯಯ ಸೇರಿ ಆದ ಶಬ್ದರೂಪವೆಂದು ನಿಮಗೆ ತಿಳಿದಿದೆ.

(i) ತಾಯಿಯು ಅಡಿಗೆಯನ್ನು **ಮಾಡುತ್ತಾಳೆ**.
(ii) ತಂದೆಯು ಕೆಲಸವನ್ನು **ಮಾಡಿದನು**.
(iii) ಅಣ್ಣ ಊಟವನ್ನು **ಮಾಡುವನು**.
(iv) ದೇವರು ಒಳ್ಳೆಯದನ್ನು **ಮಾಡಲಿ**.
(vi) ಅವನು ನಾಳೆಯದಿನ **ಮಾಡಾನು (ಮಾಡಿಯಾನು)**.

(vii) ಅವನು ಊಟವನ್ನು <u>**ಮಾಡನು**</u>.

ಮೇಲೆ ಇರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಪದಗಳಾದ– **ಮಾಡುತ್ತಾಳೆ, ಮಾಡಿದನು, ಮಾಡುವನು, ಮಾಡಲಿ, ಮಾಡಾನು (ಮಾಡಿಯಾನು), ಮಾಡನು** –ಇವೆಲ್ಲ ಒಂದೊಂದು ಕ್ರಿಯೆಯು ಪೂರ್ಣಗೊಂಡ ಅರ್ಥಕೊಡುವಂಥ ಪದಗಳಾಗಿವೆ. ಆದುದರಿಂದ ಹೀಗೆ ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥಕೊಡುವ–ಪದಗಳನ್ನು ಸಾಮಾನ್ಯವಾಗಿ '**ಕ್ರಿಯಾಪದ**' ಎನ್ನುತ್ತೇವೆ.

ಮೇಲೆ ಹೇಳಿದ ಆರು ಕ್ರಿಯಾಪದಗಳಿಗೆಲ್ಲ ಮೂಲ '**ಮಾಡು**' ಎಂಬ ಶಬ್ದವಾಗಿದೆ. ಇದು ಕ್ರಿಯೆಯ ಅರ್ಥವನ್ನು ಕೊಡುವ '**ಮೂಲ**' ರೂಪವೇ ಆಗಿದೆ.

ಮಾಡುತ್ತಾನೆ<br>
ಮಾಡಿದನು<br>
ಮಾಡುವನು<br>
ಮಾಡಲಿ } 'ಮಾಡು'<br>
ಮಾಡಾನು<br>
ಮಾಡನು

'**ಮಾಡು**' ಎಂಬ ಈ ಮೂಲರೂಪಕ್ಕೆ ಅನೇಕ ಪ್ರತ್ಯಯಗಳು ಸೇರಿದ ಮೇಲೆ ಅದು ವಿವಿಧ ರೂಪಗಳನ್ನು ಹೊಂದಿ ವಿವಿಧವಾದ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದವಾಗುವುದು. ಇಂಥ ಕ್ರಿಯಾಪದದ ಮೂಲರೂಪವನ್ನು '**ಕ್ರಿಯಾಪ್ರಕೃತಿ**' ಅಥವಾ '**ಧಾತು**' ಎನ್ನುವರು. ಇದರ ಸೂತ್ರವನ್ನು ಮುಂದಿನಂತೆ ಹೇಳಬಹುದು.

**(54) ಕ್ರಿಯಾರ್ಥವನ್ನು ಕೊಡುವುದಾಗಿಯೂ, ಪ್ರತ್ಯಯವನ್ನು ಹೊಂದದೆಯೂ ಇರುವ ಶಬ್ದಕ್ಕೆ 'ಕ್ರಿಯಾಪ್ರಕೃತಿ' ಅಥವಾ 'ಧಾತು' ಎನ್ನುವರು.**

ಇಂಥ ಧಾತುಗಳು ಎರಡು ವಿಧ.

**ಧಾತು**

**ಮೂಲ ಧಾತು** | **ಪ್ರತ್ಯಯಾಂತ ಧಾತು**

(೧) **ಮೂಲಧಾತುಗಳು–** ಉದಾಹರಣೆಗೆ:– ಮಾಡು, ತಿನ್ನು, ಹೋಗು, ಬರು, ಮಲಗು, ಏಳು, ನಡೆ, ನೋಡು, ಓಡು, ನಿಲ್ಲು, ಓದು, ಆಗು, ಹೊಳೆ, ಬದುಕು, ಇಕ್ಕು, ಮುಗಿ, ತೂಗು, ಹಿಗ್ಗು, ನಡುಗು, ಮಿಂಚು, ಮೆಟ್ಟು, ಹಂಚು, ಅಂಜು, ಈಜು, ಉಜ್ಜು, ದಾಟು, ಹುಟ್ಟು, ಒಕ್ಕು, ತುಂಬು, ಮುಚ್ಚು, ಹಿಡಿ, ಕೊಡು, ಹರಡು, ಇಡು, ಪಡೆ, ಕುಣಿ, ಕಾಣು, ಸುತ್ತು, ಒತ್ತು, ಎತ್ತು, ಬಿತ್ತು, ತೆರು, ಒದೆ, ತಿದ್ದು, ಹೊಡೆ, ಬಡಿ, ಬರೆ, ನೆನೆ, ಎನ್ನು, ಒಪ್ಪು, ತಪ್ಪು, ನಂಬು, ಉಬ್ಬು, ಕಾ, ಬೇ, ಮೀ, ಮೇ, ಚಿಮ್ಮು, ಹೊಯ್, ಬಯ್, ಸುಯ್, ಕೊಯ್, ತೆಯ್, ಸುರಿ, ಅರಿ,

ಹೀರು, ಸೇರು, ಸೋಲು, ಹೊಲಿ, ಬಲಿ, ಹೇಸು, ಅರಸು, ಹುಡುಕು, ಬಳಸು, ಗುಡಿಸು, ಚೆಲ್ಲು, ತೊಳೆ, ಬೆಳಗು, ಬಡಿಸು, ಇಳಿ, ಏರು, ಹೊಗಳು, ತೆಗಳು, ಬಾಳು, ಬೀಳು, ತಾಳು, ಎಳೆ, ಕಳಿ, ಸೆಳೆ, ತಿಳಿ, ಸುಳಿ, ಕೊರೆ–ಇತ್ಯಾದಿ.

ಮೇಲೆ ಹೇಳಿದವುಗಳಲ್ಲದೆ ಇನ್ನೂ ಅನೇಕ ಧಾತುಗಳಿವೆ. ಈ ಎಲ್ಲ ಧಾತುಗಳಿಂದ ಆದ ವಿವಿಧ ಪ್ರತ್ಯಯಗಳನ್ನು ಹೊಂದಿ ವರ್ತಮಾನ, ಭೂತ, ಭವಿಷ್ಯತ್‌ಕಾಲಗಳಲ್ಲೂ ವಿಧ್ಯರ್ಥ, ಸಂಭಾವನಾರ್ಥ, ನಿಷೇಧಾರ್ಥಗಳಲ್ಲೂ ನಾವು ಅನೇಕ ಕ್ರಿಯಾಪದಗಳನ್ನು ಪ್ರತಿನಿತ್ಯ ಭಾಷೆಯಲ್ಲಿ ಬಳಸುತ್ತೇವೆ.

(೨) **ಸಾಧಿತ ಧಾತು (ಪ್ರತ್ಯಯಾಂತ ಧಾತು)–** ಒಮ್ಮೊಮ್ಮೆ ನಾವು ನಾಮಪ್ರಕೃತಿಗಳನ್ನೇ ಧಾತುಗಳನ್ನಾಗಿ ಮಾಡಿಕೊಂಡು ಕ್ರಿಯಾಪ್ರಕೃತಿಗಳಿಗೆ ಹತ್ತುವ ಪ್ರತ್ಯಯ ಹಚ್ಚಿ ಕ್ರಿಯಾಪದಗಳನ್ನಾಗಿ ಮಾಡಿ ಹೇಳುತ್ತೇವೆ.

ಉದಾಹರಣೆಗೆ:– ಅವನು ಆ ಗ್ರಂಥವನ್ನು ಕನ್ನಡಿಸಿದನು. 'ಕನ್ನಡ' ಎಂಬುದು ನಾಮಪ್ರಕೃತಿಯಾಗಿದೆ. ಇದು ಧಾತುವಲ್ಲ. ಇದರ ಮೇಲೆ 'ಇಸು' ಪ್ರತ್ಯಯ ಹಚ್ಚಿ 'ಕನ್ನಡಿಸು' ಎಂದು ಆಗುವುದಿಲ್ಲವೆ? ಹೀಗೆ 'ಕನ್ನಡಿಸು' ಎಂದಾದ ಮೇಲೆ ಇದು ಧಾತುವೆನಿಸುತ್ತದೆ. ಇದರ ಮೇಲೆ ಧಾತುಗಳ ಮೇಲೆ ಸೇರಬೇಕಾದ ಎಲ್ಲ ಪ್ರತ್ಯಯಗಳು ಸೇರಿ–ಕನ್ನಡಿಸುತ್ತಾನೆ, ಕನ್ನಡಿಸಿದನು, ಕನ್ನಡಿಸುವನು, ಕನ್ನಡಿಸಲಿ, ಕನ್ನಡಿಸಾನು, ಕನ್ನಡಿಸನು–ಇತ್ಯಾದಿ ಕ್ರಿಯಾಪದಗಳಾಗಿ ಬಳಸಲ್ಪಡುತ್ತವೆ. ಇಂಥ ಧಾತುಗಳನ್ನೇ ನಾವು ಸಾಧಿತಧಾತು ಅಥವಾ ಪ್ರತ್ಯಯಾಂತಧಾತು ಗಳೆಂದು ಕರೆಯುತ್ತೇವೆ.

**(55) ಪ್ರತ್ಯಯಾಂತ ಧಾತು (ಸಾಧಿತ ಧಾತು):– ಕೆಲವು ನಾಮ ಪ್ರಕೃತಿಗಳ ಮೇಲೂ, ಧಗ ಧಗ, ಛಟ ಛಟ ಮೊದಲಾದ ಅನುಕರಣ ಶಬ್ದಗಳ ಮೇಲೂ 'ಇಸು' ಎಂಬ ಪ್ರತ್ಯಯ ಸೇರಿದಾಗ ಅವು ಪ್ರತ್ಯಯಾಂತ ಧಾತುಗಳೆನಿಸುತ್ತವೆ. ಇವಕ್ಕೆ ಸಾಧಿತ ಧಾತುಗಳೆಂದೂ ಹೆಸರು.**

ಉದಾಹರಣೆಗೆ:–

| **ನಾಮ ಪ್ರಕೃತಿ** | **+** | **ಇಸು** | **=** | **ಧಾತು** | **–** | **ಕ್ರಿಯಾಪದ** |
|---|---|---|---|---|---|---|
| ಕನ್ನಡ | + | ಇಸು | = | ಕನ್ನಡಿಸು | – | ಕನ್ನಡಿಸಿದನು |
| ಓಲಗ | + | ಇಸು | = | ಓಲಗಿಸು | – | ಓಲಗಿಸುತ್ತಾನೆ |
| ಅಬ್ಬರ | + | ಇಸು | = | ಅಬ್ಬರಿಸು | – | ಅಬ್ಬರಿಸುವನು |

ಅನುಕರಣ ಶಬ್ದಗಳು ಧಾತುಗಳಾಗುವುದಕ್ಕೆ ಉದಾಹರಣೆ:–

| **ನಾಮ ಪ್ರಕೃತಿ** | **+** | **ಇಸು** | **=** | **ಧಾತು** | **–** | **ಕ್ರಿಯಾಪದ** |
|---|---|---|---|---|---|---|
| ಧಗ ಧಗ | + | ಇಸು | = | ಧಗಧಗಿಸು | – | ಧಗಧಗಿಸುತ್ತಾನೆ |

| | | | | | | | |
|---|---|---|---|---|---|---|---|
| ಥಳ ಥಳ | + | ಇಸು | = | ಥಳಥಳಿಸು | – | ಥಳಥಳಿಸುತ್ತಾನೆ |
| ಗಮ ಗಮ | + | ಇಸು | = | ಗಮಗಮಿಸು | – | ಗಮಗಮಿಸುವುದು |
| ಛಟ ಛಟ | + | ಇಸು | = | ಛಟಛಟಿಸು | – | ಛಟಛಟಿಸುತ್ತದೆ |

**(56) ಸಂಸ್ಕೃತದ ಕೆಲವು ನಾಮ ಪ್ರಕೃತಿಗಳಾದ ಯತ್ನ, ಪ್ರಯತ್ನ, ರಕ್ಷಾ, ಪೂಜಾ, ಭಾವ, ಭಂಗ, ಪ್ರಲಾಪ, ಸಿದ್ಧಿ, ಭೇದ, ನಿರ್ಣಯ, ದುಃಖ, ಪಾಲನಾ, ಸೇವನಾ– ಮುಂತಾದವುಗಳಿಗೆ ಕನ್ನಡದ 'ಇಸು' ಪ್ರತ್ಯಯವು ಬಂದು ಅವು ಕನ್ನಡ ಧಾತುಗಳೇ ಆಗಿ, ಪ್ರತ್ಯಯಾಂತ ಧಾತುಗಳೆನಿಸುತ್ತವೆ.**

ಉದಾಹರಣೆಗೆ:–

| **ಸಂಸ್ಕೃತ ನಾಮ ಪ್ರಕೃತಿ** | **+** | **ಕನ್ನಡದ 'ಇಸು' ಪ್ರತ್ಯಯ** | **=** | **ಧಾತು** | **–** | **ಕ್ರಿಯಾಪದ** |
|---|---|---|---|---|---|---|
| ಯತ್ನ | + | ಇಸು | = | ಯತ್ನಿಸು | – | ಯತ್ನಿಸುತ್ತಾನೆ |
| ಪ್ರಯತ್ನ | + | ಇಸು | = | ಪ್ರಯತ್ನಿಸು | – | ಪ್ರಯತ್ನಿಸಿದನು |
| ಭಾವ | + | ಇಸು | = | ಭಾವಿಸು | – | ಭಾವಿಸಿದನು |
| ಭಂಗ | + | ಇಸು | = | ಭಂಗಿಸು | – | ಭಂಗಿಸುತ್ತಾನೆ |
| ರಕ್ಷಾ | + | ಇಸು | = | ರಕ್ಷಿಸು | – | ರಕ್ಷಿಸನು |
| ಪ್ರಲಾಪ | + | ಇಸು | = | ಪ್ರಲಾಪಿಸು | – | ಪ್ರಲಾಪಿಸಿದನು |
| ಸಿದ್ಧಿ | + | ಇಸು | = | ಸಿದ್ಧಿಸು | – | ಸಿದ್ಧಿಸುತ್ತದೆ |
| ದುಃಖ | + | ಇಸು | = | ದುಃಖಿಸು | – | ದುಃಖಿಸುತ್ತಾನೆ |
| ನಿರ್ಣಯ | + | ಇಸು | = | ನಿರ್ಣಯಿಸು | – | ನಿರ್ಣಯಿಸುತ್ತಾನೆ |
| ಪಾಲನೆ | + | ಇಸು | = | ಪಾಲಿಸು | – | ಪಾಲಿಸಿದನು |
| ಸೇವನೆ | + | ಇಸು | = | ಸೇವಿಸು | – | ಸೇವಿಸುತ್ತಾನೆ |

'ಇಸು' ಪ್ರತ್ಯಯವು ಮೇಲೆ ಹೇಳಿದ ಕಡೆಗಳಲ್ಲಿ ಮಾತ್ರವೇ ಬರುತ್ತದೆಂದು ತಿಳಿಯಬಾರದು. ಇದು ಸಹಜಧಾತುಗಳ ಮೇಲೂ ಪ್ರೇರಣಾರ್ಥದಲ್ಲಿ ಸಾಮಾನ್ಯವಾಗಿ ಬರುತ್ತದೆ.

ಉದಾಹರಣೆಗೆ:–

(i) ತಾಯಿ ಮಗುವಿಗೆ ಅನ್ನವನ್ನು ಉಣ್ಣಿಸಿದಳು.

(ii) ತಂದೆ ಮಗನಿಗೆ ಅಂಗಿಯನ್ನು ತೊಡಿಸಿದನು.

(iii) ತಾಯಿ ಮಗುವನ್ನು ಮಲಗಿಸಿದಳು.

ಮೇಲಿನ ಉದಾಹರಣೆಗೆಳಲ್ಲಿ ಉಣ್ಣಿಸಿದಳು ಎಂದರೆ ಉಣ್ಣುವಂತೆ ಮಾಡಿದಳು ಎಂದು ಅರ್ಥ. ತಾಯಿಯ ಪ್ರೇರಣೆಯಿಂದ ಅನ್ನವನ್ನು ಮಗು ಉಂಡಿತು. ಇದರಂತೆ ತೊಡಿಸಿದನು,

ಮಲಗಿಸಿದಳು ಎಂಬಿವೂ ಪ್ರೇರಣಾರ್ಥಕ ಕ್ರಿಯಾಪದಗಳು. ಇವುಗಳಲ್ಲಿ ಎರಡು ಕರ್ತೃ ಪದಗಳಿವೆ. ಮೊದಲನೆಯ ವಾಕ್ಯದಲ್ಲಿ '**ತಾಯಿ**' ಪ್ರೇರಣಾರ್ಥಕ ಕರ್ತೃ, '**ಮಗು**' ಪ್ರೇರ್ಯಕರ್ತೃ.

**(57) ಪ್ರೇರಣಾರ್ಥದಲ್ಲಿ ಎಲ್ಲ ಧಾತುಗಳ ಮೇಲೂ ಸಾಮಾನ್ಯವಾಗಿ 'ಇಸು' ಪ್ರತ್ಯಯ ಬರುವುದು.**

ಉದಾಹರಣೆಗೆ:

| ಸಹಜ ಧಾತು | + | ಪ್ರೇರಣಾರ್ಥದಲ್ಲಿ ಇಸು | = | ಪ್ರೇರಣಾರ್ಥಕ ಧಾತು | – | ಪ್ರೇರಣಾರ್ಥಕ ಕ್ರಿಯಾಪದ |
|---|---|---|---|---|---|---|
| ಮಾಡು | + | ಇಸು | = | ಮಾಡಿಸು | – | ಮಾಡಿಸುತ್ತಾನೆ |
| ತಿನ್ನು | + | ಇಸು | = | ತಿನ್ನಿಸು | – | ತಿನ್ನಿಸುತ್ತಾನೆ |
| ಓಡು | + | ಇಸು | = | ಓಡಿಸು | – | ಓಡಿಸುತ್ತಾನೆ |
| ಬರೆ | + | ಇಸು | = | ಬರೆಸು | – | ಬರೆಸುತ್ತಾನೆ |
| ಕಲಿ | + | ಇಸು | = | ಕಲಿಸು | – | ಕಲಿಸುತ್ತಾನೆ |

ಮೇಲೆ ವಿವರಿಸಿದಂತೆ ಧಾತುಗಳು (ಕ್ರಿಯಾಪ್ರಕೃತಿಗಳು) ಸಹಜವಾದುವು ಹಾಗು ಇಸು ಪ್ರತ್ಯಯಾಂತಗಳಾದ ಸಾಧಿತಧಾತುಗಳು ಎಂದು ಎರಡು ಬಗೆ ಎಂದ ಹಾಗಾಯಿತು.

# II – ಸಕರ್ಮಕ, ಅಕರ್ಮಕ ಧಾತುಗಳು

## (೧) ಸಕರ್ಮಕ ಧಾತುಗಳು

ಈ ಕೆಳಗಿನ ವಾಕ್ಯವನ್ನು ಗಮನಿಸಿರಿ:–

"**ರಾಮನು ಮರವನ್ನು ಕಡಿದನು**". ಈ ವಾಕ್ಯದಲ್ಲಿ **ಏನನ್ನು ಕಡಿದನು?** ಎಂದು ಪ್ರಶ್ನಿಸಿದರೆ, '**ಮರವನ್ನು**' ಎಂಬ ಉತ್ತರ ಬರುತ್ತದೆ. **ಯಾರು?** ಎಂದು ಪ್ರಶ್ನೆ ಮಾಡಿದರೆ '**ರಾಮ**' ಎಂಬ ಉತ್ತರ ಬರುತ್ತದೆ. ಕಡಿಯುವ ಕೆಲಸ ಮಾಡಿದನಾದ್ದರಿಂದ '**ರಾಮನು**' ಎಂಬ ಪದವು '**ಕರ್ತೃಪದ**'ವೆನಿಸಿತು. ಏನನ್ನು ಕಡಿದನೋ ಅದೇ ಕರ್ಮ. ಆದ್ದರಿಂದ '**ಮರವನ್ನು**' ಎಂಬುದು ಕರ್ಮಪದ. '**ಕಡಿದನು**' ಎಂಬುದು ಕ್ರಿಯಾಪದ. '**ಕಡಿದನು**' – ಎಂಬ ಕ್ರಿಯೆಗೆ **ಏನನ್ನು?** ಎಂಬ ಪ್ರಶ್ನೆ ಮಾಡಿದಾಗ ಬರುವ ಉತ್ತರವೇ **ಕರ್ಮ**. ಈ ವಾಕ್ಯವು ಕರ್ಮಪದವನ್ನುಳ್ಳ ವಾಕ್ಯವೆಂದಹಾಗಾಯಿತು. ಇದರ ಹಾಗೆ ಕೆಳಗಿನ ಕೆಲವು ವಾಕ್ಯಗಳನ್ನು ನೋಡಿರಿ:

| **ಕರ್ತೃಪದ** | **ಕರ್ಮಪದ** | **ಕ್ರಿಯಾಪದ** | **ಧಾತು** |
|---|---|---|---|
| ದೇವರು | ಲೋಕವನ್ನು | ರಕ್ಷಿಸುವನು | ರಕ್ಷಿಸು |
| ಶಿಲ್ಪಿಗಳು | ಗುಡಿಯನ್ನು | ಕಟ್ಟಿದರು | ಕಟ್ಟು |
| ವಿದ್ಯಾರ್ಥಿಗಳು | ಪಾಠವನ್ನು | ಓದಿದರು | ಓದು |
| ಹುಡುಗರು | ಮನೆಯನ್ನು | ಸೇರಿದರು | ಸೇರು |

ಇಲ್ಲಿ ರಕ್ಷಿಸುವನು, ಕಟ್ಟಿದರು, ಓದಿದರು, ಸೇರಿದರು ಇತ್ಯಾದಿ ಕ್ರಿಯಾಪದಗಳನ್ನುಳ್ಳ ವಾಕ್ಯಗಳಲ್ಲಿ ಕರ್ಮಪದ ಇದ್ದೇ ಇರಬೇಕು. ರಕ್ಷಿಸುವನು ಎಂಬ ಕ್ರಿಯೆಗೆ ಏನನ್ನು ಎಂಬ ಪ್ರಶ್ನೆ ಹುಟ್ಟೇ ಹುಟ್ಟುತ್ತದೆ. ಆದ್ದರಿಂದ '**ರಕ್ಷಿಸು**' ಎಂಬ ಧಾತು ಕರ್ಮಪದವನ್ನು ಅಪೇಕ್ಷಿಸುವ ಧಾತು. ಇದರ ಹಾಗೆಯೇ **ಕಟ್ಟು, ಓದು, ಮಾಡು, ತಿನ್ನು, ಬರೆ** ಇತ್ಯಾದಿ ಧಾತುಗಳಿಗೆ ಕರ್ಮಪದ ಬೇಕೇ ಬೇಕು. ಇಂಥ ಧಾತುಗಳೇ ಸಕರ್ಮಗಳು.

**(58) ಕರ್ಮಪದವನ್ನು ಅಪೇಕ್ಷಿಸುವ ಧಾತುಗಳೆಲ್ಲ ಸಕರ್ಮಕ ಧಾತುಗಳು.**

ಉದಾಹರಣೆಗೆ:– ಮಾಡು, ಕೊಡು, ಕೆರೆ, ಬಿಡು, ಉಣ್ಣು, ತೊಡು, ಇಕ್ಕು, ಉಜ್ಜು, ದಾಟು, ಮೆಟ್ಟು, ತಿದ್ದು, ತುಂಬು, ನಂಬು, ಹೊಡೆ, ತಡೆ, ಹೀರು, ಸೇರು, ಹೊಯ್, ಸೆಯ್, ಕೆತ್ತು, ಕಡಿ, ತರ್ (ತರು), ಕೊಯ್, ಮುಚ್ಚು, ತೆರೆ, ಕತ್ತರಿಸು–ಇತ್ಯಾದಿ.

## (೨) ಅಕರ್ಮಕ ಧಾತುಗಳು

ಕೆಲವು ಧಾತುಗಳಿಗೆ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಕೆಳಗಿನ ಈ ವಾಕ್ಯಗಳನ್ನು ಗಮನಿಸಿರಿ:–

| | **ಕರ್ತೃಪದ** | **ಕ್ರಿಯಾಪದ** | **ಧಾತು** |
|---|---|---|---|
| (i) | ಕೂಸು | ಮಲಗಿತು | ಮಲಗು |
| (ii) | ರಾಮನು | ಓಡಿದನು | ಓಡು |
| (iii) | ಆಕಾಶ | ಹೊಳೆಯುತ್ತದೆ | ಹೊಳೆ |
| (iv) | ಅವನು | ಬದುಕಿದನು | ಬದುಕು |
| (v) | ಗಿಡವು | ಹುಟ್ಟಿತು | ಹುಟ್ಟು |

ಮೇಲಿನ ವಾಕ್ಯಗಳಲ್ಲಿ ಕರ್ಮಪದಗಳಿಲ್ಲ. '**ಮಲಗಿತು**' ಎಂಬ ಕ್ರಿಯಾಪದಕ್ಕೆ '**ಏನನ್ನು?**' ಎಂಬ ಪ್ರಶ್ನೆ ಮಾಡಲು ಉತ್ತರ ಬರುವುದಿಲ್ಲ. '**ಏನನ್ನು ಮಲಗಿತು?**' ಎಂದು ಯಾರೂ ಕೇಳುವುದಿಲ್ಲ. ಅದರಂತೆ '**ಏನನ್ನು ಓಡಿತು?**' ಎಂದು ಯಾರೂ ಕೇಳುವುದಿಲ್ಲ. ಅಂದರೆ ಈ ಕ್ರಿಯೆಗಳಿಗೆ ಕರ್ಮಪದಗಳು ಬೇಕಾಗಿಲ್ಲ.

**(59) ಕರ್ಮಪದದ ಅಪೇಕ್ಷೆಯಿಲ್ಲದ ಧಾತುಗಳನ್ನು ಅಕರ್ಮಕ ಧಾತುಗಳೆನ್ನುವರು.**

ಉದಾಹರಣೆಗೆ:– ಮಲಗು, ಓಡು, ಇರು, ಬದುಕು, ಬಾಳು, ಹೋಗು, ಬರು, ನಾಚು, ಹೆದರು, ಬೀಳು, ಏಳು, ಸೋರು, ಇಳಿ, ಉರುಳು–ಇತ್ಯಾದಿ.

ಈಗ ಅಕರ್ಮಕ ಸಕರ್ಮಕ ವಾಕ್ಯ ನೋಡಿರಿ

| | **ಅಕರ್ಮಕ ವಾಕ್ಯಗಳು** | **ಸಕರ್ಮಕ ವಾಕ್ಯಗಳು** |
|---|---|---|
| (೧) | ಮಗು ಮಲಗಿತು | ಮಗು ಹಾಲನ್ನು ಕುಡಿಯಿತು |
| (೨) | ಹುಡುಗ ಓಡಿದನು | ಹುಡುಗನು ಪುಸ್ತಕವನ್ನು ಓದಿದನು |
| (೩) | ತಂದೆ ಇದ್ದಾರೆ | ತಂದೆ ಊಟವನ್ನು ಮಾಡಿದನು |
| (೪) | ಅವನು ಬದುಕಿದನು | ಅವನು ದೇವರನ್ನು ನೆನೆದನು |
| (೫) | ಅಕ್ಕ ಬಂದಳು | ಅಕ್ಕ ಅಡಿಗೆಯನ್ನು ಮಾಡಿದಳು |
| (೬) | ಅವನು ಬಾಳಿದನು | ಅವನು ಊರನ್ನು ಸೇರಿದನು |
| | **(ಇಲ್ಲಿ ಕರ್ಮಪದದ ಅವಶ್ಯಕತೆ ಇಲ್ಲ)** | **(ಇಲ್ಲಿ ಕರ್ಮಪದ ಬೇಕೇ ಬೇಕು)** |

# III – ಕ್ರಿಯಾಪದ

ಈ ಪೂರ್ವದಲ್ಲಿ ಧಾತುವೆಂದರೇನು? ಅವು ಎಷ್ಟು ಪ್ರಕಾರ? ಎಂಬುದನ್ನು ಅರಿತಿರಿ. ಈಗ ಧಾತುಗಳು 'ಕ್ರಿಯಾಪದ' ಗಳಾಗುವ ರೀತಿಯನ್ನು ತಿಳಿಯೋಣ. ಈ ಕೆಳಗೆ ಕೆಲವು ಕ್ರಿಯಾಪದ ಗಳನ್ನು ಕೊಟ್ಟಿದೆ. ಅವುಗಳನ್ನು ಬಿಡಿಸಿ ನೋಡೋಣ.

| **ಕ್ರಿಯಾಪದ ಏಕವಚನ** | **ಧಾತು** | + | **ಕಾಲಸೂಚಕ ಪ್ರತ್ಯಯ** | + | **ಆಖ್ಯಾತ ಪ್ರತ್ಯಯ (ಬಹುವಚನ)** |
|---|---|---|---|---|---|
| **(೧) ಮಾಡುತ್ತಾನೆ** | – ಮಾಡು | + | ಉತ್ತ | + | ಆನೆ–(ಮಾಡುತ್ತಾರೆ) |
| **(೨) ಮಾಡುತ್ತಾಳೆ** | – ಮಾಡು | + | ಉತ್ತ | + | ಆಳೆ–(ಮಾಡುತ್ತಾರೆ) |
| **(೩) ಮಾಡುತ್ತದೆ** | – ಮಾಡು | + | ಉತ್ತ | + | ಅದೆ–(ಮಾಡುತ್ತವೆ) |
| **(೪) ಮಾಡುತ್ತೀಯೆ** | – ಮಾಡು | + | ಉತ್ತ | + | ಈಯೆ–(ಮಾಡುತ್ತೀರಿ) |
| **(೫) ಮಾಡುತ್ತೇನೆ** | – ಮಾಡು | + | ಉತ್ತ | + | ಏನೆ–(ಮಾಡುತ್ತೇವೆ) |
| | | | | | |
| **(೧) ಹುಟ್ಟಿದನು** | – ಹುಟ್ಟು | + | ದ | + | ಅನು–(ಹುಟ್ಟಿದರು) |
| **(೨) ಹುಟ್ಟಿದಳು** | – ಹುಟ್ಟು | + | ದ | + | ಅಳು–(ಹುಟ್ಟಿದರು) |
| **(೩) ಹುಟ್ಟಿತು** | – ಹುಟ್ಟು | + | ದ | + | ಇತು–(ಹುಟ್ಟಿದವು) |
| **(೪) ಹುಟ್ಟಿದೆ** | – ಹುಟ್ಟು | + | ದ | + | ಎ–(ಹುಟ್ಟಿದಿರಿ) |
| **(೫) ಹುಟ್ಟಿದೆನು** | – ಹುಟ್ಟು | + | ದ | + | ಎನು–(ಹುಟ್ಟಿದೆವು) |

| | | | | | |
|---|---|---|---|---|---|
| **(೧) ಬರುವನು** | – ಬರು | + | ವ | + | ಅನು–(ಬರುವರು) |
| **(೨) ಬರುವಳು** | – ಬರು | + | ವ | + | ಅಳು–(ಬರುವರು) |
| **(೩) ಬರುವುದು** | – ಬರು | + | ವ | + | ಉದು–(ಬರುವುವು) |
| **(೪) ಬರುವೆ** | – ಬರು | + | ವ | + | ಎ–(ಬರುವಿರಿ) |
| **(೫) ಬರುವೆನು** | – ಬರು | + | ವ | + | ಎನು–(ಬರುವೆವು) |

ಮೇಲೆ ಐದೈದು ಕ್ರಿಯಾಪದಗಳ ಮೂರು ಗುಂಪುಗಳಿವೆ. ಮೊದಲಿನ ಐದು ಕ್ರಿಯಾಪದಗಳಲ್ಲಿ–'**ಮಾಡು**' ಧಾತುವಿನ ಮುಂದೆ ಎಲ್ಲ ಕಡೆಗೂ '**ಉತ್ತ**' ಎಂಬ ಪ್ರತ್ಯಯವು ಬಂದು ಅದರ ಮುಂದೆ **ಆನೆ, ಆಳೆ, ಅದೆ, ಈಯೆ, ಏನೆ** ಎಂಬ ಪ್ರತ್ಯಯಗಳು ಏಕವಚನದಲ್ಲೂ, ಬಹುವಚನದಲ್ಲಿ **ಆರೆ, ಆರೆ, ಅವೆ, ಈರಿ, ಏವೆ** ಎಂಬ ಪ್ರತ್ಯಯಗಳೂ ಬಂದಿವೆ.

ಎರಡನೆಯ ಐದು ಕ್ರಿಯಾಪದಗಳಲ್ಲಿ '**ಹುಟ್ಟು**' ಎಂಬ ಧಾತುವಿನ ಮುಂದೆ '**ದ**' ಎಂಬ ಪ್ರತ್ಯಯವು ಎಲ್ಲ ಕಡೆಗೂ ಬಂದು ಅದರ ಮುಂದೆ **ಅನು, ಅಳು, ಇತು, ಎ, ಎನು** ಎಂಬ ಪ್ರತ್ಯಯಗಳು ಏಕವಚನದಲ್ಲೂ, **ಅರು, ಅರು, ಅವು, ಇರಿ, ಎವು** ಎಂಬ ಪ್ರತ್ಯಯಗಳು ಬಹುವಚನದಲ್ಲೂ ಬಂದಿವೆ.

ಮೂರನೆಯ ಐದು ಕ್ರಿಯಾಪದಗಳಲ್ಲಿ '**ಬರು**' ಎಂಬ ಧಾತುವಿನ ಮುಂದೆ '**ವ**' ಎಂಬ ಪ್ರತ್ಯಯವು ಎಲ್ಲ ಕಡೆಗೂ ಬಂದು ಅದರ ಮುಂದೆ **ಅನು, ಅಳು, ಉದು, ಎ, ಎನು** ಎಂಬ ಪ್ರತ್ಯಯಗಳು ಏಕವಚನದಲ್ಲೂ, **ಅರು, ಅರು, ಅವು, ಇರಿ, ಎವು** ಎಂಬ ಪ್ರತ್ಯಯಗಳು ಬಹುವಚನದಲ್ಲೂ ಬಂದಿವೆ.

ಮಧ್ಯದಲ್ಲಿ ಮೂರು ಕಡೆಗೆ ಬಂದಿರುವ **ಉತ್ತ, ದ, ವ** – ಎಂಬುವು ಕಾಲಸೂಚಕ ಪ್ರತ್ಯಯಗಳು* ಅಂದರೆ '**ಉತ್ತ**' ಎಂಬುದು ವರ್ತಮಾನಕಾಲವನ್ನೂ, '**ದ**' ಎಂಬುದು ಭೂತಕಾಲವನ್ನೂ, '**ವ**' ಎಂಬುದು ಭವಿಷ್ಯತ್ ಕಾಲವನ್ನೂ ಸೂಚಿಸುತ್ತವೆ ಎಂದು ತಿಳಿಯಬೇಕು. ಕೊನೆಯಲ್ಲಿ ಬಂದಿರುವ **ಆನೆ, ಆಳೆ, ಆರೆ, ಆರೆ, ಅದೆ, ಅವೆ, ಈಯೆ, ಈರಿ, ಏನೆ, ಏವೆ** ಇತ್ಯಾದಿ ಪ್ರತ್ಯಯಗಳೆಲ್ಲ ಆಖ್ಯಾತಪ್ರತ್ಯಯಗಳು.

ಆದ್ದರಿಂದ ಮೇಲೆ ಹೇಳಿದ ಮೂರು ಗುಂಪುಗಳ ಕ್ರಿಯಾಪದಗಳಲ್ಲಿ **ಮೊದಲಿನ ಐದು ಕ್ರಿಯಾಪದಗಳ ಗುಂಪು 'ವರ್ತಮಾನಕಾಲದ'** (ಈಗ ನಡೆಯುತ್ತಿರುವ) ಕ್ರಿಯೆಯನ್ನೂ, **ಎರಡನೆಯ ಐದು ಕ್ರಿಯಾಪದಗಳ ಗುಂಪು ಹಿಂದೆ ನಡೆದ ಕ್ರಿಯೆಯು ಅಂದರೆ 'ಭೂತಕಾಲದ'** ಕ್ರಿಯೆಯನ್ನೂ, **ಮೂರನೆ ಐದು ಕ್ರಿಯಾಪದಗಳ ಗುಂಪು ಮುಂದೆ**

---

* ಇವಕ್ಕೆ ವಿಕರಣ ಪ್ರತ್ಯಯಗಳೆಂದೂ ಕರೆಯುವರು. ಸಂಸ್ಕೃತ ವ್ಯಾಕರಣದಲ್ಲಿ ಕರೆಯುವ ಪದ್ಧತಿಯಂತೆ ಕನ್ನಡದಲ್ಲೂ 'ವಿಕರಣ' ಪ್ರತ್ಯಯವೆನ್ನುತ್ತಾರೆ. ಆದರೆ ಇವು ಕಾಲವನ್ನು (ವರ್ತಮಾನಕಾಲ, ಭೂತಕಾಲ, ಭವಿಷ್ಯತ್‌ಕಾಲ) ಸೂಚಿಸುತ್ತವಾದ್ದರಿಂದ ಕನ್ನಡದಲ್ಲಿ ಕಾಲಸೂಚಕ ಪ್ರತ್ಯಯಗಳೆಂದೇ ಕರೆಯುವರು.

**ನಡೆಯುವ ಅಂದರೆ 'ಭವಿಷ್ಯತ್ಕಾಲದ'** ಕ್ರಿಯೆಯನ್ನೂ ಗೊತ್ತುಪಡಿಸುವ ಕ್ರಿಯಾಪದಗಳೆಂದ ಹಾಗಾಯಿತು. ಹಾಗಾದರೆ '**ಕ್ರಿಯಾಪದ**' ಎಂದರೇನೆಂಬ ಬಗೆಗೆ ಸೂತ್ರವನ್ನು ಕೆಳಗಿನಂತೆ ಹೇಳಬಹುದು:–

**(60) ಧಾತುಗಳಿಗೆ ಆಖ್ಯಾತ ¶ಪ್ರತ್ಯಯಗಳು ಸೇರಿ ಕ್ರಿಯಾಪದಗಳೆನಿಸುವುವು.**

**ಹೀಗೆ ಆಖ್ಯಾತಪ್ರತ್ಯಯಗಳು ಸೇರುವಾಗ ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಕ್ರಮವಾಗಿ ಉತ್ತ, ದ, ವ ಎಂಬ ಕಾಲಸೂಚಕ ಪ್ರತ್ಯಯಗಳು ಆಗಮವಾಗಿ ಬರುತ್ತವೆ.**

## IV – ಕ್ರಿಯಾಪದ ರೂಪಗಳು ಉಂಟಾಗುವಿಕೆ

ಎಲ್ಲ ಧಾತುಗಳಿಗೂ ಆಖ್ಯಾತ ಪ್ರತ್ಯಯಗಳು **(೧) ವರ್ತಮಾನ, (೨) ಭೂತ, (೩) ಭವಿಷ್ಯತ್ಕಾಲಗಳಲ್ಲೂ, (೧) ವಿಧ್ಯರ್ಥ, (೨) ನಿಷೇಧಾರ್ಥ, (೩) ಸಂಭಾವನಾರ್ಥ ಗಳೆಂಬ ಮೂರು ಅರ್ಥಗಳಲ್ಲೂ** ಸೇರಿ ಆರು ಪ್ರಕಾರದ ಕ್ರಿಯಾಪದರೂಪಗಳು ಉಂಟಾಗುತ್ತವೆ. ಈಗ ಒಂದೊಂದರ ವಿಚಾರವನ್ನೂ ಕ್ರಮವಾಗಿ ತಿಳಿಯೋಣ.

### (೧) ವರ್ತಮಾನ ಕಾಲದ ಕ್ರಿಯಾಪದಗಳು

**(61) ಧಾತುಗಳಿಗೆ ವರ್ತಮಾನ ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ವರ್ತಮಾನಕಾಲ ಕ್ರಿಯಾಪದಗಳೆನಿಸುವುವು.**

ವರ್ತಮಾನ ಕಾಲದಲ್ಲಿ ಧಾತುಗಳಿಗೂ ಆಖ್ಯಾತಪ್ರತ್ಯಯಕ್ಕೂ ಮಧ್ಯದಲ್ಲಿ '**ಉತ್ತ**' ಎಂಬ ಕಾಲಸೂಚಕ ಪ್ರತ್ಯಯವು ಬರುವುದು.

ಉದಾಹರಣೆಗೆ:– ಧಾತು: **ಹೋಗು**

| | ಧಾತು + | ಕಾಲಸೂಚಕ ಪ್ರತ್ಯಯ | | ಆಖ್ಯಾತ ಪ್ರತ್ಯಯ | = | ಏಕವಚನ | ಬಹುವಚನ |
|---|---|---|---|---|---|---|---|
| (**ಪ್ರಥಮ ಪುರುಷ,** ಪುಲ್ಲಿಂಗ) ಅವನು – | | | | | | | |
| | ಹೋಗು + | ಉತ್ತ | + | ಆನೆ | = | ಹೋಗುತ್ತಾನೆ | ಹೋಗುತ್ತಾರೆ |
| (**ಪ್ರಥಮಪುರುಷ,** ಸ್ತ್ರೀ ಲಿಂಗ) ಅವಳು – | | | | | | | |
| | ಹೋಗು + | ಉತ್ತ | + | ಆಳೆ | = | ಹೋಗುತ್ತಾಳೆ | ಹೋಗುತ್ತಾರೆ |
| (ಪ್ರ. **ಪು.,** ನಪುಂಸಕ ಲಿಂಗ) ಅದು– | | | | | | | |
| | ಹೋಗು + | ಉತ್ತ | + | ಅದೆ | = | ಹೋಗುತ್ತದೆ | ಹೋಗುತ್ತವೆ |

¶ ಆಖ್ಯಾತ ಎಂದರೆ ಭಾವಪ್ರಧಾನವಾದುದು ('ಭಾವಪ್ರಧಾನಮಾಖ್ಯಾತಂ')

**(ಮಧ್ಯಮ ಪುರುಷ)** ನೀನು* – ಹೋಗು+ ಉತ್ತ + ಈಯೆ = ಹೋಗುತ್ತೀಯೆ ಹೋಗುತ್ತೀರಿ

**(ಉತ್ತಮ ಪುರುಷ)** ನಾನು* – ಹೋಗು+ ಉತ್ತ + ಏನೆ = ಹೋಗುತ್ತೇನೆ ಹೋಗುತ್ತೇವೆ

ಇದರ ಹಾಗೆಯೇ ವರ್ತಮಾನಕಾಲದಲ್ಲಿ ಉಳಿದ ಧಾತುಗಳಿಗೂ ಏಕವಚನದಲ್ಲಿ **ಆನೆ, ಆಳೆ, ಅದೆ, ಈಯೆ, ಏನೆ**–ಎಂಬ ಆಖ್ಯಾತ ಪ್ರತ್ಯಯಗಳನ್ನೂ, ಬಹುವಚನದಲ್ಲಿ **ಆರೆ, ಆರೆ, ಅವೆ, ಈರಿ, ಏವೆ**–ಎಂಬ ಆಖ್ಯಾತ ಪ್ರತ್ಯಯಗಳನ್ನೂ ಹಚ್ಚಿ ಹೇಳಬೇಕು.

## (೨) ಭೂತಕಾಲದ ಕ್ರಿಯಾಪದಗಳು

**(62) ಧಾತುಗಳಿಗೆ ಭೂತ ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಭೂತಕಾಲದ ಕ್ರಿಯಾಪದಗಳೆನಿಸುವುವು.**

ಭೂತಕಾಲದಲ್ಲಿ 'ದ' ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಎಲ್ಲ ಕಡೆಗೂ ಬರುವುದುಂಟು♣.

ಉದಾಹರಣೆಗೆ:– ಧಾತು: **ತಿಳಿ**

| | ಧಾತು + | ಕಾಲಸೂಚಕ ಪ್ರತ್ಯಯ + | ಆಖ್ಯಾತ ಪ್ರತ್ಯಯ | = | ಏಕವಚನ | ಬಹುವಚನ |
|---|---|---|---|---|---|---|
| **(ಪ್ರಥಮ ಪುರುಷ,** ಪುಲ್ಲಿಂಗ) ಅವನು – | ತಿಳಿ + | ದ + | ಅನು | = | ತಿಳಿದನು | ತಿಳಿದರು |
| **(ಪ್ರಥಮಪುರುಷ,** ಸ್ತ್ರೀಲಿಂಗ) ಅವಳು – | ತಿಳಿ + | ದ + | ಅಳು | = | ತಿಳಿದಳು | ತಿಳಿದರು |
| ( **ಪ್ರ. ಪು.** , ನಪುಂಸಕ ಲಿಂಗ) ಅದು – | ತಿಳಿ + | ದ + | ಇತು | = | ತಿಳಿಯಿತು | ತಿಳಿದವು |
| **(ಮಧ್ಯಮ ಪುರುಷ)** ನೀನು – | ತಿಳಿ + | ದ + | ಎ | = | ತಿಳಿದೆ | ತಿಳಿದಿರಿ |
| **(ಉತ್ತಮ ಪುರುಷ)** ನಾನು – | ತಿಳಿ + | ದ + | ಎನು | = | ತಿಳಿದೆನು | ತಿಳಿದೆವು |

* ನೀನು, ನಾನು ಎಂಬ ಸರ್ವನಾಮಗಳು ವಾಚ್ಯಲಿಂಗ ಅಥವಾ ವಿಶೇಷ್ಯಾಧೀನ ಲಿಂಗಗಳಾದ್ದರಿಂದ–ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿ ಒಂದೇ ರೂಪಗಳಾಗುತ್ತವೆಂಬುದನ್ನು ಜ್ಞಾಪಕದಲ್ಲಿಡಬೇಕು.

♣ ಉ, ಎ, ಇಕಾರಾಂತ ಧಾತುಗಳ ಮೇಲೆ ನಪುಂಸಕಲಿಂಗ ಏಕವಚನದಲ್ಲಿ ಭೂತಕಾಲದ ಆಖ್ಯಾತ ಪ್ರತ್ಯಯ ಸೇರಿದಾಗ 'ದ' ಎಂಬ ಕಾಲಸೂಚಕ ಪ್ರತ್ಯಯ ಬಂದು ಲೋಪವಾಗುತ್ತದೆಂದು ತಿಳಿಯಬೇಕು. ನಡೆಯಿತು, ಮಾಡಿತು, ಹೋಯಿತು–ಇತ್ಯಾದಿ. 'ಇತು' ಆಖ್ಯಾತಪ್ರತ್ಯಯ ಬಂದೆಡೆಯಲ್ಲೆಲ್ಲ 'ದ' ಕಾಲಸೂಚಕ ಪ್ರತ್ಯಯ ಬಂದು ಲೋಪವಾಗಿದೆಯೆಂದು ತಿಳಿಯಬೇಕು.

ಇದರ ಹಾಗೆಯೇ ಎಲ್ಲ ಧಾತುಗಳ ಮೇಲೂ ಅನು–ಅರು, ಅಳು–ಅರು, ಇತು–ಅವು, ಎ–ಇರಿ, ಎನು–ಎವು ಎಂಬ ಆಖ್ಯಾತ ಪ್ರತ್ಯಯಗಳನ್ನು ಸೇರಿಸಿ ಹೇಳಬೇಕು.

## (೩) ಭವಿಷ್ಯತ್‌ಕಾಲದ ಕ್ರಿಯಾಪದಗಳು

**(63) ಧಾತುಗಳಿಗೆ ಭವಿಷ್ಯತ್‌ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಭವಿಷ್ಯತ್ ಕಾಲದ ಕ್ರಿಯಾಪದಗಳೆನಿಸುವುವು.**

ಭವಿಷ್ಯತ್‌ಕಾಲದಲ್ಲಿ ಧಾತುವಿಗೂ, ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ 'ವ' ಎಂಬ ಕಾಲಸೂಚಕ ಪ್ರತ್ಯಯವು ಆಗಮವಾಗಿ ಬರುವುದು. ಕೆಲವು ಕಡೆ 'ಉವ' ಎಂಬುದೂ ಬರುವುದುಂಟು. 'ಉವ' ಪ್ರತ್ಯಯವು ನಡೆ, ತಿಳಿ ಇತ್ಯಾದಿ ಎಕಾರಾಂತ ಆಕಾರಾಂತ ಧಾತುಗಳ ಮೇಲೆ ಬರುವುದೆಂದು ತಿಳಿಯಬೇಕು.

ಉದಾಹರಣೆಗೆ:– ಧಾತು: **ಕೊಡು**

| | **ಧಾತು +** | **ಕಾಲಸೂಚಕ ಪ್ರತ್ಯಯ +** | **ಆಖ್ಯಾತ ಪ್ರತ್ಯಯ** | **=** | **ಏಕವಚನ** | **ಬಹುವಚನ** |
|---|---|---|---|---|---|---|
| (**ಪ್ರಥಮ ಪುರುಷ,** ಪುಲ್ಲಿಂಗ) ಅವನು | ಕೊಡು + | ವ + | ಅನು | = | ಕೊಡುವನು | ಕೊಡುವರು |
| (**ಪ್ರಥಮಪುರುಷ,** ಸ್ತ್ರೀ ಲಿಂಗ) ಅವಳು | ಕೊಡು + | ವ + | ಅಳು | = | ಕೊಡುವಳು | ಕೊಡುವರು |
| ( **ಪ್ರ. ಪು.** , ನಪುಂಸಕ ಲಿಂಗ) ಅದು | ಕೊಡು + | ವ + | ಅದು | = | ಕೊಡುವದು | ಕೊಡುವುವು |
| | ♠(ಕೊಡು + | ವ + | ಉದು | = | ಕೊಡುವುದು | ಕೊಡುವುವು) |
| (**ಮಧ್ಯಮ ಪುರುಷ**) ನೀನು | ಕೊಡು + | ವ + | ಎ | = | ಕೊಡುವೆ | ಕೊಡುವಿರಿ |
| (**ಉತ್ತಮ ಪುರುಷ**) ನಾನು – | ಕೊಡು + | ವ + | ಎನು | = | ಕೊಡುವೆನು | ಕೊಡುವೆವು |

ಇದರ ಹಾಗೆಯೇ ಎಲ್ಲ ಧಾತುಗಳಿಗೂ ಅನು–ಅರು, ಅಳು–ಅರು, ಅದು–ಅವು, (ಉದು–ಉವು), ಎ–ಇರಿ, ಎನು–ಎವು ಎಂಬ ಆಖ್ಯಾತ ಪ್ರತ್ಯಯ ಹಚ್ಚಿ ಹೇಳಬೇಕು.

ಈಗ ಒಂದೇ ಧಾತುವಿನ ವರ್ತಮಾನ, ಭೂತ, ಭವಿಷ್ಯತ್ ಕಾಲಗಳ ಮೂರು ಸಿದ್ಧ ರೂಪಗಳನ್ನೂ ಕೆಳಗೆ ನೋಡಿರಿ:–

♠ ನಪುಂಸಕಲಿಂಗ ಏಕವಚನದಲ್ಲಿ ಉದು, ಬಹುವಚನದಲ್ಲಿ ಉವು ಎಂಬ ಆಖ್ಯಾತ ಪ್ರತ್ಯಯ ಬರುವುದುಂಟು. ಉದಾಹರಣೆಗೆ:– ತಿಳಿದವು, ತಿಳಿದುವು. ಈ ಎರಡೂ ರೂಪಗಳು ಸಾಧುಗಳೆಂದು ಭಾವಿಸಬೇಕು. ಇದರಂತೆ – ಮಾಡುವುವು, ಮಾಡಿದುವು; ತಿಂದವು, ತಿಂದುವು ಇತ್ಯಾದಿ.

**ಧಾತು – 'ಬರು'**

| ವರ್ತಮಾನಕಾಲ | | | ಭೂತಕಾಲ | | | ಭವಿಷ್ಯತ್ ಕಾಲ | | |
|---|---|---|---|---|---|---|---|---|
| ಏಕವಚನ | | ಬಹುವಚನ | ಏಕವಚನ | | ಬಹುವಚನ | ಏಕವಚನ | | ಬಹುವಚನ |
| ಬರುತ್ತಾನೆ | – | ಬರುತ್ತಾರೆ | *ಬಂದನು | – | ಬಂದರು | ಬರುವನು | – | ಬರುವರು |
| ಬರುತ್ತಾಳೆ | – | ಬರುತ್ತಾರೆ | ಬಂದಳು | – | ಬಂದರು | ಬರುವಳು | – | ಬರುವರು |
| ಬರುತ್ತದೆ | – | ಬರುತ್ತವೆ | ಬಂದಿತು | – | ಬಂದವು | ಬರುವದು | – | ಬರುವವು |
| | | | | | (ಬಂದುವು) | (ಬರುವುದು | – | ಬರುವುವು) |
| ಬರುತ್ತೀಯೆ | – | ಬರುತ್ತೀರಿ | ಬಂದೆ | – | ಬಂದಿರಿ | ಬರುವೆ | – | ಬರುವಿರಿ |
| ಬರುತ್ತೇನೆ | – | ಬರುತ್ತೇವೆ | ಬಂದೆನು | – | ಬಂದೆವು | ಬರುವೆನು | – | ಬರುವೆವು |

**ಧಾತು – 'ತಿನ್ನು'**

| ವರ್ತಮಾನಕಾಲ | | | ಭೂತಕಾಲ | | | ಭವಿಷ್ಯತ್ ಕಾಲ | | |
|---|---|---|---|---|---|---|---|---|
| ಏಕವಚನ | | ಬಹುವಚನ | ಏಕವಚನ | | ಬಹುವಚನ | ಏಕವಚನ | | ಬಹುವಚನ |
| ತಿನ್ನುತ್ತಾನೆ | – | ತಿನ್ನುತ್ತಾರೆ | *ತಿಂದನು | – | ತಿಂದರು | ತಿನ್ನುವನು | – | ತಿನ್ನುವರು |
| ತಿನ್ನುತ್ತಾಳೆ | – | ತಿನ್ನುತ್ತಾರೆ | *ತಿಂದಳು | – | ತಿಂದರು | ತಿನ್ನುವಳು | – | ತಿನ್ನುವರು |
| ತಿನ್ನುತ್ತದೆ | – | ತಿನ್ನುತ್ತವೆ | *ತಿಂದಿತು | – | ತಿಂದವು | ತಿನ್ನುವದು | – | ತಿನ್ನುವವು |
| | | | | | (ತಿಂದುವು)¶ | (ತಿನ್ನುವುದು | – | ತಿನ್ನುವುವು) |
| ತಿನ್ನುತ್ತೀಯೆ | – | ತಿನ್ನುತ್ತೀರಿ | *ತಿಂದೆ | – | ತಿಂದಿರಿ | ತಿನ್ನುವೆ | – | ತಿನ್ನುವಿರಿ |
| ತಿನ್ನುತ್ತೇನೆ | – | ತಿನ್ನುತ್ತೇವೆ | *ತಿಂದೆನು | – | ತಿಂದೆವು | ತಿನ್ನುವೆನು | – | ತಿನ್ನುವೆವು |

ಇದುವರೆಗೆ ವರ್ತಮಾನ, ಭೂತ, ಭವಿಷ್ಯತ್ ಕಾಲದ ಕ್ರಿಯಾಪದಗಳ ರೂಪಗಳು ಹೇಗಾಗುತ್ತವೆಂಬ ವಿಷಯವನ್ನು ಕ್ರಮವಾಗಿ ತಿಳಿದಿದ್ದೀರಿ. ಈಗ ವಿಧ್ಯರ್ಥ, ನಿಷೇಧಾರ್ಥ, ಸಂಭಾವನಾರ್ಥದ ಕ್ರಿಯಾಪದ ರೂಪಗಳು ಹೇಗಾಗುತ್ತವೆ? ಎಂಬ ಬಗೆಗೆ ತಿಳಿಯೋಣ.

## (೧) ವಿಧ್ಯರ್ಥ (ವಿಧಿ+ಅರ್ಥ) ರೂಪಗಳು

(i) ದೇವರು ನಿನಗೆ ಒಳ್ಳೆಯದು **ಮಾಡಲಿ.**

(ii) ಅವರು ಪಾಠವನ್ನು **ಓದಲಿ.**

(iii) ನೀನು ಆ ಕೆಲಸವನ್ನು **ಮಾಡು.**

(iv) ಅವನಿಗೆ **ಜಯವಾಗಲಿ.**

(v) ಅವನು ಹಾಳಾಗಿ **ಹೋಗಲಿ.**

---

* ಬರು, ತಿನ್ನು ಮೊದಲಾದ ಧಾತುಗಳಿಗೆ ಭೂತಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರುವಾಗ ಧಾತುವಿನ ಕೊನೆಯ ಅಕ್ಷರಗಳಿಗೆ (ರು–ನ್ನು ಎಂಬವುಗಳಿಗೆ) ಅನುಸ್ವಾರವು ಆದೇಶವಾಗಿ ಬರುವುದು.

¶ ಇಲ್ಲಿ ಕ್ರಮವಾಗಿ ಉದು, ಉವು ಎಂಬ ಆಖ್ಯಾತ ಪ್ರತ್ಯಯಗಳು ಬಂದಿವೆ ಎಂದು ತಿಳಿಯಬೇಕು.

ಇಲ್ಲಿ ಮೇಲೆ ಬಂದಿರುವ **ಮಾಡಲಿ, ಓದಲಿ, ಮಾಡು, ಆಗಲಿ, ಹೋಗಲಿ** ಇತ್ಯಾದಿ ಕ್ರಿಯಾಪದಗಳಲ್ಲಿ– 'ದೇವರು ನಿನಗೆ ಒಳ್ಳೆಯದು **ಮಾಡಲಿ**' ಎನ್ನುವಾಗ ಒಳ್ಳೆಯ '**ಹಾರೈಕೆಯೂ**', 'ಅವರು ಪಾಠವನ್ನು **ಓದಲಿ**' ಎನ್ನುವಾಗ '**ಸಮ್ಮತಿಯೂ**', 'ನೀನು ಆ ಕೆಲಸವನ್ನು **ಮಾಡು**' ಎನ್ನುವಲ್ಲಿ '**ಆಜ್ಞೆಯೂ**', 'ಅವನಿಗೆ **ಜಯವಾಗಲಿ**' ಎನ್ನುವಾಗ '**ಆಶೀರ್ವಾದವೂ**', 'ಅವನು **ಹಾಳಾಗಿ ಹೋಗಲಿ**' ಎನ್ನುವಾಗ '**ಕೆಟ್ಟ ಹಾರೈಕೆಯೂ**' ತೋರಿಬರುತ್ತದೆ.

ಹೀಗೆ ಒಂದು ಕ್ರಿಯೆಯ ವಿಷಯದಲ್ಲಿ '**ವಿಧಿ**' ತೋರುವುದೇ '**ವಿಧ್ಯರ್ಥ**' ಎನಿಸುವುದು. ಇದಕ್ಕೆ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(64) ವಿಧ್ಯರ್ಥಕ ಕ್ರಿಯಾಪದಗಳು:– ಆಶೀರ್ವಾದ, ಅಪ್ಪಣೆ, ಆಜ್ಞೆ, ಹಾರೈಕೆ ಇವುಗಳು ತೋರುವಾಗ ಧಾತುಗಳಿಗೆ ಆಖ್ಯಾತಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳೆನಿಸುವುವು.**

ಉದಾಹರಣೆಗೆ:–

'ಮಾಡು' ಧಾತು (ಇಲ್ಲಿ ಯಾವ ಕಾಲಸೂಚಕ ಪ್ರತ್ಯಯಗಳೂ ಬರುವುದಿಲ್ಲ)

| | ಧಾತು + | ಆಖ್ಯಾತ ಪ್ರತ್ಯಯ | = | ಏಕವಚನ | – | ಬಹುವಚನ |
|---|---|---|---|---|---|---|
| **(ಪ್ರಥಮ ಪುರುಷ,** ಪುಲ್ಲಿಂಗ) | | | | | | |
| ಅವನು | ಮಾಡು + | ಅಲಿ | = | ಮಾಡಲಿ | – | ಮಾಡಲಿ |
| **(ಪ್ರಥಮಪುರುಷ,** ಸ್ತ್ರೀ ಲಿಂಗ) | | | | | | |
| ಅವಳು | ಮಾಡು + | ಅಲಿ | = | ಮಾಡಲಿ | – | ಮಾಡಲಿ |
| **(ಪ್ರ. ಪು.** , ನಪುಂಸಕ ಲಿಂಗ) | | | | | | |
| ಅದು | ಮಾಡು + | ಅಲಿ | = | ಮಾಡಲಿ | – | ಮಾಡಲಿ |
| **(ಮಧ್ಯಮ ಪುರುಷ)** ನೀನು | | | | | | |
| | ಮಾಡು + | ಅಲಿ* | = | ಮಾಡು | – | ಮಾಡಿರಿ |

* ವಿಧ್ಯರ್ಥದ ಮಧ್ಯಮಪುರುಷ ಏಕವಚನದಲ್ಲಿ 'ಅಲಿ' ಎಂಬ ಆಖ್ಯಾತ ಪ್ರತ್ಯಯ ಬಂದು ಲೋಪವಾಗಿದೆ ಎಂದು ತಿಳಿಯಬೇಕು. ಆಗ ಧಾತುವೇ ಕ್ರಿಯಾಪದದ ರೂಪದಲ್ಲಿ ಉಳಿಯುವುದು. ಕೆಲವರು ಇಲ್ಲಿ ಯಾವ ಆಖ್ಯಾತಪ್ರತ್ಯಯವೂ ಬರುವುದಿಲ್ಲವೆಂದು ಹೇಳುವರು.

**(ಉತ್ತಮ ಪುರುಷ)** ನಾನು –

ಮಾಡು + ಎ = ಮಾಡುವೆ ಮಾಡು+ವಾ=ಮಾಡುವಾ¶
(ಮಾಡೋಣ, ಮಾಡುವ)

ಇಲ್ಲಿ ಪ್ರಥಮಪುರುಷದ ಏಕವಚನ, ಬಹುವಚನಗಳಲ್ಲಿ ಆರು ರೂಪಗಳೂ ಒಂದೇ ರೀತಿ ಇರುತ್ತವೆ. ಮಧ್ಯಮಪುರುಷ ಏಕವಚನದಲ್ಲಿ ಆಖ್ಯಾತಪ್ರತ್ಯಯ ಲೋಪವಾಗುವುದು. ಬಹು ವಚನದಲ್ಲಿ ಇರಿ ಪ್ರತ್ಯಯವೂ, ಉತ್ತಮಪುರುಷ ಏಕವಚನದಲ್ಲಿ 'ಎ' ಎಂಬುದೂ, ಬಹುವಚನ ದಲ್ಲಿ ವಾ, ಉವಾ, ವ, ಉವ, ಓಣ–ಇತ್ಯಾದಿ ಆಖ್ಯಾತ ಪ್ರತ್ಯಯಗಳು ಬರುವುದುಂಟು.

## (೨) ನಿಷೇಧಾರ್ಥಕ ರೂಪಗಳು

(i) ಅವನು ಅನ್ನವನ್ನು ತಿನ್ನನು, (ii) ಅವನು ಬಾರನು ಇತ್ಯಾದಿ ವಾಕ್ಯಗಳಲ್ಲಿ ಬಂದಿರುವ ತಿನ್ನನು, ಬಾರನು ಎಂಬ ಕ್ರಿಯಾಪದಗಳು ತಿನ್ನುವುದಿಲ್ಲ, ಬರುವುದಿಲ್ಲ–ಎಂಬ ಅರ್ಥದವು. ಎಂದರೆ ಕ್ರಿಯೆಯು ನಡೆಯಲಿಲ್ಲ ಎಂಬರ್ಥವನ್ನು ಸೂಚಿಸುತ್ತವೆ.

**(65) ಕ್ರಿಯೆಯು ನಡೆಯಲಿಲ್ಲ ಎಂಬರ್ಥ ತೋರುವಾಗ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿ, ನಿಷೇಧಾರ್ಥಕ ಕ್ರಿಯಾಪದಗಳೆನಿಸುವುವು.**

ಉದಾಹರಣೆಗೆ:–

<u>'ತಿನ್ನು' ಧಾತು</u>

| | ಧಾತು + | ಆಖ್ಯಾತ ಪ್ರತ್ಯಯ | = | ಕ್ರಿಯಾಪದ ಏಕವಚನ | – | ಬಹುವಚನ |
|---|---|---|---|---|---|---|
| **(ಪ್ರಥಮ ಪುರುಷ,** ಪುಲ್ಲಿಂಗ) ಅವನು | ತಿನ್ನು + | ಅನು | = | ತಿನ್ನನು | – | ತಿನ್ನರು |
| **(ಪ್ರಥಮಪುರುಷ,** ಸ್ತ್ರೀಲಿಂಗ) ಅವಳು | ತಿನ್ನು + | ಅಳು | = | ತಿನ್ನಳು | – | ತಿನ್ನರು |

---

¶ ಉತ್ತಮಪುರುಷ ಬಹುವಚನದಲ್ಲಿ ಮಾಡುವಾ, ಮಾಡೋಣ, ಮಾಡುವ–ಇತ್ಯಾದಿ ರೂಪಗಳು ಪ್ರಯೋಗದಲ್ಲಿ ಸಿಗುತ್ತವೆ. ಉದಾಹರಣೆಗೆ:– ನಾವು ಮಾಡೋಣ, ನಾವು ಮಾಡುವಾ, ನಾವು ಮಾಡುವ. ಕೆಲವು ಕಡೆ 'ಉವ' ಪ್ರತ್ಯಯ ಸೇರಿ ತಿಳಿಯುವ ಎಂದೂ, 'ಉವಾ' ಸೇರಿ ತಿಳಿಯುವಾ ಎಂದೂ ರೂಪಗಳಾಗುವುವು.

( **ಪ್ರ. ಪು.,** ನಪುಂಸಕಲಿಂಗ) ಅದು

| | | | | | |
|---|---|---|---|---|---|
| | ತಿನ್ನು + | ಅದು | = | ತಿನ್ನದು | – ತಿನ್ನವು |
| **(ಮಧ್ಯಮ ಪುರುಷ)** ನೀನು | ತಿನ್ನು+ | ಎ | = | ತಿನ್ನೆ | – ತಿನ್ನರಿ |
| **(ಉತ್ತಮ ಪುರುಷ)** ನಾನು | ತಿನ್ನು + | ಎನು | = | ತಿನ್ನೆನು | – ತಿನ್ನೆವು |

ಹೀಗೆ ಏಕವಚನದಲ್ಲಿ ಅನು, ಅಳು, ಅದು, ಎ, ಎನು ಎಂಬ ಆಖ್ಯಾತಪ್ರತ್ಯಯಗಳೂ, ಬಹುವಚನದಲ್ಲಿ ಅರು, ಅರು, ಅವು, ಅರಿ, ಎವು–ಎಂಬ ಆಖ್ಯಾತಪ್ರತ್ಯಯಗಳೂ ಎಲ್ಲ ಧಾತುಗಳ ಮೇಲೆ ಸೇರುತ್ತವೆ.

ಇನ್ನೊಂದು ವಿಶೇಷ ರೂಪದ ಉದಾಹರಣೆ ನೋಡಿರಿ
ಉದಾಹರಣೆಗೆ:–

♣'<u>ಬರು' ಧಾತು</u>

| | **ಧಾತು +** | **ಆಖ್ಯಾತ ಪ್ರತ್ಯಯ** | **=** | **ಏಕವಚನ** | **– ಬಹುವಚನ** |
|---|---|---|---|---|---|
| **(ಪ್ರಥಮ ಪುರುಷ,** ಪುಲ್ಲಿಂಗ)ಅವನು | ಬರು + | ಅನು | = | ಬಾರನು | – ಬಾರರು |
| **(ಪ್ರ.ಪು.,** ಸ್ತ್ರೀಲಿಂಗ) ಅವಳು | ಬರು + | ಅಳು | = | ಬಾರಳು | – ಬಾರರು |
| **(ಪ್ರ.ಪು.**ನಪುಂಸಕಲಿಂಗ) ಅದು | ಬರು + | ಅದು | = | ಬಾರದು | – ಬಾರವು |
| **(ಮಧ್ಯಮ ಪುರುಷ)** ನೀನು | ಬರು+ | ಎ | = | ಬಾರೆ | – ಬಾರರಿ |
| **(ಉತ್ತಮ ಪುರುಷ)** ನಾನು | ಬರು + | ಎನು | = | ಬಾರೆನು | – ಬಾರೆವು |

## (೩) ಸಂಭಾವನಾರ್ಥಕ ರೂಪಗಳು

(i) ಅವನು ನಾಳೆ **ಬಂದಾನು.**

(ii) ಅನ್ನವನ್ನು ಆತ **ತಿಂದಾನು.**

(iii) ಅದು ಮೇಲಕ್ಕೆ **ಏರೀತು.**

ಇತ್ಯಾದಿ ವಾಕ್ಯಗಳಲ್ಲಿ ಬಂದಿರುವ **ಬಂದಾನು, ತಿಂದಾನು, ಏರೀತು**–ಎಂಬ ಕ್ರಿಯಾಪದಗಳು ಕಾರ್ಯ ನಡೆಯುವಲ್ಲಿ ಸಂಶಯ ಅಥವಾ ಊಹೆಯನ್ನು ತಿಳಿಸುತ್ತವೆ. '**ಬಂದಾನು**' ಎಂಬಲ್ಲಿ ಬರುವ ವಿಷಯಲ್ಲಿ ಸಂಶಯವಾಗುತ್ತದಲ್ಲದೆ ನಿಶ್ಚಯವಿಲ್ಲ. ಬಂದರೆ

---

♣ ತರು–ಬರು ಧಾತುಗಳು ನಿಷೇಧಾರ್ಥದಲ್ಲಿ ತಾರ್, ಬಾರ್ ರೂಪಗಳನ್ನು ಪಡೆಯುತ್ತವೆ ಎಂದು ತಿಳಿಯಬೇಕು. ತರು ಧಾತುವಿನ ರೂಪಗಳು– ತಾರನು, ತಾರರು, ತಾರಳು, ತಾರರು, ತಾರದು, ತಾರವು, ತಾರೆ, ತಾರಿರಿ, ತಾರೆನು, ತಾರೆವು –ಎಂದಾಗುತ್ತವೆಂದು ತಿಳಿಯಬೇಕು.

ಬರಬಹುದು ಅಥವಾ ಬಾರದೆಯೂ ಇರಬಹುದು. ಇದರ ಹಾಗೆಯೇ **ತಿಂದಾನು, ಏರೀತು–** ಎಂಬಲ್ಲಿಯೂ ಕೂಡ ಸಂಶಯ, ಊಹೆಗಳು ತೋರುತ್ತವೆ. ಇಂಥ ಕ್ರಿಯಾಪದಗಳೇ ಸಂಭಾವನಾರ್ಥಕ ಕ್ರಿಯಾಪದ ಗಳು. ಇದಕ್ಕೆ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(66) ಸಂಭಾವನಾರ್ಥಕ ಕ್ರಿಯಾಪದ:– ಕ್ರಿಯೆಯು ನಡೆಯುವಿಕೆಯಲ್ಲಿ 'ಸಂಶಯ' ಅಥವಾ 'ಊಹೆ' ತೋರುವಲ್ಲಿ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿ ಸಂಭಾವನಾರ್ಥಕ ಕ್ರಿಯಾಪದಗಳೆನಿಸುವುವು.**

ಉದಾಹರಣೆಗೆ:–

**'ಹೋಗು' ಧಾತು**

| | ಧಾತು + | ಆಖ್ಯಾತ ಪ್ರತ್ಯಯ | = | ಕ್ರಿಯಾಪದ ಏಕವಚನ | – | ಬಹುವಚನ |
|---|---|---|---|---|---|---|
| **(ಪ್ರಥಮ ಪುರುಷ,** ಪುಲ್ಲಿಂಗ) ಅವನು | ಹೋಗು + | ಆನು | = | ಹೋದಾನು | – | ಹೋದಾರು |
| **(ಪ್ರಥಮಪುರುಷ,** ಸ್ತ್ರೀ ಲಿಂಗ) ಅವಳು | ಹೋಗು + | ಆಳು | = | ಹೋದಾಳು | – | ಹೋದಾರು |
| **(ಪ್ರ. ಪು. ,** ನಪುಂಸಕ ಲಿಂಗ) ಅದು | ಹೋಗು + | ಈತು | = | ಹೋದೀತು | – | ಹೋದಾವು |
| **(ಮಧ್ಯಮ ಪುರುಷ)** ನೀನು | ಹೋಗು + | ಈಯೆ | = | ಹೋದೀಯೆ | – | ಹೋದೀರಿ |
| **(ಉತ್ತಮ ಪುರುಷ)** ನಾನು | ಹೋಗು + | ಏನು | = | ಹೋದೇನು | – | ಹೋದೇವು |

'**ಹೋಗು**' ಎಂಬ ಧಾತುವಿನ ಮೇಲೆ ಸಂಭಾವನಾರ್ಥಕ ಆಖ್ಯಾತ ಪ್ರತ್ಯಯಗಳು ಸೇರಿದಾಗ ಧಾತುವಿನ ಕೊನೆಯ '**ಗು**' ಕಾರಕ್ಕೆ '**ದ**' ಕಾರ ಆದೇಶವಾಗಿ ಬರುವುದನ್ನು ಗಮನಿಸಿರಿ. ಇದರ ಹಾಗೆ ಎಲ್ಲಾ ಧಾತುಗಳಿಗೂ ಏಕವಚನದಲ್ಲಿ **ಆನು, ಆಳು, ಈತು, ಈಯೆ, ಏನು**–ಎಂಬ ಆಖ್ಯಾತ ಪ್ರತ್ಯಯಗಳನ್ನೂ ಬಹುವಚನದಲ್ಲಿ **ಆರು, ಆರು, ಆವು, ಈರಿ, ಏವು** ಎಂಬ ಆಖ್ಯಾತ ಪ್ರತ್ಯಯಗಳನ್ನೂ ಸೇರಿಸಿ ಹೇಳಬೇಕು.

**ಈಗ ವಿಧ್ಯರ್ಥ, ನಿಷೇಧಾರ್ಥ, ಸಂಭಾವನಾರ್ಥ–ಈ ಮೂರು ರೂಪಗಳು ಒಂದೇ ಧಾತುವಿಗೆ ಹೇಗಾಗುತ್ತವೆಂಬುದನ್ನು ಈ ಕೆಳಗಿನ ಉದಾಹರಣೆಯಿಂದ ತುಲನೆ ಮಾಡಿ ನೋಡಿರಿ.**

ಉದಾಹರಣೆಗೆ:–

**'ಬರೆ' ಧಾತು**

| ವಿಧ್ಯರ್ಥ | | ನಿಷೇಧಾರ್ಥ | | ಸಂಭಾವನಾರ್ಥ | |
|---|---|---|---|---|---|
| **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| ಬರೆಯಲಿ | ಬರೆಯಲಿ | ಬರೆಯನು | ಬರೆಯರು | ಬರೆದಾನು | ಬರೆದಾರು |
| ಬರೆಯಲಿ | ಬರೆಯಲಿ | ಬರೆಯಳು | ಬರೆಯರು | ಬರೆದಾಳು | ಬರೆದಾರು |
| ಬರೆಯಲಿ | ಬರೆಯಲಿ | ಬರೆಯದು | ಬರೆಯವು | ಬರೆದೀತು | ಬರೆದಾವು |
| ಬರೆ | ಬರೆಯಿರಿ | ಬರೆಯೆ | ಬರೆಯಿರಿ | ಬರೆದೀಯೆ | ಬರೆದೀರಿ |
| ಬರೆವೆ | ಬರೆಯುವ<br>ಬರೆಯುವಾ<br>ಬರೆಯೋಣ | ಬರೆಯೆನು | ಬರೆಯೆವು | ಬರೆದೇನು | ಬರೆದೇವು |

–ಇತ್ಯಾದಿ

ಹೊಸಗನ್ನಡದಲ್ಲಿ ಈಗ ಸಾಮಾನ್ಯವಾಗಿ '**ಬರೆಯೆ**' '**ತಿನ್ನೆ**' ಎಂಬ ಮಧ್ಯಮಪುರುಷ ಏಕವಚನರೂಪಗಳನ್ನೂ, '**ಬರೆಯಿರಿ**' '**ತಿನ್ನಿರಿ**' ಎಂಬ ಬಹುವಚನ ರೂಪಗಳನ್ನೂ ಯಾರೂ ಹೆಚ್ಚಾಗಿ ಬಳಸುವುದೇ ಇಲ್ಲ. ಅದಕ್ಕೆ ಪ್ರತಿಯಾಗಿ **ಬರೆಯಲಾರಿರಿ (ಬರೆಯಲ್ + ಆರಿರಿ), ತಿನ್ನಲಾರಿರಿ (ತಿನ್ನಲ್ + ಆರಿರಿ), ಬರೆಯುವುದಿಲ್ಲ (ಬರೆಯವುದು+ಇಲ್ಲ), ತಿನ್ನುವುದಿಲ್ಲ (ತಿನ್ನುವುದು + ಇಲ್ಲ)** ಇತ್ಯಾದಿಯಾಗಿ ಎರಡು ಕ್ರಿಯೆಗಳಿಂದ ನಿಷೇಧರೂಪಗಳನ್ನು ಹೇಳುವುದು ಪರಿಪಾಠವಾಗಿದೆ. ಸಂಭಾವನಾರ್ಥಕ ರೂಪಗಳನ್ನು ಕೂಡ ಹಾಗೆಯೇ 'ಬರೆದಾನು' ಎಂಬುದನ್ನು '**ಬರೆಯುಬಹುದು**' ಎಂದು ಏಕವಚನ, ಬಹುವಚನಗಳೆರಡರಲ್ಲೂ ಪುಂಸ್ತ್ರೀನಪುಂಸಕಲಿಂಗ ಮೂರರಲ್ಲೂ ಸಹ ಒಂದೇ ರೀತಿಯ ರೂಪದಿಂದ ಹೇಳುವುದು ವಾಡಿಕೆಯಾಗಿದೆ.

ಉದಾಹರಣೆಗೆ:–

ಅವನು ಬರೆಯಬಹುದು – ಅವರು ಬರೆಯಬಹುದು
ಅವಳು ಬರೆಯಬಹುದು – ಅವರು ಬರೆಯಬಹುದು
ಅದು ಬರೆಯಬಹುದು – ಅವು ಬರೆಯಬಹುದು
ನೀನು ಬರೆಯಬಹುದು – ನೀವು ಬರೆಯಬಹುದು
ನಾನು ಬರೆಯಬಹುದು – ನಾವು ಬರೆಯಬಹುದು –ಇತ್ಯಾದಿ

# V – ಕ್ರಿಯಾಪದ ರೂಪಗಳ ಕೆಲವು ವಿಶೇಷ ರೂಪಗಳು

ಇದುವರೆಗೆ ವರ್ತಮಾನ, ಭೂತ, ಭವಿಷ್ಯತ್ ಕಾಲದಲ್ಲಿ ಆಗುವ ಕ್ರಿಯಾಪದ ರೂಪಗಳನ್ನೂ ವಿಧಿ, ನಿಷೇಧ, ಸಂಭಾವನಾರ್ಥಗಳಲ್ಲಿ ಆಗುವ ಕ್ರಿಯಾಪದರೂಪಗಳನ್ನೂ ಸಾಮಾನ್ಯವಾಗಿ ತಿಳಿದಿದ್ದೀರಿ. ಈಗ ಆ ಆರೂ ರೂಪಗಳಲ್ಲಿನ ಕೆಲವು ವಿಶೇಷ ರೂಪಗಳನ್ನು ಕೆಳಗೆ ವಿವರಿಸಲಾಗಿದೆ. ಅವನ್ನು ಗಮನವಿಟ್ಟು ನೋಡಿರಿ.

## (೧) ವರ್ತಮಾನ ಕಾಲದ ಕೆಲವು ವಿಶೇಷ ಪ್ರಯೋಗಗಳು

ಇರು ಧಾತುವು ವರ್ತಮಾನಕಾಲದಲ್ಲಿ ಎರಡು ರೂಪ ಧರಿಸುತ್ತದೆ. 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಬರುವ ಮತ್ತು ಬರದಿರುವ ರೂಪಗಳು

| | | |
|---|---|---|
| ಪ್ರಥಮಪುರುಷ (ಅವನು) | (i) ಇರುತ್ತಾನೆ–ಇರುತ್ತಾರೆ | (ii) ಇದ್ದಾನೆ–ಇದ್ದಾರೆ |
| (ಅವಳು) | ಇರುತ್ತಾಳೆ–ಇರುತ್ತಾರೆ | ಇದ್ದಾಳೆ–ಇದ್ದಾರೆ |
| (ಅದು) | ಇರುತ್ತದೆ–ಇರುತ್ತವೆ | ಇದೆ–ಇವೆ |
| ಮಧ್ಯಮಪುರುಷ (ನೀನು) | ಇರುತ್ತೀಯೆ–ಇರುತ್ತೀರಿ | ಇದ್ದೀಯೆ–ಇದ್ದೀರಿ |
| ಉತ್ತಮಪುರುಷ (ನಾನು) | ಇರುತ್ತೇನೆ–ಇರುತ್ತೇವೆ | ಇದ್ದೇನೆ–ಇದ್ದೇವೆ |

ಮೇಲಿನ 'ಇರು' ಧಾತುವಿನ ಎರಡು ಬಗೆಯ ರೂಪಗಳನ್ನೂ ನೋಡಿದರೆ, ನಮಗೆ ಗೊತ್ತಾಗುವ ಅಂಶವಾವುದೆಂದರೆ, 'ಇರು' ಧಾತುವಿಗೆ ವರ್ತಮಾನಕಾಲದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯವಿಲ್ಲದೆಯೆ ಇರು+ದ್+ದ+ಆನೆ=ಇದ್ದಾನೆ ಇತ್ಯಾದಿ ರೂಪವನ್ನೂ ಧರಿಸುತ್ತದೆ. ಇನ್ನೊಂದು 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸಮೇತ ರೂಪಧರಿಸುತ್ತದೆ. ಕೆಲವರು–ಇರುತ್ತೆ, ಬರುತ್ತೆ, ತಿನ್ನುತ್ತೆ __ಇತ್ಯಾದಿಯಾಗಿ ಬರೆಯುವ ಮಾತನಾಡುವ ರೂಢಿಯುಂಟು. ಇದು ತಪ್ಪಾದ ಪ್ರಯೋಗವೇ ಆಗಿದೆ.

(iii) ವರ್ತಮಾನ ಕಾಲದಲ್ಲಿ 'ಉಂಟು' ಎಂಬ ಕ್ರಿಯಾರ್ಥಕಾವ್ಯಯದ ರೂಪಗಳು

(ಅ) 'ಅವನು ಮನೆಯಲ್ಲಿ ಇರುತ್ತಾನೆ'. ಈ ವಾಕ್ಯದಲ್ಲಿ 'ಇರುತ್ತಾನೆ' ಎಂಬ ಕ್ರಿಯಾಪದಕ್ಕೆ ಪ್ರತಿಯಾಗಿ,

(ಆ) 'ಅವನು ಮನೆಯಲ್ಲಿ ಉಂಟು'–ಹೀಗೆ 'ಉಂಟು' ಎಂಬ ರೂಪ ಹೇಳುವುದುಂಟು. ಸಾಮಾನ್ಯವಾಗಿ ಈ ರೂಪವನ್ನು ವರ್ತಮಾನಕಾಲದಲ್ಲಿ ಪ್ರಥಮಪುರುಷ, ಮಧ್ಯಮಪುರುಷ ಉತ್ತಮಪುರುಷ ಎಲ್ಲ ಕ್ರಿಯಾಪದಗಳ ರೂಪದಲ್ಲೂ ಹೇಳುತ್ತೇವೆ.

ಉದಾಹರಣೆಗೆ:–

(i) ಪ್ರಥಮಪುರುಷಕ್ಕೆ–

| | ಏಕವಚನ | ಬಹುವಚನ |
|---|---|---|
| ಪುಲ್ಲಿಂಗ (ಅವನು) – | ಅವನು ಮನೆಯಲ್ಲಿ ಉಂಟು | ಅವರು ಮನೆಯಲ್ಲಿ ಉಂಟು |
| ಸ್ತ್ರೀಲಿಂಗ (ಅವಳು) – | ಅವಳು ಮನೆಯಲ್ಲಿ ಉಂಟು | ಅವರು ಮನೆಯಲ್ಲಿ ಉಂಟು |
| ನಪುಂಸಕಲಿಂಗ (ಅದು) – | ಅದು ಮನೆಯಲ್ಲಿ ಉಂಟು | ಅವು ಮನೆಯಲ್ಲಿ ಉಂಟು |

(ii) ಮಧ್ಯಮಪುರುಷಕ್ಕೆ–

ಏಕವಚನ–ನೀನು ಮನೆಯಲ್ಲಿ 'ಉಂಟು' ಎಂದು ಭಾವಿಸಿದ್ದೆ (ಇರುತ್ತೀಯೆ ಎಂದು)

ಬಹುವಚನ–ನೀವು ಮನೆಯಲ್ಲಿ 'ಉಂಟೆಂದು' ಭಾವಿಸಿದ್ದೆ (ಇರುತ್ತೀರಿ ಎಂದು)

(iii) ಉತ್ತಮಪುರುಷಕ್ಕೆ–
ಏಕವಚನ–ನಾನು ಮನೆಯಲ್ಲಿ 'ಉಂಟು' ಎಂದು ಬಗೆದಿದ್ದೆಯಾ? (ಇರುತ್ತೇನೆಂದು)
ಬಹುವಚನ–ನಾವು ಮನೆಯಲ್ಲಿ 'ಉಂಟು' ಎಂದು ಬಗೆದಿದ್ದೆಯಾ? (ಇರುತ್ತೇವೆ ಎಂದು)

**ಹೀಗೆ–'ಉಂಟು' ಎಂಬ ರೂಪವು 'ಇರು' ಎಂಬ ಧಾತುವಿನ ವರ್ತಮಾನ ಕಾಲದ ಎಲ್ಲ ಕ್ರಿಯಾಪದಗಳ ರೂಪದಲ್ಲಿ ಬರುವುದುಂಟು. ಇದನ್ನು ಕ್ರಿಯಾರ್ಥಕಾವ್ಯಯ ಎಂದು ಕರೆಯುವರು.***

## (೨) ಭೂತಕಾಲದ ಕೆಲವು ವಿಶೇಷ ರೂಪಗಳು

(i) **ಮಾಡು, ಓಡು, ತೀಡು, ಕೂಡು** ಇತ್ಯಾದಿ ಉಕಾರಾಂತ ಧಾತುಗಳಿಗೆ ಭೂತಕಾಲ ಸೂಚಕ '**ದ**' ಎಂಬ ಪ್ರತ್ಯಯವು ಆಗಮವಾಗಿ ಬಂದಾಗ ಧಾತುವಿನ ಕೊನೆಯು '**ಉ**' ಕಾರಕ್ಕೆ '**ಇ**' ಕಾರವು ಆದೇಶವಾಗಿ ಬರುವುದು.

ಮಾಡು + ದ + ಅನು = ಮಾಡಿದನು
ಮಾಡು + ದ + ಅರು = ಮಾಡಿದರು
ಮಾಡು + ದ + ಅಳು = ಮಾಡಿದಳು
ಮಾಡು + ದ + ಇತು = ಮಾಡಿತು –ಇತ್ಯಾದಿ

ಇದರಂತೆ–**ಓಡಿದನು, ತೀಡಿದನು, ಕೂಡಿದನು,** –ಇತ್ಯಾದಿ ರೂಪಗಳನ್ನು ತಿಳಿಯಬೇಕು.

(ii) **ಇರು, ತರು, ಬರು**–ಇತ್ಯಾದಿ ಕೆಲವು ಉಕಾರಾಂತ ಧಾತುಗಳಾದರೋ ಈ ಮೊದಲು ಹೇಳಿದ ಉಕಾರಾಂತ ಧಾತುಗಳಾದ **ಮಾಡು, ಓಡು**–ಇತ್ಯಾದಿಗಳಂತೆ ರೂಪ ಧರಿಸುವುದಿಲ್ಲ.

ಉದಾಹರಣೆಗೆ:–

| ಇರು ಧಾತು | ತರು ಧಾತು | ಬರು ಧಾತು |
|---|---|---|
| ಇದ್ದನು – ಇದ್ದರು | ತಂದನು – ತಂದರು | ಬಂದನು – ಬಂದರು |
| ಇದ್ದಳು – ಇದ್ದರು | ತಂದಳು – ತಂದರು | ಬಂದಳು – ಬಂದರು |
| ಇತ್ತು – ಇದ್ದವು | ತಂದಿತು – ತಂದವು | ಬಂದಿತು – ಬಂದವು |

---

* 'ಉಂಟು' ಎಂಬ ಕ್ರಿಯಾರೂಪವು 'ಉಳ್' ಎಂಬ ಧಾತುವಿನಿಂದ ನಿಷ್ಪತ್ತಿಯಾದ ರೂಪವೆಂದೂ ಕೆಲವರು ಹೇಳುವರು.

ನಿಲ್ಲುವುದುಂಟು, ಇರುವುದುಂಟು–ಇತ್ಯಾದಿ ರೂಪಗಳು ವಿಶೇಷವಾಗಿ ಬಳಕೆಯಲ್ಲಿವೆ. ಇವನ್ನು–'ಇರುವುದು ಎಂಬುದು ಉಂಟು' 'ನಿಲ್ಲುವುದು ಎಂಬುದು ಉಂಟು' ಎಂದು ಅರ್ಥಮಾಡಬೇಕು. ಈ ಕ್ರಿಯಾಪದಗಳು 'ಇರುತ್ತವೆ', 'ನಿಲ್ಲುತ್ತವೆ' ಎಂಬ ಕ್ರಿಯಾಪದದ ಅರ್ಥದಲ್ಲಿ ಒಮ್ಮೊಮ್ಮೆ ಸಂಶಯ ತೋರುವಂತೆಯೂ ಭಾಸವಾಗುತ್ತವೆ. 'ನಿಲ್ಲುವುದುಂಟು' ಎಂದರೆ ನಿಲ್ಲದಿರುವುದೂ ಉಂಟು, ಎಂಬ ಅರ್ಥದಲ್ಲೂ ಪ್ರಯೋಗವಾಗುತ್ತವೆ.

| | | |
|---|---|---|
| ಇದ್ದೀಯೆ – ಇದ್ದೀರಿ | ತಂದೆ – ತಂದಿರಿ | ಬಂದೆ – ಬಂದಿರಿ |
| ಇದ್ದೇನೆ – ಇದ್ದೇವೆ | ತಂದೆನು – ತಂದೆವು | ಬಂದೆನು – ಬಂದೆವು |

ಮೇಲಿನ ಉದಾಹರಣೆಗಳನ್ನು ನೋಡಿದಾಗ '**ಇರು**' ಧಾತುವಿಗೆ ಭೂತಕಾಲದ ಆಖ್ಯಾತಪ್ರತ್ಯಯಗಳೂ ಕಾಲಸೂಚಕ ಪ್ರತ್ಯಯವೂ ಬಂದಾಗ '**ಇದ್**' ಎಂಬ ರೂಪವು ನಪುಂಸಕಲಿಂಗ ಏಕವಚನದ ವಿನಾ ಎಲ್ಲಕಡೆಗೂ ಆಗುವುದು. ನಪುಂಸಕಲಿಂಗ ಏಕವಚನದಲ್ಲಿ ಮಾತ್ರ ಕ್ರಿಯಾಪದವು '**ಇತ್ತು**' ಎಂಬ ರೂಪ ಹೊಂದುವುದು.

ತರು, ಬರು, ಧಾತುಗಳ ಕೊನೆಯ 'ರು' ಕಾರಗಳಿಗೆ ಅನುಸ್ವಾರವು ಆದೇಶವಾಗಿ ಬಂದು 'ತಂ–ಬಂ' ಎಂಬ ರೂಪ ಧರಿಸಿದ ಮೇಲೆ, ಕಾಲಸೂಚಕ ಪ್ರತ್ಯಯ ಆಖ್ಯಾತ ಪ್ರತ್ಯಯಗಳು ಕ್ರಮವಾಗಿ ಸೇರುತ್ತವೆ.

(iii) **ಕೀಳು, ಬೀಳು, ಏಳು, ಬಾಗು**–ಇತ್ಯಾದಿ ಮೊದಲನೆಯ ಸ್ವರವು ದೀರ್ಘವಾಗಿ ಉಳ್ಳ ಧಾತುಗಳ ರೂಪಗಳು ಈ ಕೆಳಗಿನಂತೆ ಆಗುತ್ತವೆ–

| **(ಅ) ಕೀಳು ಧಾತು** | **(ಆ) ಬೀಳು ಧಾತು** | **(ಇ) ಏಳು ಧಾತು** | **(ಈ) ಬಾಗು ಧಾತು** |
|---|---|---|---|
| ಕಿತ್ತನು–ಕಿತ್ತರು | ಬಿದ್ದನು–ಬಿದ್ದರು | ಎದ್ದನು–ಎದ್ದರು | ಬಗ್ಗಿದನು–ಬಗ್ಗಿದರು |
| ಕಿತ್ತಳು–ಕಿತ್ತರು | ಬಿದ್ದಳು–ಬಿದ್ದರು | ಎದ್ದಳು–ಎದ್ದರು | ಬಗ್ಗಿದಳು–ಬಗ್ಗಿದರು |
| ಕಿತ್ತಿತು–ಕಿತ್ತವು | ಬಿದ್ದಿತು–ಬಿದ್ದವು | ಎದ್ದಿತು–ಎದ್ದವು | ಬಗ್ಗಿತು–ಬಗ್ಗಿದವು |
| ಕಿತ್ತೆ–ಕಿತ್ತಿರಿ | ಬಿದ್ದೆ–ಬಿದ್ದಿರಿ | ಎದ್ದೆ–ಎದ್ದಿರಿ | ಬಗ್ಗಿದೆ–ಬಗ್ಗಿದಿರಿ |
| ಕಿತ್ತೆನು–ಕಿತ್ತೆವು | ಬಿದ್ದೆನು–ಬಿದ್ದೆವು | ಎದ್ದೆನು–ಎದ್ದೆವು | ಬಗ್ಗಿದೆನು–ಬಗ್ಗಿದೆವು |

(iv) **ಕೊಡು, ಬಿಡು, ಸುಡು, ಉಡು, ತೊಡು, ಇಡು**–ಮೊದಲಾದ '**ಡು**' ಕಾರಾಂತಗಳಾದ ಧಾತುಗಳ ಭೂತಕಾಲದ ರೂಪಗಳು–

| **(೧) ಕೊಡು ಧಾತು** | **(೨) ಬಿಡು ಧಾತು** | **(೩) ಸುಡು ಧಾತು** |
|---|---|---|
| ಕೊಟ್ಟನು–ಕೊಟ್ಟರು | ಬಿಟ್ಟನು–ಬಿಟ್ಟರು | ಸುಟ್ಟನು–ಸುಟ್ಟರು |
| ಕೊಟ್ಟಳು–ಕೊಟ್ಟರು | ಬಿಟ್ಟಳು–ಬಿಟ್ಟರು | ಸುಟ್ಟಳು–ಸುಟ್ಟರು |
| ಕೊಟ್ಟಿತು–ಕೊಟ್ಟವು | ಬಿಟ್ಟಿತು–ಬಿಟ್ಟವು | ಸುಟ್ಟಿತು–ಸುಟ್ಟವು |
| ಕೊಟ್ಟೆ–ಕೊಟ್ಟಿರಿ | ಬಿಟ್ಟೆ–ಬಿಟ್ಟಿರಿ | ಸುಟ್ಟೆ–ಸುಟ್ಟಿರಿ |
| ಕೊಟ್ಟೆನು–ಕೊಟ್ಟೆವು | ಬಿಟ್ಟೆನು–ಬಿಟ್ಟೆವು | ಸುಟ್ಟೆನು–ಸುಟ್ಟೆವು |

| **(೪) ಉಡು ಧಾತು** | **(೫) ತೊಡು ಧಾತು** | **(೬) ಇಡುಧಾತು** |
|---|---|---|
| ಉಟ್ಟನು–ಉಟ್ಟರು | ತೊಟ್ಟನು–ತೊಟ್ಟರು | ಇಟ್ಟನು–ಇಟ್ಟರು |

| | | |
|---|---|---|
| ಉಟ್ಟಳು–ಉಟ್ಟರು | ತೊಟ್ಟಳು–ತೊಟ್ಟರು | ಇಟ್ಟಳು–ಇಟ್ಟರು |
| ಉಟ್ಟಿತು–ಉಟ್ಟವು | ತೊಟ್ಟಿತು–ತೊಟ್ಟವು | ಇಟ್ಟಿತು–ಇಟ್ಟವು |
| ಉಟ್ಟೆ–ಉಟ್ಟಿರಿ | ತೊಟ್ಟೆ–ತೊಟ್ಟಿರಿ | ಇಟ್ಟೆ–ಇಟ್ಟಿರಿ |
| ಉಟ್ಟೆನು–ಉಟ್ಟೆವು | ತೊಟ್ಟೆನು–ತೊಟ್ಟೆವು | ಇಟ್ಟೆನು–ಇಟ್ಟೆವು |

ಮೇಲಿನ ಎಲ್ಲ ರೂಪಗಳನ್ನು ನೋಡಿದರೆ ಧಾತುವಿನ ಕೊನೆಯ '**ಡು**' ಕಾರಕ್ಕೆ '**ಟ್**' ಕಾರವೂ ಭೂತಕಾಲ ಸೂಚಕವಾದ '**ದ**' ಕಾರಕ್ಕೆ '**ಟ**' ಕಾರವೂ ಎಲ್ಲ ಕಡೆಗೂ ಬಂದಿರುವುದನ್ನು ತಿಳಿಯಬಹುದು.

## (೩) ಭವಿಷ್ಯತ್ ಕಾಲದ ಕೆಲವು ವಿಶೇಷರೂಪಗಳು

ಭವಿಷ್ಯತ್ ಕಾಲದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಬದಲಾವಣೆಗಳಾವುವೂ ಆಗುವುದಿಲ್ಲ. ನಪುಂಸಕಲಿಂಗದ ಏಕವಚನದಲ್ಲಿ '**ಅದು**' ಅಥವಾ '**ಉದು**' ಎಂಬ ಆಖ್ಯಾತಪ್ರತ್ಯಯವೂ, ಬಹುವಚನದಲ್ಲಿ '**ಅವು**' ಅಥವಾ '**ಉವು**' ಎಂಬ ಆಖ್ಯಾತ ಪ್ರತ್ಯಯಗಳೂ ಧಾತುಗಳ ಮೇಲೆ ಸೇರುತ್ತವೆ.

ಉದಾಹರಣೆಗೆ:– ಮಾಡುವದು (ಅದು–ಆಖ್ಯಾತಪ್ರತ್ಯಯ)
ಮಾಡುವುದು (ಉದು–ಆಖ್ಯಾತಪ್ರತ್ಯಯ)
ಮಾಡುವವು (ಅವು–ಆಖ್ಯಾತಪ್ರತ್ಯಯ)
ಮಾಡುವುವು (ಉವು–ಆಖ್ಯಾತಪ್ರತ್ಯಯ)

## ಕ್ರಿಯಾಪದಗಳ ಕಾಲಪಲ್ಲಟಗೊಳ್ಳುವಿಕೆ

**ಅವನು ಘಂಟೆಯ ನಂತರ ಊಟ ಮಾಡುವನು** (ಭವಿಷ್ಯತ್‌ಕಾಲ)
**ಅವನು ಘಂಟೆಯ ನಂತರ ಊಟ ಮಾಡುತ್ತಾನೆ** (ವರ್ತಮಾನಕಾಲ)

**ಭವಿಷ್ಯತ್‌ಕಾಲದ ಒಂದು ಕ್ರಿಯೆಯು ವರ್ತಮಾನಕಾಲಕ್ಕೆ ತೀರ ಸಮೀಪದಲ್ಲಿ ಇದ್ದರೆ ಅದನ್ನು ವರ್ತಮಾನಕಾಲದಂತೆಯೇ ಪ್ರಯೋಗಮಾಡುವುದು ರೂಢಿಯಲ್ಲಿದೆ.** ಮೇಲಿನ ಉದಾಹರಣೆಗಳಲ್ಲಿ "**ಘಂಟೆಯ ನಂತರ ಊಟ ಮಾಡುವನು**" ಎಂಬುದು ಭವಿಷ್ಯತ್ ಕಾಲವೇ ಆಗಿದೆ. ಆದರೆ ಅದನ್ನು "**ಘಂಟೆಯ ನಂತರ ಊಟ ಮಾಡುತ್ತಾನೆ**" ಎಂದು ವರ್ತಮಾನ ಕಾಲದಲ್ಲಿಯೇ ಪ್ರಯೋಗ ಮಾಡುವುದು ರೂಢಿ.

**ಅವನು ನಾಳೆಯ ದಿನ ಬರುವನು** (ಭವಿಷ್ಯತ್ ಕಾಲ)
**ಅವನು ನಾಳೆಯ ದಿನ ಬರುತ್ತಾನೆ** (ವರ್ತಮಾನಕಾಲ)

**(67) ಒಂದು ಕಾಲದಲ್ಲಿ ನಡೆಯುವ ಕ್ರಿಯೆಯನ್ನು ಬೇರೆ ಕಾಲದ ಕ್ರಿಯಾ ರೂಪದಿಂದ ಹೇಳುವ ಪ್ರಯೋಗಗಳು ಭಾಷೆಯಲ್ಲಿ ಉಂಟು. ಇದನ್ನೇ "ಕಾಲಪಲ್ಲಟ"* ಎಂದು ಹೇಳುವರು.**

**ಭವಿಷ್ಯತ್‌ಕಾಲದ ಕ್ರಿಯಾಪದಗಳು ವರ್ತಮಾನಕಾಲದಲ್ಲೂ, ವರ್ತಮಾನಕಾಲದ ಕ್ರಿಯಾಪದಗಳು ಭವಿಷ್ಯತ್‌ಕಾಲದಲ್ಲೂ ಪ್ರಯೋಗವಾಗುತ್ತವೆ.**

(i) **ವರ್ತಮಾನಕಾಲದ ಕ್ರಿಯೆಗೆ ಭವಿಷ್ಯತ್ತಿನ ಕ್ರಿಯೆ ಹೇಳುವುದಕ್ಕೆ–**

ಉದಾಹರಣೆ:–

(ಅ) ಅವನು ಒಳಗೆ ಊಟ ಮಾಡುವನು. (ಆ) ಅಗೋ ಅಲ್ಲಿ ಬರುವನು, ನೋಡು.

ಇಲ್ಲಿ '**ಒಳಗೆ ಊಟ ಮಾಡುತ್ತಾನೆ, ಅಗೋ ಬರುತ್ತಾನೆ**' ಎಂಬ ವರ್ತಮಾನ ಕಾಲದಲ್ಲಿ ಪ್ರಯೋಗಿಸಬೇಕಾದ ಕ್ರಿಯಾಪದ ಭವಿಷ್ಯತ್ತಿನಲ್ಲಿ ಪ್ರಯೋಗಗೊಂಡಿದೆ.

(ii) **ಭವಿಷ್ಯತ್‌ಕಾಲದ ಕ್ರಿಯೆ ಹೇಳುವುದಕ್ಕೆ ವರ್ತಮಾನಕಾಲದ ಕ್ರಿಯಾಪದ ಪ್ರಯೋಗಕ್ಕೆ–**

ಉದಾಹರಣೆ:–

(ಅ) ಅವನು ನಾಳೆ ಕೊಡುತ್ತಾನೆ. (ಆ) ಮುಂದಿನವಾರ ಬರುತ್ತೇನೆ. ಇತ್ಯಾದಿ.

## (ಳ) ವಿಧ್ಯರ್ಥದಲ್ಲಿ ಬರುವ ಕೆಲವು ವಿಶೇಷ ರೂಪಗಳು

(i) **ವಿಧ್ಯರ್ಥದ ಪ್ರಥಮಪುರುಷ ಪುಲ್ಲಿಂಗ, ಸ್ತ್ರೀಲಿಂಗ ನಪುಂಸಕಲಿಂಗ, ಎರಡೂ ವಚನಗಳು ಇವುಗಳಲ್ಲೆಲ್ಲಾ 'ಅಲಿ' ಎಂಬ ಆಖ್ಯಾತಪ್ರತ್ಯಯ ಸಾಮಾನ್ಯವಾಗಿ ಎಲ್ಲ ಧಾತುಗಳಿಗೂ ಬರುತ್ತದೆ.**

| | **ಏಕವಚನ** | **ಬಹುವಚನ** |
|---|---|---|
| **ಪ್ರಥಮಪುರುಷ** | ಅವನು ಮಾಡಲಿ | ಅವರು ಮಾಡಲಿ |
| **ಪ್ರಥಮಪುರಷ** | ಅವಳು ಮಾಡಲಿ | |
| **ಪ್ರಥಮಪುರುಷ** | ಅದು ಮಾಡಲಿ | ಅವು ಮಾಡಲಿ |

(ii) **ಮಧ್ಯಮಪುರುಷ ಏಕವಚನದಲ್ಲಿ ಮಾತ್ರ ಕೇವಲ ಧಾತುವೇ ಕ್ರಿಯಾಪದವಾಗುತ್ತದೆ.**

ನೀನು ಪುಸ್ತಕ ಓದು (ಧಾತುವೂ 'ಓದು')

---

* ಹಿಂದಿನ ಪ್ರಕರಣದಲ್ಲಿ ಬಂದ ವಿಭಕ್ತಿ ಪಲ್ಲಟವನ್ನು ಜ್ಞಾಪಿಸಿಕೊಳ್ಳಿ. ಅಲ್ಲಿ ಒಂದು ವಿಭಕ್ತಿಪ್ರತ್ಯಯವನ್ನು ಪ್ರಯೋಗ ಮಾಡಬೇಕಾದ ಕಡೆ ಬೇರೆ ವಿಭಕ್ತಿಪ್ರತ್ಯಯವನ್ನು ಪ್ರಯೋಗ ಮಾಡಿ ಹೇಳುವುದುಂಟು. ಅದರಂತೆ ಇಲ್ಲಿ ಒಂದು ಕಾಲದಲ್ಲಿ ಹೇಳಬೇಕಾದ ಕ್ರಿಯೆಯನ್ನು ಬೇರೊಂದು ಕಾಲದ ಕ್ರಿಯಾಪದದಿಂದ ಹೇಳುವುದು ವಾಡಿಕೆ.

ನೀನು ಈ ಕಾರ್ಯ ಮಾಡು
ನೀನು ಕಲ್ಲನ್ನು ಹೊರು

**ಓದು, ಮಾಡು, ಹೊರು**–ಎಂಬುವು ಧಾತುರೂಪಗಳೂ ಹೌದು. ವಿಧ್ಯರ್ಥದ ಮಧ್ಯಮಪುರುಷ ಏಕವಚನದ ಕ್ರಿಯಾಪದಗಳೂ ಹೌದು. ಆದರೆ ಇಲ್ಲಿ '**ಅಲಿ**' ಎಂಬ ಆಖ್ಯಾತಪ್ರತ್ಯಯವು ಬಂದು ಲೋಪವಾಗಿದೆಯೆಂದು ಭಾವಿಸಬೇಕು.¶

(iii) **ತರು, ಬರು, ಕೊಯ್, ಬಯ್, ನೆಯ್ ಎಂಬ ಧಾತುಗಳೂ ಏಕಾಕ್ಷರ ಧಾತುಗಳಾದ ಸಾ, ನೋ, ಬೇ ಇತ್ಯಾದಿಗಳೂ, ವಿಧ್ಯರ್ಥದ ಮಧ್ಯಮ ಪುರುಷ ಏಕವಚನದಲ್ಲಿ ಧಾತುರೂಪವಾಗಿಯೇ ಉಳಿಯದೆ ಬೇರೆ ರೂಪ ಧರಿಸುತ್ತವೆ.**

ಉದಾಹರಣೆಗೆ:–

| | | | |
|---|---|---|---|
| (೧) | ತರು | ನೀನು ಆ ಕಲ್ಲನ್ನು ತಾ* | (ತರು ಧಾತು '**ತಾ**' ರೂಪ) |
| (೨) | ಬರು | ನೀನು ಬೇಗ ಬಾ* | (ಬರು ಧಾತು '**ಬಾ**' ರೂಪ) |
| (೩) | ಕೊಯ್ | ನೀನು ಹೂವು ಕೊಯ್ಯಿ | (ಕೊಯ್+ಯ್+ಇ=ಕೊಯ್ಯಿ) |
| (೪) | ಬಯ್ | ನೀನು ಬಯ್ಯಿ | (ಬಯ್+ಯ್+ಇ=ಬಯ್ಯಿ) |
| (೫) | ನೆಯ್ | ನೀನು ಬಟ್ಟೆಯನ್ನು ನೆಯ್ಯಿ | (ನೆಯ್+ಯ್+ಇ=ನೆಯ್ಯಿ) |
| (೬) | ಸಾ | ನೀನು ಸಾಯಿ | (ಸಾಯ್+ಇ=ಸಾಯಿ) |
| (೭) | ನೋ | ನೀನು ಗಾಯದಿಂದ ನೋಯಿ | (ನೋಯ್+ಇ=ನೋಯಿ) |
| (೮) | ಬೇ | ನೀನು ಬೆಂಕಿಯಿಂದ ಬೇಯಿ | (ಬೇಯ್+ಇ=ಬೇಯಿ) |

(iv) **ಮಧ್ಯಮಪುರುಷ ಏಕವಚನ ಬಹುವಚನಗಳಲ್ಲಿ ಕೆಲವು ಸಲ 'ಬಾ, ಬನ್ನಿರಿ' ಎಂಬುವಕ್ಕೆ ಪ್ರತಿಯಾಗಿ 'ಬರುವುದು' ಮತ್ತು 'ಕೊಡು, ಕೊಡಿರಿ' ಎಂಬುವಕ್ಕೆ ಪ್ರತಿಯಾಗಿ 'ಕೊಡುವುದು' ಎಂಬ ಒಂದೇ ರೂಪವನ್ನು ಪ್ರಯೋಗಿಸುವುದುಂಟು.**

ಉದಾಹರಣೆಗೆ:–

| | | |
|---|---|---|
| (i) | ನೀನು ಈ ದಿನ ಊಟಕ್ಕೆ **ಬರುವುದು** | (**ಬಾ** ಎಂಬುದಕ್ಕೆ ಪ್ರತಿಯಾಗಿ) |
| (ii) | ನೀವು ಈ ದಿನ ಊಟಕ್ಕೆ **ಬರುವುದು** | (**ಬನ್ನಿರಿ** ಎಂಬುದಕ್ಕೆ ಪ್ರತಿಯಾಗಿ) |
| (iii) | ನೀನು ಎಲ್ಲರಿಗೂ **ಕೊಡುವುದು** | (**ಕೊಡು** ಎಂಬುದಕ್ಕೆ ಪ್ರತಿಯಾಗಿ |
| (iv) | ನೀವು ಎಲ್ಲರಿಗೂ **ಕೊಡುವುದು** | (**ಕೊಡಿರಿ** ಎಂಬುದಕ್ಕೆ ಪ್ರತಿಯಾಗಿ) |

---

¶ ಕೇವಲ ಪ್ರಕೃತಿಗಳು ಪ್ರಯೋಗಕ್ಕೆ ಅರ್ಹವಾದುವಲ್ಲ. ಆಖ್ಯಾತಪ್ರತ್ಯಯವಿಲ್ಲದೆ ಕ್ರಿಯಾಪದವಾಗುವಂತೆಯೂ ಇಲ್ಲ. ಆದ್ದರಿಂದ ಇಲ್ಲಿ ಆಖ್ಯಾತ ಪ್ರತ್ಯಯವು ಬಂದು ಲೋಪವಾದುದಾಗಿ ಭಾವಿಸಬೇಕೆಂದು ಹೇಳುವರು.

* ಹಳಗನ್ನಡದಲ್ಲಿ ಈ ಧಾತುಗಳು ತರ್, ಬರ್ ಎಂಬ ರೂಪದಿಂದಿರುತ್ತವೆ. ಅಲ್ಲಿ ವಿಧ್ಯರ್ಥ ಮಧ್ಯಮಪುರುಷ ಏಕವಚನದಲ್ಲಿ ಇವುಗಳ ರೂಪಗಳು ತಾರ, ಬಾರ–ಎಂದೂ ಬಹುವಚನದಲ್ಲಿ ಇವು ತನ್ನಿಂ, ಬನ್ನಿಂ–ಎಂದೂ ರೂಪ ಹೊಂದುತ್ತವೆ.

ಸಾಮಾನ್ಯವಾಗಿ ಈ ರೂಪಗಳನ್ನು ಗೌರವಾರ್ಥದಲ್ಲಿ ಎಲ್ಲ ಧಾತುಗಳ ಮೇಲೂ '**ಉವುದು**' ಪ್ರತ್ಯಯ ಹಚ್ಚಿ ಹೇಳುವುದುಂಟು. ಆಗ ಏಕವಚನ, ಬಹುವಚನಗಳಲ್ಲಿ ಈ ರೂಪ ಒಂದೇ ರೀತಿಯಿರುತ್ತದೆ.

(v) **ಉತ್ತಮಪುರುಷ ಏಕವಚನದಲ್ಲಿ ಮಾತ್ರ ಪ್ರತ್ಯಯವೇ ಇಲ್ಲವೆಂದರೆ ತಪ್ಪಲ್ಲ. ಏಕೆಂದರೆ ತನಗೆ ತಾನೇ ಆಜ್ಞೆ, ಆಶೀರ್ವಾದ ವಿಧಿಸಿಕೊಳ್ಳುವುದು ಹೇಗೆ? ಆದರೂ 'ಮಾಡುವೆ' 'ನೋಡುವೆ' ಎಂದು ವ್ಯಾಕರಣದಲ್ಲಿ ಹೇಳುವುದು ವಾಡಿಕೆ. ಬಹುವಚನದಲ್ಲಿ ಮಾಡೋಣ, ನೋಡೋಣ, ಮಾಡುವಾ, ನೋಡುವಾ–ಇತ್ಯಾದಿ ಕ್ರಿಯಾಪದಗಳನ್ನು ಪ್ರಯೋಗಿಸುವುದುಂಟು. ಆದರೆ 'ಮಾಡುವಾ' 'ನೋಡುವಾ' ಇತ್ಯಾದಿ ಪ್ರಯೋಗಗಳು ಹೊಸಗನ್ನಡದಲ್ಲಿ ರೂಢಿಯಲ್ಲಿಲ್ಲ.**

(vi) **ವಾಕ್ಯವು ಪ್ರಶ್ನಾರ್ಥಕವಾಗಿದ್ದರೆ ಮಾತ್ರ ವಿಧ್ಯರ್ಥದ ಉತ್ತಮಪುರುಷ ಏಕವಚನದಲ್ಲಿ 'ಅಲಿ' ಎಂಬ ಆಖ್ಯಾತಪ್ರತ್ಯಯವು ಬರುವುದುಂಟು.**

ಉದಾಹರಣೆಗೆ:–

(ಅ) ತಾಯಿಯ ಹಾಲೇ ವಿಷವಾಗಿ ಕೊಂದರೆ, ಯಾರನ್ನು **ದೂರಲಿ**?

(ಆ) ತಂದೆಯೇ ಬೇಡವೆಂದರೆ, ಹೇಗೆ **ಹೋಗಲಿ**?

(ಇ) ಬೇಡವೆಂದ ಮೇಲೆ ನಾನು ಹೇಗೆ **ಕೊಡಲಿ**? –ಇತ್ಯಾದಿ

## (ಌ) ನಿಷೇಧಾರ್ಥದಲ್ಲಿ ಬರುವ ಕೆಲವು ವಿಶೇಷರೂಪಗಳು

(i) ಮಾಡನು, ಮಾಡರು, ಮಾಡಳು, ಮಾಡರು, ಮಾಡದು, ಮಾಡವು, ಮಾಡೆ, ಮಾಡಲಿ, ಮಾಡೆನು, ಮಾಡೆವು. ಇವೆಲ್ಲ '**ಮಾಡು**' ಧಾತುವಿನ ನಿಷೇಧಾರ್ಥಕ ಕ್ರಿಯಾಪದಗಳು. ಈ ನಿಷೇಧರೂಪಗಳ ಬಳಕೆಯನ್ನು ಈಗೀಗ ಕನ್ನಡದಲ್ಲಿ ಮಾಡುವುದು ಕಡಿಮೆಯಾಗಿದೆ. ಅವಕ್ಕೆ ಪ್ರತಿಯಾಗಿ '**ಇಲ್ಲ**' ಎಂಬ ಕ್ರಿಯಾರ್ಥಕಾವ್ಯಯವನ್ನು ಕೃದಂತಕ್ಕೆ ಜೋಡಿಸಿ ನಿಷೇಧರೂಪ ಹೇಳುವುದೇ ಹೆಚ್ಚು. ಉದಾಹರಣೆಗೆ ಈ ಕೆಳಗೆ ನೋಡಿರಿ–

(ii) ಅವನು ಮಾಡನು – ಎಂಬುದನ್ನು ಅವನು **ಮಾಡುವುದಿಲ್ಲ** ಮಾಡುವುದು+ಇಲ್ಲ ಎಂದರೆ ಅವನು ಮಾಡುವುದು ಎಂಬುದು **ಇಲ್ಲ**. ಹೀಗೆ ನಿಷೇಧರೂಪ ಹೇಳುತ್ತೇವೆ.

(iii) ಹೀಗೆ '**ಇಲ್ಲ**' ಎಂಬ ಕ್ರಿಯಾರ್ಥಕಾವ್ಯಯವನ್ನು ಬಳಸಿ ನಿಷೇಧರೂಪಮಾಡಿ ಹೇಳಲ್ಪಟ್ಟ ರೂಪಗಳು ಏಕವಚನ, ಬಹುವಚನಗಳಲ್ಲೂ ಮೂರು ಲಿಂಗಗಳಲ್ಲೂ ಒಂದೇ ರೀತಿಯಿರುತ್ತವೆ.

### ಪ್ರಥಮಪುರುಷದಲ್ಲಿ

(೧) **ಪುಲ್ಲಿಂಗ**
ಏಕವಚನ – **ಅವನು ಮಾಡುವುದಿಲ್ಲ** (**ಮಾಡನು** ಎಂಬ ರೂಪಕ್ಕೆ ಪ್ರತಿಯಾಗಿ)
ಬಹುವಚನ – **ಅವರು ಮಾಡುವುದಿಲ್ಲ** (**ಮಾಡರು** ಎಂಬುದಕ್ಕೆ ಪ್ರತಿಯಾಗಿ)

| | | | | |
|---|---|---|---|---|
| (೨) | **ಸ್ತ್ರೀಲಿಂಗ** | ಏಕವಚನ | – **ಅವಳು ತಿನ್ನುವುದಿಲ್ಲ** | (**ತಿನ್ನಳು** ಎಂಬುದಕ್ಕೆ ಪ್ರತಿಯಾಗಿ) |
| | | ಬಹುವಚನ | – **ಅವರು ತಿನ್ನುವುದಿಲ್ಲ** | (**ತಿನ್ನರು** ಎಂಬುದಕ್ಕೆ ಪ್ರತಿಯಾಗಿ) |
| (೩) | **ನಪುಂಸಕ ಲಿಂಗ** | ಏಕವಚನ | – **ಅದು ಬರುವುದಿಲ್ಲ** | (**ಬಾರದು** ಎಂಬುದಕ್ಕೆ ಪ್ರತಿಯಾಗಿ) |
| | | ಬಹುವಚನ | – **ಅವು ಬರುವುದಿಲ್ಲ** | (**ಬಾರವು** ಎಂಬುದಕ್ಕೆ ಪ್ರತಿಯಾಗಿ) |

## ಮಧ್ಯಮಪುರುಷದಲ್ಲಿ

(೪) ನೀನು **ನೋಡುವುದಿಲ್ಲ** (ನೋಡೆ–ಎಂಬರ್ಥದಲ್ಲಿ)
ನೀವು **ನೋಡುವುದಿಲ್ಲ** (ನೋಡರಿ–ಎಂಬರ್ಥದಲ್ಲಿ)

## ಉತ್ತಮಪುರುಷದಲ್ಲಿ

(೫) ನಾನು **ಬರೆಯುವುದಿಲ್ಲ** (ಬರೆಯೆನು–ಎಂಬರ್ಥದಲ್ಲಿ)
ನಾವು **ಬರೆಯುವುದಿಲ್ಲ** (ಬರೆಯೆವು–ಎಂಬರ್ಥದಲ್ಲಿ)

(iv) 'ಸಾಮರ್ಥ್ಯವಿಲ್ಲ'–ಎಂಬರ್ಥ ತೋರುವಾಗಲೂ, ಸಂಶಯ ತೋರುವಾಗಲೂ *ಆರನು, ಆರಳು, ಆರರು, ಆರದು, ಆರೆ, ಆರಿರಿ¶, ಆರೆನು, ಆರೆವು–ಎಂಬ ರೂಪಗಳು ಧಾತುಗಳಿಗೆ ಸೇರುವುವು. ಹೀಗೆ ಸೇರುವಾಗ ಧಾತುವಿಗೂ, ಆರನು–ಇತ್ಯಾದಿ ನಿಷೇಧ ರೂಪಗಳಿಗೂ ಮಧ್ಯದಲ್ಲಿ 'ಅಲ್' ಎಂಬುದು ಬರುವುದು.

ಉದಾಹರಣೆಗೆ:–

| | |
|---|---|
| ಊರನ್ನು ಸೇರಲಾರನು | (ಸೇರು+ಅಲ್+ಆರನು) |
| ಅವಳು ಹೋಗಲಾರಳು | (ಹೋಗು+ಅಲ್+ಆರಳು) |
| ಅವರು ತಿನ್ನಲಾರರು | (ತಿನ್ನು+ಅಲ್+ಆರರು) |
| ಅದು ಬರಲಾರದು | (ಬರು+ಅಲ್+ಆರದು) |
| ನೀನು ಬರಲಾರೆ | (ಬರು+ಅಲ್+ಆರೆ) |
| ನೀವು ಇಳಿಯಲಾರಿರಿ | (ಇಳಿ+ಅಲ್+ಆರಿರಿ¶) |
| ನಾನು ಓದಲಾರೆನು | (ಓದು+ಅಲ್+ಆರೆನು) |
| ನಾವು ಬರೆಯಲಾರೆವು | (ಬರೆ+ಅಲ್+ಆರೆವು) |

(v) ನಿಷೇಧಾರ್ಥದಲ್ಲಿ ಆಜ್ಞೆ ತೋರುವಾಗ '**ಕೂಡದು**' '**ಬೇಡ**' ಎಂಬಿವು ಧಾತುವಿನ ಕೊನೆಯಲ್ಲಿ ಬರುವುದುಂಟು.

---

* 'ಆರ್' ಎಂಬುದು 'ಸಾಮರ್ಥ್ಯ' ಎಂಬರ್ಥದ ಧಾತುವೇ ಆಗಿದೆ. ಆದರೆ ಇದರ ಕ್ರಿಯಾರೂಪಗಳು ಕೇವಲ ನಿಷೇಧಾರ್ಥದಲ್ಲಿಯೇ ಪ್ರಯೋಗಿಸಲ್ಪಡುತ್ತವೆ.

¶ ಆರಿರಿ ಎಂಬ ರೂಪವೂ ಉಂಟು.

¶ ಆರಿರಿ ಎಂಬ ರೂಪವೂ ಉಂಟು.

ಆಗ '**ಕೂಡದು**' ಬಂದಾಗ ಉಕಾರಾಂತ ಧಾತುಗಳ ಉಕಾರಕ್ಕೆ ಅಕಾರವು ಆದೇಶವಾಗಿಯೂ, '**ಇ–ಎ**' ಕಾರಾಂತಗಳಾದ ಧಾತುಗಳ ಮುಂದೆ ಅಕಾರವು ಆಗಮವಾಗಿಯೂ ಬರುವುದು. ಬೇಡ ಎಂಬುದು ಬಂದಾಗ ಧಾತುವಿನ ಮುಂದೆ '**ಉವುದು**' ಎಂಬುದು ಬರುವುದು.

ಉದಾಹರಣೆಗೆ:–

| | |
|---|---|
| ನೀನು ಬರಕೂಡದು | (ಬರು=ಬರ+ಕೂಡದು) |
| ನೀವು ಬರಕೂಡದು | (ಬರು=ಬರ+ಕೂಡದು) |
| ಅವನು ಬರಕೂಡದು | (ಬರು=ಬರ+ಕೂಡದು) |
| ಅವಳು ಬರಕೂಡದು | (ಬರು=ಬರ+ಕೂಡದು) |
| ಅವರು ಬರಕೂಡದು | (ಬರು=ಬರ+ಕೂಡದು) |
| ನೀನು ಅರಿಯಕೂಡದು | (ಅರಿ+ಅ+ಕೂಡದು) |
| ನೀವು ಅರಿಯಕೂಡದು | (ಅರಿ+ಅ+ಕೂಡದು) |
| ಅವನು ಅರಿಯಕೂಡದು | (ಅರಿ+ಅ+ಕೂಡದು) |
| ಅವಳು ಅರಿಯಕೂಡದು | (ಅರಿ+ಅ+ಕೂಡದು) |
| ನೀನು ನಡೆಯಕೂಡದು | (ನಡೆ+ಅ+ಕೂಡದು) |
| ನೀವು ನಡೆಯಕೂಡದು | (ನಡೆ+ಅ+ಕೂಡದು) |
| ಅವನು ನಡೆಯಕೂಡದು | (ನಡೆ+ಅ+ಕೂಡದು) |

(vi) '**ಬೇಡ**' ಎಂಬ ನಿಷೇಧ ರೂಪವು ಬರುವುದಕ್ಕೆ– ಉದಾಹರಣೆ:–

| | |
|---|---|
| ಅವನು ಬರುವುದು ಬೇಡ | ನೀನು ಬರುವುದು ಬೇಡ |
| ಅವಳು ಬರುವುದು ಬೇಡ | ನೀವು ತಿನ್ನುವುದು ಬೇಡ |
| ಅವರು ಬರುವುದು ಬೇಡ | ನಾನು ಹೋಗುವುದು ಬೇಡ |
| ಅದು ಬರುವುದು ಬೇಡ | ನಾವು ನಿಲ್ಲುವುದು ಬೇಡ |

'**ಬೇಡ**' ಎಂಬ ನಿಷೇಧರೂಪವು ಮಧ್ಯಮಪುರುಷ ಏಕವಚನ, ಬಹುವಚನಗಳಲ್ಲಿ ಬಂದಾಗ, '**ಕೂಡದು**' ಎಂಬ ನಿಷೇಧವಾಚಿಯು ಬಂದಾಗ ಯಾವ ರೂಪವನ್ನು ಧಾತುವು ಹೊಂದುವುದೋ ಅದೇ ರೂಪವನ್ನು ಹೊಂದುತ್ತದೆ. ಬಹುವಚನದಲ್ಲಿ 'ಬೇಡ' ಎಂಬುದರ ಮುಂದೆ '**ಇರಿ**' ಪ್ರತ್ಯಯ ಬರುವುದು.

ಉದಾಹರಣೆಗೆ:–

| | | |
|---|---|---|
| ನೀನು ಬರಬೇಡ | ನೀನು ತಿನ್ನಬೇಡ | ನೀನು ಕರೆಯಬೇಡ |
| ನೀವು ಬರಬೇಡಿರಿ | ನೀವು ತಿನ್ನಬೇಡಿರಿ | ನೀವು ಕರೆಯಬೇಡಿರಿ |

(vii) ನಿಷೇಧಾರ್ಥದಲ್ಲಿ ಇನ್ನೂ ಕೆಲವು ರೂಪಗಳನ್ನು ಗಮನಿಸಿರಿ

೧ ಆರಕ್ಕೆ **ಏರ** ೩ ಅವನು ಯಾರನ್ನೂ **ಬೇಡ**
೨ ಮೂರಕ್ಕೆ **ಇಳಿಯ** ೪ ಹಣ್ಣನ್ನು **ತಿನ್ನ**

**ಏರ, ಇಳಿಯ, ಬೇಡ, ತಿನ್ನ,** ಇವು ಕ್ರಮವಾಗಿ **ಏರು, ಇಳಿ, ಬೇಡು, ತಿನ್ನು** ಧಾತುಗಳ ನಿಷೇಧ ರೂಪಗಳು. ಇಲ್ಲಿ ಧಾತುವಿನ ಕೊನೆಯ ಸ್ವರಕ್ಕೆ ಅಕಾರವು ಎಲ್ಲ ಕಡೆಗೂ ಆದೇಶವಾಗಿ ಬಂದಿದೆ. ಈ ಅಕಾರವೇ ನಿಷೇಧಸೂಚಕ ಪ್ರತ್ಯಯವೆನಿಸಿದೆ. ಇಳಿ ಎನ್ನುವಲ್ಲಿ ಅಕಾರವು ಧಾತುವಿನ ಮುಂದೆ ಬಂದಿದೆ.

## (೬) ಸಂಭಾವನಾರ್ಥದಲ್ಲಿ ಬರುವ ಕೆಲವು ವಿಶೇಷ ರೂಪಗಳು

(i) ಸಂಭಾವನಾರ್ಥದಲ್ಲಿ ಸಾಮಾನ್ಯವಾಗಿ '**ದ**' ಎಂಬ ಪ್ರತ್ಯಯವು ಧಾತುಗಳಿಗೂ, ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವುದುಂಟು.

ಉದಾಹರಣೆಗೆ:–

| | | |
|---|---|---|
| '**ಹೋಗು**' ಧಾತು | ಏಕವಚನ | ಹೋದಾನು, ಹೋದಾಳು, ಹೋದೀತು, ಹೋದೀಯೆ, ಹೋದೇನು |
| | ಬಹುವಚನ | ಹೋದಾರು, ಹೋದಾರು, ಹೋದಾವು, ಹೋದೀರಿ, ಹೋದೇವು |
| '**ಬರು**' ಧಾತು | ಏಕವಚನ | ಬಂದಾನು, ಬಂದಾಳು, ಬಂದೀತು, ಬಂದೀಯೆ, ಬಂದೇನು |
| | ಬಹುವಚನ | ಬಂದಾರು, ಬಂದಾವು, ಬಂದೀರಿ, ಬಂದೇವು |
| '**ತಿನ್ನು**' ಧಾತು | ಏಕವಚನ | ತಿಂದಾನು, ತಿಂದಾಳು, ತಿಂದೀತು, ತಿಂದೀಯೆ, ತಿಂದೇನು |
| | ಬಹುವಚನ | ತಿಂದಾರು, ತಿಂದಾವು, ತಿಂದೀರಿ, ತಿಂದೇವು |
| '**ಇರು**' ಧಾತು | ಏಕವಚನ | ಇದ್ದಾನು, ಇದ್ದಾಳು, ಇದ್ದೀತು, ಇದ್ದೀಯೆ, ಇದ್ದೇನು |
| | ಬಹುವಚನ | ಇದ್ದಾರು, ಇದ್ದಾವು, ಇದ್ದೀರಿ, ಇದ್ದೇವು |
| '**ಬೇ**' ಧಾತು | ಏಕವಚನ | ಬೆಂದಾನು, ಬೆಂದಾಳು, ಬೆಂದೀತು, ಬೆಂದೀಯೆ, ಬೆಂದೇನು |
| | ಬಹುವಚನ | ಬೆಂದಾರು, ಬೆಂದಾವು, ಬೆಂದೀರಿ, ಬೆಂದೇವು |
| '**ಬೀಳು**' ಧಾತು | ಏಕವಚನ | ಬಿದ್ದಾನು, ಬಿದ್ದಾಳು, ಬಿದ್ದೀತು, ಬಿದ್ದೀಯೆ, ಬಿದ್ದೇನು |
| | ಬಹುವಚನ | ಬಿದ್ದಾರು, ಬಿದ್ದಾವು, ಬಿದ್ದೀರಿ, ಬಿದ್ದೇವು |
| '**ಮೀ**' ಧಾತು | ಏಕವಚನ | ಮಿಂದಾನು, ಮಿಂದಾಳು, ಮಿಂದೀತು, ಮಿಂದೀಯೆ, ಮಿಂದೇನು |
| | ಬಹುವಚನ | ಮಿಂದಾರು, ಮಿಂದಾವು, ಮಿಂದೀರಿ, ಮಿಂದೇವು |

ಮೇಲಿನ ಈ ಕ್ರಿಯಾಪದಗಳನ್ನು ನೋಡಿದಾಗ–**ಆನು, ಆಳು, ಆರು, ಈತು, ಆವು, ಈಯೆ, ಈರಿ, ಏನು, ಏವು**–ಎಂಬ ಆಖ್ಯಾತಪ್ರತ್ಯಯಕ್ಕೂ ಧಾತುವಿಗೂ ಮಧ್ಯದಲ್ಲಿ '**ದ**' ಪ್ರತ್ಯಯ ಬಂದಿರುವುದನ್ನು ಗಮನಿಸಿರಿ.

**ಬರು, ತಿನ್ನು** ಧಾತುಗಳ '**ರು**' ಮತ್ತು '**ನ್ನು**' ಅಕ್ಷರಗಳಿಗೆ ಅನುಸ್ವಾರವೂ, **ಬೇ, ಮೀ** ಇತ್ಯಾದಿ ಏಕಾಕ್ಷರ ಧಾತುಗಳ ದೀರ್ಘವು ಹ್ರಸ್ವವಾಗಿ ಅನುಸ್ವಾರದಿಂದ ಕೂಡಿ **ಮಿಂ, ಬೆಂ**

ಎಂದೂ ರೂಪ ಪಡೆಯುತ್ತವೆ, ಅಂದರೆ **ಬಂ, ತಿಂ, ಮಿಂ, ಬೆಂ** ಅಕ್ಷರಗಳ ಮುಂದೆ ದಕಾರವೂ ಅದರ ಮುಂದೆ ಆಖ್ಯಾತಪ್ರತ್ಯಯಗಳೂ ಬಂದು ಸಂಭಾವನಾರೂಪಗಳಾಗುತ್ತವೆ ಎಂದು ತಿಳಿಯಬೇಕು.

(ii) **ಕೊಡು, ಬಿಡು, ಸುಡು, ಉಡು, ತೊಡು, ಇಡು,** ಮೊದಲಾದ '**ಡು**' ಕಾರಾಂತ ಆದಿಹ್ರಸ್ವಸ್ವರದಿಂದ ಕೂಡಿದ ಧಾತುಗಳ ಸಂಭಾವನಾರೂಪಗಳು ಭೂತಕಾಲದ ರೂಪಗಳನ್ನು ಹೋಲುತ್ತವೆ.

ಉದಾಹರಣೆಗೆ:–

| | | |
|---|---|---|
| '**ಕೊಡು**' ಧಾತು | **ಏಕವಚನ** | ಕೊಟ್ಟಾನು, ಕೊಟ್ಟಾಳು, ಕೊಟ್ಟೀತು, ಕೊಟ್ಟೀಯೆ, ಕೊಟ್ಟೇನು. |
| | **ಬಹುವಚನ** | ಕೊಟ್ಟಾರು, ಕೊಟ್ಟಾರು, ಕೊಟ್ಟಾವು, ಕೊಟ್ಟೀರಿ, ಕೊಟ್ಟೇವು. |
| '**ಬಿಡು**' ಧಾತು | **ಏಕವಚನ** | ಬಿಟ್ಟಾನು, ಬಿಟ್ಟಾಳು, ಬಿಟ್ಟೀತು, ಬಿಟ್ಟೀಯೆ, ಬಿಟ್ಟೇನು |
| | **ಬಹುವಚನ** | ಬಿಟ್ಟಾರು, ಬಿಟ್ಟಾರು, ಬಿಟ್ಟಾವು, ಬಿಟ್ಟೀರಿ, ಬಿಟ್ಟೇವು. |
| '**ಸುಡು**' ಧಾತು | **ಏಕವಚನ** | ಸುಟ್ಟಾನು, ಸುಟ್ಟಾಳು, ಸುಟ್ಟೀತು, ಸುಟ್ಟೀಯೆ, ಸುಟ್ಟೇನು |
| | **ಬಹುವಚನ** | ಸುಟ್ಟಾರು, ಸುಟ್ಟಾರು, ಸುಟ್ಟಾವು, ಸುಟ್ಟೀರಿ, ಸುಟ್ಟೇವು. |
| '**ಉಡು**' ಧಾತು | **ಏಕವಚನ** | ಉಟ್ಟಾನು, ಉಟ್ಟಾಳು, ಉಟ್ಟೀತು, ಉಟ್ಟೀಯೆ, ಉಟ್ಟೇನು |
| | **ಬಹುವಚನ** | ಉಟ್ಟಾರು, ಉಟ್ಟಾರು, ಉಟ್ಟಾವು, ಉಟ್ಟೀರಿ, ಉಟ್ಟೇವು. |

ಇವುಗಳ ಹಾಗೆಯೇ ಉಳಿದ ಧಾತುರೂಪಗಳನ್ನು ಅರಿಯಬೇಕು

(iii) **ಡು**ಕಾರಾಂತಗಳಾದ–**ಮಾಡು, ಕೂಡು, ಬೇಡು, ತೀಡು** ಮೊದಲಾದ **ಆದಿ ದೀರ್ಘಸ್ವರ**ದಿಂದ ಕೂಡಿದ ಧಾತುಗಳ ರೂಪಗಳು ಮೇಲೆ ಹೇಳಿದ ರೂಪಗಳ ಹಾಗೆ ಆಗುವುದಿಲ್ಲ. ಅವುಗಳ ರೂಪಗಳನ್ನು ಈ ಕೆಳಗೆ ನೋಡಿರಿ.

ಉದಾಹರಣೆಗೆ:– ಮಾಡಾನು (ಮಾಡಿಯಾನು), ಮಾಡಾಳು (ಮಾಡಿಯಾಳು), ಮಾಡಾರು (ಮಾಡಿಯಾರು), ಮಾಡೀತು, ಮಾಡಾವು, ಮಾಡಿಯಾವು–ಇತ್ಯಾದಿ.

ಮೇಲಿನ ಉದಾಹರಣೆಗಳಲ್ಲಿ ಮಾಡಾನು ಎಂಬುದು ಮಾಡಿಯಾನು ಎಂದೂ ಆಗುವುದು. ಆಗ ಧಾತುವಿನ ಉಕಾರಕ್ಕೆ ಇಕಾರಾದೇಶವಾಗುವುದು. ಸಂಧಿಯ ನಿಯಮದಂತೆ ಯಕಾರವು ಆಗಮವಾಗಿ ಬಂದು ರೂಪಗಳು ಸಿದ್ಧಿಸುವುವು. ಇದರ ಹಾಗೆ ಉಳಿದ ಧಾತುಗಳ ಸಿದ್ಧರೂಪ ಗಳನ್ನು ತಿಳಿಯಬೇಕು.

(iv) **ಸಾಮಾನ್ಯವಾಗಿ ಸಂಭಾವನಾರ್ಥಕ ಕ್ರಿಯಾಪದದ ರೂಪಗಳು ಭೂತಕಾಲದ ರೂಪಗಳನ್ನು ಹೋಲುತ್ತವೆ.** ಕೆಳಗೆ ಕೊಟ್ಟಿರುವ ಭೂತಕಾಲದ ಮತ್ತು ಸಂಭಾವನಾರ್ಥದ ಕ್ರಿಯಾಪದ ರೂಪಗಳ ಹೋಲಿಕೆಯನ್ನು ಗಮನಿಸಿರಿ. (ಪ್ರಥಮಪುರುಷ ಪುಲ್ಲಿಂಗ ರೂಪಗಳನ್ನು ಮಾತ್ರ ಕೊಟ್ಟಿದೆ. ಉಳಿದವುಗಳನ್ನು ಇವುಗಳ ಹಾಗೆಯೇ ತಿಳಿಯಿರಿ.)

## ಪ್ರಥಮಪುರುಷ ಪುಲ್ಲಿಂಗ

| | | ಭೂತಕಾಲ | | | ಸಂಭಾವನಾರ್ಥ | | |
|---|---|---|---|---|---|---|---|
| **ಧಾತು** | | **ಏಕವಚನ** | | **ಬಹುವಚನ** | **ಏಕವಚನ** | | **ಬಹುವಚನ** |
| **ತಿನ್ನು** | – | ತಿಂದನು | – | ತಿಂದರು | ತಿಂದಾನು | – | ತಿಂದಾರು |
| **ಬರು** | – | ಬಂದನು | – | ಬಂದರು | ಬಂದಾನು | – | ಬಂದಾರು |
| **ತಿರಿ** | – | ತಿರಿದನು | – | ತಿರಿದರು | ತಿರಿದಾನು | – | ತಿರಿದಾರು |
| **ಹುರಿ** | – | ಹುರಿದನು | – | ಹುರಿದರು | ಹುರಿದಾನು | – | ಹುರಿದಾರು |
| **ಸುರಿ** | – | ಸುರಿದನು | – | ಸುರಿದರು | ಸುರಿದಾನು | – | ಸುರಿದಾರು |
| **ತಿಳಿ** | – | ತಿಳಿದನು | – | ತಿಳಿದರು | ತಿಳಿದಾನು | – | ತಿಳಿದಾರು |
| **ಬಿಡು** | – | ಬಿಟ್ಟನು | – | ಬಿಟ್ಟರು | ಬಿಟ್ಟಾನು | – | ಬಿಟ್ಟಾರು |
| **ತೊಡು** | – | ತೊಟ್ಟನು | – | ತೊಟ್ಟರು | ತೊಟ್ಟಾನು | – | ತೊಟ್ಟಾರು |
| **ಕೊಡು** | – | ಕೊಟ್ಟನು | – | ಕೊಟ್ಟರು | ಕೊಟ್ಟಾನು | – | ಕೊಟ್ಟಾರು |
| **ಇಡು** | – | ಇಟ್ಟನು | – | ಇಟ್ಟರು | ಇಟ್ಟಾನು | – | ಇಟ್ಟಾರು |
| **ತೋಡು** | – | ತೋಡಿದನು | – | ತೋಡಿದರು | ತೋಡಿಯಾನು | – | ತೋಡಿಯಾರು |
| | | | | | (ತೋಡಾನು | – | ತೋಡಾರು) |
| **ಮಾಡು** | – | ಮಾಡಿದನು | – | ಮಾಡಿದರು | ಮಾಡಾನು | – | ಮಾಡಾರು |
| **ತರು** | – | ತಂದನು | – | ತಂದರು | ತಂದಾನು | – | ತಂದಾರು |
| **ಕಾಣು** | – | ಕಂಡನು | – | ಕಂಡರು | ಕಂಡಾನು | – | ಕಂಡಾರು |
| **ಬೇ** | – | ಬೆಂದನು | – | ಬೆಂದರು | ಬೆಂದಾನು | – | ಬೆಂದಾರು |
| **ಕಡಿ** | – | ಕಡಿದನು | – | ಕಡಿದರು | ಕಡಿದಾನು | – | ಕಡಿದಾರು |

ಕ್ರಿಯಾಪದಗಳ ಅರ್ಥದಲ್ಲಿ ಬರುವ ಕೆಲವು ಬೇರೆ ಪದಗಳು (ಕ್ರಿಯಾರ್ಥಕಾವ್ಯಯಗಳು).

(i) ಅವನಿಗೆ ವಿವೇಕ **ಉಂಟು***

(ii) ನನಗೆ ಸ್ವಲ್ಪ ಹಣ **ಬೇಕು**

(iii) ಅವನಿಗೆ ಯಾವುದೂ **ಬೇಡ**

(iv) ನನ್ನಲ್ಲಿ ಹಣ **ಇಲ್ಲ**

(v) ಅದು ನನ್ನ ಮನೆ **ಅಲ್ಲ**

(vi) ಅವು ಜಿಂಕೆಗಳೇ **ಹೌದು (ಅಹುದು)**

*ಉಂಟು–ಎಂಬುದು 'ಉಳ್' ಧಾತುವಿನಿಂದ ನಿಷ್ಪನ್ನವಾದ ರೂಪವೆಂದು ಕೆಲವರ ಮತ. ಆದರೆ ಇದು ಲಿಂಗವಚನಾದಿಗಳಿಂದ ವ್ಯತ್ಯಾಸವಾಗುವ ಶಬ್ದರೂಪವಾದ್ದರಿಂದ ಇದನ್ನು ಕ್ರಿಯಾರ್ಥಕಾವ್ಯಯವೆಂದೂ ಕೆಲವರು ಅಭಿಪ್ರಾಯ ಪಡುತ್ತಾರೆ.

ಮೇಲೆ ಹೇಳಿದ ಇಂಥ–**ಬೇಕು, ಬೇಡ, ಇಲ್ಲ, ಅಲ್ಲ, ಉಂಟು, ಹೌದು**–ಮೊದಲಾದ ಪದಗಳ ಪ್ರಯೋಜನವು ಹೆಚ್ಚು. ಇವು ಯಾವಾಗಲೂ ತಮ್ಮ ರೂಪದಲ್ಲಿ ವ್ಯತ್ಯಾಸಗೊಳ್ಳುವುದಿಲ್ಲ. ಇದನ್ನು **ಕ್ರಿಯೆಯ ಅರ್ಥಕೊಡುವ 'ಅವ್ಯಯಗಳು'** ಎನ್ನುತ್ತಾರೆ.

**(68) ಕ್ರಿಯಾರ್ಥಕಾವ್ಯಯಗಳು:– ಕ್ರಿಯಾಪದದ ಅರ್ಥಕೊಡುವ ಬೇಕು, ಬೇಡ, ಉಂಟು, ಇಲ್ಲ, ಅಲ್ಲ, ಸಾಕು, ಹೌದು–ಇತ್ಯಾದಿ ಅವ್ಯಯಗಳನ್ನು ಕ್ರಿಯಾರ್ಥಕಾವ್ಯಯಗಳೆನ್ನುವರು.**

ಸಾಮಾನ್ಯವಾಗಿ ಈ ಕ್ರಿಯಾರ್ಥಕಾವ್ಯಯಗಳು ಸ್ವತಂತ್ರವಾಗಿಯೂ, ಕೆಲವು ಸಲ ತಮ್ಮ ಹಿಂದೆ ಇನ್ನೊಂದು ಕ್ರಿಯೆಯಿಂದ ಕೂಡಿ ಪ್ರಯೋಗಗೊಳ್ಳುವುದೂ ಉಂಟು. ಅಥವಾ ತಮ್ಮ ಮುಂದೆ ಇನ್ನೊಂದು ಕ್ರಿಯಾಪದದಿಂದ ಕೂಡಿ ಪ್ರಯೋಗಗೊಳ್ಳುವುದೂ ಉಂಟು.

ಉದಾಹರಣೆಗೆ:–

(i) **ಹಿಂದೆ ಕ್ರಿಯೆ ಇರುವುದಕ್ಕೆ–**
ಅಡಿಗೆ ಆಗಿಲ್ಲ. (ಆಗಿ+ಇಲ್ಲ)
ಹಣ್ಣು ತಿನ್ನಬೇಕು. (ತಿನ್ನ+ಬೇಕು

(ii) **ಮುಂದೆ ಕ್ರಿಯೆ ಇರುವುದಕ್ಕೆ–**
ನನಗೆ ಅದು ಬೇಡವಾಗಿದೆ. (ಬೇಡ+ಆಗಿದೆ)
ಹಣ ಬೇಕಾಗಿದೆ. (ಬೇಕು+ಆಗಿದೆ)

(iii) **ಸ್ವತಂತ್ರವಾಗಿ ಪ್ರಯೋಗವಾಗುವುದಕ್ಕೆ–**
ನನ್ನಲ್ಲಿ ಹಣ ಇಲ್ಲ.
ಹತ್ತು ರೂಪಾಯಿ ಬೇಕು.

ಇನ್ನೂ ಕೆಲವು ಉದಾಹರಣೆಗಳನ್ನು ನೋಡಿರಿ–

(೧) ಅದಕ್ಕೆ ಬೆಲೆ ಉಂಟಾಯಿತು (ಉಂಟು+ಆಯಿತು)
(೨) ಅವನಿಗೆ ಅದು ಬೇಕಾಯಿತು (ಬೇಕು+ಆಯಿತು)
(೩) ನನಗೆ ಊಟ ಸಾಕಾಗಿತ್ತು (ಸಾಕು+ಆಗಿ+ಇತ್ತು)
(೪) ರಾಜನು ಹೌದೆಂದನು (ಹೌದು+ಎಂದನು)
(೫) ಅವನಲ್ಲಿ ಅದು ಇಲ್ಲದಿಲ್ಲ (ಇಲ್ಲದೆ+ಇಲ್ಲ)
(೬) ಅವನಿಗೆ ಬೇಕಾಗಿಲ್ಲ (ಬೇಕು+ಆಗಿ+ಇಲ್ಲ)
(೭) ನನಗೆ ಸಾಕಾಗಿದೆ (ಸಾಕು+ಆಗಿ+ಇದೆ)
(೮) ನನ್ನಲ್ಲಿ ಇಲ್ಲವಾಗಿದೆ (ಇಲ್ಲ+ಆಗಿದೆ)
(೯) ಆಸೆಯುಂಟಾಗಿದೆ (ಉಂಟು+ಆಗಿದೆ)
(೧೦) ನಾವು ಮಾಡುವುದುಂಟು (ಮಾಡುವುದು+ಉಂಟು)

ಮೇಲಿನ ಉದಾಹರಣೆಗಳನ್ನು ನೋಡಿದರೆ, ಈ ಕ್ರಿಯಾರ್ಥಕಾವ್ಯಯಗಳ ಮುಂದೆ 'ಆಗು' ಧಾತುವಿನ ಕ್ರಿಯಾಪದಗಳು ಸೇರುವುದುಂಟು. ಅಥವಾ ಇವುಗಳ ಹಿಂದೆ ಅನೇಕ ಧಾತುಗಳ ಅಪೂರ್ಣಕ್ರಿಯೆಗಳು, ಕೃದಂತ ಭಾವನಾಮಗಳು ಸೇರುವುದೂ ಉಂಟು.

# VI – ಕರ್ಮಣಿ ಪ್ರಯೋಗಗಳು

ಇದುವರೆಗೆ ಕರ್ತರಿ ಪ್ರಯೋಗದಲ್ಲಿ ಸಕರ್ಮಕ, ಅಕರ್ಮಕ ಕ್ರಿಯಾಪದಗಳ ರೂಪಗಳ ಬಗೆಗೆ ಅನೇಕ ವಿಷಯಗಳನ್ನು ತಿಳಿದಿದ್ದೀರಿ. ಈ ಕೆಳಗಿನ ವಾಕ್ಯಗಳನ್ನು ಗಮನಿಸಿರಿ.

| ೧ ನೆಯ ಗುಂಪು | ೨ ನೆಯ ಗುಂಪು |
|---|---|
| (i) ಭೀಮನು ಅನ್ನವನ್ನು ಉಂಡನು. | (i) ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು. |
| (ii) ರಾಮನು ರಾವಣನನ್ನು ಕೊಂದನು. | (ii) ರಾಮನಿಂದ ರಾವಣನು ಕೊಲ್ಲಲ್ಪಟ್ಟನು. |
| (iii) ಅಣ್ಣನು ನನ್ನನ್ನು ಕರೆದನು. | (iii) ಅಣ್ಣನಿಂದ ನಾನು ಕರೆಯಲ್ಪಟ್ಟೆನು. |
| (iv) ಮಕ್ಕಳು ಪುಸ್ತಕವನ್ನು ಓದಿದರು. | (iv) ಮಕ್ಕಳಿಂದ ಪುಸ್ತಕವು ಓದಲ್ಪಟ್ಟಿತು. |
| (v) ಉಪಾಧ್ಯಾಯರು ಪಾಠವನ್ನು ಹೇಳಿದರು. | (v) ಉಪಾಧ್ಯಾಯರಿಂದ ಪಾಠವು ಹೇಳಲ್ಪಟ್ಟಿತು. |
| (vi) ಮನುಷ್ಯನು ಚಂದ್ರನನ್ನು ಕಂಡನು. | (vi) ಮನುಷ್ಯನಿಂದ ಚಂದ್ರನು ಕಾಣಲ್ಪಟ್ಟನು. |
| (vii) ಜನರು ಜಾತ್ರೆಯನ್ನು ಮಾಡಿದರು. | (vii) ಜನರಿಂದ ಜಾತ್ರೆಯು ಮಾಡಲ್ಪಟ್ಟಿತು. |

ಇಲ್ಲಿ ಒಂದನೆಯ ಮತ್ತು ಎರಡನೆಯ ಗುಂಪಿನ ವಾಕ್ಯಗಳು ಒಂದೇ ಅರ್ಥವನ್ನು ಕೊಡುವಂಥವುಗಳು. ಆದರೂ ಕರ್ತೃ, ಕರ್ಮ, ಕ್ರಿಯಾಪದಗಳ ಮೇಲೆ ಸೇರಿರುವ ಪ್ರತ್ಯಯಗಳು ಬೇರೆ ಬೇರೆಯಾಗಿವೆ. ಒಂದನೆಯ ಗುಂಪಿನಲ್ಲಿರುವ ಭೀಮನು, ರಾಮನು, ಅಣ್ಣನು–ಇತ್ಯಾದಿ ಕರ್ತೃಪದಗಳು ಪ್ರಥಮಾವಿಭಕ್ತ್ಯಂತವಾಗಿವೆ. ಎರಡನೆಯ ಗುಂಪಿನಲ್ಲಿರುವ ಅನ್ನವನ್ನು, ರಾವಣನನ್ನು–ಮುಂತಾದ ಕರ್ಮಪದಗಳು ದ್ವಿತೀಯಾಂತವಾಗಿವೆ. ಎರಡನೆಯ ಗುಂಪಿನಲ್ಲಿರುವ ಕರ್ಮಪದಗಳು ಪ್ರಥಮಾವಿಭಕ್ತ್ಯಂತವಾಗಿವೆ. ಉಂಡನು–ಕೊಂದನು ಎಂಬ ಕ್ರಿಯಾಪದಗಳು ಉಣ್ಣಲ್ಪಟ್ಟಿತು (ಉಣ್ಣು+ಅಲ್ಪಡು+ದ+ಇತು) ಕೊಲ್ಲಲ್ಪಟ್ಟನು (ಕೊಲ್ಲು+ಅಲ್ಪಡು+ದ+ಅನು) ಇತ್ಯಾದಿ ಕ್ರಿಯಾಪದಗಳಲ್ಲಿ ಧಾತುವಿನ ಮುಂದೆ 'ಅಲ್ಪಡು' ಪ್ರತ್ಯಯವು ಬಂದು ಕ್ರಿಯಾಪದವಾಗಿದೆ. ಇಂಥ ಪ್ರಯೋಗಗಳನ್ನೇ ಕರ್ಮಣಿ ಪ್ರಯೋಗಗಳೆನ್ನುವರು.

**(69) ಕರ್ಮಣಿಪ್ರಯೋಗ*:– ಸಕರ್ಮಕ ಧಾತುಗಳ ಮೇಲೆ ಅಲ್ಪಡು ಪ್ರತ್ಯಯವು ಸೇರಿದ ಮೇಲೆ ಕಾಲಸೂಚಕ ಪ್ರತ್ಯಯವೂ, ಆಖ್ಯಾತಪ್ರತ್ಯಯಗಳೂ ಸೇರಿ ಕರ್ಮಣಿ ಪ್ರಯೋಗಗಳಾಗುತ್ತವೆ.**

* ಕನ್ನಡ ಭಾಷೆಯಲ್ಲಿ ಕರ್ಮಣಿಪ್ರಯೋಗಗಳ ಬಳಕೆ ತೀರಾ ಕಡಿಮೆ. ಆದರೂ ಸಂಸ್ಕೃತ ಭಾಷೆಯಲ್ಲಿ ವಿಶೇಷವಾಗಿರುವ ಈ ಪ್ರಯೋಗಗಳನ್ನು ಅನುಕರಣ ಮಾಡಿ ಕನ್ನಡದಲ್ಲಿಯೂ ಕೆಲವು ಮಾಡಲಾಗುತ್ತಿದೆ. ಸ್ಥೂಲವಾಗಿ ಈ ವಿಷಯ ತಿಳಿದರೆ ಸಾಕು.

ಕರ್ಮಣಿ ಪ್ರಯೋಗದಲ್ಲಿ ಕರ್ತೃಪದವು ತೃತೀಯಾಂತವಾಗಿಯೂ, ಕರ್ಮಪದದ ಪ್ರಥಮಾಂತವಾಗಿಯೂ ಇರುತ್ತವೆ.

ಉದಾಹರಣೆಗೆ:–

**'ಮಾಡು' ಧಾತು ವರ್ತಮಾನಕಾಲ**

| | | |
|---|---|---|
| ಪ್ರಥಮಪುರುಷ–ಪುಲ್ಲಿಂಗ | – | ಮಾಡು+ಅಲ್ಪಡು+ಉತ್ತ+ಆನೆ = ಮಾಡಲ್ಪಡುತ್ತಾನೆ. |
| ಪ್ರಥಮಪುರುಷ–ಸ್ತ್ರೀಲಿಂಗ | – | ಮಾಡು+ಅಲ್ಪಡು+ಉತ್ತ+ಆಳೆ = ಮಾಡಲ್ಪಡುತ್ತಾಳೆ. |
| ಪಥಮಪುರುಷ–ನಪುಂಸಕಲಿಂಗ | – | ಮಾಡು+ಅಲ್ಪಡು+ಉತ್ತ+ಅದೆ = ಮಾಡಲ್ಪಡುತ್ತದೆ. |
| ಮಧ್ಯಮಪುರುಷ | – | ಮಾಡು+ಅಲ್ಪಡು+ಉತ್ತ+ಈಯೆ = ಮಾಡಲ್ಪಡುತ್ತೀಯೆ. |
| ಉತ್ತಮಪುರುಷ | – | ಮಾಡು+ಅಲ್ಪಡು+ಉತ್ತ+ಏನೆ = ಮಾಡಲ್ಪಡುತ್ತೇನೆ. |

ಇದರಂತೆ ಮಾಡಲ್ಪಡುತ್ತಾರೆ, ಮಾಡಲ್ಪಡುತ್ತವೆ, ಮಾಡಲ್ಪಡುತ್ತೀರಿ, ಮಾಡಲ್ಪಡುತ್ತೇವೆ ಇತ್ಯಾದಿ ಬಹುವಚನ ರೂಪಗಳನ್ನು ತಿಳಿಯಬೇಕು.

**ಭೂತ ಮತ್ತು ಭವಿಷ್ಯತ್ ಕಾಲದ ಕರ್ಮಣಿ ಪ್ರಯೋಗದ ಸಿದ್ಧರೂಪಗಳು:**

ಉದಾಹರಣೆಗೆ:– '**ಕರೆ**' ಧಾತು

| ಭೂತಕಾಲ | | | ಭವಿಷ್ಯತ್ಕಾಲ | | |
|---|---|---|---|---|---|
| ಕರೆಯಲ್ಪಟ್ಟನು | – | ಕರೆಯಲ್ಪಟ್ಟರು | ಕರೆಯಲ್ಪಡುವನು | – | ಕರೆಯಲ್ಪಡುವರು |
| ಕರೆಯಲ್ಪಟ್ಟಳು | – | ಕರೆಯಲ್ಪಟ್ಟರು | ಕರೆಯಲ್ಪಡುವಳು | – | ಕರೆಯಲ್ಪಡುವರು |
| ಕರೆಯಲ್ಪಟ್ಟಿತು | – | ಕರೆಯಲ್ಪಟ್ಟವು | ಕರೆಯಲ್ಪಡುವುದು | – | ಕರೆಯಲ್ಪಡುವುವು |
| ಕರೆಯಲ್ಪಟ್ಟೆ | – | ಕರೆಯಲ್ಪಟ್ಟಿರಿ | ಕರೆಯಲ್ಪಡುವೆ | – | ಕರೆಯಲ್ಪಡುವಿರಿ |
| ಕರೆಯಲ್ಪಟ್ಟೆನು | – | ಕರೆಯಲ್ಪಟ್ಟೆವು | ಕರೆಯಲ್ಪಡುವೆನು | – | ಕರೆಯಲ್ಪಡುವೆವು |

(ವಿಧ್ಯರ್ಥ–ನಿಷೇಧಾರ್ಥ–ಸಂಭಾವನಾರ್ಥ ರೂಪಗಳನ್ನು ಇದರಂತೆಯೇ ತಿಳಿಯಬೇಕು. ಅಲ್ಲದೆ ಈ ರೂಪಗಳು ಅಷ್ಟೊಂದು ಪ್ರಸಿದ್ಧವೂ ಅಲ್ಲ.)

## VII – ಕರ್ಮಣಿ ಪ್ರಯೋಗದಲ್ಲಿ ಕ್ರಿಯಾಪದದ ಲಿಂಗವ್ಯವಸ್ಥೆ

| ಕರ್ತರಿ ಪ್ರಯೋಗ | ಕರ್ಮಣಿ ಪ್ರಯೋಗ |
|---|---|
| ರಾಮನು ಹೊಲವನ್ನು ಕೊಂಡನು | ರಾಮನಿಂದ ಹೊಲವು ಕೊಳ್ಳಲ್ಪಟ್ಟಿತು |
| ಭೀಮನು ಅನ್ನವನ್ನು ಉಂಡನು | ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು |

ಮೇಲಿನ ವಾಕ್ಯಗಳಲ್ಲಿ ಕರ್ತರಿ ಪ್ರಯೋಗದಲ್ಲಿರುವ ರಾಮನು–ಭೀಮನು–ಎಂಬ ಈ ಕರ್ತೃಪದಗಳು ಪುಲ್ಲಿಂಗಗಳಾಗಿದ್ದು, ಈ ಕರ್ತೃಪದದ ಲಿಂಗವನ್ನೇ–ಕೊಂಡನು, ಉಂಡನು ಎಂಬ ಕ್ರಿಯಾಪದಗಳು ಹೊಂದಿ ಅವೂ ಪುಲ್ಲಿಂಗಗಳಾಗಿವೆ. ಕರ್ಮಣಿ ಪ್ರಯೋಗದಲ್ಲಿ ಹೀಗಾಗುವುದಿಲ್ಲ. ಅಲ್ಲಿ ಕ್ರಿಯಾಪದಗಳಾದ ಕೊಳ್ಳಲ್ಪಟ್ಟಿತು, ಉಣ್ಣಲ್ಪಟ್ಟಿತು – ಎಂಬ

ಕ್ರಿಯಾಪದಗಳು ಹೊಲವು, ಅನ್ನವು ಎಂಬ ಕರ್ಮಪದಗಳ ಲಿಂಗವನ್ನು ಎಂದರೆ– ನಪುಂಸಕಲಿಂಗವನ್ನು ಹೊಂದಿವೆ.

**(70) ಕ್ರಿಯಾಪದಕ್ಕೆ ಕರ್ತರಿಪ್ರಯೋಗದಲ್ಲಿ (ಸಕರ್ಮಕ, ಅಕರ್ಮಕ ಕರ್ತರಿ ಪ್ರಯೋಗಗಳಲ್ಲಿ) ಕರ್ತೃವಿನ ಲಿಂಗವಚನಗಳೂ, ಕರ್ಮಣಿ ಪ್ರಯೋಗದಲ್ಲಿ ಕರ್ಮಪದದ ಲಿಂಗವಚನಗಳೂ ಬರುತ್ತವೆ.**

ಉದಾಹರಣೆಗೆ:–

| | | | |
|---|---|---|---|
| **ಕರ್ತರಿ** | – | ಶಂಕರನು ಊರನ್ನು **ಸೇರಿದನು.** | (ಪುಲ್ಲಿಂಗ) |
| **ಕರ್ಮಣಿ** | – | ಶಂಕರನಿಂದ ಊರು **ಸೇರಲ್ಪಟ್ಟಿತು.** | (ನಪುಂಸಕಲಿಂಗ) |
| **ಕರ್ತರಿ** | – | ಕವಿಯು ಕಾವ್ಯವನ್ನು **ಬರೆಯುತ್ತಾನೆ.** | (ಪುಲ್ಲಿಂಗ) |
| **ಕರ್ಮಣಿ** | – | ಕವಿಯಿಂದ ಕಾವ್ಯವು **ಬರೆಯಲ್ಪಡುತ್ತದೆ.** | (ನಪುಂಸಕಲಿಂಗ) |
| **ಕರ್ತರಿ** | – | ತಾಯಿಯು ಹಾಲನ್ನು **ಕೊಡುವಳು.** | (ಸ್ತ್ರೀಲಿಂಗ) |
| **ಕರ್ಮಣಿ** | – | ತಾಯಿಯಿಂದ ಹಾಲು **ಕೊಡಲ್ಪಡುವುದು.** | (ನಪುಂಸಕಲಿಂಗ) |
| **ಕರ್ತರಿ** | – | ಅವನು ನನ್ನನ್ನು **ಹೊಡೆದನು.** | (ಪುಲ್ಲಿಂಗ) |
| **ಕರ್ಮಣಿ** | – | ಅವನಿಂದ ನಾನು **ಹೊಡೆಯಲ್ಪಟ್ಟೆನು.** | (ಪುಲ್ಲಿಂಗ) |
| **ಕರ್ತರಿ** | – | ತಂದೆಯು ಮಗುವನ್ನು **ರಕ್ಷಿಸುವನು.** | (ಪುಲ್ಲಿಂಗ) |
| **ಕರ್ಮಣಿ** | – | ತಂದೆಯಿಂದ ಮಗವು **ರಕ್ಷಿಸಲ್ಪಡುವುದು.** | (ನಪುಂಸಕಲಿಂಗ) |

**ಒಂದು ಕ್ರಿಯೆಗೆ ಅನೇಕ ಕರ್ತೃಗಳು ಇದ್ದಾಗ ಕ್ರಿಯಾಪದದ ರೂಪ ಹೇಗಾಗುತ್ತದೆ?**

(೧) ಆನೆಯೂ, ಕುದುರೆಯೂ, ಒಂಟೆಯೂ, ಮನುಷ್ಯರೂ **ಬಂದರು.**

(೨) ಮನುಷ್ಯರೂ, ಕುದುರೆಗಳೂ, ಆನೆಗಳೂ, ದನಗಳೂ **ಬಂದವು.**

ಮೇಲಿನ ವಾಕ್ಯಗಳಲ್ಲಿ '**ಬಂದರು**' ಎಂಬ ಕ್ರಿಯಾಪದವನ್ನು ವಿಚಾರಿಸಿ ನೋಡಿರಿ. ಈ ಕ್ರಿಯಾಪದಕ್ಕೆ ಕರ್ತೃಸ್ಥಾನದಲ್ಲಿ ಆನೆಯೂ, ಕುದುರೆಯೂ, ಒಂಟೆಯೂ, ಮನುಷ್ಯರೂ ಎಂಬ ನಾಲ್ಕು ಬಗೆಯ ಕರ್ತೃಪದಗಳಿವೆ. ಇವುಗಳಲ್ಲಿ ಆನೆ, ಕುದುರೆ, ಒಂಟೆ ಇವು ನಪುಂಸಕ ಲಿಂಗಗಳು. ಮನುಷ್ಯರು ಎಂಬ ಕರ್ತೃಪದ ಪುಲ್ಲಿಂಗವಾಗಿ ಕೊನೆಯ ಕರ್ತೃಪದವಾಗಿದೆ. ಆದ್ದರಿಂದ '**ಬಂದರು**' ಎಂಬ ಕ್ರಿಯಾಪದವು ಕೊನೆಯ ಕರ್ತೃಪದವಾದ ಪುಲ್ಲಿಂಗದ ಲಿಂಗವನ್ನೇ ಹೊಂದಿದೆ.

ಎರಡನೆಯ ವಾಕ್ಯದಲ್ಲಿ ಮನುಷ್ಯರು, ಆನೆಗಳು, ಕುದುರೆಗಳು, ದನಗಳು–ಎಂಬ ನಾಲ್ಕು ಕರ್ತೃಪದಗಳು '**ಬಂದವು**' ಎಂಬ ಕ್ರಿಯಾಪದಕ್ಕೆ ಇವೆ. ಮನುಷ್ಯ ಎಂಬ ಮೊದಲನೆಯ ಪದ ಪುಲ್ಲಿಂಗವಾಗಿದ್ದು ಉಳಿದ ಮೂರು ನಪುಂಸಕಲಿಂಗಗಳಾಗಿವೆ. ಕೊನೆಯ ಕರ್ತೃಪದವಾದ

ದನಗಳು ಎಂಬುದು ನಪುಂಸಕಲಿಂಗವೇ ಆಗಿದ್ದು '**ಬಂದವು**' ಎಂಬ ಕ್ರಿಯಾಪದವೂ ನಪುಂಸಕ ಲಿಂಗವೇ ಆಗಿದೆ. ಅದ್ದರಿಂದ–

**(71) ಭಿನ್ನಭಿನ್ನವಾದ ಅನೇಕ ಕರ್ತೃಪದಗಳು ಒಂದು ಕ್ರಿಯೆಗೆ ಇರುವಾಗ ಕೊನೆಯ ಕರ್ತೃಪದದ ಲಿಂಗವೇ ಕ್ರಿಯಾಪದಕ್ಕೆ ಬರುವುದು.**

ಉದಾಹರಣೆಗೆ:– ಬೇಟೆಗಾರನೂ, ನಾಯಿಗಳೂ **ಬಂದವು.** (ನಪುಂಸಕಲಿಂಗ)
ನಾಯಿಗಳೂ, ಬೇಟೆಗಾರನೂ **ಬಂದರು.** (ಪುಲ್ಲಿಂಗ)
ಹಸುವೂ, ಎತ್ತೂ, ಹುಡುಗನೂ **ಬಂದರು.** (ಪುಲ್ಲಿಂಗ)
ಹುಡುಗನೂ, ಹಸುವೂ, ಎತ್ತೂ **ಬಂದವು.** (ನಪುಂಸಕಲಿಂಗ)

**ಸರ್ವನಾಮಗಳು ಕರ್ತೃಪದವಾಗಿದ್ದಾಗ ಕ್ರಿಯಾಪದದ ರೂಪಗಳು ಹೇಗಾಗುತ್ತವೆ?**

(ಅ) ಅವನೂ, ನೀನೂ, ಕೂಡಿ **ಬಂದಿರಿ.**
(ಆ) ಅವಳೂ, ನೀವೂ, ಒಟ್ಟಿಗೆ **ಬಂದಿರಿ.**
(ಇ) ನೀನೂ, ಆತನೂ ಕೂಡಿ **ಹೋದಿರಿ.**

ಮೇಲಿನ ವಾಕ್ಯಗಳಲ್ಲಿ '**ಅವನು**' ಎಂಬ ಸರ್ವನಾಮವು ಮೊದಲನೆಯ ವಾಕ್ಯದಲ್ಲಿದ್ದು ಕರ್ತೃಪದವಾಗಿದೆ. ಅದು ಪ್ರಥಮ ಪುರುಷ ಪುಲ್ಲಿಂಗವಾಗಿದೆ. ಎರಡನೆಯ ಕರ್ತೃವಾದ '**ನೀನು**' ಎಂಬುದು ಮಧ್ಯಮ ಪುರುಷ. ಕ್ರಿಯಾಪದವಾದ '**ಬಂದಿರಿ**' ಎಂಬುದೂ ಮಧ್ಯಮ ಪುರುಷವೇ ಆಗಿದೆ.

೨ ನೆಯ ವಾಕ್ಯದಲ್ಲಿ '**ಅವಳು**' ಎಂಬ ಕರ್ತೃಪದ ಪ್ರಥಮ ಪುರುಷ ಸರ್ವನಾಮ, ನೀವು ಎಂಬುದು ಮಧ್ಯಮ ಪುರುಷ. '**ಬಂದಿರಿ**' ಎಂಬ ಕ್ರಿಯಾಪದವೂ ಕೂಡ ಮಧ್ಯಮ ಪುರುಷವೇ ಆಗಿದೆ.

೩ ನೆಯ ವಾಕ್ಯದಲ್ಲಿ '**ನೀನು**' ಎಂಬ ಕರ್ತೃಪದ ಮಧ್ಯಮ ಪುರುಷ, '**ಆತನು**' ಎಂಬ ಕರ್ತೃ ಪದದ ಪ್ರಥಮ ಪುರುಷ, ಕ್ರಿಯಾಪದವೂ ಕೂಡ ಮಧ್ಯಮ ಪುರುಷವೇ ಆಯಿತು.

**(72) ನೀನು ಎಂಬ ಮಧ್ಯಮ ಪುರುಷ ಸರ್ವನಾಮವು ಕರ್ತೃವಾಗಿ, ಜೊತೆಗೆ ಪ್ರಥಮ ಪುರುಷ ಸರ್ವನಾಮದ ಕರ್ತೃಪದ ಬೇರೆ ಇದ್ದರೂ ಕ್ರಿಯಾ ಪದವು ಮಧ್ಯಮ ಪುರುಷದಲ್ಲಿ ಇರುತ್ತದೆ.**

ಉದಾಹರಣೆಗೆ:– ನೀನೂ ರಾಮನೂ **ಬಂದಿರಿ.**
ರಾಮನೂ ನೀನೂ **ಬಂದಿರಿ.**
ಸೀತೆಯು, ರಾಮನೂ, ನೀನೂ **ಬಂದಿರಿ.**

ಇದರಂತೆಯೇ

**(73) ನಾನು ಎಂಬ ಉತ್ತಮ ಪುರುಷ ಸರ್ವನಾಮವೂ, ಇತರ ಸರ್ವನಾಮಗಳೂ ಒಂದೇ ಕ್ರಿಯೆಗೆ ಕರ್ತೃಗಳಾಗಿದ್ದಾಗ ಕ್ರಿಯಾಪದವು ಉತ್ತಮ ಪುರುಷವೇ ಆಗುವುದು.**

ಉದಾಹರಣೆಗೆ:- ನಾನೂ, ಅವನೂ, ನೀನೂ **ಬಂದೆವು.**

ನೀನೂ, ನಾನೂ ಕೂಡಿ **ಹೋದೆವು.**

ಅವನೂ, ನಾನೂ ಸೇರಿ **ಉಂಡೆವು.**

## VIII – ಸಾರಾಂಶ

**ಕ್ರಿಯಾಪ್ರಕೃತಿ (ಧಾತು)**

**ಸಹಜಧಾತು**

**ಇಸು ಪ್ರತ್ಯಯಾಂತ ಧಾತು (ಸಾಧಿತ ಧಾತು)**

**ಸಕರ್ಮಕ**
**(ಕರ್ಮಪದವನ್ನು ಅಪೇಕ್ಷಿಸುವ ಧಾತು)**
**ಮಾಡು, ತಿನ್ನು, ಬರೆ, ಓದು**

**ಅಕರ್ಮಕ**
**(ಕರ್ಮಪದವನ್ನು ಅಪೇಕ್ಷಿಸದ ಧಾತು)**
**ಮಲಗು, ಏಳು, ಓಡು**

**ಸಂಸ್ಕೃತ ನಾಮಪ್ರಕೃತಿಗಳಿಗೆ 'ಇಸು' ಪ್ರತ್ಯಯ ಬಂದು ಆದ ಧಾತುಗಳು.**
**(ಅ) ಭಾವಿಸು**

**(i) ಕನ್ನಡ ನಾಮ ಪ್ರಕೃತಿಗಳಿಗೆ 'ಇಸು' ಹತ್ತಿದವು.**
**(ii) ಅನುಕರಣ ಶಬ್ದಕ್ಕೆ 'ಇಸು' ಹತ್ತಿದವು.**
**(ಅ) ಕನ್ನಡಿಸು (ಆ) ಧಗಧಗಿಸು**

**ಈ ಮೇಲೆ ಹೇಳಿದ ಸಹಜ ಧಾತು, ಇಸು ಪ್ರತ್ಯಯಾಂತ ಧಾತುಗಳ ಮೇಲೆ ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲೂ, ವಿಧ್ಯರ್ಥ, ನಿಷೇಧಾರ್ಥ, ಸಂಭಾವನಾರ್ಥಗಳಲ್ಲೂ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ. ಸಕರ್ಮಕ ಧಾತುಗಳ ಮುಂದೆ 'ಅಲ್ಪಡು' ಪ್ರತ್ಯಯ ಸೇರಿ ಕರ್ಮಣಿ ಪ್ರಯೋಗವೆನಿಸುತ್ತದೆ.**

* * * * *

## <u>ಅಭ್ಯಾಸ ಪ್ರಶ್ನೆಗಳು</u>

(೧) ಧಾತುವೆಂದರೇನು?

(೨) ಧಾತುಗಳಲ್ಲಿ ಎಷ್ಟು ವಿಧ? ಉದಾಹರಣೆಗಳೊಡನೆ ವಿವರಿಸಿರಿ.

(೩) ಸಂಸ್ಕೃತ ನಾಮ ಪ್ರಕೃತಿಗಳು ಕನ್ನಡದ ಧಾತುಗಳಾಗುವುದು ಹೇಗೆ?

(೪) ಮಾಡುತ್ತಾಳೆ, ಮಾಡಿತು, ನೋಡುವನು, ತಿನ್ನಲಿ, ಹೋಗಾನು, ಕರೆದಾನು –ಈ

ಕ್ರಿಯಾಪದಗಳನ್ನು ಬಿಡಿಸಿ ಬರೆದು ಇವು ಯಾವ ಕಾಲ ಅಥವಾ ಅರ್ಥದ ಕ್ರಿಯಾಪದಗಳೆಂಬುದನ್ನು ತಿಳಿಸಿರಿ.

(೫) ಅವರು ಮನೆಯಲ್ಲಿ 'ಇಲ್ಲ'. ಇಲ್ಲಿ 'ಇಲ್ಲ' ಎಂಬುದು ಎಂಥ ಪದ?

(೬) ಕ್ರಿಯಾರ್ಥಕಾವ್ಯಯಗಳೆಂದರೇನು? ವಿವರಿಸಿ.

(೭) ಕ್ರಿಯಾಪದ ಎಂದರೇನು?

(೮) ಕಾಲಸೂಚಕ ಪ್ರತ್ಯಯಗಳೆಂದರೇನು? ವಿವರಿಸಿ.

(೯) ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಸರಿಯಾದ ಪದವನ್ನು ಸೇರಿಸಿರಿ:–

(i) ವರ್ತಮಾನ ಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ________ ಕಾಲ ಸೂಚಕ ಪ್ರತ್ಯಯ ಬರುವುದು.

(ii) 'ದ' ಎಂಬ ಕಾಲಸೂಚಕ ಪ್ರತ್ಯಯವು _______ ಕಾಲದಲ್ಲಿ _____ ಗೂ _____ ಕ್ಕೂ ಮಧ್ಯದಲ್ಲಿ ಬರುವುದು.

(iii) ಭವಿಷ್ಯತ್ ಕಾಲದಲ್ಲಿ ಧಾತುವಿಗೂ ____ ಕ್ಕೂ ಮಧ್ಯದಲ್ಲಿ _____ ಎಂಬ ______ ಸೂಚಕ ಪ್ರತ್ಯಯ ಬರುವುದು.

(iv) 'ಮಾಡನು' ಎಂಬುದು _____ ಧಾತುವಿನ _____ ಅರ್ಥದಲ್ಲಿ ಬರುವ ಪ್ರಥಮ _____ ಏಕವಚನ ಕ್ರಿಯಾಪದ.

(v) ಮಾಡು ಧಾತುವಿನ ವಿಧ್ಯರ್ಥಕ ಪ್ರಥಮಪುರುಷ ಏಕವಚನದ ರೂಪವು _____ ವಚನದ ರೂಪವಾಗಿದೆ.

(vi) ತಿಳಿದಾನು ಎಂಬುದು ______ ದಲ್ಲಿ ಬರುವ ______ ಪುರುಷ _____ ವಚನದ ರೂಪವಾಗಿದೆ.

(vii) ಅಕರ್ಮಕ ಧಾತುಗಳೆಂದರೆ ____ ನ್ನು ಅಪೇಕ್ಷಿಸದಿರುವಂಥವುಗಳು.

(viii) ಕರ್ಮಪದವನ್ನು ಅಪೇಕ್ಷಿಸುವ ಧಾತುಗಳಿಗೆ ____ ಧಾತುಗಳೆಂದು ಹೆಸರು.

(೧೦) ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳದಲ್ಲಿ ಮುಂದೆ ಆವರಣದೊಳಗೆ ಕೊಟ್ಟಿರುವ ಒಂದು ಸರಿ ಉತ್ತರವನ್ನು ಹುಡುಕಿ ಬರೆಯಿರಿ.

(i) ಧಾತುಗಳ ಮೇಲೆ ____ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುವುವು. (ಆಖ್ಯಾತಪ್ರತ್ಯಯ, ನಾಮವಿಭಕ್ತಿಪ್ರತ್ಯಯ, ತದ್ಧಿತಪ್ರತ್ಯಯ)

(ii) ಕರ್ಮಣಿ ಪ್ರಯೋಗದಲ್ಲಿ ಧಾತುವಿನ ಮುಂದೆ ___ ಪ್ರತ್ಯಯ ಬರುವುದು. (ಆನೆ–ದ–ವ, ಅಲ್ಪಡು)

(iii) ಸಂಸ್ಕೃತದ ಕೆಲವು ನಾಮಪ್ರಕೃತಿಗಳ ಮೇಲೆ ___ ಪ್ರತ್ಯಯ ಬಂದು ಕನ್ನಡದ ಧಾತುಗಳಾಗುವುವು. (ಉತ್ತ, ಅಲ್ಪಡು, ಇಸು)

(iv) ಭೂತಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವ 'ದ' ಪ್ರತ್ಯಯವನ್ನು ___ ಎನ್ನುವರು.

(ಆಖ್ಯಾತಪ್ರತ್ಯಯ, ಭಾವಾರ್ಥಕ ಪ್ರತ್ಯಯ, ಕಾಲಸೂಚಕ ಪ್ರತ್ಯಯ)

(v) 'ಉತ್ತ' ಎಂಬ ಕಾಲಸೂಚಕ ಪ್ರತ್ಯಯವು ____ ಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವುದು.
(ಭೂತ, ಭವಿಷ್ಯತ್, ವರ್ತಮಾನ)

(vi) ಹಿಂದೆ ನಡೆದ ಕ್ರಿಯೆಯನ್ನು ಸೂಚಿಸುವ ಕಾಲವನ್ನು ____ ಎನ್ನುವರು.
(ಭೂತಕಾಲ, ವರ್ತಮಾನಕಾಲ, ಭವಿಷ್ಯತ್‌ಕಾಲ)

(vii) 'ಮಾಡನು' ಎಂಬ ಕ್ರಿಯಾಪದವು ____ ಅರ್ಥವನ್ನು ಸೂಚಿಸುವುದು.
(ಸಂಭಾವನಾರ್ಥ, ವಿಧ್ಯರ್ಥ, ನಿಷೇಧಾರ್ಥ)

(viii) ಕರ್ಮಣಿ ಪ್ರಯೋಗದಲ್ಲಿ ಕರ್ತೃಪದವು ____ ವಿಭಕ್ತ್ಯಂತವಾಗಿರುತ್ತದೆ.
(ಪ್ರಥಮಾ, ದ್ವಿತೀಯಾ, ತೃತೀಯಾ)

(ix) ಪ್ರೇರಣಾರ್ಥದಲ್ಲಿ ಧಾತುಗಳ ಮುಂದೆ ____ ಪ್ರತ್ಯಯ ಬರುವುದು.
(ಉತ್ತ, ದ, ವ, ಇಸು)

(೧೧) ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳಿವೆ. ಅವುಗಳನ್ನು ಸರಿಪಡಿಸಿರಿ:

(i) 'ಬರುತ್ತಾನೆ' ಎಂಬ ಕ್ರಿಯಾಪದವು ಭವಿಷ್ಯತ್ಕಾಲ ಮಧ್ಯಮಪುರುಷ ಏಕವಚನ.

(ii) 'ಬಂದನು' ಎಂಬ ಕ್ರಿಯಾಪದವು ಭೂತಕಾಲದ ಉತ್ತಮಪುರುಷ ಏಕವಚನ.

(iii) ಧಾತುಗಳಿಗೆ ನಾಮವಿಭಕ್ತಿಪ್ರತ್ಯಯ ಸೇರಿ ಕ್ರಿಯಾಪದಗಳೆನಿಸುವುವು.

(iv) ಇರು–ಮಲಗು ಧಾತುಗಳು ಸಕರ್ಮಕಗಳು.

(v) ಸಕರ್ಮಕ ಧಾತುಗಳೆಂದರೆ ಕರ್ಮಪದವನ್ನು ಅಪೇಕ್ಷಿಸದಿರುವಂಥ ಧಾತುಗಳು.

(vi) 'ರಾಮನು ಮನೆಯನ್ನು ಕಟ್ಟಿದನು' ಎಂಬ ವಾಕ್ಯದಲ್ಲಿ ಮನೆಯನ್ನು ಎಂಬುದು ಕರ್ತೃಪದವಾಗಿದೆ.

(vii) ಕರ್ತರಿ ಪ್ರಯೋಗದಲ್ಲಿ ಕರ್ಮಪದವು ಪ್ರಥಮಾವಿಭಕ್ತ್ಯಂತವಾಗಿರುತ್ತದೆ.

(viii) ಭೂತಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಬರುವುದು.

(ix) 'ಮಾಡಲ್ಪಡುತ್ತದೆ' ಎಂಬ ಕ್ರಿಯಾಪದವು ಕರ್ತರಿಪ್ರಯೋಗದ ಕ್ರಿಯಾಪದವಾಗಿದೆ.

(x) ಕ್ರಿಯೆಯು ನಡೆಯದಿರುವಿಕೆಯನ್ನು ಸೂಚಿಸುವ ಕ್ರಿಯಾಪದವು ಸಂಭಾವನಾರ್ಥಕ ಕ್ರಿಯಾಪದವೆನಿಸಿದೆ.

(೧೨) ಮಾಡು ಧಾತುವಿನ ವರ್ತಮಾನಕಾಲ–ಪ್ರಥಮಪುರುಷ–ಪುಲ್ಲಿಂಗ, ಬಹುವಚನ ರೂಪ ಹೇಳಿರಿ.

(೧೩) 'ತಿನ್ನುವನು' ಈ ಕ್ರಿಯಾಪದದ–ಧಾತು, ಕಾಲ, ಪುರುಷ, ಲಿಂಗವಚನಗಳಾವುವು?

* * * * *

## ಮುಖ್ಯವಾದ ಕೆಲವು ಧಾತುಗಳು

ಕನ್ನಡ ಬರವಣಿಗೆಯಲ್ಲಿ ಬರುವ ಮುಖ್ಯವಾದ ಕೆಲವು ಧಾತುಗಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದ್ದು ಧಾತುವಿನ ಅರ್ಥ ಮತ್ತು ಕ್ರಿಯಾಪದದ ಒಂದು ರೂಪವನ್ನು ಮಾತ್ರ ಕೊಡಲಾಗಿದೆ.

| ಧಾತು | – | ಅರ್ಥ | – | ಕ್ರಿಯಾಪದ |
|---|---|---|---|---|
| ಅಲರು | – | ಹೂವಾಗು | – | ಅಲರಿತು |
| ಅರಳು | – | ಹೂವಾಗು | – | ಅರಳಿತು |

| | | | | |
|---|---|---|---|---|
| ಅಡರು | – | ಏರು | – | ಅಡರಿದನು |
| ಅಪ್ಪು | – | ತಬ್ಬಿಕೊಳ್ಳು | – | ಅಪ್ಪಿದನು |
| ಅಡು | – | ಅಡಿಗೆ ಮಾಡು | – | ಅಟ್ಟನು |
| ಅಗಿ | – | ಹಲ್ಲಿನಿಂದ ಅಗಿಯುವಿಕೆ | – | ಅಗಿದನು |
| ಅರೆ | – | ಅರೆಯುವಿಕೆ | – | ಅರೆದನು |
| ಅಗೆ | – | ನೆಲತೋಡು | – | ಅಗೆದನು |
| ಅರಸು[55] | – | ಹುಡುಕು | – | ಅರಸುವನು |
| ಅಂಟು | – | ಮೆತ್ತು | – | ಅಂಟಿತು |
| ಅಡಗು | – | ಮುಚ್ಚಿಕೊ | – | ಅಡಗಿತು |
| ಅರಿ | – | ಕತ್ತರಿಸು | – | ಅರಿದನು |
| ಅರಿ[55] | – | ತಿಳಿ | – | ಅರಿದನು |
| ಅದಿರು | – | ಅಲ್ಲಾಡು | – | ಅದಿರಿತು |
| ಅಲೆ | – | ತಿರುಗು | – | ಅಲೆದನು |
| ಅಳಲು[56] | – | ಸಂಕಟಪಡು | – | ಅಳಲಿದನು |
| ಅಳೆ | – | ಅಳತೆಮಾಡು | – | ಅಳೆದನು |
| ಅಂಜು | – | ಹೆದರು | – | ಅಂಜಿದನು |
| ಅಳಿ | – | ಸಾಯ್ | – | ಅಳಿದನು |
| ಅಳು | – | ರೋದನಮಾಡು | – | ಅಳುತ್ತಾನೆ |
| ಅಳಿಸು | – | ಇಲ್ಲದಂತೆಮಾಡು | – | ಅಳಿಸಿದನು |

| <u>ಧಾತು</u> | – | <u>ಅರ್ಥ</u> | – | <u>ಕ್ರಿಯಾಪದ</u> |
|---|---|---|---|---|
| ಅವಚು | – | ಅಪ್ಪಿಕೊ | – | ಅವಚಿದನು |
| ಆಳು | – | ರಾಜ್ಯಭಾರ ಮಾಡು | – | ಆಳಿದನು |
| ಆನ್ | – | ಧರಿಸು | – | ಆಂತನು |
| ಆರು | – | ಒಣಗು | – | ಆರಿತು |
| ಆಲಿಸು | – | ಕೇಳು | – | ಆಲಿಸಿದನು |
| ಆಗು | – | ಮುಗಿ | – | ಆಯಿತು |
| ಆರ್ | – | ಆರ್ಭಟಿಸು | – | ಆರ್ದನು (ಆರ್ದಂ) |

---

[55] ಅರಸು ಎಂಬಲ್ಲಿ ರಕಾರವೂ, ಅರಿ ಎಂಬಲ್ಲಿ 'ರಿ' ಕಾರವೂ ಶಕಟ ರೇಫಗಳಾದರೂ ಬಳಕೆಯಲ್ಲಿ ಈ ವರ್ಣವನ್ನು ಈಗ ಕೈಬಿಟ್ಟಿರುವುದರಿಂದ ರೇಫ ರಕಾರವನ್ನೇ ಬರೆಯಲಾಗಿದೆ. ಎಲ್ಲ ಕಡೆಗೂ ಆ ನಿಯಮವನ್ನು ಪಾಲಿಸಿಲ್ಲ.

[56] ಅಳಲು–ಎಂಬಲ್ಲಿ ಳಕಾರವು ರಳ ಳಕಾರ. ಆ ನಿಯಮವನ್ನು ಪಾಲಿಸದೆ ಎಲ್ಲ ಕಡೆಗೂ ಳ ಕಾರವನ್ನೇ ಬರೆಯಲಾಗಿದೆ.

| | | |
|---|---|---|
| ಆರ್ | – ಸಾಮರ್ಥ್ಯ | – ಆರನು |
| ಇಡು | – ಇಡುವಿಕೆ | – ಇಟ್ಟನು |
| ಇಕ್ಕು | – ನೀಡು | – ಇಕ್ಕಿದನು |
| ಇಕ್ಕು | – ಮುಚ್ಚು | – ಕದವನ್ನು ಇಕ್ಕಿದನು |
| ಇಕ್ಕು | – ಹೊಡೆ–ಕೊಲ್ಲು | – ಇಕ್ಕಿದನು |
| ಇರು | – ಇರುವಿಕೆ | – ಇದ್ದಾನೆ |
| ಇಸು | – ಬಾಣಪ್ರಯೋಗ ಮಾಡು | – ಎಚ್ಚನು |
| ಇರಿ | – ಕತ್ತರಿಸು | – ಇರಿದನು |
| ಇಳಿ | – ಕೆಳಗೆ ಹೋಗು | – ಇಳಿದನು |
| ಇಂಗು | – ಇಲ್ಲದಾಗು | – ಇಂಗಿತು |
| ಈಡಾಡು | – ಚೆಲ್ಲಾಡು | – ಈಡಾಡಿದನು |
| ಈಯ್ | – ಕರುಹಾಕು | – ಈಯಿತು–(ಈದಿತು) |
| ಈಂಟು | – ಕುಡಿ | – ಈಂಟಿದನು |
| ಈಸು } | – ನೀರಿನಲ್ಲಿ ಈಸುವಿಕೆ | – ಈಸಿದನು |
| ಈಜು } | | – ಈಜಿದನು |
| ಉಡು | – ಉಡುವಿಕೆ | – ಉಟ್ಟನು |
| ಉಗಿ | – ಎಳೆಯುವುದು | – ಉಗಿವೆನು |
| ಉಗಳು | – ಉಗುಳುವಿಕೆ | – ಉಗುಳಿದನು |
| ಉಮ್ಮಳಿಸು | – ದುಃಖಿಸು | – ಉಮ್ಮಳಿಸಿದನು |
| ಉಸುರು | – ಹೇಳು | – ಉಸುರಿದನು |
| ಉಳಿ | – ಮಿಕ್ಕು | – ಉಳಿದಿದೆ |
| ಉಕ್ಕು | – ಹೊರಸೂಸು | – ಉಕ್ಕಿಸು |
| ಉದಿರು } | – ಕೆಳಗೆ ಬೀಳು | – ಉದಿರಿತು |
| ಉದುರು } | | – ಉದುರಿತು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಉರುಳು | – ಉರುಳುವಿಕೆ | – ಉರುಳಿತು |
| ಉಬ್ಬು | – ಉತ್ಸಾಹಗೊಳ್ಳು–ದಪ್ಪವಾಗು | – ಉಬ್ಬಿದನು |
| ಉರಿ | – ಬೆಂಕಿ ಹತ್ತು | – ಉರಿಯುತ್ತದೆ |
| ಉಗ್ಗು | – ತಡೆದುಮಾತಾಡು | – ಉಗ್ಗುತ್ತಾನೆ |
| ಉಜ್ಜು | – ತಿಕ್ಕು | – ಉಜ್ಜಿದನು |
| ಉಳುಕು | – ನರಗಳತೊಡಕು | – ಉಳುಕಿದೆ |

| | | |
|---|---|---|
| ಉದ್ದು | – ತಿಕ್ಕು | – ಉದ್ದುತ್ತದೆ |
| ಉಳಿಸು | – ಮಿಕ್ಕಿಸು | – ಉಳಿಸಿದನು |
| ಉಳು | – ಭೂವ್ಯವಸಾಯ ಮಾಡು | – ಉತ್ತನು |
| ಊರು | – ನೆಡು | – ಸಸಿಊರಿದನು |
| ಊಡು | – ಊಟಮಾಡಿದನು | – ಊಡಿಸಿದನು |
| ಊದು | – ಗಾಳಿಯನ್ನುಬಿಡು | – ಊದಿದನು |
| ಎಣಿಸು | – ಲೆಕ್ಕಮಾಡು | – ಎಣಿಸಿದನು |
| ಎಸೆ | – ಚೆಲ್ಲು | – ಎಸೆದನು |
| ಎಸಗು | – ಮಾಡು | – ಎಸಗಿದನು |
| ಎನ್ನು (ಎೞ) | – ಹೇಳು | – ಎಂದನು |
| ಎರೆ | – ನೀಡು | – ಎರೆದನು |
| ಎರೆ | – ಬೇಡು | – ಎರೆದನು |
| ಎಳೆ | – ಜಗ್ಗು | – ಎಳೆದನು |
| ಎರಗು | – ಮೇಲೆ ಬೀಳು | – ಎರಗಿತು |
| ಏಳು | – ಎದ್ದುನಿಲ್ಲು | – ಎದ್ದನು |
| ಎರಗು | – ನಮಸ್ಕರಿಸು | – ಎರಗಿದನು |
| ಎಳಸು | – ಅಪೇಕ್ಷಿಸು | – ಎಳಸಿದನು |
| ಏದು | – ತೇಗು | – ಏದುತ್ತಾನೆ |
| ಒಗೆ | – ಹುಟ್ಟು | – ಒಗೆಯಿತು |
| ಒಯ್ | – ಸಾಗಿಸು–ಬೇರೆಡೆಗೆಒಯ್ಯಿ | – ಒಯ್ದನು |
| ಒಳಸಾರು | – ಒಳಗೆಹೋಗು | – ಒಳಸಾರಿತು |
| ಒಸರು | – ಜಿನುಗು | – ಒಸರಿತು |
| ಒರಗು | – ಮಲಗು–ಆಶ್ರಯಿಸಿನಿಲ್ಲು | – ಒರಗಿದನು–ಬೀಳು |
| ಒರೆ | – ಹೇಳು | – ಒರೆದನು |

| <u>**ಧಾತು**</u> | – <u>**ಅರ್ಥ**</u> | – <u>**ಕ್ರಿಯಾಪದ**</u> |
|---|---|---|
| ಒಡಂಬಡು | – ಒಪ್ಪು | – ಒಡಂಬಟ್ಟನು |
| ಒಡೆ | – ಸೀಳು–ಅರಳು<br>–ಭಾಗಮಾಡು–ಬಿರಿ | – ಒಡೆಯಿತು |
| ಒಸೆ | – ಪ್ರೀತಿ | – ಒಸೆದನು |
| ಒಲೆ | – ಪ್ರೀತಿಹೊಂದು–ಅನುಗ್ರಹಿಸು | – ಒಲೆಯಿತು |
| ಒಕ್ಕಲಿಕ್ಕು | – ಕೊಲ್ಲು–ಮುಗಿಸು | – ಒಕ್ಕಲಿಕ್ಕಿದನು |
| ಒಡ್ಡು | – ಎದುರಾಗು–ಬೇಡು | – ಒಡ್ಡಿದರು– ಕೈಒಡ್ಡಿದರು |

| | | |
|---|---|---|
| ಒಣಗು | – ಶುಷ್ಕವಾಗು | – ಒಣಗಿತು |
| ಒತ್ತು | – ಹಿಸುಕು–ಪಕ್ಕಕ್ಕೆತಳ್ಳು | – ಒತ್ತಿದನು |
| ಓದು | – ಓದುವಿಕೆ | – ಓದಿದನು |
| ಓಲೈಸು | – ಆಶ್ರಯಿಸು | – ಓಲೈಸಿದನು |
| ಓವು | – ಸಂರಕ್ಷಿಸು | – ಓವಿದನು |
| ಓಕರಿಸು | – ವಾಂತಿಮಾಡು | – ಓಕರಿಸಿದನು |
| ಓಡು | – ಓಡುವಿಕೆ | – ಓಡಿದನು |
| ಔಂಕು | – ಹಿಸುಕು | – ಔಂಕಿದನು |
| ಅವುಂಕು | – ಹಿಚುಕು | – ಅವುಂಕಿದನು |
| ಔತುಕೊಳ್ಳು | – ಅಡಗು | – ಔತುಕೊಂಡನು |
| ಕದಿ | – ಕಳವುಮಾಡು | – ಕದ್ದನು |
| ಕರಿ | – ಕರಿಯುವಿಕೆ | – ಎಣ್ಣೆಯಲ್ಲಿ ಕರಿದನು |
| ಕರೆ | – ಸುರಿಸು | – ಹಾಲುಕರೆದನು |
| | | – ಮಳೆಕರೆಯಿತು |
| ಕರೆ | – ಕರೆಯುವಿಕೆ | – ಕರೆದನು |
| ಕನಲು | – ಕೋಪಗೊಳ್ಳು | – ಕನಲಿದನು |
| ಕವಿ | – ಮುಸುಕು | – ಕವಿಯಿತು |
| ಕಲಿ | – ತಿಳಿ | – ಕಲಿತನು |
| ಕಲಸು | – ಬೆರಸು | – ಕಲಸಿದನು |
| ಕಳು | – ಕದಿಯುವಿಕೆ | – ಕದ್ದನು |
| ಕಡಿ | – ಭೇದಿಸು | – ಕಡಿದನು |
| ಕಲಕು | – ಕಲಕುವಿಕೆ | – ನೀರುಕಲಕಿತು |
| ಕಚ್ಚು | – ಹಲ್ಲಿನಿಂದಕಡಿ | – ಕಚ್ಚಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಕಟ್ಟು | – ಬಂಧಿಸು | – ಕಟ್ಟಿದನು |
| ಕಸಿ | – ಅಪಹರಿಸು | – ಕಸಿದನು |
| ಕಡೆಗಣಿಸು | – ತಿರಸ್ಕರಿಸು | – ಕಡೆಗಣಿಸಿದನು |
| ಕಂಗೊಳಿಸು | – ಪ್ರಕಾಶಿಸು | – ಕಂಗೊಳಿಸುತ್ತದೆ |
| ಕದಕು | – ಕದಕುವಿಕೆ | – ಕದಕಿದನು |
| ಕದಡು | – ಕದಡುವಿಕೆ | – ಕದಡಿದನು |

| | | | | |
|---|---|---|---|---|
| ಕರ್ದುಕು | – | ಕೊಕ್ಕಿನಿಂದ ಕುಕ್ಕು | – | ಕರ್ದುಕಿತು |
| ಕನಲು | – | ಕೋಪಗೊಳ್ಳು | – | ಕನಲಿದನು |
| ಕನವರಿಸು | – | ಬಡಬಡಿಸು | – | ಕನವರಿಸಿದನು |
| ಕರಗು | – | ವಿಲೀನವಾಗು | – | ಕರಗಿತು |
| ಕಳುಹು | – | ಕಳುಹುವಿಕೆ | – | ಕಳುಹಿದನು |
| ಕಳಿಸು | – | ಕಳುಹುವಿಕೆ | – | ಕಳಿಸಿದನು |
| ಕಾ(ಕಾಯ್) (ಕಾಯಿ) | – | ರಕ್ಷಿಸು | – | ಕಾಯುತ್ತಾನೆ–ಕಾಯ್ದನು |
| ಕಾಣು | – | ನೋಡು | – | ಕಂಡನು |
| ಕಾದು | – | ಜಗಳವಾಡು | – | ಕಾದಿದನು |
| ಕಾಪಾಡು | – | ರಕ್ಷಿಸು | – | ಕಾಪಾಡಿದನು |
| ಕಾಯು(ಕಾಯಿ) | – | ಬಿಸಿಯೇರು | – | ಕಾಯಿಸಿದನು–ಕಾಯ್ದಿದೆ |
| ಕಾಡು | – | ಕಾಟಕೊಡು | – | ಕಾಡುತ್ತಾನೆ |
| ಕಿಡು (ಕೆಡು) | – | ಕೆಡುವಿಕೆ | – | ಕೆಟ್ಟನು |
| ಕೀಳ್ | – | ಕೀಳುವಿಕೆ | – | ಕಿತ್ತನು |
| ಕೀ | – | ಕೀವಾಗುವಿಕೆ | – | ಕೀತಿದೆ |
| ಕುಂದು | – | ಒತ್ತು | – | ಕುಂದಿದೆ (ಕಡಿಮೆಯಾಗು) |
| ಕುಕ್ಕು | – | ಕುಕ್ಕುವಿಕೆ | – | ಕುಕ್ಕುತ್ತದೆ |
| | | (ಚುಂಚಿನಿಂದ ಕುಕ್ಕುವುದು) | – | ಕುಕ್ಕಿತು |
| ಕುಡಿ | – | ಕುಡಿಯುವಿಕೆ | – | ಕುಡಿದನು |
| ಕುಡು (ಕೊಡು) | – | ಕೊಡುವಿಕೆ | – | ಕೊಟ್ಟನು |
| ಕುದಿ | – | ಕುದಿಯುವಿಕೆ (ಕರುಬುವಿಕೆ) | – | ಕುದ್ದಿತು |
| | | | | (ಮನದಲ್ಲಿ ಕುದ್ದನು) |
| ಕುಪ್ಪಳಿಸು | – | ಹಾರು | – | ಕುಪ್ಪಳಿಸುತ್ತಾನೆ |
| ಕುಗ್ಗು (ಕುರ್ಗು) | – | ಸಣ್ಣದಾಗು (ಉಡುಗು) | – | ಕುಗ್ಗಿದನು |
| ಕುಲುಕು | – | ಅಲ್ಲಾಡಿಸು | – | ಕುಲುಕಿದನು |

| **ಧಾತು** | **–** | **ಅರ್ಥ** | **–** | **ಕ್ರಿಯಾಪದ** |
|---|---|---|---|---|
| ಕೂಡು | – | ಬೆರೆ | – | ಕೂಡಿದನು |
| ಕೂಗು | – | ಕೂಗುವಿಕೆ | – | ಕೂಗಿದನು |
| ಕೆಚ್ಚು | – | ನೂಲು ಕೆಚ್ಚುವಿಕೆ | – | ಕೆಚ್ಚಿದನು |
| ಕೆಡಹು(ಕೆಡವು) | – | ನೆಲಕ್ಕೆ ಬೀಳುವಂತೆ ಮಾಡು | – | ಕೆಡಹಿದನು(ಕೆಡವಿದನು) |
| ಕೆಡೆ | – | ಬೀಳು | – | ಕೆಡೆದನು |
| ಕೆರೆ | – | ತುರಿಸು | – | ಕೆರೆದನು |

| | | | | |
|---|---|---|---|---|
| ಕೆಣಕು | – | ರೇಗಿಸು | – | ಕೆಣಕಿದನು |
| ಕೆತ್ತು | – | ಸವರು | – | ಕೆತ್ತಿದರು |
| ಕೆಡಿಸು | – | ಹಾಳುಮಾಡು | – | ಕೆಡಿಸಿದನು |
| ಕೆರಳು | – | ಸಿಟ್ಟಿಗೇಳು | – | ಕೆರಳಿದನು |
| ಕೆಲಸಾರು | – | ಹತ್ತಿರಕ್ಕೆ ಬಾ | – | ಕೆಲಸಾರಿದನು |
| ಕೇಳು | – | ಕೇಳುವಿಕೆ | – | ಕೇಳಿದನು |
| ಕೇರು | – | ಹಸನುಮಾಡು (ಧಾನ್ಯಶುದ್ಧಿ ಮಾಡುವಿಕೆ) | – | ಕೇರಿದನು |
| ಕೈಗೂಡು | – | ಕೈಗೆಸಿಗು | – | ಕೈಗೂಡಿತು |
| ಕೈಬಿಡು | – | ತ್ಯಜಿಸು | – | ಕೈಬಿಟ್ಟನು |
| ಕೈಸಾರು | – | ವಶವಾಗು | – | ಕೈಸಾರಿತು |
| ಕೊಡು(ಕುಡು) | – | ಕೊಡುವಿಕೆ | – | ಕೊಟ್ಟನು |
| ಕೊಂಡಾಡು | – | ಹೊಗಳು | – | ಕೊಂಡಾಡಿದನು |
| ಕೊನರು | – | ಚಿಗುರು | – | ಕೊನರಿತು |
| ಕೊಲ್ಲು(ಕೊಲ್) | – | ಸಾಯಿಸು | – | ಕೊಂದನು |
| ಕೊಚ್ಚು | – | ಚೂರುಮಾಡು | – | ಕೊಚ್ಚಿದನು |
| ಕೊಡವು | – | ಕೊಡವುವಿಕೆ | – | ಕೊಡವಿದನು |
| ಕೊರಗು | – | ವ್ಯಸನಪಡು | – | ಕೊರಗಿದನು |
| ಕೊರೆ | – | ಕತ್ತರಿಸು | – | ಕೊರೆದನು |
| ಕೊಯ್ | – | ಕೊಯ್ಯುವಿಕೆ | – | ಕೊಯ್ದನು |
| ಕೊಳೆ | – | ಕೊಳೆಯುವಿಕೆ | – | ಕೊಳೆತಿದೆ |
| ಕೋರಯಿಸು | – | ಕಣ್‌ಕುಕ್ಕು | – | ಕೋರೈಸುತ್ತದೆ |
| ಕೋರು | – | ಬಯಸು | – | ಕೋರಿದನು |
| ಗದರು | – | ಸಿಟ್ಟುಮಾಡು ಗದ್ದರಿಸು | – | ಗದರಿದನು |
| ಗಳಪು | – | ಹರಟು | – | ಗಳಪಿದನು |

| **ಧಾತು** | – | **ಅರ್ಥ** | – | **ಕ್ರಿಯಾಪದ** |
|---|---|---|---|---|
| ಗಳಿಸು | – | ಕೂಡುಹಾಕು | – | ಗಳಿಸಿದನು |
| ಗುದ್ದು | – | ಮುಷ್ಟಿಯಿಂದ ಹೊಡೆ | – | ಗುದ್ದಿದನು |
| ಗುಡಿಸು | – | ಸ್ವಚ್ಛಮಾಡು | – | ಗುಡಿಸಿದನು |
| ಗುಡುಗು | – | ಗದರಿಸು | – | ಗುಡುಗಿದನು |
| ಗೆಲ್ (ಗೆಲ್ಲು) | – | ಗೆದ್ದೆ | – | ಗೆದ್ದೆನು |
| ಗೆಯ್ (ಗೆಯ್ಯಿ) | – | ಮಾಡುವಿಕೆ | – | ಗೆಯ್ದನು |

| | | | | |
|---|---|---|---|---|
| ಗೋರು | – | ತಳಕ್ಕೆ ಹಚ್ಚಿಮೊಗೆಯುವಿಕೆ | – | ಗೋರಿದನು |
| ಗೋಳಿಡು | – | ಹೆಚ್ಚಾಗಿ ದುಃಖಪಡು | – | ಗೋಳಿಟ್ಟನು |
| ಚೆಲ್ಲು | – | ಬಿಸಾಡು | – | ಚೆಲ್ಲಿದನು |
| ಚೆಚ್ಚು (ಜಜ್ಜು) | – | ಜಜ್ಜಿಹಾಕು | – | ಚೆಚ್ಚಿದನು |
| ಚಿಗಿ | – | ಕೊನರುವಿಕೆ | – | ಚಿಗಿತಿತು |
| ಚೀರು | – | ಗಟ್ಟಿಯಾಗಿ ಕೂಗು | – | ಚೀರಿದನು |
| ಚಾಚು | – | ಮುಂದುಮಾಡು | – | ಚಾಚಿದನು |
| ಚಿಮ್ಮು | – | ಬೆರಳಿನಿಂದ ನೂಕು | – | ಚಿಮ್ಮಿದನು |
| ಚುಚ್ಚು | – | ಚುಚ್ಚುವಿಕೆ | – | ಚುಚ್ಚಿತು |
| ಚಿತ್ತೈಸು | – | ಕೇಳು | – | ಚಿತ್ತೈಸಿದನು |
| ಚಿವುಟು | – | ಉಗುರಿನಿಂದ ಚುಚ್ಚು | – | ಚಿವುಟಿದನು |
| ಚಿಮುಕಿಸು | – | ಚಿಮುಕಿಸುವಿಕೆ | – | ನೀರು ಚಿಮುಕಿಸಿದನು |
| ಚೀಪು | – | ಚೀಪುವಿಕೆ | – | ಚೀಪುತ್ತಾನೆ |
| ಜಜ್ಜು | – | ಜಜ್ಜಿಹಾಕು | – | ಜಜ್ಜಿದನು |
| ಜಾರು | – | ಜಾರುವಿಕೆ | – | ಜಾರಿದನು |
| ಜಗುಳು | – | ಜಾರುವಿಕೆ | – | ಜಗುಳುತ್ತದೆ |
| ಜಡಿ | – | ಹೊಡೆ | – | ಜಡಿದನು |
| ಜಿನುಗು (ಜಿನುಂಗು) | – | ಸಣ್ಣಗೆ ಒಸರುವಿಕೆ | – | ಜಿನುಗುತ್ತದೆ |
| ತಗಲು | – | ಸೊಂಕು | – | ತಗಲಿತು |
| ತಣಿ | – | ತೃಪ್ತಿಗೊಳ್ಳು | – | ತಣಿದನು |
| ತಗ್ಗು | – | ಬಾಗು | – | ತಗ್ಗಿದನು |
| ತಳ್ಳು | – | ನೂಕು | – | ತಳ್ಳಿದನು |
| ತಡವು | – | ಕೈಯಿಂದ ಮುಟ್ಟಿನೋಡುವಿಕೆ | – | ತಡವಿದನು |

| **ಧಾತು** | | **ಅರ್ಥ** | | **ಕ್ರಿಯಾಪದ** |
|---|---|---|---|---|
| ತಟ್ಟು | – | ಬಡಿ | – | ತಟ್ಟಿದನು |
| ತಡೆ | – | ನಿಲ್ಲಿಸು, ಎದುರಿಸು, ಪ್ರತಿಬಂಧಿಸು | – | ತಡೆದನು |
| ತಣಿ | – | ತೃಪ್ತಿಪಡು | – | ತಣಿದನು |
| ತಳೆ | – | ಹೊಂದು, ಧರಿಸು | – | ತಳೆದನು |
| ತಳಿ | – | ಚಿಮುಕಿಸು | – | ನೀರುತಳಿದಳು |

| | | |
|---|---|---|
| ತದೆ | – ಹೊಡೆ | – ತದ್ದನು |
| ತರುಬು | – ನಿಲ್ಲಿಸು | – ತರುಬಿದನು |
| ತಪ್ಪು | – ಚ್ಯುತಿಹೊಂದು | – ತಪ್ಪಿದನು |
| ತಬ್ಬು | – ಆಲಂಗಿಸು | – ತಬ್ಬಿದನು |
| ತರಿ | – ಕತ್ತರಿಸು | – ತರಿದನು |
| ತಲುಪು | – ಸೇರು | – ತಲುಪಿದನು |
| ತಲ್ಲಣಿಸು | – ಸಂಕಟಪಡು | – ತಲ್ಲಣಿಸಿದನು |
| ತಳುವು | – ತಡಮಾಡು | – ತಳುವಿದನು |
| ತಳೆ | – ಹೊಂದು (ಧರಿಸು) | – ತಳೆದನು |
| ತಾಕು (ತಾಗು) | – ಮುಟ್ಟು, ಎದುರಾಗು | – ತಾಕಿದನು |
| ತಾಳು | – ಸ್ಥೈರಿಸು | – ತಾಳಿದನು |
| ತಾಗು | – ಸೊಂಕು | – ಮೈತಾಗಿತು |
| ತಿಳಿ | – ತಿಳಿಯುವಿಕೆ | – ತಿಳಿದನು |
| ತಿರುಗು | – ಅಲೆ, ಮರಳು | – ತಿರುಗಿದನು |
| ತಿನ್ನು | – ಭಕ್ಷಿಸು | – ತಿಂದನು |
| ತಿರಿ | – ತಿರಿಯುವಿಕೆ | – ತಿರಿದನು |
| ತಿವಿ | – ಚುಚ್ಚು | – ತಿವಿದನು |
| ತಿದ್ದು | – ಸರಿಪಡಿಸು | – ತಿದ್ದಿದನು |
| ತಿಕ್ಕು | – ಉಜ್ಜು | – ತಿಕ್ಕಿದನು |
| ತೀಡು | – ಬೀಸು | – ತೀಡಿತು |
| ತೀರು | – ಮುಗಿ | – ತೀರಿತು |
| ತೀವು | – ತುಂಬು | – ತೀವಿದೆ |
| ತುಂಬು | – ತುಂಬುವಿಕೆ | – ತುಂಬಿದೆ |
| ತುರುಕು | – ಬಿರುಸಿನಿಂದ ಇಡು | – ತುರುಕಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ತುಡು (ತೊಡು) | – ಧರಿಸು | – ತೊಟ್ಟನು |
| ತುಳುಕು | – ಹೊರಚೆಲ್ಲು | – ತುಳುಕಿತು |
| ತುಳಿ | – ಮೆಟ್ಟು | – ತುಳಿದನು |
| ತುರಿಸು | – ಕೆರೆ | – ತುರಿಸಿದನು |
| ತುಡುಕು | – ಆತುರದಿಂದ ಹಿಡಿ | – ತುಡುಕಿದನು |
| ತೂಗು | – ಅಲ್ಲಾಡಿಸು, ಅಳತೆಮಾಡು | – ತೂಗಿದನು |

| | | | | |
|---|---|---|---|---|
| ತೆಗೆ | – | ತೆಗೆಯುವಿಕೆ | – | ತೆಗೆದನು |
| ತೆರೆ | – | ಕಾಣುವಹಾಗೆ ಮಾಡು | – | ತೆರೆದನು |
| ತೆಗಳು | – | ತಿರಸ್ಕರಿಸು | – | ತೆಗಳಿದನು |
| ತೆರು | – | ಕೊಡು | – | ತೆತ್ತನು |
| ತೇಗು | – | ತೇಗುವಿಕೆ (ತೇಂಕು) | – | ತೇಗಿದನು |
| ತೇಲು | – | ತೇಲುವಿಕೆ | – | ತೇಲುತ್ತದೆ |
| ತೊಡು | – | ತೊಡುವಿಕೆ, ಧರಿಸುವಿಕೆ | – | ತೊಟ್ಟನು |
| ತೊಡಗು | – | ಕಾರ್ಯದಲ್ಲಿ ಪ್ರವೃತ್ತನಾಗು | – | ತೊಡಗಿದನು |
| ತೊಳಗು | – | ಪ್ರಕಾಶಿಸು | – | ತೊಳಗಿತು |
| ತೊಲಗು | – | ದೂರಸರಿ | – | ತೊಲಗಿತು |
| ತೊಡೆ | – | ಧರಿಸು, ಹಚ್ಚು | – | ತೊಡೆದನು |
| ತೊಡೆ | – | ಸುಗಂಧವನ್ನು ತೊಡೆದನು | – | ತೊಡೆದನು |
| ತೊಯ್ | – | ಒದ್ದೆಯಾಗು | – | ತೊಯ್ದನು |
| ತೋರು | – | ಕಾಣುವಂತೆ ಮಾಡು | – | ತೋರಿದನು |
| ದಣಿ | – | ಆಯಾಸ ಹೊಂದು | – | ದಣಿದನು |
| ದಾಟು | – | ಆಚೆ ದಡ ಸೇರು | – | ದಾಟಿದನು |
| ಧುಮುಕು | – | ಹಾರಿಕೊಳ್ಳುವಿಕೆ | – | ಧುಮುಕಿದನು |
| ದೊರೆ | – | ಸಿಗು | – | ದೊರೆಯಿತು |
| ದೊರಕು | – | ಸಿಗು | – | ದೊರಕಿತು |
| ದೋಚು | – | ಲೂಟಿಮಾಡು | – | ದೋಚಿದನು |
| ನಡೆ | – | ಚಲಿಸುವಿಕೆ | – | ನಡೆದನು |
| ನಡುಗು | – | ಕಂಪಿಸು | – | ನಡುಗಿತು |
| ನಂಬು | – | ವಿಶ್ವಾಸವಿಡು | – | ನಂಬಿದನು |
| ನಂದು | – | ಆರುವಿಕೆ | – | ನಂದಿತು |
| ನಗು | – | ನಗುವಿಕೆ | – | ನಕ್ಕನು |

| **ಧಾತು** | **–** | **ಅರ್ಥ** | **–** | **ಕ್ರಿಯಾಪದ** |
|---|---|---|---|---|
| ನರಳು | – | ನರಳುವಿಕೆ | – | ನರಳಿದನು |
| ನಲುಗು | – | ಬೇನೆಯಿಂದ ಬತ್ತುವಿಕೆ | – | ನಲುಗಿದನು |
| ನಲಿ | – | ಸಂತೋಷಪಡು | – | ನಲಿದನು |
| ನಾಟು | – | ಚುಚ್ಚುವುದು | – | ನಾಟಿತು |
| ನಾಚು | – | ಲಜ್ಜೆಪಡು | – | ನಾಚಿದನು |
| ನಾರು | – | ವಾಸನೆ ಬರುವಿಕೆ | – | ನಾರುವುದು |
| ನಿಲ್ಲು | – | ನಿಲ್ಲುವಿಕೆ | – | ನಿಂತನು |

| | | |
|---|---|---|
| ನಿಮಿರು | – ಎದ್ದುನಿಲ್ಲುವಿಕೆ | – ಕೂದಲು ನಿಮಿರಿದವು |
| | | – (ಕಿವಿ ನಿಮಿರಿದವು) |
| ನೀಡು | – ಹಾಕು, ಕೊಡು | – ನೀಡಿದನು |
| ನೀಗು | – ದೂರವಾಗು | – ನೀಗಿತು |
| ನುಡಿ | – ಮಾತಾಡು | – ನುಡಿದನು |
| ನುಂಗು | – ನುಂಗುವಿಕೆ | – ನುಂಗಿದನು |
| ನುಸುಳು | – ಜಾರಿಹೋಗುವಿಕೆ | – ನುಸುಳಿದನು |
| ನುರಿ | – ಸಣ್ಣಗೆ ಮಾಡು | – ನುರಿಯಿತು |
| ನೂಂಕು (ನೂಕು) | – ನೂಕುವಿಕೆ | – ನೂಂಕಿದನು |
| | | – (ನೂಕಿದನು) |
| ನೂಲು | – ನೂಲುವಿಕೆ | – ನೂತನು |
| ನೆಗಪು (ನೆಗಹು) | – ಎತ್ತುವಿಕೆ | – ನೆಗಪಿದನು (ನೆಗಹಿದನು) |
| ನೆಗೆ | – ಹಾರು | – ನೆಗೆದನು |
| ನೆನೆ | – ಸ್ತೋತ್ರ ಮಾಡು | – ನೆನೆದನು |
| ನೆಯ್ | – ಬಟ್ಟೆನೇಯುವಿಕೆ | – ನೇಯ್ದನು |
| ನೆಲಸು | – ಸ್ಥಿರವಾಗಿ ನಿಲ್ಲು | – ನೆಲಸಿದೆ |
| ನೆರೆ | – ಸೇರು | – ನೆರೆದರು |
| ನೆಗಳ್ | – ಮಾಡುವಿಕೆ | – ನೆಗಳ್ದನು |
| | | – (ಪ್ರಯತ್ನ ಮಾಡುವಿಕೆ) |
| ನೋ (ನೋಯ್) | – ನೊಯ್ಯುವಿಕೆ | – ನೊಂದನು |
| ನೋನ್ (ನೋನು) | – ವ್ರತಮಾಡು | – ನೋಂತನು |
| ಪಡೆ | – ಹೊಂದು | – ಪಡೆದನು |
| ಪರಿ | – ಹರಿಯುವಿಕೆ | – ಪರಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಹರಿ | – ತುಂಡುಮಾಡುವಿಕೆ | – ಹರಿದನು |
| ಪರ್ಬು | – ಎಲ್ಲಕಡೆಗೂ ವಿಸ್ತಾರವಾಗು | – ಪರ್ಬು |
| ಹಬ್ಬು | – ಎಲ್ಲಕಡೆಗೂ ವಿಸ್ತಾರವಾಗು | – ಪಬ್ಬು |
| ಪಡು | – ಮಲಗುವಿಕೆ | – ಪಟ್ಟನು |
| ಪತ್ತು (ಹತ್ತು) | – ಏರುವಿಕೆ | – ಪತ್ತಿದನು (ಹತ್ತಿದನು) |
| ಪರಸು (ಹರಸು) | – ಆಶೀರ್ವಾದ ಮಾಡು, | – ಪರಸಿದನು |

| | | | | |
|---|---|---|---|---|
| | | ಕೋರು | | (ಹರಸಿದನು) |
| ಪರಪು (ಹರಹು) | – | ಹರಡುವಿಕೆ | – | ಪರಪಿದನು (ಹರಹಿದನು) |
| ಪವಡಿಸು | – | ಮಲಗು | – | ಪವಡಿಸಿದನು |
| ಪಾಸು (ಹಾಸು) | – | ಹಾಸುವಿಕೆ | – | ಪಾಸಿದನು (ಹಾಸಿದನು) |
| ಪಾಡು (ಹಾಡು) | – | ಹಾಡುವಿಕೆ | – | ಪಾಡಿದನು (ಹಾಡಿದನು) |
| ಪುಗು (ಹೊಗು) (ಹುಗು) | – | ಪ್ರವೇಶಿಸುವಿಕೆ | – | ಪೊಕ್ಕನು (ಹೊಕ್ಕನು) |
| ಪುದುಗಿಸು | – | ಹುದುಗಿಸುವಿಕೆ | – | ಪುದುಗಿಸಿದನು |
| ಹುದುಗಿಸು | – | ಅಡಗಿಸುವಿಕೆ | – | ಹುದುಗಿಸಿದನು |
| ಪೂಣ್ (ಹೂಣ್) | – | ಪ್ರತಿಜ್ಞೆಮಾಡು | – | ಪೂಣ್ದನು (ಹೂಣ್ದನು) |
| ಪೂಸು (ಹೂಸು) | – | ಲೇಪಿಸು | – | ಪೂಸಿದನು (ಹೂಸಿದನು) |
| ಪೆರ್ಚು | – | ಹೆಚ್ಚಾಗುವಿಕೆ | – | ಪೆರ್ಚಿತು |
| ಪೇಳ್ (ಹೇಳು) | – | ಹೇಳುವಿಕೆ | – | ಪೇಳಿದನು (ಹೇಳಿದನು) (ಪೇಳ್ದನು) |
| ಪೊರಮಡು | – | ಹೊರಬೀಳು | – | ಪೊರಮಟ್ಟನು |
| ಪೊರೆ (ಹೊರೆ) | – | ಸಂರಕ್ಷಿಸು | – | ಪೊರೆದನು (ಹೊರೆದನು) |
| ಪೊಳೆ (ಹೊಳೆ) | – | ಪ್ರಕಾಶಿಸು | – | ಪೊಳೆಯಿತು (ಹೊಳೆಯಿತು) |
| ಪೊರ್ದು | – | ಹೊಂದು | – | ಪೊರ್ದಿದನು |
| ಪೊಸೆ (ಹೊಸೆ) | – | ಪೊಸೆಯುವಿಕೆ | – | ಪೊಸೆದನು (ಹೊಸೆದನು) |
| ಪೋರ್ (ಹೋರು) | – | ಹೋರಾಡುವಿಕೆ | – | ಪೋರ್ದನು (ಹೋರಿದನು) |
| ಪೋಗು (ಹೋಗು) | – | ಹೋಗುವಿಕೆ | – | ಪೋದನು (ಹೋದನು) |

| **ಧಾತು** | **–** | **ಅರ್ಥ** | **–** | **ಕ್ರಿಯಾಪದ** |
|---|---|---|---|---|
| ಪೇಳ್ (ಪೇಳು) (ಹೇಳು) | – | ಹೇಳುವಿಕೆ | – | ಪೇಳಿದನು (ಹೇಳಿದನು) |
| ಪಿಂಗು (ಹಿಂಗು) | – | ದೂರವಾಗು | – | ಪಿಂಗಿತು (ಹಿಂಗಿತು) |
| ಪೀರ್ (ಹೀರು) | – | ಹೀರುವಿಕೆ | – | ಪೀರಿದಂ (ಹೀರಿದನು) |
| ಬರೆ | – | ಬರೆಯುವಿಕೆ | – | ಬರೆದನು |
| ಬಗೆ | – | ಚಿಂತಿಸು, ಯೋಚಿಸು | – | ಬಗೆದನು |

| | | | | |
|---|---|---|---|---|
| ಬಸಿ | – | ತೊಟ್ಟಿಕ್ಕು, ಜಿನುಗು | – | ಬಸಿಯಿತು |
| ಬರು | – | ಬರುವಿಕೆ | – | ಬಂದನು |
| ಬದುಕು | – | ಜೀವಿಸು | – | ಬದುಕಿದನು |
| ಬಗಿ | – | ತೋಡು | – | ಬಗಿದನು |
| ಬಚ್ಚಿಡು | – | ಮುಚ್ಚಿಡು | – | ಬಚ್ಚಿಟ್ಟನು |
| ಬತ್ತು | – | ಇಂಗು | – | ಬತ್ತಿತು |
| ಬಳಲು | – | ಆಯಾಸಗೊಳ್ಳು | – | ಬಳಲಿದನು |
| ಬಳಸು | – | ಸುತ್ತಿಬರುವುದು (ವೆಚ್ಚಮಾಡು) | – | ಬಳಸಿದನು |
| ಬಳೆ (ಬೆಳೆ) | – | ವೃದ್ಧಿಯಾಗು ಬೆಳೆಯುವಿಕೆ | – | ಬಳೆದನು – (ಬೆಳೆದನು) |
| ಬಳುಕು | – | ಬಳುಕುವಿಕೆ | – | ಬಳುಕಿದಳು |
| ಬಾಗು | – | ಬಾಗುವಿಕೆ | – | ಬಾಗಿದನು |
| ಬಾಡು | – | ಬತ್ತುವುದು | – | ಬಾಡಿತು |
| ಬಾಚು | – | ಒಟ್ಟುಗೂಡು | – | ಬಾಚಿದನು |
| ಬಾಯ್ಬಿಡು (ಬಾಯಿಬಿಡು) | – | ಅಳುವಿಕೆ (ಕೂಗುವಿಕೆ) | – | ಬಾಯ್ಬಿಟ್ಟಳು (ಬಾಯಿಬಿಟ್ಟಳು) |
| ಬಾಳು | – | ಬದುಕುವಿಕೆ | – | ಬಾಳಿದನು |
| ಬಾಸಣಿಸು | – | ಮುಚ್ಚು | – | ಬಾಸಣಿಸಿದನು |
| ಬಿಡು | – | ತ್ಯಜಿಸು | – | ಬಿಟ್ಟನು |
| ಬಿರಿ | – | ಅರಳು, ಸೀಳು | – | ಬಿರಿಯಿತು |
| ಬಿಕ್ಕು | – | ಬಿಕ್ಕುವಿಕೆ | – | ಬಿಕ್ಕಿದನು |
| ಬಿಗಿ | – | ಬಂಧಿಸು | – | ಬಿಗಿದನು |
| ಬಿತ್ತು | – | ಬೀಜಹಾಕು | – | ಬಿತ್ತಿದನು |

| **ಧಾತು** | **–** | **ಅರ್ಥ** | **–** | **ಕ್ರಿಯಾಪದ** |
|---|---|---|---|---|
| ಬಿಚ್ಚು | – | ಕಟ್ಟು ಉಟ್ಟು | – | ಬಿಚ್ಚಿದನು |
| ಬಿಸುಡು | – | ಎಸೆಯುವಿಕೆ | – | ಬಿಸುಟನು |
| ಬೀಗು | – | ಗರ್ವಪಡು | – | ಬೀಗಿದನು |
| ಬೀಸು | – | ಬೀಸುವಿಕೆ (ಎಸೆಯುವಿಕೆ) | – | ಒಲೆ ಬೀಸಿದನು |
| ಬೀಳು | – | ನೆಲಕ್ಕೆ ಬೀಳು | – | ಬಿದ್ದನು |

| | | | | |
|---|---|---|---|---|
| ಬೆಳಗು | – | ಪ್ರಕಾಶಿಸು | – | ಬೆಳಗಿತು |
| ಬೆದರು | – | ಅಂಜು | – | ಬೆದರಿದನು |
| ಬೆರಸು | – | ಮಿಶ್ರಮಾಡು | – | ಬೆರಸಿದನು |
| ಬೆಸಸು | – | ಅಪ್ಪಣೆ ಮಾಡು | – | ಬೆಸಸಿದನು |
| ಬೆಸೆ | – | ಜೋಡಿಸು (ಅಂಟಿಸು) | – | ಬೆಸೆದನು |
| ಬೆಂಗೊಳ್ಳು | – | ಬೆನ್ನುಹತ್ತು | – | ಬೆಂಗೊಂಡನು |
| ಬೆರ್ಚು (ಬೆಚ್ಚು) | – | ಬೆಚ್ಚುಬೀಳುವಿಕೆ | – | ಬೆರ್ಚಿದನು (ಬೆಚ್ಚಿದನು) |
| ಬೇಡು | – | ಯಾಚಿಸು | – | ಬೇಡಿದನು |
| ಬೇ | – | ಸುಡುವಿಕೆ | – | ಬೆಂದಿತು (ಬೆಯ್) |
| ಬೊಬ್ಬಿರಿ | – | ಗಟ್ಟಿಯಾಗಿ ಕೂಗು | – | ಬೊಬ್ಬಿರಿದನು |
| ಮಸಗು | – | ವಿಜೃಂಭಿಸು | – | ಕೈಕೈಮಸಗಿತು |
| ಮಡಗು | – | ಇಡು | – | ಮಡಗಿದನು (ಮಡುಗು) |
| ಮರುಗು | – | ವ್ಯಸನಪಡು | – | ಮರುಗಿದನು |
| ಮಡಿ | – | ಸಾಯ್ | – | ಮಡಿದನು |
| ಮರಳು | – | ಕುದಿಯುವಿಕೆ | – | ಮರಳುತ್ತದೆ |
| ಮರಳು | – | ಹಿಂದಿರುಗು | – | ಮರಳಿದನು |
| ಮರೆ | – | ಮರೆಯುವಿಕೆ | – | ಮರೆತನು |
| ಮರಸು | – | ಮರೆಯುವಂತೆ ಮಾಡು (ಕಾಣದಂತೆಮಾಡು) | – | ಮರೆಸಿದನು |
| ಮಲೆ | – | ಗರ್ವದಿಂದ ಎದುರಿಸಿ ನಿಲ್ಲು | – | ಮಲೆತನು |
| ಮಸೆ | – | ತಿಕ್ಕು, ಚೂಪುಗೊಳಿಸು | – | ಮಸೆದನು |
| ಮಾಡು | – | ಮಾಡುವಿಕೆ | – | ಮಾಡುತ್ತಾನೆ |
| ಮಾರು | – | ಮಾರಾಟಮಾಡುವಿಕೆ | – | ಮಾರಿದನು |

| **ಧಾತು** | **–** | **ಅರ್ಥ** | **–** | **ಕ್ರಿಯಾಪದ** |
|---|---|---|---|---|
| ಮಾಗು | – | ಹಣ್ಣಾಗುವಿಕೆ | – | ಮಾಗಿತು |
| ಮಾಸು | – | ಕೊಳೆಯಾಗು | – | ಮಾಸಿದೆ |
| ಮಾಣ್ (ಮಾಣು) | – | ಬಿಡುವಿಕೆ ನಿಷೇಧಿಸು, ನಿಲ್ಲಿಸು | – | ಮಾಣಲಿ |
| ಮಾರ್ನುಡಿ | – | ಎದುರುಮಾತಾಡು | – | ಮಾರ್ನುಡಿದನು |
| ಮಿಸುಕು | – | ಮಿಸುಕುವಿಕೆ | – | ನಿದ್ದೆಯಲ್ಲಿ ಮಿಸುಕಿದನು |

| | | |
|---|---|---|
| ಮಿನುಗು | – ಪ್ರಕಾಶಿಸು | – ಮಿನುಗುತ್ತದೆ |
| ಮಿಕ್ಕು | – ಉಲ್ಲಂಘಿಸು | – ಮಿಕ್ಕಿದನು |
| ಮಿಂಚು | – ಹೊಳೆಯುವಿಕೆ | – ಮಿಂಚಿತು |
| ಮಿಡಿ | – ಬೆರಳಿನಿಂದ ಬಾರಿಸು | – ಮಿಡಿದನು |
| ಮಿದಿ | – ನಾದುವುದು | – ಮಿದಿಯುತ್ತಾನೆ |
| ಮೀ (ಮೀಯ್) | – ಸ್ನಾನಮಾಡು | – ಮಿಂದನು |
| ಮೀಂಟು | – ಮುಂದೆತಳ್ಳು | – ಮೀಂಟಿದನು |
| ಮೀರು | – ಮಿಕ್ಕು | – ಮೀರಿದನು |
| ಮುಟ್ಟು | – ಮುಟ್ಟುವಿಕೆ, ತಲಪುವಿಕೆ | – ಮುಟ್ಟಿದನು |
| ಮುಳಿ | – ಸಿಟ್ಟಾಗು | – ಮುಳಿದನು |
| ಮುಡಿ | – ಧರಿಸು | – ಹೂ ಮುಡಿದಳು |
| ಮುದುಡು | – ಮುದುಡಿಕೊಳ್ಳುವಿಕೆ | – ಮುದುಡಿಕೊಂಡನು |
| ಮುಗಿ | – ಮೊಗ್ಗಾಗು, ಕೈಜೋಡಿಸು ತೀರಿಹೋಗು | – ಮುಗಿದನು |
| ಮುಸುಕು | – ಕವಿಯುವಿಕೆ | – ಹೊಗೆ ಮುಸುಕಿತು |
| ಮುಕ್ಕುಳಿಸು | – ನೀರು ಮುಕ್ಕುಳಿಸುವಿಕೆ | – ನೀರು ಮುಕ್ಕುಳಿಸಿದನು |
| ಮುಕ್ಕು | – ತಿನ್ನು, ನುಂಗು | – ಮುಕ್ಕಿದನು |
| ಮುಗ್ಗು | – ಜೋಲಿಹೋಗು | – ರಾಗಿ ಮುಗ್ಗಿದೆ |
| | – ಧಾನ್ಯಗಳು ವಾಸನೆ ಬರುವಿಕೆ | |
| ಮುಗ್ಗರಿಸು | – ಜೋಲಿಹೋಗುವಿಕೆ | – ಮುಗ್ಗರಿಸಿದನು |
| ಮುರಿ | – ಚೂರು ಮಾಡು | – ಮುರಿದನು |
| ಮುಳುಗು | – ಕಾಣದಂತಾಗು | – ಮುಳುಗಿತು |
| ಮೂಡು | – ಹುಟ್ಟು | – ಮೂಡಿತು |
| ಮೂಸು | – ವಾಸನೆ ತೆಗೆದುಕೊಳ್ಳುವುದು | – ಮೂಸಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಮೆರೆ | – ಡಂಭಾಚಾರದಿಂದ ತಿರುಗು | – ಮೆರೆಯುತ್ತಾನೆ |
| ಮೆಚ್ಚು | – ಒಪ್ಪು, ಪ್ರಸನ್ನನಾಗು | – ಮೆಚ್ಚಿದನು |
| ಮೆಲ್ಲು | – ತಿನ್ನು | – ಮೆದ್ದನು |
| ಮೆಟ್ಟು | – ತುಳಿ | – ಮೆಟ್ಟಿದನು |
| ಮೇ (ಮೇಯ್) | – ಪಶುಗಳು ಆಹಾರ ತಿನ್ನುವಿಕೆ | – ಮೇಯುತ್ತದೆ |
| ಮೊಳೆ | – ಮೊಳಕೆಯೊಡಯುವಿಕೆ | – ಮೊಳೆಯಿತು |

| | | |
|---|---|---|
| ಮೊಳಗು | – ವಾದ್ಯಗಳು ಧ್ವನಿಮಾಡುವಿಕೆ ಮೇಘಧ್ವನಿ | – ಮೊಳಗಿದವು |
| ಮೋದು | – ಹೊಡೆಯುವಿಕೆ, ಪ್ರಯೋಗಿಸುವಿಕೆ | – ಗದೆಯಿಂದ ಮೋದಿದನು |
| ರೇಗು | – ಸಿಟ್ಟಾಗು | – ರೇಗಿದನು |
| ಸಲಹು | – ಸಂರಕ್ಷಿಸು | – ಸಲಹಿದನು |
| ಸರಿ | – ಪಕ್ಕಕ್ಕೆ ಹೋಗುವಿಕೆ | – ಸರಿದನು |
| ಸಂತವಿಡು | – ಸಂತೋಷಪಡಿಸು ಸಂತೈಸುವಿಕೆ | – ಸಂತವಿಟ್ಟನು |
| ಸವಿ | – ರುಚಿನೋಡು, ತಿನ್ನು | – ಸವಿದನು |
| ಸಡಿಲು | – ಕಟ್ಟುಸಡಿಲಾಗುವಿಕೆ | – ಸಡಿಲಿದೆ |
| ಸದೆ | – ಹೊಡೆ, ಬಡಿ | – ಸದೆದನು |
| ಸಾ (ಸಾಯ್) | – ಮರಣಹೊಂದು | – ಸತ್ತನು |
| ಸಾಕು | – ರಕ್ಷಿಸು | – ಸಾಕಿದನು |
| ಸಾರಿಸು | – ಸಾರಣೆ ಮಾಡುವಿಕೆ | – ಸಾರಿಸಿದಳು |
| ಸಾರು | – ಪ್ರಕಟಪಡಿಸು ಹತ್ತಿರಕ್ಕೆ ಹೋಗು | – ಸಾರಿದರು |
| ಸಾಗು | – ಹೋಗು, ನಡೆ | – ಸಾಗಿದನು |
| ಸಿಗು | – ಕೈಸೇರು | – ಸಿಕ್ಕಿತು |
| ಸೀನ್ (ಸೀನು) | – ಸೀನುವಿಕೆ | – ಸೀತನು |
| ಸೀಯ್ | – ಸುಡುವಿಕೆ ಕಮರುವಿಕೆ, ಹೊತ್ತುವಿಕೆ | – ಅನ್ನ ಸೀತಿದೆ (ಸೀದಿದೆ) |
| ಸಿಲುಕು | – ಬಂಧನಕ್ಕೊಳಗಾಗು ಹಸ್ತಗತವಾಗು | – ಸಿಲುಕಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಸಿಗು | – ಹಸ್ತಗತವಾಗು | – ಸಿಕ್ಕಿತು |
| ಸುಗಿ | – ಸುಗಿಯುವಿಕೆ | – ಸುಗಿದನು |
| ಸುಯ್ | – ಉಸಿರುಬಿಡು | – ಸುಯ್ದನು |
| ಸುಲಿ | – ಸಿಪ್ಪೆಸುಲಿಯುವಿಕೆ | – ಸುಲಿದನು |
| ಸುಳಿ | – ತಿರುಗುವಿಕೆ | – ಸುಳಿದನು |
| ಸೂಸು | – ತುಂಬು | – ಸೂಸಿದೆ |

| | | |
|---|---|---|
| ಸೆಣಸು | – ಯುದ್ಧಮಾಡು | – ಸೆಣಸಿದನು |
| ಸೆಳೆ | – ಜಗ್ಗು | – ಸೆಳೆದನು |
| ಸೊಲ್ಲಿಸು | – ಮಾತಾಡುವಿಕೆ | – ಸೊಲ್ಲಿಸಿದನು |
| ಸೋಲ್ (ಸೋಲು) | – ಅಪಜಯ | – ಸೋತನು |
| ಹರಡು | – ಹರಡುವಿಕೆ | – ಹರಡಿದನು |
| ಹವಣಿಸು | – ಅಪೇಕ್ಷಿಸು, ಇಚ್ಛಿಸು ಸಿದ್ಧಪಡಿಸು | – ಹವಣಿಸಿದನು |
| ಹಂಚು | – ಹಂಚುವಿಕೆ | – ಹಂಚಿದನು |
| ಹತ್ತು | – ಏರು | – ಹತ್ತಿದನು |
| ಹನಿ | – ತೊಟ್ಟಿಕ್ಕು | – ಹನಿಯುತ್ತದೆ |
| ಹನಿಸು | – ಎರೆಯುವಿಕೆ | – ಹನಿಸಿದನು |
| ಹರಸು | – ಆಶೀರ್ವಾದಮಾಡು | – ಹರಸಿದನು |
| ಹಿಂಡು | – ಹಿಂಡುವಿಕೆ | – ರಸಹಿಂಡಿದನು ತೊಂದರೆಕೊಡುವಿಕೆ |
| ಹುರಿ | – ಹುರಿಯುವಿಕೆ | – ಹುರಿದನು |
| ಹರಿ | – ಹರಿಯುವಿಕೆ | – ಹರಿಯಿತು |
| ಹಿರಿ | – ಹೊರಗೆಳೆ | – ಹಿರಿದನು |
| ಹಬ್ಬು | – ವಿಸ್ತಾರವಾಗು | – ಹಬ್ಬಿತು |
| ಹಳಿ | – ನಿಂದಿಸು | – ಹಳಿದನು |
| ಹಾರು | – ಜಿಗಿಯುವಿಕೆ, ನೆಗೆಯುವಿಕೆ | – ಹಾರಿದನು |
| ಹಾರು | – ಎದುರುನೋಡು | – ಹಾರಿದನು |
| ಹಾಡು | – ಸಂಗೀತ ಹೇಳುವಿಕೆ | – ಹಾಡಿದನು |
| ಹಿಂಗು | – ನೀಗು, ಬಿಟ್ಟುಬಿಡು | – ಹಿಂಗಿತು |
| ಹಿಂಜು | – ಹಿಂಜುವಿಕೆ | – ಹತ್ತಿಯನ್ನು ಹಿಂಜಿದನು |

| **ಧಾತು** | **– ಅರ್ಥ** | **– ಕ್ರಿಯಾಪದ** |
|---|---|---|
| ಹಿಸುಕು (ಹಿಚುಕು) | – ಒತ್ತೊವಿಕೆ | – ಹಿಸುಕಿದನು ಹಿಚುಕಿದನು |
| ಹೀರು | – ಹೀರುವಿಕೆ | – ರಸ ಹೀರಿದನು |
| ಹುಗಿ | – ನೆಲದಲ್ಲಿ ಮುಚ್ಚು | – ಹುಗಿದನು |
| ಹೆರು | – ಪ್ರಸವಕ್ರಿಯೆಯಲ್ಲಿ | – ಹೆತ್ತಳು |
| ಹೆಣಗು | – ಯತ್ನಿಸು | – ಹೆಣಗಿದನು |

| | | |
|---|---|---|
| ಹೇರು | – ಭಾರಹೇರುವಿಕೆ | – ಭಾರಹೇರಿದನು |
| ಹೇವರಿಸು | – ನಾಚು | – ಹೇವರಿಸಿದನು |
| ಹೊರೆ | – ರಕ್ಷಣೆಮಾಡು | – ಹೊರೆದನು |
| ಹೊಂದು | – ಸೇರು, ಪಡೆ | – ಹೊಂದಿದನು |
| ಹೊಳೆ | – ಪ್ರಕಾಶಿಸು | – ಹೊಳೆಯುತ್ತದೆ |
| ಹೋರು | – ಯುದ್ಧಮಾಡು ಜಗಳವಾಡು | – ಹೋರಿದನು |
| ಹೋಲು | – ಸಮನಾಗು ಹೋಲಿಕೆಯಲ್ಲಿ | – ಹೋಲುತ್ತಾನೆ |

* * * * *

## ಅಧ್ಯಾಯ ೬

# ಸಮಾಸ ಪ್ರಕರಣ

(೧) **ಅರಸನ–ಮನೆಯಲ್ಲಿ**–ಸಂಭ್ರಮ ಬಹಳ

ಈ ವಾಕ್ಯದಲ್ಲಿ ಕೆಳಗೆ ಗೆರೆ ಹಾಕಿರುವ '**ಅರಸನ**' ಎಂಬ ಪದದ, '**ಮನೆಯಲ್ಲಿ**' ಎಂಬ ಪದದ ಅರ್ಥಗಳೂ ಬೇರೆಬೇರೆ. ಆದರೆ ಅದೇ ಅರ್ಥವೇ ಬರುವಂತೆ ಅವೆರಡು ಪದಗಳನ್ನು '**ಅರಮನೆಯಲ್ಲಿ**' ಎಂಬ ಒಂದೇ ಪದ ಮಾಡಿ ಹೇಳಬಹುದು. ಹೀಗೆ ಒಂದೇ ಪದ ಮಾಡಿ

ಹೇಳಿದುದರಿಂದ ಸ್ವಲ್ಪ ಕಾಲವೂ, ಧ್ವನಿಯೂ, ಬರೆಯುವ ಶ್ರಮವೂ ಕಡಿಮೆಯಾಯಿತಲ್ಲವೆ? ಅರ್ಥವೂ ಕೆಡುವುದಿಲ್ಲ.

(೨) **ಹಿರಿದಾದ ತೊರೆಯು** ಹರಿಯುತ್ತಿತ್ತು–

ಈ ವಾಕ್ಯದಲ್ಲೂ, '**ಹಿರಿದಾದ**' '**ತೊರೆಯು**' ಎಂಬೆರಡು ಪದಗಳಿವೆ. ಇವನ್ನು ಮೇಲಿನಂತೆ **'ಹೆದ್ದೊರೆ'** ಹರಿಯುತ್ತಿತ್ತು ಎನ್ನಬಹುವುದು.

(೩) **ಕಾಲಿನ ಬಳೆಗಳನ್ನು** ತಂದನು–

ಈ ವಾಕ್ಯದಲ್ಲೂ '**ಕಾಲಿನ**' '**ಬಳೆಗಳನ್ನು**' ಎಂಬೆರಡು ಪದಗಳನ್ನು '**ಕಾಲುಬಳೆಗಳನ್ನು**' ತಂದನು–ಎಂದು ಹೇಳಬಹುದು.

(೪) ಈ ಊರ ಜನರು **ಕೆರೆಗಳ, ಕಟ್ಟೆಗಳ, ಬಾವಿಗಳ,** ಸೌಲಭ್ಯ ಪಡೆದಿದ್ದಾರೆ.–

ಇಲ್ಲಿ **ಕೆರೆಗಳ, ಕಟ್ಟೆಗಳ, ಬಾವಿಗಳ** ಎಂಬ ಈ ಮೂರು ಪದಗಳನ್ನು '**ಕೆರೆಕಟ್ಟೆಬಾವಿಗಳ**' ಎಂದು ಒಂದು ಪದ ಮಾಡಿ ಹೇಳಬಹುದು. ಹೀಗೆ ಎರಡು, ಮೂರು ಅಥವಾ ಹೆಚ್ಚು ಪದಗಳನ್ನು ಒಂದೇ ಪದ ಮಾಡಿ ಹೇಳಿದಾಗ ನಮಗೆ ಕಾಲದ ಉಳಿತಾಯವಾಗುತ್ತದೆ; ಬರೆಯುವುದಕ್ಕೆ ಉಪಯೋಗಿಸುವ ಶಕ್ತಿಯ ಉಳಿತಾಯವಾಗುತ್ತದೆ. ಅನ್ನುವುದಕ್ಕೆ (ಹೇಳುವುದಕ್ಕೆ) ಉಪಯೋಗಿಸುವ ಧ್ವನಿಶಕ್ತಿಯ ಉಳಿತಾಯವಾಗುತ್ತದೆ. ಮನುಷ್ಯನು ಯಾವಾಗಲೂ ಸೌಲಭ್ಯಾಕಾಂಕ್ಷಿಯಲ್ಲವೆ? ಭಾಷೆಯಲ್ಲೂ ಈ ತರದ ಸೌಲಭ್ಯಗಳನ್ನು ಮನುಷ್ಯ ಮಾಡಿಕೊಳ್ಳುತ್ತಾನೆ. ಆದರೆ ಹೀಗೆ ಎಲ್ಲ ಕಡೆಗೂ ಮೂರು ಪದಗಳನ್ನು ಕೂಡಿಸಿ ಒಂದು ಪದ ಮಾಡಿ ಹೇಳಲು ಶಕ್ಯವಿಲ್ಲ. ಎರಡು ಪದಗಳು ಸೇರಿ ಸಮಸ್ತಪದವಾಗುವುದೇ ಹೆಚ್ಚು. ಕೆಲವು ಕಡೆ ಮೂರು ನಾಲ್ಕು ಪದಗಳೂ ಸೇರಿ **ಸಮಸ್ತಪದ**ವಾಗುವುದು.

(೧) **ಅರಸನ ಮನೆ**–ಇವೆರಡೂ ಪದಗಳನ್ನೂ ಕೂಡಿಸಿ ಒಂದೇ ಪದ ಮಾಡಿ ಹೇಳಿದಾಗ 'ಅರಸು' ಪ್ರಕೃತಿಯ ಮುಂದೆ ಇರುವ '**ಅ**' ಎಂಬ ಷಷ್ಠೀ ವಿಭಕ್ತಿಯೂ, ಅದರ ನಿಮಿತ್ತವಾಗಿ ಬಂದ '**ನ**' ಕಾರಾಗಮವೂ, ಹೋಗುವುವು. ಇದೂ ಅಲ್ಲದೆ ಒಮ್ಮೊಮ್ಮೆ ಪ್ರಕೃತಿಯಲ್ಲಿರುವ '**ಸ**' ಕಾರವೂ ಹೋಗುವುದುಂಟು. ಹೀಗೆ ಇವೆಲ್ಲ ಲೋಪವಾಗಿ '**ಅರ**' ಎಂಬ ಪ್ರಕೃತಿಯ ಒಂದು ಭಾಗವುಳಿದು '**ಅರಮನೆ**' ಎಂಬ ಅರಸನ ಸಂಬಂಧವಾದ ಮನೆ ಎಂಬ ಅರ್ಥ ಬರುವ ಸಮಸ್ತಪದವು ಸಿದ್ಧವಾಯಿತು.

(೨) **ಹಿರಿದಾದ ತೊರೆ**–ಇವೆರಡೂ ಪದಗಳನ್ನು ಸೇರಿಸಿ ಒಂದು ಪದ ಮಾಡಿ ಹೇಳಿದಾಗ '**ಹಿರಿದು**' ಎಂಬ ಪ್ರಕೃತಿಯು '**ಹೆದ್**' ಎಂಬ ರೂಪ ಧರಿಸುವುದು. '**ತೊರೆ**' ಎಂಬಲ್ಲಿಯ ಮೊದಲ ವ್ಯಂಜನವಾದ '**ತ್**' ಕಾರವು ದಕಾರವಾಗಿ '**ಹೆದ್ದೊರೆ**' ಎಂಬ ಸಮಸ್ತಪದವಾಯಿತು. ಹೀಗೆಲ್ಲ ಮೂಲಪದಗಳು ರೂಪಾಂತರ ಹೊಂದಿ ಸಮಸ್ತಪದಗಳಾಗುವುದುಂಟು.

(೩) **ಕಾಲಿನ ಬಳೆ**–ಇವೆರಡು ಪದಗಳನ್ನು ಸೇರಿಸಿ ಸಮಸ್ತ ಪದ ಮಾಡಿ ಹೇಳುವಾಗ '**ಕಾಲು**' ಎಂಬ ಪ್ರಕೃತಿಯ ಮುಂದೆ ಬಂದ '**ಅ**' ವಿಭಕ್ತಿಯೂ, ಆ ವಿಭಕ್ತಿಯ ನಿಮಿತ್ತವಾಗಿ

ಬಂದ '**ನ**' ಕಾರಾಗಮವೂ ಲೋಪವಾಗಿ '**ಕಾಲು**' ಎಂಬ ಪ್ರಕೃತಿ ಮಾತ್ರ ಉಳಿದು '**ಕಾಲುಬಳೆ**' ಎಂಬ **ಸಮಸ್ತಪದ** ಸಿದ್ಧವಾಯಿತು.

(೪) **ಕೆರೆಗಳ, ಕಟ್ಟೆಗಳ, ಬಾವಿಗಳ** ಎಂಬ ಈ ಮೂರು ಪದಗಳಲ್ಲಿ ಇರುವ '**ಅ**' ಎಂಬ ಷಷ್ಠೀವಿಭಕ್ತಿಯೂ, ಬಹುವಚನಗಳನ್ನು ಸೂಚಿಸುವ '**ಗಳು**' ಎಂಬ ಆಗಮವೂ ಲೋಪವಾಗಿ '**ಕೆರೆ, ಕಟ್ಟೆ, ಬಾವಿ**' ಎಂಬ ಪ್ರಕೃತಿ ಮಾತ್ರ ಉಳಿದು '**ಕೆರೆಕಟ್ಟೆಬಾವಿ**' ಎಂಬ ಸಮಸ್ತಪದ ಸಿದ್ಧವಾಗುವುದು. ಮುಂದೆ '**ಗಳು**' ಎಂಬ ಬಹುವಚನ ಸೂಚಕ ಆಗಮವೂ '**ಅ**' ಎಂಬ ಷಷ್ಠೀವಿಭಕ್ತಿಯೂ ಸೇರಿ "**ಕೆರೆಕಟ್ಟೆಬಾವಿಗಳ**" ಎಂಬ ಷಷ್ಠೀವಿಭಕ್ತ್ಯಂತ ಸಮಸ್ತಪದವು ಸಿದ್ಧವಾಗುವುದು. ಮೇಲಿನ ವಿವರಣೆಯಿಂದ ಸಮಸ್ತಪದಗಳು ಹೇಗೆ ಸಿದ್ಧಿಸುತ್ತವೆಂಬುದರ ಕಲ್ಪನೆಯಾಗುವುದು. ಸೇರುವ ಪದಗಳು ಅರ್ಥಸಂಬಂಧ ಪಡೆದಿರಬೇಕು. ಒಮ್ಮೊಮ್ಮೆ ಪ್ರಕೃತಿಗಳೂ ವಿಕಾರಗಳಾಗುವುದುಂಟು. '**ಅರಸು**' ಎಂಬ ಪ್ರಕೃತಿಯು '**ಅರ**' ಎಂದೂ, '**ಹಿರಿದು**' ಎಂಬುದು '**ಹೆದ್**' ಎಂದೂ ಉಳಿದಿರುವುದನ್ನು ತಿಳಿದಿದ್ದೀರಿ. ಇಂಥ ಸಮಸ್ತ ಪದವನ್ನೇ '**ಸಮಾಸ**' ಎಂದು ಹೇಳುತ್ತಾರೆ. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(74) ಸಮಾಸ–ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಸಾರವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದೇ ಸಮಾಸವೆನಿಸುವುದು.**

**ಸಮಾಸದಲ್ಲಿ ಬರುವ ಮೊದಲನೆಯ ಪದವು ಪೂರ್ವಪದವೆಂದೂ, ಎರಡನೆಯ ಪದವು ಉತ್ತರಪದವೆಂದೂ ಕರೆಯಿಸಿಕೊಳ್ಳುವುದು. ಸಮಸ್ತ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹವಾಕ್ಯವೆನ್ನುವರು.**

ಉದಾಹರಣೆಗೆ:–

| **ಪೂರ್ವಪದ** | **+** | **ಉತ್ತರಪದ** | **=** | **ಸಮಸ್ತಪದ (ಸಮಾಸ)** |
|---|---|---|---|---|
| ಮಳೆಯ | + | ಕಾಲ | = | ಮಳೆಗಾಲ |
| ಮರದ | + | ಕಾಲು | = | ಮರಗಾಲು |
| ಕಾಲಿನ | + | ಬಳೆ | = | ಕಾಲುಬಳೆ |
| ದೇವರ | + | ಮಂದಿರ | = | ದೇವಮಂದಿರ |
| ಹಿರಿದು | + | ತೊರೆ | = | ಹೆದ್ದೊರೆ |
| ಹಿರಿದು | + | ಜೇನು | = | ಹೆಜ್ಜೇನು |
| ದೊಡ್ಡದಾದ | + | ಕಲ್ಲು | = | ದೊಡ್ಡಕಲ್ಲು |
| ಕೈಯ | + | ಮುಂದು | = | ಮುಂಗೈ |
| ಕಾಲಿನ | + | ಹಿಂದು | = | ಹಿಂಗಾಲ್ |
| ಚಕ್ರವು | + | ಪಾಣಿಯಲ್ಲಿ (ಆವಂಗೋ) | = | ಚಕ್ರಪಾಣಿ (ವಿಷ್ಣು) |

ಮೂರು + ಕಣ್ಣು (ಉಳ್ಳವ) = ಮುಕ್ಕಣ್ಣ (ಶಿವ)

**ಹೀಗೆ ನಾವು ಸಮಾಸ ಮಾಡುವುದಕ್ಕೂ ಕೆಲವು ನಿಬಂಧನೆಗಳಿವೆ.** ನಾವಾಡುವ ಕನ್ನಡ ಭಾಷೆಯಲ್ಲಿ '**ಅನ್ಯದೇಶ್ಯ**' ಶಬ್ದಗಳೆಷ್ಟೋ ಇವೆಯೆಂದು ಹಿಂದಿನ ಪ್ರಕರಣಗಳಲ್ಲಿ ತಿಳಿದಿದ್ದೀರಿ. ಸಂಸ್ಕೃತ ಶಬ್ದಗಳು ನಮ್ಮ ಭಾಷೆಯಲ್ಲಿ ವಿಶೇಷವಾಗಿ ಸೇರಿಹೋಗಿವೆ.

## I – ಅರಿಸಮಾಸ

**ಸಂಸ್ಕೃತ–ಸಂಸ್ಕೃತ ಶಬ್ದಗಳೇ ಸೇರಿ ಸಮಾಸವಾಗಬಹುದು ಅಥವಾ ಕನ್ನಡ–ಕನ್ನಡ ಶಬ್ದಗಳು ಸೇರಿ ಸಮಾಸವಾಗಬಹುದು. ತದ್ಭವ–ತದ್ಭವ ಶಬ್ದಗಳು ಸೇರಿ ಸಮಾಸವಾಗ ಬಹುದು. ಅಥವಾ ಅಚ್ಚಗನ್ನಡ ಶಬ್ದ ತದ್ಭವ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಹುದು. ಆದರೆ ಕನ್ನಡ–ಸಂಸ್ಕೃತ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಾರದು.** ಆದರೂ ಅನೇಕ ಹಿಂದಿನ ಮಹಾಕವಿಗಳು ಹಾಗೆ ಸೇರಿಸಿ ಸಮಾಸ ಮಾಡಿದ್ದಾರೆ. ಹಾಗೆ ಆಗಿಹೋಗಿರುವ ಸಮಾಸಗಳಿಗೆ ಹೊರತಾಗಿ ಮನಸ್ಸಿಗೆ ಬಂದ ಹಾಗೆ ಸಂಸ್ಕೃತ–ಕನ್ನಡ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಾರದು. ಹೀಗೆ ಸಂಸ್ಕೃತ–ಕನ್ನಡ ಶಬ್ದಗಳು ಸೇರಿ ಆಗುವ ಸಮಾಸವನ್ನು **ಅರಿಸಮಾಸ**ವೆಂದು ಹೇಳುತ್ತಾರೆ. ಅರಿಸಮಾಸವೆಂದರೇನು? ಎಂಬುದಕ್ಕೆ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(75) ಕನ್ನಡ ಪದದೊಡನೆ ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡಬಾರದು. ಹಾಗೆ ಮಾಡಿದರೆ ಅದನ್ನು 'ಅರಿಸಮಾಸ' ವೆನ್ನುವರು.**

**ಆದರೆ ಪೂರ್ವ ಕವಿಗಳು ಮಾಡಿರುವಲ್ಲಿ ದೋಷವೆಣಿಸಬಾರದು. ಬಿರುದಾವಳಿಗಳಲ್ಲಿ ದೋಷವಿಲ್ಲ. ಗಮಕಸಮಾಸ, ಕ್ರಿಯಾಸಮಾಸಗಳಲ್ಲಿ ದೋಷವಿಲ್ಲ.**

ಉದಾಹರಣೆಗೆ:– (೧) ಪೂರ್ವಕವಿಗಳು ಮಾಡಿದ ಸಮಾಸಗಳು–

ಮಳೆಯ + ಕಾಲ = ಮಳೆಗಾಲ
ತುರುಗದ + ದಳ = ತುರುಗದಳ
ಮಂಗಳದ + ಆರತಿ = ಮಂಗಳಾರತಿ
ದಳದ + ಪತಿ = ದಳಪತಿ

ಮೇಲಿನ ಸಮಾಸಗಳಲ್ಲಿ–**ಮಳೆಯ, ದಳ, ಆರತಿ, ದಳದ** ಇವೆಲ್ಲ ಕನ್ನಡ ಪದಗಳು. **ಕಾಲ, ತುರುಗ, ಮಂಗಳ, ಪತಿ**–ಇವೆಲ್ಲ ಸಂಸ್ಕೃತ ಪದಗಳು. ಇವು ಕೂಡಿ ಸಮಾಸವಾಗು ವುದು ತರವಲ್ಲ. ಆದರೂ ಹಿಂದಿನಿಂದ ಕವಿಗಳು ತಮ್ಮ ಕಾವ್ಯಗಳಲ್ಲಿ ಮಾಡಿ, ಪ್ರಯೋಗಿಸಿಬಿಟ್ಟಿದ್ದಾರಾದ್ದರಿಂದ ಇವು ಸಾಧುವೆಂದು ತಿಳಿಯಬೇಕು. ಇದರ ಹಾಗೆ

ಕಡಿದು + ರಾಗ = ಕಡುರಾಗ

| | | | | |
|---|---|---|---|---|
| ಮೊಗದ | + | ರಾಗ | = | ಮೊಗರಾಗ |
| ಕೂರಿತ್ತಾದ | + | ಅಸಿ | = | ಕೂರಸಿ |
| ಮಾರಾಂತ | + | ಬಲ | = | ಮಾರ್ಬಲ |
| ಪಿರಿದು | + | ಬಲ | = | ಪೆರ್ಬಲ |
| ಎರಡು | + | ಭಾಗ | = | ಇಬ್ಭಾಗ |
| ಪರಮ | + | ಬೊಮ್ಮ | = | ಪರಬೊಮ್ಮ |
| ಮಹಾ | + | ಕಾಳಿ | = | ಮಾಕಾಳಿ |
| ಪಂಚ | + | ಸರ | = | ಪಂಚಸರ |

ಇತ್ಯಾದಿ ಪೂರ್ವಕವಿ ಪ್ರಯೋಗಗಳಲ್ಲಿ ದೋಷವೆಣಿಸಬಾರದು. ಆದರೆ ಹೊಸದಾಗಿ ಈ ರೀತಿಯ ಸಮಸ್ತ ಪದಗಳನ್ನು ಮಾಡುವುದರ ಮೂಲಕ ಭಾಷೆಯನ್ನು ಕೆಡಿಸಬಾರದೆಂದು ಕಟ್ಟುಪಾಡು ಮಾಡಿದ್ದಾರೆಂದು ಭಾವಿಸಬೇಕು.

(೨) **ಬಿರುದಾವಳಿಗಳಲ್ಲಿ ದೋಷವೆಣಿಸಬಾರದು–ದಳಮುಖಧವಳ, ರಾಯಕೋಲಾಹಲ, ದಳಮುಖಾದಿತ್ಯ, ಅಂಕತ್ರಿಣೇತ್ರ**–ಇತ್ಯಾದಿಗಳು ಬಿರುದಾವಳಿಗಳು.

ಯಾವುದಾದರೂ ಒಂದು ಮಹತ್ವದ ಯುದ್ಧದಲ್ಲಾಗಲಿ, ಅಥವಾ ಮಹತ್ವದ ಕಾರ್ಯದಲ್ಲಾಗಲಿ, ಇನ್ನಾವುದಾದರೂ ಅತಿಶಯವಾದ ಕಾರ್ಯದಲ್ಲಿ ಹೆಸರುವಾಸಿಯಾದಾಗಲೇ ರಾಜರು ಕೆಲವರಿಗೆ ಬಿರುದುಗಳನ್ನು ಕೊಡುವುದುಂಟು. ಇದು ಹಿಂದಿನ ಪದ್ಧತಿ. ಮೇಲೆ ಹೇಳಿದ ಬಿರುದುಗಳು ಅಂಥವು. ಇವೆಲ್ಲ ನಮ್ಮ ಕನ್ನಡ ಕಾವ್ಯಗಳಲ್ಲಿ ಬಂದಿವೆ. ಇಂಥವುಗಳಿಗೇ ನಾವು ಬಿರುದಾವಳಿಗಳು ಎನ್ನುತ್ತೇವೆ. ಮೇಲಿನ ಬಿರುದಾವಳಿಗಳಲ್ಲಿ '**ದಳ**' '**ರಾಯ**' '**ಅಂಕ**' ಮೊದಲಾದ ಶಬ್ದಗಳು ಕನ್ನಡ ಶಬ್ದಗಳು. ಇವು ಸಂಸ್ಕೃತ ಶಬ್ದಗಳೊಡನೆ ಸೇರಿ ಸಮಸ್ತಪದಗಳಾಗಿವೆ.

ದಳದ + ಮುಖಕ್ಕೆ + ಧವಳ = ದಳಮುಖಧವಳ[57]
ರಾಯರಲ್ಲಿ + ಕೋಲಾಹಲ = ರಾಯಕೋಲಾಹಲ[58]
ದಳದ + ಮುಖಕ್ಕೆ + ಆದಿತ್ಯ = ದಳಮುಖಾದಿತ್ಯ[59]

---

[57] ದಳಮುಖಧವಳ–ಸೈನ್ಯದ ಮುಂಭಾಗದಲ್ಲಿ ವಿಶೇಷ ಪ್ರಕಾಶಮಾನನಾದವ ಎಂದು ಒಟ್ಟು ಅರ್ಥ ಹೇಳಬೇಕು. ದಳ=ಸೈನ್ಯದ, ಮುಖ=ಮುಂಭಾಗಕ್ಕೆ, ಧವಳ=ಧವಳವರ್ಣದಿಂದ ಕೂಡಿದವ–ಎಂದರೆ ಪ್ರಕಾಶಮಾನನಾದವ ಅಥವಾ ಶೋಭಿತರುವವ–ಎಂದು ಅರ್ಥ.

[58] ರಾಯಕೋಲಾಹಲ–ವೈರಿರಾಜರಲ್ಲಿ ಕೋಲಾಹಲವನ್ನುಂಟುಮಾಡುವ ಸಾಮರ್ಥ್ಯ ಪಡೆದವ.

[59] ದಳಮುಖಾದಿತ್ಯ–ಸೈನ್ಯದ ಮುಂಭಾಗದಲ್ಲಿ ಸೂರ್ಯನಂತೆ ಪ್ರಕಾಶಿಸುವವ.

ಅಂಕದಲ್ಲಿ + ತ್ರಿಣೇತ್ರ = ಅಂಕತ್ರಿಣೇತ್ರ[60]

(೩) ಗಮಕ ಮತ್ತು ಕ್ರಿಯಾಸಮಾಸಗಳಲ್ಲಿ ಅರಿಸಮಾಸ ದೋಷವಿಲ್ಲದಿರುವುದನ್ನು ಮುಂದೆ ಆಯಾಯ ಸಮಾಸಗಳನ್ನು ವಿವರಿಸಿರುವಲ್ಲಿ ತಿಳಿಯುತ್ತೀರಿ.

ಮೇಲಿನ ಕೆಲವು ಸೂಚನೆಗಳ ಪ್ರಕಾರ ಎಂಥ ಪದಗಳೊಡನೆ ಸಮಾಸ ಮಾಡಬೇಕು, ಮಾಡಬಾರದು ಎಂಬ ಬಗೆಗೆ ಹಲವು ವಿಷಯ ತಿಳಿದಿರಿ. ಈಗ ಹೀಗೆ ಸಮಾಸಗಳನ್ನು ಎಷ್ಟು ವಿಧಗಳಲ್ಲಿ ಮಾಡಬಹುದು? ಎಂಬ ಬಗೆಗೆ ತಿಳಿಯೋಣ.

## II – ಸಮಾಸದ ವಿಧಗಳು

ಸಮಾಸ ಸಮಸ್ತ ಪದವಾಗುವಿಕೆಯನ್ನು ಎಂಟು ವಿಧಗಳಲ್ಲಿ ವಿಂಗಡಿಸುವುದು ಕನ್ನಡದಲ್ಲಿ ರೂಢಿ. ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದ್ದಾರೆ.

**(76) ಸಮಾಸಗಳು ಒಟ್ಟು (೧) ತತ್ಪುರುಷ (೨) ಕರ್ಮಧಾರಯ (೩) ದ್ವಿಗು (೪) ಅಂಶಿ (೫) ದ್ವಂದ್ವ (೬) ಬಹುವ್ರೀಹಿ (೭) ಕ್ರಿಯಾ[61] (೮) ಗಮಕ ಸಮಾಸವೆಂದು ಎಂಟು ವಿಧ.**

### (೧) ತತ್ಪುರುಷಸಮಾಸ

'**ಅರಮನೆ**' ಎಂಬ ಸಮಸ್ತಪದವನ್ನು ಬಿಡಿಸಿದಾಗ **ಅರಸನ+ಮನೆ** ಎಂದು ಆಗುವುದು. ಇಲ್ಲಿ ಅರಸನ ಎಂಬ ಪದದ ಅರ್ಥ ಮುಖ್ಯವೋ? '**ಮನೆ**' ಎಂಬ ಪದದ ಅರ್ಥ ಮುಖ್ಯವೋ? ಎಂದರೆ–'**ಮನೆ**' ಎಂಬ ಪದದ ಅರ್ಥವೇ ಮುಖ್ಯ. ಯಾರ ಮನೆ? ಎಂಬ ಪ್ರಶ್ನೆಗೆ '**ಅರಸನ**' ಸಂಬಂಧವಾದ ಮನೆ ಎಂದು ಗೊತ್ತಾಗುವುದು. ಆದುದರಿಂದ '**ಮನೆ**' ಎಂಬ '**ಪದ**' ಈ ಸಮಸ್ತಪದದಲ್ಲಿ ಮುಖ್ಯ.

'**ಕಾಲುಬಳೆ**' ಎಂಬ ಸಮಸ್ತಪದದಲ್ಲೂ ಹೀಗೆಯೆ ಕಾಲಿನ ಸಂಬಂಧವಾದ '**ಬಳೆ**' ಎಂಬರ್ಥ ಬರುವುದು. '**ಬಳೆ**' ಗಳು ಅನೇಕ ವಿಧ. ಆದರೆ '**ಕಾಲಿನ**' ಎಂಬ ಪದವು ಕಾಲಿಗೆ ಸಂಬಂಧಿಸಿದ '**ಬಳೆ**' ಎಂಬ ಪದದ ಅರ್ಥವನ್ನು ಪ್ರಧಾನವೆಂದು ವ್ಯವಸ್ಥೆ ಮಾಡಿ ತೋರಿಸುವುದು.

**ಅರಮನೆ, ಕಾಲುಬಳೆ** ಈ ಸಮಸ್ತಪದಗಳಲ್ಲಿ ಎರಡೂ ಪದಗಳು ನಾಮಪದಗಳೇ ಆಗಿವೆ ಮತ್ತು ಉತ್ತರದಲ್ಲಿರುವ ಪದಗಳ ಅರ್ಥವೇ ಪ್ರಧಾನವಾಗಿದೆ. ಆದ್ದರಿಂದ ಇದರ ಸೂತ್ರವನ್ನು ಹೀಗೆ ಹೇಳಬಹುದು.

---

[60] ಅಂಕತ್ರಿಣೇತ್ರ–ಯುದ್ಧದಲ್ಲಿ ತ್ರಿಣೇತ್ರನಿಗೆ ಸಮಾನಾದವನು. ಅಂಕ ಶಬ್ದಕ್ಕೆ ಹಲವಾರು ಅರ್ಥಗಳುಂಟು. ಇಲ್ಲಿ ಯುದ್ಧಶಬ್ದವೇ ಸಾಧುವಾದುದು.

[61] ಕ್ರಿಯಾಸಮಾಸವನ್ನು ಕೆಲವರು ದ್ವಿತೀಯಾ ತತ್ಪುರುಷ ಸಮಾಸವೆಂದೂ ಹೇಳುವುದುಂಟು.

**(77) ತತ್ಪುರುಷಸಮಾಸ:– ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆನ್ನುವರು.**

(ಪೂರ್ವಪದವು ತೃತೀಯಾದಿ ವಿಭಕ್ತಿಗಳಿಂದ ಮೊದಲ್ಗೊಂಡು ಸಪ್ತಮೀವಿಭಕ್ತಿಯ ವರೆಗೆ ಯಾವುದಾದರೂ ವಿಭಕ್ತ್ಯಂತವಾಗಿರಬೇಕು. ಆಗ ಮೊದಲಪದದ ವಿಭಕ್ತಿ ಯಾವುದೋ ಅದರ ಹೆಸರಿನಲ್ಲಿ ಸಮಾಸ ಹೇಳುವುದು ವಾಡಿಕೆ[62].)

ಉದಾಹರಣೆಗೆ:– (i) **ಕನ್ನಡ–ಕನ್ನಡ ಶಬ್ದಗಳು ಸೇರಿ ಸಮಾಸವಾಗಿರುವುದಕ್ಕೆ–**

| | | | | | |
|---|---|---|---|---|---|
| ಮರದ | + | ಕಾಲು | = | ಮರಗಾಲು | (ಷಷ್ಠೀತತ್ಪುರುಷ) |
| ಬೆಟ್ಟದ | + | ತಾವರೆ | = | ಬೆಟ್ಟದಾವರೆ | ( ” ) |
| ಕಲ್ಲಿನ | + | ಹಾಸಿಗೆ | = | ಕಲ್ಲುಹಾಸಿಗೆ | ( ” ) |
| ತಲೆಯಲ್ಲಿ | + | ನೋವು | = | ತಲೆನೋವು | (ಸಪ್ತಮೀತತ್ಪುರುಷ) |
| ಹಗಲಿನಲ್ಲಿ | + | ಕನಸು | = | ಹಗಲುಗನಸು | ( ” ) |
| ತೇರಿಗೆ | + | ಮರ | = | ತೇರುಮರ | (ಚತುರ್ಥೀತತ್ಪುರುಷ) |
| ಕಣ್ಣಿನಿಂದ | + | ಕುರುಡ | = | ಕಣ್ಣುಕುರುಡ | (ತೃತೀಯಾತತ್ಪುರುಷ) |

(ii) **ಸಂಸ್ಕೃತ–ಸಂಸ್ಕೃತ ಶಬ್ದಗಳು ಸೇರಿ ಸಮಾಸವಾಗಿರುವುದಕ್ಕೆ–**

| | | | | | |
|---|---|---|---|---|---|
| ಕವಿಗಳಿಂದ | + | ವಂದಿತ | = | ಕವಿವಂದಿತ | (ತೃತೀಯಾತತ್ಪುರುಷ) |
| ವ್ಯಾಘ್ರದೆಸೆಯಿಂದ | + | ಭಯ | = | ವ್ಯಾಘ್ರಭಯ | (ಪಂಚಮೀತತ್ಪುರುಷ) |
| ಉತ್ತಮರಲ್ಲಿ | + | ಉತ್ತಮ | = | ಉತ್ತಮೋತ್ತಮ | (ಸಪ್ತಮೀತತ್ಪುರುಷ) |
| ದೇವರ | + | ಮಂದಿರ | = | ದೇವಮಂದಿರ | (ಷಷ್ಠೀತತ್ಪುರುಷ) |
| ಧನದ | + | ರಕ್ಷಣೆ | = | ಧನರಕ್ಷಣೆ | (ಷಷ್ಠೀತತ್ಪುರುಷ) |
| ವಯಸ್ಸಿನಿಂದ | + | ವೃದ್ಧ | = | ವಯೋವೃದ್ಧ | (ತೃತೀಯಾತತ್ಪುರುಷ) |

ವಿಚಾರ:– ಮೇಲೆ ವಿವರಣೆ ಮಾಡಿರುವಂತಹ ಸಮಾಸವಾಗಿರುವ ಉದಾಹರಣೆಗಳಲ್ಲಿ ಮಳೆಗಾಲ, ಮರಗಾಲು, ಬೆಟ್ಟದಾವರೆ–ಈ ಸಮಾಸಗಳಲ್ಲಿ '**ಕಾಲ**' ಎಂಬಲ್ಲಿಯ **ಕಕಾರಕ್ಕೆ ಗಕಾರವೂ,** '**ಕಾಲು**' ಎಂಬಲ್ಲಿ **ಕಕಾರಕ್ಕೆ ಗಕಾರವೂ**[63]**, ತಾವರೆ** ಎಂಬಲ್ಲಿ **ತಕಾರಕ್ಕೆ ದಕಾರವೂ** ಆದೇಶಗಳಾಗಿ ಬಂದಿರುವುದನ್ನು ಗಮನಿಸಿರಿ. ಹೀಗೆ ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ **ಕತಪ** ವ್ಯಂಜನಗಳಿಗೆ ಕ್ರಮವಾಗಿ **ಗದಬ** ವ್ಯಂಜನಗಳೂ, **ಪಬಮ** ವ್ಯಂಜನಗಳಿಗೆ

---

62 ಕಾಲಿನ+ಬಳೆ=ಕಾಲುಬಳೆ, ಮೊದಲಿನ ಪದದಲ್ಲಿ ಷಷ್ಠೀವಿಭಕ್ತಿ ಇದ್ದು ಅದು ಸಮಾಸವಾದಾಗ ಲೋಪವಾಗುವುದು. ಆದ್ದರಿಂದ ಇದನ್ನು ಷಷ್ಠೀತತ್ಪುರುಷಸಮಾಸ ಎಂದು ಕರೆಯುವುದು ವಾಡಿಕೆ.

63 'ಕ್' ಎಂಬುದಕ್ಕೆ 'ಗ್' ಎಂಬುದು ಎಂದು ತಿಳಿಯಬೇಕು. ವ್ಯಂಜನಕ್ಕೆ ಅದೇ ವ್ಯಂಜನ ಶೇಷವಾಗಿ ಬರುತ್ತದೆ.

**ವಕಾರವೂ** ಆದೇಶವಾಗಿ ಬರುವುದುಂಟು. ಬಾರದಿರುವುದೂ ಕೆಲವು ಕಡೆಗುಂಟು. ಈ ವಿಚಾರವನ್ನು ಹಿಂದಿನ ಸಂಧಿಪ್ರಕರಣದಲ್ಲಿ ಆದೇಶ ಸಂಧಿಗಳು ಎಂಬಲ್ಲಿ ವಿಷದವಾಗಿ ಹೇಳಿದೆ. ಜ್ಞಾಪಿಸಿಕೊಳ್ಳಿ.

## (೨) ಕರ್ಮಧಾರಯ ಸಮಾಸ

ದೊಡ್ಡವನು + ಹುಡುಗನು = ದೊಡ್ಡಹುಡುಗನು
ದೊಡ್ಡವಳು + ಹೆಂಗಸು = ದೊಡ್ಡಹೆಂಗಸು
ಹಿರಿಯರು + ಮಕ್ಕಳು = ಹಿರಿಯಮಕ್ಕಳು
ಚಿಕ್ಕವರಿಂದ + ಮಕ್ಕಳಿಂದ = ಚಿಕ್ಕಮಕ್ಕಳಿಂದ

ಮೇಲಿನ ಈ ಉದಾಹರಣೆಗಳನ್ನು ನೋಡಿದರೆ–ದೊಡ್ಡವನು, ದೊಡ್ಡವಳು, ಹಿರಿಯರು, ಚಿಕ್ಕವರು ಇತ್ಯಾದಿ ಪದಗಳು ಕ್ರಮವಾಗಿ ಹುಡುಗನು, ಹೆಂಗಸು, ಮಕ್ಕಳು, ಮಕ್ಕಳಿಂದ–ಎಂಬ ಪದಗಳಿಗೆ ವಿಶೇಷಣಗಳಾಗಿವೆ. ನಾಲ್ಕು ಕಡೆಯಲ್ಲೂ ವಿಭಕ್ತಿಗಳು ಸಮನಾಗಿವೆ. ಅಂದರೆ–ದೊಡ್ಡವರು ಎಂಬುದು ಪ್ರಥಮಾವಿಭಕ್ತಿಯಾದರೆ ಹುಡುಗನು ಎಂಬುದೂ ಪ್ರಥಮಾವಿಭಕ್ತಿಯಾಗಿದೆ. ಚಿಕ್ಕವರಿಂದ ಎಂಬುದು ತೃತೀಯಾವಿಭಕ್ತಿಯಾದರೆ ಮಕ್ಕಳಿಂದ ಎಂಬದೂ ತೃತೀಯಾವಿಭಕ್ತಿಯೇ ಆಗಿದೆ. ವಚನಗಳೂ (ಏಕವಚನ, ಬಹುವಚನಗಳೂ) ಸಮಾನವಾಗಿಯೇ ಇವೆ. ಅಲ್ಲದೆ ಲಿಂಗಗಳೂ ಸಮನಾಗಿವೆ. ಅಂದರೆ – ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮನಾಗಿರುತ್ತವೆ ಎಂದು ಅರ್ಥ. ಈ ಸಮಾಸದ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(78) ಕರ್ಮಧಾರಯ ಸಮಾಸ:– ಪೂರ್ವೋತ್ತರಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು, ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರಯಸಮಾಸವೆನ್ನುವರು.**

ಇದರಲ್ಲೂ ಉತ್ತರಪದದ ಅರ್ಥವೇ ಪ್ರಧಾನವಾಗಿರುವುದು[64].

ಉದಾಹರಣೆಗೆ:– (i) **ಕನ್ನಡ ಕನ್ನಡ ಪದಗಳು ಸೇರಿ ಸಮಾಸವಾಗಿರುವುದಕ್ಕೆ–**

ಹಿರಿದು + ಜೇನು = ಹೆಜ್ಜೇನು

[64] ಕರ್ಮಧಾರಯ ಸಮಾಸವು ತತ್ಪುರುಷ ಸಮಾಸದ ಒಂದು ಭೇದವೇ ಆಗಿದೆ. ಇದರಂತೆ ಮುಂದೆ ಹೇಳಲಾಗುವ 'ಗಮಕ' ಸಮಾಸವೆಂಬುದೂ ಈ ಕರ್ಮಧಾರಯ ಸಮಾಸದ ಒಂದು ಭೇದವೇ ಆಗಿದೆ. ಹೊಸಗನ್ನಡದಲ್ಲಿ ಸಾಮಾನ್ಯವಾಗಿ ಸರ್ವನಾಮ ಕೃದಂತಗಳು ಪೂರ್ವಪದವಾಗಿದ್ದರೆ ಗಮಕ ಸಮಾಸವೆಂದೂ, ಸಂಖ್ಯಾವಾಚಕವು ಪೂರ್ವಪದವಾಗಿದ್ದರೆ 'ದ್ವಿಗು' ಸಮಾಸವೆಂದೂ, ಭೇದ ಮಾಡುತ್ತಾರೆ. ಹಳಗನ್ನಡದಲ್ಲಿ ಸಾಮಾನ್ಯವಾಗಿ ಸಂಖ್ಯಾವಾಚಕ, ಗುಣವಾಚಕ ಕೃದಂತ, ಸರ್ವನಾಮಗಳು ಪೂರ್ವಪದವಾಗಿದ್ದರೆ ಗಮಕಸಮಾಸವೆನ್ನುತ್ತಾರೆ.

| | | | | | |
|---|---|---|---|---|---|
| ಹಳೆಯದು | + | ಕನ್ನಡ | = | ಹಳೆಗನ್ನಡ | (ಕಕಾರಕ್ಕೆ ಗಕಾರಾದೇಶ) |
| ಹೊಸದು | + | ಕನ್ನಡ | = | ಹೊಸಗನ್ನಡ | ( ” ) |
| ಇನಿದು | + | ಸರ | = | ಇಂಚರ | (ಸಕಾರಕ್ಕೆ ಚಕಾರಾದೇಶ) |
| ಹಿರಿದು | + | ಮರ | = | ಹೆಮ್ಮರ | |
| ಇನಿದು | + | ಮಾವು | = | ಇಮ್ಮಾವು | |
| ಹಿರಿದು | + | ಬಾಗಿಲು | = | ಹೆಬ್ಬಾಗಿಲು | |
| ಚಿಕ್ಕವಳು | + | ಹುಡುಗಿ | = | ಚಿಕ್ಕಹುಡುಗಿ | |
| ಚಿಕ್ಕದು | + | ಮಗು | = | ಚಿಕ್ಕಮಗು | |
| ಹಳೆಯದು | + | ಬಟ್ಟೆ | = | ಹಳೆಯಬಟ್ಟೆ | |
| ಮೆಲ್ಲಿತು | + | ಮಾತು | = | ಮೆಲ್ವಾತು | (ಮಕಾರಕ್ಕೆ ವಕಾರಾದೇಶ) |
| ಮೆಲ್ಲಿತು | + | ನುಡಿ | = | ಮೆಲ್ನುಡಿ | |
| ಮೆಲ್ಲಿತು | + | ಪಾಸು | = | ಮೆಲ್ವಾಸು | (ಪಕಾರಕ್ಕೆ ವಕಾರಾದೇಶ) |
| ಬಿಳಿದು | + | ಕೊಡೆ | = | ಬೆಳ್ಗೊಡೆ | (ಕಕಾರಕ್ಕೆ ಗಕಾರಾದೇಶ) |

(ii) **ಸಂಸ್ಕೃತ ಸಂಸ್ಕೃತ ಶಬ್ದಗಳು ಸೇರಿ ಸಮಾಸವಾಗಿರುವುದಕ್ಕೆ–**

| | | | | | |
|---|---|---|---|---|---|
| ನೀಲವಾದ | + | ಉತ್ಪಲ | = | ನೀಲೋತ್ಪಲ[65] | (ನೀಲಕಮಲ) |
| ಶ್ವೇತವಾದ | + | ವಸ್ತ್ರ | = | ಶ್ವೇತವಸ್ತ್ರ | (ಬಿಳಿಯವಸ್ತ್ರ) |
| ಶ್ವೇತವಾದ | + | ಛತ್ರ | = | ಶ್ವೇತಛತ್ರ | (ಬಿಳಿಯಕೊಡೆ) |
| ಬೃಹತ್ತಾದ | + | ವೃಕ್ಷ | = | ಬೃಹದ್ವೃಕ್ಷ | (ದೊಡ್ಡಗಿಡ) |
| ನೀಲವಾದ | + | ಶರಧಿ | = | ನೀಲಶರಧಿ | |
| ನೀಲವಾದ | + | ಸಮುದ್ರ | = | ನೀಲಸಮುದ್ರ | |
| ಶ್ವೇತವಾದ | + | ವರ್ಣ | = | ಶ್ವೇತವರ್ಣ | |
| ಮತ್ತವಾದ | + | ವಾರಣ | = | ಮತ್ತವಾರಣ | (ಮದ್ದಾನೆ) |
| ಪೀತವಾದ | + | ವಸ್ತ್ರ | = | ಪೀತವಸ್ತ್ರ | |
| ಪೀತವಾದ | + | ಅಂಬರ | = | ಪೀತಾಂಬರ | |
| ದಿವ್ಯವಾದ | + | ಪ್ರಕಾಶ | = | ದಿವ್ಯಪ್ರಕಾಶ | |

ಮೇಲಿನ ಕನ್ನಡ, ಸಂಸ್ಕೃತ ಸಮಾಸಗಳಲ್ಲೆಲ್ಲ ಪೂರ್ವಪದಗಳು ವಿಶೇಷಣಗಳಾಗಿದ್ದು ಉತ್ತರಪದಗಳು ವಿಶೇಷ್ಯಗಳಾಗಿವೆ. ಇವುಗಳಿಗೆ ವಿಶೇಷಣ ಪೂರ್ವಪದ ಕರ್ಮಧಾರಯ ಎಂದು ಸ್ಪಷ್ಟಪಡಿಸಿ ಹೇಳುವ ಪರಿಪಾಠವುಂಟು.

---

65 'ನೀಲವಾದ'–(ನೀಲಬಣ್ಣದಿಂದ ಕೂಡಿದ ಎಂದರ್ಥ) ಎಂದು ವಿಗ್ರಹವಾಕ್ಯ ಮಾಡುವಾಗ 'ಆದ' 'ಆದಂಥ' ಎಂಬ ಪದ ಸೇರಿಸಿ ಹೇಳುವುದು ರೂಢಿ; ಸ್ಪಷ್ಟತಿಳಿವಳಿಕೆಗೋಸ್ಕರ ಅಷ್ಟೇ. ಅಲ್ಲದೆ, 'ಆದ' 'ಆದಂಥ' ಎಂಬುವು ಸಮಾಸದಲ್ಲಿ ಸೇರಬೇಕಾದ ಪದಗಳಲ್ಲ.

**(iii) ಕರ್ಮಧಾರಯ ಸಮಾಸದಲ್ಲಿ ಉಪಮಾನೋಪಮೇಯಭಾವ ಸಂಬಂಧದಿಂದಲೂ ಪೂರ್ವೋತ್ತರ ಪದಗಳಿರುತ್ತವೆ.**

ತಾವರೆಯಂತೆ + ಕಣ್ಣು = ತಾವರೆಗಣ್ಣು (ಉಪಮಾನಪೂರ್ವಪದ ಕರ್ಮಧಾರಯ)
ಪುಂಡರೀಕದಂತೆ + ಅಕ್ಷಗಳು = ಪುಂಡರೀಕಾಕ್ಷಗಳು ( ” )

**(iv) ಉಪಮಾನವು ಉತ್ತರಪದದಲ್ಲಿಯೂ ಇರುವುದುಂಟು.**

| | | | | |
|---|---|---|---|---|
| ಅಡಿಗಳು | + | ತಾವರೆಯಂತೆ | = | ಅಡಿದಾವರೆ |
| ಮುಖವು | + | ಕಮಲದಂತೆ | = | ಮುಖಕಮಲ |
| ಪಾದಗಳು | + | ಕಮಲಗಳಂತೆ | = | ಪಾದಕಮಲ |
| ಕರವು | + | ಕಮಲದಂತೆ | = | ಕರಕಮಲ |

**(v) ಕೆಲವು ಕಡೆ ಅವಧಾರಣೆಯ ಎಂದರೆ ನಿರ್ಧರಿಸಿ ಹೇಳುವ ಅರ್ಥದ 'ಏ' ಎಂಬ ಸ್ವರವು ಅಂತ್ಯದಲ್ಲಿ ಉಳ್ಳಪದವು ಪೂರ್ವಪದವಾಗಿ ಸಮಾಸವಾಗುವುದುಂಟು. ಇದಕ್ಕೆ ಅವಧಾರಣಾಪೂರ್ವಪದಕರ್ಮಧಾರಯ ಸಮಾಸ ಎನ್ನುವರು.**

| | | | | |
|---|---|---|---|---|
| ಫಲವೇ | + | ಆಹಾರ | = | ಫಲಾಹಾರ[66] |
| ನಖವೇ | + | ಆಯುಧ | = | ನಖಾಯುಧ |
| ವಿಶ್ವವೇ | + | ರಂಗಭೂಮಿ | = | ವಿಶ್ವರಂಗಭೂಮಿ |
| ಸುಖವೇ | + | ಜೀವನ | = | ಸುಖಜೀವನ |
| ವಾತವೇ | + | ಆಹಾರ | = | ವಾತಾಹಾರ |

– ಇತ್ಯಾದಿ.

**(vi) ಇನ್ನು ಕೆಲವು ಕಡೆ ಸಂಭಾವನೆ ಮಾಡಿದಾಗ ಅಂದರೆ ಊಹೆ ಮಾಡಿದಾಗ (ಇಂಥ ಹೆಸರಿದೆ ಎಂದು ಊಹೆ ಮಾಡಿ ಹೇಳಿದಾಗ) ಕರ್ಮಧಾರಯ ಸಮಾಸವಾಗುವುದು. ಇವು ಸಂಭಾವನಾಪೂರ್ವಪದ ಕರ್ಮಧಾರಯ ಸಮಾಸಗಳೆನಿಸುವುವು[67].**

ಕಾವೇರೀ ಎಂಬ ನದಿ = ಕಾವೇರೀನದಿ.
ನಳನೆಂಬರಾಜ = ನಳರಾಜ.
ಸ್ತ್ರೀ ಎಂಬ ದೇವತೆ = ಸ್ತ್ರೀದೇವತೆ.
ಭೂಮಿಯೆಂಬ ಮಾತೆ = ಭೂಮಾತೆ.

---

[66] ಇಲ್ಲಿ 'ವ್' ಕಾರದ ಮುಂದಿರುವ ಏಕಾರವೇ ಅವಧಾರಣೆಯ ಏಕಾರವೆನಿಸುವುದು. ಅವಧಾರಣೆ ಎಂದರೆ ನಿರ್ಧಾರ ಮಾಡಿ ಹೇಳುವುದು. ಅನೇಕ ಆಹಾರಗಳಲ್ಲಿ 'ಫಲವೇ' ಎಂಬುದನ್ನು ನಿರ್ಧರಿಸಿ ಹೇಳಲಾಗಿದೆ.

[67] ಕರ್ಮಧಾರಯ ಸಮಾಸದಲ್ಲಿ ಇನ್ನೂ, ವಿಶೇಷಣೋಭಯಪದಕರ್ಮಧಾರಯ ವಿಶೇಷಣೋತ್ತರಪದಕರ್ಮಧಾರಯ, ಲುಪ್ತಮಧ್ಯಮಪದಕರ್ಮಧಾರಯ–ಇತ್ಯಾದಿ ಪ್ರಭೇದಗಳನ್ನು ಹೇಳುವುದುಂಟು. ಅವೆಲ್ಲ ಅಷ್ಟು ಮುಖ್ಯವಲ್ಲವೆಂದು ಇಲ್ಲಿ ತಿಳಿಸಿಲ್ಲ.

ವಿಂಧ್ಯವೆಂಬ ಪರ್ವತ = ವಿಂಧ್ಯಪರ್ವತ.

ಈಗ ಕೆಳಗೆ ಕೆಲವೊಂದು ಕರ್ಮಧಾರಯ ಸಮಸ್ತಪದಗಳ ಪಟ್ಟಿಯನ್ನೇ ಕೊಟ್ಟಿದೆ. ಇವೆಲ್ಲ ಹಳಗನ್ನಡಕಾವ್ಯಗಳಲ್ಲಿ ವಿಶೇಷವಾಗಿ ಪ್ರಯೋಗಿಸಲ್ಪಡುತ್ತವೆ. ಅಲ್ಪ ಸ್ವಲ್ಪ ಹಳಗನ್ನಡ ಗದ್ಯ ಪದ್ಯ ಭಾಗಗಳನ್ನು ಓದುವ ನೀವು ಇವುಗಳ ಸ್ಥೂಲಪರಿಚಯ ಮಾಡಿಕೊಂಡರೆ ಸಾಕು.

(vii) ಚೆಂಗಣಗಿಲೆ, ಕೆಂಗಣಗಿಲೆ, ಚೆಂದೆಂಗು, ಕೆಂದೆಂಗು, ಚೆಂಬವಳ್, ಚೆಂದಳಿರ್, ಕೆಂದಳಿರ್, ಕೇಸಕ್ಕಿ, ಪೆರ್ಮರ್, ಪೆರ್ಬಾಗಿಲ್, ಕೆಮ್ಮಣ್ಣು, ಕೆಂಜೆಡೆ, ನಿಡುಗಣ್, ನಿಟ್ಟುಸಿರ್, ನಿಟ್ಟೋಟ, ಕೆಮ್ಮುಗಿಲ್, ಕೆನ್ನೀರ್, ಬೆನ್ನೀರ್, ಬೆಂಬೂದಿ, ಬೆಂಗದಿರ್, ತಂಗದಿರ್, ಪೇರಾನೆ, ಪೇರಡವಿ, ಪೇರಾಲ, ತೆಳ್ವಸಿರ್, ಕಿಸುಮಣ್, ಪೆರ್ವಿದಿರ್, ಪರ್ವೊದರ್, ತೆಳ್ಗದಂಪು, ಒಳ್ಗನ್ನಡ, ಬೆಳ್ಮುಗಿಲ್, ಬಲ್ಮುಗುಳ್, ಬೆಳ್ದಾವರೆ, ಕಟ್ಟಿರುಳ್, ಕಟ್ಟಿರುವೆ, ಕಟ್ಟಾಳ್, ತಣ್ಣೆಳಲ್, ತಂಬೆಲರ್, ತಂಗಾಳಿ–ಇತ್ಯಾದಿ.

## (೩) ದ್ವಿಗುಸಮಾಸ

ಎರಡು+ಕೆಲ=ಇಕ್ಕೆಲ (ಇರ್ಕೆಲ), ಮೂರು+ಮಡಿ=ಮುಮ್ಮಡಿ –ಇಕ್ಕೆಲ, ಮುಮ್ಮಡಿ ಇತ್ಯಾದಿ ಸಮಸ್ತಪದಗಳು ಪೂರ್ವದ ಪದವು ಸಂಖ್ಯಾವಾಚಕವಾಗಿ ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗಿವೆ. ದ್ವಿಗುಸಮಾಸವೆಂದರೆ ಪೂರ್ವಪದವು ಸಂಖ್ಯಾವಾಚಕವಾಗಿಯೇ ಇರಬೇಕು.

**(79) ದ್ವಿಗುಸಮಾಸ:– ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗುಸಮಾಸವೆನಿಸುವುದು. (ಇದೂ ಕೂಡ ತತ್ಪುರುಷ ಸಮಾಸದ ಒಂದು ಭೇದವೇ ಎಂದು ಹೇಳುವರು.)**

(i) **ಕನ್ನಡ – ಕನ್ನಡ ಶಬ್ದಗಳು ಸೇರಿ ಆದುದಕ್ಕೆ–**

ಉದಾರಹಣೆಗೆ:–

| | | | | | |
|---|---|---|---|---|---|
| ಒಂದು | + | ಕಟ್ಟು | = | ಒಗ್ಗಟ್ಟು | (ಕಕಾರಕ್ಕೆ ಗಕಾರಾದೇಶ) |
| ಎರಡು | + | ಮಡಿ | = | ಇಮ್ಮಡಿ | |
| ಮೂರು | + | ಮಡಿ | = | ಮುಮ್ಮಡಿ | |
| ನಾಲ್ಕು | + | ಮಡಿ | = | ನಾಲ್ವಡಿ | (ಮಕಾರಕ್ಕೆ ವಕಾರಾದೇಶ) |
| ಐದು | + | ಮಡಿ | = | ಐವಡಿ (ಐದುಮಡಿ) | ( ” ) |
| ಎರಡು | + | ಬಾಳ್ | = | ಇರ್ವಾಳ್ | |
| ಎರಡು | + | ತೆರ | = | ಎರಳ್ತೆರ (ಇರ್ತೆರ) | |
| ಎರಡು | + | ಪೆಂಡಿರ್ | = | ಇರ್ಪೆಂಡಿರ್ (ಇರ್ಪೆಂಡಿರ್) | |
| ಎರಡು | + | ಮಾತು | = | ಎರಳ್ಮಾತು | |
| ಮೂರು | + | ಗಾವುದ | = | ಮೂಗಾವುದ | |

| | | | | |
|---|---|---|---|---|
| ಮೂರು | + | ಕಣ್ಣು | = | ಮುಕ್ಕಣ್ಣು |
| ಒಂದು | + | ಕಣ್ಣು | = | ಒಕ್ಕಣ್ಣು |

(ii) **ಸಂಸ್ಕೃತ – ಸಂಸ್ಕೃತ ಶಬ್ದಗಳು ಸೇರಿ ಸಮಾಸವಾಗಿರುವುದಕ್ಕೆ**[68]**–**

| | | | | |
|---|---|---|---|---|
| ಪಂಚಗಳಾದ | + | ಇಂದ್ರಿಯಗಳು | = | ಪಂಚೇಂದ್ರಿಯಗಳು |
| ಸಪ್ತಗಳಾದ | + | ಅಂಗಗಳು | = | ಸಪ್ತಾಂಗಗಳು |
| ಪಂಚಗಳಾದ | + | ವಟಗಳು | = | ಪಂಚವಟಗಳು |
| ದಶಗಳಾದ | + | ವಾಯುಗಳು | = | ದಶವಾಯುಗಳು |
| ದಶಗಳಾದ | + | ಮುಖಗಳು | = | ದಶಮುಖಗಳು |
| ತ್ರಿ ಆದ | + | ನೇತ್ರಗಳು | = | ತ್ರಿನೇತ್ರಗಳು |
| ಸಪ್ತಗಳಾದ | + | ಲೋಕಗಳು | = | ಸಪ್ತಲೋಕಗಳು |
| ಅಷ್ಟಾದಶಗಳಾದ | + | ಪುರಾಣಗಳು | = | ಅಷ್ಟಾದಶಪುರಾಣಗಳು |
| ಸಪ್ತಗಳಾದ | + | ಸ್ವರಗಳು | = | ಸಪ್ತಸ್ವರಗಳು |
| ಏಕವಾದ | + | ಅಂಗ | = | ಏಕಾಂಗ |
| ದ್ವಿ ಆದ | + | ಶಿರ | = | ದ್ವಿಶಿರ |
| ಸಪ್ತಗಳಾದ | + | ಸಾಗರಗಳು | = | ಸಪ್ತಸಾಗರಗಳು |

## (೪) ಅಂಶಿಸಮಾಸ

**ಅಂಗೈ, ಮುಂಗೈ**–ಈ ಸಮಸ್ತಪದಗಳನ್ನು **ಕೈಯ+ಅಡಿ**[69]**=ಅಂಗೈ, ಕೈಯ+ಮುಂದು= ಮುಂಗೈ –** ಇತ್ಯಾದಿಯಾಗಿ ಬಿಡಿಸಿ ಹೇಳಬಹುದು. ಈ ಎರಡು ಪದಗಳಲ್ಲಿ–ಒಂದು '**ಕೈ**' ಎಂಬ ಪದವೂ, ಇನ್ನೊಂದು ಅದರ (ಕೈಯ) ಒಂದು **ಅಂಶ**ವನ್ನು ಹೇಳುವ '**ಅಡಿ**' ಎಂಬ ಪದವೂ ಇವೆ. **ಕೈ** ಯೆಂಬುದು ಅನೇಕ ಅಂಶಗಳನ್ನೊಳಗೊಂಡ **ಅಂಶಿ,** '**ಅಡಿ**' ಎಂಬುದು **ಅಂಶ.** ಹೀಗೆ ಒಂದು **ಅಂಶಿ** ಒಂದು **ಅಂಶ** ಇವುಗಳನ್ನೊಳಗೊಂಡು ಸಮಾಸವಾಗುವುದೇ **ಅಂಶಿಸಮಾಸ.** ಇಲ್ಲಿ ಪೂರ್ವಪದ, ಉತ್ತರದ ಎರಡೂ ಪದಗಳು ಸೇರಿ ಸಮಾಸಗಳಾದ

---

68 ಇಲ್ಲಿ ಕೊಟ್ಟಿರುವ ಉದಾಹರಣೆಗಳೆಲ್ಲ ಕನ್ನಡದಲ್ಲಿ ಬಳಸಲ್ಪಡುತ್ತವೆ. ಪೂರ್ವಪದದ ಮುಂದೆ 'ಆದ', 'ಗಳಾದ' ಇತ್ಯಾದಿ ಶಬ್ದಗಳನ್ನು ಸಮಾಸ ಬಿಡಿಸಿ ಹೇಳುವಾಗ ಹೇಳುವುದು ವಾಡಿಕೆ.

69 ಕೈಯ + ಅಡಿ = ಅಂಗೈ–ಇತ್ಯಾದಿಯಾಗಿ ಬಿಡಿಸುವ ಪದ್ಧತಿ ಹಿಂದಿನಿಂದ ಬಂದಿದೆ. ಸಮಾಸವಾದಮೇಲೆ ಪೂರ್ವಪದ ಉತ್ತರಪದವಾಗಿ, ಉತ್ತರಪದ ಪೂರ್ವಪದವಾಗಿ ನಿಲ್ಲುತ್ತದೆ. ಇದು ಕೇವಲ ಪದ್ಧತಿಯೇ ಹೊರತು ಬೇರೆ ಏನೂ ಅಲ್ಲ–ಇದಕ್ಕೆ ಪ್ರತಿಯಾಗಿ ಅಡಿ+ಕೈ–ಹೀಗೆ ಹೇಳಿದರೇನೂ ಬಾಧಕವಿಲ್ಲ.

ಮೇಲೆ (ಅಂಗೈ–ಮುಂಗೈ ಹೀಗಾದ ಮೇಲೆ) ಅಡಿ, ಮುಂದು–ಎಂಬ ಪೂರ್ವಪದಗಳ ಅರ್ಥವೇ ಪ್ರಧಾನವಾಗುವುದು. ಸಂಸ್ಕೃತದಲ್ಲಿ ಹೀಗೆ ಪೂರ್ವಪದದ ಅರ್ಥ ಪ್ರಧಾನವಾಗಿ ಉಳ್ಳ ಸಮಾಸಕ್ಕೆ **ಅವ್ಯಯೀಭಾವ**ವೆನ್ನುವರು. ಅದನ್ನನುಸರಿಸಿ ಕನ್ನಡದಲ್ಲೂ ಕೆಲವರು ಈ ಅಂಶಿಸಮಾಸವನ್ನು **'ಅವ್ಯಯೀಭಾವ'** ಎಂದು ಕರೆಯುವುದುಂಟು[70].

**(80) ಅಂಶಿಸಮಾಸ:– ಪೂರ್ವೋತ್ತರಪದಗಳು ಅಂಶಾಂಶಿಭಾವ ಸಂಬಂಧದಿಂದ ಸೇರಿ ಪೂರ್ವಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿ ಸಮಾಸವೆನ್ನುವರು. (ಇದನ್ನು ಕೆಲವರು ಅವ್ಯಯೀಭಾವವೆಂದೂ ಕರೆಯುವುದುಂಟು.)**

| | | | | | | |
|---|---|---|---|---|---|---|
| ಕೈಯ | + | ಅಡಿ | = | ಅಂಗೈ | – | (ಅಡಿ ಶಬ್ದದಲ್ಲಿರುವ 'ಡಿ' ಅಕ್ಷರಕ್ಕೆ ಅನುಸ್ವಾರಾದೇಶ ಮತ್ತು ಕಕಾರಕ್ಕೆ ಗಕಾರಾದೇಶ) |
| ಕಾಲ | + | ಅಡಿ | = | ಅಂಗಾಲು | – | (ಅಡಿ ಶಬ್ದದಲ್ಲಿರುವ 'ಡಿ' ಕಾರಕ್ಕೆ ಅನುಸ್ವಾರ, ಕಕಾರಕ್ಕೆ ಗಕಾರಾದೇಶ) |
| ಕೈಯ | + | ಮುಂದು | = | ಮುಂಗೈ | – | (ಮುಂದು ಎಂಬುದರಲ್ಲಿನ ದುಕಾರ ಲೋಪ) |
| ಕಾಲು | + | ಮೇಲು | = | ಮೇಂಗಾಲ್ | – | (ಮೇಲು ಶಬ್ದದಲ್ಲಿರುವ 'ಲು' ಕಾರಕ್ಕೆ ಅನುಸ್ವಾರ, ಕಕಾರಕ್ಕೆ ಗಕಾರಾದೇಶ) |
| ಕೈಯ | + | ಮೇಲು | = | ಮೇಂಗೈ | – | ( ” ) |
| ಕಾಲ | + | ಮುಂದು | = | ಮುಂಗಾಲ್ | | |
| ಪಗಲಿನ | + | ಮುಂದು | = | ಮುಂಬಗಲ್ | | |

| | | | | |
|---|---|---|---|---|
| ಇಲ್ಲ | + | ಪಿಂತು | = | ಪಿತ್ತಿಲ್[71] |
| ತಲೆಯ | + | ಹಿಂದು | = | ಹಿಂದಲೆ |
| ತಲೆಯ | + | ಮುಂದು | = | ಮುಂದಲೆ |
| ಮೂಗಿನ | + | ತುದಿ | = | ತುದಿಮೂಗು |
| ಹುಬ್ಬಿನ | + | ಕೊನೆ | = | ಕೊನೆಹುಬ್ಬು |
| ಹುಬ್ಬಿನ | + | ಕುಡಿ | = | ಕುಡಿಹುಬ್ಬು |
| ಕಣ್ಣ | + | ಕಡೆ | = | ಕಡೆಗಣ್ಣು |

---

70 ಸಂಸ್ಕೃತದ 'ಅವ್ಯಯೀಭಾವ', ಕನ್ನಡದ 'ಅಂಶಿ' ಇವುಗಳಿಗೆ ಭೇದವಿದೆ. ಸಂಸ್ಕೃತದ ಅವ್ಯಯೀಭಾವದಲ್ಲಿ ಒಂದು ಪದ ಅವ್ಯಯವಿದ್ದೇ ಇರುತ್ತದೆ. ಕನ್ನಡದಲ್ಲಿ ಹಾಗೇನೂ ಇರುವುದಿಲ್ಲ. ಇಲ್ಲಿ ಅಂಶಾಂಶಿಭಾವ ಮುಖ್ಯ.

71 ಇಲ್=ಮನೆ, ಇಲ್ + ಅ = ಇಲ್ಲ ಎಂದು ಷಷ್ಠಿವಿಭಕ್ತ್ಯಂತವೆಂದು ತಿಳಿಯಬೇಕು. 'ಇಲ್ಲ' ಎಂದರೆ ಮನೆಯ ಎಂದು ಅರ್ಥ.

ಕೋಟೆಯ + ಕೆಳಗು = ಕೆಳಗೋಟೆ
ಕೆರೆಯ + ಕೆಳಗು = ಕೆಳಗೆರೆ (ಕಿಳ್ಕೆರೆ–ಹ.ಗ.)
ಕೋಟೆಯ + ಮೇಗು = ಮೇಗೋಟೆ
ಪೊಡೆಯ + ಕೆಳಗು = ಕಿಳ್ಪೊಡೆ (ಕೆಳಗು ಶಬ್ದಕ್ಕೆ ಕಿಳ್ ಆದೇಶ)
ಮೈಯ + ಹೊರಗು = ಹೊರಮೈ
ಮೈಯ + ಒಳಗು = ಒಳಮೈ
ತುಟಿಯ + ಕೆಳಗು = ಕೆಳದುಟಿ

(i) **ಸಂಸ್ಕೃತದ ಅವ್ಯಯೀಭಾವಸಮಾಸಕ್ಕೆ–**

ಉದಾಹರಣೆ:–

ಕಾಲವು + ಅತಿಕ್ರಮಿಸದಂತೆ ಉಳ್ಳದ್ದು = ಯಥಾಕಾಲ[72]
ಅರ್ಥವು + ಅತಿಕ್ರಮಿಸದಂತೆ ಉಳ್ಳದ್ದು = ಯಥಾರ್ಥ
ಸ್ಥಿತಿಯನ್ನು + ಅತಿಕ್ರಮಿಸದಂತೆ ಉಳ್ಳದ್ದು = ಯಥಾಸ್ಥಿತಿ
ನಿಮಿತ್ತವಲ್ಲದುದು = ನಿರ್ನಿಮಿತ್ತ

ಮೇಲಿನ ಸಂಸ್ಕೃತದ ಅವ್ಯಯೀಭಾವ ಸಮಾಸದಲ್ಲಿ ಯಥಾ, ನಿರ್–ಇತ್ಯಾದಿ ಪದಗಳು, ಅವ್ಯಯಗಳು, ಕಾಲ, ಅರ್ಥ, ಸ್ಥಿತಿ, ನಿಮಿತ್ತ–ಮೊದಲಾದವು ನಾಮಪದಗಳು. ಹೀಗೆ ಒಂದು ಅವ್ಯಯವು ನಾಮಪದದೊಡನೆ ಸೇರಿ ಸಮಾಸವಾಗಿ ಅವ್ಯಯೀಭಾವವೆನಿಸುವುದು. ಕನ್ನಡದಲ್ಲಿ ಈ ಪದಗಳು ಅಂದರೆ ಯಥಾರ್ಥ, ಯಥಾಸ್ಥಿತಿ–ಇತ್ಯಾದಿ ಪದಗಳ ಬಳಕೆಯಲ್ಲಿರುವುದರಿಂದ ಇಲ್ಲಿ ಈ ಉದಾಹರಣೆಗಳನ್ನು ಕೊಟ್ಟಿದೆ.

## (೫) ದ್ವಂದ್ವಸಮಾಸ

(ಅ) ಆತನು ಹೊಲಮನೆ ಮಾಡಿಕೊಂಡಿದ್ದಾನೆ.
(ಆ) ಕೆರೆಕಟ್ಟೆಗಳನ್ನು ಕಟ್ಟಿಸಿದನು.

ಇತ್ಯಾದಿ ವಾಕ್ಯಗಳಲ್ಲಿ ಬಂದಿರುವ ಹೊಲಮನೆ, ಕರೆಕಟ್ಟೆ ಈ ಎರಡು ಪದಗಳನ್ನು ಬಿಡಿಸಿ ಬರೆದರೆ ಹೊಲವನ್ನು + ಮನೆಯನ್ನು = ಹೊಲಮನೆಗಳನ್ನು ಅಥವಾ ಹೊಲಮನೆಯನ್ನು ಎಂದೂ, ಕರೆಯನ್ನು + ಕಟ್ಟೆಯನ್ನು, ಕರೆಕಟ್ಟೆಗಳನ್ನು ಅಥವಾ ಕೆರೆಕಟ್ಟೆಯನ್ನು – ಇತ್ಯಾದಿಯಾಗಿ ಹೇಳಬಹುದು.

ಇಲ್ಲಿ ಈ ಪೂರ್ವದಲ್ಲಿ ಬಂದ ಸಮಾಸಗಳಂತೆ ಪೂರ್ವದ ಅಥವಾ ಉತ್ತರದ ಯಾವುದಾದರೊಂದು ಪದದ ಅರ್ಥಕ್ಕೆ ಪ್ರಧಾನತೆ ಇರದೆ, ಎಲ್ಲ ಪದಗಳ ಅರ್ಥವೂ

---

[72] ಯಥಾಕಾಲದಲ್ಲಿ ವಿದ್ಯಾಭ್ಯಾಸಮಾಡಿದನು–ಎಂದರೆ ಕಾಲವು ಅತಿಕ್ರಮಿಸುವುದಕ್ಕೆ ಮೊದಲು ವಿದ್ಯಾಭ್ಯಾಸ ಮಾಡಿದರು ಎಂದು ಅರ್ಥ. ಅತಿಕ್ರಮಿಸುವುದಕ್ಕೆ ಮೊದಲು ಎಂದರೆ ಮೀರುವುದಕ್ಕೆ ಮೊದಲು ಎಂದು ಅರ್ಥ.

ಪ್ರಧಾನವಾಗಿರುವುವು. ಹೊಲವನ್ನು ಮಾಡಿಕೊಂಡನು. ಮನೆಯನ್ನು ಮಾಡಿಕೊಂಡನು– ಎಂದರೆ ಹೊಲ, ಮನೆ ಎರಡೂ ಪದಗಳಿಗೆ '**ಸಹಯೋಗ**' ತೋರುತ್ತದೆ. ಹೊಲಕ್ಕೆ ಮನೆಯ, ಮನೆಗೆ ಹೊಲದ ಸಹಯೋಗ ಕರ್ತೃವಿಗೆ ಇದೆ ಎಂದು ಅರ್ಥ. ಇದು ಹಾಗೆಯೆ ಕೆರೆಯನ್ನು, ಕಟ್ಟೆಯನ್ನು ಇವೆರಡು ಶಬ್ದಗಳಿಗೂ ಕರ್ತೃಪದಕ್ಕೂ ಸಹಯೋಗವಿರುತ್ತದೆ. ಹೀಗೆ ಸಹಯೋಗ ತೋರುವಂತೆ ಹೇಳುವ ಸಮಾಸವೇ ದ್ವಂದ್ವಸಮಾಸವೆನಿಸುವುದು. **ಈ ಸಮಾಸದಲ್ಲಿ ಎರಡಕ್ಕಿಂತ ಹೆಚ್ಚು ಪದಗಳೂ ಇರಬಹುದು.** ಈ ಸಮಾಸದ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(81) ದ್ವಂದ್ವಸಮಾಸ:– ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ದ್ವಂದ್ವಸಮಾಸವೆಂದು ಹೆಸರು.**

ಉದಾಹರಣೆಗೆ:– (i) **ಕನ್ನಡ – ಕನ್ನಡ ಶಬ್ದಗಳು ಸೇರಿ ಸಮಾಸವಾಗುವುದಕ್ಕೆ:**

| | |
|---|---|
| ಕೆರೆಯೂ + ಕಟ್ಟೆಯೂ + ಬಾವಿಯೂ | = ಕೆರೆಕಟ್ಟೆಬಾವಿಗಳು ಅಥವಾ<br>= ಕೆರೆಕಟ್ಟೆಬಾವಿ |
| ಗಿಡವೂ, ಮರವೂ, ಬಳ್ಳಿಯೂ, ಪೊದೆಯೂ | = ಗಿಡಮರಬಳ್ಳಿಪೊದೆಗಳು<br>= ಗಿಡಮರಬಳ್ಳಿಪೊದೆ |
| ಆನೆಯೂ, ಕುದುರೆಯೂ, ಒಂಟೆಯೂ | = ಆನೆಕುದುರೆಒಂಟೆಗಳು<br>= ಆನೆಕುದುರೆಒಂಟೆ |
| ಗುಡುಗು, ಸಿಡಿಲೂ, ಮಿಂಚು | = ಗುಡುಗುಸಿಡಿಲುಮಿಂಚುಗಳು<br>= ಗುಡುಗುಸಿಡಿಲುಮಿಂಚು |

ಇಲ್ಲಿ ದ್ವಂದ್ವಸಮಾಸವಾದ ಮೇಲೆ ಸಮಸ್ತಪದವು ಬಹುವಚನಾಂತವಾಗಿಯೂ, ಏಕವಚನಾಂತವಾಗಿಯೂ ನಿಲ್ಲುವುದುಂಟು. ಅದು ಹೇಳುವವರ ಇಚ್ಛೆ. ಏಕವಚನಾಂತವಾಗಿ ನಿಂತರೆ '**ಸಮಾಹಾರದ್ವಂದ್ವ**' ವೆಂದೂ, ಬಹುವಚನಾಂತವಾಗಿ ನಿಂತರೆ '**ಇತರೇತರಯೋಗ ದ್ವಂದ್ವ**' ವೆಂದೂ ಹೆಸರು.

(ii) **ಸಂಸ್ಕೃತ – ಸಂಸ್ಕೃತ ಶಬ್ದಗಳು ಸೇರಿ ಸಮಾಸವಾಗುವುದಕ್ಕೆ:–**

ಗಿರಿಯೂ+ವನವೂ+ದುರ್ಗವೂ=ಗಿರಿವನದುರ್ಗಗಳು=ಗಿರಿವನದುರ್ಗ
ಸೂರ್ಯನೂ+ಚಂದ್ರನೂ+ನಕ್ಷತ್ರವೂ=ಸೂರ್ಯಚಂದ್ರನಕ್ಷತ್ರಗಳು=ಸೂರ್ಯಚಂದ್ರನಕ್ಷತ್ರ
ಕರಿಯೂ+ತುರಗವೂ+ರಥವೂ=ಕರಿತುರಗರಥಗಳು=ಕರಿತುರಗರಥ – ಇತ್ಯಾದಿ.

## (೬) ಬಹುವ್ರೀಹಿ ಸಮಾಸ

ಹಣೆಗಣ್ಣ, ಮುಕ್ಕಣ್ಣ, ನಿಡುಮೂಗ –ಈ ಸಮಾಸಪದಗಳನ್ನು ಬಿಡಿಸಿಬರೆದರೆ ಹಣೆಯಲ್ಲಿ+ಕಣ್ಣುಉಳ್ಳವ, ಮೂರು+ಕಣ್ಣುಉಳ್ಳವ, ನಿಡಿದು+ಮೂಗುಉಳ್ಳವ – ಹೀಗೆ ಆಗುತ್ತವೆ. ಹಣೆಯಲ್ಲಿ+ಕಣ್ಣು –ಈ ಎರಡೂ ಪದಗಳ ಅರ್ಥವು ಇಲ್ಲಿ ಮುಖ್ಯವೇ ಅಲ್ಲ. ಈ ಎರಡೂ ಪದಗಳ ಅರ್ಥದಿಂದ ಹೊಳೆಯುವ ಸಮಾಸದಲ್ಲಿಲ್ಲದ 'ಶಿವ' ಎಂಬ ಅನ್ಯ ಪದದ ಅಂದರೆ ಮೂರನೆಯ ಪದದ ಅರ್ಥವೇ ಲಕ್ಷ್ಯ (ಮುಖ್ಯವಾದುದು), ಮೂರು+ಕಣ್ಣು ಉಳ್ಳವನು ಯಾರೋ ಅವನು–ಅಂದರೆ 'ಶಿವ' ಎಂಬುದರ ಅರ್ಥ ಮುಖ್ಯ. ಅದರಂತೆ ನಿಡಿದಾದ ಮೂಗು ಉಳ್ಳ ವ್ಯಕ್ತಿ ಯಾರೋ ಅವನೇ ಮುಖ್ಯಾರ್ಥ. ಇಲ್ಲಿ 'ಶಿವ' ಎಂಬ ಪದಕ್ಕೆ ಹಣೆಯಲ್ಲಿ ಕಣ್ಣು–ಎಂಬೆರಡು ಪದಗಳು ವಿಶೇಷಣಗಳು. ಅಥವಾ ಇವೆರಡೂ ಪದಗಳಿಗೆ 'ಶಿವ' ಎಂಬುದು ವಿಶೇಷ್ಯವಾಯಿತು. ಇದರ ಹಾಗೆಯೇ ಉಳಿದವುಗಳನ್ನು ತಿಳಿಯಬೇಕು. ಹೀಗೆ ಸಮಾಸದಲ್ಲಿರುವ ಪದಗಳ ಅರ್ಥಕ್ಕೆ ಪ್ರಾಧಾನ್ಯತೆಯೇ ಇಲ್ಲದೆ ಅನ್ಯವಾದ ಬೇರೊಂದು ಪದದ ಅರ್ಥವು ಪ್ರಧಾನವಾಗಿ ಇಲ್ಲಿ ಇರುತ್ತದೆ.

**(82) ಬಹುವ್ರೀಹಿ ಸಮಾಸ:– ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ (ಅನ್ಯಪದದ) ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಬಹುವ್ರೀಹಿ ಸಮಾಸವೆನ್ನುವರು.**

ಉದಾಹರಣೆಗೆ: (i) **ಕನ್ನಡ – ಕನ್ನಡ ಪದಗಳು ಸೇರಿ ಸಮಾಸವಾಗುವುದಕ್ಕೆ–**

ಮೂರು+ಕಣ್ಣು–ಉಳ್ಳವ=ಮುಕ್ಕಣ್ಣ ('ಮೂರು' ಪದಕ್ಕೆ 'ಮುಕ್' ಆದೇಶ)
ನಾಲ್ಕು+ಮೊಗ–ಉಳ್ಳವ=ನಾಲ್ಮೊಗ ('ನಾಲ್ಕು' ಪದಕ್ಕೆ 'ನಾಲ್' ಆದೇಶ)
ಕೆಂಪು(ಆದ) ಕಣ್ಣು–ಉಳ್ಳವ=ಕೆಂಗಣ್ಣ.
ಡೊಂಕು(ಆದ) ಕಾಲು–ಉಳ್ಳವ=ಡೊಂಕುಗಾಲ.
ಕಡಿದು(ಆದ) ಚಾಗ–ಉಳ್ಳವ–ಕಡುಚಾಗಿ.

ಮೇಲೆ ಹೇಳಿದ ಎಲ್ಲ ಉದಾಹರಣೆಗಳನ್ನು ನೋಡಿದರೆ ಪೂರ್ವದ ಉತ್ತರದ ಪದಗಳೆರಡೂ ಸಮಾನ ವಿಭಕ್ತಿಯಿಂದ ಕೂಡಿವೆ. ಅಂದರೆ ಒಂದೇ ವಿಭಕ್ತ್ಯಂತವಾಗಿವೆ. ಹೀಗೆ ಪೂರ್ವೋತ್ತರಪದಗಳೆರಡೂ ಸಮಾನ ವಿಭಕ್ತಿಯಿಂದ ಕೂಡಿದ್ದರೆ ಅದನ್ನು **'ಸಮಾನಾಧಿಕರಣ'** ಬಹುವ್ರೀಹಿ ಎಂದು ಕರೆಯುವರು. ಭಿನ್ನ ಭಿನ್ನ (ಬೇರೆ ಬೇರೆ) ವಿಭಕ್ತಿಗಳಿಂದ ಕೂಡಿದ್ದರೆ **'ವ್ಯಧಿಕರಣ'** ಬಹುವ್ರೀಹಿ ಎನ್ನುವರು. ವ್ಯಧಿಕರಣ ಬಹುವ್ರೀಹಿಗೆ ಕೆಳಗಣ ಉದಾಹರಣೆಗಳನ್ನು ನೋಡಿರಿ.

| | | | | | | |
|---|---|---|---|---|---|---|
| **ವಿ** | **+** | **ಅಧಿಕರಣ** | **–** | **ವ್ಯಧಿಕರಣ** | **=** | **ವಿಗತವಾದ ಅಧಿಕರಣ** |
| ಹಣೆಯಲ್ಲಿ | + | ಕಣ್ಣು | – | ಉಳ್ಳವ | = | ಹಣೆಗಣ್ಣ (ಶಿವ) |
| ಕಿಚ್ಚು | + | ಕಣ್ಣಿನಲ್ಲಿ | – | ಆವಂಗೋ ಅವನು | = | ಕಿಚ್ಚುಗಣ್ಣ (ಶಿವ) |

**ಇದರ ಹಾಗೆಯೇ ಹಳಗನ್ನಡದಲ್ಲಿ ಬರುವ ಕೆಲವು ಉದಾಹರಣೆಗಳನ್ನು ನೋಡಿರಿ.**

ಕೊಂಕಿದುದು+ಬಿಲ್–ಆವಂಗೋ=ಕೊಂಕುವಿಲ್ಲ (ಸಮಾನಾಧಿಕರಣ)
ಅಲರ್ಗಳ್+ಕಣೆಗಳ್–ಆವಂಗೋ=ಅಲರ್ಗಣೆಯ (ಸಮಾನಾಧಿಕರಣ)
ಬಗ್ಗದ ತೊವಲು+ಉಡಿಗೆ–ಆವಂಗೋ=ಬಗ್ಗದೊವಲುಡೆಯಂ (ಸಮಾನಾಧಿಕರಣ)

ಇದರ ಹಾಗೆಯೇ ಮೀನನ್ನು ಕೊಲ್ಲುವವ–ಮೀಂಗುಲಿ, ಹಲ್ಲು ಇಲ್ಲದುದು–ಹಲ್ಲಿಲಿ, ಕಬ್ಬನ್ನು ಬಿಲ್ಲಾಗಿ ಉಳ್ಳವ–ಕರ್ಬುವಿಲ್ಲ. (ಕಬ್ಬನ್ನು+ಬಿಲ್ಲಾಗಿ ಉಳ್ಳವ ಕರ್ಪುವಿಲ್ಲ).

ಮೇಲಿನ ಉದಾಹರಣೆಗಳನ್ನು ನೋಡಿದರೆ, ಸಮಾಸವಾದ ಮೇಲೆ '**ಅ**' ಅಥವಾ '**ಇ**' ಎಂಬ ಪ್ರತ್ಯಯಗಳು ಸೇರಿದುದು ಕಂಡುಬರುವುದು. '**ಡೊಂಕುಗಾಲ**' ಎಂಬಲ್ಲಿ '**ಅ**' ಎಂಬುದೂ, '**ಕಡುಚಾಗಿ**' ಎಂಬಲ್ಲಿ '**ಇ**' ಎಂಬುದೂ ಬಂದಿವೆ. ಇದರ ಹಾಗೆಯೇ ಎಲ್ಲ ಕಡೆಗೂ ಬಹುವ್ರೀಹಿಸಮಾಸದಲ್ಲಿ '**ಅ**' ಅಥವಾ '**ಇ**' ಪ್ರತ್ಯಯಗಳು ಬರುತ್ತವೆ. ಇವಕ್ಕೆ **ಸಮಾಸಾಂತ ಪ್ರತ್ಯಯ**ಗಳೆಂದು ಕರೆಯುವರು.

(ii) **ಸಂಸ್ಕೃತ – ಸಂಸ್ಕೃತ ಶಬ್ದಗಳು ಸೇರಿ ಸಮಾಸವಾಗುವುದಕ್ಕೆ ಉದಾಹರಣೆ:–**

ಚಕ್ರವು+ಪಾಣಿಯಲ್ಲಿ ಆವಂಗೋ ಅವನು=ಚಕ್ರಪಾಣಿ (ವ್ಯಧಿಕರಣ)
ಫಾಲದಲ್ಲಿ+ನೇತ್ರವನ್ನು ಉಳ್ಳವನು=ಫಾಲನೇತ್ರ (ವ್ಯಧಿಕರಣ)
ಇಕ್ಷುವನ್ನು+ಕೋದಂಡವನ್ನಾಗಿ ಉಳ್ಳವ=ಇಕ್ಷುಕೋದಂಡ (ಸಮಾನಾಧಿಕರಣ)

ಇದುವರೆಗೆ ಬಹುವ್ರೀಹಿ ಸಮಾಸದ ಹಲವಾರು ಉದಾಹರಣೆಗಳನ್ನು ತಿಳಿದಿರಿ. ಇನ್ನೂ ಕೆಲವು ರೀತಿಯ ಉದಾಹರಣೆಗಳು ನಮಗೆ ಇಲ್ಲಿ ಕಾಣಬರುತ್ತವೆ. ಕೆಳಗೆ ವಿವರಿಸಿರುವುದನ್ನು ನೋಡಿರಿ.

"ಅವರಿಗೆ ದೊಡ್ಡ '**ಹಣಾಹಣಿ**' ಯೇ ಆಯಿತು" ಹೀಗೆ ಹೇಳುವುದುಂಟು. '**ಹಣಾಹಣಿ**' ಎಂದರೆ **ಹಣಿಯುವುದರಿಂದ, ಹಣಿಯುವುದರಿಂದ** ಆದ ಯುದ್ಧವೇ '**ಹಣಾಹಣಿ**' ಇಲ್ಲಿ ಜಗಳವೇ ಅನ್ಯಪದವಾಯಿತು. ಇದರಂತೆ–

ಕೋಲಿನಿಂದ+ಕೋಲಿನಿಂದ ಮಾಡಿದ ಜಗಳ–ಕೋಲಾಕೋಲಿ.
ಖಡ್ಗದಿಂದ+ಖಡ್ಗದಿಂದ ಮಾಡಿದ ಜಗಳ–ಖಡ್ಗಾ ಖಡ್ಗಿ.

ಹಣಾಹಣಿ, ಕೋಲಾಕೋಲಿ, ಖಡ್ಗಾಖಡ್ಗಿ ಇತ್ಯಾದಿ ಸಮಾಸಗಳನ್ನು '**ವ್ಯತಿಹಾರ ಲಕ್ಷಣ**'ವೆಂದು ಬಹುವ್ರೀಹಿಸಮಾಸದಲ್ಲಿ ಒಂದು ಬಗೆಯಾಗಿ ಹೇಳುವರು.

## (೭) ಕ್ರಿಯಾಸಮಾಸ

(i) **<u>ಮನೆಕಟ್ಟಿದನು</u>** (iii) **<u>ಕಣ್ಣಾಗಣದೆ</u>** ಇದ್ದನು

(ii) **<u>ಊರುಸೇರಿದನು</u>** (iv) **<u>ಮೈಮರೆದು</u>** ಕುಳಿತನು

ಮೇಲಿನ ವಾಕ್ಯಗಳಲ್ಲಿ ಗೆರೆ ಎಳೆದಿರುವ ಸಮಸ್ತಪದಗಳನ್ನು ಬಿಡಿಸಿದರೆ–

**ಮನೆಯನ್ನು + ಕಟ್ಟಿದನು** **ಕಣ್ಣನ್ನು + ಕಾಣದೆ**
**ಊರನ್ನು + ಸೇರಿದನು** **ಮೈಯನ್ನು + ಮರೆತು**

ಎಂದು ಆಗುವುವು. ಪೂರ್ವದಲ್ಲಿರುವ ಪದಗಳೆಲ್ಲ ದ್ವಿತೀಯಾವಿಭಕ್ತ್ಯಂತಗಳಾದ ನಾಮಪದಗಳಾಗಿವೆ. ಉತ್ತರದಲ್ಲಿ ಮಾತ್ರ ಕಟ್ಟಿದನು, ಸೇರಿದನು ಎಂಬ ಕ್ರಿಯಾಪದಗಳೂ, ಕಾಣದೆ, ಮರೆತು ಇತ್ಯಾದಿ ಅಪೂರ್ಣ ಕ್ರಿಯೆಗಳೂ (ಕೃದಂತಗಳೂ)[73] ಇವೆ. ಅಂದರೆ ಉತ್ತರ ಪದಗಳೆಲ್ಲ ಕ್ರಿಯೆಯಿಂದ ಕೂಡಿವೆ ಎನ್ನಬಹುದು. ಒಟ್ಟಿನಲ್ಲಿ ಮೇಲೆ ಹೇಳಿದ ಎಲ್ಲ ಪೂರ್ವಪದಗಳು ದ್ವಿತೀಯಾಂತ ನಾಮಪದಗಳಿಂದಲೂ, ಉತ್ತರಪದವು 'ಕ್ರಿಯೆ'ಯಿಂದಲೂ ಕೂಡಿವೆ ಎನ್ನಬಹುದು. ಕೆಲವು ಕಡೆ–ನೀರಿನಿಂದ+ಕೂಡಿ=ನೀರ್ಗೂಡಿ, ಹೀಗೆ ತೃತೀಯಾಂತ ವಾಗಿಯೂ ಪೂರ್ವಪದವಿರಬಹುದು. ಆದರೆ ದ್ವಿತೀಯಾವಿಭಕ್ತ್ಯಂತವಾಗಿರುವುದೇ ಹೆಚ್ಚು. ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(83) ಕ್ರಿಯಾಸಮಾಸ:– ಪೂರ್ವಪದವು ಪ್ರಾಯಶಃ ದ್ವಿತೀಯಾಂತವಾಗಿದ್ದು ಉತ್ತರದಲ್ಲಿರುವ ಕ್ರಿಯೆಯೊಡನೆ ಸೇರಿ ಆಗುವ ಸಮಾಸವನ್ನು ಕ್ರಿಯಾಸಮಾಸವೆನ್ನುವರು.**

**'ಪ್ರಾಯಶಃ' ಎಂದು ಸೂತ್ರದಲ್ಲಿ ಹೇಳಿರುವುದರಿಂದ ಬೇರೆ ವಿಭಕ್ತಿಗಳು ಬರುತ್ತವೆಂದು ತಿಳಿಯಬೇಕು. ಈ ಸಮಾಸದಲ್ಲಿ ಅರಿಸಮಾಸ ದೋಷವಿಲ್ಲ.**

(i) **ಕನ್ನಡ – ಕನ್ನಡ ಶಬ್ದಗಳು ಸೇರಿ ಆಗುವ ಸಮಾಸಕ್ಕೆ ಉದಾಹರಣೆ–**

| | | | | |
|---|---|---|---|---|
| ಮೈಯನ್ನು | + | ತಡವಿ | = | ಮೈದಡವಿ (ತಕಾರಕ್ಕೆ ದಕಾರಾದೇಶ) |
| ಕೈಯನ್ನು | + | ಮುಟ್ಟಿ | = | ಕೈಮುಟ್ಟಿ |
| ಕಣ್ಣನ್ನು | + | ಮುಚ್ಚಿ | = | ಕಣ್ಣುಮುಚ್ಚಿ |
| ತಲೆಯನ್ನು | + | ಕೊಡವಿ | = | ತಲೆಗೊಡವಿ (ಕಕಾರಕ್ಕೆ ಗಕಾರಾದೇಶ) (ತಲೆಕೊಡವಿ) |
| ಮೈಯನ್ನು | + | ಮುಚ್ಚಿ | = | ಮೈಮುಚ್ಚಿ |
| ತಲೆಯನ್ನು | + | ತೆಗೆದನು | = | ತಲೆದೆಗೆದನು (ತಕಾರಕ್ಕೆ ದಕಾರಾದೇಶ) |
| ಕಣ್ಣನ್ನು | + | ತೆರೆದನು | = | ಕಣ್ಣು ತೆರೆದನು |
| ಕಣ್ಣಂ | + | ತೆರೆ | = | ಕಣ್ದೆರೆ (ಹ.ಗ. ರೂಪ) (ತಕಾರಕ್ಕೆ ದಕಾರಾದೇಶ) |

[73] ಅಪೂರ್ಣ ಕ್ರಿಯೆಗಳು (ಕೃದಂತಗಳು) ಇವುಗಳ ಬಗೆಗೆ ಮುಂದೆ ವಿವರಿಸಲಾಗುವ ಕೃದಂತಪ್ರಕರಣದಲ್ಲಿ ತಿಳಿಯುತ್ತೀರಿ. ಕೃದಂತಗಳೆಂದರೆ ಧಾತುಗಳ ಮೇಲೆ ಕೃತ್ ಪ್ರತ್ಯಯ ಸೇರಿ ಆದ ರೂಪ, (ಕೃತ್+ಅಂತ=ಕೃದಂತ) ಕೃತ್ ಅಂದರೆ ಒಂದು ಪ್ರತ್ಯಯ.

| | | | | |
|---|---|---|---|---|
| ಕೈಯನ್ನು | + | ಪಿಡಿದು | = | ಕೈವಿಡಿದು (ಪಕಾರಕ್ಕೆ ವಕಾರಾದೇಶ) |
| ಮಣೆಯನ್ನು | + | ಇತ್ತು | = | ಮಣೆಯಿತ್ತು |
| ಬಟ್ಟೆಯನ್ನು | + | ತೋರು | = | ಬಟ್ಟೆದೋರು (ತಕಾರಕ್ಕೆ ದಕಾರಾದೇಶ) |
| ಕೈಯನ್ನು | + | ಕೊಟ್ಟನು | = | ಕೈಕೊಟ್ಟನು |
| ದಾರಿಯನ್ನು | + | ಕಾಣನು | = | ದಾರಿಗಾಣನು (ಕಕಾರಕ್ಕೆ ಗಕಾರಾದೇಶ) |

(ii) **ಪೂರ್ವಪದವು ಬೇರೆ ವಿಭಕ್ತ್ಯಂತ ತರುವುದಕ್ಕೆ–**

| | | | | |
|---|---|---|---|---|
| ನೀರಿನಿಂದ | + | ಕೂಡಿ | = | ನೀರ್ಗೂಡಿ (ಕಕಾರಕ್ಕೆ ಗಕಾರ) |
| ಬೇರಿನಿಂದ | + | ಬೆರಸಿ | = | ಬೇರುವೆರಸಿ (ಬಕಾರಕ್ಕೆ ವಕಾರ) |
| ಕಣ್ಣಿನಿಂದ | + | ಕೆಡು | = | ಕೆಂಗೆಡು (ಕಕಾರಕ್ಕೆ ಗಕಾರ) |
| ಬೇರಿನಿಂ | + | ಬೆರಸಿ | = | ಬೇರ್ವೆರಸಿ (ಬಕಾರಕ್ಕೆ ವಕಾರ) |
| ನೀರಿನಲ್ಲಿ | + | ಮಿಂದು | = | ನೀರುಮಿಂದು[74] |

(iii) **ಹಳಗನ್ನಡ ಕ್ರಿಯಾಸಮಾಸ ರೂಪಗಳು–**

| | | | | |
|---|---|---|---|---|
| ಮೈಯಂ | + | ತೊಳೆದು | = | ಮೈದೊಳೆದು |
| ಒಳ್ಪುಣಿಸಂ | + | ಇಕ್ಕಿ | = | ಒಳ್ಪುಣಿಸಿಕ್ಕಿ |
| ಮುದ್ದಂ | + | ಗೈದು | = | ಮುದ್ದುಗೈದು |
| ವಿಳಾಸಮಂ | + | ಮೆರೆದು | = | ವಿಳಾಸಂಮೆರೆದು |
| ಬೇರಿನಂ | + | ಬೆರೆಸಿ | = | ಬೇರ್ವೆರಸಿ[75] |
| ಕೈಯಂ | + | ತೊಳೆದು | = | ಕೈದೊಳೆದು |

(iv) **ಸಂಸ್ಕೃತ ನಾಮಪದದೊಡನೆ ಕನ್ನಡದ ಕ್ರಿಯೆಯು ಸೇರಿ ಆಗುವ ಕ್ರಿಯಾಸಮಾಸದ** ಉದಾಹರಣೆಗಳು–

| | | | | |
|---|---|---|---|---|
| ಕಾರ್ಯವನ್ನು | + | ಮಾಡಿದನು | = | ಕಾರ್ಯಮಾಡಿದನು |
| ಸತ್ಯವನ್ನು | + | ನುಡಿದನು | = | ಸತ್ಯನುಡಿದನು |
| ಮಾನ್ಯವನ್ನು | + | ಮಾಡಿದನು | = | ಮಾನ್ಯಮಾಡಿದನು |
| ಕಾವ್ಯವನ್ನು | + | ಬರೆದನು | = | ಕಾವ್ಯಬರೆದನು |

## (೮) ಗಮಕಸಮಾಸ

---

[74] "ಮೀ" ಧಾತು ಸ್ನಾನಮಾಡು ಎಂಬರ್ಥದ್ದು. ಇಲ್ಲಿ ಸಪ್ತಮೀವಿಭಕ್ತಿಯ ಪೂರ್ವಪದವಾಗಿರುವುದನ್ನು ಗಮನಿಸಬಹುದು. ಹೀಗೆ ಬರುವ ಉದಾರಣೆಗಳು ತೀರ ಕಡಿಮೆ.

[75] ಪೂರ್ವಪದ ತೃತೀಯಾ ವಿಭಕ್ತ್ಯಂತವಾಗಿದೆ.

ಆ ಮನೆ, ಆ ಊರು, ಈ ಮನುಷ್ಯ, ಈ ಹೆಂಗಸು ಇತ್ಯಾದಿ ಸಮಸ್ತಪದಗಳನ್ನು ವಿಗ್ರಹ ವಾಕ್ಯ ಮಾಡಿದರೆ (ಬಿಡಿಸಿ ಬರೆದರೆ), ಅದು+ಮನೆ=ಆ ಮನೆ, ಅದು+ಊರು=ಆ ಊರು, ಇವನು+ಮನುಷ್ಯ=ಈ ಮನುಷ್ಯ, ಇವಳು+ಹೆಂಗಸು=ಈ ಹೆಂಗಸು ಇತ್ಯಾದಿ ರೂಪಗಳಾಗುವುವು. ಇಲ್ಲಿ ಪೂರ್ವಪದಗಳೆಲ್ಲ ಅದು, ಇವನು, ಇವಳು ಇತ್ಯಾದಿ ಸರ್ವನಾಮಪದಗಳಾಗಿವೆ. ಹೀಗೆ ಪೂರ್ವಪದವು ಸರ್ವನಾಮವಾಗಿ ಉತ್ತರದ ನಾಮಪದದೊಡನೆ ಸೇರಿ ಸಮಾಸವಾಗಿವೆ.

ಸುಡುಗಾಡು, ಹುರಿಗಡಲೆ–ಇತ್ಯಾದಿ ಸಮಸ್ತಪದಗಳನ್ನು ಬಿಡಿಸಿ ಬರೆದರೆ, ಸುಡುವುದು+ಕಾಡು, ಹುರಿದುದು+ಕಡಲೆ–ಹೀಗೆ ಆಗುತ್ತದೆ. ಇಲ್ಲಿಯ ಈ ವಿಗ್ರಹ ವಾಕ್ಯಗಳನ್ನು ಗಮನಿಸಿದರೆ, ಪೂರ್ವಪದಗಳು ಸುಡುವುದು, ಹುರಿದುದು–ಇತ್ಯಾದಿ ಕೃದಂತ ನಾಮಗಳಿಂದ ಕೂಡಿವೆ. ಉತ್ತರದಲ್ಲಿ ನಾಮಪದಗಳಿವೆ. ಹೀಗೆ ಪೂರ್ವಪದವು ಸರ್ವನಾಮವಾದರೂ ಆಗಿರಬಹುದು; ಕೃದಂತವಾದರೂ ಆಗಿರಬಹುದು. ಉತ್ತರದಲ್ಲಿ ನಾಮಪದವಿರಬೇಕು. ಹೀಗಾಗುವ ಸಮಾಸವನ್ನೇ "**ಗಮಕಸಮಾಸ**" ವೆನ್ನುತ್ತಾರೆ[76]. ಇದರ ಸೂತ್ರವನ್ನು ಗಮನಿಸಿ.

**(84) ಗಮಕಸಮಾಸ:– ಪೂರ್ವಪದವು ಸರ್ವನಾಮ ಕೃದಂತಗಳಲ್ಲಿ ಒಂದಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಕೂಡಿ ಆಗುವ ಸಮಾಸವನ್ನು ಗಮಕಸಮಾಸವೆಂದು ಕರೆಯುವರು. ಈ ಸಮಾಸದಲ್ಲಿ 'ಅರಿಸಮಾಸ' ದೋಷವನ್ನು ಎಣಿಸಕೂಡದು.**

ಉದಾಹರಣೆಗೆ:– (i) **ಪೂರ್ವಪದವು ಸರ್ವನಾಮದಿಂದ ಕೂಡಿರುವುದಕ್ಕೆ–**

| | | | | |
|---|---|---|---|---|
| ಅವನು | + | ಹುಡುಗ | = | ಆ ಹುಡುಗ |
| ಅವಳು | + | ಹೆಂಗಸು | = | ಆ ಹೆಂಗಸು |
| ಅದು | + | ಕಲ್ಲು | = | ಆ ಕಲ್ಲು |
| ಇವನು | + | ಗಂಡಸು | = | ಈ ಗಂಡಸು |
| ಇವಳು | + | ಮುದುಕಿ | = | ಈ ಮುದುಕಿ |
| ಇದು | + | ನಾಯಿ | = | ಈ ನಾಯಿ |

(ಮೇಲಿನ **ಅವನು, ಅವಳು, ಅದು**–ಎಂಬುದಕ್ಕೆ '**ಆ**' ಎಂಬುದೂ, **ಇವನು, ಇವಳು, ಇದು**–ಎಂಬುದಕ್ಕೆ '**ಈ**' ಎಂಬುದೂ ಆದೇಶಗಳಾಗಿ ಬಂದಿವೆ.)

---

[76] ಪೂರ್ವಪದವು ಗುಣವಚನ, ಸಂಖ್ಯಾವಾಚಕ, ಸರ್ವನಾಮ, ಕೃದಂತಗಳಲ್ಲಿ ಒಂದಾಗಿದ್ದು ಉತ್ತರದಲ್ಲಿನ ನಾಮಪದದೊಡನೆ ಸೇರಿ ಆಗುವ ಸಮಾಸವನ್ನು ಗಮಕಸಮಾಸವೆಂದು ಕೆರೆಯುವುದು ಪ್ರಾಚೀನರ ಅಭಿಪ್ರಾಯ. ಆದರೆ ಹೊಸಗನ್ನಡದಲ್ಲಿ ಗುಣವಚನ ಪೂರ್ವಪದವಾಗಿದ್ದರೆ 'ಕರ್ಮಧಾರಯ' ವೆಂದೂ, ಸಂಖ್ಯಾವಾಚಕವು ಪೂರ್ವಪದವಾಗಿದ್ದರೆ 'ದ್ವಿಗು' ಸಮಾಸವೆಂದೂ ಹೇಳಲಾಗುತ್ತದೆ. ಗಮಕಸಮಾಸವನ್ನು ಕರ್ಮಧಾರಯದ ಒಂದು ಭೇದವೆಂದೂ ಹೇಳುವರು.

(ii) **ಪೂರ್ವಪದ ಕೃದಂತವಾಗಿರುವುದಕ್ಕೆ–**

| | | | | |
|---|---|---|---|---|
| ಮಾಡಿದುದು | + | ಅಡಿಗೆ | = | ಮಾಡಿದಡಿಗೆ |
| ತಿಂದುದು | + | ಕೂಳು | = | ತಿಂದಕೂಳು |
| ಅರಳುವುದು | + | ಮೊಗ್ಗು | = | ಅರಳುಮೊಗ್ಗು |
| ಸೊಕ್ಕಿದುದು | + | ಆನೆ | = | ಸೊಕ್ಕಾನೆ |
| ಕಡೆಯುವುದು | + | ಕೋಲು | = | ಕಡೆಗೋಲು |
| ಉಡುವುದು | + | ದಾರ | = | ಉಡುದಾರ |
| ಬೆಂದುದು | + | ಅಡಿಗೆ | = | ಬೆಂದಡಿಗೆ |
| ಆರಿದುದು | + | ಅಡಿಗೆ | = | ಆರಿದಡಿಗೆ |
| ಸಿಡಿಯುವುದು | + | ಮದ್ದು | = | ಸಿಡಿಮದ್ದು |

(iii) **ಉತ್ತರದ ಸಂಸ್ಕೃತ ಪದದೊಡನೆ ಕೂಡಿರುವ ಸಮಾಸಕ್ಕೆ–**

| | | | | |
|---|---|---|---|---|
| ತಿಂದುದು | + | ಅನ್ನ | = | ತಿಂದಅನ್ನ |
| ಬೇಯಿಸುದುದು | + | ಪಕ್ವಾನ್ನ | = | ಬೇಯಿಸಿದ ಪಕ್ವಾನ್ನ |
| ಅವನು | + | ಮನುಷ್ಯ | = | ಆ ಮನುಷ್ಯ |
| ಮಾಡಿದುದು | + | ಕಾರ್ಯ | = | ಮಾಡಿದ ಕಾರ್ಯ |
| ಬೀಸುವುದು | + | ಚಾಮರ | = | ಬೀಸುವಚಾಮರ |
| ಪೊಡೆವುದು | + | ಭೇರಿ | = | ಪೊಡೆವಭೇರಿ |
| ಪೂಸಿದುದು | + | ಭಸ್ಮ | = | ಪೂಸಿದಭಸ್ಮ |
| ಕಂಡುದು | + | ವಿಚಾರ | = | ಕಂಡವಿಚಾರ |
| ನೋಡಿದುದು | + | ದೃಶ್ಯ | = | ನೋಡಿದ ದೃಶ್ಯ |
| ನೆಯ್ದುದು | + | ವಸ್ತ್ರ | = | ನೆಯ್ದ ವಸ್ತ್ರ |
| ತೆಯ್ದುದು | + | ಶ್ರೀಗಂಧ | = | ತೆಯ್ದ ಶ್ರೀಗಂಧ |

–ಇತ್ಯಾದಿ.

ಇದುವರೆಗೆ ಕನ್ನಡ ಸಮಾಸಗಳ ಬಗೆಗೆ ವಿವರವಾಗಿ ಅನೇಕ ಅಂಶಗಳನ್ನು ತಿಳಿದಿದ್ದೀರಿ. ಈಗ ಹಳೆಗನ್ನಡ, ನಡುಗನ್ನಡ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಮುಖ್ಯವಾದ ಕೆಲವು ಸಮಾಸಗಳ ಪಟ್ಟಿಯನ್ನು ಕೊಟ್ಟಿದೆ. ಅವುಗಳ ಸ್ಥೂಲವಾದ ಜ್ಞಾನ ಮಾಡಿಕೊಳ್ಳಿರಿ.

| | | | | | | | |
|---|---|---|---|---|---|---|---|
| ನುಣ್ಚರ | – | ನುಣ್ಣಿತು | + | ಸರ | = | ನುಣ್ಚರ | (ಕ.ಧಾ.ಸ.) |
| ಇಂಚರ | – | ಇನಿದು | + | ಸರ | = | ಇಂಚರ | (ಕ.ಧಾ.ಸ.) |
| ಇನಿವಾತು | – | ಇನಿದು | + | ಮಾತು | = | ಇನಿವಾತು | (ಕ.ಧಾ.ಸ.) |
| ನುಣ್ಗದಪು | – | ನುಣ್ಣಿತು | + | ಕದಪು | = | ನುಣ್ಗದಪು | (ಕ.ಧಾ.ಸ.) |
| ಹೆದ್ದೇಗ | – | ಹಿರಿದು | + | ತೇಗ | = | ಹೆದ್ದೇಗ | (ಕ.ಧಾ.ಸ.) |
| ಹೆಮ್ಮಾರಿ | – | ಹಿರಿದು | + | ಮಾರಿ | = | ಹೆಮ್ಮಾರಿ | (ಕ.ಧಾ.ಸ.) |
| ಹೆದ್ದಾರಿ | – | ಹಿರಿದು | + | ದಾರಿ | = | ಹೆದ್ದಾರಿ | (ಕ.ಧಾ.ಸ.) |

| | | | | | | | | |
|---|---|---|---|---|---|---|---|---|
| ಹೇರಡವಿ | – | ಹಿರಿದು | + | ಅಡವಿ | = | ಹೇರಡವಿ | (ಕ.ಧಾ.ಸ.) |
| ಹೇರಾನೆ | – | ಹಿರಿದು | + | ಆನೆ | = | ಹೇರಾನೆ | (ಕ.ಧಾ.ಸ.) |
| ಪೇರಾನೆ | – | ಪಿರಿದು | + | ಆನೆ | = | ಪೇರಾನೆ | (ಕ.ಧಾ.ಸ.) |
| ಪೇರಡವಿ | – | ಪಿರಿದು | + | ಅಡವಿ | = | ಪೇರಡವಿ | (ಕ.ಧಾ.ಸ.) |
| ಪೆರ್ಮ್ಮರ | – | ಪಿರಿದು | + | ಮರ | = | ಪೆರ್ಮ್ಮರ | (ಕ.ಧಾ.ಸ.) |
| ಪೆರ್ವಿದಿರ್ | – | ಪಿರಿದು | + | ಬಿದಿರ್ | = | ಪೆರ್ವಿದಿರ್ | (ಕ.ಧಾ.ಸ.) |
| ಪೆರ್ವೊದರ್ | – | ಪಿರಿದು | + | ಪೊದರ್ | = | ಪೆರ್ವೊದರ್ | (ಕ.ಧಾ.ಸ.) |
| ಕೆಂದಳಿರು | – | ಕೆಚ್ಚನೆ | + | ತಳಿರು | = | ಕೆಂದಳಿರು | (ಕ.ಧಾ.ಸ.) |
| ಚೆಂದಳಿರು | – | ಕೆಚ್ಚನೆ | + | ತಳಿರು | = | ಚೆಂದಳಿರು | (ಕ.ಧಾ.ಸ.) |
| ಚೆಂದೆಂಗು | – | ಕೆಚ್ಚನೆ | + | ತೆಂಗು | = | ಚೆಂದೆಂಗು | (ಕ.ಧಾ.ಸ.) |
| ಕೆಂದೆಂಗು | – | ಕೆಚ್ಚನೆ | + | ತೆಂಗು | = | ಕೆಂದೆಂಗು | (ಕ.ಧಾ.ಸ.) |
| ಚೆಂಗಣಗಿಲೆ | – | ಕೆಚ್ಚನೆ | + | ಕಣಗಿಲೆ | = | ಚೆಂಗಣಗಿಲೆ | (ಕ.ಧಾ.ಸ.) |
| ಕೆಂಗಣಗಿಲೆ | – | ಕೆಚ್ಚನೆ | + | ಕಣಗಿಲೆ | = | ಕೆಂಗಣಗಿಲೆ | (ಕ.ಧಾ.ಸ.) |
| ಚೆಂಬವಳ | – | ಕೆಚ್ಚನೆ | + | ಪವಳ | = | ಚೆಂಬವಳ | (ಕ.ಧಾ.ಸ.) |
| ಕೆಂಬವಳ | – | ಕೆಚ್ಚನೆ | + | ಪವಳ | = | ಕೆಂಬವಳ | (ಕ.ಧಾ.ಸ.) |
| ಕಿಸುವಣ್ | – | ಕೆಚ್ಚನೆ | + | ಪಣ್ | = | ಕಿಸುವಣ್ | (ಕ.ಧಾ.ಸ.) |
| ಕೇಸಕ್ಕಿ | – | ಕೆಚ್ಚನೆ | + | ಅಕ್ಕಿ | = | ಕೇಸಕ್ಕಿ | (ಕ.ಧಾ.ಸ.) |
| ಕೆಂಜೇಳು | – | ಕೆಚ್ಚನೆ | + | ಚೇಳು | = | ಕೆಂಜೇಳು | (ಕ.ಧಾ.ಸ.) |
| ಕೆಂಜೆಡೆ | – | ಕೆಚ್ಚನೆ | + | ಜಡೆ | = | ಕೆಂಜೆಡೆ | (ಕ.ಧಾ.ಸ.) |
| ಕಿಸುಸಂಜೆ | – | ಕೆಚ್ಚನೆ | + | ಸಂಜೆ | = | ಕಿಸುಸಂಜೆ | (ಕ.ಧಾ.ಸ.) |
| ಕೆಂಗಣ್ಣು | – | ಕೆಚ್ಚನೆ | + | ಕಣ್ಣು | = | ಕೆಂಗಣ್ಣು | (ಕ.ಧಾ.ಸ.) |

| | | | | | | | |
|---|---|---|---|---|---|---|---|
| ಕೆನ್ನೀರು | – | ಕೆಚ್ಚನೆ | + | ನೀರು | = | ಕೆನ್ನೀರು | (ಕ.ಧಾ.ಸ.) |
| ಬೆಂಬೂದಿ | – | ಬೆಚ್ಚನೆ | + | ಬೂದಿ | = | ಬೆಂಬೂದಿ | (ಕ.ಧಾ.ಸ.) |
| ಬೆನ್ನೀರು | – | ಬೆಚ್ಚನೆ | + | ನೀರು | = | ಬೆನ್ನೀರು | (ಕ.ಧಾ.ಸ.) |
| ಬಿಸಿನೀರು | – | ಬಿಸಿಯಾದ | + | ನೀರು | = | ಬಿಸಿನೀರು | (ಕ.ಧಾ.ಸ.) |
| ಚೆಂದುಟಿ | – | ಕೆಚ್ಚನೆ | + | ತುಟಿ | = | ಚೆಂದುಟಿ | (ಕ.ಧಾ.ಸ.) |
| ಚೆನ್ನೈದಿಲೆ | – | ಕೆಚ್ಚನೆ | + | ನೈದಿಲೆ | = | ಚೆನ್ನೈದಿಲೆ | (ಕ.ಧಾ.ಸ.) |
| ಚೆಂಬೊನ್ | – | ಕೆಚ್ಚನೆ | + | ಪೊನ್ | = | ಚೆಂಬೊನ್ | (ಕ.ಧಾ.ಸ.) |
| ಬಿಸುಸುಯ್ | – | ಬೆಚ್ಚನೆ | + | ಸುಯ್ | = | ಬಿಸುಸುಯ್ | (ಕ.ಧಾ.ಸ.) |
| ಬೆಂಗದಿರ್ | – | ಬೆಚ್ಚನೆ | + | ಕದಿರ್ | = | ಬೆಂಗದಿರ್ | (ಕ.ಧಾ.ಸ.) |
| ಬಿಸಿಗದಿರು | – | ಬಿಸಿದು | + | ಕದಿರು | = | ಬಿಸಿಗದಿರು | (ಕ.ಧಾ.ಸ.) |

| | | | | | | | |
|---|---|---|---|---|---|---|---|
| ತಣ್ಗದಿರ್ | – | ತಣ್ಣನೆ | + | ಕದಿರ್ | = | ತಣ್ಗದಿರ್ | (ಕ.ಧಾ.ಸ.) |
| ತಣ್ಗದಿರ | – | ತಣ್ಣನೆಯ | + | ಕದಿರ್ ಉಳ್ಳವ | = | ತಣ್ಗದಿರ | (ಬಹುವ್ರೀಹಿ) |
| ಬೆಂಗದಿರ | – | ಬೆಚ್ಚನೆಯ | + | ಕದಿರುಉಳ್ಳವ | = | ಬೆಂಗದಿರ | (ಬಹುವ್ರೀಹಿ) |
| ಕಟ್ಟಾಳ್ | – | ಕಡಿದು | + | ಆಳ್ | = | ಕಟ್ಟಾಳ್ | (ಕ.ಧಾ.ಸ.) |
| ಕಟ್ಟುಬ್ಬಸ | – | ಕಡಿದು | + | ಉಬ್ಬಸ | = | ಕಟ್ಟುಬ್ಬಸ | (ಕ.ಧಾ.ಸ.) |
| ಕಟ್ಟಾಸರ್ | – | ಕಡಿದು | + | ಆಸರ್ | = | ಕಟ್ಟಾಸರ್ | (ಕ.ಧಾ.ಸ.) |
| ಕಟ್ಟುಬ್ಬೆಗ | – | ಕಡಿದು | + | ಉಬ್ಬೆಗ | = | ಕಟ್ಟುಬ್ಬೆಗ | (ಕ.ಧಾ.ಸ.) |
| ಕಟ್ಟಪ್ಪಣೆ | – | ಕಡಿದು | + | ಅಪ್ಪಣೆ | = | ಕಟ್ಟಪ್ಪಣೆ | (ಕ.ಧಾ.ಸ.) |
| ಕಡುಗತ್ತಲೆ | – | ಕಡಿದು | + | ಕತ್ತಲೆ | = | ಕಡುಗತ್ತಲೆ | (ಕ.ಧಾ.ಸ.) |
| ಕಟ್ಟಡವಿ | – | ಕಡಿದು | + | ಅಡವಿ | = | ಕಟ್ಟಡವಿ | (ಕ.ಧಾ.ಸ.) |
| ಕಡುರಾಗ | – | ಕಡಿದು | + | ರಾಗ | = | ಕಡುರಾಗ | (ಕ.ಧಾ.ಸ.) |
| ಕಡುಮಮತೆ | – | ಕಡಿದು | + | ಮಮತೆ | = | ಕಡುಮಮತೆ | (ಕ.ಧಾ.ಸ.) |
| ಕಡುಚಾಗ | – | ಕಡಿದು | + | ಚಾಗ | = | ಕಡುಚಾಗ | (ಕ.ಧಾ.ಸ.) |
| ಕುರುವಣೆ | – | ಕಿರಿದು | + | ಮಣೆ | = | ಕುರುವಣೆ | (ಕ.ಧಾ.ಸ.) |
| ಕುರುಗಿಡ | – | ಕಿರಿದು | + | ಗಿಡ | = | ಕುರುಗಿಡ | (ಕ.ಧಾ.ಸ.) |
| ಕರುಮಾಡು | – | ಕಿರಿದು | + | ಮಾಡು | = | ಕರುಮಾಡು | (ಕ.ಧಾ.ಸ.) |
| ಕುತ್ತೆಸಳ್ | – | ಕಿರಿದು | + | ಎಸಳ್ | = | ಕುತ್ತೆಸಳ್ | (ಕ.ಧಾ.ಸ.) |
| ಬೆಳ್ವಟ್ಟೆ | – | ಬಿಳಿದು | + | ಬಟ್ಟೆ | = | ಬೆಳ್ವಟ್ಟೆ | (ಕ.ಧಾ.ಸ.) |
| ಬೆಳ್ಗೊಡೆ | – | ಬಿಳಿದು | + | ಕೊಡೆ | = | ಬೆಳ್ಗೊಡೆ | (ಕ.ಧಾ.ಸ.) |
| ಬೆಳ್ಮುಗಿಲ್ | – | ಬಿಳಿದು | + | ಮುಗಿಲ್ | = | ಬೆಳ್ಮುಗಿಲ್ | (ಕ.ಧಾ.ಸ.) |
| ತಂಬೆಲರ್ | – | ತಣ್ಣನೆ | + | ಎಲರ್ | = | ತಂಬೆಲರ್ | (ಕ.ಧಾ.ಸ.) |

| | | | | | | | |
|---|---|---|---|---|---|---|---|
| ತಂಗಾಳಿ | – | ತಣ್ಣನೆ | + | ಗಾಳಿ | = | ತಂಗಾಳಿ | (ಕ.ಧಾ.ಸ.) |
| ತಂಗೂಳ್ | – | ತಣ್ಣನೆ | + | ಕೂಳ್ | = | ತಂಗೂಳ್ | (ಕ.ಧಾ.ಸ.) |
| ತಣ್ಣೀರ್ | – | ತಣ್ಣನೆ | + | ನೀರ್ | = | ತಣ್ಣೀರ್ | (ಕ.ಧಾ.ಸ.) |
| ಮೆಲ್ಲೆಲರ್ | – | ಮೆಲ್ಲಿತು | + | ಎಲರ್ | = | ಮೆಲ್ಲೆಲರ್ | (ಕ.ಧಾ.ಸ.) |
| ಮೆಲ್ಲೆದೆ | – | ಮೆಲ್ಲಿತು | + | ಎದೆ | = | ಮೆಲ್ಲೆದೆ | (ಕ.ಧಾ.ಸ.) |
| ಮೆಲ್ವಾತು | – | ಮೆಲ್ಲಿತು | + | ಮಾತು | = | ಮೆಲ್ವಾತು | (ಕ.ಧಾ.ಸ.) |
| ಮೆಲ್ವಾಸು | – | ಮೆಲ್ಲಿತು | + | ಪಾಸು | = | ಮೆಲ್ವಾಸು | (ಕ.ಧಾ.ಸ.) |
| ಮೆಲ್ನುಡಿ | – | ಮೆಲ್ಲಿತು | + | ನುಡಿ | = | ಮೆಲ್ನುಡಿ | (ಕ.ಧಾ.ಸ.) |
| ಕಾರಿರುಳ್ | – | ಕರಿದು | + | ಇರುಳ್ | = | ಕಾರಿರುಳ್ | (ಕ.ಧಾ.ಸ.) |
| ಕಾರೊಡಲ್ | – | ಕರಿದು | + | ಒಡಲ್ | = | ಕಾರೊಡಲ್ | (ಕ.ಧಾ.ಸ.) |
| ಕಾರ್ಮೋಡ | – | ಕರಿದು | + | ಮೋಡ | = | ಕಾರ್ಮೋಡ | (ಕ.ಧಾ.ಸ.) |

| | | | | | | | | |
|---|---|---|---|---|---|---|---|---|
| ಕಾರಡವಿ | – | ಕರಿದು | + | ಅಡವಿ | = | ಕಾರಡವಿ | | (ಬಹುವ್ರೀಹಿ) |
| ಕಮ್ಮಲರ್ | – | ಕಮ್ಮನೆ | + | ಮಲರ್ | = | ಕಮ್ಮಲರ್ | | (ಬಹುವ್ರೀಹಿ) |
| ಕಮ್ಮೆಲರ್ | – | ಕಮ್ಮನೆ | + | ಎಲರ್ | = | ಕಮ್ಮೆಲರ್ | | (ಕ.ಧಾ.ಸ.) |
| ಎಳವಳ್ಳಿ | – | ಎಳದು | + | ಬಳ್ಳಿ | = | ಎಳವಳ್ಳಿ | | (ಕ.ಧಾ.ಸ.) |
| ಎಳಗರು | – | ಎಳದು | + | ಕರು | = | ಎಳಗರು | | (ಕ.ಧಾ.ಸ.) |
| ಎಳಗಾಳಿ | – | ಎಳದು | + | ಗಾಳಿ | = | ಎಳಗಾಳಿ | | (ಕ.ಧಾ.ಸ.) |
| ನೀರ್ವೊನಲ್ | – | ನೀರಿನ | + | ಪೊನಲ್ | = | ನೀರ್ವೊನಲ್ | | (ಷ.ತ.ಸ.) |
| ನೀರ್ವಾವು | – | ನೀರಿನ | + | ಪಾವು | = | ನೀರ್ವಾವು | | (ಷ.ತ.ಸ.) |
| ನೀರ್ಗುಡಿ | – | ನೀರಂ | + | ಕುಡಿ | = | ನೀರ್ಗುಡಿ | | (ಕ್ರಿಯಾಸಮಾಸ) |
| ಬೇರ್ವೆರಸಿ | – | ಬೇರಿನಿಂ | + | ಬೆರಸಿ | = | ಬೇರ್ವೆರಸಿ | | (ಕ್ರಿಯಾಸಮಾಸ) |
| ನೀರ್ಗೂಡಿ | – | ನೀರಿನಿಂ | + | ಕೂಡಿ | = | ನೀರ್ಗೂಡಿ | | (ಕ್ರಿಯಾಸಮಾಸ) |
| ಬಳೆದೊಟ್ಟಂ | – | ಬಳೆಯಂ | + | ತೊಟ್ಟಂ | = | ಬಳೆದೊಟ್ಟಂ | | (ಕ್ರಿಯಾಸಮಾಸ) |
| ಕೆಳೆಗೊಟ್ಟಂ | – | ಕೆಳೆಯಂ | + | ಕೊಟ್ಟಂ | = | ಕೆಳೆಗೊಟ್ಟಂ | | (ಕ್ರಿಯಾಸಮಾಸ) |
| ಮರೆವೊಕ್ಕಂ | – | ಮರೆಯಂ | + | ಪೊಕ್ಕಂ | = | ಮರೆವೊಕ್ಕಂ | | (ಕ್ರಿಯಾಸಮಾಸ) |
| ಪ್ರಿಯಂನುಡಿ | – | ಪ್ರಿಯಮಂ | + | ನುಡಿ | = | ಪ್ರಿಯಂನುಡಿ | | (ಕ್ರಿಯಾಸಮಾಸ) |
| ರಂಗಂಬೊಕ್ಕಂ | – | ರಂಗಮಂ | + | ಪೊಕ್ಕಂ | = | ರಂಗಂಬೊಕ್ಕಂ | | (ಕ್ರಿಯಾಸಮಾಸ) |
| ಕಡಂಗೊಂಡಂ | – | ಕಡಮಂ | + | ಕೊಂಡಂ | = | ಕಡಂಗೊಂಡಂ | | (ಕ್ರಿಯಾಸಮಾಸ) |
| ಬಳಪಂಗೊಳೆ | – | ಬಳಪಮಂ | + | ಕೊಳೆ | = | ಬಳಪಂಗೊಳೆ | | (ಕ್ರಿಯಾಸಮಾಸ) |
| ವಜ್ರಂಗೊಳೆ | – | ವಜ್ರಮಂ | + | ಕೊಳೆ | = | ವಜ್ರಂಗೊಳೆ | | (ಕ್ರಿಯಾಸಮಾಸ) |
| ಚಕ್ರಂಗೊಳೆ | – | ಚಕ್ರಮಂ | + | ಕೊಳೆ | = | ಚಕ್ರಂಗೊಳೆ | | (ಕ್ರಿಯಾಸಮಾಸ) |

| | | | | | | | |
|---|---|---|---|---|---|---|---|
| ಬಿಲ್ಗೊಳೆ | – | ಬಿಲ್ಲಂ | + | ಕೊಳೆ | = | ಬಿಲ್ಗೊಳೆ | (ಕ್ರಿಯಾಸಮಾಸ) |
| ಎರಳ್ಮಾತು | – | ಎರಡು | + | ಮಾತು | = | ಎರಳ್ಮಾತು | (ದ್ವಿಗುಸಮಾಸ) |
| ಎರಳ್ತೆರ | – | ಎರಡು | + | ತೆರ | = | ಎರಳ್ತೆರ | (ದ್ವಿಗುಸಮಾಸ) |
| ಇರ್ವಾಳ್ | – | ಎರಡು | + | ಬಾಳ್ | = | ಇರ್ವಾಳ್ | (ದ್ವಿಗುಸಮಾಸ) |
| ಇರ್ವೆಂಡಿರ್ | – | ಎರಡು | + | ಪೆಂಡಿರ್ | = | ಇರ್ವೆಂಡಿರ್ | (ದ್ವಿಗುಸಮಾಸ) |
| ಇರ್ಕಟ್ಟು | – | ಎರಡು | + | ಕಟ್ಟು | = | ಇರ್ಕಟ್ಟು | (ದ್ವಿಗುಸಮಾಸ) |
| ಇರ್ತಡಿ | – | ಎರಡು | + | ತಡಿ | = | ಇರ್ತಡಿ | (ದ್ವಿಗುಸಮಾಸ) |
| ಇರ್ತೆರ | – | ಎರಡು | + | ತೆರ | = | ಇರ್ತೆರ | (ದ್ವಿಗುಸಮಾಸ) |
| ಇತ್ತಂಡ | – | ಎರಡು | + | ತಂಡ | = | ಇತ್ತಂಡ | (ದ್ವಿಗುಸಮಾಸ) |
| ಇರ್ಕೆಲ | – | ಎರಡು | + | ಕೆಲ | = | ಇರ್ಕೆಲ | (ದ್ವಿಗುಸಮಾಸ) |

| | | | | | | | | |
|---|---|---|---|---|---|---|---|---|
| ಇಮ್ಮಡಿ | – | ಎರಡು | + | ಮಡಿ | = | ಇಮ್ಮಡಿ | | (ದ್ವಿಗುಸಮಾಸ) |
| ಮೂವಾಳ್ | – | ಮೂರು | + | ಬಾಳ್ | = | ಮೂವಾಳ್ | | (ದ್ವಿಗುಸಮಾಸ) |
| ಮುಮ್ಮಡಿ | – | ಮೂರು | + | ಮಡಿ | = | ಮುಮ್ಮಡಿ | | (ದ್ವಿಗುಸಮಾಸ) |
| ಮೂವಡಿ | – | ಮೂರು | + | ಮಡಿ | = | ಮೂವಡಿ | | (ದ್ವಿಗುಸಮಾಸ) |
| ನಾಲ್ವಡಿ | – | ನಾಲ್ಕು | + | ಮಡಿ | = | ನಾಲ್ವಡಿ | | (ದ್ವಿಗುಸಮಾಸ) |
| ಒರ್ನುಡಿ | – | ಒಂದು | + | ನುಡಿ | = | ಒರ್ನುಡಿ | | (ದ್ವಿಗುಸಮಾಸ) |
| ಒರ್ಪಿಡಿ | – | ಒಂದು | + | ಪಿಡಿ | = | ಒರ್ಪಿಡಿ | | (ದ್ವಿಗುಸಮಾಸ) |
| ಏವಂದಂ | – | ಏತರ್ಕೆ | + | ಬಂದಂ | = | ಏವಂದಂ | | (ಕ್ರಿಯಾಸಮಾಸ) |
| ಏವೋದಂ | – | ಏತರ್ಕೆ | + | ಪೋದಂ | = | ಏವೋದಂ | | (ಕ್ರಿಯಾಸಮಾಸ) |
| ಏವೇಳ್ವೆಂ | – | ಏನಂ | + | ಪೇಳ್ವೆಂ | = | ಏವೇಳ್ವೆಂ | | (ಕ್ರಿಯಾಸಮಾಸ) |
| ಏಗೆಯ್ದಂ | – | ಏನಂ | + | ಗೈದಂ | = | ಏಗೈದಂ | | (ಕ್ರಿಯಾಸಮಾಸ) |
| ಕಿತ್ತಡಿ | – | ಕಿರಿದು | + | ಅಡಿ | = | ಕಿತ್ತಡಿ | | (ಬಹುವ್ರೀಹಿಸಮಾಸ) |
| ಕುತ್ತಡಿ | – | ಕಿರಿದು | + | ಅಡಿ | = | ಕುತ್ತಡಿ | | (ಬಹುವ್ರೀಹಿಸಮಾಸ) |
| ಕಿತ್ತೀಳೆ | – | ಕಿರಿದು | + | ಈಳೆ | = | ಕಿತ್ತೀಳೆ | | (ಕ.ಧಾ.ಸ.) |
| ಕುತ್ತೆಸಳ್ | – | ಕಿರಿದು | + | ಎಸಳ್ | = | ಕುತ್ತೆಸಳ್ | | (ಕ.ಧಾ.ಸ.) |
| ಕಿತ್ತೆಸಳ್ | – | ಕಿರಿದು | + | ಎಸಳ್ | = | ಕಿತ್ತೆಸಳ್ | | (ಕ.ಧಾ.ಸ.) |
| ಪಂದೊಗಲ್ | – | ಪಚ್ಚನೆ | + | ತೊಗಲ್ | = | ಪಂದೊಗಲ್ | | (ಕ.ಧಾ.ಸ.) |
| ಪಂದಲೆ | – | ಪಚ್ಚನೆ | + | ತಲೆ | = | ಪಂದಲೆ | | (ಕ.ಧಾ.ಸ.) |
| ಕಿಸುಗಣಗಿಲೆ | – | ಕೆಚ್ಚನೆ | + | ಕಣಗಿಲೆ | = | ಕಿಸುಗಣಗಿಲೆ | | (ಕ.ಧಾ.ಸ.) |
| ಪಂದಳಿರ್ | – | ಪಚ್ಚನೆ | + | ತಳಿರ್ | = | ಪಂದಳಿರ್ | | (ಕ.ಧಾ.ಸ.) |
| ಕೂರಿಲಿ | – | ಕೂರ್ | + | ಇಲ್ಲದುದು | = | ಕೂರಿಲಿ | | (ಬಹುವ್ರೀಹಿಸಮಾಸ) |

| | | | | | | | |
|---|---|---|---|---|---|---|---|
| ಪಲ್ಲಿಲಿ | – | ಪಲ್ | + | ಇಲ್ಲಿದುದು | = | ಪಲ್ಲಿಲಿ | (ಬಹುವ್ರೀಹಿಸಮಾಸ) |
| ಅಗಿಲಿಲಿ | – | ಅಗಿಲ್ | + | ಇಲ್ಲದುದು | = | ಅಗಿಲಿಲಿ | (ಬಹುವ್ರೀಹಿಸಮಾಸ) |
| ಮೀಂಗುಲಿ | – | ಮೀನಂ | + | ಕೊಲ್ಲುವವ | = | ಮೀಂಗುಲಿ | (ಬಹುವ್ರೀಹಿಸಮಾಸ) |
| ಅರಗುಲಿ | – | ಅರಮಂ | + | ಕೊಲ್ಲುವವ | = | ಅರಗುಲಿ | (ಬಹುವ್ರೀಹಿಸಮಾಸ) |
| ಬೆಳಗಲಿ | – | ಬೆಳಕು | + | ಇಲ್ಲದುದು | = | ಬೆಳಗಲಿ | (ಬಹುವ್ರೀಹಿಸಮಾಸ) |
| ನಾಣಿಲಿ | – | ನಾಣ್ | + | ಇಲ್ಲದುದು | = | ನಾಣಿಲಿ | (ಬಹುವ್ರೀಹಿಸಮಾಸ) |
| ಕಡುಚಾಗಿ | – | ಕಡಿದು | + | ಜಾಗವುಳ್ಳವ | = | ಕಡುಚಾಗಿ | (ಬಹುವ್ರೀಹಿಸಮಾಸ) |
| ಕಡುರಾಗಿ | – | ಕಡಿದು | + | ರಾಗವುಳ್ಳವ | = | ಕಡುರಾಗಿ | (ಬಹುವ್ರೀಹಿಸಮಾಸ) |
| ಮೂವಟ್ಟೆ | – | ಮೂರು | + | ಬಟ್ಟೆ | = | ಮೂವಟ್ಟೆ | (ದ್ವಿಗುಸಮಾಸ) |
| ಮೂಲೋಕ | – | ಮೂರು | + | ಲೋಕ | = | ಮೂಲೋಕ | (ದ್ವಿಗುಸಮಾಸ) |
| ಮುಕ್ಕೊಡೆ | – | ಮೂರು | + | ಕೊಡೆ | = | ಮುಕ್ಕೊಡೆ | (ದ್ವಿಗುಸಮಾಸ) |

| | | | | | | | | |
|---|---|---|---|---|---|---|---|---|
| ಮುಪ್ಪೊಳಲ್ | – | ಮೂರು | + | ಪೊಳಲ್ | = | ಮುಪ್ಪೊಳಲ್ | (ದ್ವಿಗುಸಮಾಸ) |
| ಮುಪ್ಪುರಿ | – | ಮೂರು | + | ಪುರಿ | = | ಮುಪ್ಪುರಿ | (ದ್ವಿಗುಸಮಾಸ) |
| ಮುಮ್ಮಾತು | – | ಮೂರು | + | ಮಾತು | = | ಮುಮ್ಮಾತು | (ದ್ವಿಗುಸಮಾಸ) |
| ಮುಚ್ಚೋಟು | – | ಮೂರು | + | ಚೋಟು | = | ಮುಚ್ಚೋಟು | (ದ್ವಿಗುಸಮಾಸ) |
| ಮೂಗೇಣ್ | – | ಮೂರು | + | ಗೇಣ್ | = | ಮೂಗೇಣ್ | (ದ್ವಿಗುಸಮಾಸ) |
| ಮೂಗಾವುದಂ | – | ಮೂರು | + | ಗಾವುದಂ | = | ಮೂಗಾವುದಂ | (ದ್ವಿಗುಸಮಾಸ) |
| ಮುಯ್ಯಡಿ | – | ಮೂರು | + | ಅಡಿ | = | ಮುಯ್ಯಡಿ | (ದ್ವಿಗುಸಮಾಸ) |
| ಐಗಂಡುಗ | – | ಐದು | + | ಕಂಡುಗ | = | ಐಗಂಡುಗ | (ದ್ವಿಗುಸಮಾಸ) |
| ನಾಲ್ವೆರಲ್ | – | ನಾಲ್ಕು | + | ಬೆರಲ್ | = | ನಾಲ್ವೆರಲ್ | (ದ್ವಿಗುಸಮಾಸ) |
| ಆರುಮಡಿ | – | ಆರು | + | ಮಡಿ | = | ಆರುಮಡಿ | (ದ್ವಿಗುಸಮಾಸ) |
| ನಟ್ಟಡವಿ | – | ಅಡವಿಯ | + | ನಡು | = | ನಟ್ಟಡವಿ | (ಅಂಶಿಸಮಾಸ) |
| ನಟ್ಟಿರುಳ್ | – | ಇರುಳಿನ | + | ನಡು | = | ನಟ್ಟಿರುಳ್ | (ಅಂಶಿಸಮಾಸ) |
| ನಡುವಗಲ್ | – | ಪಗಲಿನ | + | ನಡು | = | ನಡುವಗಲ್ | (ಅಂಶಿಸಮಾಸ) |
| ನಡುಮನೆ | – | ಮನೆಯ | + | ನಡು | = | ನಡುಮನೆ | (ಅಂಶಿಸಮಾಸ) |
| ನಡುಬೆನ್ನು | – | ಬೆನ್ನಿನ | + | ನಡು | = | ನಡುಬೆನ್ನು | (ಅಂಶಿಸಮಾಸ) |
| ಕುಡಿವುರ್ಬು | – | ಪುರ್ಬಿನ | + | ಕುಡಿ | = | ಕುಡಿವುರ್ಬು | (ಅಂಶಿಸಮಾಸ) |
| ತುದಿಮೂಗು | – | ಮೂಗಿನ | + | ತುದಿ | = | ತುದಿಮೂಗು | (ಅಂಶಿಸಮಾಸ) |
| ಮುಂದಲೆ | – | ತಲೆಯ | + | ಮುಂದು | = | ಮುಂದಲೆ | (ಅಂಶಿಸಮಾಸ) |
| ಹಿಂದಲೆ | – | ತಲೆಯ | + | ಹಿಂದು | = | ಹಿಂದಲೆ | (ಅಂಶಿಸಮಾಸ) |
| ಕಿಬ್ಬೊಟ್ಟೆ | – | ಹೊಟ್ಟೆಯ | + | ಕೆಳಗು | = | ಕಿಬ್ಬೊಟ್ಟೆ | (ಅಂಶಿಸಮಾಸ) |

| | | | | | | | |
|---|---|---|---|---|---|---|---|
| ಉಂಗುರಚಿನ್ನ | – | ಉಂಗುರಕ್ಕೆ | + | ಚಿನ್ನ | = | ಉಂಗುರಚಿನ್ನ | (ತತ್ಪುರುಷಸಮಾಸ) |
| ತೇರ್ಮರ | – | ತೇರಿಗೆ | + | ಮರ | = | ತೇರ್ಮರ | (ತತ್ಪುರುಷಸಮಾಸ) |
| ಪಕ್ಕಿಗೂಡು | – | ಪಕ್ಕಿಯ | + | ಗೂಡು | = | ಪಕ್ಕಿಗೂಡು | (ತತ್ಪುರುಷಸಮಾಸ) |
| ಆನೆಮರಿ | – | ಆನೆಯ | + | ಮರಿ | = | ಆನೆಮರಿ | (ತತ್ಪುರುಷಸಮಾಸ) |
| ಮರಗಾಲ್ | – | ಮರದ | + | ಕಾಲ್ | = | ಮರಗಾಲ್ | (ತತ್ಪುರುಷಸಮಾಸ) |
| ಮರವಾಳ್ | – | ಮರದ | + | ಬಾಳ್ | = | ಮರವಾಳ್ | (ತತ್ಪುರುಷಸಮಾಸ) |
| ಬೇಹುಚದುರ | – | ಬೇಹಿನಲ್ಲಿ | + | ಚದುರ | = | ಬೇಹುಚದುರ | (ತತ್ಪುರುಷಸಮಾಸ) |
| ಎಣ್ದೆಸೆ | – | ಎಂಟು | + | ದೆಸೆ | = | ಎಣ್ದೆಸೆ | (ದ್ವಿಗುಸಮಾಸ) |
| ಮೂಲೋಕ | – | ಮೂರು | + | ಲೋಕ | = | ಮೂಲೋಕ | (ದ್ವಿಗುಸಮಾಸ) |
| ಐಗಾವುದ | – | ಐದು | + | ಗಾವುದ | = | ಐಗಾವುದ | (ದ್ವಿಗುಸಮಾಸ) |

| | | | | | | | | |
|---|---|---|---|---|---|---|---|---|
| ನಾಲ್ಮೊಗ | – | ನಾಲ್ಕು | + | ಮೊಗ | = | ನಾಲ್ಮೊಗ | | (ದ್ವಿಗುಸಮಾಸ) |
| ನಾಲ್ಮೊಗಂ | – | ನಾಲ್ಕು | + | ಮೊಗ ಉಳ್ಳವ | = | ನಾಲ್ಮೊಗಂ | | (ಬಹುವ್ರೀಹಿಸಮಾಸ) |
| ಕಂಪುಣಿ | – | ಕಂಪನ್ನು | + | ಉಣ್ಬುದು ಆವುದೋ | = | ಕಂಪುಣಿ | | (ಬಹುವ್ರೀಹಿಸಮಾಸ) |
| ಕಲ್ಲುಟಿಗ | – | ಕಲ್ಲನ್ನು | + | ಕುಟ್ಟುವವನು | = | ಕಲ್ಕುಟಿಗ | | (ಬಹುವ್ರೀಹಿಸಮಾಸ) |

# III – ಸಾರಾಂಶ

## ಸಮಾಸ

**ಎರಡು ಅಥವಾ ಅನೇಕ ಪದಗಳು ಸೇರಿ ಒಂದು ಪದವಾಗುವಿಕೆ.**

1. **ಉತ್ತರಪದಾರ್ಥ ಪ್ರಧಾನವಾದುದು ತತ್ಪುರುಷಸಮಾಸ.**
2. **ವಿಶೇಷಣ ವಿಶೇಷಭಾವ ಸಂಬಂಧ–ಮತ್ತು ಸಮಾನಾಧಿಕರಣಗಳುಳ್ಳದ್ದು ಕರ್ಮಧಾರಯಸಮಾಸ.**
3. **ಸಂಖ್ಯಾಪೂರ್ವಪದವಾಗಿ ಉಳ್ಳದ್ದು ದ್ವಿಗುಸಮಾಸ.**

**4 ಅಂಶಾಂಶಿಭಾವಸಂಬಂಧವುಳ್ಳದ್ದು ಅಂಶಿಸಮಾಸ.**

**5 ಸರ್ವಪದಾರ್ಥ ಪ್ರಧಾನವಾದುದು ದ್ವಂದ್ವ.**

**6 ಅನ್ಯಪದಾರ್ಥ ಪ್ರಧಾನವಾದದ್ದು ಬಹುವ್ರೀಹಿಸಮಾಸ.**

**7 ಪೂರ್ವಪದ–ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು ಉತ್ತರದ ನಾಮಪದದೊಡನೆ ಕೂಡಿ ಆಗುವ ಸಮಾಸ ಗಮಕ.**

**8 ಪೂರ್ವಪದ ದ್ವಿತೀಯಾಂತವಾಗಿದ್ದು ಉತ್ತರದ ಕ್ರಿಯೆಯೊಡನೆ ಕೂಡಿ ಆಗುವ ಸಮಾಸ ಕ್ರಿಯಾಸಮಾಸ.**

**9 ಅರಿಸಮಾಸ:– ಕನ್ನಡ ಪದಗಳೊಡನೆ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಾರದು. ಮಾಡಿದರೆ ಅರಿಸಮಾಸವೆನಿಸುವುದು.**

**(i) ಪೂರ್ವಕವಿ ಪ್ರಯೋಗಗಳಲ್ಲಿ ದೋಷವಿಲ್ಲ.**

**(ii) ಬಿರುದಾವಳಿಯೇ ಮೊದಲಾದವುಗಳಲ್ಲಿ ದೋಷವೆಣಿಸಬಾರದು.**

**(iii) ಕ್ರಿಯಾ–ಗಮಕಸಮಾಸಗಳಲ್ಲಿ ದೋಷವಿಲ್ಲ.**

* * * * *

## ಅಭ್ಯಾಸ ಪ್ರಶ್ನೆಗಳು

(೧) ಸಮಾಸವೆಂದರೇನು? ಸೂತ್ರೋದಾಹರಣ ಪೂರ್ವಕ ವಿವರಿಸಿರಿ.

(೨) ಸಮಾಸಗಳಲ್ಲಿ ಎಷ್ಟುವಿಧ?

(೩) ಅರಿಸಮಾಸವೆಂದರೇನು?

(೪) ಎಲ್ಲೆಲ್ಲಿ ಅರಿಸಮಾಸ ದೋಷವನ್ನು ಎಣಿಸಕೂಡದು?

(೫) ಈ ಕೆಳಗೆ ಕೆಲವು ಸಮಾಸ ಪದಗಳನ್ನು ಕೊಟ್ಟಿದೆ. ಅವುಗಳನ್ನು ಬಿಡಿಸಿ ಬರೆದು ಸಮಾಸದ ಹೆಸರು ತಿಳಿಸಿರಿ:–

ಅರಮನೆ, ಮರಗಾಲು, ಇಮ್ಮಡಿ, ಇಕ್ಕೆಲ, ಮುಕ್ಕಣ್ಣು, ಮುಕ್ಕಣ್ಣ, ನಿಡುಮೂಗು, ನಿಡುಮೊಗ, ಹೆಮ್ಮರ, ಹೆದ್ದಾರಿ, ಬೆಳ್ಗೊಡೆ, ರಾಮಕೃಷ್ಣರು, ಗಿಡಮರಬಳ್ಳಿ, ಮುಂದಲೆ, ಕಡೆಗಣ್ಣು, ಆ ಮನುಷ್ಯ, ತೋರುಗಂಬ, ಹುರಿಗಡಲೆ,–ಇತ್ಯಾದಿ.

(೬) ಕೆಳಗೆ ಕೆಲವು ಸಮಾಸಗಳನ್ನು ವಿಗ್ರಹವಾಕ್ಯ ಮಾಡಿ ಬರೆದಿದೆ. ಅವುಗಳನ್ನು ಕೂಡಿಸಿ ಬರೆದು ಸಮಾಸದ ಹೆಸರು ತಿಳಿಸಿರಿ.

ಇವಳು+ಮುದುಕಿ, ಇವನು+ಮುದುಕ, ದೇವರ+ಮಂದಿರ, ತಿಂದುದು+ಅನ್ನ, ಎರಡು+ಕೆಲ ಮೂರು+ಪುರಿ, ಮರದ+ಬಾಳ್, ಕೆಚ್ಚನೆ+ಜಡೆ, ಎರಡು+ಕಡೆ, ನುಣ್ಣಿತು+ಸರ, ತಣ್ಣನೆ+ನೀರು ಕಡಿದು+ಅಪ್ಪಣೆ, ಇನಿದು+ಸರ, ಅರಳುವುದು+ಮೊಗ್ಗು, ಬೆಚ್ಚನೆಯ+ಕದಿರು+ಉಳ್ಳವ –ಇತ್ಯಾದಿ.

(೭) ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಸರಿಯಾದ ಪದವನ್ನು ಹಾಕಿ ವಾಕ್ಯವನ್ನು ಪೂರ್ಣಮಾಡಿರಿ:–

(ಅ) ಕನ್ನಡ ಮತ್ತು ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಿದರೆ ____ ಎನ್ನುವರು.

(ಆ) ಪೂರ್ವೋತ್ತರಪದಗಳು ಅಂಶಾಂಶಿಭಾವ ಸಂಬಂಧದಿಂದ ಕೂಡಿದ್ದರೆ_______ ಸಮಾಸವೆನಿಸುವುದು.

(ಇ) ಕರ್ಮಧಾರಯಸಮಾಸದಲ್ಲಿ ಪೂರ್ವೋತ್ತರಪದಗಳು__ಸಂಬಂಧದಿಂದ ಕೂಡಿರುತ್ತವೆ.

(ಈ) ಬಹುವ್ರೀಹಿಸಮಾಸದಲ್ಲಿ _________ ಪದದ ಅರ್ಥವು ಪ್ರಧಾನವಾಗಿರುತ್ತದೆ.

(ಉ) ಕ್ರಿಯಾಸಮಾಸದಲ್ಲಿ ಉತ್ತರಪದವು __________ ಯಿಂದ ಕೂಡಿರುತ್ತದೆ.

(ಊ) ದ್ವಿಗುಸಮಾಸದಲ್ಲಿ ಪೂರ್ವಪದವು _________ ವಾಚಕವಾಗಿರುತ್ತದೆ.

(ಋ) ಪೂರ್ವಪದವು ಸರ್ವನಾಮ, ಕೃದಂತಗಳಲ್ಲಿ ಒಂದಾಗಿದ್ದು ಉತ್ತರ ನಾಮಪದದೊಡನೆ ಸೇರಿ ಆಗುವ ಸಮಾಸವನ್ನು ________ ಎನ್ನುವರು.

(ೠ) ಗಮಕಸಮಾಸವು ___________ ದ ಒಂದು ಪ್ರಭೇದವಾಗಿದೆ.

(೮) ಈ ಕೆಳಗೆ ಆವರಣ ಚಿಹ್ನೆಯಲ್ಲಿ ಕೊಟ್ಟಿರುವ ಒಂದು ಸರಿಯಾದ ಉತ್ತರವನ್ನು ಆರಿಸಿ ಬಿಟ್ಟಿರುವ ಸ್ಥಳಗಳಲ್ಲಿ ಸೇರಿಸಿ ಬರೆಯಿರಿ:–

(ಅ) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಕತಪಗಳಿಗೆ ಕ್ರಮವಾಗಿ ಗದಬಗಳು ___________ ಬರುತ್ತವೆ. (ಆಗಮವಾಗಿ, ಆದೇಶವಾಗಿ, ಲೋಪವಾಗಿ)

* * * * *

# IV – ದ್ವಿರುಕ್ತಿ (ದ್ವಿಃ ಉಕ್ತಿ = ದ್ವಿರುಕ್ತಿ)

ದ್ವಿರುಕ್ತಿಯೆಂದರೆ ಒಂದು ಶಬ್ದವನ್ನು ಎರಡು ಸಲ ಉಚ್ಚರಿಸುವುದೆಂದು ಅರ್ಥ. ಕೆಳಗಿನ ವಾಕ್ಯಗಳನ್ನು ನೋಡಿರಿ.

೧. ಬಿಕ್ಷುಕರು **ಮನೆಮನೆಗಳನ್ನು** ತಿರುಗಿ ಬಿಕ್ಷೆ ಬೇಡಿದರು.
೨. ಮಗನೇ, **ಬೇಗಬೇಗ** ಬಾ.
೩. ಮಕ್ಕಳು **ಓಡಿಓಡಿ** ದಣಿದರು.
೪. **ಅಕ್ಕಟಕ್ಕಟಾ! ಕಷ್ಟಕಷ್ಟ!**
೫. **ಈಗೀಗ** ಅವನು ಚೆನ್ನಾಗಿ ಓದುತ್ತಾನೆ.
೬. **ದೊಡ್ಡದೊಡ್ಡ** ಮಕ್ಕಳು ಬಂದರು.

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ ಶಬ್ದಗಳನ್ನು ನೋಡಿರಿ. ಇಲ್ಲಿ **ಮನೆ ಮನೆ, ಬೇಗ ಬೇಗ, ಓಡಿ ಓಡಿ, ಅಕ್ಕಟಾ ಅಕ್ಕಟಾ, ಈಗ ಈಗ, ದೊಡ್ಡ ದೊಡ್ಡ**–ಇತ್ಯಾದಿ ಶಬ್ದಗಳನ್ನು ಎರಡೆರಡು ಸಲ ಪ್ರಯೋಗಿಸಲಾಗಿದೆ.

"**ಮನೆಮನೆಗಳನ್ನು** ತಿರುಗಿ" ಎಂಬಲ್ಲಿ ಪ್ರತಿಯೊಂದು ಮನೆಯನ್ನೂ ತಿರುಗಿ ಎಂಬರ್ಥವೂ, "**ಬೇಗಬೇಗ** ಬಾ" ಎಂಬಲ್ಲಿ ಅವಸರ(ತ್ವರೆ)ವೂ ವ್ಯಕ್ತವಾಗುವುದು. "**ಓಡಿಓಡಿ** ದಣಿದರು" ಎಂಬಲ್ಲಿ ಆಧಿಕ್ಯ(ಹೆಚ್ಚು ಓಡಿದನೆಂಬ ಆಧಿಕ್ಯ)ವೂ ವ್ಯಕ್ತವಾಗುವುದು.

ಹೀಗೆ ನಾವು ಒಂದು ಶಬ್ದವನ್ನು ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕೋಸುಗ ಎರಡೆರಡು ಸಲ ಪ್ರಯೋಗಿಸುವುದು ಉಂಟು.

**(85) ದ್ವಿರುಕ್ತಿ:– ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿಯೆನ್ನುವರು.**

ದ್ವಿರುಕ್ತಿ ಸಾಮಾನ್ಯವಾಗಿ ಉತ್ಸಾಹ, ಹೆಚ್ಚು (ಆಧಿಕ್ಯ) ಎಂಬರ್ಥದಲ್ಲಿ, ಪ್ರತಿಯೊಂದು (ವೀಪ್ಸಾ) ಎಂಬರ್ಥದಲ್ಲಿ, ಕೋಪ, ಸಂಭ್ರಮ, ಆಶ್ಚರ್ಯ, ಆಕ್ಷೇಪ, ಹರ್ಷ, ಒಪ್ಪಿಗೆ (ಸಮ್ಮತಿ), ಅವಸರ (ತ್ವರೆ), ಅನುಕ್ರಮ, ಆದರ, ಅನೇಕ ವಸ್ತುಗಳಲ್ಲಿ ಒಂದನ್ನೇ ಗುರುತಿಸಿ ಹೇಳುವಾಗ– ಹೀಗೆ ಅನೇಕ ಅರ್ಥಗಳಲ್ಲಿ ಬರುತ್ತದೆ ಎಂಬುದನ್ನು ಈ ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

ಉದಾಹರಣೆಗೆ:–

**(೧) ಉತ್ಸಾಹದಲ್ಲಿ–**

(i) ಹೌದು ಹೌದು! ನಾನೇ ಗೆದ್ದೆ.
(ii) ನಿಲ್ಲು ನಿಲ್ಲು! ನಾನೂ ಬರುತ್ತೇನೆ.
(iii) ಇಗೋ! ನಾನೂ ಬಂದೆ, ನಾನೂ ಬಂದೆ.

**(೨) ಹೆಚ್ಚು (ಆಧಿಕ್ಯ) ಎಂಬರ್ಥದಲ್ಲಿ–**

(i) ದೊಡ್ಡ ದೊಡ್ಡ ಕಾಯಿ ಬಿಟ್ಟಿದೆ.
(ii) ಹೆಚ್ಚು ಹೆಚ್ಚು ಜನ ಸೇರಬೇಕು.

**(೩) ಪ್ರತಿಯೊಂದೂ ಎಂಬರ್ಥ (ವೀಪ್ಸಾ) ದಲ್ಲಿ–**

(i) ಮನೆಮನೆಗಳನ್ನು ತಿರುಗಿದನು.

(ii) ಕೇರಿಕೇರಿಗಳಲ್ಲಿ ಅಲೆದನು.
(iii) ಊರೂರು ತಿರುಗಿ ಬೇಸತ್ತನು.

**(೪) ಕೋಪದಲ್ಲಿ–**

(i) ಎಲೆಲಾ! ಮೂರ್ಖ, ನಿಲ್ಲು ನಿಲ್ಲು! ಬಂದೆ.
(ii) ಎಲೆಲೆ! ನಿನ್ನನ್ನು ಕೊಲ್ಲದೆ ಬಿಡುವೆನೆ?
(iii) ಕಳ್ಳಾ ಕಳ್ಳಾ ನಿನ್ನನ್ನು ಸುಮ್ಮನೆ ಬಿಡುವೆನೆ?

**(೫) ಸಂಭ್ರಮದಲ್ಲಿ–**

(i) ಅಗೋ ಅಗೋ! ಎಷ್ಟು ಚೆನ್ನಾಗಿದೆ!
(ii) ಬನ್ನಿ ಬನ್ನಿ! ಕುಳಿತುಕೊಳ್ಳಿ.
(iii) ಹತ್ತಿರ ಬಾ, ಹತ್ತಿರ ಬಾ.
(iv) ಮೇಲೆ ಕೂಡಿರಿ! ಮೇಲೆ ಕೂಡಿರಿ!

**(೬) ಆಶ್ಚರ್ಯದಲ್ಲಿ–**

(i) ಅಬ್ಬಬ್ಬಾ! (ಅಬ್ಬಾ+ಅಬ್ಬಾ) ಎಂಥ ರಮ್ಯ ನೋಟವಿದು!
(ii) ಅಹಹಾ? ಈತನ ಆಟ ಆಶ್ಚರ್ಯಕರ.

**(೭) ಆಕ್ಷೇಪಾರ್ಥದಲ್ಲಿ–**

(i) ಬೇಡ ಬೇಡ ಅವನಿಗೆ ಕೊಡಬೇಡ.
(ii) ನಡೆ ನಡೆ ದೊಡ್ಡವರ ರೀತಿ ಅವನಿಗೇಕೆ?
(iii) ಎಲೆಲಾ! ನಿನ್ನಂಥವನು ಹಾಗೆ ನುಡಿಯಬಹುದೇ?

**(೮) ಹರ್ಷದಲ್ಲಿ–**

(i) ಅಹಹಾ (ಅಹಾ+ಅಹಾ) ನಾವೇ ಧನ್ಯರು.
(ii) ಅಮ್ಮಾ, ಅಮ್ಮಾ, ನಾನೇ ಈಚಿತ್ರ ಬರೆದವನು.
(iii) ನಿಲ್ಲಿ ನಿಲ್ಲಿ! ನಾನೂ ನೋಡಲು ಬರುತ್ತೇನೆ.

**(೯) ಒಪ್ಪಿಗೆ (ಸಮ್ಮತಿ) ಯ ಅರ್ಥದಲ್ಲಿ–**

(i) ಹೌದು ಹೌದು ಯೋಗ್ಯನಿಗೇ ಸಂಭಾವನೆ ದೊರಕಿದೆ.
(ii) ಆಗಲಿ ಆಗಲಿ ನೀವು ಬರುವುದು ಸಂತೋಷಕರ.
(iii) ಇರಲಿ ಇರಲಿ ಉತ್ತಮನಾದವನೇ ಇರಲಿ.

**(೧೦) ಅವಸರ (ತ್ವರೆ) ದ ಅರ್ಥದಲ್ಲಿ–**

(i) ಓಡು ಓಡು, ಬೇಗಬೇಗ ಓಡು.

(ii) ನಡೆ ನಡೆ ಹೊತ್ತಾಯಿತು.
(iii) ಬಾ ಬಾ ಬೇಗಬೇಗ ಬಾ.

**(೧೧) ಅನುಕ್ರಮದ ಅರ್ಥದಲ್ಲಿ–**

(i) ಗಿಡವು ಮೊದಮೊದಲು ಚಿಕ್ಕಚಿಕ್ಕ ಎಲೆಗಳನ್ನೂ, ಆಮೇಲೆ ದೊಡ್ಡ ದೊಡ್ಡ ಎಲೆಗಳನ್ನೂ ಬಿಡುತ್ತದೆ.
(ii) ಚಿಕ್ಕಚಿಕ್ಕ ಮಕ್ಕಳು ಮೊದಲು ಊಟ ಮಾಡಲಿ. ಆಮೇಲೆ ದೊಡ್ಡ ದೊಡ್ಡ ಮಕ್ಕಳು ಊಟ ಮಾಡಲಿ.
(iii) ದೊಡ್ಡ ದೊಡ್ಡ ವಿಚಾರಗಳನ್ನು ದೊಡ್ಡದೊಡ್ಡವರಿಂದಲೇ ಕೇಳಬೇಕು.

**(೧೨) ಆದರದ ಅರ್ಥದಲ್ಲಿ–**

(i) ಅಣ್ಣಾ ಬಾಬಾ, ಮೊದಲು ಊಟ ಮಾಡು.
(ii) ಇತ್ತ ಬನ್ನಿ, ಇತ್ತ ಬನ್ನಿ, ಮೇಲೆ ಕುಳಿತುಕೊಳ್ಳಿ.
(iii) ಭಾವ ಬಂದ, ಭಾವ ಬಂದ, ಕಾಲಿಗೆ ನೀರು ಕೊಡು, ನೀರು ಕೊಡು.

**(೧೩) ಅನೇಕ ವಸ್ತುಗಳಲ್ಲಿ ಒಂದನ್ನು ಗುರುತಿಸುವಿಕೆಯಲ್ಲಿ–**

(i) ಈ ನಾಣ್ಯದ ಚೀಲದಲ್ಲಿ ಒಂದೊಂದು ಕಾಸು ತೆಗೆದು ಒಬ್ಬಬ್ಬನಿಗೆ ಹಂಚು.
(ii) ಈ ಹಣ್ಣುಗಳಲ್ಲಿ ಚಿಕ್ಕಚಿಕ್ಕವನ್ನು ಆರಿಸಿ ಬೇರೆ ಇಡು.
(iii) ದೊಡ್ಡ ದೊಡ್ಡ ಕಲ್ಲುಗಳನ್ನೇ ಎತ್ತಿ ತಾ.

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು–**

ಮೊದಲು+ಮೊದಲು=ಮೊಟ್ಟಮೊದಲು–ಮೊತ್ತಮೊದಲು
ಕಡೆಗೆ+ಕಡೆಗೆ=ಕಟ್ಟಕಡೆಗೆ–ಕಡೆಕಡೆಗೆ
ನಡುವೆ+ನಡುವೆ=ನಟ್ಟನಡುವೆ=ನಡುನಡುವೆ
ಬಯಲು+ಬಯಲು=ಬಟ್ಟಬಯಲು
ತುದಿ+ತುದಿ=ತುತ್ತತುದಿ–ತುಟ್ಟತುದಿ
ಕೊನೆಗೆ+ಕೊನೆಗೆ=ಕೊನೆಕೊನೆಗೆ
ಮೆಲ್ಲನೆ+ಮೆಲ್ಲನೆ=ಮೆಲ್ಲಮೆಲ್ಲನೆ

**ಮೊದಲು+ಮೊದಲು** ಎಂಬಲ್ಲಿ ಮೊದಲನೆಯ '**ಮೊದಲು**' ಪದವು '**ಮೊಟ್ಟ**' ಅಥವಾ '**ಮೊತ್ತ**' ಎಂದೂ, **ಕಡೆಗೆ+ಕಡೆಗೆ** ಎಂಬಲ್ಲಿ ಮೊದಲನೆಯ '**ಕಡೆಗೆ**' ಪದವು '**ಕಟ್ಟ**' ಎಂದೂ

'**ಕಡೆ**' ಎಂದೂ ಉಳಿಯುವುದು. ಇದರ ಹಾಗೆ ಉಳಿದ ಕಡೆಗಳಲ್ಲಿ ದ್ವಿರುಕ್ತಿಯಾದಾಗ ಆಗುವ ರೂಪಗಳನ್ನು ನೋಡಿ ತಿಳಿಯಿರಿ.

ಮೇಲೆ ಹೇಳಿದ ದ್ವಿರುಕ್ತಿಯ ಹಾಗೆಯೆ ಇನ್ನೊಂದು ರೀತಿಯ ಶಬ್ದಗಳನ್ನು ನಾವು ಭಾಷೆಯಲ್ಲಿ ಪ್ರಯೋಗಿಸುವುದುಂಟು. ಅವು ದ್ವಿರುಕ್ತಿಗಳ ಹಾಗೆ ಕಂಡರೂ ದ್ವಿರುಕ್ತಿಗಳಲ್ಲ. ಅವು ಒಂದು ರೀತಿಯ ಜೋಡು ನುಡಿಗಟ್ಟುಗಳೆಂದು ಹೇಳಬೇಕು. ಅವುಗಳಲ್ಲಿ ಮೊದಲನೆಯ ಪದಕ್ಕೆ ಅರ್ಥವುಂಟು. ಎರಡನೆಯ ಪದಕ್ಕೆ ಕೆಲವು ಕಡೆ ಅರ್ಥವುಂಟು. ಆದರೆ ಕೆಲವು ಕಡೆ ಅರ್ಥವಿರುವುದಿಲ್ಲ. ಉದಾಹರಣೆಗೆ ಕೆಳಗಿನ ವಾಕ್ಯಗಳಲ್ಲಿ ದಪ್ಪಅಕ್ಷರದಲ್ಲಿರುವಂಥ ಪದಗಳನ್ನು ನೋಡಿರಿ.

(೧) ಕಾಯಿ**ಕಸರು** ಬೆಳೆಯುತ್ತೇನೆ–ಕಾಯಿ–ಕಸರು ಎಂಬಲ್ಲಿ '**ಕಸರು**' ಪದಕ್ಕೆ ಅರ್ಥವಿಲ್ಲ.
(೨) ದೇವರು**ಗೀವರ** ಕಾಟ ಇದೆಯೋ? – ಇಲ್ಲಿ '**ಗೀವರು**' ಎಂಬ ಪದಕ್ಕೆ ಅರ್ಥವಿಲ್ಲ.
(೩) ಬಟ್ಟೆ**ಬರೆ**ಗಳನ್ನು ಕೊಂಡನು–ಇಲ್ಲಿ '**ಬರೆ**' ಎಂಬ ಪದಕ್ಕೆ ಅರ್ಥವಿಲ್ಲ.
(೪) ಮಕ್ಕಳು**ಗಿಕ್ಕಳು** ಇವೆಯೋ? – ಇಲ್ಲಿ '**ಗಿಕ್ಕಳು**' ಎಂಬ ಪದಕ್ಕೆ ಅರ್ಥವಿಲ್ಲ.
(೫) ಸೊಪ್ಪು**ಸೆದೆ** ಬೆಳೆಯುತ್ತಾನೆ–ಇಲ್ಲಿ '**ಸೆದೆ**' ಎಂಬ ಪದಕ್ಕೆ ಅರ್ಥವಿಲ್ಲ.
(೬) ಮಕ್ಕಳು**ಮರಿ** ಜೋಪಾನ ಮಾಡಿದನು–ಇಲ್ಲಿ '**ಮರಿ**' ಎಂಬ ಪದಕ್ಕೆ ಅರ್ಥವುಂಟು.
(೭) ಸಾಲ**ಸೋಲ** ಮಾಡಿದ್ದಾನೆ–ಇಲ್ಲಿ '**ಸೋಲ**' ಎಂಬ ಪದಕ್ಕೆ ಅರ್ಥವಿಲ್ಲ.
(೮) ಹುಳು**ಹುಪ್ಪಡಿ**ಗಳಿದ್ದಾವು? – ಇಲ್ಲಿ '**ಹುಪ್ಪಡಿ**' ಎಂಬ ಪದಕ್ಕೆ ಅರ್ಥವಿಲ್ಲ.

ಈ ಮೇಲೆ ಹೇಳಿದ ಪದಗಳು ಮಾತುಗಳಲ್ಲಿ, ಗ್ರಂಥಗಳಲ್ಲಿ ಕೆಲವರಿಂದ ಪ್ರಯೋಗಿಸಲ್ಪಡುತ್ತವೆ. ಇವು ಒಂದೇ ರೀತಿಯ ಎರಡು ಶಬ್ದಗಳ ಪ್ರಯೋಗಗಳಲ್ಲ. ಬೇರೆಬೇರೆ ರೀತಿಯ ಎರಡು ಪದಗಳು. ಎರಡನೆಯ ಶಬ್ದಕ್ಕೆ ವಾಚಾರ್ಥವಿಲ್ಲದಿದ್ದರೂ ಮೊದಲನೆಯ ಶಬ್ದದ ಅರ್ಥಕ್ಕೆ ಪುಷ್ಟಿಯನ್ನು ಕೊಡಲು ಉಪಯೋಗಿಸುವ ಪದಗಳಾಗಿವೆ.

* * * * *

**ಅಧ್ಯಾಯ ೭**

# ಕೃದಂತ, ತದ್ಧಿತಾಂತ ಪ್ರಕರಣ

## I – ಕೃದಂತಪ್ರಕರಣ (ಕೃನ್ನಾಮಪ್ರಕರಣ)

**ನಾಮಪ್ರಕೃತಿ**

**ಸಹಜನಾಮಪ್ರಕೃತಿ** **ಸಾಧಿತನಾಮಪ್ರಕೃತಿ**

ಕೃದಂತ(ಕೃನ್ನಾಮ)ಪ್ರಕೃತಿ    ತದ್ಧಿತಾಂತಪ್ರಕೃತಿ    ಸಮಾಸಗಳು

ಹಿಂದೆ ನಾಮಪದಪ್ರಕರಣದಲ್ಲಿ ನಾಮಪ್ರಕೃತಿಗಳು ನಾಲ್ಕು ಪ್ರಕಾರಗಳೆಂದು ತಿಳಿಸಿದೆ. (೧) ಸಹಜನಾಮಪ್ರಕೃತಿಗಳು (೨) ಕೃದಂತಗಳು (೩) ತದ್ಧಿತಾಂತಗಳು (೪) ಸಮಾಸಗಳು – ಎಂದೇ ಆ ನಾಲ್ಕುವಿಧವಾದ ನಾಮಪ್ರಕೃತಿಗಳು.

ಸಹಜನಾಮಪ್ರಕೃತಿಗಳೆಂದರೇನು? ಅವು ನಾಮವಿಭಕ್ತಿಪ್ರತ್ಯಯ ಸೇರಿ, ನಾಮಪದಗಳಾಗುವಿಕೆ, ಅವುಗಳ ಲಿಂಗ, ವಚನಾದಿಗಳ ಬಗೆಗೂ, ಸಮಾಸವೆಂದರೇನು? ಅವುಗಳ ಪ್ರಕಾರಗಳ ಬಗೆಗೂ ಹಿಂದಿನ ಪ್ರಕರಣಗಳಲ್ಲಿ ತಿಳಿದಿದ್ದೀರಿ. ಈಗ ಕೃದಂತ, ತದ್ಧಿತಾಂತಗಳೆಂದರೇನೆಂಬ ಬಗೆಗೆ ತಿಳಿಯಿರಿ.

ಮೊದಲು 'ಕೃದಂತಪ್ರಕರಣ'ದಲ್ಲಿ ಕೃದಂತಗಳ ಬಗೆಗೂ, ಅನಂತರ ತದ್ಧಿತಾಂತ ಪ್ರಕರಣದಲ್ಲಿ ತದ್ಧಿತಾಂತಗಳ ಬಗೆಗೂ ವಿವರಗಳನ್ನು ನೋಡಿರಿ.

| | <u>ಧಾತು</u> | – | <u>ಕ್ರಿಯಾಪದ</u> | – | <u>ಕೃದಂತ ನಾಮಪ್ರಕೃತಿ</u> | – | <u>ಕೃದಂತ ನಾಮಪದ</u> |
|---|---|---|---|---|---|---|---|
| (೧) | ಮಾಡು | – | ಮಾಡಿದನು | – | ಮಾಡಿದ | – | ಮಾಡಿದವನು, ಮಾಡಿದವನನ್ನು, ಮಾಡಿದವನಿಂದ –ಇತ್ಯಾದಿ |
| (೨) | ಹೋಗು | – | ಹೋಗುವನು | – | ಹೋಗುವ | – | ಹೋಗುವವನು, ಹೋಗುವವನನ್ನು, ಹೋಗುವವನಿಂದ –ಇತ್ಯಾದಿ |
| (೩) | ತಿನ್ನು | – | ತಿನ್ನುತ್ತಾನೆ | – | ತಿನ್ನುವ | – | ತಿನ್ನುವವನು, ತಿನ್ನುವವನನ್ನು, ತಿನ್ನುವವನಿಗೆ, ತಿನ್ನುವವನಲ್ಲಿ –ಇತ್ಯಾದಿ |
| (೪) | ಬರೆ | – | ಬರೆಯುವನು | – | ಬರೆಯುವ | – | ಬರೆಯುವವನು, ಬರೆಯುವವನನ್ನು –ಇತ್ಯಾದಿ |

ಮೇಲಿನ ನಾಲ್ಕು ಉದಾಹರಣೆಗಳಲ್ಲಿ–ಮಾಡು, ಹೋಗು, ತಿನ್ನು, ಬರೆ–ಈ ನಾಲ್ಕು ಧಾತುಗಳು–ಮಾಡಿದನು, ಹೋಗುವನು, ತಿನ್ನುತ್ತಾನೆ, ಬರೆಯುವನು ಈ ನಾಲ್ಕು ರೀತಿಯ ಕ್ರಿಯಾಪದಗಳಾಗಿವೆ. ಇವು ಕ್ರಿಯಾಪದಗಳಾಗುವ ರೀತಿಯನ್ನು ಹಿಂದಿನ ಕ್ರಿಯಾಪದ ಪ್ರಕರಣದಲ್ಲಿ ತಿಳಿದಿದ್ದೀರಿ. ಅವುಗಳ ಮುಂದಿರುವ ಮಾಡಿದ, ಹೋಗುವ, ತಿನ್ನುವ, ಬರೆಯುವ– ಇವು ಕ್ರಮವಾಗಿ – ಮಾಡು+ದ+ಅ=ಮಾಡಿದ, ಹೋಗು+ವ+ಅ=ಹೋಗುವ, ತಿನ್ನು+ವ+ಅ=ತಿನ್ನುವ, ಬರೆ+ಉವ+ಅ=ಬರೆಯುವ – ಹೀಗಾಗಿವೆ. ಇವು ಎಲ್ಲಾ ಕಡೆಗೂ ಕೊನೆಯಲ್ಲಿ 'ಅ' ಎಂಬ ಪ್ರತ್ಯಯವನ್ನೂ ಮಧ್ಯದಲ್ಲಿ ದ, ವ, ಉವ ಇತ್ಯಾದಿ ಪ್ರತ್ಯಯಗಳನ್ನೂ ಹೊಂದಿವೆ. ಧಾತುಗಳು ಹೀಗೆ – ಮಾಡಿದ, ಹೋಗುವ, ತಿನ್ನುವ, ಬರೆಯುವ – ಇತ್ಯಾದಿ ರೂಪ ಪಡೆದ ಮೇಲೆ ಧಾತುವಿನಿಂದ ಹುಟ್ಟಿದ ನಾಮಪ್ರಕೃತಿಗಳೆನಿಸಿದವು. ಅಥವಾ ಕೃದಂತನಾಮ ಪ್ರಕೃತಿಗಳೆನಿಸಿದವು. ಇನ್ನು ಇವುಗಳ ಮೇಲೆ–ಉ, ಅನ್ನು, ಇಂದ, ಗೆ, ಇಗೆ, ಕ್ಕೆ, ಅಕ್ಕೆ, ದೆಸೆಯಿಂದ, ಅ, ಅಲ್ಲಿ – ಇತ್ಯಾದಿ ಸಪ್ತ ವಿಧವಾದ ನಾಮವಿಭಕ್ತಿಪ್ರತ್ಯಯಗಳೂ

ಸೇರಿ ಕೃದಂತನಾಮಪದಗಳೆನಿಸುತ್ತವೆ. ಇಂಥವನ್ನೇ ನಾವು ಸಾಧಿತ ನಾಮಗಳು ಎನ್ನುತ್ತೇವೆ. ಮೇಲಿನ ಉದಾಹರಣೆಗಳಲ್ಲಿ ಕೊನೆಯಲ್ಲಿ ಬಂದಿರುವ 'ಅ' ಎಂಬುದೇ ಕೃತ್‌ಪ್ರತ್ಯಯ. ಇಂಥ ಕೃತ್‌ಪ್ರತ್ಯಯವನ್ನು ಅಂತದಲ್ಲಿ ಉಳ್ಳದ್ದೇ ಕೃದಂತ. ಮಧ್ಯದಲ್ಲಿ ಬಂದಿರುವ 'ದ', 'ವ', 'ಉವ'ಗಳು ಕಾಲವನ್ನು ಸೂಚಿಸುವ ಪ್ರತ್ಯಯಗಳು. ಇವಕ್ಕೆ ಕಾಲಸೂಚಕ ಪ್ರತ್ಯಯಗಳೆನ್ನುವರು. ಹಾಗಾದರೆ ಕೃದಂತವೆಂದರೇನು? ಎಂಬ ಬಗೆಗೆ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(86) ಕೃದಂತ:– ಧಾತುಗಳಿಗೆ ಕೃತ್‌ಪ್ರತ್ಯಯಗಳು ಸೇರಿ ಕೃದಂತಗಳೆನಿಸುವುವು. ಇವಕ್ಕೆ ಕೃನ್ನಾಮಗಳೆಂದೂ ಹೆಸರು.**

**ಕೃದಂತಗಳು – ಕೃದಂತನಾಮ (ಕೃನ್ನಾಮ), ಕೃದಂತ ಭಾವನಾಮ, ಕೃದಂತಾವ್ಯಯ ಗಳೆಂದು ಮೂರು ವಿಧ.**

ಉದಾಹರಣೆಗೆ:–

| ಕೃದಂತನಾಮ | ಕೃದಂತಭಾವನಾಮ | ಕೃದಂತಾವ್ಯಯ |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಹೋಗದ | ಹೋಗುವಿಕೆ | ಹೋಗಲು |

## (೧) ಕೃದಂತ ನಾಮಗಳು

**(87) ಕೃದಂತನಾಮಗಳು:– ಧಾತುಗಳಿಗೆ ಕರ್ತೃ ಮೊದಲಾದ ಅರ್ಥಗಳಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್‌ಪ್ರತ್ಯಯವು ಬರುವುದು. ಆಗ ಧಾತುವಿಗೂ ಕೃತ್‌ಪ್ರತ್ಯಯಕ್ಕೂ ಮಧ್ಯದಲ್ಲಿ ವರ್ತಮಾನ, ಭವಿಷ್ಯತ್‌ಕಾಲಗಳಲ್ಲಿ 'ವ' 'ಉವ' ಎಂಬ ಕಾಲಸೂಚಕ ಪ್ರತ್ಯಯಗಳೂ, ಭೂತಕಾಲದಲ್ಲಿ 'ದ' ಎಂಬ ಕಾಲಸೂಚಕ ಪ್ರತ್ಯಯವೂ, ನಿಷೇಧಾರ್ಥದಲ್ಲಿ 'ಅದ' ಎಂಬುದೂ ಆಗಮಗಳಾಗುತ್ತವೆ. ಇವನ್ನೇ ಕೃದಂತನಾಮಗಳೆನ್ನುವರು.**

ಇವು ನಾಮಪ್ರಕೃತಿಗಳೆನಿಸಿದ್ದರಿಂದ ಇವುಗಳ ಮೇಲೆ ನಾಮವಿಭಕ್ತಿಪ್ರತ್ಯಯಗಳು ಸೇರಿ ನಾಮಪದಗಳಾಗುವುವು.

ಉದಾಹರಣೆಗೆ:–

(i) **ವರ್ತಮಾನ ಕೃದಂತಕ್ಕೆ–**

ಮಾಡು + ವ + ಅ = ಮಾಡುವ
ತಿನ್ನು + ವ + ಅ = ತಿನ್ನುವ
ಬರೆ + ಉವ + ಅ = ಬರೆಯುವ

ಇದರಂತೆ–ಹೋಗುವ, ಬರುವ, ತಿನ್ನುವ, ನೋಡುವ, ಓಡುವ, ನಡೆಯುವ, ಕಾಣುವ, ಕೊಡುವ[77].

(ii) **ಭೂತ ಕೃದಂತಕ್ಕೆ–**

ಮಾಡು + ದ + ಅ = ಮಾಡಿದ
ತಿನ್ನು + ದ + ಅ = ತಿಂದ
ಹೋಗು + ದ + ಅ = ಹೋದ

ಇದರಂತೆ ಬರೆದ, ನೋಡಿದ, ನಡೆದ, ಕಂಡ, ಕರೆದ–ಇತ್ಯಾದಿ.

(iii) **ನಿಷೇಧ ಕೃದಂತಕ್ಕೆ–**

ಮಾಡು + ಅದ + ಅ = ಮಾಡದ
ತಿನ್ನು + ಅದ + ಅ = ತಿನ್ನದ

ಇದರಂತೆ ಹೋಗದ, ಬರದ, ನೋಡದ, ನುಡಿಯದ, ಬರೆಯದ–ಇತ್ಯಾದಿ.

ಮೇಲೆ ಹೇಳಿದ ವರ್ತಮಾನ, ಭವಿಷ್ಯತ್, ಭೂತ, ನಿಷೇಧಾರ್ಥ ಕೃದಂತನಾಮಗಳೆಲ್ಲ ಈಗ ನಾಮವಿಭಕ್ತಿಪ್ರತ್ಯಯ ಹತ್ತಲು ಸಿದ್ಧವಾದವು. ಇವುಗಳ ಮೇಲೆ ನಾಮವಿಭಕ್ತಿಪ್ರತ್ಯಯಗಳು ಸೇರುವಾಗ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿ ಆಗುವ ವ್ಯಾಕರಣ ವಿಶೇಷಗಳನ್ನು ಈ ಕೆಳಗೆ ನೋಡಿರಿ.

(i) **ಪುಲ್ಲಿಂಗದಲ್ಲಿ–**

| **ಕೃದಂತ** | | | | | | | | **ನಾಮಪದಗಳು** |
|---|---|---|---|---|---|---|---|---|
| **ಮಾಡುವ** | – | ಮಾಡುವ | + | ಅವನು | + | ಉ | = | ಮಾಡುವವನು |
| | | ಮಾಡುವ | + | ಅವರು | + | ಉ | = | ಮಾಡುವವರು |
| | | ಮಾಡುವ | + | ಅವನು | + | ಅನ್ನು | = | ಮಾಡುವವನನ್ನು |
| | | ಮಾಡಿದ | + | ಅವನು | + | ಉ | = | ಮಾಡಿದವನು (ಏ.ವ.) |
| | | ಮಾಡಿದ | + | ಅವರು | + | ಉ | = | ಮಾಡಿದವರು (ಬ.ವ.) |
| | | ಮಾಡಿದ | + | ಅವರು | + | ಇಂದ | = | ಮಾಡಿದವರಿಂದ (ಬ.ವ.) |
| | | ಮಾಡದ | + | ಅವನು | + | ಉ | = | ಮಾಡದವನು (ಏ.ವ.) |
| | | ಮಾಡದ | + | ಅವನು | + | ಅಲ್ಲಿ | = | ಮಾಡದವನಲ್ಲಿ (ಏ.ವ.) |

[77] ವರ್ತಮಾನ ಮತ್ತು ಭವಿಷ್ಯತ್ ಕೃದಂತಗಳು ಒಂದೇ ರೂಪವಾಗಿರುತ್ತವೆ. ಇವೆರಡು ಕೃದಂತಗಳಲ್ಲೂ ಕಾಲಸೂಚಕ ಪ್ರತ್ಯಯ ಒಂದೇ ತೆರನಾಗಿರುತ್ತದೆ. ಕೆಲವರು ವರ್ತಮಾನ ಕೃದಂತಗಳೇ ಇರುವುದಿಲ್ಲ ಎಂದೂ ಹೇಳುವುದುಂಟು.

ಮಾಡದ + ಅವರು + ಅಲ್ಲಿ = ಮಾಡದವರಲ್ಲಿ (ಬ.ವ.)

(ii) **ಸ್ತ್ರೀಲಿಂಗದಲ್ಲಿ–**

**ಕೃದಂತ** **ನಾಮಪದಗಳು**

**ಬರೆದ** – ಬರೆದ + ಅವಳು + ಉ = ಬರೆದವಳು (ಏ.ವ.)
ಬರೆದ + ಅವಳು + ಅನ್ನು = ಬರೆದವಳನ್ನು (ಏ.ವ.)
ಬರೆದ + ಅವರು + ಇಂದ = ಬರೆದವರಿಂದ (ಬ.ವ.)
ಬರೆದ + ಅವಳು + ಇಗೆ = ಬರೆದವಳಿಗೆ (ಏ.ವ.)
ಬರೆದ + ಅವರು + ಇಗೆ = ಬರೆದವರಿಗೆ (ಬ.ವ.)
ಬರೆದ + ಅವಳು + ಅಲ್ಲಿ = ಬರೆದವಳಲ್ಲಿ (ಏ.ವ.)
ಬರೆದ + ಅವಳು + ಏ = ಬರೆದವಳೇ (ಏ.ವ.)
ತಿನ್ನದ + ಅವಳು + ಉ = ತಿನ್ನದವಳು
ತಿನ್ನದ + ಅವರು + ಅನ್ನು = ತಿನ್ನದವರನ್ನು
ತಿನ್ನದ + ಅವಳು + ಇಂದ = ತಿನ್ನದವಳಿಂದ

(iii) **ನಪುಂಸಕಲಿಂಗದಲ್ಲಿ–**

**ಕೃದಂತ** **ನಾಮಪದಗಳು**

**ಹೋಗುವ** – ಹೋಗುವ + ಉದು + ಉ = ಹೋಗುವುದು
ಹೋಗುವ + ಉದು + ಅನ್ನು = ಹೋಗುವುದನ್ನು
ಹೋಗುವ + ಉವು + ಅನ್ನು = ಹೋಗುವುವನ್ನು
ಹೋಗುವ + ಉದು + ಅರು + ಇಂದ = ಹೋಗುವುದರಿಂದ

**ಕೃದಂತ** **ನಾಮಪದಗಳು**

**ಹೋಗುವ** – ಹೋಗುವ + ಉದು + ಅಕ್ಕೆ = ಹೋಗುವುದಕ್ಕೆ
ಹೋಗುವ + ಉದು + ಅರು + ಅಲ್ಲಿ = ಹೋಗುವುದರಲ್ಲಿ
ಹೋಗುವ + ಉವು (ಅವು) + ಗಳು + ಅಲ್ಲಿ = ಹೋಗುವುವುಗಳಲ್ಲಿ / ಹೋಗುವವುಗಳಲ್ಲಿ
ಹೋದ + ಉದು + ಅನ್ನು = ಹೋದುದನ್ನು
ಹೋದ + ಉವು + ಗಳು + ಇಂದ = ಹೋದುವುಗಳಿಂದ

–ಇತ್ಯಾದಿ

ಮೇಲೆ ಹೇಳಿದ ಉದಾಹರಣೆಗಳನ್ನೆಲ್ಲ ನೋಡಿದರೆ ಕೃದಂತಗಳ ಮೇಲೆ ನಾಮವಿಭಕ್ತಿಪ್ರತ್ಯಯಗಳು ಸೇರುವಾಗ ಕೃದಂತಕ್ಕೂ, ನಾಮವಿಭಕ್ತಿಪ್ರತ್ಯಯಕ್ಕೂ ಮಧ್ಯದಲ್ಲಿ **ಪುಲ್ಲಿಂಗ ಏಕವಚನದಲ್ಲಿ 'ಅವನು' ಎಂಬುದೂ, ಬಹುವಚನದಲ್ಲಿ 'ಅವರು' ಎಂಬ ಸರ್ವನಾಮಗಳೂ ಆಗಮಗಳಾಗಿ ಬರುತ್ತವೆ.**

**ಸ್ತ್ರೀಲಿಂಗದ ಏಕವಚನದಲ್ಲಿ 'ಅವಳು' ಬಹುವಚನದಲ್ಲಿ 'ಅವರು' ಎಂಬ ಸರ್ವನಾಮ ಬರುತ್ತವೆ.**

**ನಪುಂಸಕಲಿಂಗದ ಏಕವಚನದಲ್ಲಿ ಉದು (ಅದು) ಮತ್ತು ಬಹುವಚನದಲ್ಲಿ ಉವು (ಅವು) ಎಂಬ ಸರ್ವನಾಮಗಳು ಬರುತ್ತವೆ**[78].

**(೧) ಇದುವರೆಗೆ ತಿಳಿಸಿದ ಕೃದಂತನಾಮಗಳು ನಾಮಪದಗಳನ್ನು ವಿಶೇಷಿಸುತ್ತವೆ.**

(i) **ವರ್ತಮಾನಭವಿಷ್ಯತ್ ಕೃದಂತಗಳು ನಾಮಪದಗಳನ್ನು ವಿಶೇಷಿಸುವುದಕ್ಕೆ–**

ಮಾಡುವ ಕೆಲಸ
ಹಾಡುವ ಪದ
ನೋಡುವ ಕಾರ್ಯ
ತಿನ್ನುವ ಪದಾರ್ಥ – ಇತ್ಯಾದಿ.

(ii) **ಭೂತಕೃದಂತಗಳು ನಾಮಪದಗಳನ್ನು ವಿಶೇಷಿಸುವುದಕ್ಕೆ–**

ಮಾಡಿದ ಕೆಲಸ
ಹಾಡಿದ ಪದ
ನೋಡಿದ ಕಾರ್ಯ
ತಿಂದ ಪದಾರ್ಥ – ಇತ್ಯಾದಿ.

(iii) **ನಿಷೇಧಕೃದಂತಗಳು ನಾಮಪದಗಳನ್ನು ವಿಶೇಷಿಸುವುದಕ್ಕೆ–**

ಮಾಡದ ಕೆಲಸ
ಹಾಡದ ಪದ
ನೋಡದ ಕಾರ್ಯ

---

[78]ನಪುಂಸಕಲಿಂಗದಲ್ಲಿ–ಹೋಗುವುದರಿಂದ–ಇತ್ಯಾದಿಗಳಿಗೆ ಪ್ರತಿಯಾಗಿ ಹೋಗುವಂತಹುದರಿಂದ, ನಡೆಯುವಂಥಾದ್ದರಿಂದ, ತಿನ್ನುವವುಗಳಿಂದ ಎಂಬುದಕ್ಕೆ ತಿನ್ನುವಂತಹವುಗಳಿಂದ, ತಿನ್ನುವಂಥವುಗಳಿಂದ– ಇತ್ಯಾದಿಯಾಗಿ ಹೊಸಗನ್ನಡದಲ್ಲಿ ಉಪಯೋಗಿಸುವುದುಂಟು. ನಡೆಯುವುದನ್ನು, ನಡೆಯುವದನ್ನು–ಹೀಗೆ ಎರಡು ರೂಪಗಳ ಪ್ರಯೋಗವೂ ರೂಢಿಯಲ್ಲುಂಟು. ಏಕವಚನದಲ್ಲಿ 'ಅವನು' ಎಂಬುದೂ, ಬಹುವಚನದಲ್ಲಿ 'ಅವರು' ಎಂಬ ಸರ್ವನಾಮಗಳೂ ಆಗಮಗಳಾಗಿ ಬರುತ್ತವೆ.

ತಿನ್ನದ ಪದಾರ್ಥ – ಇತ್ಯಾದಿ.

## (೨) ಕೃದಂತಭಾವನಾಮಗಳು (ಭಾವಕೃದಂತ)

(i) ಆತನ **ಓಟ** ಚೆನ್ನಾಗಿತ್ತು
(ii) ಅದರ **ನೆನಪು** ಇಲ್ಲ
(iii) ಗಡಿಗೆಯ **ಮಾಟ** ಸೊಗಸು
(iv) ಇದರ **ಕೊರೆತ** ಹಸನಾಗಿದೆ

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ **ಓಟ, ಮಾಟ, ನೆನಪು, ಕೊರೆತ**–ಈ ಶಬ್ದಗಳನ್ನು ಗಮನಿಸಿರಿ.

ಓಡುವ ರೀತಿಯೇ ಓಟ – **ಓಡು** + **ಟ.**
ಮಾಡಿರುವ ರೀತಿಯೇ ಮಾಟ – **ಮಾಡು** + **ಟ.**
ನೆನೆಯುವ ರೀತಿಯೇ ನೆನಪು – **ನೆನೆ** + **ಅಪು.**
ಕೊರೆದಿರುವಿಕೆಯೇ ಕೊರೆತ – **ಕೊರೆ** +**ತ.**

ಇವೆಲ್ಲ ಕ್ರಿಯೆಯ ಭಾವವನ್ನು ತಿಳಿಸುತ್ತದೆ. ಆದುದರಿಂದ ಇವನ್ನು ಕೃದಂತ ಭಾವನಾಮಗಳು ಅಥವಾ ಭಾವಕೃದಂತಗಳು ಎನ್ನುತ್ತಾರೆ.

**(88) ಕೃದಂತಭಾವನಾಮಗಳು–ಧಾತುಗಳ ಮೇಲೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿ ಕೃದಂತಭಾವನಾಮಗಳೆನಿಸುವುವು.**

ಉದಾಹರಣೆಗೆ:

| **ಧಾತು** | **+** | **ಭಾವಾರ್ಥದಲ್ಲಿ ಕೃತ್ಪ್ರತ್ಯಯ** | **=** | **ಕೃದಂತ ಭಾವನಾಮ** | **–** | **ಇದರಂತೆ ಇರುವ ಇತರ ರೂಪಗಳು** |
|---|---|---|---|---|---|---|
| ಮಾಡು | + | ವುದು[79] | = | ಮಾಡುವುದು | – | ನೋಡುವುದು, ತಿನ್ನುವುದು |

---

[79] ಸಾಮಾನ್ಯವಾಗಿ ಎಲ್ಲ ಧಾತುಗಳ ಮೇಲೂ ಭಾವಾರ್ಥದಲ್ಲಿ ವುದು, ವಿಕೆ – ಎಂಬ ಪ್ರತ್ಯಯಗಳು ಬರುತ್ತವೆ. 'ವಿಕೆ' ಪ್ರತ್ಯಯಕ್ಕೆ ಪ್ರತಿಯಾಗಿ ಕೆಲವರು 'ಇಕೆ' ಬರುತ್ತದೆಂದು ಹೇಳಿ ನೋಡುವಿಕೆ (ನೋಡು+ವ್+ಇಕೆ=ನೋಡುವಿಕೆ) ಇತ್ಯಾದಿ ರೂಪಗಳು ಆಗುತ್ತವೆನ್ನುತ್ತಾರೆ.. ಆದರೆ ಇವೆರಡೂ ಪ್ರತ್ಯಯಗಳು ಬೇರೆಬೇರೆಯೇ ಆಗಿವೆ.

| | | | | | | |
|---|---|---|---|---|---|---|
| ತಿನ್ನು | + | ಇಕೆ | = | ತಿನ್ನುವಿಕೆ | – | ನೋಡುವಿಕೆ, ಬರೆಯುವಿಕೆ, ಕೊರೆಯುವಿಕೆ |
| ಅಂಜು | + | ಇಕೆ | = | ಅಂಜಿಕೆ | – | ನಂಬಿಕೆ, ಹೊಗಳಿಕೆ, ತೆಗಳಿಕೆ, ಆಳಿಕೆ, ನಾಚಿಕೆ, ಬಳಲಿಕೆ, ಕಲಿಕೆ |
| ಉಡು | + | ಇಗೆ | = | ಉಡಿಗೆ | – | ತೊಡಿಗೆ, ಅಡಿಗೆ, ಮುತ್ತಿಗೆ, ಹಾಸಿಗೆ, ಏಳಿಗೆ |
| ಉಡು | + | ಗೆ | = | ಉಡುಗೆ | – | ತೊಡುಗೆ, ನಂಬುಗೆ, ಹೊಲಿಗೆ, ಏಳ್ಗೆ |
| ಬರು | + | ಅವು | = | ಬರವು | – | ಸೆಳವು, ಮರವು, ಒಲವು, ಕಳವು, ತೆರವು |
| ಸಾ | + | ವು | = | ಸಾವು | – | ನೋವು, ಮೇವು, ದಣಿವು, ಅರಿವು |
| ಕೊರೆ | + | ತ | = | ಕೊರೆತ | – | ಸೆಳೆತ, ಕಟೆತ, ಇರಿತ, ತಿವಿತ, ಕುಣಿತ, ಒಗೆತ |
| ಓಡು | + | ಟ | = | ಓಟ | – | ಮಾಟ, ಕೂಟ, ನೋಟ, ಆಟ, ಕಾಟ |
| ನಡೆ | + | ವಳಿ | = | ನಡೆವಳಿ | – | ನುಡಿವಳಿ, ಸಲುವಳಿ, ಹಿಡಿವಳಿ, ಕೂಡುವಳಿ, ಮುಗಿವಳಿ |
| ಕಾ | + | ಪು | = | ಕಾಪು | – | ಮೇಪು, ತೀರ್ಪು, ತಿಳಿಪು, ಹೊಳೆಪು, ನೆನೆಪು, |
| ಹೊಳೆ | + | ಅಪು | = | ಹೊಳಪು | – | ನೆನಪು |

| | | | | | | |
|---|---|---|---|---|---|---|
| ಮುಗ್ಗು | + | ಅಲು | = | ಮುಗ್ಗಲು | – | ಒಣಗಲು, ಜಾರಲು, ಬಿಕ್ಕಲು, ಒಕ್ಕಲು |
| ನಗು | + | ಎ | = | ನಗೆ | – | ಹೊರೆ |
| ಬೆರೆ | + | ಅಕೆ | = | ಬೆರಕೆ | – | ಮೊಳಕೆ |
| ಬೆಳೆ | + | ವಳಿಕೆ | = | ಬೆಳೆವಳಿಕೆ | – | ತಿಳಿವಳಿಕೆ, ನಡೆವಳಿಕೆ |
| ಮೆರೆ | + | ವಣಿಗೆ | = | ಮೆರೆವಣಿಗೆ | – | ಬೆಳವಣಿಗೆ, ಬರೆವಣಿಗೆ |
| ಅಳೆ | + | ಅತೆ | = | ಅಳತೆ | – | ನಡತೆ |
| ಮುಳಿ | + | ಸು | = | ಮುಳಿಸು | – | ತೊಳೆಸು, ಮುನಿಸು |
| ಮುರಿ | + | ಅಕು | = | ಮುರಕು | – | ಹರಕು |

| | | | | | | | |
|---|---|---|---|---|---|---|---|
| ನಡುಗು | + | ಉಕ | = | ನಡುಕ | – | ಮುರುಕ |
| ಒಪ್ಪು | + | ಇತ | = | ಒಪ್ಪಿತ | – | ತಪ್ಪಿತ |

**(೧) ಕೆಲವು ಧಾತುಗಳು ಅಲ್ಪಸ್ವಲ್ಪ ವ್ಯತ್ಯಾಸದಿಂದ ಭಾವಕೃದಂತ (ಭಾವನಾಮ) ಗಳಾಗುವುವು.**

| ಧಾತು | ಭಾವಕೃದಂತ | ನಾಮಪದ |
|---|---|---|
| ಕಿಡು | ಕೇಡು | ಕೇಡನ್ನು, ಕೇಡಿನಿಂದ. |
| ಬಿಡು | ಬೀಡು | ಬೀಡನ್ನು, ಬೀಡಿನಿಂದ, ಬೀಡಿಗೆ. |
| ಪಡು | ಪಾಡು | ಪಾಡನ್ನು, ಪಾಡಿನಿಂದ, ಪಾಡಿಗೆ. |

**(೨) ಕೆಲವು ಧಾತುಗಳು ಇದ್ದ ರೂಪದಲ್ಲಿಯೇ ಭಾವಕೃದಂತ (ಕೃದಂತ ಭಾವನಾಮ) ಗಳಾಗುವುವು.**

| ಧಾತು | ಭಾವಕೃದಂತ | ನಾಮಪದ |
|---|---|---|
| ನಡೆ | ನಡೆ | ನಡೆಯನ್ನು, ನಡೆಯಿಂದ |
| ನುಡಿ | ನುಡಿ | ನುಡಿಯು, ನುಡಿಯನ್ನು, ನುಡಿಯಿಂದ, ನುಡಿಗೆ–ಇತ್ಯಾದಿ |
| ಓದು | ಓದು | ಓದು, ಓದನ್ನು, ಓದಿನಿಂದ, ಓದಿನಲ್ಲಿ–ಇತ್ಯಾದಿ |
| ಕಟ್ಟು | ಕಟ್ಟು | ಕಟ್ಟು, ಕಟ್ಟನ್ನು, ಕಟ್ಟಿನಿಂದ, ಕಟ್ಟಿಗೆ, ಕಟ್ಟಿನಲ್ಲಿ |
| ಅಂಟು | ಅಂಟು | ಅಂಟನ್ನು, ಅಂಟಿನ ದೆಸೆಯಿಂದ, ಅಂಟಿನಲ್ಲಿ |
| ಹಿಡಿ | ಹಿಡಿ | ಹಿಡಿಯನ್ನು, ಹಿಡಿಯಿಂದ |
| ಉರಿ | ಉರಿ | ಉರಿಯನ್ನು, ಉರಿಯಿಂದ |
| ಹೇರು | ಹೇರು | ಹೇರನ್ನು, ಹೇರಿನಿಂದ, ಹೇರಿನಲ್ಲಿ |
| ಉಗುಳು | ಉಗುಳು | ಉಗುಳನ್ನು, ಉಗುಳಿನ, ಉಗುಳಿನಲ್ಲಿ |
| ಹುಟ್ಟು | ಹುಟ್ಟು | ಹುಟ್ಟನ್ನು, ಹುಟ್ಟಿನ, ಹುಟ್ಟಿನಲ್ಲಿ |
| ಚಿಗುರು | ಚಿಗುರು | ಚಿಗುರನ್ನು, ಚಿಗುರಿನಲ್ಲಿ |
| ಬೆಳೆ | ಬೆಳೆ | ಬೆಳೆಯನ್ನು, ಬೆಳೆಯಲ್ಲಿ |
| ಸವಿ | ಸವಿ | ಸವಿಯನ್ನು, ಸವಿಯಲ್ಲಿ |
| ಗುದ್ದು | ಗುದ್ದು | ಗುದ್ದನ್ನು, ಗುದ್ದಿನಲ್ಲಿ |
| ಬದುಕು | ಬದುಕು | ಬದುಕನ್ನು, ಬದುಕಿನಲ್ಲಿ |

**(೩) ಹಳಗನ್ನಡದ ಕೆಲವು ಕೃದಂತ ಭಾವನಾಮಗಳು ಹೊಸಗನ್ನಡದಲ್ಲಿ ರೂಪಾಂತರ ಹೊಂದುತ್ತವೆ.**

ಏಳ್ಗೆ–ಏಳಿಗೆ, ಸಲ್ಗೆ–ಸಲಿಗೆ, ಕಾಣ್ಕೆ–ಕಾಣಿಕೆ, ಒಲ್ಮೆ–ಒಲುಮೆ, ಪೂಣ್ಕೆ–ಪೂಣಿಕೆ – ಇತ್ಯಾದಿ.

## (೩) ಕೃದಾಂತಾವ್ಯಯಗಳು (ಅವ್ಯಯಕೃದಂತ)

**ಧಾತುವಿನಿಂದ ಹುಟ್ಟಿ ಅವ್ಯಯದ ಗುಣವನ್ನು ಪಡೆದಂಥ ಶಬ್ದ ರೂಪಗಳೇ ಕೃದಂತಾವ್ಯಯಗಳು ಅಥವಾ ಅವ್ಯಯಕೃದಂತಗಳು.** ಈ ಕೆಳಗಿನ ಕೆಲವು ಉದಾಹರಣೆ ನೋಡಿರಿ.

(೧) ರಾಮನು **ಉಣ್ಣದೆ** ಮಲಗಿದನು.

(೨) ಮಳೆ **ಬರಲು** ಕರೆ ತುಂಬಿತು.

(೩) ಅವನು **ಬರುತ್ತ** ತಿಂದನು.

(೪) ಅದನ್ನು **ಬರೆದು** ಕಳುಹಿಸಿದನು.

(೫) ಅಲ್ಲಿಗೆ **ಹೋಗಲಿಕ್ಕೆ** ತಡವಾಯಿತು.

ಮೇಲಿನ ವಾಕ್ಯಗಳಲ್ಲಿ ದಪ್ಪಕ್ಷರ ಶಬ್ದಗಳಾದ **ಉಣ್ಣದೆ, ಬರಲು, ಬರುತ್ತ, ಬರೆದು, ಹೋಗಲಿಕ್ಕೆ**–ಮುಂತಾದವುಗಳು **ಉಣ್ಣು+ಅದೆ, ಬರು+ಅಲು, ಬರು+ಉತ್ತ, ಬರೆ+ದು, ಹೋಗು+ಅಲಿಕ್ಕೆ**–ಹೀಗೆ ಧಾತುಗಳ ಮೇಲೆ–**ಅದೆ, ಅಲು, ಉತ್ತ, ದು, ಅಲಿಕ್ಕೆ**–ಇತ್ಯಾದಿ ಪ್ರತ್ಯಯಗಳು ಬಂದು ಆದ ಶಬ್ದರೂಪಗಳು. ಇವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಗಳಲ್ಲೂ, ಏಕವಚನ ಬಹುವಚನಗಳಲ್ಲೂ ಒಂದೇ ರೂಪವಾಗಿರುತ್ತವೆ. ಅಲ್ಲದೆ ಇವುಗಳ ಮೇಲೆ ಇನ್ನಾವ ವಿಭಕ್ತಿಪ್ರತ್ಯಯಗಳೂ ಬರುವುದಿಲ್ಲ. ಆದ್ದರಿಂದ–ಇಂಥ ಶಬ್ದಗಳು ಅವ್ಯಯದ[80] ಗುಣವನ್ನು ಪಡೆದವು. ಆದ್ದರಿಂದಲೇ ಇವುಗಳನ್ನು ಅವ್ಯಯಕೃದಂತಗಳು ಅಥವಾ ಕೃದಂತಾವ್ಯಯಗಳು ಎನ್ನುವರು. ಕೆಳಗಿನ ಸೂತ್ರವನ್ನು ಗಮನಿಸಿರಿ.

**(89) ಧಾತುಗಳ ಮೇಲೆ ಉತ, ಉತ್ತ, ಅದೆ, ದರೆ, ಅಲು, ಅಲಿಕ್ಕೆ, ಅ, ಇ, ದು– ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯಗಳೆನಿಸುವುವು.**

**ಇವು ಪೂರ್ಣಕ್ರಿಯಾರ್ಥವನ್ನು ಕೊಡದೆ, ಇನ್ನೊಂದು ಕ್ರಿಯೆಯನ್ನಪೇಕ್ಷಿಸುವುದರಿಂದ ಇವನ್ನು ಅಪೂರ್ಣಕ್ರಿಯೆ ಅಥವಾ ನ್ಯೂನಕ್ರಿಯೆಗಳೆಂದು ಕರೆಯುವರು.**

(೧) **ರಾಮನು ಉಣ್ಣುತ್ತಾ ಮಾತಾಡಿದನು.**

---

[80] ಅವ್ಯಯ ಎಂದರೆ ಲಿಂಗ, ವಚನ, ವಿಭಕ್ತಿಗಳಿಂದ ವ್ಯತ್ಯಾಸವಾಗದ ಶಬ್ದರೂಪ. ಇವುಗಳ ವಿಷಯವನ್ನು ಮುಂದೆ ತಿಳಿಯುತ್ತೀರಿ.

ಎಂಬ ಈ ವಾಕ್ಯದಲ್ಲಿ ರಾಮನೆಂಬ ಕರ್ತೃವು **ಉಣ್ಣುವ** ಮತ್ತು **ಮಾತನಾಡುವ** ಕ್ರಿಯೆಗಳೆರಡನ್ನೂ ಮಾಡಿದನಾದ್ದರಿಂದ ಇಂಥವು ಏಕಕರ್ತೃಕ ಕ್ರಿಯೆಗಳು.

(೨) **ಮಳೆ ಬರಲು ಕೆರೆ ತುಂಬಿತು.**

ಎಂಬ ಈ ವಾಕ್ಯದಲ್ಲಿ **ಬರಲು** ಎಂಬ ಕ್ರಿಯೆಗೆ **ಮಳೆಯೂ, ತುಂಬುವ** ಕ್ರಿಯೆಗೆ **ಕೆರೆಯೂ** ಕರ್ತೃಗಳಾದ್ದರಿಂದ ಇವೆರಡೂ ಕ್ರಿಯೆಗೆ ಬೇರೆ ಬೇರೆ ಕರ್ತೃಗಳು ಇದ್ದಹಾಗಾಯಿತು. ಇಂಥವನ್ನು ಭಿನ್ನಕರ್ತೃಗಳು ಎನ್ನುತ್ತಾರೆ.

ಉದಾಹರಣೆಗೆ:

| **ಪ್ರತ್ಯಯಗಳು** | – | **ಧಾತು** | + | **ಪ್ರತ್ಯಯ** | = | **ಅವ್ಯಯಕೃದಂತ** |
|---|---|---|---|---|---|---|
| **ಉತ** | – | ಮಾಡು | + | ಉತ | = | ಮಾಡುತ, ಇದರಂತೆ ನೋಡುತ, ಮಾರುತ, ಬರುತ |
| **ಉತ್ತ**[81] | – | ತಿನ್ನು | + | ಉತ್ತ | = | ತಿನ್ನುತ್ತ, ಇದರಂತೆ ನೋಡುತ್ತ, ನಡೆಯುತ್ತ, ಬರುತ್ತ |
| **ಅದೆ** | – | ಮಾಡು | + | ಅದೆ | = | ಮಾಡದೆ, ಇದರಂತೆ ನೋಡದೆ, ತಿನ್ನದೆ, ಬರೆಯದೆ |
| **ಅಲು** | – | ಬರು | + | ಅಲು | = | ಬರಲು, ಇದರಂತೆ ತಿನ್ನಲು, ಉಣ್ಣಲು, ನೋಡಲು, ನುಡಿಯಲು, ಬರೆಯಲು |
| **ಅಲಿಕ್ಕೆ** | – | ತಿನ್ನು | + | ಅಲಿಕ್ಕೆ | = | ತಿನ್ನಲಿಕ್ಕೆ, ಇದರಂತೆ ಮಾಡಲಿಕ್ಕೆ, ತಿಳಿಯಲಿಕ್ಕೆ, ಬರಲಿಕ್ಕೆ, ನಡೆಯಲಿಕ್ಕೆ |
| **ಅ** | – | ಹೇಳು | + | ಅ | = | ಹೇಳ[82], ಇದರಂತೆ ಮಾಡ, ನೋಡ, ನುಡಿಯ |
| **ಇ** | – | ಮಾಡು | + | ಇ | = | ಮಾಡಿ, ಇದರಂತೆ ಹೇಳಿ, ಕೇಳಿ, ನೋಡಿ |
| **ದು** | – | ತಿನ್ನು | + | ದು | = | ತಿಂದು, ಇದರಂತೆ ನುಡಿದು, ನಡೆದು, ಕರೆದು, ಬರೆದು |

ಈಗ ಏಕಕರ್ತೃಕ ಕೃದಂತಾವ್ಯಯಗಳು ಮತ್ತು ಭಿನ್ನಕರ್ತೃಕ ಕೃದಂತಾವ್ಯಯಗಳಲ್ಲಿ ಯಾವ ಯಾವ ಪ್ರತ್ಯಯಗಳು ಬರುತ್ತವೆಂಬುದರ ವ್ಯವಸ್ಥೆಯನ್ನು ನೋಡಿರಿ.

**(೧) ಏಕಕರ್ತೃಕ ಕೃದಂತಾವ್ಯಯಗಳು.**

(i) **ಒಂದು ಕರ್ತೃವಿನಿಂದ ಎರಡು ಕ್ರಿಯೆಗಳು ನಡೆದಾಗ ಮೊದಲು ಹೇಳುವ ಕ್ರಿಯೆಯಲ್ಲಿ ಭೂತಕಾಲ ತೋರಿದರೆ 'ದು' ಅಥವಾ 'ಇ' ಪ್ರತ್ಯಯಗಳು ಬರುತ್ತವೆ.**

[83](ಅ) ಅದನ್ನು **ತಿಂದು** ಹೋದನು (ತಿನ್ನು+ದು=ತಿಂದು)

---

[81] ಉತ್ತ ಪ್ರತ್ಯಯವನ್ನು ಹೊಸಗನ್ನಡದಲ್ಲಿ ಕೆಲವರು 'ಉತ್ತಾ' ಎಂದು ಹೇಳಿ ಹೋಗುತ್ತಾ, ಬರುತ್ತಾ, ತಿನ್ನುತ್ತಾ ಇತ್ಯಾದಿಯಾಗಿ ಕೃದಂತಾವ್ಯಯಗಳನ್ನು ಬಳಸುವುದುಂಟು.

[82] ಹೇಳ ಬಂದನು, ಹೇಳ ಬಂದಳು, ಮಾಡ ಬಂದಳು, ನುಡಿಯ ಬಂದನು, ನುಡಿಯ ಬಂದಿತು– ಇತ್ಯಾದಿಗಳು ಈ ಶಬ್ದಗಳು ಬಂದ ವಾಕ್ಯಗಳು.

[83](ಆ) ಆ ಕೆಲಸವನ್ನು **ಮಾಡಿ** ಬಂದೆನು (ಮಾಡು+ಇ=ಮಾಡಿ)

–ಇಲ್ಲಿ 'ತಿಂದು, ಮಾಡಿ' ಎಂಬುವೆರಡೂ ಮೊದಲ ಕ್ರಿಯೆಗಳು ಮುಗಿದು ಹೋದ (ಭೂತ) ಕಾಲವನ್ನು ತೋರಿಸುತ್ತವಾದ್ದರಿಂದ, 'ದು, ಇ' ಪ್ರತ್ಯಯಗಳು ಬಂದಿವೆ.

(ii) **ಒಂದೇ ಕರ್ತೃವಿನಿಂದ ಏಕಕಾಲದಲ್ಲಿ ಎರಡು ಕ್ರಿಯೆಗಳುಂಟಾದಾಗ ಮೊದಲನೆಯ ಕ್ರಿಯೆಯ ಮೇಲೆ ಉತ್ತ (ಉತ್ತಾ) ಪ್ರತ್ಯಯವೂ, ನಿಷೇಧ ತೋರಿದರೆ 'ಅದೇ' ಪ್ರತ್ಯಯವೂ ಬರುವುವು.**

(ಅ) ಅವನು **ಉಣ್ಣುತ್ತ** ಮಾತನಾಡಿದನು (ಏಕಕಾಲದಲ್ಲಿ ನಡೆದ ಕ್ರಿಯೆಗಳು)

(ಆ) ಅವನು **ಉಣ್ಣದೆ** ಹೋದನು (ನಿಷೇಧ)

–ಇಲ್ಲಿ ಮೊದಲ ವಾಕ್ಯದಲ್ಲಿ ಮಾತನಾಡುವ ಕ್ರಿಯೆ, ಉಣ್ಣುವ ಕ್ರಿಯೆಗಳು ಒಬ್ಬನಿಂದಲೇ ಏಕಕಾಲದಲ್ಲಿ ಆಗಿವೆ. ಆದ್ದರಿಂದ 'ಉತ್ತ' ಎಂಬುದೂ, ಎರಡನೆಯ ವಾಕ್ಯದಲ್ಲಿ ನಿಷೇಧ ಕ್ರಿಯೆ, ಹೋಗುವ ಕ್ರಿಯೆಗಳೆರಡೂ ಒಬ್ಬ ಕರ್ತೃವಿನಿಂದ ನಡೆದಿವೆ. ಆದ್ದರಿಂದ 'ಅದೆ' ಎಂಬುದು ಮೊದಲ ಕ್ರಿಯೆಯ ಮೇಲೆ ಬಂದಿದೆ.

(iii) **ಒಂದು ಕರ್ತೃವಿನಿಂದ ಏಕಕಾಲದಲ್ಲಿ ಎರಡು ಕ್ರಿಯೆಗಳುಂಟಾದಾಗ ಪ್ರಯೋಜನ ತೋರಿದರೆ 'ಅಲು' 'ಅಲಿಕ್ಕೆ' ಪ್ರತ್ಯಯಗಳು ಮೊದಲನೆಯ ಕ್ರಿಯೆಯ ಮೇಲೆ ಬರುತ್ತವೆ.**

(ಅ) ಅವನು **ತಿನ್ನಲು** ಹೋದನು (ಪ್ರಯೋಜನ)

(ಆ) ಅವನು **ತಿನ್ನಲಿಕ್ಕೆ** ಹೋದನು ( " )

–ಮೇಲಿನ ಎರಡೂ ವಾಕ್ಯಗಳಲ್ಲಿ ಹೋಗುವ ಕ್ರಿಯೆಯು ತಿನ್ನುವ ಪ್ರಯೋಜನಕ್ಕಾಗಿ. ಆದ್ದರಿಂದ ಮೊದಲ ಕ್ರಿಯೆಯ ಮೇಲೆ ಅಲು, ಅಲಿಕ್ಕೆ ಪ್ರತ್ಯಯಗಳು ಬಂದಿವೆ.

**(೨) ಭಿನ್ನಕರ್ತೃಕ ಕೃದಂತಾವ್ಯಯಗಳು**

(i) **ಬೇರೆ ಬೇರೆ ಕರ್ತೃಗಳಿಂದ ಎರಡು ಕ್ರಿಯೆಗಳುಂಟಾದಾಗ ಕಾರಣ ತೋರುವಾಗ 'ಅಲು' ಮತ್ತು 'ದು' ಪ್ರತ್ಯಯಗಳು ಮೊದಲ ಕ್ರಿಯೆಯ ಮೇಲೆ ಬರುತ್ತವೆ.**

ಉದಾಹರಣೆಗೆ:

(ಅ) ಹೊಲ **ಬೆಳೆಯಲು** ರೈತನು ಸುಖ ಹೊಂದಿದನು.

(ಆ) ಹೊಲ **ಬೆಳೆದು** ರೈತನಿಗೆ ಸುಖ ಬಂದಿತು.

---

[83] ಮಾಡಿ, ತಿಂದು, ನೋಡಿ, ನೀಡಿ, ಉಂಡು, ಕೊಟ್ಟು ಇವೆಲ್ಲ ಭೂತನ್ಯೂನಗಳು.

(ii) **ಬೇರೆ ಬೇರೆ ಕರ್ತೃಗಳಿಂದ ಎರಡು ಕ್ರಿಯೆಗಳು ಏಕ ಕಾಲದಲ್ಲಿ ತೋರಿದರೆ ಉತ್ತ, ದು, ಅದೆ ಪ್ರತ್ಯಯಗಳು ಬಂದಾಗ ಅವುಗಳ ಮುಂದೆ 'ಇರಲು' 'ಇರಲಾಗಿ' ಎಂಬುವು ಸೇರುವುವು.**

ಉದಾಹರಣೆಗೆ:

(ಅ) ಅವನು **ಬರುತ್ತಿರಲು** ಎಲ್ಲರೂ ಓಡಿದರು.
(ಆ) ಅವನು **ಬರುತ್ತಿರಲಾಗಿ** ಎಲ್ಲರೂ ಓಡಿದರು.
(ಇ) ಅವನು **ಬರದಿರಲು** ನಾವು ಮನೆಗೆ ಹೋದೆವು.
(ಈ) ಅವನು **ಬರದಿರಲಾಗಿ** ನಾವು ಮನೆಗೆ ಹೋದೆವು.
(ಉ) ಅವನು **ಬಂದಿರಲು** ನಾವೇಕೆ ಬರಬಾರದು.
(ಊ) ಅವನು **ಬಂದಿರಲಾಗಿ** ನಾವೇಕೆ ಬರಬಾರದು.

(iii) **ಎರಡು ಕ್ರಿಯೆಗಳು ಬೇರೆ ಬೇರೆ ಕರ್ತೃಗಳಿಂದ ನಡೆದಾಗ ಪಕ್ಷಾರ್ಥ ತೋರಿದರೆ 'ದರೆ' ಎಂಬುದೂ, ಭಾವಾರ್ಥ ತೋರಿದರೆ 'ಅ' ಎಂಬುದೂ ಬರುವುವು.**

ಉದಾಹರಣೆಗೆ:

(೧) ಪಕ್ಷಾರ್ಥಕ್ಕೆ
(ಅ) ಮಳೆ **ಬಂದರೆ,** ಕರೆ ತುಂಬುವುದು.
(ಆ) ನೀವು **ಬಂದರೆ** ನಾವು ಬರುತ್ತೇವೆ.

(೨) ಭಾವಾರ್ಥಕ್ಕೆ
(ಅ) ಅವನು ನನ್ನನ್ನು **ಹೋಗ** ಹೇಳಿದನು. (ಹೋಗು+ಅ=ಹೋಗ)
(ಆ) ಅವನಿಗೆ ಅಲ್ಲಿ **ಮಾಡ** ಕೆಲಸವಿಲ್ಲ. (ಮಾಡು+ಅ=ಮಾಡ)

ಮೇಲಿನ ವಾಕ್ಯಗಳಲ್ಲಿನ '**ಮಾಡ**' '**ಹೋಗ**' ಇವು ಭಾವಾರ್ಥಕ ಕ್ರಿಯೆಗಳೆಂದು ತಿಳಿಯಬೇಕು.

# II – ಸಾರಾಂಶ

**ಕೃದಂತ (ಕೃತ್+ಅಂತ)**
**(ಧಾತು+ಕೃತ್‌ಪ್ರತ್ಯಯ=ಕೃದಂತ)**

| (೧) ಕೃದಂತನಾಮ | (೨) ಕೃದಂತ ಭಾವನಾಮ (ಭಾವಕೃದಂತ) | (೩) ಕೃದಂತಾವ್ಯಯ (ಅವ್ಯಯಕೃದಂತ) |
|---|---|---|
| ಧಾತು+ಅ ಎಂಬ ಕೃತ್ ಪ್ರತ್ಯಯ (ವ–ಉವ–ದ–ಅದ ಆಗಮ) | ಧಾತು+ಭಾವಾರ್ಥದಲ್ಲಿ ಕೃತ್ ಪ್ರತ್ಯಯ | ಧಾತು+ಅಲು, ಅಲಿಕ್ಕೆ, ಉತ್ತ, ದರೆ –ಇತ್ಯಾದಿ ಪ್ರತ್ಯಯ |
| ಮಾಡುವ, ಮಾಡಿದ, ಮಾಡದ | ಮಾಡುವಿಕೆ, ಮಾಟ, ಕೊರತೆ ಇತ್ಯಾದಿ | ಮಾಡಲು, ಮಾಡಲಿಕ್ಕೆ, ಮಾಡಿದರೆ, ಮಾಡುತ್ತ– ಇತ್ಯಾದಿ. |

* * * * *

## ಅಭ್ಯಾಸ ಪ್ರಶ್ನೆಗಳು

(೧) (ಅ) ಕೃದಂತನಾಮಪದಗಳೆಂದರೇನು? ಉದಾಹರಣೆಗಳೊಡನೆ ವಿವರಿಸಿರಿ.

(ಆ) ವರ್ತಮಾನ, ಭೂತ, ಭವಿಷ್ಯತ್ ಕೃದಂತಗಳಲ್ಲಿ ಬರುವ ಆಗಮಗಳಾವುವು? ಇವುಗಳಿಗೆ ಏನೆಂದು ಹೆಸರು?

(ಇ) ಕೃದಂತಭಾವನಾಮಗಳೆಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.

(ಈ) ಕೃದಂತಾವ್ಯಯಗಳೆಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.

(೨) ಈ ಕೆಳಗೆ ಆವರಣ ಚಿಹ್ನೆಯೊಳಗಿನ ಸರಿಯಾದ ಉತ್ತರದ ಪದವೊಂದನ್ನು ಆರಿಸಿ ಬಿಟ್ಟಿರುವ ಸ್ಥಳದಲ್ಲಿ ಹಾಕಿರಿ.

(ಅ) ಧಾತುಗಳಿಗೆ __________ ಸೇರಿ ಕೃದಂತಗಳೆನಿಸುವುವು. (ನಾಮವಿಭಕ್ತಿಪ್ರತ್ಯಯ, ಆಖ್ಯಾತಪ್ರತ್ಯಯ, ಕೃತ್‌ಪ್ರತ್ಯಯ)

(ಆ) ಧಾತುಗಳಿಗೆ ಕೃತ್‌ಪ್ರತ್ಯಯಗಳು ಸೇರುವಾಗ ನಿಷೇಧಾರ್ಥದಲ್ಲಿ__________ಪ್ರತ್ಯಯವು ಆಗಮವಾಗಿಬರುವುದು. (ದ, ವ, ಅದ, ಉವ)

(ಇ) ಕೃದಂತನಾಮಪ್ರಕೃತಿಗಳ ಮೇಲೆ ನಾಮವಿಭಕ್ತಿಗಳು ಸೇರುವಾಗ ಪುಲ್ಲಿಂಗದಲ್ಲಿ ______ ಎಂಬುದು ಕೃದಂತಕ್ಕೂ ನಾಮವಿಭಕ್ತಿ ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವುದು. (ಅದು, ಅವಳು, ಅವನು)

(ಈ) ಧಾತುಗಳಿಗೆ __________ ದಲ್ಲಿ ಕೃತ್‌ಪ್ರತ್ಯಯ ಸೇರಿ ಕೃದಂತಭಾವನಾಮ ಗಳಾಗುವುವು. (ನಿಷೇಧಾರ್ಥದಲ್ಲಿ, ವಿಧ್ಯರ್ಥದಲ್ಲಿ, ಭಾವಾರ್ಥದಲ್ಲಿ)

(ಉ) 'ಮಾಟ' ಎಂಬಲ್ಲಿ ಭಾವಾರ್ಥದಲ್ಲಿ ಧಾತುವಿನ ಮೇಲೆ ______ ಪ್ರತ್ಯಯ ಬಂದಿದೆ. (ಡು, ಡ, ಟ)

(ಊ) 'ಕೊರೆತ' ಎಂಬುದು _____(ಕೃದಂತಾವ್ಯಯ, ಕೃದಂತ, ಕೃದಂತಭಾವನಾಮ)

(೩) ಕೆಳಗಣ ವಾಕ್ಯಗಳಲ್ಲಿ ತಪ್ಪುಗಳಿವೆ. ಅವನ್ನು ಸರಿಪಡಿಸಿರಿ.

(ಅ) ಧಾತುವಿನ ಮೇಲೆ ಕರ್ತ್ರರ್ಥದಲ್ಲಿ 'ಅ' ಎಂಬ ಕೃತ್‌ಪ್ರತ್ಯಯ ಬಂದಾಗ ಭವಿಷ್ಯತ್‌ಕಾಲದಲ್ಲಿ 'ದ' ಎಂಬ ಪ್ರತ್ಯಯವೂ, ಭೂತಕಾಲದಲ್ಲಿ 'ಅದ' ಎಂಬ ಪ್ರತ್ಯಯವೂ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ಮಧ್ಯದಲ್ಲಿ ಬರುವುವು.

(ಆ) ಕೃದಂತನಾಮವಿಭಕ್ತಿಪ್ರತ್ಯಯಗಳು ಸೇರುವಾಗ ಪುಲ್ಲಿಂಗದಲ್ಲಿ 'ಅವಳು' ಎಂಬುದೂ, ನಪುಂಸಕಲಿಂಗದಲ್ಲಿ 'ಅವನು' ಎಂಬುದೂ ಕೃದಂತ ಮತ್ತು ನಾಮವಿಭಕ್ತಿಪ್ರತ್ಯಯಗಳಿಗೆ ಮಧ್ಯದಲ್ಲಿ ಬರುವುವು.

(ಇ) ಧಾತುಗಳಿಗೆ ನಿಷೇಧಾರ್ಥದಲ್ಲಿ ಕೃತ್‌ಪ್ರತ್ಯಯಗಳು ಸೇರಿ ಕೃದಂತಭಾವನಾಮಗಳೆನಿಸುವುವು.

(ಈ) ಧಾತುಗಳ ಮೇಲೆ ಅಲು, ಅಲಿಕ್ಕೆ ಪ್ರತ್ಯಯಗಳು ಬಂದು ಕೃದಂತಭಾವನಾಮಗಳೆನಿಸುವುವು.

(ಉ) ಮಾಡುವಿಕೆ, ಮಾಟ – ಈ ರೂಪಗಳು ಕೃದಂತಾವ್ಯಯಗಳು.

(ಊ) 'ಕುಣಿತ' ಎಂಬಲ್ಲಿ 'ಕುಣಿತ' ಎಂಬ ಧಾತುವಿನ ಮೇಲೆ 'ಅ' ಎಂಬ ಕೃತ್‌ಪ್ರತ್ಯಯ ಬಂದಿದೆ.

(ಋ) ಗುರುವು ಬೋಧಿಸಲು ಶಿಷ್ಯನು ಕಲಿತನು–ಈ ವಾಕ್ಯವು ಏಕಕರ್ತೃಕಕ್ರಿಯೆ

ಯಿಂದ ಕೂಡಿದೆ.

(ಋೂ) 'ನಾನು ತಿನ್ನುತ್ತ ಬಂದೆನು' ಈ ವಾಕ್ಯವು ಭಿನ್ನಕರ್ತೃಕ ವಾಕ್ಯವೆನಿಸಿದೆ.

(ಎ) ಧಾತುಗಳಿಗೆ ಆಖ್ಯಾತಪ್ರತ್ಯಯಗಳು ಸೇರಿ ಕೃದಂತಗಳೆನಿಸುವುವು.

(ಏ) ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕ್ರಿಯಾಪದಗಳೆನಿಸುವುವು.

* * * * *

## III – ತದ್ಧಿತಾಂತಗಳು (ತದ್ಧಿತ+ಅಂತ)

'**ತದ್ಧಿತ**' ಎಂಬ ಹೆಸರಿನ ಪ್ರತ್ಯಯವನ್ನು ಅಂತದಲ್ಲಿ ಉಳ್ಳುದೇ **ತದ್ಧಿತಾಂತ**ವೆನಿಸುವುದು. ಈ ಕೆಳಗಿನ ವಾಕ್ಯಗಳನ್ನು ನೋಡಿರಿ.

(೧) **ಮೋಸವನ್ನು ಮಾಡುವವನು** ಇದ್ದಾನೆ.
(೨) ಅಲ್ಲಿ **ಕನ್ನಡವನ್ನು ಬಲ್ಲವರು** ಬಹಳ ಜನರಿದ್ದರು.
(೩) **ಹಾವನ್ನು ಆಡಿಸುವವನು** ಬಂದನು.
(೪) **ಮಡಿಯನ್ನು ಮಾಡುವವನು** ಇನ್ನೂ ಬಂದಿಲ್ಲ.

ಮೇಲಿನ ನಾಲ್ಕು ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ ಎರಡೆರಡು ನಾಮಪದಗಳನ್ನು ಸೇರಿಸಿ ಅದೇ ಅರ್ಥಬರುವಂತೆ ಒಂದು ಪದವನ್ನಾಗಿ ಸಮಾಸದ ಹಾಗೆ ಮಾಡಬಹುದು. ಹೀಗೆ ನಾವು ಸಂಕ್ಷೇಪಗೊಳಿಸಿ ಹೇಳಿದಾಗ ಕಾಲ, ಶ್ರಮ, ಧ್ವನಿ ಮೊದಲಾದವುಗಳ ಉಳಿತಾಯವಾಗುವುದು. ಹಾಗಾದರೆ ಆ ಪದಗಳನ್ನು ಯಾವ ಕ್ರಮದಿಂದ ಕೂಡಿಸುತ್ತೇವೆ? ಇತ್ಯಾದಿಗಳ ಬಗೆಗೆ ಕೆಳಗೆ ನೋಡಿರಿ.

(೧) **ಮೋಸವನ್ನು ಮಾಡುವವನು**–ಎಂಬಲ್ಲಿ ಮೋಸವನ್ನು ಎಂಬ ಪದದ ಮುಂದೆ ಮಾಡುವವನು ಎಂಬರ್ಥದಲ್ಲಿ '**ಗಾರ**' ಪ್ರತ್ಯಯ ಸೇರಿಸಿ **ಮೋಸವನ್ನು+ಗಾರ** ಮಾಡುತ್ತೇವೆ. ಒಂದೇ ಪ್ರಕೃತಿಯ ಮೇಲೆ ಎರಡು ಪ್ರತ್ಯಯ ಸೇರುವುದಿಲ್ಲ. '**ಅನ್ನು**' ಎಂಬ ಪ್ರತ್ಯಯ ತೆಗೆದು– ಮೋಸ+ಗಾರ=ಮೋಸಗಾರ ಹೀಗೆ ಒಂದು ಹೊಸ ರೂಪ ಸಿದ್ಧವಾಯಿತು. ಇಲ್ಲಿ '**ಗಾರ**' ಎಂಬುದೇ **ತದ್ಧಿತಪ್ರತ್ಯಯ.**

(೨) **ಕನ್ನಡವನ್ನು ಬಲ್ಲವನು**–ಎಂಬಲ್ಲಿ ಕನ್ನಡವನ್ನು ಎಂಬುದರ ಮೇಲೆ ಬಲ್ಲವನು ಎಂಬರ್ಥದಲ್ಲಿ '**ಇಗ**' ಪ್ರತ್ಯಯ ಸೇರಿದಾಗ **ಕನ್ನಡವನ್ನು+ಇಗ=ಕನ್ನಡ+ಇಗ=ಕನ್ನಡಿಗ** ಎಂಬ ರೂಪ ಸಿದ್ಧವಾಯಿತು. ಇಲ್ಲಿ '**ಇಗ**' ಎಂಬುದೇ **ತದ್ಧಿತ ಪ್ರತ್ಯಯ.**

(೩) **ಹಾವನ್ನು ಆಡಿಸುವವನು**–ಎಂಬಲ್ಲಿ ಹಾವನ್ನು ಎಂಬ ಪದದ ಮೇಲೆ '**ಆಡಿಸುವವನು**' ಎಂಬರ್ಥದಲ್ಲಿ '**ಆಡಿಗ**' ಎಂಬ ತದ್ಧಿತ ಪ್ರತ್ಯಯ ಬಂದು **ಹಾವನ್ನು+ಆಡಿಗ=ಹಾವು+ಆಡಿಗ= ಹಾವಾಡಿಗ** ಎಂಬ ರೂಪ ಸಿದ್ಧವಾಯಿತು.

(೪) **ಮಡಿಯನ್ನು ಮಾಡುವವನು**–ಎಂಬಲ್ಲಿ '**ಮಾಡುವವನು**' ಎಂಬರ್ಥದಲ್ಲಿ **ವಳ (ವಾಳ)** ಎಂಬ ಪ್ರತ್ಯಯವು ಬಂದು **ಮಡಿಯನ್ನು+ವಳ=ಮಡಿ+ವಳ=ಮಡಿವಳ** ಎಂಬ ರೂಪವಾಯಿತು.

ಮೋಸವನ್ನು–ಮಾಡುವವನೆಂಬರ್ಥದಲ್ಲಿ–**ಗಾರ.**
ಕನ್ನಡವನ್ನು–ಬಲ್ಲವನು ಎಂಬರ್ಥದಲ್ಲಿ–**ಇಗ.**
ಹಾವನ್ನು–ಆಡಿಸುವವನು ಎಂಬರ್ಥದಲ್ಲಿ–**ಆಡಿಗ.**
ಮಡಿಯನ್ನು–ಮಾಡುವವನು ಎಂಬರ್ಥದಲ್ಲಿ–**ವಳ.**

ಹೀಗೆ ಹಲವಾರು ಅರ್ಥಗಳಲ್ಲಿ–**ಗಾರ, ಇಗ, ಆಡಿಗ, ವಳ** –ಎಂಬ ಪ್ರತ್ಯಯಗಳು ನಾಮಪದಗಳ ಮೇಲೆ ಬಂದು ಹೊಸ ಬಗೆಯ ಪ್ರಕೃತಿಗಳಾಗುವುವು. ಇಲ್ಲಿ ಬಂದಿರುವ ಇಂಥ ಪ್ರತ್ಯಯಗಳನ್ನು ತದ್ಧಿತ ಪ್ರತ್ಯಯಗಳೆನ್ನುವರು. ಇಂಥ ತದ್ಧಿತ ಪ್ರತ್ಯಯಗಳನ್ನು ಅಂತದಲ್ಲಿ ಉಳ್ಳ ಶಬ್ದರೂಪವೇ '**ತದ್ಧಿತಾಂತ**' ವೆನಿಸುವುದು. ಇದರ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(90) ತದ್ಧಿತಾಂತ–ನಾಮಪದಗಳ ಮೇಲೆ ಹಲವಾರು ಅರ್ಥಗಳಲ್ಲಿ ಗಾರ, ಕಾರ, ಇಗ, ಆಡಿಗ, ವಂತ, ವಳ, ಇಕ, ಆಳಿ–ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳೆನಿಸುವುವು.**

ಈ ತದ್ಧಿತ ಪ್ರತ್ಯಯಗಳು ಸೇರುವಾಗ ಪ್ರಾಯಶಃ ಮಧ್ಯದ ವಿಭಕ್ತಿ ಪ್ರತ್ಯಯವು ಲೋಪವಾಗುವುದು. ಇವುಗಳಲ್ಲಿ– **(೧) ತದ್ಧಿತಾಂತ ನಾಮ (೨) ತದ್ಧಿತಾಂತ ಭಾವನಾಮ (೩) ತದ್ಧಿತಾಂತಾವ್ಯಯಗಳೆಂದು** ಮೂರು ಬಗೆ.

## (೧) ತದ್ಧಿತಾಂತ ನಾಮಗಳು

ನಾಮಪದಗಳ ಮೇಲೆ **ಗಾರ, ಕಾರ, ಇಗ, ವಂತ** ಇತ್ಯಾದಿ ಪ್ರತ್ಯಯಗಳು ಬಂದು ತದ್ಧಿತಾಂತ ನಾಮಗಳಾಗುವ ಬಗೆಯನ್ನು ಗಮನಿಸಿರಿ.

ಉದಾಹರಣೆಗೆ:

| **ತದ್ಧಿತ ಪ್ರತ್ಯಯ** | **–** | **ನಾಮಪದ** | **+** | **ಅರ್ಥ** | **=** | **ತದ್ಧಿತ ಪ್ರತ್ಯಯ** | **–** | **ತದ್ಧಿತಾಂತ ನಾಮ** |
|---|---|---|---|---|---|---|---|---|
| **ಗಾರ** | – | ಮಾಲೆಯನ್ನು | + | ಕಟ್ಟುವವನು | = | ಗಾರ | – | ಮಾಲೆಗಾರ |
| | | ಬಳೆಯನ್ನು | + | ಮಾರುವವನು | = | ಗಾರ | – | ಬಳೆಗಾರ |
| | | ಮೋಸವನ್ನು | + | ಮಾಡುವವನು | = | ಗಾರ | – | ಮೋಸಗಾರ |
| | | ಪಾಲನ್ನು | + | ಹೊಂದುವವನು | = | ಗಾರ | – | ಪಾಲುಗಾರ |
| | | ಛಲವನ್ನು | + | ಹೊಂದಿದವನು | = | ಗಾರ | – | ಛಲಗಾರ |
| **ಕಾರ** | – | ಓಲೆಯನ್ನು | + | ತರುವವನು | = | ಕಾರ | – | ಓಲೆಕಾರ |
| | | ಕೋಲನ್ನು | + | ಹಿಡಿಯುವವನು | = | ಕಾರ | – | ಕೋಲುಕಾರ |
| | | ಕೈದನ್ನು | + | ಹಿಡಿದಿರುವವನು | = | ಕಾರ | – | ಕೈದುಕಾರ |
| **ಇಗ** | – | ಕನ್ನಡವನ್ನು | + | ಬಲ್ಲವನು | = | ಇಗ | – | ಕನ್ನಡಿಗ |
| | | ಲೆಕ್ಕವನ್ನು | + | ಬಲ್ಲವನು | = | ಇಗ | – | ಲೆಕ್ಕಿಗ |
| | | ಚೆನ್ನನ್ನು | + | ಉಳ್ಳುವ | = | ಇಗ | – | ಚೆನ್ನಿಗ |
| | | ಗಂದವನ್ನು | + | ಮಾರುವವನು | = | ಇಗ | – | ಗಂದಿಗ |
| | | ಗಾಣವನ್ನು | + | ಆಡಿಸುವವನು | = | ಇಗ | – | ಗಾಣಿಗ |
| **ವಂತ** | – | ಹಣವನ್ನು | + | ಉಳ್ಳವನು | = | ವಂತ | – | ಹಣವಂತ |
| | | ಸಿರಿಯನ್ನು | + | ಉಳ್ಳವನು | = | ವಂತ | – | ಸಿರಿವಂತ |
| **ವಳ** | – | ಮಡಿಯನ್ನು | + | ಮಾಡುವವನು | = | ವಳ | – | ಮಡಿವಳ |
| | | | | | = | (ವಾಳ) | – | ಮಡಿವಾಳ |
| | | ಹಡಪವನ್ನು | + | ಆಚರಿಸುವವನು | = | ವಳ | – | ಹಡಪವಳ |

| | | | | | | | | |
|---|---|---|---|---|---|---|---|---|
| **ಆಡಿಗ** | – | ಹಾವನ್ನು | + | ಆಡಿಸುವವನು | = | ಆಡಿಗ | – | ಹಾವಾಡಿಗ |
| | | ಹೂವನ್ನು | + | ಕಟ್ಟುವವನು | = | ಆಡಿಗ | – | ಹೂವಾಡಿಗ |
| **ಇಕ** | – | ಕರಿಯದನ್ನು (ಬಣ್ಣವನ್ನು) | + | ಉಳ್ಳವನು | = | ಇಕ | – | ಕರಿಕ |
| | | ಬಿಳಿಯದನ್ನು (ಬಣ್ಣವನ್ನು) | + | ಉಳ್ಳವನು | = | ಇಕ | – | ಬಿಳಿಕ |
| **ಆಳಿ** | – | ಮಾತನ್ನು | + | ಹೆಚ್ಚು ಆಡುವ ಸ್ವಭಾವವುಳ್ಳವನು | = | ಆಳಿ | – | ಮಾತಾಳಿ |
| | | ಓದನ್ನು | + | ಹೆಚ್ಚು ಆಚರಿಸುವವನು | = | ಆಳಿ | – | ಓದಾಳಿ |
| **ಆಳಿ** | – | ಜೂದನ್ನು | + | ಆಡುವವನು | = | ಆಳಿ | – | ಜೂದಾಳಿ |
| **ಗುಳಿ** | – | ಲಂಚವನ್ನು | + | ತೆಗೆದುಕೊಳ್ಳುವವನು | = | ಗುಳಿ | – | ಲಂಚಗುಳಿ |
| **ಅನೆಯ** | – | ಹತ್ತು | + | ಸಂಖ್ಯೆಯನ್ನುಳ್ಳುದು | = | ಅನೆಯ | – | ಹತ್ತನೆಯ |
| | | ಒಂದು | + | ಸಂಖ್ಯೆಯನ್ನುಳ್ಳುದು | = | ಅನೆಯ | – | ಒಂದನೆಯ |
| **ಆರ** | – | ಕುಂಬವನ್ನು | + | ಮಾಡುವವನು | = | ಆರ | – | ಕುಂಬಾರ[84] |
| | | ಕಮ್ಮವನ್ನು | + | ಆಚರಿಸುವವನು | = | ಆರ | – | ಕಮ್ಮಾರ[84] |

ಇದರ ಹಾಗೆಯೆ ಉಳಿದ ಕಡೆಗೆ ಬೇರೆ ಬೇರೆ ಪ್ರತ್ಯಯಗಳು ಬಂದು ತದ್ಧಿತಾಂತಗಳಾಗುತ್ತ ವೆಂದು ತಿಳಿಯಬೇಕು.

## ಸ್ತ್ರೀಲಿಂಗದಲ್ಲಿ ಬರುವ ತದ್ಧಿತ ಪ್ರತ್ಯಯಗಳು

**(91) ಸ್ತ್ರೀಲಿಂಗದಲ್ಲಿ ಇತಿ, ಇತ್ತಿ, ಗಿತ್ತಿ, ತಿ, ಇ, ಎ ಇತ್ಯಾದಿ ತದ್ಧಿತ ಪ್ರತ್ಯಯಗಳು ಬಂದು ಸ್ತ್ರೀಲಿಂಗದ ತದ್ಧಿತಾಂತಗಳು ಸಿದ್ಧಿಸುವುವು.**

ಉದಾಹರಣೆಗೆ: **ಇತಿ** – ಬೀಗಿತಿ, ಬ್ರಾಹ್ಮಣಿತಿ
**ಇತ್ತಿ** – ಒಕ್ಕಲಗಿತ್ತಿ, ಹೂವಾಡಗಿತ್ತಿ
**ಗಿತ್ತಿ** – ನಾಯಿಂದಗಿತ್ತಿ, ಅಗಸಗಿತ್ತಿ
**ತಿ** – ಗೊಲ್ಲತಿ, ವಡ್ಡತಿ, ಮಾಲೆಗಾರ್ತಿ
**ಇ** – ಅರಸಿ, ಅಣುಗಿ
**ಎ** – ಕಳ್ಳೆ, ಜಾಣೆ, ಗುಣವಂತೆ, ಇತ್ಯಾದಿ–

[84] ಕುಂಭಕಾರ, ಕರ್ಮಕಾರ–ಎಂಬ ಸಂಸ್ಕೃತ ಪದಗಳು ತದ್ಭವವಾಗಿ, ಕುಂಬಾರ, ಕಮ್ಮಾರ ಪದಗಳು ಸಿದ್ಧಿಸಿದೆ ಎಂಬುದು ಕೆಲವರ ಮತ. ಆದರೆ ಹಳಗನ್ನಡದಲ್ಲಿ 'ಆರ' ಪ್ರತ್ಯಯ ಬಂದು ಕುಂಬರ, ಕಮ್ಮರ ಎಂದಾದ ಈ ಶಬ್ದಗಳು ಹೊಸಗನ್ನಡದಲ್ಲಿ ಕುಂಬಾರ, ಕಮ್ಮಾರ–ಎಂದು ಆದುವೆಂದು ತಿಳಿಯುವುದು ಯುಕ್ತ.

## (೨) ತದ್ಧಿತಾಂತ ಭಾವನಾಮಗಳು

(ಅ) **ಬಡತನ ಸಿರಿತನಗಳು** ಸ್ಥಿರವಲ್ಲ.
(ಆ) **ಈ ಊರ ಗೌಡಿಕೆ** ರಾಮಣ್ಣನದು.
(ಇ) ನಮಗೆ ಅದೊಂದು **ಹಿರಿಮೆ.**

ಈ ಮೇಲಿನ ಮೂರು ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ **ಬಡತನ, ಸಿರಿತನ, ಗೌಡಿಕೆ, ಹಿರಿಮೆ**–ಈ ಶಬ್ದಗಳನ್ನು ಯೋಚಿಸಿ ನೋಡಿದರೆ–**ಬಡವನ ಭಾವವೇ–'ಬಡತನ'; ಸಿರಿವಂತನ ಭಾವವೇ–'ಸಿರಿತನ'; ಗೌಡನ ಭಾವವೇ–'ಗೌಡಿಕೆ'; ಹಿರಿಯದರ ಭಾವವೇ– 'ಹಿರಿತನ'** ಎಂದು ಅರ್ಥವಾಗುವುದು. ಇಲ್ಲಿ ಬಂದಿರುವ **ತನ, ಇಕೆ, ಮೆ**–ಪ್ರತ್ಯಯಗಳು ಭಾವಾರ್ಥದಲ್ಲಿ **ಬಡವನ, ಸಿರಿವಂತನ, ಗೌಡನ, ಹಿರಿಯದರ**–ಇತ್ಯಾದಿ ನಾಮಪದಗಳ ಮೇಲೆ ಬಂದಿವೆ ಎಂಬುದನ್ನು ಕೆಳಗೆ ಗಮನಿಸಿರಿ.

ಬಡವ–ಬಡತನ (ಬಡವನ ಭಾವ–**ತನ**)
ಸಿರಿ – ಸಿರಿತನ (ಸಿರಿ ಉಳ್ಳವನ ಭಾವ–**ತನ**)
ಗೌಡ–ಗೌಡಿಕೆ (ಗೌಡನ ಭಾವ–**ಇಕೆ**)
ಹಿರಿದು–ಹಿರಿಮೆ (ಹಿರಿದರ ಭಾವ–**ಮೆ**)

ಸಾಮಾನ್ಯವಾಗಿ ಈ ಪ್ರತ್ಯಯಗಳೆಲ್ಲ ಷಷ್ಠೀವಿಭಕ್ತ್ಯಂತಗಳಾದ ನಾಮಪದಗಳ ಮೇಲೆ ಬಂದಿವೆ. ಆದುದರಿಂದ ಈ ಬಗೆಗೆ ಸೂತ್ರವನ್ನು ಹೀಗೆ ಹೇಳಬಹುದು.

**(92) ತದ್ಧಿತಾಂತಭಾವನಾಮಗಳು–ಸಾಮಾನ್ಯವಾಗಿ ಷಷ್ಠೀವಿಭಕ್ತ್ಯಂತಗಳಾದ ನಾಮಪದಗಳ ಮುಂದೆ ಭಾವಾರ್ಥದಲ್ಲಿ ತನ, ಇಕೆ, ಪು, ಮೆ – ಇತ್ಯಾದಿ ತದ್ಧಿತಪ್ರತ್ಯಯಗಳು ಸೇರಿ ತದ್ಧಿತಾಂತಭಾವನಾಮಗಳೆನಿಸುವುವು.**

ಉದಾಹರಣೆಗೆ:

| ಪ್ರತ್ಯಯ | – **ನಾಮಪದ** | – ಭಾವಾರ್ಥದಲ್ಲಿ ಪ್ರತ್ಯಯ | – **ತದ್ಧಿತಾಂತ ಭಾವನಾಮ** |
|---|---|---|---|
| ತನ | – ದೊಡ್ಡವನ (ಭಾವ) | – ತನ | – ದೊಡ್ಡತನ |
| | ಜಾಣನ (ಭಾವ) | – ತನ | – ಜಾಣತನ; ಇದರಂತೆ ದಡ್ಡತನ, ಚಿಕ್ಕತನ, ಸಣ್ಣತನ ಹುಡುಗತನ, ಕಿರಿತನ, ಕಳ್ಳತನ, ಕೆಟ್ಟತನ, ಸೋಮಾರಿತನ, –ಇತ್ಯಾದಿ |

| | | | | | | |
|---|---|---|---|---|---|---|
| ಇಕೆ | – | ಬ್ರಾಹ್ಮಣನ (ಭಾವ) | – | ಇಕೆ | – | ಬ್ರಾಹ್ಮಣಿಕೆ |
| | | ಚಲುವಿನ (ಭಾವ) | – | ಇಕೆ | – | ಚಲುವಿಕೆ; ಇದರಂತೆ ಗೌಡಿಕೆ, ಉನ್ನತಿಕೆ, ತಳವಾರಿಕೆ, –ಇತ್ಯಾದಿ |
| **ಉ** | – | ಕಿವುಡನ (ಭಾವ) | – | **ಉ** | – | ಕಿವುಡು |
| | | ಕುಳ್ಳನ (ಭಾವ) | – | **ಉ** | – | ಕುಳ್ಳು; ಇದರಂತೆ ಕುರುಡು, ಕುಂಟು, ಮೂಕು, ತೊದಲು, –ಇತ್ಯಾದಿ. |
| **ಪು** | – | ಬಿಳಿದರ (ಭಾವ) | – | **ಪು** | – | ಬಿಳುಪು[85] |
| | | ಕರಿದರ (ಭಾವ) | – | **ಪು** | – | ಕಪ್ಪು[85] |
| | | ಇನಿದರ (ಭಾವ) | – | **ಪು** | – | ಇಂಪು |
| | | ತಣ್ಣನೆಯದರ (ಭಾವ) | – | **ಪು** | – | ತಂಪು[85] |
| | | ನುಣ್ಣನೆಯದರ (ಭಾವ) | – | **ಪು** | – | ನುಣುಪು[85] |
| **ಮೆ** | – | ಜಾಣನ (ಭಾವ) | – | **ಮೆ** | – | ಜಾಣ್ಮೆ |
| | | ಜಾಣೆಯ (ಭಾವ) | – | **ಮೆ** | – | ಜಾಣ್ಮೆ |
| | | ಕೂರಿತ್ತರ (ಭಾವ) | – | **ಮೆ** | – | ಕೂರ್ಮೆ |
| | | ಪಿರಿದರ (ಭಾವ) | – | **ಮೆ** | – | ಪೆರ್ಮೆ |
| | | ಹಿರಿದರ (ಭಾವ) | – | **ಮೆ** | – | ಹಿರಿಮೆ |

### (೩) ತದ್ಧಿತಾಂತಾವ್ಯಯಗಳು

(ಅ) ಅವನು **ರಾಮನಂತೆ** ಕಾಣುವನು
(ಆ) **ಊರವರೆಗೆ** ನಡೆದನು
(ಇ) **ಮನೆಯತನಕ** ಕಳಿಸು
(ಉ) **ಅವನಿಗೋಸುಗ** ಬಂದೆನು
(ಊ) **ಅವನಿಗಿಂತ** ಚಿಕ್ಕವನು

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ **ರಾಮನಂತೆ, ಊರವರೆಗೆ, ಮನೆಯತನಕ, ಅವನಿಗೋಸುಗ, ಅವನಿಗಿಂತ** – ಇತ್ಯಾದಿ ಪದಗಳನ್ನು ಬಿಡಿಸಿದರೆ **ರಾಮನ+ಅಂತೆ, ಊರ+ವರಗೆ, ಮನೆಯ+ತನಕ, ಅವನಿಗೆ+ಓಸುಗ, ಅವನಿಗೆ+ಇಂತ**– ಹೀಗಾಗುವುವು. ಇಲ್ಲಿ ಬಂದಿರುವ **ಅಂತೆ, ವರೆಗೆ, ತನಕ, ಓಸುಗ, ಇಂತ**–ಇತ್ಯಾದಿ ಪ್ರತ್ಯಯಗಳು ನಾಮ ಪದಗಳ ಮುಂದೆ ಸೇರುವುವು. ಆಗ ನಾಮಪದಗಳಲ್ಲಿರುವ **ಅ, ಅ, ಅ,**

[85] ಹಳಗನ್ನಡದಲ್ಲಿ ಇವುಗಳ ರೂಪಗಳು ಬೆಳ್ಪು, ಕರ್ಪು, ತುಣ್ಪು, ನುಣ್ಪು–ಇತ್ಯಾದಿಯಾಗಿ ಆಗುವುವು.

**ಗೆ, ಗೆ**–ಈ ನಾಮವಿಭಕ್ತಿಪ್ರತ್ಯಯಗಳು ಲೋಪವಾಗುವುದಿಲ್ಲ. ಇಂಥ ಪದಗಳನ್ನು **ತದ್ಧಿತಾಂತಾವ್ಯಯ**ಗಳೆಂದು ಕರೆಯುವುದು ವಾಡಿಕೆ.

**(93) ನಾಮಪದಗಳ ಮುಂದೆ ಅಂತೆ, ವೊಲ್, ವೊಲು, ವೋಲ್, ವೋಲು, ತನಕ, ವರೆಗೆ, ಮಟ್ಟಿಗೆ, ಓಸ್ಕರ, ಇಂತ, ಆಗಿ, ಓಸುಗ–ಇತ್ಯಾದಿ ಪ್ರತ್ಯಯಗಳು ಸೇರಿ ತದ್ಧಿತಾಂತಾವ್ಯಯಗಳೆನಿಸುವುವು.**

ಈ ಪ್ರತ್ಯಯಗಳು ಬಂದಾಗ ನಾಮಪದದಲ್ಲಿರುವ ವಿಭಕ್ತಿಪ್ರತ್ಯಯವು ಲೋಪವಾಗುವುದಿಲ್ಲ.

ಉದಾಹರಣೆಗೆ:

**ಅಂತೆ** –ರಾಮನಂತೆ, ಚಂದ್ರನಂತೆ, ಭೀಮನಂತೆ, ಅವನಂತೆ
**ವೊಲ್** –ರಾಮನವೊಲ್, ಚಂದ್ರನವೊಲ್, ಭೀಮನವೊಲ್, ಅವನವೊಲ್
**ವೊಲು** –ರಾಮನವೊಲು, ಚಂದ್ರನವೊಲು, ಭೀಮನವೊಲು, ನಿನ್ನವೊಲು
**ವೋಲು** –ಮನೆಯವೋಲು, ಅವನವೋಲು, ಚಂದ್ರನವೋಲು
**ವೋಲ್** –ಮನೆಯವೋಲ್, ಅವನವೋಲ್, ಚಂದ್ರನವೋಲ್
**ತನಕ** –ಮನೆಯತನಕ, ಊರತನಕ, ಅಲ್ಲಿಯತನಕ
**ವರೆಗೆ** –ಊರವರೆಗೆ, ಚಂದ್ರನವರೆಗೆ
**ಮಟ್ಟಿಗೆ** –ಅವನಮಟ್ಟಿಗೆ, ನನ್ನಮಟ್ಟಿಗೆ, ನಿನ್ನಮಟ್ಟಿಗೆ
**ಓಸ್ಕರ** –ಅವನಿಗೋಸ್ಕರ, ರಾಮನಿಗೋಸ್ಕರ
**ಸಲುವಾಗಿ** –ನನ್ನ ಸಲುವಾಗಿ, ನಿನ್ನ ಸಲುವಾಗಿ
**ಇಂತ** –ಅವನಿಗಿಂತ, ಇವನಿಗಿಂತ
**ಆಗಿ** –ಅವನಿಗಾಗಿ, ನನಗಾಗಿ, ನಿನಗಾಗಿ
**ಓಸುಗ** –ರಾಮನಿಗೋಸುಗ, ಕಳ್ಳನಿಗೋಸುಗ

# IV – ಸಾರಾಂಶ

## ತದ್ಧಿತಾಂತ (ತದ್ಧಿತ+ಅಂತ) ಮೂರುಬಗೆ

**(1) ತದ್ಧಿತಾಂತನಾಮ**

ನಾಮಪದಗಳ ಹಲವಾರು ಅರ್ಥಗಳಲ್ಲಿ ತದ್ಧಿತಪ್ರತ್ಯಯ

ಮೋಸಗಾರ, ಮಾಲೆಗಾರ, –ಇತ್ಯಾದಿ

**(2) ತದ್ಧಿತಾಂತಭಾವನಾಮ**

ಭಾವಾರ್ಥದಲ್ಲಿ ನಾಮಪದಗಳ ಮೇಲೆ ತದ್ಧಿತಪ್ರತ್ಯಯ

ಸಿರಿತನ, ಬಡತನ, ಗೌಡಿಕೆ, –ಇತ್ಯಾದಿ

**(3) ತದ್ಧಿತಾಂತಾವ್ಯಯ**

ನಾಮಪದಗಳ ಮುಂದೆ ತನಕ, ವರೆಗೆ, ಇತ್ಯಾದಿ ಪ್ರತ್ಯಯಗಳು

ಊರತನಕ, ಮನೆತನಕ – ಇತ್ಯಾದಿ

**(4) ಸ್ತ್ರೀಲಿಂಗದಲ್ಲಿ**

ಇತಿ, ಇತ್ತಿ, ಗಿತ್ತಿ, ಇ, ಎ ಪ್ರತ್ಯಯ.

ಬೀಗಿತಿ, ಬ್ರಾಹ್ಮಣಿತಿ, ಒಕ್ಕಲಗಿತ್ತಿ, ಹೂವಾಡಗಿತ್ತಿ, ನಾಯಿಂದಗಿತ್ತಿ, ಅಗಸಗಿತ್ತಿ
ಗೊಲ್ಲತಿ, ವಡ್ಡತಿ, ಅರಸಿ, ಅಣುಗಿ, ಕಳ್ಳೆ, ಜಾಣೆ, ಗುಣವಂತೆ, – ಇತ್ಯಾದಿ

* * * * *

## ಅಭ್ಯಾಸ ಪ್ರಶ್ನೆಗಳು

(೧) (ಅ) ತದ್ಧಿತಾಂತ ನಾಮಗಳೆಂದರೇನು? ವಿವರಿಸಿರಿ.
(ಆ) ತದ್ಧಿತಾಂತ ಭಾವನಾಮಗಳೆಂದರೇನು? ವಿವರಿಸಿರಿ.
(ಇ) ತದ್ಧಿತಾಂತಾವ್ಯಯಗಳೆಂದರೇನು? ವಿವರಿಸಿರಿ.
(ಈ) ತದ್ಧಿತಾಂತಭಾವನಾಮ, ಕೃದಂತಭಾವನಾಮಗಳಿಗೆ ವ್ಯತ್ಯಾಸಗಳೇನು? ವಿವರಿಸಿರಿ.

(೨) ಕೆಳಗೆ ಬಿಟ್ಟಿರುವ ಸ್ಥಳಗಳಲ್ಲಿ ಸರಿಯಾದ ಪದವನ್ನು ಸೇರಿಸಿ ಅರ್ಥವು ಸರಿಹೋಗುವಂತೆ ಮಾಡಿರಿ.
(ಅ) ____ ಪದಗಳ ಮುಂದೆ ಹಲವಾರು ಅರ್ಥಗಳಲ್ಲಿ ಗಾರ, ಕಾರ, ಇಗ ಇತ್ಯಾದಿ _________ ಸೇರಿ ತದ್ಧಿತಾಂತಗಳಾಗುವುವು.
(ಆ) ನಾಮಪದಗಳ ಮುಂದೆ ತನ, ಇಕೆ, ಉ–ಇತ್ಯಾದಿ ಪ್ರತ್ಯಯಗಳು ಸೇರಿ ____ ಎನಿಸುವುವು.
(ಇ) ನಾಮಪದಗಳ ಮುಂದೆ ______ ಪ್ರತ್ಯಯಗಳು ಸೇರಿ ತದ್ಧಿತಾಂತಾವ್ಯಯಗಳೆನಿಸುವುವು.
(ಈ) ಇತಿ, ಗಿತ್ತಿ, ಎಂಬಿವು _______ ಲಿಂಗದಲ್ಲಿ ಬರುವ ಪ್ರತ್ಯಯಗಳು.

(೩) ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಆವರಣದಲ್ಲಿ ಕೊಟ್ಟಿರುವ ಒಂದು ಸರಿಯುತ್ತರವನ್ನು ಆರಿಸಿ ಹಾಕಿರಿ.
(ಅ) ___ ಪದಗಳ ಮುಂದೆ ಹಲವಾರು ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಬಂದು ತದ್ಧಿತಾಂತಗಳಾಗುವುವು. (ಕ್ರಿಯಾ, ನಾಮ, ಧಾತು)
(ಆ) ತದ್ಧಿತಪ್ರತ್ಯಯವು ಸೇರಿದಾಗ ಮೊದಲ ಪದದ ನಾಮವಿಭಕ್ತಿಪ್ರತ್ಯಯವು ____ ಆಗುವುದು. (ಲೋಪ, ಆಗಮ, ಆದೇಶ)
(ಇ) ಬ್ರಾಹ್ಮಣತಿ ಎಂಬುದು _______ ರೂಪ. (ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ)
(ಈ) ನಾಮಪದಗಳ ಮುಂದೆ _______ ದಲ್ಲಿ ತನ, ಇಕೆ, ಉ ಇತ್ಯಾದಿ ಪ್ರತ್ಯಯಗಳು ಬಂದು ತದ್ಧಿತಾಂತ ಭಾವನಾಮಗಳೆನಿಸುವುವು. (ನಿಶ್ಚಯಾರ್ಥ, ಸಂಶಯಾರ್ಥ, ಭಾವಾರ್ಥ)
(ಉ) ನಾಮಪದಗಳ ಮುಂದೆ ತನಕ, ವರೆಗೆ ಇತ್ಯಾದಿ ಪ್ರತ್ಯಯಗಳು ಬಂದು ಆದ ರೂಪಕ್ಕೆ ____ ಎನ್ನುವರು. (ಕೃದಾಂತಾವ್ಯಯ, ತದ್ಧಿತಾಂತಭಾವನಾಮ, ತದ್ಧಿತಾಂತಾವ್ಯಯ)
(ಊ) 'ರಾಮನ ವೊಲ್' ಎಂಬುದು ______ ಎನಿಸುವುದು. (ಕೃದಂತಭಾವನಾಮ, ತದ್ಧಿತಾಂತಭಾವನಾಮ, ತದ್ಧಿತಾಂತಾವ್ಯಯ)
(ಋ) 'ಹಿರಿತನ' ಎಂಬುದೂ ______ ಎನಿಸುವುದು. (ತದ್ಧಿತಾಂತಭಾವನಾಮ, ಕೃದಂತಭಾವನಾಮ, ತದ್ಧಿತಾಂತಾವ್ಯಯ)
(ೠ) ಧಾತುಗಳಿಗೆ ಭಾವಾರ್ಥದಲ್ಲಿ ಕೃತ್ಪ್ರತ್ಯಯ ಸೇರಿ ಕೃದಂತಭಾವನಾಮವಾದರೆ _____ ಗಳಿಗೆ ಭಾವಾರ್ಥದಲ್ಲಿ ತದ್ಧಿತ ಪ್ರತ್ಯಯ ಸೇರಿ ತದ್ಧಿತಾಂತ

ಭಾವನಾಮಗಳಾಗುವುವು. (ಕ್ರಿಯಾಪದ, ನಾಮಪದ, ಧಾತು)

(೪) ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳಿವೆ. ಅವುಗಳನ್ನು ಸರಿಪಡಿಸಿರಿ.

(ಅ) ಧಾತುಗಳಿಗೆ ತದ್ಧಿತಪ್ರತ್ಯಯಗಳು ಸೇರಿ ತದ್ಧಿತಾಂತಗಳೆನಿಸುವುವು.

(ಆ) ನಾಮಪದಗಳಿಗೆ ಕೃತ್‌ಪ್ರತ್ಯಯಗಳು ಸೇರಿ ಕೃದಂತಗಳೆನಿಸುವುವು.

(ಇ) ಕ್ರಿಯಾಪದಗಳಿಗೆ ಭಾವಾರ್ಥದಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಭಾವನಾಮಗಳೆನಿಸುವುವು.

(ಈ) ನಾಮಪದಗಳ ಮೂಲರೂಪವೇ ಧಾತುವೆನಿಸುವುದು.

(ಉ) ಕ್ರಿಯಾಪದಗಳ ಮೂಲರೂಪವೇ ನಾಮಪ್ರಕೃತಿಯೆನಿಸುವುದು.

(ಊ) ಧಾತುಗಳಿಗೆ ಆಖ್ಯಾತ ಪ್ರತ್ಯಯ ಸೇರಿ ನಾಮಪದಗಳೆನಿಸುವುವು.

(ಋ) ನಾಮಪದಗಳ ಮುಂದೆ ಅಂತೆ, ವೊಲ್, ಓಸ್ಕರ ಇತ್ಯಾದಿ ಪ್ರತ್ಯಯಗಳು ಸೇರಿ ತದ್ಧಿತಾಂತಭಾವನಾಮಗಳೆನಿಸುವುವು.

* * * * *

## ಅಧ್ಯಾಯ ೮

# ಅವ್ಯಯ ಪ್ರಕರಣ

(೧) ಅವನು **ಚೆನ್ನಾಗಿ** ಓದಿದನು.
(೨) ಅವಳು **ಚೆನ್ನಾಗಿ** ಓದಿದಳು.
(೩) ಅವರು **ಚೆನ್ನಾಗಿ** ಓದಿದರು.
(೪) ಅದು **ಚೆನ್ನಾಗಿ** ಓದುತ್ತದೆ.

ಮೇಲಿನ ವಾಕ್ಯಗಳಲ್ಲೆಲ್ಲಾ ಬಂದಿರುವ '**ಚೆನ್ನಾಗಿ**' ಎಂಬ ಪದವನ್ನು ವಿಚಾರಿಸಿರಿ. ಅದು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲೂ, ಏಕವಚನ, ಬಹುವಚನಗಳಲ್ಲೂ ಯಾವ ವ್ಯತ್ಯಾಸವನ್ನೂ ಹೊಂದದೆ ಒಂದೇ ರೀತಿಯಾಗಿದೆ. '**ಚೆನ್ನಾಗಿ**' ಎಂಬುದರ ಮೇಲೆ ಯಾವ ವಿಧವಾದ ಪ್ರತ್ಯಯಗಳನ್ನೂ ಹಚ್ಚಲಾಗುವುದಿಲ್ಲ. ಇದು ನಾಮಪದ ಹಾಗು ಕ್ರಿಯಾಪದಗಳ ಹಾಗೆ ರೂಪದಲ್ಲಿ ಯಾವ ಭೇದವನ್ನೂ ಹೊಂದುವುದಿಲ್ಲ; ಇದ್ದ ಹಾಗೆಯೇ ಯಾವಾಗಲೂ ಇರುತ್ತದೆ. ಹೀಗೆ ಲಿಂಗ, ವಚನ, ವಿಭಕ್ತಿಗಳಿಂದ ಯಾವ ವ್ಯತ್ಯಾಸವನ್ನೂ ಹೊಂದದ ಅನೇಕ ಶಬ್ದಗಳನ್ನು ಭಾಷೆಯಲ್ಲಿ ಬಳಸುತ್ತೇವೆ. **ಸುಮ್ಮನೆ, ನೆಟ್ಟಗೆ, ಮೆಲ್ಲಗೆ, ಸುತ್ತಲೂ, ತರುವಾಯ, ಇಲ್ಲ**–ಇಂಥವೆಲ್ಲ ಇದೇ ವರ್ಗಕ್ಕೆ ಸೇರಿದವುಗಳು. ಇಂಥವುಗಳನ್ನು '**ಅವ್ಯಯ**' ಎಂದು ಕರೆಯುತ್ತಾರೆ. ಇಂಥ ಅವ್ಯಯಗಳ ಬಗೆಗೆ ಸಾಮಾನ್ಯ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(94) ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳು ಅವ್ಯಯುಗಳೆನಿಸುವುವು.**

ಇಂಥ ಅವ್ಯಯಗಳನ್ನು–**(೧) ಸಾಮಾನ್ಯಾವ್ಯಯ (೨) ಅನುಕರಣಾವ್ಯಯ**
**(೩) ಭಾವಸೂಚಕಾವ್ಯಯ (ನಿಪಾತಾವ್ಯಯ) (೪) ಕ್ರಿಯಾರ್ಥಕಾವ್ಯಯ**
**(೫) ಸಂಬಂಧಾರ್ಥಕಾವ್ಯಯ (೬) ಕೃದಂತಾವ್ಯಯ (೭) ತದ್ಧಿತಾಂತಾವ್ಯಯ**
**(೮) ಅವಧಾರಣಾರ್ಥಕಾವ್ಯಯ**–ಇತ್ಯಾದಿಯಾಗಿ ಗುಂಪುಗಳನ್ನು ಮಾಡಬಹುದು.
ಇವುಗಳ ವಿವರಗಳನ್ನು ಕೆಳಗೆ ನೋಡಿರಿ:–

**(೧) ಸಾಮಾನ್ಯಾವ್ಯಯುಗಳು:–** ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳು ವಂಥ ಅವ್ಯಯಗಳು ಸಾಮಾನ್ಯಾವ್ಯಯಗಳು. ಇವು ಪ್ರಾಯಶಃ ಕ್ರಿಯೆಗೆ ವಿಶೇಷಣಗಳಾಗಿರುತ್ತವೆ.

ಉದಾಹರಣೆಗೆ: ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಬಿಮ್ಮಗೆ, ಸುಮ್ಮನೆ, ಸುಮ್ಮಗೆ, ಕಮ್ಮನೆ, ಕಮ್ಮಗೆ, ಬೇಗನೆ, ಮೆಲ್ಲಗೆ, ಮೆಲ್ಲನೆ, ಸೊಗಸಾಗಿ, ಸಲೆ, ಕರಂ, ಹಾಗೆ, ಹೀಗೆ, ಅಂತು, ಇಂತು, ಬೇರೆ, ಬಳಿಕ, ತರುವಾಯ, ಇನ್ನು, ಒಡನೆ, ಕೂಡಲೆ, ಬೇಗ, ಸುತ್ತಲು– ಇತ್ಯಾದಿಗಳು.

**(೨) ಅನುಕರಣಾವ್ಯಯುಗಳು:–** ಅರ್ಥವಿಲ್ಲದ ಧ್ವನಿವಿಶೇಷಣಗಳನ್ನು ತಾನು ಕೇಳಿದಂತೆ ಪುನಃ ಅನುಕರಣ ಮಾಡಿ ಹೇಳುವ ಶಬ್ದಗಳೆಲ್ಲ ಅನುಕರಣಾವ್ಯಯಗಳೆನಿಸುವುವು.

ಉದಾಹರಣೆಗೆ: **ನೀರು ದಬದಬ ಬಿದ್ದಿತು. ಪಟಪಟ ಮಳೆ ಸುರಿಯಿತು.**

ಇಲ್ಲಿ '**ದಬದಬ ಪಟಪಟ**' ಇವು ಅನುಕರಣಾವ್ಯಯಗಳು. ಇದರಂತೆ ಚಟಚಟ, ಕರಕರ, ಚುರುಚುರು, ಸಿಮಿಸಿಮಿ, ಧಗಧಗ, ತಟತಟ, ರೊಯ್ಯನೆ, ಸುಯ್ಯನೆ, ಧಿಗಿಲನೆ, ಭೋರನೆ, ಘುಳುಘುಳು, ಗುಡುಗುಡು, ದಡದಡ–ಇತ್ಯಾದಿ.

**(೩) ಭಾವಸೂಚಕಾವ್ಯಯಗಳು (ನಿಪಾತಾವ್ಯಯಗಳು):–** ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ–ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಕೆಲವು ಅರ್ಥವಿಲ್ಲದ ಶಬ್ದಗಳನ್ನು ಬಳಸುತ್ತೇವೆ. ಇವನ್ನು ಭಾವಸೂಚಕಾವ್ಯಯಗಳೆನ್ನುವರು. ಇವಕ್ಕೆ ನಿಪಾತಾವ್ಯಯಗಳೆಂದೂ ಹೆಸರು.

ಉದಾಹರಣೆಗೆ: ಎಲಾ! ಅಯ್ಯೋ! ಅಕ್ಕಟಾ! ಅಕಟಕಟಾ! ಆಹಾ! ಭಲೇ! ಭಲಾ! ಭಳಿರೇ! ಛೇ! ಥೂ! ಅಬ್ಬಾ! ಅಹಹಾ! ಆಹಾ! ಓಹೋ! ಹೋ! ಹೋಹೋ! ಅಃ! ಎಲೆಲಾ! ಓ! ಏ! ಆಃ! ಹಹಹ! ಇತ್ಯಾದಿ.

**(೪) ಕ್ರಿಯಾರ್ಥಕಾವ್ಯಯಗಳು:–** ಕ್ರಿಯಾಪದದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಕೆಲವು ಅವ್ಯಯಗಳು ಕ್ರಿಯಾರ್ಥಕಾವ್ಯಯಗಳೆನಿಸುವುವು[86].

ಉದಾಹರಣೆಗೆ: ಉಂಟು, ಬೇಕು, ಬೇಡ, ಅಲ್ಲ, ಅಹುದು, ಹೌದು, ಸಾಕು, ಇಲ್ಲ–ಇತ್ಯಾದಿಗಳು.

**(೫) ಸಂಬಂಧಾರ್ಥಕಾವ್ಯಯಗಳು:–** ಎರಡು ಪದಗಳನ್ನಾಗಲಿ, ಅಥವಾ ಹಲವು ಪದ ಸಮುಚ್ಚಯಗಳನ್ನಾಗಲಿ, ವಾಕ್ಯಗಳನ್ನಾಗಲಿ, ಜೋಡಿಸುವಂಥ ಮತ್ತು ಸಂಬಂಧಗೊಳಿಸುವಂಥ ಶಬ್ದಗಳು ಸಂಬಂಧಾರ್ಥಕಾವ್ಯಯಗಳು.

ಉದಾಹರಣೆಗೆ: ಊ, ಉಂ, ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ.

(i) ಪದಗಳನ್ನು ಜೋಡಿಸುವಿಕೆ:–

(1) **ರಾಮನೂ (ಊ), ಭೀಮನೂ (ಊ), ಸೀತೆಯೂ (ಊ) ಬಂದರು.**

(2) **ರಾಮನುಂ (ಉಂ[87]), ಭೀಮನುಂ (ಉಂ), ಸೀತೆಯುಂ (ಉಂ) ಬಂದರ್.**

---

86 ಕ್ರಿಯಾರ್ಥಕಾವ್ಯಯಗಳ ಬಗೆಗೆ ಹಿಂದಿನ ಕ್ರಿಯಾಪದ ಪ್ರಕರಣದಲ್ಲಿ ವಿಶದವಾಗಿ ತಿಳಿದಿದ್ದೀರಿ. ಅಲ್ಲಿ ಬಂದಿರುವ ಕ್ರಿಯಾರ್ಥಕಾವ್ಯಯಗಳ ಬಗೆಗೆ ಆ ಪ್ರಕರಣವನ್ನು ನೋಡಿರಿ.

87 'ಉ' ಎಂಬ ಸಂಬಂಧಾರ್ಥಕಾವ್ಯಯವು ಹಳಗನ್ನಡದಲ್ಲಿ ಬರುತ್ತದೆ. ಹೊಸಗನ್ನಡದ 'ಊ' ಎಂಬುದು ಇದಕ್ಕೆ ಸಮಾನವಾದ ಸಮುಚ್ಚಯಾವ್ಯಯ. ಹಳೆಗನ್ನಡದಲ್ಲಿ ಈ 'ಉಂ' ಎಂಬುದು ಒಮ್ಮೊಮ್ಮೆ ಪ್ರಕೃತಿಗೂ

ಮೇಲಿನ ವಾಕ್ಯಗಳಲ್ಲಿ ರಾಮ ಭೀಮ ಸೀತೆಯರನ್ನು ಮಧ್ಯದಲ್ಲಿರುವ 'ಊ' ಎಂಬ ಸಂಬಂಧಾರ್ಥಕಾವ್ಯಯವೂ ಮತ್ತು 'ಉಂ' ಎಂಬ ಸಂಬಂಧಾರ್ಥಕಾವ್ಯಯವೂ ಜೋಡಿಸಿವೆ (ಸಂಬಂಧಗೊಳಿಸಿವೆ).

(ii) ಎರಡು ಪದಗಳನ್ನು ಜೋಡಿಸುವಿಕೆ:–

**ಅವನು ಬರುವುದೂ (ಊ) ಬೇಡ; ಆ ಕೆಲಸವಾಗುವುದೂ (ಊ) ಬೇಡ.**

ಮೇಲಿನ ಉದಾಹರಣೆಯಲ್ಲಿ ಬರುವುದು+ಊ, ಆಗುವುದು+ಊ ಎಂಬಲ್ಲಿ '**ಊ**' ಬಂದಿರುವುದರಿಂದ ಎರಡೆರಡು ಪದಗಳನ್ನು ಜೋಡಿಸುವ ಈ '**ಊ**' ಕಾರವು ಪದಸಮುಚ್ಚಯವನ್ನು ಜೋಡಿಸಿದಂತಾಯಿತು.

(iii) **ಅವನು ಮತ್ತು ನೀನು ಇಬ್ಬರೂ ಹೋಗಿರಿ:**

ಇಲ್ಲಿ '**ಮತ್ತು**' ಎಂಬುದು **ಅವನು, ನೀನು** ಎಂಬೆರಡು ಪದಗಳನ್ನು ಸಂಬಂಧಗೊಳಿಸಿವೆ.

(iv) **ತಂದೆತಾಯಿಗಳ ಸೇವೆ ಮಾಡಬೇಕು ಮತ್ತು ಅವರ ಆಜ್ಞೆಯನ್ನು ಪಾಲಿಸಬೇಕು.**

ಇಲ್ಲಿ '**ಮತ್ತು**' ಎಂಬುದು ಎರಡು ವಾಕ್ಯಗಳನ್ನು ಸಂಬಂಧಗೊಳಿಸಿದೆ. ಇವುಗಳ ಹಾಗೆಯೆ ಉಳಿದ ಸಂಬಂಧಾರ್ಥಕಾವ್ಯಯಗಳ ಬಗೆಗೆ ಕೆಳಗಿನ ಉದಾಹರಣೆಗಳನ್ನು ನೋಡಿರಿ.

(v) (ಅ) **ಆದ್ದರಿಂದ**–ಅವನು ಬರಲಿಲ್ಲ **ಆದ್ದರಿಂದ** ನಾನು ಬರಲಿಲ್ಲ.

(ಆ) **ಆದರೆ**–ಮಳೆಬಂದಿತು **ಆದರೆ** ಕೆರೆ ತುಂಬಲಿಲ್ಲ.

(ಇ) **ಆದುದರಿಂದ**–ಅವನು ಬರಲಿಲ್ಲ **ಆದುದರಿಂದ** ಕೊಡಲಿಲ್ಲ.

(ಈ) **ಇನ್ನೂ**–ಹತ್ತು ಮೂಟೆ ಬಂತು, **ಇನ್ನೂ** ಐದು ಮೂಟೆ ಬರಬೇಕು.

(ಉ) **ಹಾಗಾದರೆ**–ನೀನು ಬರಬೇಕೆ? **ಹಾಗಾದರೆ** ಬೇಗ ಬಾ.

(ಊ) **ಅಥವಾ**–ಒಂದು ಮೂಟೆ ಅಕ್ಕಿ ಕೊಡು, **ಅಥವಾ** ನೂರಐವತ್ತು ರೂಪಾಯಿಕೊಡು.

(ಋ) **ಆಗ**–ನೀನು ಇಲ್ಲಿಗೆ ಬಾ, **ಆಗ** ಎಲ್ಲವೂ ಸರಿ ಹೋಗುತ್ತದೆ.

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದ ಅವ್ಯಯಗಳು ಎರಡು ವಾಕ್ಯಗಳನ್ನು ಸಂಬಂಧಗೊಳಿಸಿದ ಸಂಬಂಧಾರ್ಥಕಾವ್ಯಯಗಳೆಂದು ತಿಳಿಯಬೇಕು.

---

ಪ್ರತ್ಯಯಕ್ಕೂ ಮಧ್ಯದಲ್ಲಿ ಬರುವುದು. ಉದಾ: ರಾಮ+ಉಂ+ಅಂ=ರಾಮನಾಮಂ, ಭೀಮನಾಮಂ–ಇತ್ಯಾದಿ. ರಾಮನನ್ನೂ, ಭೀಮನನ್ನೂ ಎಂದು ಇವುಗಳ ಅರ್ಥ.

**(೬) ಕೃದಂತಾವ್ಯಯ:– (೭) ತದ್ಧಿತಾಂತವ್ಯಯ:–** ಈ ಎರಡೂ ಜಾತಿಯ ಅವ್ಯಯ ಪ್ರಭೇದಗಳನ್ನು ಕೃದಂತ ತದ್ಧಿತಾಂತ ಪ್ರಕರಣಗಳಲ್ಲಿ ವಿಶದವಾಗಿ ತಿಳಿದಿದ್ದೀರಿ. ಆ ಪ್ರಕರಣವನ್ನು ಪುನಃ ನೋಡಿ ಇವುಗಳ ವಿಷಯವಾಗಿ ಜ್ಞಾಪಿಸಿಕೊಳ್ಳಿರಿ.

**(೮) ಅವಧಾರಣಾರ್ಥಕಾವ್ಯಯ:–** ಒಂದು ನಿಶ್ಚಯಾರ್ಥದಲ್ಲಿ ಬರುವ ಅವ್ಯಯವೇ ಅವಧಾರಣಾರ್ಥಕಾವ್ಯಯ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯಿಸುವುದೇ ಅವಧಾರಣೆಯೆನಿಸುವುದು.

ಉದಾಹರಣೆಗೆ:

(i) **ಅದೇ ನನ್ನ ಪುಸ್ತಕ.**

ಈ ವಾಕ್ಯದಲ್ಲಿ (ಅದು+ಏ) ದಕಾರದ ಮುಂದಿರುವ '**ಏ**' ಕಾರವೇ ಅವಧಾರಣಾರ್ಥಕಾವ್ಯಯವೆನಿಸುವುದು. ಇದರಂತೆ–

(ii) **ನಾನೇ ಅದನ್ನು ಬರೆದೆನು.**

ಇಲ್ಲಿ (ನಾನು+ಏ) **ನಾನೇ** ಎಂದು ಬರವಣಿಗೆಯನ್ನು ಮಾಡಿದ ವಿಷಯದಲ್ಲಿ ನಿಶ್ಚಯಿಸಿ ಹೇಳುವುದರಿಂದ '**ಏ**' ಎಂಬುದು ಅವಧಾರಣಾರ್ಥಕಾವ್ಯಯವೆನಿಸಿತು.

## ಸಾರಾಂಶ

### ಅವ್ಯಯಗಳು

### (ಲಿಂಗ ವಚನ ವಿಭಕ್ತಿಗಳಿಂದ ವ್ಯತ್ಯಾಸವಾಗದ ಶಬ್ದರೂಪ)

### ಸಾಮಾನ್ಯವಾಗಿ ೮ ಬಗೆ

- **ಸಾಮಾನ್ಯಾವ್ಯಯ**
- **ಅನುಕರಣಾವ್ಯಯ**
- **ಭಾವಸೂಚಕಾವ್ಯಯ**
- **ಕ್ರಿಯಾರ್ಥಕಾವ್ಯಯ**
- **ಸಂಬಂಧಾರ್ಥಕಾವ್ಯಯ**
- **ಕೃದಂತಾವ್ಯಯ**
- **ತದ್ಧಿತಾಂತಾವ್ಯಯ**
- **ಅವಧಾರಣಾರ್ಥಕಾವ್ಯಯ**

* * * * *

## ಅಭ್ಯಾಸ ಪ್ರಶ್ನೆಗಳು

೧. (ಅ) ಅವ್ಯಯ ಎಂದರೇನು? ಅವ್ಯಯಗಳ ಪ್ರಭೇದ ತಿಳಿಸಿರಿ.
(ಆ) ಕೃದಂತಾವ್ಯಯ, ತದ್ಧಿತಾಂತಾವ್ಯಯಗಳೆಂದರೇನು? ವಿವರಿಸಿರಿ.
(ಇ) ಅನುಕರಣಾವ್ಯಯಗಳಾವುವು?
(ಈ) ಭಾವಸೂಚಕಾವ್ಯಯಗಳಾವುವು?

೨. ಈ ಕೆಳಗಣ ವಾಕ್ಯಗಳಲ್ಲಿ ಬಂದಿರುವ ಅನುಕರಣಾವ್ಯಯಗಳನ್ನು ಗುರುತಿಸಿರಿ.
(ಅ) ಹಾವು ಸರಸರ ಹರಿಯಿತು.
(ಆ) ಆಕಾಶದಲ್ಲಿ ಗುಡಗುಡು ಎಂದು ಗುಡುಗಿತು.
(ಇ) ಮನೆ ತಟತಟ ಸೋರುತ್ತದೆ.
(ಈ) ಕರಕರ ಹಲ್ಲು ಕಡಿದನು
(ಉ) ಬೆಂಕಿಯಲ್ಲಿ ಉಪ್ಪು ಚಟಚಟ ಸಿಡಿಯುವುದು.

೩. ಕೆಳಗಣ ವಾಕ್ಯಗಳಲ್ಲಿ ಬಂದಿರುವ ಭಾಸೂಚಕಾವ್ಯಯಗಳನ್ನು ಗುರುತಿಸಿರಿ.
(ಅ) ಅಯ್ಯೋ! ಶಂಕರನಿಗೆ ಕೇಡಾಯಿತೆ?
(ಆ) ಆಹಾ! ಎಂಥ ರಮ್ಯವಾದ ನೋಟವಿದು?
(ಇ) ಆ ದೃಶ್ಯವನ್ನು ನೆನೆಸಿಕೊಂಡರೆ ಅಬ್ಬಾ! ಎನಿಸುತ್ತದೆ.
(ಈ) ಲಕ್ಷ್ಮಣನು ಅಕ್ಕಟಾ! ಇನ್ನೇನು ಮಾಡಲೆಂದು ಹಲುಬಿದನು.
(ಉ) ಛೀ! ಅವನನ್ನು ಹೊಗಳಬೇಡ.

೪. ಕೆಳಗೆ ಬಂದಿರುವ ವಾಕ್ಯಗಳಲ್ಲಿನ ಸಾಮಾನ್ಯಾವ್ಯಯಗಳನ್ನೂ, ಕ್ರಿಯಾರ್ಥಕಾವ್ಯಯಗಳನ್ನೂ, ಅವಧಾರಣಾರ್ಥಕಾವ್ಯಯಗಳನ್ನೂ ಗುರುತಿಸಿರಿ.
(ಅ) ಅವನು ಆ ಪುಸ್ತಕವನ್ನೇ ಚೆನ್ನಾಗಿ ಓದಲಿಲ್ಲ.
(ಆ) ನೀನು ಸುಮ್ಮನೆ ಇಲ್ಲಿಯೇ ಇರು, ಅಲ್ಲಿಗೆ ಒಮ್ಮೆಲೇ ಹೋಗಬೇಡ.
(ಇ) ಆ ಮಾತಿಗೆ ತಟ್ಟನೆ ಉತ್ತರ ಕೊಡಲೇಬೇಡ.
(ಈ) ಮೆಲ್ಲಗೆ ಮಾತನಾಡುವುದನ್ನೇ ಅವನು ಕಲಿತಿಲ್ಲ.
(ಉ) ಆ ಬಳಿಕ ಬಂದವನು ರಾಮನೇ ಹೌದು.

೫. ಈ ಕೆಳಗಿನ ವಾಕ್ಯಗಳಲ್ಲಿ ಬಂದಿರುವ ಸಂಬಂಧಾರ್ಥಕಾವ್ಯಯಗಳನ್ನು ಗುರುತಿಸಿರಿ.
(ಅ) ಅವನೂ ಬರಲಿ; ನೀನೂ ಬಾ.
(ಆ) ಅವರಿಬ್ಬರೂ, ಒಟ್ಟಿಗೇ ಬರಲಿ.
(ಇ) ಶಂಕರ ಮತ್ತು ಅವನ ತಂಗಿ ಇಬ್ಬರೂ ಬಂದರು.
(ಈ) ನೀನು ಬರಬೇಕು ಆಗ ಎಲ್ಲ ಸರಿಹೋಗುವುದು.
(ಉ) ಅವನಿಗೆ ಅದು ಬೇಕಾಗಿಲ್ಲ, ಆದ್ದರಿಂದ ನಾವೂ ಕೊಡಲಿಲ್ಲ.

೬. ಕೆಳಗಿನ ವಾಕ್ಯಗಳಲ್ಲಿ ಬಂದಿರುವ ಕೃದಂತಾವ್ಯಯ, ತದ್ಧಿತಾಂತಾವ್ಯಯಗಳನ್ನು ಗುರುತಿಸಿರಿ.
(ಅ) ಅವನಂತೆ ವರ್ಣಿಸುವವರಾರು?
(ಆ) ಅವನ ಹಾಗೆ ನೀನೂ ಪ್ರಯತ್ನಿಸು.

(ಇ) ನೀನು ಹೋದರೆ ಮಾತ್ರ ಸಾಧ್ಯ.

(ಈ) ಆ ಕಾರ್ಯಮಾಡಲಿಕ್ಕೆ ಇವನಂತೆ ಬೇರೊಬ್ಬ ಸಮರ್ಥನಿಲ್ಲ.

(ಉ) ಊರತನಕ ಬಂದು ಕಳಿಸಿದರೆ ಸಾಕು.

೭. ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಮುಂದೆ ಆವರಣದಲ್ಲಿ ಕೊಟ್ಟಿರುವ ಒಂದು ಸರಿ ಉತ್ತರ ಬರೆಯಿರಿ.

(ಆ) ______ ನಮಗೆ ತೊಂದರೆ ಕೊಡುವುದು ಸರಿಯಲ್ಲ.
(ಸುಮ್ಮನೆ, ನೆಟ್ಟಗೆ, ಕಮ್ಮಗೆ)

(ಆ) ಈ ಹೂವನ್ನು ದೇವರ ಪೂಜೆಗೆ ಉಪಯೋಗಿಸು ___ ಮಕ್ಕಳಿಗಾದರೂ ಕೊಡು.
(ಮತ್ತು, ಆದರೆ, ಅಥವಾ)

(ಇ) ಮಳೆಯೇನೋ ಬಂದಿತು ______ ಕೆರೆ ತುಂಬಲಿಲ್ಲ.
(ಆದ್ದರಿಂದ, ಆದುದರಿಂದ, ಆದರೆ)

(ಈ) ಗುಡಿಸಲಿಗೆ ಬೆಂಕಿಬಿತ್ತು _______ ಅಗ್ನಿಶಾಮಕದಳದವರು ಆರಿಸಿದರು.
(ಮೆಲ್ಲಗೆ, ನೆಟ್ಟಗೆ, ಕೂಡಲೆ)

(ಉ) ವಿದ್ಯಾರ್ಥಿಗಳು ________ ಉಪಾಧ್ಯಾಯರು ಸೇರಿ ಈ ಶಾಲೆ ಕಟ್ಟಿದರು.
(ಮತ್ತು, ಅಥವಾ, ಆದ್ದರಿಂದ)

* * * * *

# ಅಧ್ಯಾಯ ೯

# ವಾಕ್ಯಗಳು

ನಾವು ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಇತರರಿಗೆ ಮಾತುಗಳ ಮೂಲಕ ತಿಳಿಯಪಡಿಸುತ್ತೇವೆ. ಅಥವಾ ಬರೆವಣಿಗೆಯಿಂದ ತಿಳಿಯಪಡಿಸುತ್ತೇವೆ.

(೧) **ಮಗುವು ಓಡಿತು.**

(೨) **ದೇವರು ಲೋಕವನ್ನು ಕಾಪಾಡುವನು.**

(೩) **ಭೀಮನಿಂದ ಬಕಾಸುರನು ಕೊಲ್ಲಲ್ಪಟ್ಟನು.**

ಹೀಗೆ ಮೇಲೆ ಹೇಳಿರುವ ವಾಕ್ಯಗಳೆಲ್ಲ ಒಂದು ಸಂಪೂರ್ಣಾರ್ಥವನ್ನು ಕೊಡತಕ್ಕವುಗಳು. ಈ ವಾಕ್ಯಗಳಲ್ಲಿ ಒಂದೊಂದು ಪದವು ಇಲ್ಲದಿದ್ದರೂ ಅರ್ಥವು ಪೂರ್ಣವಾಗದೆ ಪುನಃ ಪ್ರಶ್ನೆ ಮಾಡಬೇಕಾಗುತ್ತದೆ.

(೧) **ಓಡಿತು:–** ಹೀಗೆ ಒಂದೇ ಕ್ರಿಯಾಪದ ಹೇಳಿದಾಗ ಓಡಿದುದು ಯಾವುದು? ಎಂಬ ಪ್ರಶ್ನೆ ಬಂದೇ ಬರುತ್ತದೆ. ಪೂರ್ಣಾರ್ಥವು ಈ ಒಂದೇ ಪದದಿಂದ ಆಗದು. ಆದ್ದರಿಂದ ಅದನ್ನು ವಾಕ್ಯವೆನ್ನಲಾಗುವುದಿಲ್ಲ.

(೨) **ದೇವರು ಲೋಕವನ್ನು:–** ಹೀಗೆ ಕರ್ತೃ ಕರ್ಮ ಎರಡನ್ನೇ ಹೇಳಿದಾಗ, ದೇವರು ಲೋಕವನ್ನು ಏನು ಮಾಡಿದನು? ಎಂಬ ಪ್ರಶ್ನೆ ಏಳುವುದು. ಆಗ ಕ್ರಿಯಾಪದ ಬೇಕೇ ಬೇಕಾಗುವುದು.

(೩) **ಭೀಮನಿಂದ ಕೊಲ್ಲಲ್ಪಟ್ಟನು:–** ಎಂದಾಗ ಕೊಲ್ಲಲ್ಪಟ್ಟವನಾರು? ಎಂಬ ಕರ್ಮಪದದ ಬಗೆಗೆ ಪ್ರಶ್ನೆ ಎದ್ದೇ ಏಳುತ್ತದೆ. ಹಾಗಾದರೆ ವಾಕ್ಯವೆಂದರೆ, ಕರ್ತೃ, ಕರ್ಮ, ಕ್ರಿಯಾಪದಗಳಿಂದ ಕೂಡಿದ ಪದ ಸಮೂಹವೆಂದಹಾಗಾಯಿತು. ಆದರೆ ಕೆಲವು ವಾಕ್ಯಗಳಲ್ಲಿ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಕ್ರಿಯಾ ಪದವೇ ಕರ್ಮವನ್ನು ಅಪೇಕ್ಷಿಸುವುದಿಲ್ಲ. 'ಮಗು ಓಡಿತು' ಎಂಬಲ್ಲಿ ಕರ್ಮಪದದ ಅರ್ಥವಿಲ್ಲ.

(೧) ಚಿಕ್ಕಮಗುವು ಹಾಡುತ್ತಾ ಕುಣಿಯುತ್ತಾ ಓಡಿತು.

(೨) ಮಹಾಶಕ್ತನಾದ ದೇವರು ಸಮಸ್ತ ಲೋಕಗಳನ್ನು ಪ್ರೀತಿಯಿಂದ ಕಾಪಾಡುವನು.

(೩) ಮಹಾಶೂರನಾದ ಭೀಮನಿಂದ ದುಷ್ಟನಾದ ಬಕನು ಪೂರ್ವಕಾಲದಲ್ಲಿ ಕೊಲ್ಲಲ್ಪಟ್ಟನು.

ಮೊದಲು ಹೇಳಿದ ಮೂರು ವಾಕ್ಯಗಳಲ್ಲಿ ಇನ್ನೂ ಕೆಲವು ಹೊಸಪದ ಸೇರಿಸಿ ವಾಕ್ಯ ಮಾಡಲಾಗಿದೆ. ಮೊದಲ ಸಲ–

'ಮಗು ಓಡಿತು' ಇಷ್ಟೇ ಹೇಳಿತ್ತು. ಈಗ ಚಿಕ್ಕ ಮಗುವು ಹಾಡುತ್ತ ಕುಣಿಯುತ್ತ ಓಡಿತು.

ಇಲ್ಲಿ– (i) **ಮಗುವು–ಚಿಕ್ಕಮಗು**

(ii) **ಓಡಿದುದು–ಹಾಡುತ್ತ, ಕುಣಿಯುತ್ತ.**

ಹಾಗಾದರೆ ಮಗು ಎಂಬ ಕರ್ತೃಪದಕ್ಕೆ 'ಚಿಕ್ಕಮಗು' ಎಂಬುದೂ, 'ಓಡಿತು' ಎಂಬುದಕ್ಕೆ ಹಾಡುತ್ತ, ಕುಣಿಯುತ್ತ, ಎಂಬುವೂ ವಿಶೇಷಣಗಳು.

**(95) ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಂದ ಅವುಗಳ ವಿಶೇಷಣಗಳಿಂದ ಕ್ರಮವಾಗಿ ಬರೆದ ಪದಸಮೂಹವೇ ವಾಕ್ಯವೆನಿಸುವುದು.**

**ಅನೇಕ ವಾಕ್ಯಗಳನ್ನು ಪರಸ್ಪರ ಸಂಬಂಧವುಂಟಾಗುವಂತೆ ಜೋಡಿಸುವುದೇ ವಾಕ್ಯರಚನೆ ಎನಿಸುವುದು.**

## I – ಅನ್ವಯಾನುಕ್ರಮ

ವಾಕ್ಯದಲ್ಲಿ ಕರ್ತೃಪದ ಮೊದಲು, ಕರ್ಮಪದ ಅನಂತರ, ಕ್ರಿಯಾಪದ ಕೊನೆಯಲ್ಲಿ ಬರುತ್ತದೆ. ವಿಶೇಷಣಗಳು ಆಯಾಯ ಪದಗಳ ಹಿಂದೆ ಇರುತ್ತವೆ. ಇದು ಸಾಮಾನ್ಯ ನಿಯಮ.

ಉದಾಹರಣೆಗೆ:

**"ಮಹಾಶೂರನಾದ ಶ್ರೀ ರಾಮಚಂದ್ರನು ದುಷ್ಟನಾದ ರಾವಣನನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದನು**".

ಇಲ್ಲಿ– ಶ್ರೀರಾಮಚಂದ್ರನು – **ಕರ್ತೃ**
ರಾವಣನನ್ನು – **ಕರ್ಮ**
ಕೊಂದನು – **ಕ್ರಿಯಾಪದ**

ಮೊದಲು ಕರ್ತೃಪದ; ಅದರ ಹಿಂದೆ ಆ ಕರ್ತೃಪದಕ್ಕೆ ವಿಶೇಷಣವಾದ 'ಮಹಾಶೂರನಾದ' ಎಂಬ ವಿಶೇಷಣ, ಅನಂತರ ಕರ್ಮಪದ, ಅದರ ಹಿಂದೆ ಅದರ ವಿಶೇಷಣವಾದ 'ದುಷ್ಟನಾದ' ಎಂಬ ವಿಶೇಷಣ[88]. ಅನಂತರ ಕ್ರಿಯಾಪದ; ಅದರ ಹಿಂದೆ ಯಾವ ಸಾಧನದಿಂದ ಕೊಂದನೋ ಆ ಸಾಧನವೇ ಕ್ರಿಯಾವಿಶೇಷಣವಾಗಿ ಕ್ರಿಯಾಪದದ ಹಿಂದೆ ಬಂದಿದೆ.

ಈ ಅನ್ವಯಾನುಕ್ರಮವೂ ವ್ಯತ್ಯಾಸವಾಗಿ ಹೀಗೆಯೂ ಆಗಬಹುದು–

**"ದುಷ್ಟನಾದ ರಾವಣನನ್ನು, ತೀಕ್ಷ್ಣವಾದ ಬಾಣಗಳಿಂದ ಮಹಾಶೂರನಾದ, ಶ್ರೀರಾಮಚಂದ್ರನು ಕೊಂದನು**".

ಇಲ್ಲಿ ಮೊದಲು ಕರ್ಮಪದ ಮತ್ತು ಅದರ ವಿಶೇಷಣ, ಅನಂತರ ಕ್ರಿಯೆಗೆ ಸಾಧನವಾದ ಬಾಣಗಳಿಂದ ಎಂಬಪದ; ಅನಂತರ ಮಹಾಶೂರನಾದ ರಾಮನು ಎಂಬ ಕರ್ತೃಪದ ಮತ್ತು ಅದರ ವಿಶೇಷಣ; ಕೊನೆಯಲ್ಲಿ ಕ್ರಿಯಾಪದ. ಹೀಗೆ ಅನನ್ವಯವಾಗಿಯೂ ಇರುವುದುಂಟು. ಪದ್ಯಗಳಲ್ಲಿ ಈ ರೀತಿಯು ವಿಶೇಷವಾಗಿ ಬರುತ್ತದೆ. ಏಕೆಂದರೆ ಅವರು (ಪದ್ಯ ಬರೆಯುವವರು) ಪ್ರಾಸ, ಛಂದಸ್ಸು, ಗಣ–ಇತ್ಯಾದಿಗಳನ್ನು ಪಾಲಿಸುವುದಕ್ಕೋಸುಗ ಕರ್ತೃ,

---

[88] ಕೆಲವು ಸಂದರ್ಭದಲ್ಲಿ, ಈ ವಿಶೇಷಣಗಳು ವಿಶೇಷ್ಯದ ಮುಂದೆಯೂ ಬರುವುದುಂಟು.

ಕರ್ಮ, ಕ್ರಿಯಾಪದಗಳನ್ನು ಕ್ರಮವಾಗಿ ಬರೆದಿರುವುದಿಲ್ಲ. ನಾವು ಆ ಪದ್ಯಕ್ಕೆ ಅರ್ಥ ಹೇಳುವಾಗ ಅನ್ವಯಕ್ರಮದಲ್ಲಿಯೇ ಹೇಳಬೇಕಾಗುವುದು. ಅಂದರೆ ಮೊದಲು ಕರ್ತೃಪದವನ್ನು ಆ ಪದ್ಯದಲ್ಲಿ ಹುಡುಕಿ, ಅನಂತರ ಕರ್ಮಪದ ಹುಡುಕಿ, ಕೊನೆಗೆ ಕ್ರಿಯಾಪದದ ಅರ್ಥ ಹೇಳಬೇಕು. ಹೀಗೆ ಪದ್ಯಕ್ಕೆ ಅರ್ಥ ಹೇಳುವುದನ್ನೇ ಅನ್ವಯಾನುಕ್ರಮದಲ್ಲಿ ಅರ್ಥ ವಿವರಣೆ ಮಾಡುವುದು ಎಂದು ಹೆಸರು. ಉದಾಹರಣೆಗೆ–

**"ಮಾಡಿಕೊಂಡನು ಪರಮ ಪುರುಷನಕೂಡ ತೋಟಿಯ ಸಿದ್ಧರಾಮನು"**

ಇಲ್ಲಿ ಕ್ರಿಯಾಪದ 'ಮಾಡಿಕೊಂಡನು' ಎಂಬುದು. ಇದು ಮೊದಲೇ ಬಂದಿದೆ. 'ಮಾಡಿಕೊಂಡನು' ಎಂಬುದಕ್ಕೆ 'ಯಾರು' ಎಂದು ಪ್ರಶ್ನೆಮಾಡಿದರೆ 'ಸಿದ್ಧರಾಮನು' ಎಂಬ ಕರ್ತೃಪದ ಬರುವುದು. 'ಏನನ್ನು ಮಾಡಿಕೊಂಡನು' ಎಂದು ಪ್ರಶ್ನಿಸಿದಾಗ 'ತೋಟಿಯನು[89]' ಎಂಬ ಕರ್ಮಪದ ಬರುವುದು. ಹಾಗಾದರೆ ವಾಕ್ಯದಲ್ಲಿ–

'**ಸಿದ್ಧರಾಮನು ತೋಟಿಯನ್ನು ಮಾಡಿಕೊಂಡನು**' ಹೀಗೆ ಕರ್ತೃ ಕರ್ಮ ಕ್ರಿಯಾಪದಗಳು ಕ್ರಮವಾಗಿ ಬರುವಂತೆ ಅರ್ಥ ಹೇಳುವುದೇ ಅನ್ವಯಾನುಕ್ರಮವೆನಿಸುವುದು. ಇವುಗಳಿಗೆ ವಿಶೇಷಣಗಳೇನಾದರೂ ಇವೆಯೇ ನೋಡಬೇಕು. ಕರ್ತೃವಿಗಾಗಲೀ ಕರ್ಮಕ್ಕಾಗಲಿ ಇಲ್ಲಿ ವಿಶೇಷಣಗಳು ಇಲ್ಲ. '**ಮಾಡಿಕೊಂಡನು**' ಎಂಬ ಕ್ರಿಯಾಪದಕ್ಕೆ '**ಪರಮಪುರುಷನಕೂಡ**' ಎಂಬ ಪದಸಮುಚ್ಚಯವು ವಿಶೇಷಣವಾಗಿದೆ. ಹೀಗೆ ಅನನ್ವಯವಾಗಿರುವ ವಾಕ್ಯಗಳನ್ನು ಅನ್ವಯಾನುಕ್ರಮದಲ್ಲಿ ಅರ್ಥ ಹೇಳಬೇಕಾದುದನ್ನು ಮುಖ್ಯವಾಗಿ ಗಮನಿಸಬೇಕಾಗುವುದು.

## II – ಆಧ್ಯಾಹಾರ

ವಾಕ್ಯ ಅರ್ಥವತ್ತಾಗಿರಬೇಕಾದರೆ ಕರ್ತೃ ಕರ್ಮ ಕ್ರಿಯಾಪದಗಳಿರಬೇಕೆಂದೂ ಕೆಲವು ಕಡೆ ಕರ್ಮಪದವಿರುವುದಿಲ್ಲವೆಂದೂ ಈ ಹಿಂದೆ ತಿಳಿದಿದ್ದೀರಿ. ಆದರೆ ಕೆಲವು ಕಡೆ ಕ್ರಿಯಾಪದ ಮತ್ತು ಕರ್ತೃಪದಗಳಿಲ್ಲದೆಯೇ ವಾಕ್ಯಗಳಿರುವುದುಂಟು.

ಉದಾಹರಣೆಗೆ:

(i) X[90] **ಈಗ ಬಂದನು** (ಇಲ್ಲಿ ಕರ್ತೃಪದವಿಲ್ಲ)

ಎಂಬಲ್ಲಿ '**ಬಂದನು**' ಎಂಬ ಒಂದು ಕ್ರಿಯಾಪದ ಮಾತ್ರ ಇದೆ. '**ಯಾರು?**' ಎಂದು ಪ್ರಶ್ನಿಸಿದಾಗ ಬಂದನು ಎಂಬುದು ಪುಲ್ಲಿಂಗವಾಗಿರುವುದರಿಂದ '**ಅವನು**' – '**ಆತನು**' ಎಂಬ ಯಾವುದಾದರೂ ಒಂದು ಪದವನ್ನು '**ಆಧ್ಯಾಹಾರ**' ಮಾಡಬೇಕಾಗುವುದು.

---

89 'ತೋಟಿಯನು' ಎಂಬ ಪ್ರಯೋಗವನ್ನು 'ತೋಟಿಯನ್ನು' ಎಂಬ ಪದಕ್ಕೆ ಪ್ರತಿಯಾಗಿ ನಡುಗನ್ನಡದಲ್ಲಿ ಉಪಯೋಗಿಸುವುದುಂಟು. ಇಲ್ಲಿ ದ್ವಿತೀಯಾವಿಭಕ್ತಿ 'ಅನು' ಎಂದು ತಿಳಿಯಬೇಕು.

90 ಇಲ್ಲದಿರುವ ಪದದ ಸ್ಥಳದಲ್ಲಿ X ಗುರುತು ಮಾಡಲಾಗಿದೆ. ಅಲ್ಲಿ ವಾಕ್ಯದಲ್ಲಿರುವ ಇತರ ಪದಗಳ ಆಧಾರದ ಮೇಲೆ ಇರಬೇಕಾದ ಪದವನ್ನು ಊಹಿಸಿ ಹೇಳಬೇಕು.

(ii) **ಹುಡುಗನು ಬುದ್ಧಿವಂತ** X

ಇಲ್ಲಿ ಕ್ರಿಯಾಪದವೇ ಇಲ್ಲ. ಹುಡುಗನು, ಬದ್ಧಿವಂತ, ಈ ಎರಡು ಪದಗಳ ಆಧಾರದ ಮೇಲೆ ಪುಲ್ಲಿಂಗವನ್ನು ಹೇಳುವ ಕ್ರಿಯಾಪದವಿರಬೇಕೆಂದು ಊಹಿಸಿ 'ಆಗಿದ್ದಾನೆ, ಆಗುತ್ತಾನೆ, ಆದನು'–ಎಂಬ ಏಕವಚನಾಂತವಾದ ಕ್ರಿಯಾಪದವನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ 'ಆಧ್ಯಾಹಾರ' ಮಾಡಬೇಕು.

(iii) **ಅವನು** X **ತಿಂದನು**

ಇಲ್ಲಿ ಕರ್ತೃಪದವಿದೆ, ಕ್ರಿಯಾಪದವಿದೆ. ತಿಂದನು ಎಂಬ ಕ್ರಿಯಾಪದ ಸಕರ್ಮಕವಾದ್ದರಿಂದ ಕರ್ಮಪದ ಬೇಕೇಬೇಕು. ಆಗ ಈ ವಾಕ್ಯ ಬಂದ ಸಂದರ್ಭವನ್ನು ತಿಳಿದು ಅನ್ನವನ್ನು, ತಿಂಡಿಯನ್ನು, ಹಣ್ಣನ್ನು ...... ಇತ್ಯಾದಿಯಾದ ಒಂದು ಪದವನ್ನು ಊಹಿಸಿ ಹೇಳಲೇಬೇಕಾಗುವುದು. ಆದರೆ ಕರ್ಮಪದಗಳ ಆಧ್ಯಾಹಾರ ತೀರ ಕಡಿಮೆ. ಕರ್ತೃಪದ ಕ್ರಿಯಾಪದಗಳ ಆಧ್ಯಾಹಾರದ ಸಂದರ್ಭ ವಿಶೇಷವಾಗಿ ಬರುತ್ತದೆ.

**(96) ವಾಕ್ಯದಲ್ಲಿ ಬಿಟ್ಟುಹೋಗಿರುವ ಪದಗಳನ್ನು ವಾಕ್ಯಾರ್ಥದ ಪೂರ್ತಿಗಾಗಿ ಇರುವ ಪದಗಳ ಆಧಾರದಿಂದ ಊಹಿಸಿಕೊಂಡು ಸೇರಿಸುವುದೇ 'ಆಧ್ಯಾಹಾರ' ವೆನಿಸುವುದು.**

ಉದಾಹರಣೆಗೆ:

(i) **ಕರ್ತೃಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

(೧) X ಈಗ ಹೋದನು **(ಅವನು)**

(೨) X ನಾಳೆ ಬರುತ್ತೇನೆ **(ನಾನು)**

(೩) X ಮೊನ್ನೆ ಬಂದನು **(ಅವನು)**

(೪) X ಒಂದು ತಿಂಗಳ ನಂತರ ಹೋಗೋಣ (ನಾವು)

(ii) **ಕರ್ಮಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

ಈಗತಾನೆ X ಅವನು ತಿಂದನು

(ಇಲ್ಲಿ **ಹಣ್ಣನ್ನು, ತಿಂಡಿಯನ್ನು**–ಇತ್ಯಾದಿ ಸಂದರ್ಭಕ್ಕೆ ಅನುಗುಣವಾಗಿ ಆಧ್ಯಾಹಾರ ಪದವನ್ನು ಊಹಿಸಬೇಕು)

(iii) **ಕ್ರಿಯಾಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

(೧) ಅವರ ಮನೆ ಎಲ್ಲಿ X ? **(ಇದೆ)**

(೨) ನಿನ್ನೆ ಕೊಟ್ಟ ಪುಸ್ತಕವೆಲ್ಲಿ X ? **(ಇದೆ)**

(೩) ನಾನು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ X **(ಆಗಿದ್ದೇನೆ)**

(೪) ಅದು ಬಹು ದೊಡ್ಡ ವಿಚಾರ X **(ಆಗಿದೆ)**

(೫) ಎಲ್ಲವೂ ತನಗೇ X ಎಂದನು **(ಬೇಕು)**

(೬) ನನಗೆ ಐವರು ಪುತ್ರರು X **(ಇರುವರು)**

(೭) ಈತನೇ ಹಿರಿಯಮಗ X **(ಆಗಿದ್ದಾನೆ)**

(೮) ಅಲ್ಲಿ ಆಡುವವಳೇ ನನ್ನ ಮಗಳು X **(ಆಗಿದ್ದಾಳೆ)**

(೯) ರಾಮ ಬಂದನು, ಭೀಮನೂ ಕೂಡ X (**ಬಂದನು**)

ಹೀಗೆ ವಾಕ್ಯಗಳಲ್ಲಿ ಬಿಟ್ಟು ಹೋಗಿರುವ ಪದಗಳನ್ನು ಅಲ್ಲಿರುವ **ಇತರ ಪದಗಳ ಸಹಾಯದಿಂದ ಊಹಿಸಿ ಹೇಳುವುದೇ ಆಧ್ಯಾಹಾರವೆಂದ ಹಾಗಾಯಿತು.**

# III – ವಾಕ್ಯಗಳ ಪ್ರಕಾರಗಳು

## ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಮಿಶ್ರವಾಕ್ಯಗಳು

ಇದುವರೆಗೆ ವಾಕ್ಯವೆಂದರೇನು? ವಾಕ್ಯದಲ್ಲಿ ಅನ್ವಯಾನುಕ್ರಮ, ಆಧ್ಯಾಹಾರಗಳೆಂದರೇನು? ಎಂಬ ಬಗೆಗೆ ಸ್ಥೂಲವಾಗಿ ಕೆಲವು ವಿಷಯ ತಿಳಿದಿರುವಿರಿ. ಈಗ ವಾಕ್ಯಗಳಲ್ಲಿ ಮೂರು ರೀತಿಯ ಪ್ರಧಾನವಾದ ಭೇದಗಳನ್ನು ಮಾತ್ರ ತಿಳಿದರೆ ಸಾಕು.

## (೧) ಸಾಮಾನ್ಯ ವಾಕ್ಯ

ಈ ಕೆಳಗಿನ ವಾಕ್ಯಗಳನ್ನು ನೋಡಿರಿ.

(ಅ) ಖಾನದೇಶವು ಮಲೇರಿಯಾದ ತವರೂರಾಗಿತ್ತು.

(ಆ) ಖಾನದೇಶದಲ್ಲಿ ವಿಶ್ವೇಶ್ವರಯ್ಯನವರು ಮಲೇರಿಯಾ ಬೇನೆಯಿಂದ ಬಳಲಿದರು.

(ಇ) ವಿಶ್ವೇಶ್ವರಯ್ಯನವರು ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ವರ್ಗಕ್ಕೆ ಅರ್ಜಿ ಹಾಕಿದರು.

(ಈ) ವಿಶ್ವೇಶ್ವರಯ್ಯನವರನ್ನು ರಸ್ತೆ ಮತ್ತು ಕಟ್ಟಡಗಳ ಮೇಲ್ವಿಚಾರಣೆಯ ವಿಭಾಗಕ್ಕೆ ವರ್ಗ ಮಾಡಿದರು.

ಈ ನಾಲ್ಕೂ ವಾಕ್ಯಗಳೂ ಒಂದೊಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರ ವಾಕ್ಯಗಳಾಗಿವೆ.

**(97) ಒಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳೆನಿಸುವುವು.**

**ಸಾಮಾನ್ಯ ವಾಕ್ಯದಲ್ಲಿ ಕ್ರಿಯಾಪದವು ಒಂದು ಮಾತ್ರ ಇರಬೇಕು. ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು. ಈ ಕೆಳಗೆ ಸಾಪೇಕ್ಷ ಕ್ರಿಯಾರೂಪಗಳಿಂದ ಕೂಡಿ, ಒಂದೇ ಕ್ರಿಯಾಪದದಿಂದ ಪೂರ್ಣಗೊಂಡ ಸಾಮಾನ್ಯ ವಾಕ್ಯ ನೋಡಿರಿ.**

"ಖಾನದೇಶವು ಮಲೇರಿಯಾದಿಂದ ಕೂಡಿ, ವಿಶ್ವೇಶ್ವರಯ್ಯನವರ ಆರೋಗ್ಯದ ಮೇಲೆ ದುಷ್ಪರಿಣಾಮ ಮಾಡಿ, ಅವರು ಅಲ್ಲಿಂದ ವರ್ಗವಾಗುವಂತೆ ಮಾಡಿತು".

ಇಲ್ಲಿ '**ಮಾಡಿತು**' ಎಂಬ ಒಂದೇ ಕ್ರಿಯಾಪದವಿದ್ದು '**ಕೂಡಿ, ಮಾಡಿ**' ಎಂಬ ಸಾಪೇಕ್ಷ ಕ್ರಿಯೆಗಳು ಮಧ್ಯದಲ್ಲಿ ಬಂದಿವೆ.

## (೨) ಸಂಯೋಜಿತ ವಾಕ್ಯ

"ಖಾನದೇಶವು ಮಲೇರಿಯಾದ ತವರೂರೆನಿಸಿತ್ತು; ಆದ್ದರಿಂದ ವಿಶ್ವೇಶ್ವರಯ್ಯನವರೂ ಅಲ್ಲಿ ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದಲೇ ಅವರು ಅಲ್ಲಿಂದ ವರ್ಗ ಮಾಡಿಸಿಕೊಂಡರು".

ಮೇಲಿನ ಈ ವಾಕ್ಯ ಸಮೂಹದಲ್ಲಿ ಬೇರೆ ಬೇರೆ ಮೂರು ವಾಕ್ಯಗಳಿವೆ. ಆದರೆ ಆ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. ಹೀಗೆ–

**(98) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ, ಅದು ಸಂಯೋಜಿತ ವಾಕ್ಯವೆನಿಸಿಕೊಳ್ಳುವುದು.**

ಉದಾಹರಣೆಗೆ:

ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನವನ್ನು ಹೊಕ್ಕಿತು; ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು.

ಇಲ್ಲಿ–

(i) ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನ ವನ್ನು ಹೊಕ್ಕಿತು.

(ii) ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು.

(iii) ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು.

ಈ ಮೂರು ಸ್ವತಂತ್ರ ಕ್ರಿಯಾಪದವುಳ್ಳ ವಾಕ್ಯಗಳು ಒಂದಕ್ಕೊಂದು '**ಆಗ**' '**ಆದ್ದರಿಂದ**' –ಎಂಬ ಶಬ್ದಗಳ ಸಂಬಂಧದಿಂದ ಒಂದು ಅಭಿಪ್ರಾಯವನ್ನು ಪೂರ್ಣ ಹೇಳುವ **ಸಂಯೋಜಿತ** ವಾಕ್ಯವೆನಿಸಿದೆ.

## (೩) ಮಿಶ್ರವಾಕ್ಯ

**(ಅ) ನಮ್ಮ ಪರೀಕ್ಷೆ ಮುಗಿಯಿತೆಂದು, ತಂದೆಗೆ ಮಗನು ತಿಳಿಸಿದನು.**

ಇಲ್ಲಿ ಪ್ರಧಾನ ಕ್ರಿಯಾಪದ 'ತಿಳಿಸಿದನು' ಎಂಬುದು, 'ನಮ್ಮ ಪರೀಕ್ಷೆ ಮುಗಿಯಿತು ಎಂದು' ಎಂಬ ಈ ಉಪವಾಕ್ಯವೇ 'ತಿಳಿಸಿದನು' ಎಂಬ ಕ್ರಿಯಾಪದದ ಕರ್ಮವಾಯಿತು.

**(ಆ) ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತೆಂಬುದನ್ನು ಅವನಿಂದಲೇ ಕೇಳಿದೆನು.**

ಇಲ್ಲಿ 'ಕೇಳಿದೆನು' ಎಂಬ ಕ್ರಿಯಾಪದವು ಪ್ರಧಾನ ಕ್ರಿಯಾಪದ. ಈ ಕ್ರಿಯಾಪದಕ್ಕೆ ಮೊದಲನೆಯ ವಾಕ್ಯವಾದ 'ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತು ಎಂಬುದನ್ನು' ಎಂಬುದು

ಕರ್ಮವಾಗಿ ಅಧೀನ ವಾಕ್ಯವೆನಿಸಿದೆ. 'ಕೇಳಿದೆನು' ಎಂಬ ಕ್ರಿಯಾಪದದ ಕರ್ತೃವು ಇಲ್ಲಿ ಹೇಳಲ್ಪಟ್ಟಿಲ್ಲ. 'ನಾನು' ಎಂದು ಆಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಇಂಥ–

**(99) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯವೆನ್ನುತ್ತೇವೆ.**

ಉದಾಹರಣೆಗೆ:

**ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ, ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಬಹುವಾಗಿ ಮರುಗಿದರು.**

ಇಲ್ಲಿ 'ಬಹುವಾಗಿ ಮರುಗಿದರು' ಎಂಬ ಪ್ರಧಾನ ವಾಕ್ಯಕ್ಕೆ – (೧) ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು. (೨) ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ. ಎಂಬ ವಾಕ್ಯಗಳು ಉಪವಾಕ್ಯಗಳೆನಿಸಿ ಇದು ಮಿಶ್ರವಾಕ್ಯವೆನಿಸಿದೆ.

# IV – ವಾಕ್ಯವಿಭಜನೆ

ಇದುವರೆಗೆ–ಸಾಮಾನ್ಯ ವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯಗಳ ಸಾಮಾನ್ಯ ಪರಿಚಯ ಮಾಡಿಕೊಂಡಿರಿ. ಒಂದೊಂದು ವಾಕ್ಯದಲ್ಲೂ ಕರ್ತೃ, ಕರ್ಮ (ಸಕರ್ಮಕ ಧಾತುವಾಗಿದ್ದರೆ ಮಾತ್ರ), ಕ್ರಿಯಾಪದಗಳು ಮುಖ್ಯವಾಗಿರಬೇಕು. ಒಮ್ಮೊಮ್ಮೆ ವಾಕ್ಯದಲ್ಲಿ ಈ ಪದಗಳಲ್ಲಿ ಯಾವುದಾದರೂ ಒಂದು ಪದವಿರದಿದ್ದರೆ, ಸಂದರ್ಭ ಮತ್ತು ಇರುವ ಪದಗಳ ಅರ್ಥದ ಸಹಾಯದಿಂದ ಇರಬೇಕಾದ ಪದದ ಆಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಹೀಗಿರುವ ಕರ್ತೃ, ಕರ್ಮ, ಕ್ರಿಯೆಗಳಿಂದ ಕೂಡಿದ ವಾಕ್ಯದಲ್ಲಿ ಕರ್ತೃವಿಗೂ ಕರ್ಮಕ್ಕೂ, ಕ್ರಿಯಾಪದಕ್ಕೂ ವಿಶೇಷಣ ಪದಗಳೂ ಇರುತ್ತವೆ. ಉದಾಹರಣೆಗೆ–

**ದೊಡ್ಡ ದೊಡ್ಡ ಮಕ್ಕಳು ತಂದೆ ತಾಯಿಗಳ ಕಾರ್ಯದಲ್ಲಿ ತಮ್ಮ ಕೈಲಾದ ಸಹಾಯುವನ್ನು ಅವಶ್ಯವಾಗಿ ಮಾಡಲೇಬೇಕು.**

ಈ ವಾಕ್ಯದಲ್ಲಿ 'ಮಾಡಲೇಬೇಕು'–ಎಂಬುದೇ ಕ್ರಿಯಾಪದ. 'ಮಕ್ಕಳು'–ಕರ್ತೃ, 'ಸಹಾಯವನ್ನು'–ಕರ್ಮ. ಅಂದರೆ 'ಮಕ್ಕಳು ಸಹಾಯವನ್ನು ಮಾಡಲೇಬೇಕು' ಎಂಬ ಈ ಮೂರು ಪದಗಳು ಕ್ರಮವಾಗಿ ಕರ್ತೃ, ಕರ್ಮ, ಕ್ರಿಯೆಗಳಾದರೆ–ಇವುಗಳಿಗೆ ಒಂದೊಂದಕ್ಕೂ ವಿಶೇಷಣ ಪದಗಳಿವೆ.

(i) **ಮಕ್ಕಳು**–ಎಂಬುದಕ್ಕೆ 'ದೊಡ್ಡ ದೊಡ್ಡ' ಎಂಬಿವು ವಿಶೇಷಣಗಳು.

(ii) **ಸಹಾಯವನ್ನು**–ಎಂಬುದಕ್ಕೆ ತಂದೆ ತಾಯಿಗಳ ಕಾರ್ಯದಲ್ಲಿ ಎಂಬ ಪದಗಳೂ,

(iii) **ಮಾಡಲೇಬೇಕು**[91]–ಎಂಬ ಕ್ರಿಯಾಪದಕ್ಕೆ 'ಅವಶ್ಯವಾಗಿ' ಎಂಬುದೂ ವಿಶೇಷಣಗಳು.

**ಹೀಗೆ ಕರ್ತೃ, ಕರ್ಮ, ಕ್ರಿಯಾಪದ ಇತ್ಯಾದಿ ಪ್ರಧಾನ ಪದಗಳಿಗೆ ಇರುವ ಕರ್ತೃ ವಿಶೇಷಣಗಳು, ಕರ್ಮವಿಶೇಷಣಗಳು, ಕ್ರಿಯಾವಿಶೇಷಣಗಳೇ ಮೊದಲಾದುವನ್ನು ಅವುಗಳ ಸಂಬಂಧವನ್ನು ಬೇರ್ಪಡಿಸಿ ಹೇಳುವ ವಿಧಾನವೇ ವಾಕ್ಯವಿಭಜನೆಯೆನಿಸುವುದು. ಈ ಕ್ರಮದಿಂದ ನಮಗೆ ವಾಕ್ಯ ರಚನೆ ಸ್ಪಷ್ಟವಾಗುವುದು.**

# V – ರೂಪನಿಷ್ಪತ್ತಿ

**(100) ಭಾಷೆಯಲ್ಲಿ ನಾವು ಮಾತನಾಡುವ ಮತ್ತು ಬರೆಯುವ, ಕಾವ್ಯಗಳಲ್ಲಿ ಬರುವ ಶಬ್ದಗಳು ವ್ಯಾಕರಣದ ಯಾವ ನಿಯಮಕ್ಕನುಗುಣವಾಗಿ ಸಿದ್ಧವಾಗಿವೆ? ಅವುಗಳ ಕಾರ್ಯ ಮತ್ತು ಪ್ರಯೋಜನಗಳೇನು? ಸಂಬಂಧವೇನು? ಎಂಬುದನ್ನು ತಿಳಿಸುವುದೇ ರೂಪನಿಷ್ಪತ್ತಿಯೆನಿಸುವುದು.**

ಉದಾಹರಣೆಗೆ ಈ ವಾಕ್ಯವನ್ನು ನೋಡಿರಿ.

(i) **ರಾಜನು ರಾಜ್ಯವನ್ನು ಆಳುತ್ತಾನೆ.**

ಈ ವಾಕ್ಯದಲ್ಲಿ ಮೂರು ಪದಗಳಿವೆ. ರಾಜನು ಎಂಬುದು ಕರ್ತೃಪದ, ರಾಜ್ಯವನ್ನು ಕರ್ಮಪದ, ಆಳುತ್ತಾನೆ ಎಂಬುದು ಕ್ರಿಯಾಪದ. ಒಂದೊಂದು ಪದವೂ ಹೇಗೆ ರೂಪ ಸಿದ್ಧಿಯನ್ನು ವ್ಯಾಕರಣ ದೃಷ್ಟಿಯಿಂದ ಪಡೆದಿದೆ, ಎಂಬುದನ್ನು ನೋಡಿರಿ.

(೧) **ರಾಜನು** –'ರಾಜ' ಎಂಬ ಅಕಾರಾಂತ ಪುಲ್ಲಿಂಗ ಪ್ರಕೃತಿಯ ಮೇಲೆ 'ಉ' ಎಂಬ ಪ್ರಥಮಾವಿಭಕ್ತಿಪ್ರತ್ಯಯ ಬಂದು, ನಡುವೆ ನಕಾರಾಗಮವಾಗಿ 'ರಾಜನು' ಎಂಬ ರೂಪವೊಂದಿ, 'ಆಳುತ್ತಾನೆ' ಎಂಬ ಕ್ರಿಯೆಗೆ ಕರ್ತೃವಾಯಿತು.

(೨) **ರಾಜ್ಯವನ್ನು**–'ರಾಜ್ಯ' ಎಂಬ ಅಕಾರಾಂತ ನಪುಂಸಕಲಿಂಗ ಪ್ರಕೃತಿಯು ದ್ವಿತೀಯಾವಿಭಕ್ತಿ ಏಕವಚನವನ್ನು ಹೊಂದಿ 'ರಾಜ್ಯವನ್ನು' ಎಂಬ ಪದವಾಗಿ 'ಆಳುತ್ತಾನೆ' ಎಂಬ ಕ್ರಿಯೆಗೆ ಕರ್ಮವಾಯಿತು (ಕರ್ಮಪದವಾಯಿತು).

(೩) **ಆಳುತ್ತಾನೆ**–'ಆಳು' ಎಂಬ ಉಕಾರಾಂತ ಧಾತುವಿಗೆ ವರ್ತಮಾನಕಾಲದ ಪ್ರಥಮ ಪುರುಷ ಪುಲ್ಲಿಂಗ ಏಕವಚನದ ಆಖ್ಯಾತಪ್ರತ್ಯಯ ಬಂದು 'ಆಳುತ್ತಾನೆ' ಎಂಬ ಕ್ರಿಯಾಪದ ರೂಪಸಿದ್ಧಿ ಪಡೆಯಿತು.

**ಹೀಗೆ ವಾಕ್ಯದಲ್ಲಿರುವ ಪ್ರತಿ ಶಬ್ದದ ರೂಪಸಿದ್ಧಿಯು ವ್ಯಾಕರಣ ನಿಯಮದಂತೆ ಹೇಗಾಯಿತೆಂದು ಹೇಳುವುದೇ ರೂಪನಿಷ್ಪತ್ತಿಯೆನಿಸುವುದು.**

---

[91] 'ಮಾಡಲೇಬೇಕು' ಎಂಬಲ್ಲಿ 'ಬೇಕು' ಎಂಬುದಿಷ್ಟೇ ಅವ್ಯಯಕ್ರಿಯಾಪದ. (ಕ್ರಿಯಾರ್ಥಕಾವ್ಯಯ) 'ಮಾಡಲೇಬೇಕು' ಎಂದು ಕ್ರಿಯಾಪದವಾಗಿ ತೋರಿಸುವುದು ಕೇವಲ ಸ್ಪಷ್ಟತೆಗೋಸ್ಕರ ಮಾತ್ರ.

ಕೆಳಗಿನ ವಾಕ್ಯದಲ್ಲಿ ಬಂದಿರುವ ಶಬ್ದಗಳ ರೂಪನಿಷ್ಪತ್ತಿಯನ್ನು ಗಮನಿಸಿರಿ.

(i) ವಿಶ್ವೇಶ್ವರಯ್ಯನವರು ಉದ್ಯೋಗವನ್ನು ಹುಡುಕಿಕೊಂಡು ಹೋಗಲಿಲ್ಲ; ಉದ್ಯೋಗವೇ ಅವರನ್ನು ಹುಡುಕಿಕೊಂಡು ಬಂದಿತು.

(೧) **ವಿಶ್ವೇಶ್ವರಯ್ಯನವರು**–'ವಿಶ್ವೇಶ್ವರಯ್ಯ' ಎಂಬ ಅಕಾರಾಂತಪುಲ್ಲಿಂಗನಾಮಪ್ರಕೃತಿಗೆ ಗೌರವಾರ್ಥದಲ್ಲಿ ಪ್ರಥಮಾ ಬಹುವಚನ. 'ಹೋಗಲಿಲ್ಲ[92]' ಎಂಬ ಕ್ರಿಯೆಗೆ ಕರ್ತೃಪದ.

(೨) **ಉದ್ಯೋಗವನ್ನು**–'ಉದ್ಯೋಗ' ಎಂಬ ಅಕಾರಾಂತ ನಪುಂಸಕಲಿಂಗ ನಾಮಪ್ರಕೃತಿ. 'ಅನ್ನು' ಎಂಬ ದ್ವಿತೀಯಾವಿಭಕ್ತಿ ಏಕವಚನ. 'ಹೋಗಲಿಲ್ಲ' ಎಂಬ ಕ್ರಿಯಾಪದಕ್ಕೆ ಕರ್ಮಪದ.

(೩) **ಹುಡುಕಿಕೊಂಡು**–'ಹುಡುಕಿಕೊಳ್ಳು' ಎಂಬ ಸಂಯುಕ್ತ ಧಾತುವಿನ ಭೂತ ನ್ಯೂನ. 'ಹುಡುಕಿಕೊಳ್ಳು' ಧಾತುವಿನ ಮೇಲೆ 'ದು' ಪ್ರತ್ಯಯ ಬಂದು 'ಹುಡುಕಿಕೊಂಡು' ಎಂಬ ಕೃದಂತಾವ್ಯಯವಾಗಿದೆ. ಇದು 'ಹೋಗಲಿಲ್ಲ' ಎಂಬ ಕ್ರಿಯೆಗೆ ವಿಶೇಷಣವಾಗಿ ಬಂದಿದೆ.

(೪) **ಹೋಗಲಿಲ್ಲ**[93]–'ಹೋಗಲು' 'ಇಲ್ಲ', ಎಂಬ ಎರಡು ಪದಗಳಿವೆ. 'ಹೋಗಲು' ಎಂಬುದು 'ಹೋಗು' ಧಾತುವಿನ ಮೇಲೆ 'ಅಲು' ಎಂಬ ಪ್ರತ್ಯಯ ಬಂದು 'ಹೋಗಲು' ಎಂಬ ಕೃದಂತಾವ್ಯಯವಾಗಿದೆ. 'ಇಲ್ಲ' ಎಂಬುದು ನಿಷೇಧಾರ್ಥಕ ಕ್ರಿಯಾರ್ಥಕಾವ್ಯಯ.

(೫) **ಉದ್ಯೋಗವು**–'ಉದ್ಯೋಗ' ಎಂಬ ಅಕಾರಾಂತ ನಪುಂಸಕಲಿಂಗ ನಾಮ ಪ್ರಕೃತಿ. ಪ್ರಥಮಾವಿಭಕ್ತಿ ಏಕವಚನ, 'ಬಂದಿತು' ಎಂಬ ಕ್ರಿಯೆಗೆ ಕರ್ತೃಪದ.

(೬) **'ಏ' ಅವಧಾರಣಾರ್ಥಕ ಅವ್ಯಯ.**

(೭) **ಅವರನ್ನು**–'ಅವನು' ಉಕಾರಾಂತ ಪುಲ್ಲಿಂಗ. ಪುರುಷಾರ್ಥಕ ಸರ್ವನಾಮ (ಪ್ರಥಮಪುರುಷಪುಲ್ಲಿಂಗ) ದ ಮೇಲೆ ಗೌರವಾರ್ಥದಲ್ಲಿ ದ್ವಿತೀಯಾ ಬಹುವಚನದ ನಾಮವಿಭಕ್ತಿಪ್ರತ್ಯಯ ಬಂದು 'ಅವರನ್ನು' ಎಂಬ ರೂಪವಾಗಿದೆ.

(೮) **ಹುಡುಕಿಕೊಂಡು**–'ಹುಡುಕಿಕೊಳ್ಳು' ಎಂಬ ಸಂಯುಕ್ತ ಧಾತುವಿನ ಭೂತ ನ್ಯೂನ. 'ಹುಡುಕಿಕೊಳ್ಳು' ಧಾತುವಿನ ಮೇಲೆ 'ದು' ಪ್ರತ್ಯಯ ಬಂದು, 'ಹುಡುಕಿಕೊಂಡು' ಎಂಬ ಕೃದಂತಾವ್ಯಯವಾಗಿದೆ. ಇದು

---

[92] ಹೋಗಲು 'ಇಲ್ಲ'. 'ಇಲ್ಲ' ಎಂಬ ಅವ್ಯಯ ಕ್ರಿಯಾಪದ (ಕ್ರಿಯಾರ್ಥಕಾವ್ಯಯ) ಬರುವಾಗ 'ಹೋಗಲು' ಎಂಬ ಕೃದಂತಾವ್ಯಯದ ಜೊತೆಗೆ ಬಂದಿದೆ. 'ಹೋಗಲು' ಎಂಬುದು 'ಹೋಗು' ಧಾತುವಿನ ಮೇಲೆ 'ಅಲು' ಪ್ರತ್ಯಯ ಸೇರಿ ಕೃದಂತಾವ್ಯಯವಾಗಿದೆ.

[93] 'ಇಲ್ಲ' ಎಂಬ ನಿಷೇಧಾರ್ಥಕ ಕ್ರಿಯಾರ್ಥಕಾವ್ಯಯವು ಕೆಲವು ಕಡೆ, 'ಅಲು' ಪ್ರತ್ಯಯಾಂತ ಕೃದಂತಾವ್ಯಯದ ಜೊತೆಗೆ ಪ್ರಯೋಗವಾಗುವುದು–ಉದಾಹರಣೆಗೆ: ಮಾಡಲಿಲ್ಲ, ತಿನ್ನಲಿಲ್ಲ, ನೋಡಲಿಲ್ಲ–ಇತ್ಯಾದಿ. ಕೆಲವು ಕಡೆ ಸ್ವತಂತ್ರವಾಗಿಯೂ ಇರುವುದುಂಟು. ನನ್ನಲ್ಲಿ ಅದು ಇಲ್ಲ, ಆತನು ಮನೆಯಲ್ಲಿ ಇಲ್ಲ–ಇತ್ಯಾದಿ.

'ಅವರನ್ನು' ಎಂಬ ಪದದೊಡನೆ 'ಬಂದಿತು' ಎಂಬ ಕ್ರಿಯೆಗೆ ವಿಶೇಷಣವಾಗಿದೆ.

(೯) **ಬಂದಿತು**–'ಬರು' ಧಾತು, ಭೂತಕಾಲ, ಪ್ರಥಮ ಪುರುಷ, ನಪುಂಸಕಲಿಂಗ, ಏಕವಚನ ಕ್ರಿಯಾಪದ.

ಈ ರೀತಿ ಮೇಲೆ ಹೇಳಿದ ಹಾಗೆ ವಾಕ್ಯಗಳಲ್ಲಿ ಬರುವ ಪ್ರತಿ ಪದಕ್ಕೂ ರೂಪನಿಷ್ಪತ್ತಿಯನ್ನು ಹೇಳಬೇಕು.

## VI – ಸಾರಾಂಶ

### (ಅ) ವಾಕ್ಯಗಳು

**(೧) ಸಾಮಾನ್ಯವಾಕ್ಯ (೨) ಸಂಯೋಜಿತ ವಾಕ್ಯ (೩) ಮಿಶ್ರವಾಕ್ಯ**

**ಎಂದು ವಾಕ್ಯಗಳು ಮೂರು ಬಗೆ**

**(ಅ) ಪ್ರತಿಯೊಂದು ವಾಕ್ಯದಲ್ಲೂ ಕರ್ತೃಪದ ಮತ್ತು ಅದರ ವಿಶೇಷಣಗಳು, ಕರ್ಮಪದ ಅದರ ವಿಶೇಷಣಗಳು, ಕ್ರಿಯಾಪದ ಅದರ ವಿಶೇಷಣಗಳೂ ಇರುತ್ತವೆ. ವಿಶೇಷಣಗಳು ಇಲ್ಲದೆಯೂ ಇರುವುದುಂಟು.**

**(ಆ) ಅಕರ್ಮಕಧಾತುವಿನ ಕ್ರಿಯಾಪದವುಳ್ಳ ವಾಕ್ಯದಲ್ಲಿ ಕರ್ಮಪದವಿರುವುದಿಲ್ಲ.**

**(ಇ) ಅನ್ವಯಾನು ಕ್ರಮವೆಂದರೆ – ಮೊದಲು ಕರ್ತೃಪದ, ಆಮೇಲೆ ಕರ್ಮಪದ ಅನಂತರ ಕ್ರಿಯಾಪದ ಬರುವಂತೆ ಜೋಡಿಸುವಿಕೆ. ಕರ್ತೃ, ಕರ್ಮ, ಕ್ರಿಯೆಗಳಿಗಿರುವ ವಿಶೇಷಣಗಳನ್ನು ಇವುಗಳ ಹಿಂದೆಯೇ ಜೋಡಿಸಿ ಹೇಳಬೇಕು.**

**(ಈ) ಕರ್ತೃ, ಕರ್ಮ, ಕ್ರಿಯಾಪದಗಳು ಒಮ್ಮೊಮ್ಮೆ ವಾಕ್ಯಗಳಲ್ಲಿ ಬಿಟ್ಟುಹೋಗಿದ್ದರೆ, ಇರುವ ಪದಗಳ ಅರ್ಥದ ಸಹಾಯದಿಂದ ಇರಬೇಕಾದ ಪದಗಳನ್ನು ಊಹಿಸಿ ಸೇರಿಸುವುದು ಆಧ್ಯಾಹಾರ.**

**(ಉ) ವಾಕ್ಯದಲ್ಲಿ ಬರುವ ಪ್ರತಿಯೊಂದು ಪದವನ್ನು ಅದು ವ್ಯಾಕರಣದ ದೃಷ್ಟಿಯಿಂದ ಹೇಗೆ ರೂಪಸಿದ್ಧಿಯನ್ನು ಪಡೆಯಿತೆಂಬುದನ್ನು ಹೇಳುವುದು ರೂಪನಿಷ್ಪತ್ತಿಯೆನಿಸುವುದು.**

* * * * *

# ಅಭ್ಯಾಸ ಪ್ರಶ್ನೆಗಳು

(೧) ವಾಕ್ಯಗಳನ್ನು ಸ್ಥೂಲವಾಗಿ ಎಷ್ಟು ವಿಧಗಳಾಗಿ ವಿಂಗಡಿಸಬಹುದು?

(೨) ಸಾಮಾನ್ಯ ವಾಕ್ಯವೆಂದರೇನು?

(೩) ಸಂಯೋಜಿತ ವಾಕ್ಯವೆಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.

(೪) ಮಿಶ್ರವಾಕ್ಯಕ್ಕೆ ಒಂದು ಉದಾಹರಣೆ ಕೊಡಿರಿ.

(೫) ಆಧ್ಯಾಹಾರವೆಂದರೇನು? 'ಇವನು ನನ್ನ ಮಗ' ಈ ವಾಕ್ಯದಲ್ಲಿ ಮಾಡಬೇಕಾದ 'ಆಧ್ಯಾಹಾರ' ಪದವಾವುದು?

(೬) ಓಡಿಬಂದೆನು. ಓಡಿಹೋಗು. ಅವಸರದಿಂದ ಬಾ. ನಾಳೆ ಹೋಗುವಿಯಂತೆ. ನನಗೆ ನಾಲ್ಕು ಜನ ಮಕ್ಕಳು. ಈ ವಾಕ್ಯಗಳಲ್ಲಿ ಯಾವ ಯಾವ ಪದಗಳನ್ನು ಆಧ್ಯಾಹಾರ ಮಾಡಬೇಕು?

(೭) ರಾಮನಿಗೆ ಅವಸರವಾಗಿತ್ತು; ಆದ್ದರಿಂದ ವೇಗವಾಗಿ ಓಡುತ್ತಿದ್ದನು; ಆಗ ಕಲ್ಲನ್ನೆಡವಿ ಬಿದ್ದನು; ಬಿದ್ದ ಕಾರಣದಿಂದ ಕಾಲು ಮುರಿಯಿತು. – ಈ ವಾಕ್ಯ ವೃಂದವನ್ನು ಎಂಥ ವಾಕ್ಯವೆನ್ನುತ್ತೀರಿ? ಏಕೆ? ವಿವರಿಸಿರಿ.

(೮) ನಾನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆನೆಂಬುದು ಈಗತಾನೆ ಬಂದ ಈ ಪತ್ರದಿಂದ ತಿಳಿಯಿತು. – ಈ ವಾಕ್ಯವು ಎಂಥ ವಾಕ್ಯ? ಏಕೆ? ವಿವರಿಸಿರಿ.

(೯) ರೂಪನಿಷ್ಪತ್ತಿಯೆಂದರೇನು? 'ರಾಮನು ಪುಸ್ತಕವನ್ನು ಓದುತ್ತಾನೆ' ಈ ವಾಕ್ಯದಲ್ಲಿ ಬಂದಿರುವ ಪದಗಳ ರೂಪನಿಷ್ಪತ್ತಿಯನ್ನು ಹೇಳಿರಿ.

(೧೦) (i) 'ಮಾಡು' ಧಾತುವಿನ ವರ್ತಮಾನಕಾಲದ ಪ್ರಥಮ ಪುರುಷ, ಪುಲ್ಲಿಂಗ, ಏಕವಚನ ರೂಪ ಬರೆಯಿರಿ.

(ii) 'ತಿನ್ನು' ಧಾತುವಿನ ಭೂತಕಾಲ ಮಧ್ಯಮಪುರುಷ ಏಕವಚನದ ರೂಪಸಿದ್ಧಿ ಹೇಗೆ?

(iii) 'ಮನೆ' ಎಂಬ ವಸ್ತುವಾಚಕ ನಪುಂಸಕಲಿಂಗ ದ್ವಿತೀಯಾ ಬಹುವಚನ ರೂಪಸಿದ್ಧಿ ಹೇಗಾಗುವುದು?

(೧೧) ಕೆಳಗಿನ ವಾಕ್ಯಗಳು ತಪ್ಪಿನಿಂದ ಕೂಡಿವೆ. ಆ ತಪ್ಪುಗಳನ್ನು ಸರಿಪಡಿಸಿ ಬರೆಯಿರಿ.

(i) 'ತಿಂದನು' ಎಂಬುದು 'ತಿಂದು' ಧಾತುವಿನ ಭವಿಷ್ಯತ್ ಕಾಲದ ಪ್ರಥಮಪುರುಷ ಪುಲ್ಲಿಂಗಬಹುವಚನರೂಪ.

(ii) 'ಮಾಡುತ್ತೇನೆ' ಎಂಬುದು ಮಾಡು ಧಾತುವಿನ ವರ್ತಮಾನ ಕಾಲ ಪ್ರಥಮಪುರುಷಪುಲ್ಲಿಂಗ ಏಕವಚನರೂಪ.

(iii) ಹೊಲದಲ್ಲಿ–ಎಂಬುದು ಹೊಲದ ಎಂಬ ಅಕಾರಾಂತ ನಪುಂಸಕಲಿಂಗ ಪ್ರಕೃತಿಯ ತೃತೀಯಾ ವಿಭಕ್ತಿ ಬಹುವಚನರೂಪ.

(iv) ಚೆನ್ನಾಗಿ–ಎಂಬುದು ಒಂದು ನಾಮಪದ.

(೧೨) ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಆವರಣದಲ್ಲಿರುವ ಒಂದು ಸರಿಯುತ್ತರವನ್ನು ಆರಿಸಿ ಬರೆಯಿರಿ.

(i) ಮಾಡಿದನು ಎಂಬುದು ಮಾಡು ಧಾತುವಿನ ಭೂತಕಾಲ ............. ಪುಲ್ಲಿಂಗ ಏಕವಚನ. (ಮಧ್ಯಮಪುರುಷ, ಉತ್ತಮಪುರುಷ, ಪ್ರಥಮಪುರುಷ)

(ii) ಕೊಳ್ಳುತ್ತಾನೆ–ಎಂಬುದು ಕೊಳ್ಳು ಧಾತುವಿನ ............. ಕಾಲದ ಪ್ರಥಮ ಪುರುಷ ಪುಲ್ಲಿಂಗ ಏಕವಚನ ರೂಪ. (ವರ್ತಮಾನಕಾಲ, ಭೂತ, ಭವಿಷ್ಯತ್)

(iii) ಊರಿಗೆ–ಎಂಬ ಪದವು ಊರು ಎಂಬ ಉಕಾರಾಂತ ನಪುಂಸಕಲಿಂಗದ .......... ವಿಭಕ್ತಿ ಏಕವಚನ. (ಪಂಚಮೀ, ಚತುರ್ಥೀ, ಸಪ್ತಮೀ)

(iv) 'ಮಾಡಲು' ಎಂಬುದು 'ಮಾಡು' ಧಾತುವಿನ ಮೇಲೆ 'ಅಲು' ಎಂಬ ಪ್ರತ್ಯಯ ಬಂದು ............. ಎನಿಸಿದೆ.
(ಕೃದಂತಭಾವನಾಮ, ಕೃದಂತಾವ್ಯಯ, ಭಾವಕೃದಂತ)

(v) 'ಇಲ್ಲ' ಎಂಬುದು ಒಂದು ನಿಷೇಧಾರ್ಥಕ .......... ಆಗಿದೆ.
(ಧಾತು, ಕ್ರಿಯಾರ್ಥಕಾವ್ಯಯ, ಭಾವಕೃದಂತ)

* * * * *

# ಅಧ್ಯಾಯ ೧೦

# ಛಂದಸ್ಸು

ಈ ಪುಸ್ತಕದಲ್ಲಿ ಇದುವರೆಗೆ ಹೇಳಿದ ವ್ಯಾಕರಣಶಾಸ್ತ್ರದ ನಿಯಮಗಳಿಂದ ಶುದ್ಧವಾಗಿ ಮಾತನಾಡುವುದಕ್ಕೂ, ವಾಕ್ಯರಚನೆಗೂ, ವಾಕ್ಯರೂಪವಾದ ಪ್ರಬಂಧ ರಚನೆಗೂ ತಕ್ಕ ಮಟ್ಟಿಗೆ ಅನುಕೂಲವಾಗಬಹುದು. ಆದರೆ ಪದ್ಯಗಳನ್ನು ಹೇಗೆ ರಚಿಸಬೇಕು? ಅಲ್ಲಿ ಯಾವ ನಿಯಮಗಳನ್ನು ಕವಿಗಳು ಅನುಸರಿಸುತ್ತಾರೆ? ಎಂಬ ವಿಷಯವನ್ನು ತಿಳಿಯಬೇಕಾದರೆ ಅವಶ್ಯವಾಗಿ ಛಂದಶ್ಯಾಸ್ತ್ರದ ಪರಿಚಯ ಮಾಡಿಕೊಳ್ಳಬೇಕಾಗುವುದು. ನಮ್ಮ ವಿದ್ಯಾರ್ಥಿಗಳು ತಾವು ಓದುತ್ತಿರುವ ಕನ್ನಡ ಪಠ್ಯ ಪುಸ್ತಕಗಳಲ್ಲಿ ಅದೆಷ್ಟೋ ಬಗೆಯ ಪದ್ಯಗಳನ್ನು ಓದುತ್ತಾರೆ. ಆ ಎಲ್ಲ ಪದ್ಯಗಳನ್ನು ರಚನೆ ಮಾಡಿದ ಕವಿಗಳು ಹಲಕೆಲವು ನಿಯಮಗಳನ್ನನುಸರಿಸಿ ಆ ಪದ್ಯಗಳನ್ನು ರಚಿಸಿರುತ್ತಾರೆ. ಯಾವ ನಿಯಮವನ್ನು ಅನುಸರಿಸಿ ಈ ಪದ್ಯಗಳು ರಚಿತವಾಗಿವೆ, ಎಂಬುದನ್ನು ತಿಳಿಯದೆ ಅವುಗಳನ್ನು ಓದಿದರೆ ಸಾಕಾದಷ್ಟು ಪ್ರಯೋಜನವಾಗಲಿಕ್ಕಿಲ್ಲ. ಆದುದರಿಂದ ನಮ್ಮ ಮಕ್ಕಳು ಛಂದಶ್ಯಾಸ್ತ್ರದ ಸ್ಥೂಲವಾದ ಪರಿಚಯ ಮಾಡಿಕೊಳ್ಳಬೇಕಾಗುವುದು. ಈ ದೃಷ್ಟಿಯಿಂದ ಮುಂದೆ ಸಂಗ್ರಹವಾಗಿ ಈ ವಿಷಯವನ್ನು ತಿಳಿಸಲಾಗಿದೆ.

ವ್ಯಾಕರಣ ಶಾಸ್ತ್ರವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ಶಾಸ್ತ್ರವಾದರೆ, ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸಂಬಂಧಿಸಿದ ಶಾಸ್ತ್ರವಾಗಿದೆ. ನಾವು ಓದುವ ಪದ್ಯಗಳು ನಾನಾ ತರವಾಗಿವೆ. ಕೆಲವು ನಾಲ್ಕು ಸಾಲಿನವು, ಕೆಲವು ಆರು ಸಾಲಿನವು, ಕೆಲವು ಮೂರು ಸಾಲಿನವು, ಕೆಲವು ಸಾಲುಗಳು ಉದ್ದ, ಕೆಲವು ಚಿಕ್ಕವು. ಹೀಗೆ ನಾನಾ ಬಗೆಯು ಪದ್ಯಗಳಲ್ಲಿ ಕಂಡುಬರುತ್ತವೆ. ಅವುಗಳೆಲ್ಲವುಗಳ ಸ್ವರೂಪವನ್ನು ತಿಳಿಯದಿದ್ದರೂ ಮುಖ್ಯವಾದ ಕೆಲವು ಪದ್ಯಗಳ ರೀತಿನೀತಿ ಗಳನ್ನು ತಿಳಿಯಬೇಕು.

ಪದ್ಯಗಳು ವಿಸ್ತಾರವಾದ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸಲೂ, ರಸವತ್ತಾದ ಅಂತಗಳನ್ನು ಸ್ವಾರಸ್ಯ ಮಾತುಗಳಿಂದ ವರ್ಣಿಸಲೂ, ಮತ್ತು ಅವುಗಳನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲೂ ಅನುಕೂಲವಾದವು. ಅಲ್ಲದೆ ರಾಗವಾಗಿ ಹಾಡಿ, ತಾವೂ ಆನಂದ ಪಡಬಹುದು. ಇತರರನ್ನೂ ಆನಂದಗೊಳಿಸಬಹುದು. ಇಂಥ ಮಹತ್ವದ ಕಾವ್ಯಭಾಗಗಳಾದ ಪದ್ಯಗಳ ರಚನಾಕ್ರಮದ ಬಗೆಗೆ ಲಕ್ಷಣವನ್ನು ತಿಳಿಸುವ ಗ್ರಂಥವೆಂದರೆ ಮುಖ್ಯವಾಗಿ '**ಛಂದೋಂಬುಧಿ**' ಎಂಬುದು. ಇದು ಹಳಗನ್ನಡ ಪದ್ಯಗಳಲ್ಲಿ ರಚಿಸಲ್ಪಟ್ಟಿದೆ. ಇದೇ ಕನ್ನಡ ಛಂದಸ್ಸನ್ನು ವಿಶದವಾಗಿ ತಿಳಿಸುವ ಗ್ರಂಥವಾಗಿದೆ.

# I – ಛಂದೋಂಬುಧಿ ಗ್ರಂಥ ಕರ್ತೃವಿನ ವಿಚಾರ

ಛಂದೋಂಬುಧಿ ಎಂಬ ಕನ್ನಡ ಛಂದಸ್ಸನ್ನು ತಿಳಿಸುವ ಗ್ರಂಥವನ್ನು ಕ್ರಿ.ಶ. ೯೯೦ ರ ಸುಮಾರಿನಲ್ಲಿ ೧ನೆಯ ನಾಗವರ್ಮನೆಂಬುವನು[94] ಬರೆದನು. ಇವನು ಕರ್ನಾಟಕ ಕಾದಂಬರಿಯೆಂಬ ಇನ್ನೊಂದು ಗ್ರಂಥವನ್ನೂ ಬರೆದಿದ್ದಾನೆ. ವೆಂಗಿ ವಿಷಯದಲ್ಲಿನ ಸಪ್ತ ಗ್ರಾಮಗಳಲ್ಲಿ ಮನೋಹರವಾದ ವೆಂಗಿಪಳುವಿನಲ್ಲಿದ್ದ 'ಕೌಂಡಿನ್ಯ ಗೋತ್ರ' ದ ವೆಣ್ಣಮಯ್ಯ ಎಂಬ ಬ್ರಾಹ್ಮಣನ ಮಗ; ತಾಯಿ ಹೋಕಳವ್ವೆ. ಇವನಿಗೆ ಕವಿರಾಜಹಂಸ, ಬುಧಾಬ್ಜವನಕಳ ಹಂಸ, ಕಂದಕಂದರ್ಪ–ಇತ್ಯಾದಿ ಅನೇಕ ಬಿರುದುಗಳಿದ್ದವು. ಈತನು ಯುದ್ಧವೀರನಾಗಿದ್ದ ಹಾಗೆಯೂ ತೋರುವುದು. ಶ್ರವಣಬೆಳ್ಗೊಳದ ಗೊಮ್ಮಟೇಶ್ವರನ ವಿಗ್ರಹವನ್ನು ಕೆತ್ತಿಸಿ ಪ್ರಸಿದ್ಧನಾಗಿರುವ ಚಾವುಂಡರಾಯನೆಂಬುವನು ಇವನ ಆಶ್ರಯದಾತನು. ಅಜಿತಸೇನದೇವ ನೆಂಬುವರು ಇವನಿಗೆ ಗುರುಗಳು.

**ಛಂದೋಂಬುಧಿ ಎಂಬ ಈ ಗ್ರಂಥದಲ್ಲಿ, ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೂ ಹೇಳಲ್ಪಟ್ಟಿವೆ.**

# II – ಕನ್ನಡ ಕಾವ್ಯಗಳು

ಕನ್ನಡ ಭಾಷೆಯಲ್ಲಿ ಕಾವ್ಯಗಳು ಪಂಪಕವಿ (ಕ್ರಿ.ಶ. ೯೪೧) ಗಿಂತಲೂ ಮೊದಲೇ ರಚಿತವಾಗಿದ್ದವು. ಆದರೆ ಆ ಕಾಲದ ಸಮಗ್ರ ಕಾವ್ಯಗಳು ನಮಗೆ ಸಿಕ್ಕಿಲ್ಲ. ಪಂಪಮಹಾಕವಿ ಬರೆದ ವಿಕ್ರಮಾರ್ಜುನವಿಜಯ, ಆದಿ ಪುರಾಣಗಳೇ ಈಗ ಉಪಲಬ್ಧವಿರುವ ಗ್ರಂಥಗಳಲ್ಲಿ ಮೊದಲಿನವು. ಪೂರ್ವದ ಗ್ರಂಥಗಳು ಸಿಗದಿದ್ದರೂ ಕ್ರಿ.ಶ. ೯ನೆಯ ಶತಕದಲ್ಲಿ ನೃಪತುಂಗನಿಂದ ರಚಿತವಾದ '**ಕವಿರಾಜಮಾರ್ಗ**'ದಲ್ಲಿ ಉತ್ತಮ ಕಾವ್ಯಮಯವಾದ ಪದ್ಯಗಳನ್ನು ಉದಾಹರಿಸಿದ್ದಾನೆ. ಇದರಿಂದ ನೃಪತುಂಗನಿಗಿಂತಲೂ ಮೊದಲು ಉತ್ತಮವಾದ ಕನ್ನಡ ಪದ್ಯ ಕಾವ್ಯಗಳು ಇದ್ದುವೆಂದು ತಿಳಿಯಬಹುದು. ಮತ್ತು ಕಲ್ಲುಗಳ ಮೇಲೆ ಕೆತ್ತಿದ ಅನೇಕ ಪದ್ಯಗಳು ಸಿಗುತ್ತವೆ. ಇವುಗಳ ಮೇಲಿಂದ ಕ್ರಿ.ಶ. ೬ನೆಯ ಶತಮಾನದ ಹೊತ್ತಿನಲ್ಲಿಯೇ ಛಂದೋಬದ್ಧವಾದ ಪದ್ಯಗಳನ್ನು ನಮ್ಮ ಕವಿಗಳು ಬರೆಯುತ್ತಿದ್ದರೆಂದು ಹೇಳಬಹುದು. ಪಂಪ (ಕ್ರಿ.ಶ. ೯೪೧), ರನ್ನ (ಕ್ರಿ.ಶ. ೯೯೩), ಅಭಿನವ ಪಂಪ (ಕ್ರಿ.ಶ. ೧೧೦೦), ಜನ್ನ (ಕ್ರಿ.ಶ. ೧೨೦೯) ಇತ್ಯಾದಿ ಮಹಾಕವಿಗಳು ಸಂಸ್ಕೃತ ವೃತ್ತ ಜಾತಿಯ ಛಂದಸ್ಸನ್ನು ಬಳಸಿ ದೊಡ್ಡ ದೊಡ್ಡ ಚಂಪೂಕಾವ್ಯಗಳನ್ನು ಬರೆದರು. ಚಂಪೂಕಾವ್ಯಗಳೆಂದರೆ ಗದ್ಯಪದ್ಯಗಳಿಂದ ಕೂಡಿದ ಕಾವ್ಯಗಳು. ಕ್ರಿ.ಶ.ಸು. ೧೨೧೬ ರ ಸುಮಾರಿನಲ್ಲಿದ್ದ ಹರಿಹರೇಶ್ವರನೆಂಬ ಕವಿ ರಗಳೆಗಳ ಛಂದಸ್ಸಿನಲ್ಲಿ

---

[94] ನಾಗವರ್ಮನೆಂಬ ಹೆಸರಿನ ಕವಿಗಳಿಬ್ಬರು. ಮೊದಲನೆಯ ನಾಗವರ್ಮ (ಕ್ರಿ.ಶ. ೯೯೦) ನು ಛಂದೋಂಬುಧಿಯನ್ನೂ, ಕರ್ನಾಟಕ ಕಾದಂಬರಿ ಎಂಬ ಚಂಪೂ ಗ್ರಂಥವನ್ನೂ ರಚಿಸಿದನು. ಎರಡನೆಯ ನಾಗವರ್ಮನೆಂಬುವನು ಕ್ರಿ.ಶ. ೧೧೪೫ ರ ದವನು. ಇವನು ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ವಸ್ತುಕೋಶಗಳೆಂಬ ಮೂರು ಗ್ರಂಥಗಳನ್ನು ರಚಿಸಿದ್ದಾನೆಂದು ಕವಿ ಚರಿತ್ರೆಕಾರರು ತಿಳಿಸಿದ್ದಾರೆ.

ಅನೇಕ ಕಾವ್ಯ ಬರೆದನು. ಇವನ ಅಳಿಯನಾದ ರಾಘವಾಂಕನು (ಕ್ರಿ.ಶ. ೧೨೧೬) ಷಟ್ಪದಿಗಳ ಛಂದಸ್ಸಿನಲ್ಲಿ ಅನೇಕ ಕಾವ್ಯಗಳನ್ನು ಬರೆದನು. ಷಟ್ಪದಿಯನ್ನು ಬಳಸಿ ಮುಂದೆ ಗದುಗಿನ ನಾರಣಪ್ಪ (ಕ್ರಿ.ಶ. ೧೪೩೦) ನೇ ಮೊದಲಾದವರು ಕಾವ್ಯ ಬರೆದರು. ರತ್ನಾಕರವರ್ಣಿ (ಕ್ರಿ.ಶ. ೧೫೫೭) ಯು ಸಾಂಗತ್ಯವೆಂಬ ದೇಶೀಯ ಛಂದಸ್ಸಿನಲ್ಲಿ ಭರತೇಶ ವೈಭವವನ್ನು ಬರೆದನು. ಹೀಗೆ ಅನೇಕಾನೇಕ ಛಂದೋಬದ್ಧವಾದ ಸಾಹಿತ್ಯರಾಶಿ ಕನ್ನಡಕ್ಕೆ ಇದೆ. ಈ ಎಲ್ಲ ಛಂದಸ್ಸುಗಳ ಲಕ್ಷಣವನ್ನು ತಿಳಿಯುವುದು ಅವಶ್ಯವಾದರೂ ಪ್ರೌಢಶಾಲೆಗಳಲ್ಲಿ ವ್ಯಾಸಂಗಮಾಡುವ ನಮ್ಮ ಮಕ್ಕಳು, ಮುಖ್ಯವಾಗಿ ಕನ್ನಡದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ಉತ್ಪಲಮಾಲಾ, ಚಂಪಕಮಾಲ, ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ, ಮಹಾಸ್ರಗ್ಧರಾ–ಇತ್ಯಾದಿ ವೃತ್ತಗಳ ಲಕ್ಷಣಗಳನ್ನೂ, ಷಟ್ಪದಿಗಳು, ರಗಳೆಗಳು ಕಂದ ಪದ್ಯಗಳೇ ಮೊದಲಾದವುಗಳ ಲಕ್ಷಣಗಳನ್ನು ತಿಳಿಯಬೇಕಾದುದು ಅವಶ್ಯಕ. ಅಂತೆಯೇ ಸಂಕ್ಷೇಪವಾಗಿ ಮುಂದೆ ಆ ವಿಷಯವನ್ನು ಹೇಳಲಾಗಿದೆ.

# III – ಪದ್ಯ

ಒಂದು ಗೊತ್ತಾದ ಸಾಲುಗಳ (ಪಾದಗಳು) ನಿಯಮದಿಂದ ಬರೆದವುಗಳೇ ಪದ್ಯಗಳು. ಅಂದರೆ ಪದ್ಯಗಳು ಪಾದ (ಸಾಲು) ಗಳಿಂದಲೂ, ಪ್ರತಿಯೊಂದು ಪಾದವೂ ಪ್ರಾಸ, ಯತಿ, ಗಣಗಳ ನಿಯಮದಿಂದಲೂ ಕೂಡಿರುತ್ತವೆ. ಈಗ ಈ ವಿಚಾರವಾಗಿ ಒಂದೊಂದಾಗಿ ತಿಳಿಯೋಣ.

## (೧) ಪ್ರಾಸ

**(101) ಪದ್ಯಗಳ ಪ್ರತಿಯೊಂದು ಸಾಲಿನ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ಬರುವುದಕ್ಕೆ ಪ್ರಾಸವೆನ್ನುತ್ತಾರೆ. ಈ ಪ್ರಾಸವನ್ನು ಕೆಲವರು ಸಾಲುಗಳ (ಪಾದಗಳ) ಕೊನೆಯಲ್ಲೂ ಬರುವಹಾಗೆ ಪದ್ಯ ರಚಿಸುತ್ತಾರೆ. ಪಾದಾಂತದಲ್ಲಿ ಬರುವ ಈ ಪ್ರಾಸದ ನಿಯಮವು ಕೇವಲ ರಗಳೆಗಳಲ್ಲಿ ಮಾತ್ರ ಕಂಡು ಬರುತ್ತದೆ.**

ಈ ಪ್ರಾಸಾಕ್ಷರದ ಹಿಂದೆ ಹ್ರಸ್ವಸ್ವರವಿದ್ದರೆ ಎಲ್ಲ ಸಾಲುಗಳಲ್ಲಿ ಹ್ರಸ್ವಸ್ವರವೂ ದೀರ್ಘಸ್ವರವಿದ್ದರೆ ಎಲ್ಲ ಕಡೆಗೆ ದೀರ್ಘಸ್ವರವೂ, ಅನುಸ್ವಾರ ವಿಸರ್ಗಗಳಿದ್ದರೆ ಎಲ್ಲ ಕಡೆಗೆ ಅನುಸ್ವಾರ ವಿಸರ್ಗಗಳೂ ಬಂದಿರಬೇಕು.

ಉದಾಹರಣೆಗೆ:–

ಭವದನುಜನರುಣ ಜಲಮಂ ।
ಸವಿನೋಡಿದೆನಿಂತು ನಿನ್ನ ಬಲಜಲನಿಧಿಯಂ ।
ಸವಿನೋಡಿದೆನೀ ಕೊಳನಂ ।
ತವೆಪೀರ್ದು ಬಳಿಕ್ಕೆ ನಿನ್ನ ಸವಿಯಂ ನೋಳ್ಪೆಂ ॥

ಈ ಪದ್ಯದಲ್ಲಿ ಮೊದಲನೆಯ ಸ್ವರ–'ಭ' ಕಾರದ ಮುಂದಿರುವ ಅಕಾರ, ೨ನೆಯ ಸ್ವರ 'ವ' ಕಾರದ ಮುಂದಿರುವ ಅಕಾರ. ಇವೆರಡರ ಮಧ್ಯದಲ್ಲಿ 'ವ್' ಎಂಬ ವ್ಯಂಜನವಿದೆ. ಇದರಂತೆ ೨ನೆಯ ಸಾಲಿನಲ್ಲಿ ಅಕಾರ ಇಕಾರಗಳ ಮಧ್ಯದಲ್ಲಿ 'ವ್' ವ್ಯಂಜನವಿದೆ. ೩ನೆಯ ಸಾಲಿನಲ್ಲಿ ಅಕಾರ ಇಕಾರಗಳ ಮಧ್ಯದಲ್ಲಿ 'ವ್' ಕಾರವಿದೆ. ನಾಲ್ಕನೆಯ ಸಾಲಿನಲ್ಲಿ ಅಕಾರ ಎಕಾರಗಳ ಮಧ್ಯದಲ್ಲಿ 'ವ್' ಕಾರವಿದೆ. ಹೀಗೆ ನಾಲ್ಕು ಸಾಲುಗಳಲ್ಲಿಯೂ ಇರುವ ಒಂದನೆಯ ಎರಡನೆಯ ಸ್ವರಗಳ ಮಧ್ಯದಲ್ಲಿ 'ವ್' ಎಂಬ ವ್ಯಂಜನವಿರುವುದು ಗೊತ್ತಾಗುವುದು. ಈ 'ವ' ಕಾರವೇ ಪ್ರಸಾಕ್ಷರವೆನಿಸುವುದು. ಅಲ್ಲದೆ ಪ್ರಾಸಾಕ್ಷರದ ಹಿಂದೆ ಎಲ್ಲ ಕಡೆಗೂ ಹ್ರಸ್ವಸ್ವರವೇ ಇರುವುದು. ಈಗ ಒಂದಕ್ಕಿಂತ ಹೆಚ್ಚು ವ್ಯಂಜನಗಳ ಪ್ರಾಸಾಕ್ಷರವಾಗಿರುವುದನ್ನು ಗಮನಿಸಿರಿ.

ಉದಾಹರಣೆಗೆ:–

ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ ।
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು॥
ಪುಲ್ಗಳಪಸುರ್ಗೆಳಸಿ ಪೊಕ್ಕೊಡಾ ತೋಟಗಾ– ।
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆಮಿಗೆ ।
ಬಿಲ್ಗೊಂಡು ನಡೆತಂದನಂ ಕಂಡನರ್ಚಿತ ಸುವಾಜಿಯಂ ವೀರಲವನು ॥

೧ನೆಯ ಸಾಲು–ಬಲ್ಗಯ್ಯ ...................... ಅ + ಲ್ ಗ್ + ಅ
೨ನೆಯ ಸಾಲು–ಸೊಲ್ಗೇಳಿ ...................... ಒ + ಲ್ ಗ್ + ಏ
೩ನೆಯ ಸಾಲು–ನಲ್ಗುದುರೆ ...................... ಅ + ಲ್ ಗ್ + ಉ
೪ನೆಯ ಸಾಲು–ಪುಲ್ಗಳ ...................... ಉ + ಲ್ ಗ್ + ಅ
೫ನೆಯ ಸಾಲು–ವಲ್ಗೆತನ್ನೊ ..................... ಅ + ಲ್ ಗ್ + ಎ
೬ನೆಯ ಸಾಲು–ಬಿಲ್ಗೊಂಡು ...................... ಇ + ಲ್ ಗ್ + ಒ

ಎಲ್ಲ ಸಾಲುಗಳಲ್ಲೂ ಒಂದನೆಯ ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿ ವ್ಯಂಜನಗಳನ್ನು ನೋಡಿರಿ.

ಮೇಲಿನ ಈ ಪದ್ಯದಲ್ಲಿ 'ಲ್ ಗ್' ಈ ಎರಡು ವ್ಯಂಜನಗಳು ಆರೂ ಸಾಲುಗಳಲ್ಲಿ ಪ್ರಾಸಾಕ್ಷರಗಳಾಗಿ ಬಂದಿರುವುದನ್ನು ಗಮನಿಸಿರಿ. ಮತ್ತು ಪ್ರಾಸಾಕ್ಷರಗಳ ಹಿಂದೆ **ಅ, ಒ, ಅ, ಉ, ಅ, ಇ**–ಇತ್ಯಾದಿ ಹ್ರಸ್ವಸ್ವರಗಳೇ ಬಂದಿರುವುದನ್ನೂ ಗಮನಿಸಿರಿ. ಇದರ ಹಾಗೆಯೇ ಕೆಲವು ಕಡೆ ಪ್ರಸಾಕ್ಷರಗಳು ಮೂರು ವ್ಯಂಜನಗಳಿಂದಲೂ ಕೂಡಿರುವುದುಂಟು. ಕೆಲವು ಸಜಾತೀಯ ಸಂಯುಕ್ತಾಕ್ಷರಗಳಿಂದಲೂ ಕೂಡಿರುವುದುಂಟು.[95]

---

95 (i) ಒಂದು ಎರಡನೆಯ ಸ್ವರಗಳ ನಡುವೆ ಒಂದೇ ವಿಧದ ಒಂದು ವ್ಯಂಜನವು ಬಂದ ಹಿಂದಿನ ಸ್ವರ ಹ್ರಸ್ವವಾಗಿದ್ದರೆ 'ಸಿಂಹಪ್ರಾಸ'. ಇದರ ಹಾಗೆಯೇ ಪ್ರಸಾಕ್ಷರದ ಪ್ರಾಸಾಕ್ಷರಗಳ–
(ii) ಹಿಂದಿನ ಸ್ವರವು ದೀರ್ಘವಾಗಿದ್ದರೆ 'ಗಜಪ್ರಾಸ'.

ಒಮ್ಮೊಮ್ಮೆ ದೊಡ್ಡ ದೊಡ್ಡ ಕವಿಗಳೂ ಈ ಪ್ರಾಸದ ನಿಯಮದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿರುವುದೂ ಉಂಟು. ಹಾಗಾಗಿರುವುದು ಎಲ್ಲೋ ಕೆಲವು ಕಡೆ ಮಾತ್ರ. ಆದರೆ ಎಲ್ಲ ಕಡೆಗೂ ಪ್ರಾಸದ ನಿಯಮವನ್ನು ಪ್ರಾಚೀನ ಕವಿಗಳು ಪಾಲಿಸಿಕೊಂಡೇ ಬಂದಿದ್ದಾರೆ. ರಗಳೆಗಳಲ್ಲಿ ಇದುವರೆಗೆ ಹೇಳಿದ ಆದಿ ಪ್ರಾಸದ ಜೊತೆಗೆ ಅಂತ್ಯದಲ್ಲಿಯೂ ಈ ಪ್ರಾಸದ ನಿಯಮವನ್ನು ಪಾಲಿಸಿರುವುದುಂಟು.–

ಉದಾಹರಣೆಗೆ:– ಆಡುವ ಗಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ

ಇಲ್ಲಿ ಮೊದಲ ಸಾಲಿನ ಕೊನೆಯ ಎರಡು ಸ್ವರಗಳಾದ (ನ್ ಋ + ತ್ ಯ್ + ಅಂ) ಋಕಾರ ಅಕಾರಗಳ ಮಧ್ಯದಲ್ಲಿ 'ತ್ ಯ್' ಎಂಬುವು ಪ್ರಾಸಾಕ್ಷರಗಳು ೨ನೆಯ ಸಾಲಿನಲ್ಲಿ ಕೊನೆಯ ಎರಡು ಸ್ವರಗಳಾದ (ಸ್ ಅ + ತ್ ಯ್ + ಅಂ) ಅಕಾರ ಮತ್ತು ಅಕಾರಗಳ ಮಧ್ಯದಲ್ಲಿ 'ತ್ ಯ್' ಎಂಬಿವು ಪ್ರಾಸಾಕ್ಷರಗಳಾಗಿವೆ.

ಮೇಲಿನ ಎರಡು ಸಾಲುಗಳ ರಗಳೆಯ ಛಂದಸ್ಸಿನಲ್ಲಿ ಆದಿಪ್ರಾಸವು 'ಡ್' ವ್ಯಂಜನವಾಗಿದ್ದರೆ, ಅಂತ್ಯ ಪ್ರಾಸವು 'ತ್ ಯ್' ಎಂಬೆರಡು ವ್ಯಂಜನಗಳಾಗಿವೆ. ಈ ತರದಲ್ಲಿ ಅಂತ್ಯಪ್ರಾಸದ ನಿಯಮವನ್ನು ರಗಳೆಯಲ್ಲಲ್ಲದೆ ಬಹುಶಃ ಉಳಿದ ಕಡೆಗೆ ಕಾಣುವುದು ಅಪರೂಪ.

## (೨) ಯತಿ

ಯತಿ ಯೆಂದರೆ ಪದ್ಯಗಳನ್ನು ಓದುವಾಗ ನಿಲ್ಲಿಸುವ ಸ್ಥಳಗಳು. ಹೀಗೆ ನಿಲ್ಲಿಸುವುದಕ್ಕೆ ಗೊತ್ತಾದ ಸ್ಥಳಗಳಲ್ಲಿ ನಿಲ್ಲಿಸಿದರೆ ಅರ್ಥ ಕೆಡುವಂತಿರಬಾರದು. ಅಲ್ಲಿಗೆ ಪದ ಮುಗಿದಿರಬೇಕು. ಕನ್ನಡ ಕವಿಗಳು ಪ್ರಾಸ ನಿಯಮವನ್ನೂ ಪಾಲಿಸಿ ಯತಿಯ ನಿಯಮವನ್ನು ಪಾಲಿಸುವುದು ಕಷ್ಟವೆಂದು ಪ್ರಾಸಕ್ಕೇ ಪ್ರಾಧಾನ್ಯತೆ ಕೊಟ್ಟು, ಯತಿಯ ನಿಯಮವನ್ನು ಮಿಕ್ಕಿದ್ದಾರೆ. ಸಂಸ್ಕೃತ ಕವಿಗಳು ಪ್ರಾಸನಿಯಮವನ್ನು ಪಾಲಿಸದೆ ಯತಿಯ ನಿಯಮವನ್ನು ಎಲ್ಲ ಕಡೆಗೂ ಪಾಲಿಸಿದ್ದಾರೆ. ಆದ್ದರಿಂದ ಯತಿಯ ನಿಯಮವು ಕನ್ನಡ ಕಾವ್ಯಗಳಲ್ಲಿ ಅಷ್ಟು ಮುಖ್ಯವಲ್ಲ. ಅದರ ವಿಷಯವಾಗಿ ಹೆಚ್ಚಿಗೆ ತಿಳಿಯಬೇಕಾದ ಅವಶ್ಯಕತೆಯಿಲ್ಲ.

---

(iii) ಪ್ರಾಸಾಕ್ಷರದ ಹಿಂದೆ ಅನುಸ್ವಾರ (ಂ) ವಿದ್ದರೆ 'ವೃಷಭಪ್ರಾಸ'.

(iv) ಪ್ರಾಸಾಕ್ಷರದ ಹಿಂದೆ ವಿಸರ್ಗ (ಃ) ವಿದ್ದರೆ 'ಅಜಪ್ರಾಸ'.

(v) ಬೇರೆ ಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ 'ಶರಭಪ್ರಾಸ'.

(vi) ಒಂದೇ ಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ 'ಹಯಪ್ರಾಸ'. ಹೀಗೆ ಪ್ರಾಸದಲ್ಲಿ ಆರು ವಿಧಗಳನ್ನು ಹೇಳುವುದುಂಟು. ಈ ಆರು ಪ್ರಾಸಗಳನ್ನು ನೆನಪಿನಲ್ಲಿಡಲು ಈ ಕೆಳಗಿನ ಪದ್ಯ ಸಹಕಾರಿ.

ನಿಜದಿಂ ಒಂದೊಡೆಸಿಂಹಂ ॥ ಗಜದೀರ್ಘಂ ಬಿಂದುವೃಷಭ ವ್ಯಂಜನಶರಭಂ ॥
ಅಜನು ವಿಸರ್ಗಂ ಹಯನಂ ॥ ಬುಜಮುಖಿದಡ್ಡಕ್ಕರಂಗಳಿವು ಷಟ್ ಪ್ರಾಸಂ॥

ಸಿಂಹ, ಗಜ, ವೃಷಭ, ಶರಭ, ಅಜ, ಹಯ–ಈ ಆರೂ ಪ್ರಾಸಗಳ ಸಂಕ್ಷೇಪ ಲಕ್ಷಣ ಈ ಪದ್ಯದಲ್ಲಿ ಇದೆ.

## (೩) ಗಣಗಳು

**(102) ಗಣ ಎಂದರೆ 'ಗುಂಪು' 'ಸಮೂಹ' ಎಂದು ಅರ್ಥ. ಛಂದಶ್ಶಾಸ್ತ್ರದಲ್ಲಿ ಗಣ ಎಂದರೆ–ಪದ್ಯದ ಪ್ರತಿಯೊಂದು ಪಾದದಲ್ಲೂ ವಿಭಾಗಿಸುವ ಮಾತ್ರೆಗಳ ಅಥವಾ ಅಕ್ಷರಗಳ ಗುಂಪು ಮತ್ತು ಅಂಶಗಳ ಗುಂಪು.**

ಮಾತ್ರೆಗಳ ಲೆಕ್ಕದಿಂದ–ಮೂರುಮಾತ್ರೆ ಅಥವಾ ನಾಲ್ಕುಮಾತ್ರೆ ಮತ್ತು ಐದುಮಾತ್ರೆಗಳ ಗುಂಪುಗಳು ಕೆಲವು ಪದ್ಯಗಳಲ್ಲಿ ಬರುತ್ತವೆ. ಅವೆಲ್ಲ ಮಾತ್ರಾಗಣಗಳು. ಕೆಲವು ಪದ್ಯಗಳಲ್ಲಿ ಮೂರು ಅಕ್ಷರಗಳ ಗುಂಪುಗಳನ್ನು ವಿಭಾಗಿಸುವರು. ಅವೆಲ್ಲ ಅಕ್ಷರಗಣಗಳು. ಕೆಲವು ಪದ್ಯಗಳಲ್ಲಿ ಒಂದೊಂದು ಅಂಶಕ್ಕೆ ಒಂದೊಂದು ಗಣವನ್ನು ವಿಂಗಡಿಸುವರು. ಅವೆಲ್ಲ ಅಂಶಗಣಗಳು. ಮುಖ್ಯವಾಗಿ ಈಗ ಮಾತ್ರಾಗಣ, ಅಕ್ಷರಗಣಗಳ ವಿಷಯವನ್ನು ತಿಳಿದರೆ ಸಾಕು.

# IV – ಮಾತ್ರೆ, ಗುರು, ಲಘುಗಳು

**(103) ಮಾತ್ರೆ[96]:– 'ಅ' ಎಂಬ ಅಕ್ಷರವನ್ನು ನಾವು ಎಳೆಯದಂತೆ, ಮೊಟಕುಗೊಳಿಸದಂತೆ ಉಚ್ಚಾರ ಮಾಡುವುದಕ್ಕೆ ಬೇಕಾಗುವ ಕಾಲವೇ ಒಂದು ಮಾತ್ರಾ ಕಾಲ. ಒಂದು ಮಾತ್ರಾಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳೆಲ್ಲ ಲಘುಗಳೆನಿಸು ವುವು. ಲಘುವನ್ನು ' ᑌ ' ಹೀಗೆ ಗುರುತಿಸುವುದು ವಾಡಿಕೆ.**

### ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು:–

**(104) ಹ್ರಸ್ವಸ್ವರಗಳು ಮತ್ತು ಹ್ರಸ್ವಸ್ವರಗಳಿಂದ ಕೂಡಿದ ಗುಣಿತಾಕ್ಷರಗಳೆಲ್ಲ ಲಘುಗಳೆನಿಸುವುವು. ಲಘುಗಳಾಗಿರುವ ಅಕ್ಷರಗಳ ಮೇಲೆ '[97]ᑌ ' ಹೀಗೆ ಛಂದಸ್ಸಿನಲ್ಲಿ ಗುರುತಿಸುವುದು ವಾಡಿಕೆ.**

---

96 (i) ಗುಬ್ಬಿಯ 'ಚಿಕ್' ಎನ್ನುವ ಕಾಲವನ್ನು ೧ ಮಾತ್ರಾಕಾಲವೆಂದೂ ಕಾಗೆಯು ಕಾ ಕಾ – ಎಂದು ಕೂಗುವ ಕಾಲವನ್ನು ೨ ಮಾತ್ರಾಕಾಲವೆಂದೂ, ನವಿಲು ಒಂದು ಸಲ ಕೂಗುವ ಕಾಲವನ್ನು ೩ ಮಾತ್ರಾಕಾಲವೆಂದು ಮುಂಗುಲಿಯು ಧ್ವನಿಮಾಡುವ ಕಾಲವನ್ನು ½ ಮಾತ್ರಾಕಾಲವೆಂದೂ ಸ್ಥೂಲವಾಗಿ ತಿಳಿಯುತ್ತಾರೆ ಅಥವಾ ಕೋಳಿಯು ಪ್ರಾತಃಕಾಲದಲ್ಲಿ ಕೂಗುವ–

(ii) ಕೊ ಕೊ ಕೊ – ಎಂಬಲ್ಲಿ ಮೊದಲನೆಯ ಕೂಗು ಏಕಮಾತ್ರಾಕಾಲ, ಎರಡನೆಯದು ದ್ವಿಮಾತ್ರಾಕಾಲ, ಮೂರನೆಯದು ತ್ರಿಮಾತ್ರಾಕಾಲ (ಪ್ಲುತ) ಎಂದು ಸಾಮಾನ್ಯವಾಗಿ ಗ್ರಹಿಸುತ್ತಾರೆ.

97 ಲಘುವಿನ ಚಿಹ್ನೆಯನ್ನು "–" ಹೀಗೂ, ಗುರುವಿನ ಚಿಹ್ನೆಯನ್ನು "ᑌ" ಹೀಗೂ ಪ್ರಾಚೀನಕಾಲದಿಂದಲೂ ಗುರುತಿಸುವ ಪದ್ಧತಿಯಿತ್ತು. ಇತ್ತೀಚೆಗೆ ಅದು ಸ್ವಲ್ಪ ವ್ಯತ್ಯಾಸವಾಗಿ ಗುರುವನ್ನು "–" ಹೀಗೂ ಲಘುವನ್ನು "ᑌ" ಹೀಗೂ ಗುರುತಿಸುವುದು ವಾಡಿಕೆಯಲ್ಲಿ ಬಂದಿದೆ.

ಉದಾಹರಣೆಗೆ:–

U U U U U U
ಅ ಇ ಉ ಋ ಎ ಒ

U U U U U U
ಕ ಕಿ ಕು ಚ ಟ ತ

U U U U U U
ಕೆ ಕೊ ಸು ಸೊ ಸೃ ಕೃ

ಮೇಲೆ ಹ್ರಸ್ವಸ್ವರ ಮತ್ತು ಹ್ರಸ್ವಸ್ವರಗಳಿಂದ ಕೂಡಿದ ಗುಣಿತಾಕ್ಷರಗಳೆಲ್ಲ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಾದುದರಿಂದ ಅವುಗಳ ಮೇಲೆ ' U ' ಹೀಗೆ ಗುರುತು ಮಾಡಿದೆ.

**(105) ಗುರುಗಳು:– ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳೆಲ್ಲ ಗುರುಗಳೆನಿಸುವುವು. ಗುರುಗಳಾಗಿರುವ ಅಕ್ಷರಗಳ ಮೇಲೆ ' – ' ಹೀಗೆ ಗುರುತಿಸುವುದು ವಾಡಿಕೆ.**

**(106) ಗುರುಗಳಾಗುವ ಅಕ್ಷರಗಳು:– ದೀರ್ಘಸ್ವರ, ದೀರ್ಘಸ್ವರದಿಂದ ಕೂಡಿದ ಗುಣಿತಾಕ್ಷರಗಳು ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರಗಳು, ಒತ್ತಕ್ಷರದ ಹಿಂದಿನ ಅಕ್ಷರ, ವ್ಯಂಜನಾಕ್ಷರದ ಹಿಂದಿನ ಅಕ್ಷರ ಷಟ್ಪದಿ ಪದ್ಯಗಳಲ್ಲಿ ಬರುವ ೩ನೆಯ ೬ನೆಯ ಸಾಲಿನ ಕೊನೆಯಲ್ಲಿರುವ ಅಕ್ಷರ (ಲಘುವಾಗಿದ್ದರೂ) ಗುರುಗಳೆನಿಸುವುವು.**

ಉದಾಹರಣೆಗೆ: (i) **ದೀರ್ಘಸ್ವರಾಕ್ಷರಗಳು ಗುರುಗಳಾಗುವುದಕ್ಕೆ–**

– – – – – – –
ಆ ಈ ಊ ೠ ಏ ಐ ಓ

(ii) **ದೀರ್ಘಸ್ವರದಿಂದ ಕೂಡಿದ ಗುಣಿತಾಕ್ಷರಗಳು–**

– – – – – – –
ಕಾ ಕೀ ಚೇ ಚೈ ಸೈ ಖಾ ನೋ

(iii) **ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರಗಳು–**

– – – – – – –
ಅಂ ಅಃ ತಂ ತಃ ಸಂ ಸಃ ಕಂ

(iv) **ಒತ್ತಕ್ಷರದ ಹಿಂದಿನ ಅಕ್ಷರ ಗುರುವಾಗುವುದಕ್ಕೆ–**

– U – U – U – UU
ಕಲ್ಲು ಮಣ್ಣು ನಿಲ್ಲು ಮೆತ್ತಗೆ

(ಇಲ್ಲಿ ಒತ್ತಕ್ಷರದ ಹಿಂದಿನ ಅಕ್ಷರಗಳು ಗುರುಗಳಾಗಿದ್ದು, ಉಳಿದವು ಲಘುವಾಗಿದ್ದರೆ ಲಘು ಚಿಹ್ನೆಯನ್ನೂ ಗುರುವಾಗಿದ್ದರೆ ಗುರು ಚಿಹ್ನೆಯನ್ನೂ ಹಾಕಬೇಕು)

(v) **ವ್ಯಂಜನಾಕ್ಷರದ ಹಿಂದಿನ ಅಕ್ಷರ ಗುರುವಾಗುವುದಕ್ಕೆ–**

–　–　–　–　–　–　–　–
ಕಲ್ ನಿಲ್ ಪಣ್ ತಿನ್ ಮೇಣ್ ಕಾಲ್ ಮೇಲ್ ತಾಯ್

ಮೇಲೆ ವ್ಯಂಜನಾಕ್ಷರದ ಹಿಂದಿನ ಅಕ್ಷರ ಗುರುಗಳಾಗಿರುವುದನ್ನು ಗಮನಿಸಿರಿ. 'ಮೇಣ್' ಎಂಬಲ್ಲಿ 'ಮೇ' ಎಂಬುದೂ, 'ಕಾಲ್' ಎಂಬಲ್ಲಿ 'ಕಾ' ಎಂಬುದೂ, 'ಮೇಲ್' ಎಂಬಲ್ಲಿ 'ಮೇ' ಎಂಬುದೂ, 'ತಾಯ್' ಎಂಬಲ್ಲಿ 'ತಾ' ಎಂಬುದೂ ದೀರ್ಘಾಕ್ಷರಗಳಾಗಿದ್ದರಿಂದ ಸಹಜವಾಗಿ ಅವು ಗುರುಗಳೇ ಆಗಿದ್ದರೂ, ವ್ಯಂಜನಾಕ್ಷರಗಳು ಹಿಂದಿರುಗುವುದರಿಂದಲೂ ಅವು ಗುರುಗಳು. ಹೀಗೆ ಅವು ಗುರುಗಳಾಗುವುದಕ್ಕೆ ಎರಡು ಕಾರಣಗಳಿದ್ದರೂ ಒಂದೇ ಗುರು. ಮೇಲಿನ ಉದಾಹರಣೆಗಳಲ್ಲಿ ವ್ಯಂಜನಾಕ್ಷರಗಳಾದ ಲ್, ಣ್, ಯ್ ಮೊದಲಾದವು ಲಘುಗಳೂ ಅಲ್ಲ, ಗುರುಗಳೂ ಅಲ್ಲ. ಅವಕ್ಕೆ ಯಾವ ಚಿಹ್ನೆಯನ್ನು ಹಾಕಬಾರದು. ಒಂದು ಅಕ್ಷರ ಗುರುವಾಗಲು ಎರಡು ಮೂರು ಕಾರಣಗಳಿದ್ದರೂ ಒಂದೇ ಗುರುವೆಂದು ಭಾವಿಸಬೇಕು.

ಉದಾಹರಣೆಗೆ:– – ∪　　– ∪
ಶಾಸ್ತ್ರ　　ಕಾಂಕ್ಷೆ

ಮೇಲಿನ ಉದಾಹರಣೆಗಳಲ್ಲಿ 'ಶಾ' ಅಕ್ಷರ ಗುರುವಾಗುವುದಕ್ಕೆ ಎರಡು ಕಾರಣಗಳಿವೆ. ಅದು ದೀರ್ಘವಾದ್ದರಿಂದ ಗುರು, ಒತ್ತಕ್ಷರದ ಹಿಂದಿನ ಅಕ್ಷರವಾದ್ದರಿಂದ ಗುರು. 'ಕಾ' ಎಂಬುದು ಮೂರು ಕಾರಣ ಹೊಂದಿದೆ. ದೀರ್ಘವಾಗಿರುವುದರಿಂದ ಗುರು; ಅನುಸ್ವಾರವಿರುವುದರಿಂದ ಗುರು; ಒತ್ತಕ್ಷರದ ಹಿಂದಿನ ಅಕ್ಷರವಾದ್ದರಿಂದಲೂ ಗುರು.

(vi) **ಶರ, ಕುಸುಮ, ಭೋಗ, ಭಾಮಿನೀ, ಪರಿವರ್ಧಿನೀ, ವಾರ್ಧಕ– ಇತ್ಯಾದಿ ಆರು ಜಾತಿಯ ಷಟ್ಪದಿ ಪದ್ಯಗಳಲ್ಲಿ ಬರುವ ಮೂರನೆಯ, ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೆ ಗುರು ಅಕ್ಷರವೆಂದು ಭಾವಿಸಬೇಕು.**

# V – ಮಾತ್ರಾಗಣದ ಛಂದಸ್ಸಿನ ಪದ್ಯಗಳು

ಮಾತ್ರಾಗಣಗಳು ಎಂದರೆ ಮೂರು, ನಾಲ್ಕು, ಐದು ಮಾತ್ರೆಗಳು ಗುಂಪುಗಳ ಲೆಕ್ಕವಿಟ್ಟುಕೊಂಡು ವಿಭಾಗಿಸುವ ಗಣಗಳು ಮಾತ್ರಾಗಣಗಳೆನಿಸುವುದೆಂದು ಈ ಹಿಂದೆ ವಿವರಿಸಿದೆ.

ಪದ್ಯದಲ್ಲಿನ ಸಾಲುಗಳನ್ನು ಗುರುಲಘುಗಳಿಂದ ಗುರುತಿಸಿದ ಮೇಲೆ ಗುರುವಿಗೆ ಎರಡು ಮಾತ್ರೆ, ಮತ್ತು ಲಘುವಿಗೆ ಒಂದು ಮಾತ್ರೆಯ ಲೆಕ್ಕಹಾಕಿ ಮೂರು, ನಾಲ್ಕು, ಐದು ಮಾತ್ರೆಗಳ ಗುಂಪುಗಳನ್ನು ಒಂದೊಂದು ಗಣವಾಗಿ ವಿಂಗಡಿಸುವ ಗಣಗಳೆಲ್ಲ ಮಾತ್ರಾಗಣಗಳೆನಿಸುವುವು. ಪದ್ಯಗಳ ಸಾಲುಗಳ ಅಕ್ಷರಗಳಿಗೆ ಗುರುಲಘುಗಳ ಗುರುತುಮಾಡುವುದಕ್ಕೆ '**ಪ್ರಸ್ತಾರ**' ಎಂದು ಹೆಸರು.

ಮಾತ್ರಾಗಣಗಳಿಂದ ಕೂಡಿದ ಪದ್ಯಜಾತಿಗಳೆಂದರೆ–ಕಂದ, ಷಟ್ಪದಿಗಳು[98], ರಗಳೆ[99] ಮೊದಲಾದವುಗಳು. ಈಗ ಒಂದೊಂದಾಗಿ ಮಾತ್ರಾಗಣದ ಪದ್ಯಗಳ ಲಕ್ಷಣವನ್ನು ತಿಳಿಯಿರಿ.

# (1) ಕಂದ ಪದ್ಯದ ಲಕ್ಷಣ

ಕಂದ ॥

| | | | |
|---|---|---|---|
| ಳ | ಳ | ಳ | |
| ∪ ∪ ∪ ∪ | — — | ∪ ∪ ∪ ∪ | |
| ಒ ಡೆ ಯ ಲ | ಜಾಂ ಡಂ | ಕು ಲ ಗಿ ರಿ | । |

| | | | | |
|---|---|---|---|---|
| ಳ | ಳ | ಳ | ಳ | ಳ |
| ∪ ∪ — | ∪ ∪ — | ∪ — ∪ | ∪ ∪ — | ∪ ∪ — |
| ಕ ಡೆ ಯ ಲ್ | ಪಿ ಳಿ ಯ | ಲ್ಕೆ ಧಾ ತ್ರಿ | ದಿ ವಿ ಜ ರ್ | ನ ಡು ಗ । |

| | | | |
|---|---|---|---|
| ಳ | ಳ | ಳ | |
| ∪ ∪ ∪ ∪ | ∪ — ∪ | — ∪ ∪ | |
| ಲ್ಕೊ ಡ ರಿ ಸು | ವಿ ನಂ ಜ | ಟಾ ಸು ರ | । |

| | | | | |
|---|---|---|---|---|
| ಳ | ಳ | ಳ | ಳ | ಳ |
| ∪ — ∪ | ∪ ∪ — | ∪ — ∪ | — — | — — |
| ಹಿ ಡಿಂ ಬ | ಬ ಕ ವೈ | ರಿ ಸಿಂ ಹ | ನಾ ದಂ | ಗೆ ಯ್ದಂ ॥ |

ಮೇಲಿನ ಈ ಕಂದ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣಗಳನ್ನು (ಮಾತ್ರಾಗಣಗಳನ್ನು) ವಿಂಗಡಿಸಿದೆ. ಈ ಪದ್ಯದಲ್ಲಿ ಮೂರು ಮಾತ್ರೆಯ ಅಥವಾ ಐದು ಮಾತ್ರೆಯಗಣಗಳನ್ನು ವಿಂಗಡಿಸಲು ಬರುವಂತಿಲ್ಲ. ಇದರಲ್ಲಿ ನಾಲ್ಕು ನಾಲ್ಕು ಮಾತ್ರೆಯ ಗಣಗಳನ್ನೇ ವಿಂಗಡಿಸಬೇಕು.

---

[98] ಷಟ್ಪದಿಗಳು ಎಂದರೆ–ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕಗಳೆಂಬ ಆರು ಜಾತಿಯ ಷಟ್ಪದಿಗಳೆಂದು ತಿಳಿಯಬೇಕು.

[99] ರಗಳೆಗಳೆಂದರೆ–ಮಂದಾನಿಲರಗಳೆ, ಉತ್ಸಾಹರಗಳೆ, ಲಲಿತರಗಳೆಗಳೆಂದು ತಿಳಿಯಬೇಕು.

**(107) ಲಕ್ಷಣ:– ನಾಲ್ಕು ಸಾಲುಗಳಿಂದ ಕೂಡಿದ ಪದ್ಯ; ಒಂದನೆಯ ಮೂರನೆಯ ಸಾಲುಗಳು ಸಮಾನವಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳಿಂದ ಕೂಡಿವೆ. ಎರಡನೆಯ, ನಾಲ್ಕನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿವೆ.**

ಪೂರ್ವಾರ್ಧದಲ್ಲಿ ಎಂಟು ಗಣಗಳೂ, ಉತ್ತರಾರ್ಧದಲ್ಲಿ ಎಂಟು ಗಣಗಳೂ ಇವೆ. ಪೂರ್ವಾರ್ಧ ಉತ್ತರಾರ್ಧಗಳ ವಿಷಮ ಸ್ಥಾನಗಳಲ್ಲಿ ಎಂದರೆ ೧, ೩, ೫, ೭ನೆಯ ಗಣಗಳ ಸ್ಥಾನದಲ್ಲಿ "∪–∪" ಈ ರೀತಿಯ ಮಧ್ಯ ಗುರುವುಳ್ಳ ಗಣವು ಬರಕೂಡದು. ಪೂರ್ವಾರ್ಧ ಉತ್ತರಾರ್ಧಗಳ ೬ನೆಯ ಗಣವು ಮಾತ್ರ ನಾಲ್ಕು ಮಾತ್ರೆಗಳ ∪∪∪∪ ಹೀಗಿರುವ ಗಣವಾಗಲಿ, ಮಧ್ಯ ಗುರುವುಳ್ಳ ∪–∪ ಹೀಗಿರುವ ಗಣವಾಗಲಿ ಬರಬೇಕು. ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಕೊನೆಗೆ ಗುರು ಬರುವ "– –" ಇಂಥ ಗಣವಾಗಲಿ, "∪∪–" ಇಂಥ ಗಣವಾಗಲಿ ಬರಬೇಕು.

ಮೇಲಿನ ಕಂದ ಪದ್ಯದಲ್ಲಿ ಮೇಲೆ ಹೇಳಿರುವ ಲಕ್ಷಣಗಳೆಲ್ಲ ಬಂದಿರುವುದನ್ನು ಗಮನಿಸಿರಿ.

ಇನ್ನು ಆರು ಜಾತಿಯ ಷಟ್ಪದಿಗಳ ಲಕ್ಷಣಗಳನ್ನು ಕ್ರಮವಾಗಿ ತಿಳಿಯೋಣ. (ಷಟ್=ಆರು, ಪದಿ=ಪಾದಗಳುಳ್ಳದ್ದು ಎಂದು ಅರ್ಥ).

## (2) ಷಟ್ಪದಿಗಳ ಲಕ್ಷಣಗಳು

### (೧) ಶರಷಟ್ಪದಿ

| ಳ | ಳ |
|---|---|
| – ∪ ∪ | ∪ ∪ ∪ ∪ |
| ಈಶನ | ಕರುಣೆಯ |

| ಳ | ಳ |
|---|---|
| – ∪ ∪ | ∪ ∪ ∪ ∪ |
| ನಾಶಿಸು | ವಿನಯದಿ |

| ಳ | ಳ | ಳ | ೧ಗುರು |
|---|---|---|---|
| – ∪ ∪ | – ∪ ∪ | – ∪ ∪ | – |
| ದಾಸನ | ಹಾಗೆಯೆ | ನೀಮನ | ವೇ । |

| ಳ | ಳ |
|---|---|
| – ∪ ∪ | ∪ ∪ ∪ ∪ |
| ಕ್ಲೇಶದ | ವಿಧವಿ ಧ |

| | |
|---|---|
| ೪ | ೪ |
| _ ∪ ∪ | ∪ ∪ ∪ ∪ |
| ಪಾಶವ | ಹರಿ ದುವಿ |

| | | | |
|---|---|---|---|
| ೪ | ೪ | ೪ | ೧ಗುರು |
| _ ∪ ∪ | _ ∪ ∪ | ∪ ∪ ∪ ∪ | _ |
| ಲಾಸದಿ | ಸ ತ್ಯವ | ತಿಳಿಮ ನ | ವೇ ॥ |

(–ಪದ್ಯಸಾರ)

**(108) ಈ ಮೇಲಿನ ಪದ್ಯವು ಆರು ಸಾಲುಗಳಿಂದ ಕೂಡಿದೆ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ೪ ಮಾತ್ರೆಯ ೨ ಗಣಗಳಿಂದ ಕೂಡಿವೆ. ೩ ಮತ್ತು ೬ ನೆಯ ಸಾಲುಗಳು ಒಂದು ಸಮನಾಗಿದ್ದು ೪ ಮಾತ್ರೆಯ ೩ ಗಣಗಳಿಂದಲೂ, ಮೇಲೊಂದು ಗುರುವಿನಿಂದಲೂ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳ ಕೊನೆಯಕ್ಷರ ಲಘುವಾಗಿದ್ದರೂ ಗುರುವೆಂದೇ ತಿಳಿಯಬೇಕು. ಈ ಜಾತಿಯ ಪದ್ಯದಲ್ಲಿ ಮಧ್ಯಗುರುವುಳ್ಳ "∪_∪" ಈ ರೀತಿಯ ಗಣವು ಎಲ್ಲಿಯೂ ಬರಕೂಡದು. ಇಂಥ ಲಕ್ಷಣದಿಂದ ಕೂಡಿದ ಪದ್ಯಗಳು ಶರಷಟ್ಪದಿಗಳೆಂದು ತಿಳಿಯಬೇಕು.**

## (೨) ಕುಸುಮಷಟ್ಪದಿ

| | |
|---|---|
| ೫ | ೫ |
| _ ∪ ∪ ∪ | ∪∪ ∪ _ |
| ಸಂತತಿಯ | ಪಡೆಯೆಭೂ । |

| | |
|---|---|
| ೫ | ೫ |
| _ ∪ ∪ ∪ | ∪∪ ∪ _ |
| ಕಾಂತನ ನು | ದಿನಮುಮಿಂ । |

| | | | |
|---|---|---|---|
| ೫ | ೫ | ೫ | ೧ಗುರು |
| _ ∪ _ | ∪∪ ∪ ∪ ∪ | _ ∪ _ | _ |
| ತಿಂತುನಂ | ದಿನಿಯನುಪ | ಚಾರದಿಂ | ದ ॥ |

| | |
|---|---|
| ೫ | ೫ |
| _ ∪ ∪ ∪ | _ ∪ _ |
| ಸಂತಯಿಪ | ನೋಂಪಿಯಂ । |

| | |
|---|---|
| ೫ | ೫ |
| – – ∪ | – ∪ ∪ ∪ |
| ನೋಂತೇಕ | ವಿಂಶ ತಿದಿ । |

| | | | |
|---|---|---|---|
| ೫ | ೫ | ೫ | ೧ಗುರು |
| – – ∪ | ∪∪ ∪ ∪∪ | – ∪ – | – |
| ನಂತನ್ನ | ಸತಿಯೊಡನೆ | ಸೇವೆಗೈ | ದಂ ॥ |

(–ದಿಲೀಪಚರಿತೆ)

**(109) ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಐದೈದು ಮಾತ್ರೆಗಳ ಎರಡು ಗಣಗಳಿಂದ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ಐದೈದು ಮಾತ್ರೆಗಳ ಮೂರು ಗಣಗಳಿಂದಲೂ ಮೇಲೆ ಒಂದು ಗುರುವಿನಿಂದಲೂ ಕೂಡಿವೆ. ೩ ಮತ್ತು ೬ ನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಭಾವಿಸಬೇಕು. ಈ ಜಾತಿಯ ಪದ್ಯದಲ್ಲಿ "∪–∪∪" ಹೀಗಿರುವ ಮತ್ತು "∪––" ಹೀಗಿರುವ ಗಣವು ಬರಕೂಡದು. ಈ ಲಕ್ಷಣಗಳಿಂದ ಕೂಡಿದ ಪದ್ಯಗಳೇ ಕುಸುಮ ಷಟ್ಪದಿಗಳೆನಿಸುವುವು.**

## (೩) ಭೋಗಷಟ್ಪದಿ

| | | | |
|---|---|---|---|
| ೩ | ೩ | ೩ | ೩ |
| ∪ ∪ ∪ | – ∪ | – ∪ | – ∪ |
| ಮೆರೆಯು | ತಿ ದ್ದ | ಭಾಗ್ಯ | ವೆ ಲ್ಲ |

| | | | |
|---|---|---|---|
| ೩ | ೩ | ೩ | ೩ |
| ∪ ∪ ∪ | – ∪ | ∪ ∪ ∪ | ∪ ∪ ∪ |
| ಹರಿದು | ಹೋಯಿ | ತೆ ನು ತ | ತಿ ರು ಕ |

| | | | | | | |
|---|---|---|---|---|---|---|
| ೩ | ೩ | ೩ | ೩ | ೩ | ೩ | ಗು |
| ∪ ∪ ∪ | – ∪ | – ∪ | – ∪ | ∪ ∪ ∪ | – ∪ | – |
| ಮರಳಿ | ನಾಚಿ | ಪೋಗು | ತಿ ದ್ದ | ಮರುಳ | ನಂತೆ | ಯೆ |

| | | | |
|---|---|---|---|
| ೩ | ೩ | ೩ | ೩ |
| ∪ ∪ ∪ | – ∪ | – ∪ | – ∪ |
| ಧರೆಯ | ಭೋಗ | ವ ನ್ನು | ಮೆಚ್ಚಿ |

| | | | |
|---|---|---|---|
| ೩ | ೩ | ೩ | ೩ |
| ∪ ∪∪ | ∪ ∪ ∪ | ∪ ∪ ∪ | – ∪ |
| ಪರವ | ಮರೆತು | ಕೆ ಡ ಲು | ಬೇಡ |

| | | | | | | |
|---|---|---|---|---|---|---|
| ೩ | ೩ | ೩ | ೩ | ೩ | ೩ | ಗು |
| ∪ ∪ ∪ | – ∪ | ∪ ∪ ∪ | – ∪ | – ∪ | – ∪ | – |
| ಧರೆಯ | ಭೋಗ | ಕ ನ ಸಿ | ನಂತೆ | ಕೇಳು | ಮಾನ | ವಾ ॥ |

(–ಮುಪ್ಪಿನ ಷಡಕ್ಷರಿ)

**(110) ಆರು ಸಾಲುಗಳಿಂದ ಕೂಡಿದ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮೂರು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮಾತ್ರೆಗಳ ಆರಾರು ಗಣಗಳಿಂದಲೂ, ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುವುದು. ಈ ಜಾತಿಯ ಛಂದಸ್ಸಿನ ಪದ್ಯದಲ್ಲಿ "∪ –" ಹೀಗೆ ಇರುವ ಮಾತ್ರಾಗಣ ಬರಕೂಡದು. ಇಂಥ ಲಕ್ಷಣಗಳಿಂದ ಕೂಡಿದ ಪದ್ಯವೇ "ಭೋಗಷಟ್ಪದಿ" ಎನಿಸುವುದು.**

## (೪) ಭಾಮಿನೀ ಷಟ್ಪದಿ

| | | | |
|---|---|---|---|
| ೩ | ೪ | ೩ | ೪ |
| – ∪ | ∪ ∪ ∪ ∪ | – ∪ | ∪ ∪ – |
| ಕಂಡು | ಖಳಬೆ ರ | ಗಾದ | ನಿ ವನು |

| | | | |
|---|---|---|---|
| ೩ | ೪ | ೩ | ೪ |
| – ∪ | ∪ ∪ – | ∪ ∪ ∪ | – ∪ ∪ |
| ದ್ದಂಡ | ತ ನ ವ | ಚ್ಚ ರಿ ಯ | ಲಾಹರಿ |

| | | | | | | |
|---|---|---|---|---|---|---|
| ೩ | ೪ | ೩ | ೪ | ೩ | ೪ | ೧ಗುರು |
| – ∪ | ∪ ∪ ∪ ∪ | ∪ ∪ ∪ | ∪ ∪ – | ∪ ∪ ∪ | ∪ ∪ ∪ ∪ | – |
| ಖಂಡ | ಪ ರ ಶು ಗ | ಳಳುಕು | ವ ರುತ | ನ್ನೊಡನೆ | ತೊಡಕುವ | ರೆ । |

| | | | |
|---|---|---|---|
| ೩ | ೪ | ೩ | ೪ |
| – ∪ | – ∪ ∪ | – ∪ | ∪ ∪ – |
| ಬಂಡಿ | ತುಂಬಿದ | ಕೂಳ | ನಿ ವ ನಿಂ |

| | | | |
|---|---|---|---|
| ೩ | ೪ | ೩ | ೪ |
| – ∪ | ∪ ∪ ∪ ∪ | – ∪ | – ∪ ∪ |
| ದುಂಡು | ಬ ದು ಕ ಲಿ | ಊರ | ಪಾರ್ವರ |

| | | | | | | |
|---|---|---|---|---|---|---|
| ೩ | ೪ | ೩ | ೪ | ೩ | ೪ | ೧ಗುರು |
| – ∪ | ∪ ∪ ∪ ∪ | ∪ ∪ ∪ | ∪ ∪ ∪ ∪ | ∪ ∪ ∪ | ∪ ∪ – | – |
| ಹಿಂಡು | ವೆನುಯಿವ | ಸ ಹಿ ತೆ | ನು ತ ಹಲು | ವೊರೆದ | ನ ಮರಾ | ರಿ ॥ |

(–ಗದುಗಿನ ಭಾರತ)

**(111)** ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮತ್ತು ನಾಲ್ಕು ಮಾತ್ರೆಗಳ ನಾಲ್ಕು ಗಣಗಳಿರುತ್ತವೆ. (ಮೊದಲು ಮೂರು ಮಾತ್ರೆಯ ಗಣ ಅನಂತರ ೪ ಮಾತ್ರೆಯ ಗಣ ಈ ಕ್ರಮದಲ್ಲಿ ಒಟ್ಟು ನಾಲ್ಕು ಗಣಗಳಿರುತ್ತವೆ.) ೩ನೆಯ ೬ನೆಯ ಸಾಲುಗಳು ಒಂದು ಸಮನಾಗಿದ್ದು, ಮೂರು ಮತ್ತು ನಾಲ್ಕು ಮಾತ್ರೆಗಳ ಆರುಗಣಗಳಿಂದಲೂ ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಮೂರು ಮತ್ತು ಆರನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುತ್ತದೆ. ಈ ಜಾತಿಯ ಪದ್ಯದಲ್ಲಿ "∪ – ∪" ಈ ರೀತಿಯ ಮಧ್ಯ ಗುರುವುಳ್ಳ ಗಣವು ಎಲ್ಲಿಯೂ ಬರಕೂಡದು. ಇಂಥ ಲಕ್ಷಣವುಳ್ಳವು ಭಾಮಿನೀ ಷಟ್ಪದಿಗಳೆನಿಸುವುವು.

## (೫) ಪರಿವರ್ಧಿನೀಷಟ್ಪದಿ

| | | | |
|---|---|---|---|
| ೪ | ೪ | ೪ | ೪ |
| ∪ ∪ ∪∪ | – ∪ ∪ | ∪ ∪ ∪ ∪ | – ∪ ∪ |
| ದುರಿತವ | ನಂಬೆ ಳೆ | ವುದಕೆ ಪೊ | ಲಂಕೊಲೆ |

| | | | |
|---|---|---|---|
| ೪ | ೪ | ೪ | ೪ |
| ∪ ∪ ∪∪ | ∪∪ ∪∪ | – ∪ ∪ | ∪ ∪ – |
| ಪರಿ ಕಲಿ | ಸಿದನವ | ದೋಹಳ | ಮನ್ಯತಂ |

| | | | | | | |
|---|---|---|---|---|---|---|
| ೪ | ೪ | ೪ | ೪ | ೪ | ೪ | ೧ಗುರು |
| ∪ ∪ – | ∪ ∪∪∪ | ∪∪∪∪ | – – | – – | ∪ ∪ – | – |
| ಪರಿ ಕಾ | ಲುದಕಮ | ದಕೆಕಳ | ವನ್ಯ | ಸ್ತ್ರೀಸಂ | ಗಮೆಗೆ | ಯ್ಮೆ । |

| | | | |
|---|---|---|---|
| ೪ | ೪ | ೪ | ೪ |
| ∪ ∪ – | ∪ ∪ ∪∪ | – ∪ ∪ | ∪∪∪ ∪ |
| ಪರಿ ರ | ಕ್ಷಣೆಯತಿ | ಕಾಂಕ್ಷೆಯ | ದರಿನವು |

| | | | |
|---|---|---|---|
| ೪ | ೪ | ೪ | ೪ |
| ∪ ∪ – | – ∪ ∪ | – – | – ∪ ∪ |
| ನಿರುತಂ | ಪೊರ್ದುದೊ | ಡಿಲ್ಲಂ | ಸಂಸ್ಕೃತಿ |

| | | | | | | |
|---|---|---|---|---|---|---|
| ೪ | ೪ | ೪ | ೪ | ೪ | ೪ | ೧ ಗುರು |
| ∪ ∪ – | ∪ ∪ – | ∪ ∪ ∪ | ∪ – ∪∪ | – ∪∪ | – – | – |
| ಯುರುಕಿ | ಲ್ಬಿಷಮೆ | ಲ್ಲಿಯದು | ವಿಚಾರಿಸೆ | ಭವ್ಯಜ | ನೋತ್ತಂ | ಸಾ ॥ |

(–ಕನ್ನಡ ಕೈಪಿಡಿ)

**(112) ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು, ನಾಲ್ಕು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿವೆ. ೩ ಮತ್ತು ೬ನೆಯ ಸಾಲುಗಳು ಒಂದು ಸಮನಾಗಿದ್ದು ನಾಲ್ಕು ಮಾತ್ರೆಯ ಆರು ಗಣಗಳಿಂದಲೂ ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಈ ಪದ್ಯದಲ್ಲಿ "∪ – ∪" ಈ ರೀತಿಯಿರುವ ಗಣವು ಎಲ್ಲಿಯೂ ಬರಕೂಡದು. ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆನಿಸುವುದು. ಈ ಲಕ್ಷಣದಿಂದ ಕೂಡಿದ ಪದ್ಯವು ಪರಿವರ್ಧಿನೀಷಟ್ಪದಿಯೆನಿಸುವುದು.**

## (೬) ವಾರ್ಧಕಷಟ್ಪದಿ

| | | | |
|---|---|---|---|
| ೫ | ೫ | ೫ | ೫ |
| – – ∪ | ∪ ∪ – ∪ | ∪∪ ∪ ∪∪ | – ∪ ∪ ∪ |
| ಬಲ್ಗಯ್ಯ | ನೃಪರಂಜಿ | ತಡೆಯದೆರ | ಘೂಧ್ವಹನ । |

| | | | |
|---|---|---|---|
| ೫ | ೫ | ೫ | ೫ |
| – – ∪ | ∪∪ ∪ ∪∪ | – ∪∪ ∪ | – ∪ ∪∪ |
| ಸೊಲ್ಗೇಳಿ | ನಮಿಸಲಿಳೆ | ಯೊಳ್ಚರಿಸು | ತಧ್ವರದ । |

| | | | | | | |
|---|---|---|---|---|---|---|
| ೫ | ೫ | ೫ | ೫ | ೫ | ೫ | ೨ |
| – ∪ ∪ ∪ | – ∪ – | – ∪ ∪ ∪ | – ∪ ∪ ∪ | ∪∪ – ∪ | ∪ ∪ ∪∪ ∪ | – |
| ನಲ್ಗುದುರೆ | ಬಂದುವಾ | ಲ್ಮೀಕಿಯನಿ | ಜಾಶ್ರಮದ | ವಿನಿಯೋಗ | ದುಪವನದೊ | ಳು। |

| | | | |
|---|---|---|---|
| ೫ | ೫ | ೫ | ೫ |
| – ∪ ∪∪ | –∪ ∪∪ | – ∪ – | – ∪ – |
| ಪುಲ್ಗಳಪ | ಸುರ್ಗೆಳಸಿ | ಪೊಕ್ಕೊಡಾ | ತೋಟಗಾ । |

| | | | |
|---|---|---|---|
| ೫ | ೫ | ೫ | ೫ |
| – ∪ – | ∪ ∪ – ∪ | ∪∪ – ∪ | – ∪ ∪ ∪ |
| ವಲ್ಗೆತ | ನ್ನೊಡನಾಡಿ | ಗಳಕೂಡಿ | ಲೀಲೆಮಿಗೆ । |

| | | | | | | |
|---|---|---|---|---|---|---|
| ೫ | ೫ | ೫ | ೫ | ೫ | ೫ | ೨ |
| – – ∪ | ∪ ∪ – ∪ | – – ∪ | – ∪ ∪ ∪ | – ∪ – | – ∪ ∪∪ | – |
| ಬಿಲ್ಗೊಂಡು | ನಡೆತಂದ | ವಂಕಂಡ | ನರ್ಚಿತಸು | ವಾಜಿಯಂ | ವೀರಲವ | ನು ॥ |

**(113) ಆರುಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಪಾದಗಳು ಒಂದು ಸಮನಾಗಿದ್ದು ೫ ಮಾತ್ರೆಯ ೪ ಗಣಗಳಿಂದ ಕೂಡಿದೆ. ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ೫ ಮಾತ್ರೆಯ ಆರುಗಣ ಮತ್ತು ಮೇಲೊಂದು ಗುರುವಿನಿಂದ ಕೂಡಿರುತ್ತವೆ. ೩, ೬ ನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುತ್ತದೆ. ಇಂಥ ಲಕ್ಷಣಗಳುಳ್ಳ ಪದ್ಯಗಳೇ ವಾರ್ಧಕಷಟ್ಪದಿಗಳೆನಿಸುವುವು.**

ಇದುವರೆಗೆ ಕಂದಪದ್ಯ, ಶರ, ಕುಸುಮ, ಭೋಗ, ಭಾಮಿನೀ, ಪರಿವರ್ಧಿನೀ, ವಾರ್ಧಕಗಳೆಂಬ ಮಾತ್ರಾಗಣಗಳ ಛಂದಸ್ಸಿನ ಪದ್ಯಗಳ ಲಕ್ಷಣಗಳನ್ನು ತಿಳಿದಿರಿ. ಇವೆಲ್ಲ ಸಾಮಾನ್ಯವಾಗಿ, ಮೂರು, ನಾಲ್ಕು, ಐದು, ಮಾತ್ರೆಗಳ ಲೆಕ್ಕದಿಂದ ವಿಭಾಗಿಸಿಕೊಂಡ ಗಣಗಳನ್ನು ಬಳಸಿ ರಚಿಸಲ್ಪಟ್ಟ ಪದ್ಯಗಳು. ಈಗ ಮಾತ್ರೆಗಳ ಗಣದ ಲೆಕ್ಕದಿಂದಲೇ ರಚಿಸಲ್ಪಟ್ಟಿರುವ ಇನ್ನೊಂದು ಬಗೆಯ ಪದ್ಯಗಳ ಲಕ್ಷಣ ತಿಳಿಯೋಣ.

## (3) ರಗಳೆ ಜಾತಿಯ ಪದ್ಯಲಕ್ಷಣಗಳು

'**ರಗಳೆ**' ಎಂಬುದು '**ರಘಟಾ**' ಎಂಬ ಸಂಸ್ಕೃತ ಶಬ್ದದ ತದ್ಭವ ಪದ. ಕನ್ನಡದಲ್ಲಿ ಸಾಮಾನ್ಯವಾಗಿ **ಉತ್ಸಾಹರಗಳೆ, ಮಂದಾನಿಲರಗಳೆ, ಲಲಿತರಗಳೆ** ಎಂದು ಮೂರು ವಿಧವಾದ ರಗಳೆಗಳು ಪ್ರಸಿದ್ಧವಾಗಿವೆ. ರಗಳೆಯ ಪದ್ಯಗಳಲ್ಲಿ ಇದುವರೆಗೆ ಹೇಳಿದ ನಾಲ್ಕು ಅಥವಾ ಆರು ಸಾಲುಗಳ ಪದ್ಯಗಳಂತೆ, ಇಷ್ಟೇ ಸಾಲುಗಳಿರಬೇಕೆಂಬ ನಿಯಮವೇ ಇಲ್ಲ. ಎಷ್ಟು ಬೇಕಾದರೂ ಸಾಲುಗಳು ಹಾಗೆಯೇ ಬೆಳೆಯುತ್ತ ಹೋಗಬಹುದು. ಆದರೆ ಎಲ್ಲ ಸಾಲುಗಳೂ ಸಮಾನವಾದ ಮಾತ್ರಾಗಣಗಳಿಂದ ಕೂಡಿರುತ್ತವೆ. ಮತ್ತು ಎರಡೆರಡು ಸಾಲುಗಳಲ್ಲಿ ಪ್ರಾಸದ ನಿಯಮವಿರುತ್ತದೆ. ಅಂತ್ಯಪ್ರಾಸವೂ ಇರುವುದುಂಟು.

# (೧) ಉತ್ಸಾಹರಗಳೆಯ ಲಕ್ಷಣ

(i)

| ೩ | ೩ | ೩ | ೩ |
|---|---|---|---|
| ∪ ∪ ∪ | – ∪ | – ∪ | – ∪ |
| [100]ಕುಳಿರ್ವ | ಪೊಗೋ | ಳಂಗ | ಳ ಲ್ಲಿ |

| ೩ | ೩ | ೩ | ೩ |
|---|---|---|---|
| ∪∪ ∪ | – ∪ | – ∪ | – ∪ |
| ತಳಿರ | ಕಾವ | ಣಂಗ | ಳ ಲ್ಲಿ |

| ೩ | ೩ | ೩ | ೩ |
|---|---|---|---|
| – ∪ | – ∪ | – ∪ | – ∪ |
| ತುಂಬಿ | ವಿಂಡಿ | ನಂತೆ | ಪಾಡಿ |

| ೩ | ೩ | ೩ | ೩ |
|---|---|---|---|
| – ∪ | – ∪ | – ∪ | – ∪ |
| ಜಕ್ಕ | ವ ಕ್ಕಿ | ಯಂತೆ | ಕೂಡಿ |

(–ಕಬ್ಬಿಗರಕಾವ)

ನಾಲ್ಕುಸಾಲುಗಳುಳ್ಳ ಈ ಉತ್ಸಾಹರಗಳೆಯಲ್ಲಿ ಪ್ರತಿಯೊಂದು ಸಾಲಿನಲ್ಲೂ ಮೂರು ಮಾತ್ರೆಯ ನಾಲ್ಕು ಗಣಗಳುಂಟು. ಮೊದಲಿನ ಎರಡು ಸಾಲುಗಳಲ್ಲಿ ಆದಿಪ್ರಾಸವೂ ಇದೆ, ಅಂತ್ಯಪ್ರಾಸವೂ ಇದೆ. ಇನ್ನೆರಡು ಸಾಲುಗಳಲ್ಲಿ ಆದಿಪ್ರಾಸವಿಲ್ಲ, ಅಂತ್ಯಪ್ರಾಸವಿದೆ. ಕೆಲವು ಕಡೆ ಹೀಗೂ ಇರುವುದುಂಟು. ಆದರೆ ಆದಿಪ್ರಾಸವಿರುವುದೇ ಹೆಚ್ಚು. ಹೀಗೆ–

**(114) ಎರಡೆರಡು ಸಾಲುಗಳಲ್ಲಿ ಪ್ರಾಸನಿಯಮವಿಟ್ಟುಕೊಂಡು ಮೂರು ಮಾತ್ರೆಯ ನಾಲ್ಕು ಗಣಗಳ ಗಣನಿಯಮದಿಂದ ಸಾಲುಗಳ ನಿಯಮವಿಲ್ಲದೆ ಇರುವ ಪದ್ಯ ಜಾತಿಯೇ ಉತ್ಸಾಹರಗಳೆಯೆನಿಸುವುದು.**

---

100 'ಕುಳಿರ್ವ' ಎಂಬಲ್ಲಿ 'ರ್ವ' ಎಂಬುದು ಸಂಯುಕ್ತಾಕ್ಷರವಾಗಿದ್ದು ಹಿಂದಿನ 'ಳಿ' ಎಂಬಕ್ಷರ ಗುರುವಾಗಬೇಕಾಗಿತ್ತು. ಆದರೆ ಹಾಗೆ ಆಗಿಲ್ಲ. ಏಕೆಂದರೆ–ಹಳಗನ್ನಡದಲ್ಲಿ ಕೆಲವು ಕಡೆ ಕೆಲವು ದ್ವಿತ್ವಾಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸಿ ಅಂಥವನ್ನು ಶಥಿಲದ್ವಿತ್ವ ಎಂದು ಕರೆಯುತ್ತಾರೆ. ಹೀಗೆ ಶಿಥಿಲದ್ವಿತ್ವವಾಗಿ ಉಚ್ಚರಿಸಿದ ಸಂಯುಕ್ತಾಕ್ಷರದ ಹಿಂದಿನ ಅಕ್ಷರ ಗುರುವಾಗುವುದಿಲ್ಲ. ಬರ್ದಿಲ, ಗರ್ದುಗು, ಅಮರ್ದು, ಎರ್ದೆ, ಕರ್ದುಂಕು, ಬರ್ದುಂಕು, ಜಗುಳ್ದಂ, ನಿಮಿರ್ವ, ತೊಡರ್ದಪಂ, ಅಮರ್ಗುಂ, ನುಸುಳ್ಗೆ– ಇಂಥವೆಲ್ಲ ಶಿಥಿಲದ್ವಿತ್ವಗಳಾಗುವುವು. ಇನ್ನೂ ಅನೇಕ ಕಡೆ ಶಥಿಲದ್ವಿತ್ವ ಬರುತ್ತದೆ. ಸದ್ಯಕ್ಕೆ 'ಕುಳಿರ್ವ' ಎಂಬಲ್ಲಿ 'ರ್ವ' ಎಂಬುದು ಶಥಿಲದ್ವಿತ್ವವೆಂದು ತಿಳಿದರೆ ಸಾಕು. ಈ ರೀತಿ ಹಳಗನ್ನಡದಲ್ಲಿ ಮಾತ್ರ ಇರುತ್ತದೆ.

(ii) ಈ ಉತ್ಸಾಹರಗಳೆಯಲ್ಲಿ ಇನ್ನೂ ಒಂದು ವಿಧವುಂಟು. ಕೆಳಗಿನ ಪದ್ಯವನ್ನು ನೋಡಿರಿ:–

| | | | |
|---|---|---|---|
| ೩ | ೩ | ೩ | ೧ಗುರು |
| – ∪ | ∪∪ ∪ | – ∪ | – |
| ಮಾವಿ | ನಡಿಯೊ | ಳಾಡು | ತುಂ |

| | | | |
|---|---|---|---|
| ೩ | ೩ | ೩ | ೧ಗುರು |
| – ∪ | – ∪ | – ∪ | – |
| ಪಾಡ | ವೆಯ್ದಿ | ಕೇಳು | ತುಂ |

| | | | |
|---|---|---|---|
| ೩ | ೩ | ೩ | ೧ಗುರು |
| – ∪ | – ∪ | ∪∪ ∪ | – |
| ಪೊಳ್ತ | ನಿಂತು | ಕಳೆಯು | ತುಂ |

| | | | |
|---|---|---|---|
| ೩ | ೩ | ೩ | ೧ಗುರು |
| ∪ ∪ ∪ | – ∪ | ∪ ∪ ∪ | – |
| ತೊಲಗ | ದಿರ್ದ | ರೆಸೆಯು | ತುಂ |

(–ಕಬ್ಬಿಗರ ಕಾವ)

ಮೇಲಿನ ಎರಡನೆಯ ರೀತಿಯ ಉತ್ಸಾಹರಗಳೆಯಲ್ಲಿ ಎಲ್ಲ ಸಾಲುಗಳೂ ಮೂರು ಮಾತ್ರೆಯ ಮೂರುಗಣಗಳಿಂದಲೂ ಮೇಲೊಂದು ಗುರುವಿನಿಂದಲೂ ಕೂಡಿವೆ. ಮೊದಲೆರಡು ಸಾಲುಗಳಲ್ಲಿ ಆದಿಪ್ರಾಸ ಅಂತ್ಯಪ್ರಾಸಗಳೆರಡೂ ಇವೆ. ಕೊನೆಯ ಎರಡು ಸಾಲುಗಳಲ್ಲಿ ಅಂತ್ಯಪ್ರಾಸ ಮಾತ್ರ ಇದೆ.

ಹೀಗೆ ಮೂರು ಮಾತ್ರೆಯ ಮೂರುಗಣ ಮೇಲೊಂದು ಗುರುವಿನಿಂದ ಕೂಡಿದ ವ್ಯವಸ್ಥೆಯಿಂದಲೂ ಉತ್ಸಾಹರಗಳೆಯ ಛಂದಸ್ಸಿನ ಪದ್ಯಗಳಿರುತ್ತವೆಂದು ತಿಳಿಯಬೇಕು.

## (೨) ಮಂದಾನಿಲರಗಳೆಯ ಲಕ್ಷಣ

(i)

| | | | |
|---|---|---|---|
| ೪ | ೪ | ೪ | ೪ |
| – ∪ ∪ | – – | ∪ ∪ ∪ ∪ | – – |
| ಆಡುವ | ಗುಂಡ | ಯ್ಯನಹೊಸ | ನೃತ್ಯಂ । |

| | | | |
|---|---|---|---|
| ೪ | ೪ | ೪ | ೪ |
| – ∪ ∪ | ∪∪ – | – ∪ ∪ | – – |
| ನೋಡುವ | ಶಿವನಂ | ಮುಟ್ಟಿತು | ಸತ್ಯಂ । |

| | | | |
|---|---|---|---|
| ೪ | ೪ | ೪ | ೪ |
| ∪ ∪ – | – – | – – | – – |
| ಸುಖದಾ | ಟಂತ | ನ್ನಂಬೆಂ | ಬತ್ತಲ್ |

| | | | |
|---|---|---|---|
| ೪ | ೪ | ೪ | ೪ |
| ∪ ∪ ∪ ∪ | – – | ∪ ∪ – | – – |
| ಸುಖಮುಖ | ದಿಂದಂ | ಮನಮಂ | ಸುತ್ತಲ್ |

(–ಕುಂಬಾರ ಗುಂಡಯ್ಯನ ರಗಳೆ)

ಮೇಲಿನ ಮಂದಾನಿಲರಗಳೆಯ ಪದ್ಯದಲ್ಲಿ ಪ್ರತಿಯೊಂದು ಪಾದದಲ್ಲೂ ನಾಲ್ಕು ಮಾತ್ರೆಯ ನಾಲ್ಕು ಗಣಗಳಿವೆ. ಮೊದಲೆರಡು ಸಾಲುಗಳಲ್ಲಿ 'ಡ್' ಪ್ರಾಸಾಕ್ಷರವೂ, ಉಳಿದೆರಡು ಸಾಲುಗಳಲ್ಲಿ 'ಖ್' ಪ್ರಾಸಾಕ್ಷರವೂ ಇದೆ. ಅಂತ್ಯ ಪ್ರಾಸವೂ ಎರಡೆರಡು ಸಾಲುಗಳಲ್ಲಿ ಬೇರೆ ಬೇರೆ ಇದೆ. ಹೀಗೆ–

**(115) ನಾಲ್ಕು ಮಾತ್ರೆಯ ನಾಲ್ಕು ಗಣ ಪ್ರತಿಪಾದದಲ್ಲೂ ಬಂದು ಎರಡೆರಡು ಸಾಲುಗಳಿಗೆ ಪ್ರಾಸನಿಯಮವಿರುವ ಪದ್ಯಜಾತಿಗೆ ಮಂದಾನಿಲರಗಳೆಯೆನ್ನುವರು. ಅಂತ್ಯಪ್ರಾಸವೂ ಕೆಲವು ಕಡೆ ಇರುವುದುಂಟು.**

(ii) ಈ ಮಂದಾನಿಲರಗಳೆಯಲ್ಲಿ ಇನ್ನೂ ಒಂದು ವಿಧವುಂಟು. ಈ ಕೆಳಗಣ ಪದ್ಯ ನೋಡಿರಿ.

| | | | |
|---|---|---|---|
| ೩ | ೫ | ೩ | ೫ |
| – ∪ | – ∪ – | ∪ ∪∪ | ∪ ∪ ∪ – |
| ನಂದ | ನಂಗಳೊಳ್ | ಸುಳಿವ | ಬಿರಯಿಯಿಂ |

| | | | |
|---|---|---|---|
| ೩ | ೫ | ೩ | ೫ |
| – ∪ | –∪ ∪ ∪ | – ∪ | ∪ ∪ ∪ – |
| ಕಂಪು | ಕಣ್ಮಲೆಯ | ಪೂತ | ಸುರಯಿಯಿಂ |

| | | | |
|---|---|---|---|
| ೩ | ೫ | ೩ | ೫ |
| – ∪ | – ∪ ∪ ∪ | ∪ ∪ ∪ | – ∪ – |
| ಸುತ್ತ | ಲುಂಪರಿ ವ | ಜರಿ ಪೊ | ನಲ್ಗಳಿಂ |

| | | | |
|---|---|---|---|
| ೩ | ೫ | ೩ | ೫ |
| – ∪ | – ∪ ∪ ∪ | ∪ ∪ ∪ | – ∪ – |
| ಎತ್ತ | ಲುಂ ನಲಿವ | ಪೊಸ ನ | ವಿಲ್ಗಳಿಂ |

(–ಪಂಪಭಾರತ)

ಮೇಲೆ ವಿವರಿಸಿದಂತೆ ಪ್ರತಿಯೊಂದು ಪಾದದಲ್ಲೂ ಮೂರು ಮತ್ತು ಐದು ಮಾತ್ರೆಯ ನಾಲ್ಕು ಗಣ (ಒಟ್ಟು ೧೬ ಮಾತ್ರೆಗಳು) ಗಳ ಲೆಕ್ಕದಿಂದಲೂ ಮಂದಾನಿಲರಗಳೆಯ ಪದ್ಯಗಳಿರುವುದೂ ಉಂಟು. ಮೊದಲೆರಡು ಸಾಲುಗಳಲ್ಲಿ ಆದಿಪ್ರಾಸ ನಿಯಮವಿಲ್ಲ. ಆದರೆ 'ಬಿರಯಿಯಿಂ' 'ಸುರಯಿಯಿಂ' ಎಂದು ಅಂತ್ಯಪ್ರಾಸವಿದೆ. ಕೊನೆಯೆರಡು ಸಾಲುಗಳಲ್ಲಿ ಆದಿಪ್ರಾಸವೂ ಅಂತ್ಯಪ್ರಾಸವೂ ಇದೆ. ಹೀಗೆ–

**(116) ಮೂರಾದ ಮೇಲೆ ಐದು ಮಾತ್ರೆಯಗಣದಿಂದ ಕೂಡಿದ, ಒಟ್ಟು ನಾಲ್ಕು ಮಾತ್ರಾಗಣದಿಂದ ಕೂಡಿ ಎರಡೆರಡು ಸಾಲಿನಲ್ಲಿ ಆದಿಪ್ರಾಸವಾಗಲಿ ಅಂತ್ಯ ಪ್ರಾಸವಾಗಲಿ, ಅಥವಾ ಎರಡು ಕಡೆಗೂ ಪ್ರಾಸ ನಿಯಮವಿರುವ ಪದ್ಯ ಜಾತಿಯೂ ಮಂದಾನಿಲರಗಳೆಯಲ್ಲಿ ಎರಡನೆಯ ವಿಧವಾಗಿದೆ.**

## (೩) ಲಲಿತರಗಳೆಯ ಲಕ್ಷಣ

| | | | |
|---|---|---|---|
| ೫ | ೫ | ೫ | ೫ |
| ∪ ∪ ∪ ∪ ∪ | ∪ ∪ ∪ ∪ ∪ | ∪ ∪ ∪∪∪ | – ∪ ∪∪ |
| ಅಳಿಯೆ ರ ಗ | ದ ನಿ ಲ ನ ಲು | ಗ ದ ರವಿಕ | ರಂಪುಗದ |
| ೫ | ೫ | ೫ | ೫ |
| ∪ ∪ – ∪ | ∪ ∪ – ∪ | ∪ ∪ ∪ ∪ ∪ | ∪ ∪ ∪ ∪ ∪ |
| ಸುಳಿಗೊಂಡು | ದ ಳವೇ ರಿ | ಹ ಸುರ ಳಿದು | ಬೆ ಳ ಳಿಪುದು |
| ೫ | ೫ | ೫ | ೫ |
| ∪ ∪ ∪ ∪ ∪ | –∪ – | ∪∪ – ∪ | – – ∪ |
| ಸುರುಚಿರ ಮೆ | ನಿಪ್ಪಮೀ | ಸಲವೊಗ್ಗಿ | ಯಂಕೊಂಡು |
| ೫ | ೫ | ೫ | ೫ |
| ∪ ∪ –∪ | – ∪ ∪ ∪ | ∪ ∪ ∪ ∪ ∪ | – – ∪ |
| [101]ಇರವಂತಿ | ಯೊಳ್ಮೆರೆವ | ಬಿರಿಮುಗುಳ್ಗ | ಳಂಕೊಂಡು |

(–ಬಸವರಾಜದೇವರ ರಗಳೆ)

[101] ಈ ಸಾಲಿನಲ್ಲಿ 'ಮುಗುಳ್ಗಳಂ' ಎಂಬ ಪದದಲ್ಲಿರುವ 'ಳ' ಎಂಬುದು ಒತ್ತಕ್ಷರವಾದ್ದರಿಂದ ಅದರ ಹಿಂದಿನ 'ಗು' ಎಂಬುದು ಗುರುವಾಗಬೇಕು; ಆದರೆ ಈ ಹಿಂದೆ ಅಡಿಟಿಪ್ಪಣಿಯಲ್ಲಿ ವಿವರಿಸಿದಂತೆ ಅದನ್ನು 'ಶಿಥಿಲದ್ವಿತ್ವ' ವೆಂದು ಭಾವಿಸಿದ್ದರಿಂದ ಅದರ ಹಿಂದಿರುವ 'ಗ' ಎಂಬಕ್ಷರ ಲಘುವಾಗಿದೆ.

ಮೇಲಿನ ಈ ಲಲಿತರಗಳೆಯ ಪದ್ಯದ ಪ್ರತಿಯೊಂದು ಸಾಲಿನಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳಿವೆ. ಎರಡೆರಡು ಸಾಲುಗಳಲ್ಲಿ ಆದಿಪ್ರಾಸನಿಯಮವಿದೆ. ಅಂತ್ಯಪ್ರಾಸವೂ ಎರಡೆರಡು ಸಾಲುಗಳಿಗೆ ಬೇರೆ ಬೇರೆಯಾಗಿಯೇ ಇದೆ.

**(117) ಈ ರೀತಿಯಲ್ಲಿ ಪಾದ (ಸಾಲು)ಗಳು ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲದೆ, ಪ್ರತಿಯೊಂದು ಪಾದದಲ್ಲೂ ಐದೈದು ಮಾತ್ರೆಯ ನಾಲ್ಕು ಗಣಗಳನ್ನಿಟ್ಟು ಎರಡೆರಡು ಸಾಲುಗಳಲ್ಲಿ ಪ್ರಾಸನಿಯಮವನ್ನು ಮುಖ್ಯವಾಗಿ ಆದಿಯಲ್ಲಿ ಪಾಲಿಸಿಕೊಂಡು ಬರೆಯಲ್ಪಟ್ಟ ಪದ್ಯಗಳು 'ಲಲಿತರಗಳೆ'ಗಳೆನಿಸುವುವು. ಅಂತ್ಯ ಪ್ರಾಸದ ನಿಯಮವೂ ಎರಡೆರಡು ಸಾಲುಗಳಿಗೆ ಇರಬಹುದು. ಕೆಲವು ಕಡೆ ಆದಿಪ್ರಾಸವಿಲ್ಲದೆ ಕೇವಲ ಅಂತ್ಯ ಪ್ರಾಸವೂ ಇರಬಹುದು. ಇಂಥ ಉದಾಹರಣೆಗಳು ತೀರ ಕಡಿಮೆ.**

ಇದುವರೆಗೆ ಮಾತ್ರಾಗಣದ ಲೆಕ್ಕದಿಂದ ರಚಿಸಲ್ಪಟ್ಟ ಅನೇಕ ವಿಧ ಛಂದಸ್ಸಿನ ಲಕ್ಷಣಗಳನ್ನು ವಿವರವಾಗಿ ಅರಿತಿದ್ದೀರಿ. ಮೇಲೆ ಹೇಳಿದ ಎಲ್ಲ ಛಂದೋಜಾತಿಗಳಲ್ಲಿ ಮೂರು, ನಾಲ್ಕು, ಐದು ಮಾತ್ರೆಗಳ ಗುಂಪುಗಳನ್ನು (ಗಣಗಳನ್ನು) ವಿಂಗಡಿಸುವ ರೀತಿನೀತಿಗಳ ಬಗೆಗೆ ಅರಿತಿದ್ದೀರಿ. ಈಗ ಇನ್ನೊಂದು ರೀತಿಯ ಗಣ ವಿಂಗಡಣೆಯಿಂದ ಕೂಡಿದ ಪದ್ಯ ಜಾತಿಗಳನ್ನು ನೋಡೋಣ.

## VI – ಅಕ್ಷರಗಣಗಳು

**(118) ಅಕ್ಷರಗಣಗಳೆಂದರೆ ಮೂರು ಮೂರು ಅಕ್ಷರಗಳ ಗುಂಪುಗಳನ್ನು ಒಂದೊಂದು ಗಣವೆಂದು ತಿಳಿಯುವ ಗಣಗಳು. ಮೂರು ಮೂರು ಅಕ್ಷರಗಳ ಗುಂಪಿನಲ್ಲಿ ಮಾತ್ರೆಗಳು ಮೂರೆ ಇರಬಹುದು, ನಾಲ್ಕು, ಐದು, ಆರು ಮಾತ್ರೆಗಳೂ ಇರಬಹುದು. ಅದು ಮುಖ್ಯವಲ್ಲ. ಇಲ್ಲಿ ಮೂರು ಮೂರು ಅಕ್ಷರಗಳು ಮುಖ್ಯ. ಹೀಗೆ ಮೂರು ಮೂರು ಅಕ್ಷರಗಳ ಲೆಕ್ಕದಿಂದ ಗಣಗಳನ್ನು ವಿಂಗಡಿಸುವುದು ವೃತ್ತಜಾತಿಯ ಛಂದಸ್ಸುಗಳಲ್ಲಿ ಮಾತ್ರ. ವೃತ್ತಗಳು ಹಲವಾರು ವಿಧಗಳುಂಟು. ಅವುಗಳೊಡನೆ ಕನ್ನಡದಲ್ಲಿ ಮುಖ್ಯವಾಗಿ ಬರುವ ಉತ್ಪಲಮಾಲವೃತ್ತ, ಚಂಪಕಮಾಲಾವೃತ್ತ, ಶಾರ್ದೂಲವಿಕ್ರೀಡಿತವೃತ್ತ, ಮತ್ತೇಭವಿಕ್ರೀಡಿತವೃತ್ತ, ಸ್ರಗ್ಧರಾವೃತ್ತ, ಮಹಾಸ್ರಗ್ಧರಾವೃತ್ತ ಗಳೆಂಬ ಆರು ಜಾತಿಯ ವೃತ್ತಗಳ ಪರಿಚಯವನ್ನು ಪ್ರೌಢಶಾಲೆಯ ಮಕ್ಕಳು ತಿಳಿದರೆ ಸಾಕು. ಆದ್ದರಿಂದ ಮೊದಲು ಅಕ್ಷರಗಣಗಳ ಪರಿಚಯವನ್ನು ಮಾಡಿಕೊಂಡು ವೃತ್ತಗಳಲ್ಲಿ ಅವು ಹೇಗೆ ಬಳಸಲ್ಪಡುತ್ತವೆಂಬುದನ್ನು ತಿಳಿಯಿರಿ.**

**ಅಕ್ಷರಗಣಗಳು ಒಟ್ಟು ೮ ವಿಧ. ಅವುಗಳ ವಿನ್ಯಾಸವು ಈ ಕೆಳಗಿನಂತೆ ಇದೆ–**

| | | | |
|---|---|---|---|
| (೧) ಮಗಣ | – – – | – – – | ಬೇ ವೇ ಶಂ |
| (೨) ನಗಣ | ∪ ∪ ∪ | ∪ ∪ ∪ | ಸ ಹಿ ತ |
| (೩) ಭಗಣ | – ∪ ∪ | – ∪ ∪ | ಸಾ ಗ ರ |
| (೪) ಯಗಣ | ∪ – – | ∪ – – | ಮ ಹೇ ಶಂ |
| (೫) ಜಗಣ | ∪ – ∪ | ∪ – ∪ | ಮ ಹ ತ್ವ |
| (೬) ರಗಣ | – ∪ – | – ∪ – | ಸ ಜ್ಜ ನಂ |
| (೭) ಸಗಣ | ∪ ∪ – | ∪ ∪ – | ಸ ಹಿ ತಂ |
| (೮) ತಗಣ | – – ∪ | – – ∪ | ಸಾ ಹಿ ತ್ಯ |

ಮೇಲೆ ವಿವರಿಸಿದಂತೆ ಮೂರು ಗುರುಗಳು ಬರುವ ಮೂರು ಅಕ್ಷರದ ಗಣ 'ಮಗಣ'. ಮೂರು ಲಘು ಬರುವ ಮೂರಕ್ಷರದ ಗಣ 'ನಗಣ'. ಗುರು ಮೊದಲು ಬಂದು ಎರಡು ಲಘು ಬರುವ ಗಣವೇ 'ಭಗಣ'. ಲಘು ಮೊದಲು ಬಂದು ಎರಡು ಗುರುಗಳು ಬರುವ ಗಣವೇ 'ಯಗಣ'. ಗುರು ನಡುವೆ ಬರುವುದು 'ಜಗಣ'. ಲಘು ನಡುವೆ ಬರುವುದು 'ರಗಣ'. ಗುರು ಕೊನೆಯಲ್ಲಿ ಬರುವ ಗಣ 'ಸಗಣ'. ಲಘು ಕೊನೆಯಲ್ಲಿ ಬರುವ ಗಣ 'ತಗಣ'. ಹೀಗೆ ಎಂಟು ಪ್ರಕಾರದಲ್ಲಿ ಈ ಅಕ್ಷರ ಗಣದ ವಿನ್ಯಾಸಗಳಿವೆ. ಈ ಎಂಟೂ ಗಣಗಳ ವಿನ್ಯಾಸವನ್ನು ಸುಲಭವಾಗಿ ತಿಳಿಯಲು ಈ ಕೆಳಗಣ ಪದ್ಯವನ್ನು ಕಂಠಪಾಠ ಮಾಡಿದರೆ ಅನುಕೂಲವಾಗುವುದು:–

ಗುರು–ಲಘು ಮೂರಿರೆ ಮ–ನಗಣ ।
ಗುರು–ಲಘು ಮೊದಲಲ್ಲಿ ಬರಲು ಭ–ಯಗಣಮೆಂಬರ್ ।
ಗುರು–ಲಘು ನಡುವಿರೆ ಜ–ರಗಣ ।
ಗುರು–ಲಘು ಕೊನೆಯಲ್ಲಿ ಬರಲು ಸ–ತಗಣಮಕ್ಕುಂ ॥

ಗುರು ಮೂರಿರೆ ಮಗಣ; ಲಘು ಮೂರಿರೆ ನಗಣ; ಗುರು ಮೊದಲಲ್ಲಿ ಬರಲು ಭಗಣ; ಲಘು ಮೊದಲಲ್ಲಿ ಬರಲು ಯಗಣ; ಗುರು ನಡುವಿರೆ ಜಗಣ; ಲಘು ನಡುವಿರೆ ರಗಣ; ಗುರು ಕೊನೆಯಲ್ಲಿ ಬರಲು ಸಗಣ; ಲಘು ಕೊನೆಯಲ್ಲಿ ಬರಲು ತಗಣ–ಎಂದು ಈ ಪದ್ಯದ ಅರ್ಥ.

ಅಥವಾ ಈ ಎಂಟೂ ಗಣಗಳ ತಿಳಿವಳಿಕೆಗೆ ಇನ್ನೂ ಒಂದು ರೀತಿಯ ವಿಧಾನವುಂಟು. ಕೆಳಗಣ ಈ ಸೂತ್ರ ನೋಡಿರಿ:–

**"ಯಮಾತಾರಾಜಭಾನಸಲಗಂ"**

ಈ ಸೂತ್ರದಿಂದ ಗಣಗಳ ಗುರು ಲಘು ವಿನ್ಯಾಸವನ್ನು ಹೇಗೆ ತಿಳಿಯಬೇಕೆಂದರೆ–'ಯ, ಮ, ತ, ರ, ಜ, ಭ, ನ, ಸ' ಎಂಟು ಗಣಗಳಲ್ಲಿ ನಮಗೆ ಯಾವ ಗಣದ ವಿನ್ಯಾಸ ಬೇಕಾದಾಗಲೂ 'ಯಮಾತಾರಾಜಭಾನಸಲಗಂ' ಈ ಸೂತ್ರದಲ್ಲಿ ಆಯಾ ಅಕ್ಷರದಿಂದ ಮೊದಲ್ಗೊಂಡು ಮೂರು ಅಕ್ಷರಗಳಿಗೆ ಪ್ರಸ್ತಾರ ಹಾಕಿಕೊಂಡರೆ ಆ ಗಣದ ವಿನ್ಯಾಸ ಬರುತ್ತದೆ. ಉದಾಹರಣೆಗೆ ಯಗಣಕ್ಕೆ ಸೂತ್ರದಲ್ಲಿಯ ಯಕಾರದಿಂದ ಮೂರಕ್ಷರ ತೆಗೆದುಕೊಳ್ಳಬೇಕು.

| | | |
|---|---|---|
| ∪ – –<br>ಯ ಮಾ ತಾ | ∪ – – | ಯಗಣ |
| – – –<br>ಮಾ ತಾ ರಾ | – – – | ಮಗಣ |
| – – ∪<br>ತಾ ರಾ ಜ | – – ∪ | ತಗಣ |
| – ∪ –<br>ರಾ ಜ ಭಾ | – ∪ – | ರಗಣ |
| ∪ – ∪<br>ಜ ಭಾ ನ | ∪ – ∪ | ಜಗಣ |
| – ∪ ∪<br>ಭಾ ನ ಸ | – ∪ ∪ | ಭಗಣ |
| ∪ ∪ ∪<br>ನ ಸ ಲ | ∪ ∪ ∪ | ನಗಣ |
| ∪ ∪ –<br>ಸ ಲ ಗಂ | ∪ ∪ – | ಸಗಣ |

'ಲ' ಎಂದರೆ ಲಘು (∪); 'ಗು' ಎಂದರೆ ಗುರು (–) ಎಂದು ತಿಳಿಯಬೇಕು.

ಇದುವರೆಗೆ ಎಂಟು ವಿಧವಾದ ಅಕ್ಷರ ಗಣಗಳ ವಿನ್ಯಾಸ ಕ್ರಮವನ್ನು ತಿಳಿದಿರಿ. ಇನ್ನು ಈ ಎಂಟೂಗಣಗಳ ನಿಯಮದಿಂದ ರಚಿಸಲ್ಪಟ್ಟ ವೃತ್ತ ಜಾತಿಯ ಛಂದಸ್ಸಿನ ಲಕ್ಷಣ ತಿಳಿಯೋಣ.

# (4) ವೃತ್ತಜಾತಿಯ ಛಂದಸ್ಸಿನ ಲಕ್ಷಣಗಳು

## (೧) ಉತ್ಪಲಮಾಲಾವೃತ್ತದ ಲಕ್ಷಣ

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – ∪ ∪ | – ∪ – | ∪ ∪ ∪ | – ∪ ∪ | – ∪ ∪ | – ∪ – | ∪ – |
| ಚಾಗದ | ಭೋಗದ | ಕ್ಕ ರದ | ಗೇಯದ | ಗೊಟ್ಟಿಯ | ಲಂಪಿನಿಂ | ಪುಗ.। |

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – ∪ ∪ | – ∪ – | ∪∪∪ | – ∪ ∪ | – ∪ ∪ | – ∪ – | ∪ – |
| ಳ್ಗಾಗರ | ಮಾಡಮಾ | ನಿಸರೆ | ಮಾನಿಸ | ರಂತವ | ರಾಗಿಪು | ಟ್ಟಲೇ–। |

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – ∪ ∪ | – ∪ – | ∪ ∪ ∪ | – ∪ ∪ | – ∪ ∪ | – ∪ – | ∪ – |
| ನಾಗಿಯು | ಮೇನೊತೀ | ರ್ದಪುದೆ | ತೀರದೊ | ಡಂಮರಿ | ದುಂಬಿಯಾ | ಗಿಮೇಣ್। |

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – ∪ ∪ | – ∪– | ∪ ∪ ∪ | – ∪∪ | – ∪ ∪ | – ∪ – | ∪ – |
| ಕೋಗಿಲೆ | ಯಾಗಿಪು | ಟ್ಟುವುದು | ನಂದನ | ದೋಳ್ಬನ | ವಾಸಿದೇ | ಶದೊಳ್॥ |

(–ವಿಕ್ರಮಾರ್ಜುನ ವಿಜಯ)

**(119) ನಾಲ್ಕು ಸಮಾನ ಸಾಲುಗಳುಳ್ಳ ಪದ್ಯ. ಪ್ರತಿಸಾಲಿನಲ್ಲೂ ೨೦ ಅಕ್ಷರಗಳಿವೆ. (ವ್ಯಂಜನವರ್ಣಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಕೂಡದು.) ಪ್ರತಿ ಸಾಲಿನಲ್ಲೂ ಭ, ರ, ನ, ಭ, ಭ, ರ ಗಣಗಳೂ, ಮೇಲೆ ಒಂದು ಲಘು ಮತ್ತು ಒಂದು ಗುರು ಹೀಗೆ ಬರುವ ವೃತ್ತವೇ ಉತ್ಪಲಮಾಲಾವೃತ್ತವೆನಿಸುವುದು.**

**ಈ ಲಕ್ಷಣವನ್ನು ಸುಲಭವಾಗಿ ನೆನಪಿನಲ್ಲಿಡಲು ಈ ಕೆಳಗಿನ ಸೂತ್ರವನ್ನು ಹೇಳಬಹುದು.**

**ಸೂತ್ರ[102]:– ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಳ್ದಿರಲ್**

---

102

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – ∪ ∪ | – ∪ – | ∪ ∪ ∪ | – ∪ ∪ | – ∪ ∪ | – ∪ – | ∪ – |
| ಉತ್ಪಲ | ಮಾಲೆಯ | ಪ್ಪುದುಭ | ರಂನಭ | ಭಂರಲ | ಗಂನೆಗ | ಳ್ದಿರಲ್ |

ಈ ಸೂತ್ರಕ್ಕೆ ಪ್ರಸ್ತಾರ ಹಾಕಿದರೂ ವೃತ್ತದ ಲಕ್ಷಣವೇ ಬರುವುದು.

## (೨) ಚಂಪಕಮಾಲಾವೃತ್ತದ ಲಕ್ಷಣ

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪∪ | ∪ – ∪ | – ∪∪ | ∪ – ∪ | ∪ – ∪ | ∪ – ∪ | – ∪ – |
| ಎನೆನ | ಸುನಕ್ಕು | ಮಾರರಿ | ಪುವಾತ | ನಧೈರ್ಯ | ಮನಾತ | ನೇಳ್ಗಿವೆ |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ – ∪ | – ∪ ∪ | ∪ – ∪ | ∪ – ∪ | ∪ – ∪ | – ∪ – |
| ತ್ತನುಗ | ತಶೌ ರ್ಯ | ಮಂಬಳಿ | ಯೊಳಿರ್ಪ | ಗಜಾತೆ | ಗೆಸೂಚಿ | ಸುತ್ತೆಪು |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ – ∪ | – ∪ ∪ | ∪ – ∪ | ∪ – ∪ | ∪ – ∪ | – ∪ – |
| ರ್ಬಿನಕೊ | ವೆಸ ನ್ನೆ | ಯಿಗೊರ | ವ ನಿ ನ್ನ | ಯಶೌರ್ಯ | ಮದಿ ರ್ಕೆ | ಖಡ್ಗಮೀ |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ – ∪ | – ∪ ∪ | ∪ – ∪ | ∪ – ∪ | ∪ – ∪ | – ∪ – |
| ಧನುಗ | ರಮೆ ತ್ತ | ನಿನ್ನ ತ | ಪಮೆತ್ತ | ವಿ ಚಿ ತ್ರ | ಮಿದಲ್ತೆ | ಧಾತ್ರಿಯೊಳ್ |

(–ಶಬರಶಂಕರವಿಲಾಸ)

**(120) ನಾಲ್ಕು ಸಮಾನಪಾದಗಳುಳ್ಳ ಪದ್ಯ. ಪ್ರತಿಯೊಂದು ಪಾದದಲ್ಲೂ ೨೧ ಅಕ್ಷರಗಳಿವೆ. ಪ್ರತಿ ಪಾದದಲ್ಲಿಯೂ ನ, ಜ, ಭ, ಜ, ಜ, ಜ, ರ ಎಂಬ ಏಳು ಗಣಗಳಿರುತ್ತವೆ. ಇಂಥ ವೃತ್ತಗಳೆಲ್ಲ ಚಂಪಕಮಾಲಾವೃತ್ತಗಳೆನಿಸುವುವು.**

**ಚಂಪಕಮಾಲಾವೃತ್ತದ ಈ ಕೆಳಗಣ ಸೂತ್ರವನ್ನು ಕಂಠಪಾಠಮಾಡಿರಿ.**

**ಸೂತ್ರ[103]:– ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್**

103

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪∪ | ∪ – ∪ | – ∪ ∪ | ∪ – ∪ | ∪ – ∪ | ∪ – ∪ | – ∪ – |
| ನಜಭ | ಜಜಂಜ | ರಂಬಗೆ | ಗೊಳುತ್ತಿ | ರೆಚಂಪ | ಕಮಾಲೆ | ಯೆಂದಪರ್ |

ಈ ಸೂತ್ರಕ್ಕೆ ಪ್ರಸ್ತಾರ ಹಾಕಿದರೆ ವೃತ್ತದ ಲಕ್ಷಣವೇ ಬರುವುದು.

# (೩) ಶಾರ್ದೂಲವಿಕ್ರೀಡಿತವೃತ್ತದ ಲಕ್ಷಣ

| ಮ | ಸ | ಜ | ಸ | ತ | ತ | +ಗು |
|---|---|---|---|---|---|---|
| _ _ _ | ∪ ∪ _ | ∪ _ ∪ | ∪ ∪ _ | _ _ ∪ | _ _ ∪ | _ |
| ಇಂತೀಕಾ | ವ್ಯಮನೊ | ಲ್ದುಕೇಳ್ದ | ವಿಭುದರ್ | ಮ್ಮೈವೆರ್ಜ | ಕೊಂಡಾಡೆ | ಪೇ । |

| ಮ | ಸ | ಜ | ಸ | ತ | ತ | +ಗು |
|---|---|---|---|---|---|---|
| _ _ _ | ∪ ∪ _ | ∪ _ ∪ | ∪ ∪ _ | _ _ ∪ | _ _ ∪ | _ |
| ಳ್ದಿಂತಾಮೊ | ರ್ವನೆಸಾಂ | ಬಶಂಭು | ಕೃಪೆಯಿಂ | ದೇಕಾಬ್ದ | ದೊಳ್ಪೂರ್ಣ | ಮ । |

| ಮ | ಸ | ಜ | ಸ | ತ | ತ | +ಗು |
|---|---|---|---|---|---|---|
| _ _ _ | ∪ ∪ _ | ∪ _ ∪ | ∪ ∪ _ | _ _ ∪ | _ _ ∪ | _ |
| ಪ್ಪಂತೋರಂ | ತೆಷಡ | ಕ್ಷರಾರ್ಯ | ನ ನ ಘಂ | ಸಾಹಿತ್ಯ | ಶಾ ಸ್ತ್ರ ಜ್ಞ | ನ । |

| ಮ | ಸ | ಜ | ಸ | ತ | ತ | +ಗು |
|---|---|---|---|---|---|---|
| _ _ _ | ∪ ∪ _ | ∪ _ ∪ | ∪ ∪ _ | _ _ ∪ | _ _ ∪ | _ |
| ಶ್ರಾಂತಶ್ರೀ | ಶಿವ ಲಿಂ | ಗ ಸಂಗ | ತಮಹಾ | ಮಾಹೇಶ್ವ | ರಂಭಕ್ತಿ | ಯಿಂ । |

(–ರಾಜಶೇಖರವಿಳಾಸ)

**(121) ನಾಲ್ಕು ಸಮಾನಪಾದಗಳುಳ್ಳ ಪದ್ಯ. ಪ್ರತಿ ಪಾದವೂ ೧೯ ಅಕ್ಷರಗಳಿಂದ ಕೂಡಿದೆ. ಪ್ರತಿ ಪಾದದಲ್ಲೂ ಮ, ಸ, ಜ, ಸ, ತ, ತ ಎಂಬ ಆರು ಗಣಗಳೂ ಮೇಲೆ ಒಂದು ಗುರುವೂ ಇರುತ್ತವೆ. ಇಂಥ ವೃತ್ತಗಳಿಗೆಲ್ಲ ಶಾರ್ದೂಲವಿಕ್ರೀಡಿತವೃತ್ತಗಳೆನ್ನುವರು. ಇದರ ಸೂತ್ರವನ್ನು ಕೆಳಗೆ ಕೊಟ್ಟಿದೆ. ಕಂಠಪಾಠ ಮಾಡಿರಿ.**

**ಸೂತ್ರ[104]:– ಕಣ್ಗೊಪ್ಪಲ್ ಮಸಜಂಸತತಂಗಮುಮಾ ಶಾರ್ದೂಲವಿಕ್ರೀಡಿತಂ**

104

| ಮ | ಸ | ಜ | ಸ | ತ | ತ | +ಗುರು |
|---|---|---|---|---|---|---|
| _ _ _ | ∪ ∪ _ | ∪ _ ∪ | ∪ ∪ _ | _ _ ∪ | _ _ ∪ | _ |
| ಕಣ್ಗೊಪ್ಪಲ್ | ಮಜಸಂ | ಸತತಂ | ಗಮುಮಾ | ಶಾರ್ದೂಲ | ವಿಕ್ರೀಡಿ | ತಂ |

ಸೂತ್ರಕ್ಕೆ ಪ್ರಸ್ತಾರ ಹಾಕಿದರೆ ವೃತ್ತಲಕ್ಷಣವೇ ಬರುವುದು.

## (೪) ಮತ್ತೇಭವಿಕ್ರೀಡಿತವೃತ್ತದ ಲಕ್ಷಣ

| ಸ | ಭ | ರ | ನ | ಮ | ಯ | ಲ+ಗು |
|---|---|---|---|---|---|---|
| ∪ ∪ – | – ∪ ∪ | – ∪ – | ∪ ∪ ∪ | – – – | ∪ – – | ∪ – |
| ಕೆಲವಂ | ಬಲ್ಲವ | ರಿಂದ ಕ | ಲ್ತುಕೆಲ | ವಂಶಾಸ್ತ್ರಂ | ಗಳಂ ಕೇ | ಳುತಂ |

| ಸ | ಭ | ರ | ನ | ಮ | ಯ | ಲ+ಗು |
|---|---|---|---|---|---|---|
| ∪ ∪ – | – ∪ ∪ | – ∪ – | ∪ ∪ ∪ | – – – | ∪ – – | ∪ – |
| ಕೆ ಲವಂ | ಮಾಳ್ಪವ | ರಿಂದಕಂ | ಡುಕೆಲ | ವಂಸುಜ್ಞಾ | ನದಿಂನೋ | ಡುತಂ |

| ಸ | ಭ | ರ | ನ | ಮ | ಯ | ಲ+ಗು |
|---|---|---|---|---|---|---|
| ∪ ∪ – | – ∪∪ | – ∪ – | ∪ ∪ ∪ | – – – | ∪ – – | ∪ – |
| ಕೆಲವಂ | ಸಜ್ಜನ | ಸಂಗದಿಂ | ದಲರಿ | ಯಲ್ಸರ್ವ | ಜ್ಞನಪ್ಪಂ | ನರಂ |

| ಸ | ಭ | ರ | ನ | ಮ | ಯ | ಲ+ಗು |
|---|---|---|---|---|---|---|
| ∪ ∪ – | – ∪ ∪ | – ∪ – | ∪ ∪ ∪ | – – – | ∪ – – | ∪ – |
| ಪಲವುಂ | ಪ ಳ್ಳಸ | ಮುದ್ರವ್ಯೈ | ಹರಹ | ರಾಶ್ರೀಚ | ನ್ನಸೋಮೇ | ಶ್ವರಾ |

(–ಸೋಮೇಶ್ವರ ಶತಕ)

**(122) ನಾಲ್ಕು ಸಮಾನ ಪಾದಗಳುಳ್ಳ ಪದ್ಯ. ಪ್ರತಿ ಪಾದದಲ್ಲೂ ಇಪ್ಪತ್ತು ಅಕ್ಷರಗಳಿವೆ. ಪ್ರತಿಪಾದವೂ ಸ, ಭ, ರ, ನ, ಮ, ಯ ಗಣಗಳಿಂದಲೂ ಮೇಲೊಂದು ಲಘು ಮತ್ತು ಒಂದುಗುರುವಿನಿಂದಲೂ ಕೂಡಿದ ಪದ್ಯಜಾತಿಯು ಮತ್ತೇಭವಿಕ್ರೀಡಿತವೃತ್ತ ವೆನಿಸುವುದು. ಈ ವೃತ್ತ ಲಕ್ಷಣವನ್ನು ತಿಳಿಸುವ ಸೂತ್ರವನ್ನು ಕಂಠಪಾಠ ಮಾಡಿರಿ.**

**ಸೂತ್ರ[105]:– ಸಭರಂನಂದುಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ**

---

105

| ಸ | ಭ | ರ | ನ | ಮ | ಯ | ಲ+ಗು |
|---|---|---|---|---|---|---|
| ∪ ∪ – | – ∪ ∪ | – ∪ – | ∪ ∪ ∪ | – – – | ∪ ∪ – | ∪ – |
| ಸಭರಂ | ನಂಯಯ | ಲಂಗಮುಂ | ಬಗೆಗೊ | ಳಲ್ಮತ್ತೇ | ಭವಿಕ್ರೀ | ಡಿತಂ |

ಸೂತ್ರಕ್ಕೆ ಪ್ರಾಸ್ತಾರ ಹಾಕಿದರೆ ವೃತ್ತ ಲಕ್ಷಣವೇ ಬರುವುದು.

# (೫) ಸ್ರಗ್ಧರಾವೃತ್ತ ಲಕ್ಷಣ

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – ᴗ – | – ᴗ ᴗ | ᴗᴗ ᴗ | ᴗ – – | ᴗ – – | ᴗ – – |
| ಕಾರುಣ್ಯಂ | ಗೆಯ್ದುಸ | ದ್ದೀಕ್ಷೆಯ | ನೆಸ ಗಿ | ಲಸ ಚ್ಛ | ತ್ರಿಯಾಮಾ | ರ್ಗಮೆಂಪೇ |

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – ᴗ – | – ᴗ ᴗ | ᴗ ᴗ ᴗ | ᴗ – – | ᴗ – – | ᴗ – – |
| ಳ್ದಾರಾಜ | ತ್ಪೂನುಗಾ | ಚಾರ್ಯತೆ | ಯನೊಸೆ | ದುತಾನಿ | ತ್ತುಮೀಶಾ | ಜ್ಞೆಯಿಂದಿಂ |

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – ᴗ – | – ᴗ ᴗ | ᴗ ᴗ ᴗ | ᴗ – – | ᴗ – – | ᴗ – – |
| ತೀರೇಳ್ನೊ | ರ್ವತ್ಸರಂ | ಗಳ್ನೆ ರೆ | ಯೆಭರ | ದೊಳಾಕೊ | ಲ್ಲಿಪಾಕೀ | ಶನೊಳ್ಪೊ |

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – ᴗ – | – ᴗ ᴗ | ᴗᴗ ᴗ | ᴗ – – | ᴗ – – | ᴗ – – |
| ಕ್ಕಾರಾಧ್ಯಂ | ಮುಕ್ತಿರಾ | ಮಾರಮ | ಣನೆ ನಿ | ಸಿದಂರೇ | ಣುಕಾಚಾ | ರ್ಯವರ್ಯಂ |

(–ರಾಜಶೇಖರ ವಿಳಾಸ)

**(123) ನಾಲ್ಕು ಸಮಾನ ಪಾದಗಳುಳ್ಳ ಪದ್ಯ. ಪ್ರತಿಪಾದದಲ್ಲಿಯೂ ಇಪ್ಪತ್ತೊಂದು ಅಕ್ಷರಗಳಿರುತ್ತವೆ. ಪ್ರತಿಯೊಂದು ಪಾದದಲ್ಲೂ ಮ, ರ, ಭ, ನ, ಯ, ಯ, ಯ ಗಣಗಳಿರುತ್ತವೆ. ಈ ರೀತಿಯ ವೃತ್ತ ಜಾತಿಗೆ 'ಸ್ರಗ್ಧರಾವೃತ್ತ' ವೆನ್ನುವರು. ಇದರ ಸೂತ್ರವನ್ನು ಕೆಳಗಿನಂತೆ ಹೇಳಬಹುದು.**

**ಸೂತ್ರ[106]:–ತೋರಲ್ ಮಂರಂಭನಂಮೂಯುಗಣಮುಮದೆ ತಾಂ ಸ್ರಗ್ಧರಾವೃತ್ತಮಕ್ಕುಂ.**

---

106

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – ᴗ – | – ᴗ ᴗ | ᴗ ᴗ ᴗ | ᴗ – – | ᴗ – – | ᴗ – – |
| ತೋರಲ್ಮಂ | ರಂಭನಂ | ಮೂಯಗ | ಣಮುಮ | ದೆತಾಂಸ್ರ | ಗ್ಧರಾವೃ | ತ್ತಮಕ್ಕುಂ |

ಸೂತ್ರಕ್ಕೆ ಪ್ರಸ್ತಾರ ಹಾಕಿದರೆ ವೃತ್ತಲಕ್ಷಣವು ಬರುವುದು.

# (೬) ಮಹಾಸ್ರಗ್ಧರಾವೃತ್ತ ಲಕ್ಷಣ

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ∪ ∪ – | – – ∪ | – – ∪ | ∪ ∪ ∪ | ∪ ∪ – | – ∪ – | – ∪ – | – |
| ಹರಿಸಂ | ಧಾನಕ್ಕೆ | ವಂದಂದ | ವ ಗ ಡಿ | ಸಿದಹಂ | ಕಾರಮೆ | ಲ್ಲತ್ತೊತ್ಕೃ | ಷ್ಣಾಂ |

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ∪ ∪ – | – – ∪ | – – ∪ | ∪ ∪ ∪ | ∪ ∪ – | – ∪ – | – ∪ – | – |
| ಬರ ಕೇ | ಶಾಕೃಷ್ಟಿ | ಯಂಮಾಡಿ | ಸಿದಮ | ದ ಮ ದೆ | ಲ್ಲಿತ್ತೊತ್ಕೌಂ | ತೇಯರಂ | ಮ |

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ∪ ∪ – | – – ∪ | – – ∪ | ∪ ∪ ∪ | ∪ ∪ – | – ∪ – | – ∪ – | – |
| ಚ್ಚರದಿಂ | ಕಾಂತಾರ | ದೊಳ್ತಿರ್ರ | ನೆ ತಿ ರಿ | ಪಿದಸೊ | ರ್ಕೀಗ ಳೇ | ನಾದುದೆಂ | ದಾ |

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ∪ ∪ – | – – ∪ | – – ∪ | ∪ ∪ ∪ | ∪ ∪ – | – ∪ – | – ∪ – | – |
| ಕುರುವಂ | ಶಾಧೀಶ | ನಂಮೂದ | ಲಿ ಸಿದ | ನದಟಂ | ಭೀಮನು | ದ್ದಾಮಭೀ | ಮಂ |

(–ಗದಾಯುದ್ಧ)

**(124) ನಾಲ್ಕು ಸಮಾನ ಪಾದಗಳುಳ್ಳ ಪದ್ಯ. ಪ್ರತಿ ಸಾಲಿನಲ್ಲೂ ೨೨ ಅಕ್ಷರಗಳಿವೆ. ಪ್ರತಿ ಸಾಲೂ ಸ, ತ, ತ, ನ, ಸ, ರ, ರ ಗಣಗಳಿಂದಲೂ, ಮೇಲೊಂದು ಗುರುವಿನಿಂದಲೂ ಕೂಡಿರುತ್ತದೆ. ಇದರ ಸೂತ್ರವು ಕೆಳಗೆ ಇದೆ. ಅದನ್ನು ಕಂಠಪಾಠ ಮಾಡಿರಿ.**

**ಸೂತ್ರ[107]:– ಸತತಂ ನಂ ಸಂ ರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತಮಕ್ಕುಂ**

ಮುಖ್ಯವಾಗಿ ಕನ್ನಡದಲ್ಲಿ ಬರುವ ಆರು ವೃತ್ತಗಳಾದ ಉತ್ಪಲಮಾಲಾ, ಚಂಪಕಮಾಲಾ, ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ, ಮಹಾಸ್ರಗ್ಧರಾವೃತ್ತಗಳ ಲಕ್ಷಣವನ್ನು ಇದುವರೆಗೆ ತಿಳಿದಿದ್ದೀರಿ. ಉತ್ಪಲಮಾಲೆಯು ೨೦ ಅಕ್ಷರಗಳಿಂದಲೂ ಚಂಪಕಮಾಲೆಯು ೨೧ ಅಕ್ಷರಗಳಿಂದಲೂ ಶಾರ್ದೂಲವಿಕ್ರೀಡಿತವು ೧೯ ಅಕ್ಷರಗಳಿಂದಲೂ ಮತ್ತೇಭವಿಕ್ರೀಡಿತವು ೨೦

107

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ∪ ∪ – | – – ∪ | – – ∪ | ∪∪∪ | ∪ ∪ – | – ∪ – | – ∪ – | – |
| ಸತತಂ | ನಂಸಂರ | ರಂಗಂನೆ | ರೆದೆಸೆ | ಯೆಮಹಾ | ಸ್ರಗ್ಧರಾ | ವೃತ್ತಮ | ಕ್ಕುಂ |

ಸೂತ್ರಕ್ಕೆ ಪ್ರಸ್ತಾರ ಹಾಕಿದರೆ ವೃತ್ತ ಲಕ್ಷಣವೇ ಬರುವುದು.

ಅಕ್ಷರಗಳಿಂದಲೂ ಸ್ರಗ್ಧರೆಯು ೨೧ ಅಕ್ಷರಗಳಿಂದಲೂ ಮಹಾಸ್ರಗ್ಧರೆಯು ೨೨ ಅಕ್ಷರಗಳಿಂದಲೂ (ಪ್ರತಿಸಾಲಿನಲ್ಲಿ) ಕೂಡಿರುತ್ತವೆ. ಈ ಆರೂ ವೃತ್ತಗಳನ್ನು ಸುಲಭವಾಗಿ ಸ್ಥೂಲವಾಗಿ ಗುರುತಿಸುವುದಕ್ಕೆ ಒಂದು ಪದ್ಯವಿದೆ. ಅದನ್ನು ತಿಳಿದರೆ ಸ್ಥೂಲವಾಗಿ ಈ ಆರೂ ವೃತ್ತಗಳನ್ನು ಗುರುತಿಸಬಹುದು. ಆದರೆ ಇದು ಅಷ್ಟೊಂದು ನಿಖರಸಾಧನವಲ್ಲ. ಸ್ಥೂಲಸಾಧನವೆಂಬುದನ್ನು ನೆನಪಿನಲ್ಲಿಡಬೇಕು.

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆಶಾರ್ದೂಲಮಾ ।
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ ।
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ ।
ಪರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾರುಂ[108] ಖ್ಯಾತಕರ್ನಾಟಕಂ ॥

ಅರ್ಥ:– ಆದಿಯಲ್ಲಿ ಒಂದು ಗುರು ಬಂದುದೇ ಉತ್ಪಲಮಾಲಾ; ಆದಿಯಲ್ಲಿ ಮೂರು ಗುರುಗಳು ಬಂದುದು ಶಾರ್ದೂಲ ವಿಕ್ರೀಡಿತ; ಆದಿಯಲ್ಲಿ ಕ್ರಮವಾಗಿ ನಾಲ್ಕು ಗುರುಗಳು ಬಂದರೆ ಸ್ರಗ್ಧರೆ; ಆದಿಯಲ್ಲಿ ಎರಡು ಲಘು ಬಂದು ಅನಂತರ ಎರಡು ಗುರು ಬಂದರೆ ಮತ್ತೇಭವಿಕ್ರೀಡಿತ; ಆದಿಯಲ್ಲಿ ಮೊದಲು ಎರಡು ಲಘು ಬಂದು ಮುಂದೆ ಮೂರು ಗುರುಗಳು ಬಂದರೆ ಮಹಾಸ್ರಗ್ಧರಾವೃತ್ತ; ನಾಲ್ಕು ಲಘುಗಳು ಕ್ರಮವಾಗಿ ಬಂದರೆ ಚಂಪಕಮಾಲಾವೃತ್ತ. ಹೀಗೆ ಆರೂ ವೃತ್ತಗಳ ಸ್ಥೂಲ ಪರಿಚಯವು ಈ ಪದ್ಯದಿಂದಾಗುವುದು.

ಇದುವರೆಗೆ ವರ್ಣಗಳ ವಿಚಾರವಾಗಿ ತಿಳಿದು, ಅವುಗಳ ನಿಯಮದಿಂದ ಪದ್ಯ ರಚಿಸುವ ಆರು ಮುಖ್ಯವಾದ ವೃತ್ತಗಳ ವಿಚಾರ ತಿಳಿದಿದ್ದೀರಿ. ವರ್ಣಗಣ ಮತ್ತು ಮಾತ್ರಾಗಣಗಳಿಗಿಂತ ಭಿನ್ನವಾದ ಇನ್ನೊಂದು ರೀತಿಯ ಗಣಗಳ ಲೆಕ್ಕದಿಂದ ಪದ್ಯ ರಚನೆ ಮಾಡುವುದುಂಟು. ಅವೇ 'ಅಂಶಗಣ' ಎಂಬ ಹೆಸರಿನ ಗಣಗಳು.

## VII – ಅಂಶಗಣಗಳು

**ಅಂಶಗಣಗಳು ತ್ರಿಪದಿ, ಸಾಂಗತ್ಯ, ಅಕ್ಕರ ಇತ್ಯಾದಿ ಅನೇಕ ಹೆಸರಿನ ಛಂದಸ್ಸಿನಲ್ಲಿ ಬಳಸಲ್ಪಡುತ್ತವೆ. ಸ್ವಲ್ಪ ತೊಡಕಿನ ಆ ಅಂಶಗಣಗಳ ವಿಷಯವಾಗಿ ಸದ್ಯಕ್ಕೆ ತಿಳಿಯುವ ಅವಶ್ಯಕತೆಯಿಲ್ಲ. ಮುಂದಿನ ತರಗತಿಗಳಲ್ಲಿ ಅವುಗಳ ವಿಷಯವನ್ನು ಕ್ರಮವಾಗಿ ತಿಳಿಯುವಿರಿ.**

---

108 ಇಲ್ಲಿಯ ರಕಾರವು ಶಕಟರೇಪವೇ ಆಗಿದೆ. ಇದುವರೆಗೆ ಛಂದಸ್ಸಿನಲ್ಲಿ ಉದಾಹರಿಸಿದ ಪದ್ಯಗಳಲ್ಲಿ ಬರುವ ಶಕಟರೇಫಗಳ ಸ್ಥಾನದಲ್ಲಿ ರಕಾರವನ್ನೂ, ರಳಾಕ್ಷರಗಳ ಸ್ಥಾನದಲ್ಲೆಲ್ಲ ಳಕಾರವನ್ನೂ ಬಳಸಿದೆ. ವಿದ್ಯಾರ್ಥಿಗಳಿಗೆ ತೊಡಕಾಗಬಾರದೆಂಬುದೇ ಇದರ ಉದ್ದೇಶ.

## VIII – ಸಾರಾಂಶ

(೧) ಪದ್ಯರಚನಾಕ್ರಮವನ್ನು ತಿಳಿಸುವ ಶಾಸ್ತ್ರ ಛಂದಶ್ಶಾಸ್ತ್ರ.

(೨) ಪದ್ಯವು ಪಾದಗಳಿಂದ, ಪಾದಗಳು ಯತಿಗಣ ಪ್ರಾಸಗಳಿಂದ ಕೂಡಿರುತ್ತವೆ.

(೩) ಯತಿ ಎಂದರೆ ಪದ್ಯ ಹೇಳುವಾಗ ಗೊತ್ತಾದ ಸ್ಥಳದಲ್ಲಿ ನಿಲ್ಲಿಸುವುದು. ಕನ್ನಡ ಪದ್ಯಗಳಲ್ಲಿ ಯತಿ ಮುಖ್ಯವಲ್ಲ.

(೪) ಗಣಗಳು ಮುಖ್ಯವಾಗಿ ಮಾತ್ರಾಗಣ–ಅಕ್ಷರಗಣಗಳೆಂದು ಎರಡು ಬಗೆ.

(೫) ಪ್ರಾಸವೆಂದರೆ ಪದ್ಯದ ಪ್ರತಿಸಾಲಿನ ಒಂದನೆಯ, ಎರಡನೆಯ ಸ್ವರಗಳ ನಡುವೆ ಒಂದೇ ರೀತಿಯ ವ್ಯಂಜನ ಬರುವಿಕೆ.

(೬) ಮಾತ್ರಾಗಣಗಳು ಕಂದ, ರಗಳೆ, ಷಟ್ಪದಿಗಳಲ್ಲಿ ಬಳಸಲ್ಪಡುತ್ತವೆ. ಕೆಲವು ಕಡೆ ಮೂರು, ನಾಲ್ಕು, ಐದು ಮಾತ್ರೆಗಳ ಗಣಗಳನ್ನು ವಿಂಗಡಿಸುತ್ತಾರೆ.

(೭) ವರ್ಣಗಣಗಳು ಒಟ್ಟು ಎಂಟು; ಅವು ವೃತ್ತಗಳಲ್ಲಿ ಬಳಸಲ್ಪಡುತ್ತವೆ.

(೮) ಕನ್ನಡದಲ್ಲಿ ಮುಖ್ಯವಾಗಿ ೬ ವೃತ್ತಗಳು ಹೆಚ್ಚು ಬಳಕೆಯಲ್ಲಿವೆ.

(೯) ಒಂದು ಮಾತ್ರಾಕಾಲದಲ್ಲಿ ಹೇಳುವ ಅಕ್ಷರಗಳೆಲ್ಲ ಲಘುಗಳು.

(೧೦) ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳೆಲ್ಲ ಗುರುಗಳು.

(೧೧) ದೀರ್ಘಸ್ವರ, ದೀರ್ಘಸ್ವರದಿಂದ ಕೂಡಿದ ಗುಣಿತಾಕ್ಷರ ಒತ್ತಕ್ಷರದ ಹಿಂದಿನ ಅಕ್ಷರ, ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರಗಳು ವ್ಯಂಜನಾಕ್ಷರದ ಹಿಂದಿನ ಅಕ್ಷರ, ಷಟ್ಪದಿಯ ಮೂರನೆಯ ಆರನೆಯ ಸಾಲಿನ ಕೊನೆಯ ಅಕ್ಷರಗಳೆಲ್ಲ ಗುರುಗಳು; ಉಳಿದುವೆಲ್ಲ ಲಘುಗಳು. ಗುರು ಲಘುಗಳನ್ನು ಕ್ರಮವಾಗಿ ಛಂದಸ್ಸಿನಲ್ಲಿ ‘ – ’ ‘ ∪ ’ ಈ ಚಿಹ್ನೆಗಳಿಂದ ಗುರುತಿಸುವರು.

* * * * *

## ಅಭ್ಯಾಸ ಪ್ರಶ್ನೆಗಳು

(೧) ಯತಿಯೆಂದರೇನು? ಕನ್ನಡ ಪದ್ಯಗಳಲ್ಲಿ ಯತಿಯ ನಿಯಮಕ್ಕೆ ಪ್ರಾಧಾನ್ಯತೆಯಿಲ್ಲ ಏಕೆ?

(೨) ಪ್ರಾಸವೆಂದರೇನು? ಉದಾಹರಣೆಯೊಡನೆ ವಿವರಿಸಿ.

(೩) ಗುರುಗಳಾಗುವ ಅಕ್ಷರಗಳು ಯಾವುವು?

(೪) ಅಕ್ಷರಗಣಗಳೆಷ್ಟು ಬಗೆ? ಅವುಗಳ ವಿನ್ಯಾಸ ಕ್ರಮವನ್ನು ವಿವರಿಸಿರಿ.

(೫) ವಾರ್ಧಕ ಷಟ್ಪದಿಯಲ್ಲಿ ಬಳಸಲ್ಪಡುವ ಗಣಗಳಾವುವು? ಇದರ ಲಕ್ಷಣ ವಿವರಿಸಿರಿ.

(೬) ಈ ಕೆಳಗಣ ವಾಕ್ಯಗಳಲ್ಲಿ ಬಿಟ್ಟುಹೋಗಿರುವ ಕಡೆ ಸರಿಯಾದ ಪದ ಹಾಕಿ ವಾಕ್ಯವನ್ನು ಅರ್ಥವತ್ತಾಗಿ ಮಾಡಿರಿ.

(i) ಕಂದ ಪದ್ಯದಲ್ಲಿ .. .. .. .. ಸಾಲುಗಳು ಒಂದು ಸಮ; .. .. .. .. ಸಾಲುಗಳು ಇನ್ನೊಂದು ಸಮ.

(ii) ಷಟ್ಪದಿಗಳಲ್ಲೆಲ್ಲ ೧, ೨, ೩, ೪ ನೆಯ ಪಾದಗಳು .. .. .. .. .. ಇರುತ್ತವೆ.

(iii) ಪದ್ಯದ ಪ್ರತಿ ಪಾದದ .. .. .. .. ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನ ಬರುವುದಕ್ಕೆ .. .. .. .. ಎನ್ನುವರು.

(iv) ರಗಳೆಗಳಲ್ಲಿ ಎರಡೆರಡು ಸಾಲುಗಳಲ್ಲಿ .. .. .. .. ನಿಯಮವು ಕಂಡುಬರುತ್ತದೆ.

(v) ರಗಳೆಗಳಲ್ಲಿ ಇಂತಿಷ್ಟೇ .. .. .. .. ಗಳಿರಬೇಕೆಂಬ ನಿಯಮವಿಲ್ಲ.

(vi) ಕಂದ ಪದ್ಯದ ವಿಷಮಸ್ಥಾನದಲ್ಲಿ .. .. .. .. ಗಣವು ಬರಕೂಡದು.

(vii) ಭಾಮಿನೀಷಟ್ಪದಿಯಲ್ಲಿ ಎಲ್ಲಿಯೂ .. .. .. .. ಈ ರೀತಿಯ ಗಣ ಬರಕೂಡದು.

(viii) ಕಂದಪದ್ಯದ ಪೂರ್ವಾರ್ಧದ ಆರನೆಯ ಗಣ ಮತ್ತು ಉತ್ತರಾರ್ಧದ ಆರನೆಯ ಗಣವು.. .. .. .. .. ಈ ವಿನ್ಯಾಸದ ಗಣವಾಗಲಿ ಅಥವಾ .. .. .. .. ಈ ವಿನ್ಯಾಸದ ಗಣವಾಗಲಿ ಆಗಿರಬೇಕು.

(ix) ಲಲಿತರಗಳೆಯ ಪ್ರತಿಪಾದವೂ .. .. .. .. ಮಾತ್ರೆಗಳ .. .. .. .. ಗಣಗಳಿಂದ ಕೂಡಿರುತ್ತದೆ.

(೭) ಈ ಕೆಳಗೆ ಬಿಟ್ಟಿರುವ ಸ್ಥಳಗಳಲ್ಲಿ ಆವರಣದಲ್ಲಿ ಕೊಟ್ಟಿರುವ ಒಂದು ಸರಿಯುತ್ತರವನ್ನು ಆರಿಸಿ ಬರೆಯಿರಿ.

(i) ಷಟ್ಪದಿಗಳಲ್ಲಿ .. .. .. .. ಗಳನ್ನು ಬಳಸುತ್ತಾರೆ.
(ಮಾತ್ರಾಗಣ, ಅಕ್ಷರಗಣ, ಅಂಶಗಣ)

(ii) ಕಂದ ಪದ್ಯದಲ್ಲಿ .. .. .. .. ಗಣಗಳನ್ನು ಬಳಸುತ್ತಾರೆ.
(೩ ಮಾತ್ರೆಯ, ೪ ಮಾತ್ರೆಯ, ೫ ಮಾತ್ರೆಯ)

(iii) ಉತ್ಪಲಮಾಲಾವೃತ್ತವು .. .. .. .. ಅಕ್ಷರಗಳ ವೃತ್ತವು.
(೧೯, ೨೦, ೨೧)

(iv) ಅಕ್ಷರಗಣಗಳು ಒಟ್ಟು .. .. .. .. ಬಗೆ.
(ಏಳು, ಎಂಟು, ಆರು)

(v) ಗುರುವಿಗೆ .. .. .. .. ಮಾತ್ರೆಗಳು.
(ಒಂದು, ಎರಡು, ಮೂರು)

(vi) ಪ್ರಾಸವೆಂದರೆ ಒಂದನೆಯ ಎರಡನೆಯ ಸ್ವರಗಳ ಮಧ್ಯದಲ್ಲಿ ಬರುವ ಒಂದೇ ರೀತಿಯ .. ..
(ಸ್ವರ, ಪ್ಲುತಸ್ವರ, ವ್ಯಂಜನ ಅಥವಾ ವ್ಯಂಜನಗಳು)

(vii) ರಗಳೆಯ ಛಂದಸ್ಸಿನಲ್ಲಿ .. .. .. .. ನಿಯಮವಿಲ್ಲ.
(ಅಕ್ಷರಗಳ, ಪ್ರಾಸಗಳ, ಪಾದಗಳ)

(viii) ವೃತ್ತಗಳು .. .. .. .. ಗಣಗಳ, ನಿಯಮದಿಂದ ಕೂಡಿರುತ್ತವೆ.
(ಮಾತ್ರಾಗಣ, ಅಂಶಗಣ, ಅಕ್ಷರಗಣ)

(ಲ) ಈ ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳಿವೆ. ಅವನ್ನು ಸರಿಪಡಿಸಿರಿ.

(i) ವರ್ಣಗಳು ಮೂರು ಮಾತ್ರೆಗಳ ಲೆಕ್ಕದಿಂದ ವಿಂಗಡಿಸಲ್ಪಡುತ್ತವೆ.

(ii) ಮೂರು ಗುರುಗಳ ವಿನ್ಯಾಸವುಳ್ಳ ಗಣವು ನಗಣವೆನಿಸುವುದು.

(iii) ಆದಿಗುರು ಅನಂತರ ಎರಡು ಲಘುಗಳಿಂದ ಕೂಡಿದ ಅಕ್ಷರಗಣವು ಯಗಣವೆನಿಸುವುದು.

(iv) ರಗಳೆಗಳಲ್ಲಿ ಅಕ್ಷರಗಣಗಳು ಬಳಸಲ್ಪಡುತ್ತವೆ.

(v) ವಾರ್ಧಕಷಟ್ಪದಿಯಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಗಣಗಳು ಬಳಸಲ್ಪಡುತ್ತವೆ.

* * * * *

# ಅಧ್ಯಾಯ ೧೧

# ಅಲಂಕಾರಗಳು

ಮನುಷ್ಯನು ಚೆನ್ನಾಗಿ ಕಾಣುವ ಉದ್ದೇಶದಿಂದ ಅಥವಾ ಸುಂದರವಾಗಿ ಕಾಣಿಸಿಕೊಳ್ಳಬೇಕೆಂಬ ಕಾರಣದಿಂದ ಬಟ್ಟೆ ಬರೆ, ವಸ್ತು, ಒಡವೆ–ಇತ್ಯಾದಿಗಳನ್ನು ಧರಿಸಿಕೊಳ್ಳುತ್ತಾನೆ. ಇವನ ಈ ಅಲಂಕಾರದಿಂದ ಜನರೂ ಆಕರ್ಷಿತರಾಗುತ್ತಾರೆ. ಇದರ ಹಾಗೆಯೆ ಮಾತನಾಡುವಾಗಲೂ, ಕೇಳುವವರಿಗೆ ಹರ್ಷವಾಗುವಂತೆ, ಕಿವಿಗೆ ಇಂಪಾಗುವಂತೆ ಚಮತ್ಕಾರವಾದ ರೀತಿಯಲ್ಲಿ ಮಾತನಾಡುವುದೂ ಉಂಟು. ಉದಾಹರಣೆಗೆ '**ನಿಮ್ಮ ಹೆಸರೇನು?**' ಎಂದು ಕೇಳುವುದಕ್ಕೆ ಬದಲಾಗಿ '**ತಮ್ಮ ಹೆಸರು ಯಾವ ಅಕ್ಷರಗಳಿಂದ ಅಲಂಕೃತವಾಗಿದೆ?**' ಎಂದು ಕೇಳಿದಾಗ ಎರಡೂ ಮಾತಿನ ಅರ್ಥ ಒಂದೇ ಆದರೂ ಎರಡನೆಯ ಮಾತಿನಲ್ಲಿ ಚಮತ್ಕಾರದ ವಾಣಿ ಕಾಣುವುದು. ಇದರ ಹಾಗೆ '**ಪೂರ್ವದಿಕ್ಕಿನಲ್ಲಿ ಸೂರ್ಯ ಹುಟ್ಟಿದನು**' ಎನ್ನುವ ಮಾತನ್ನು–**ಪೂರ್ವದಿಕ್ಕಿನಲ್ಲಿ ಹುಟ್ಟಿದ ಸೂರ್ಯನು ಮುತ್ತೈದೆಯ ಹಣೆಯ ಕುಂಕುಮದಂತೆ ಕಾಣುತ್ತಿದ್ದನು.** ಹೀಗೆ ಹೇಳಿದಾಗ ಸೌಂದರ್ಯದ ಚಿತ್ರ, ಅರ್ಥ ಚಮತ್ಕಾರ, ಕೇಳುವವರ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವುದು. **ಇವೆಲ್ಲ ಅಲಂಕಾರದ ಮಾತುಗಳು.**

ಇದರ ಹಾಗೆಯೆ ಶಬ್ದಗಳ ಜೋಡಣೆಯನ್ನೂ ಚಮತ್ಕಾರವಾಗಿ ಮಾಡಿ ಕೇಳುವುದಕ್ಕೆ ಹಿತವಾಗಿರುವಂತೆ ಮಾತನಾಡುವುದೂ ಉಂಟು. ಉದಾಹರಣೆಗೆ–

(1) **ಬಲ್ಲವನೇ ಬಲ್ಲ ಬೆಲ್ಲದ ರುಚಿಯ.**

(2) **ಕತ್ತೆಗೆ ಗೊತ್ತೆ? ಹೊತ್ತ ಕತ್ತುರಿಯ ಪರಿಮಳ?**

(3) **ಎಳೆಗಿಳಿಗಳ ಬಳಗಗಳು ನಳನಳಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಆಶಿಸಿ ಬಂದವು.**

ಮೇಲಿನ ವಾಕ್ಯಗಳಲ್ಲಿ ಒಂದೇ ವಾಕ್ಯದಲ್ಲಿ–ಬಲ್ಲ, ಬೆಲ್ಲ, ಬಲ್ಲ ಇತ್ಯಾದಿ ಶಬ್ದಗಳೂ, ಕತ್ತೆ, ಹೊತ್ತ, ಗೊತ್ತೆ, ಕತ್ತುರಿ ಇತ್ಯಾದಿ ಶಬ್ದಗಳೂ, ಎಳೆ, ಗಿಳಿ, ಗಳೆ, ಬಳಗ, ಗಳು, ನಳ, ನಳ ಕಳವೆ, ಎಳೆ, ಕಾಳು–ಇತ್ಯಾದಿ ಒಂದೇ ಶಬ್ದ ಅಥವಾ ಅಕ್ಷರಗಳು ಪದೇ ಪದೇ ಬಂದು ಶಬ್ದಗಳ ರಚನೆಯಲ್ಲಿ ಬುದ್ಧಿವಂತಿಕೆ ಕಂಡಂತಾಗಿ ಕೇಳುವವರಿಗೆ ಒಂದು ಬಗೆಯ ಹಿತವನ್ನುಂಟು ಮಾಡುವುವು. ಇವೆಲ್ಲ ಶಬ್ದಗಳ ಅಲಂಕಾರಗಳು.

ಹೀಗೆ ಅರ್ಥದ ಚಮತ್ಕಾರದಿಂದಲೂ, ಶಬ್ದಗಳ ಚಮತ್ಕಾರದಿಂದಲೂ ಮಾತಿನ ಸೌಂದರ್ಯವನ್ನು ಹೆಚ್ಚು ಮಾಡಿ ಮಾತನಾಡುವುದೂ ಒಂದು ಕಲೆ; ಕವಿಗಳು ಕಾವ್ಯಗಳಲ್ಲಿ ಬರೆದ ಈ ರೀತಿಯ ಚಮತ್ಕಾರದ ನುಡಿಗಳು ಆ ಕಾವ್ಯಕ್ಕೆ ಒಂದು ಬಗೆಯ ಅಲಂಕಾರ. ಅಂದರೆ, ಒಡವೆಗಳು ವಸ್ತ್ರಗಳು ಶರೀರಕ್ಕೆ ಹೇಗೆ ಭೂಷಣವೋ ಹಾಗೆಯೆ ಇಂತಹ ಮಾತುಗಳು ಕಾವ್ಯಕ್ಕೆ ಭೂಷಣ ಅಥವಾ ಅಲಂಕಾರಗಳು.

ಕಾವ್ಯಗಳಲ್ಲಿನ ಕವಿಗಳ ಇಂತಹ ಅಲಂಕಾರ ಮಾತುಗಳು ಅರ್ಥಚಮತ್ಕಾರದಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿದ್ದರೆ, ಅವುಗಳಿಗೆ '**ಅರ್ಥಾಲಂಕಾರ**' ಗಳೆನ್ನುವರು. ಶಬ್ದಗಳ ಚಮತ್ಕಾರ ದಿಂದ ಕಾವ್ಯದ ಸೊಬಗು ಹೆಚ್ಚುವಂತೆ ರಚಿಸಿದ್ದರೆ, ಅಂಥವುಗಳನ್ನು '**ಶಬ್ದಾಲಂಕಾರ**' ಗಳೆಂದು ಕರೆಯುವರು.

(i) ಅರ್ಥಾಲಂಕಾರಕ್ಕೆ ಕೆಳಗಿನ ಒಂದು ಉದಾಹರಣೆಯನ್ನು ನೋಡಿರಿ–

"ಬರು ಶಠಗನ ಭಕ್ತಿ ದಿಟವೆಂದು ನಂಬಬೇಡ; ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥ"[109] (–ದೇವರದಾಸಿಮಯ್ಯ)

ಇಲ್ಲಿ ವಚನಕಾರನ ಮಾತುಗಳಲ್ಲಿ 'ಡಾಂಭಿಕನಾದ ಮನುಷ್ಯನ ಭಕ್ತಿಯನ್ನು ನಂಬಲಾಗದು' ಎಂದು ಹೇಳುವ ಮಾತಿಗೆ 'ಮಠದೊಳಗೆ ವಾಸಮಾಡುವ ಬೆಕ್ಕಿನ ಹೋಲಿಕೆಯಿದೆ'. ಮಠದಂಥ ಪವಿತ್ರ ಸ್ಥಳದಲ್ಲಿ ಬೆಕ್ಕು ಎಷ್ಟೇ ದಿನ ವಾಸವಾಗಿದ್ದರೂ, ಅದಕ್ಕೆ ಮಠದ ಸಭ್ಯತೆ ಗೊತ್ತಿದ್ದರೂ, ಮಠದಲ್ಲಿ ಅದಕ್ಕೆ ಉತ್ತಮ ತಿಂಡಿತಿನಸುಗಳು ಸಿಗುತ್ತಿದ್ದರೂ, ಇಲಿಯನ್ನು ಕಂಡಕೂಡಲೆ, ಅದರ ಮೂಲಹಿಂಸೆಯ ಗುಣವು ಪ್ರಕಟಗೊಂಡು ಇಲಿಯ ಮೇಲೆ ನೆಗೆದು ಅದನ್ನು ತಿನ್ನುವ ಕ್ರಿಯೆಯನ್ನು ಮಾಡಿಬಿಡುವುದು. ಇದರ ಹಾಗೆಯೇ 'ಡಂಭಾಚಾರ ಭಕ್ತಿಯನ್ನು ನಟಿಸುವ ಮನುಷ್ಯ'. ಅವನು ಎಷ್ಟೇ ದಿನ ಡಂಭದಿಂದ ಕೂಡಿದ ಭಕ್ತಿಯನ್ನು ಆಚರಿಸಿದರೂ ಅದು ನಿಜವಾದ ಭಕ್ತಿ ಆಗುವುದಿಲ್ಲ. ನಿಜವಾದ ಭಕ್ತಿಜೀವನದಿಂದ ಉಂಟಾಗುವ ಸಂಸ್ಕಾರ ಉಂಟಾಗುವುದಿಲ್ಲ.–ಇತ್ಯಾದಿ ಅರ್ಥ ಚಮತ್ಕಾರ ಆ ಎರಡು ಸಣ್ಣ ವಾಕ್ಯಗಳಲ್ಲಿ ಅಡಕವಾಗಿದೆ. ಹೀಗೆ ಅರ್ಥ ಚಮತ್ಕಾರವುಂಟಾಗುವಂತೆ ಹೇಳುವ ಮಾತುಗಳೇ ಅರ್ಥಾಲಂಕಾರಗಳು.

(ii) ಶಬ್ದಾಲಂಕಾರಕ್ಕೆ ಕೆಳಗಿನ ಇನ್ನೊಂದು ಪದ್ಯವನ್ನು ಗಮನಿಸಿರಿ–

ಈ ವನದ ನಡುನಡುವೆ ತೊಳತೊಳಗುತಿರುತಿಹ
ಸರೋವರ ವರದೊಳೆ ದಳೆದಳೆದು ಬೆಳೆಬೆಳೆದು

ರಾಜೀವದಲರಲರ, ತುಳಿತುಳಿದು ಇಡಿದಿಡಿದ
ಬಂಡನೊಡನೆ ಸವಿದು ಸವಿದು–

ಅವಗಮಗಲದೆ ಯುಗಯುಗಮಾಗಿ ನೆರೆನೆರೆದು,
ಕಾವಸೊಗಸೊಗಸಿನಲಿ ನಲಿದು ಮೊರೆಮೊರೆವ,

ಬೃಂಗಾವಳಿಯ ಗಾವಳಿಯ, ಕಳಕಳಂಗಳೆ
ನೋಡುನೋಡು ರವಿತನಯ ತನಯ

–ಜೈಮಿನಿ ಭಾರತ

---

109 'ಸಾಹಿತ್ಯ ಮಂದಾರ' IX ಸ್ಟಾಂಡರ್ಡ್ ಪಠ್ಯಪುಸ್ತಕ, 1969-70 ರ ಮುದ್ರಣ.

ಅರಣ್ಯಮಧ್ಯದ ಸರೋವರವೊಂದರಲ್ಲಿ ಅರಳಿರುವ ಕಮಲದಲ್ಲಿ ದುಂಬಿಗಳು ಮಕರಂದ ಪಾನಮಾಡಿ, ಜೊತೆಜೊತೆಯಾಗಿ ಝೇಂಕಾರಮಾಡುತ್ತ ನಲಿಯುತ್ತಿರುವ ದೃಶ್ಯದ ಈ ವರ್ಣನೆಯಲ್ಲಿ ಒಂದೇ ಅನುಪೂರ್ವಿಯ ಅನೇಕ ಶಬ್ದಗಳು ಜೊತೆಜೊತೆಯಾಗಿ ಬಂದು, ನೃತ್ಯ ಮಾಡುವಾಗ ಕಾಲಲ್ಲಿ ಕಟ್ಟಿಕೊಂಡು ಧ್ವನಿಮಾಡುತ್ತಿರುವ ಗೆಜ್ಜೆಗಳ ಸದ್ದಿನಂತೆ ಪದ್ಯದಲ್ಲಿ ಒಂದು ಬಗೆಯ ಶಬ್ದ ಸೌಂದರ್ಯವನ್ನುಂಟುಮಾಡುತ್ತಿವೆ. ಈ ರೀತಿ ಶಬ್ದಗಳಿಂದ ಪದ್ಯದ ಸೌಂದರ್ಯ ಹೆಚ್ಚಿದಾಗ ಅದಕ್ಕೆ ನಾವು '**ಶಬ್ದಾಲಂಕಾರ**' ಎಂದು ಕರೆಯುತ್ತೇವೆ. ಹೀಗೆ ಕಾವ್ಯಗಳಲ್ಲಿ ಅರ್ಥಾಲಂಕಾರ ಶಬ್ದಾಲಂಕಾರಗಳು ಎಷ್ಟು ಬಗೆಯಾಗಿ ಬರುತ್ತವೆ? ಅವುಗಳ ಲಕ್ಷಣವೇನು? ಎಂತು? ಎಂಬ ಬಗೆಗೆ ಅನೇಕಾನೇಕ ಗ್ರಂಥಗಳು ಹುಟ್ಟಿವೆ. ಇವುಗಳ ಬಗೆಗೆ ಗ್ರಂಥ ಬರೆದವರನ್ನು '**ಲಾಕ್ಷಣಿಕರು**' ಎನ್ನುತ್ತಾರೆ. ಸಂಸ್ಕೃತದಲ್ಲಿ, ಕನ್ನಡದಲ್ಲಿ ಅನೇಕ ಲಾಕ್ಷಣಿಕರು ಅಲಂಕಾರ ಗ್ರಂಥ ಬರೆದಿದ್ದಾರೆ. ಈ ಕೆಳಗೆ ಕನ್ನಡದಲ್ಲಿ ಮಾತ್ರ ಅಲಂಕಾರ ಗ್ರಂಥ ಬರೆದ ಲಾಕ್ಷಣಿಕರ ಬಗೆಗೆ ಸ್ಥೂಲವಾದ ಪರಿಚಯಕೊಟ್ಟಿದೆ. ಅವರ ಪರಿಚಯ ಮಾಡಿಕೊಳ್ಳಿರಿ.

### (೧) ನೃಪತುಂಗ (ಕ್ರಿ.ಶ.೮೧೪)

ರಾಷ್ಟ್ರಕೂಟ ಚಕ್ರವರ್ತಿಯೆನಿಸಿದ್ದ ನೃಪತುಂಗನು, '**ಕವಿರಾಜಮಾರ್ಗ**' ವೆಂಬ ಲಕ್ಷಣಗ್ರಂಥ ಬರೆದಿದ್ದಾನೆ. ಇದರಲ್ಲಿ ಅಲಂಕಾರಗಳ ಬಗೆಗೆ ಅನೇಕ ವಿಷಯಗಳು ಹೇಳಲ್ಪಟ್ಟಿವೆ.

### (೨) ನಾಗವರ್ಮ II (ಕ್ರಿ.ಶ.೧೧೪೫)

೨ನೆಯ ನಾಗವರ್ಮನೆಂಬುವನು ಬರೆದ '**ಕಾವ್ಯಾವಲೋಕನ**' ಎಂಬ ಗ್ರಂಥವು ಉತ್ತಮ ಮಟ್ಟದ ಲಕ್ಷಣಗ್ರಂಥವೆನಿಸಿದೆ. ಇದರಲ್ಲಿ ಅಲಂಕಾರಗಳ ವಿಷಯದಲ್ಲಿ ಅನೇಕ ವಿವರಣೆಗಳು ಬಂದಿವೆ[110].

### (೩) ತಿರುಮಲಾರ್ಯ (ಕ್ರಿ.ಶ.೧೬೭೨)

ನಾಗವರ್ಮನ ಅನಂತರ ಲಕ್ಷಣಗ್ರಂಥ ಬರೆದವರಲ್ಲಿ ತಿರುಮಲಾರ್ಯನೇ ಮುಖ್ಯನಾದವನು. ಮೈಸೂರಿನ ಚಿಕ್ಕದೇವರಾಜರ ಆಸ್ಥಾನ ಪಂಡಿತನಾದ ಈತನು '**ಅಪ್ರತಿಮವೀರ ಚರಿತ್ರೆ**' ಎಂಬ ಅಲಂಕಾರ ಗ್ರಂಥ ಬರೆದಿದ್ದಾನೆ. ಚಿಕ್ಕದೇವರಾಜ ಒಡೆಯರ ಚರಿತ್ರೆಗೆ ಸಂಬಂಧಿಸಿದ ಅನೇಕ ಪದ್ಯಗಳನ್ನು ತಾನೇ ರಚಿಸಿ ಅಲಂಕಾರಕ್ಕೆ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಇದರಲ್ಲಿ ಒಟ್ಟು ೧೨೦ ಅಲಂಕಾರ ಹೇಳಲಾಗಿದೆ.

### (೪) ಜಾಯಪ್ಪದೇಸಾಯಿ (ಕ್ರಿ.ಶ. ೧೭೩೫)

ತೊರಗಲ್ ಸೀಮೆಗೆ ದೊರೆಯೆನಿಸಿದ್ದ ಜಾಯಪ್ಪದೇಸಾಯಿಯೆಂಬ ದೊರೆಯು '**ಕನ್ನಡ ಕುವಲಯಾನಂದ**' ವೆಂಬ ಹೆಸರಿನ ಲಕ್ಷಣ ಗ್ರಂಥ ಬರೆದಿದ್ದಾನೆ[111]. ಈತನು ತನ್ನ ಈ ಲಕ್ಷಣ

---

[110] ನೃಪತುಂಗನ ನಂತರ ಉದಯಾದಿತ್ಯ, ಮಾಧವ ಎಂಬ ಇಬ್ಬರು ಲಾಕ್ಷಣಿಕರು ಅಲಂಕಾರಗಳ ಬಗೆಗೆ ಲಕ್ಷಣಗ್ರಂಥ ಬರೆದಿದ್ದಾರೆ.

[111] ಈ ಗ್ರಂಥವನ್ನು ಡಾ॥ ಎಸ್.ಸಿ. ನಂದೀಮಠ, ಅವರು ಇತ್ತೀಚೆಗೆ ಸಂಪಾದಿಸಿ ಪ್ರಕಟಿಸಿದ್ದಾರೆ.

ಗ್ರಂಥಕ್ಕೆ ಉದಾಹರಣೆ (ಲಕ್ಷ್ಯ) ಗಳನ್ನು ಕನ್ನಡ ಷಟ್ಪದಿಗ್ರಂಥಗಳಿಂದ ಆಯ್ದುಕೊಂಡಿದ್ದಾನೆ. ೧೦೦ ಅಲಂಕಾರಗಳನ್ನು ಮಾತ್ರ ಹೇಳಿರುವ ಈ ಗ್ರಂಥವನ್ನು, ಸಂಸ್ಕೃತದಲ್ಲಿರುವ ಅಪ್ಪಯ್ಯದೀಕ್ಷಿತರ '**ಕುವಲಯಾನಂದ**' ವೆಂಬ ಅಲಂಕಾರಗ್ರಂಥವನ್ನು ಅನುಸರಿಸಿ ಬರೆದಂತೆ ಹೇಳಿಕೊಂಡಿದ್ದಾನೆ. ಕನ್ನಡದಲ್ಲಿರುವ ಅಲಂಕಾರ ಗ್ರಂಥಗಳಲ್ಲಿ ಇದು ಉತ್ತಮವಾಗಿದೆ.

ಇದುವರೆಗೆ ಅಲಂಕಾರವೆಂದರೇನು? ಕವಿಗಳ ಕಾವ್ಯಗಳಲ್ಲಿ ಯಾವ ದೃಷ್ಟಿಯಿಂದ ಅಲಂಕಾರಗಳನ್ನು ಸೇರಿಸುತ್ತಾರೆ? ಅವುಗಳಿಂದ ಕಾವ್ಯಕ್ಕೆ ಎಷ್ಟರಮಟ್ಟಿಗೆ ಪ್ರಯೋಜನ? ಇಂಥ ಅಲಂಕಾರ ಗ್ರಂಥಗಳೂ, ಗ್ರಂಥ ಕರ್ತರೂ ಕನ್ನಡದಲ್ಲಿ ಯಾರು ಯಾರು? ಇತ್ಯಾದಿ ಅಂಶಗಳ ಬಗೆಗೆ ಸ್ಥೂಲವಾಗಿ ಪರಿಚಯ ಮಾಡಿಕೊಂಡಿದ್ದೀರಿ. ಪ್ರೌಢಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ನೂರಾರು ಅಲಂಕಾರಗಳಲ್ಲಿ ಮುಖ್ಯವಾದ ಎಂಟು ಅಲಂಕಾರಗಳ ಬಗೆಗೆ ತಿಳಿದರೆ ಸಾಕು. ಮುಂದಿನ ತರಗತಿಗಳಲ್ಲಿ ಇವುಗಳ ಬಗೆಗೆ ಹೆಚ್ಚಿಗೆ ತಿಳಿಯುವಿರಿ.

# I – ಅರ್ಥಾಲಂಕಾರ

## (೧) ಉಪಮಾಲಂಕಾರ

ಈ ಕೆಳಗಿನ ಮಾತುಗಳನ್ನು ಗಮನಿಸಿರಿ.

(i) **ಆ ಮಗುವಿನ ಮುಖವು ಚಂದ್ರನ ಮುಖದಂತೆ ಮನೋಹರವಾಗಿದೆ.**

(ii) **ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ.**

ಮೊದಲನೆಯ ವಾಕ್ಯದಲ್ಲಿ ಮಗುವಿನ ಮುಖದಲ್ಲಿನ ಅಹ್ಲಾದಕತ್ವವೂ, ಚಂದ್ರನಲ್ಲಿರುವ ಅಹ್ಲಾದಕತ್ವವೂ ಸಮಾನವಾಗಿರುವುದರಿಂದ ಮಗುವಿನ ಮುಖವನ್ನು ಚಂದ್ರನಿಗೆ ಹೋಲಿಸಿದೆ. ಚಂದ್ರನನ್ನು ನೋಡಿದಾಗ ಉಂಟಾಗುವ ಮನೋಹರತ್ವವು ಮಗುವಿನ ಮುಖ ನೋಡಿದಾಗಲೂ ಆಗುತ್ತದೆ. ಈ ಅರ್ಥ ಚಮತ್ಕಾರ ಆ ವಾಕ್ಯದಲ್ಲಿ ಅಡಗಿದೆ.

ಎರಡನೆಯ ವಾಕ್ಯದಲ್ಲಿ ಹಾವಿಗೆ ಹಾಲೆರೆದರೆ ವಿಷವೇ ವೃದ್ಧಿಯಾಗುವುದಲ್ಲದೆ ಬೇರಿಲ್ಲ. ಇದರ ಹಾಗೆಯೇ ನೀಚರಿಗೆ ಉಪಕಾರ ಮಾಡಿದರೆ ಅವರು ಅಪಕಾರವನ್ನೇ ಮಾಡುವರಲ್ಲದೆ ಪ್ರತಿಯಾಗಿ ಉಪಕಾರ ಮಾಡುವುದಿಲ್ಲ. ಇಲ್ಲಿ ನೀಚರಿಗೆ ಮಾಡಿದ ಉಪಕಾರವನ್ನು ಹಾವಿಗೆ ಹಾಲೆರೆಯುವ ಕ್ರಿಯೆಗೆ ಹೋಲಿಸಲಾಗಿದೆ. ಹೀಗೆ ಬರುವ ಹೋಲಿಕೆಗಳಿಗೆ '**ಉಪಮಾನ**' ವೆನ್ನುತ್ತಾರೆ. ಯಾವುದಕ್ಕೆ ಈ ಹೋಲಿಕೆಯನ್ನು ಕೊಡುವೆವೋ ಅದು '**ಉಪಮೇಯ**'. **ಅಂತೆ ಹಾಗೆ**–ಎಂದು ಹೋಲಿಕೆಗೆ ಸಂಬಂಧ ಕಲ್ಪಿಸುವ ಶಬ್ದಗಳು **ಉಪಮಾವಾಚಕ**ಗಳೆನಿಸುವುವು. ಈ ಹೋಲಿಕೆಗಳಲ್ಲಿ ಬರುವ ಸಮಾನತೆಯೇ **ಸಮಾನಧರ್ಮ**ವೆನಿಸುವುದು.

ಉದಾಹರಣೆಗೆ:

ಮೊದಲನೆ ವಾಕ್ಯದಲ್ಲಿ

| | | |
|---|---|---|
| (೧) ಮಗುವಿನ ಮುಖ | .. .. .. .. | ಉಪಮೇಯ |
| (೨) ಚಂದ್ರ | .. .. .. .. | ಉಪಮಾನ |

(೩) ಮಗುವಿನ ಮುಖ ಮತ್ತು ಚಂದ್ರನಲ್ಲಿರುವ ಆಹ್ಲಾದಕತ್ವ } ಸಮಾನಧರ್ಮ, (ಸಾಧಾರಣಧರ್ಮ)

(೪) ಚಂದ್ರನ ಮುಖದಂತೆ ಎಂಬಲ್ಲಿರುವ 'ಅಂತೆ' ಎಂಬ ಶಬ್ದವೇ } ಉಪಮಾವಾಚಕ

ಎರಡನೆಯ ವಾಕ್ಯದಲ್ಲಿ

(೧) ನೀಚರಿಗೆ ಮಾಡಿದ ಉಪಕಾರ .. .. .. .. ಉಪಮೇಯ

(೨) ಹಾವಿಗೆ ಹಾಲೆರೆಯುವಿಕೆ .. .. .. .. ಉಪಮಾನ

(೩) ಹಾವಿನಲ್ಲಿ ವಿಷಹೆಚ್ಚುವಿಕೆ ನೀಚರಿಂದ ಅಪಕಾರವಾಗುವಿಕೆ– ಎಂಬ ಎರಡರಿಂದಲೂ ಪರಿಣಾಮದಲ್ಲಿ ಅಪಕಾರವಾಗುವಿಕೆ } ಸಮಾನಧರ್ಮ (ಸಾಧಾರಣಧರ್ಮ)

(೪) ಹಾಲೆರದಂತೆ ಎಂಬಲ್ಲಿ ಬಂದಿರುವ 'ಅಂತೆ' ಎಂಬುದು } ಉಪಮಾವಾಚಕ ಶಬ್ದ

ಹೀಗೆ ಈ ಉಪಮಾಲಂಕಾರದಲ್ಲಿ **ಉಪಮೇಯ, ಉಪಮಾನ, ಸಮಾನಧರ್ಮ ಉಪಮಾವಾಚಕ**–ಈ ನಾಲ್ಕೂ ಬಂದಿದ್ದರೆ ಅದು **ಪೂರ್ಣೋಪಮಾಲಂಕಾರ**ವೆನಿಸುವುದು[112]. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(125) ಉಪಮಾಲಂಕಾರ:– ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರವೆನಿಸುವುದು[113].**

**(ಹೋಲಿಕೆಯೆಂದರೆ ಆಕರ್ಷಕವಾದ ಹೋಲಿಕೆ)**

ಉದಾಹರಣೆ :– (i)

**ಬಿರುಗಾಳಿಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ। ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿದೆರೆಗೆ ಬೀಳದಮುನ್ನ ಹಮ್ಮೈಸಿಬಿದ್ದಳಂಗನೆ ಧರೆಗೆ ನಡುನಡುಗುತ॥**

(–ಜೈಮಿನಿ ಭಾರತ)

---

112 ಉಪಮೇಯ, ಉಪಮಾನ, ಸಮಾನಧರ್ಮ, ಉಪಮಾವಾಚಕಗಳಲ್ಲಿ ಒಂದಾದರೂ, ಕೆಲವಾದರೂ ಸ್ಪಷ್ಟವಾಗಿ ಹೇಳಿರದಿದ್ದರೆ ಅದು ಲುಪ್ತೋಪಮೆಯೆನಿಸುವುದು.

113 "ಉಪಮಾಯತ್ರ ಸಾದೃಶ್ಯ ಲಕ್ಷ್ಮೀರುಲ್ಲಸತಿ ದ್ವಯೋಃ" ॥

ಅರ್ಥ:– ಪ್ರಸ್ತುತವಾದ ವಸ್ತುವಿಗೆ ಪೆರತೊಂದು ವಸ್ತುವಿನೊಡನೆ ಒಂದು ಧರ್ಮದಿಂ ಸಾದೃಶ್ಯವ್ಯಕ್ತವಾಗಿ ತೋರೆಯದು ಉಪಮೇಯೆನಿಪುದು (– ಅಪ್ರತಿಮವೀರಚರಿತೆ) (ವಿಶೇಷ ತಿಳಿವಳಿಕೆಗಾಗಿ ಅಪ್ರತಿಮ ವೀರ ಚರಿತೆಯಲ್ಲಿನ ವಿಷಯ ಕೊಡಲಾಗಿದೆ.)

(ಶ್ರೀರಾಮಚಂದ್ರನ ಮಾತಿನಂತೆ ಸೀತಾದೇವಿಯನ್ನು ಕಾಡಿಗೆ ಬಿಟ್ಟುಬರಲು ಹೋದ ಲಕ್ಷ್ಮಣನು ಶ್ರೀರಾಮನ ಅಪ್ಪಣೆಯನ್ನು ಸೀತಾದೇವಿಗೆ ತಿಳಿಸಿದ ಸಂದರ್ಭದಲ್ಲಿ ನಡೆದ ಘಟನೆಯಿದು.)

ಅರ್ಥ:-ಬಿರುಗಾಳಿ ಬೀಸಲಾಗಿ, ಗೊನೆಬಿಟ್ಟ ಬಾಳೆ ಮರವು ಅಲ್ಲಾಡಿ ಮುರಿದು ಭೂಮಿಗೆ ಬೀಳುವಂತೆ ತುಂಬು ಗರ್ಭಿಣಿಯಾದ ಸೀತಾದೇವಿಯು ಲಕ್ಷ್ಮಣನ ಮಾತು ಕರ್ಣಪಟಲ (ಕಿವಿದೆರೆ) ಕ್ಕೆ ಬೀಳದ ಮುನ್ನ ಹಮ್ಮೈಸಿ ನಡುನಡುಗಿ ಭೂಮಿಗೆ ಬಿದ್ದಳು.

ಇಲ್ಲಿ ಭೂಮಿಗೆ ಬಿದ್ದ ಸೀತಾದೇವಿ '**ಉಪಮೇಯ**' ಫಲಿತ ಬಾಳೆಯ ಮರ '**ಉಪಮಾನ**' ಧರೆಗೆ ಬೀಳುವಿಕೆಯೇ '**ಸಾಧಾರಣಧರ್ಮ**' **(ಸಮಾನಧರ್ಮ).** 'ಅಂತೆ' ಎಂಬುದೇ **ಉಪಮಾವಾಚಕ.** ಆದುದರಿಂದ ಇದು **ಪೂರ್ಣೋಪಮಾಲಂಕಾರ**ವಾಯಿತು.

ಉದಾಹರಣೆ:- (ii)

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ।
ಬಾಡಿಗೆಯೆತ್ತು ದುಡಿದಂಗ। ಬಾಳೆಲೆಯ।
ಹಾಸ್ಯುಂಡು ಬೀಸಿ ಒಗೆದಂಗ॥

(-ಜಾನಪದ ಸಾಹಿತ್ಯದಿಂದ)

ಅರ್ಥ:- ಬಾಲಕರಿಲ್ಲದ ಬಾಲೆಯ ಜನ್ಮವೇತರದು? ಬಾಡಿಗೆ ಎತ್ತು ದುಡಿದ ಹಾಗೆ. ಮತ್ತು ಬಾಳೆಯೆಲೆಯನ್ನು ಹಾಸಿ ಊಟಮಾಡಿ ಬೀಸಿ ಒಗೆದ ಹಾಗೆ. ಇಲ್ಲಿ ಮಕ್ಕಳಿಲ್ಲದ ಹೆಣ್ಣುಮಗಳಿಗೆ ಬಾಡಿಗೆ ಎತ್ತಿನ ದುಡಿಮೆಗೂ, ಬಾಳೆಯ ಎಲೆಯನ್ನು ಹಾಸಿ ಊಟಮಾಡಿ ಬಿಸಾಡುವಿಕೆಗೂ ಎರಡು ಹೋಲಿಕೆಗಳನ್ನು ಕೊಡಲಾಗಿದೆ. ಇದೂ ಉಪಮಾಲಂಕಾರ.

## (೨) ರೂಪಕಾಲಂಕಾರ[114]

ಮಾತನಾಡುವಾಗ ಒಮ್ಮೊಮ್ಮೆ ಹೀಗೆ ಹೇಳುವುದುಂಟು.

(i) ವಿದ್ವಾಂಸನಾದ ಆತನು **ಸಾಕ್ಷಾತ್ ಸರಸ್ವತಿ.**

(ii) ಆ ಮನುಷ್ಯ **ನಿಜವಾಗಿ ದೇವರು.**

(iii) ಈ ಶಾಲೆಗೆ **ಆ ವಿದ್ಯಾರ್ಥಿಯೊಂದು ರತ್ನ.**

---

114 "ವಿಷಯ್ಯಭೇದ ತಾದ್ರೂಪ್ಯರಂಜನಂ ವಿಷಯಸ್ಯಯತ್ ರೂಪಕಂ.. .. .."
ಅರ್ಥ:-ವರ್ಣಿಸುವ ವಸ್ತುವನುಪಮಾನವಸ್ತುವೆಂದೇ ಪೇಳ್ವುದು ಅಭೇದರೂಪಕಂ.
(-ಅಪ್ರತಿಮವೀರಚರಿತ್ರೆ)
(ಈ ಅಲಂಕಾರದಲ್ಲಿ ಆರು ಬಗೆ. ಪ್ರಕೃತ ಅಭೇದರೂಪಕವೊಂದನ್ನು ತಿಳಿದರೆ ಸಾಕು. ಸೂತ್ರದಲ್ಲಿ ತಾದ್ರೂಪ್ಯರೂಪಕದ ಪ್ರಸ್ತಾಪವೂ ಇದೆ. ಅದು ಅನವಶ್ಯಕ.)

(೧) ಇಲ್ಲಿ ಮೊದಲ ವಾಕ್ಯದಲ್ಲಿ–ವಿದ್ವಾಂಸನೂ ಸಾಕ್ಷಾತ್ ಸರಸ್ವತಿಯೂ ಒಂದೇ ಎಂದು ಭೇದವಿಲ್ಲದೆ ಹೇಳಲಾಗಿದೆ.

(೨) ಎರಡನೆಯ ವಾಕ್ಯದಲ್ಲಿ–ಮನುಷ್ಯನೂ, ದೇವರೂ ಒಂದೇ ಎಂದು ಭೇದವಿಲ್ಲದೆ (ಅಭೇದವಾಗಿ) ಹೇಳಿದೆ.

(೩) ಮೂರನೆಯ ವಾಕ್ಯದಲ್ಲಿ–ವಿದ್ಯಾರ್ಥಿಯೂ ರತ್ನವೂ ಒಂದೇ ಎಂದು ಭೇದವಿಲ್ಲದೆ (ಅಭೇದವಾಗಿ) ಹೇಳಲಾಗಿದೆ.

ಇಲ್ಲಿ ಮೂರೂ ವಾಕ್ಯಗಳಲ್ಲಿ ಒಂದರಂತೆ ಇನ್ನೊಂದಿದೆ ಎಂದು ಹೇಳಿಲ್ಲ. ಉಪಮಾನ ಉಪಮೇಯಗಳು ಎರಡೂ ಒಂದೇ ಎಂದು ಹೀಗೆ ಭೇದವಿಲ್ಲದೆ ಹೇಳುವುದೇ **ರೂಪಕಾಲಂಕಾರ.** ಇಲ್ಲಿ ಅಭೇದದಿಂದ ಹೇಳಿರುವುದರಿಂದ ಇದು '**ಅಭೇದ ರೂಪಕ**' ವೆಂದು ಹೇಳಲ್ಪಡುವುದು. ಇದರ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(126) ಅಭೇದರೂಪಕಾಲಂಕಾರ:– ವರ್ಣಿಸುವ ವಸ್ತುವು ಇನ್ನೊಂದರಂತೆ (ಉಪಮಾನದಂತೆ) ಇದೆ ಎಂದು ಹೇಳದೆ, ಎರಡೂ ವಸ್ತುಗಳು ಎಂದರೆ ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವುದೇ ಅಭೇದರೂಪಕಾಲಂಕಾರವೆನಿಸುವುದು.**

ಉದಾಹರಣೆ:– (i) **ಪುರದಪುಣ್ಯಂ ಪುರುಷರೂಪಿಂದ ಪೋಗುತಿದೆ।**
**ಪರಿಜನದ ಭಾಗ್ಯವಡವಿಗೆ ನಡೆಯುತಿದೆ॥**

(–ಹರಿಶ್ಚಂದ್ರ ಕಾವ್ಯ)

ಈ ಪದ್ಯಭಾಗವು–ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ತನ್ನ ರಾಜ್ಯಾದಿಗಳನ್ನು ಕೊಟ್ಟು, ಪಟ್ಟಣ ಬಿಟ್ಟು ಹೋಗುವಾಗ ಅಯೋಧ್ಯಾನಗರದ ಜನರು ಗೋಳಿಡುವ ಸನ್ನಿವೇಶದ್ದು.

ಅರ್ಥ:– ಪುರದ ಪುಣ್ಯವು ಪುರುಷಾಕಾರದಿಂದ ಹೋಗುತ್ತಿದೆ.
ಸೇವಕ ಜನದ ಭಾಗ್ಯವು ಅಡವಿಗೆ ಹೋಗುತ್ತಿದೆ.

ಇಲ್ಲಿ ಹರಿಶ್ಚಂದ್ರನೆಂಬ ಉಪಮೇಯವೂ ಪುರದ ಪುಣ್ಯವೆಂಬ ಉಪಮಾನವೂ ಒಂದೇ ಎಂದೂ, ಎರಡನೆಯ ವಾಕ್ಯದಲ್ಲಿ ಹರಿಶ್ಚಂದ್ರನೆಂಬ ಉಪಮಾನವೂ ಪರಿಜನರ ಭಾಗ್ಯವೆಂಬ ಉಪಮಾನವೂ ಒಂದೇ ಎಂದೂ ಉಪಮಾನೋಪಮೇಯಗಳಲ್ಲಿ ಭೇದವಿಲ್ಲದೆ ಅಂದರೆ ಅಭೇದವಾಗಿ ವರ್ಣಿಸಿರುವುದರಿಂದ ಇದು ಅಭೇದರೂಪಕಾಲಂಕಾರವೆನಿಸಿತು. ಇದರಂತೆ–

ಉದಾಹರಣೆ:– (ii) **ಮನೆಯೇ ಧರ್ಮಾಶ್ರಮ, ಮನೆವಾಳ್ತೆಯೇ ಧರ್ಮ।**
**ವಿನಿಯುನೂಳಿಗ ದೇವಪೂಜೆ॥**
**ಮನನವಿವನ ನೆನೆವುದೆ ಸಾಧ್ವಿಯರಿಗೆ।**
**ಮುನಿಸತಿಯರ ಮೋಡಿಯೇನು?**

(–ಹದಿಬದೆಯ ಧರ್ಮ)

ಇಲ್ಲಿ ಸಾಧ್ವಿಯಾದ ಹೆಣ್ಣುಮಗಳು ತನ್ನ ಗೃಹಿಣೀ ಧರ್ಮದಲ್ಲಿ ನಡೆದುಕೊಳ್ಳುವ ನಡೆವಳಿಕೆಯು ವರ್ಣಿತವಾಗಿದೆ.

ಅರ್ಥ:- ಸಾಧ್ವಿಯರಿಗೆ ಮನೆಯು ಧರ್ಮಾಶ್ರಮ, ಮನೆಯ ಬಾಳುವೆ ಧರ್ಮ, ಗಂಡನಸೇವೆ ದೇವರ ಪೂಜೆ, ಪತಿಯನ್ನು ನೆನೆವುದು ದೇವರಧ್ಯಾನ.

ಇಲ್ಲಿ ಮನೆ ಮತ್ತು ಧರ್ಮಾಶ್ರಮ ಎರಡೂ ಒಂದೇ. ಬಾಳುವೆ ಮತ್ತು ಧರ್ಮ ಎರಡೂ ಒಂದೇ, ಪತಿಯ ಸೇವೆ-ದೇವರ ಪೂಜೆ ಇವೆರಡೂ ಒಂದೇ-ಇತ್ಯಾದಿಯಾಗಿ ಉಪಮೇಯ-ಉಪಮಾನಗಳಲ್ಲಿ ಅಭೇದವು ಹೇಳಲ್ಪಟ್ಟ ಕಾರಣ ಅಭೇದರೂಪಕಾಲಂಕಾರವೆನಿಸಿತು.

## (೩) ಉತ್ಪ್ರೇಕ್ಷಾಲಂಕಾರ[115]

ಲವಕುಶರು ಶ್ರೀರಾಮಲಕ್ಷ್ಮಣರೊಡನೆ ಯದ್ಧಕ್ಕೆ ತೊಡಗಿದಾಗಿನ ರಾಮಾಶ್ವಮೇಧದಲ್ಲಿನ ಪ್ರಸಂಗದ ವರ್ಣನೆಯನ್ನು ಈ ಕೆಳಗೆ ನೋಡಿರಿ.

**"ರಕ್ತದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಈ ರೀತಿ ಚಿಕ್ಕ ಚಿಕ್ಕ ಬೆಟ್ಟಗಳನ್ನು ಹೊಸದಾಗಿ ಹರಡಿರುವವರೋ ಎನ್ನುವಂತೆ ಸತ್ತು ಬಿದ್ದ ಆನೆಗಳ ಹಿಂಡು ಕಾಣುತ್ತಿತ್ತು."**

(-ರಾಮಾಶ್ವಮೇಧದಲ್ಲಿನ ವರ್ಣನೆಯ ಹೊಸಗನ್ನಡರೂಪಾಂತರ)

ಇಲ್ಲಿ ಸತ್ತು ಬಿದ್ದ ಆನೆಗಳು ರಣರಂಗದ ಸುತ್ತೆತ್ತಲೂ ಹರಡಿ ಬಿದ್ದಿದ್ದವು. ರಣರಂಗವೆಲ್ಲ ರಕ್ತಮಯವಾಗಿತ್ತು. ಈ ಸನ್ನಿವೇಶವನ್ನು ಕವಿ ಬೇರೊಂದು ರೀತಿಯಲ್ಲಿ ಕಲ್ಪಿಸಿಕೊಂಡನು (ಸಂಭಾವಿಸಿದನು). ರಾಮಲಕ್ಷ್ಮಣರು ಹಿಂದೆ ಸಮುದ್ರಕ್ಕೆ ಸೇತುವೆ ಕಟ್ಟಲು ಬೆಟ್ಟಗಳನ್ನು ಕಿತ್ತು ತಂದು ಹರಡಿಸಿದ್ದರೆಂಬ ಪ್ರಸಿದ್ಧಾಂಶವನ್ನು ಜ್ಞಾಪಿಸಿಕೊಂಡ ಕವಿ, ಈಗ ಅವನ ಮಕ್ಕಳೇ ಆದ ಲವಕುಶರು ರಕ್ತದ ಸಮುದ್ರಕ್ಕೆ ಸೇತುವೆ ಕಟ್ಟಲು ಚಿಕ್ಕ ಚಿಕ್ಕ ಬೆಟ್ಟಗಳನ್ನು ತರಿಸಿ ಹರಡಿಸಿರುವವರೋ-ಎನ್ನುವ ಹಾಗೆ ರಕ್ತಮಡುವಿನಿಂದ ಕೂಡಿದ ರಣರಂಗದಲ್ಲಿ ಸತ್ತು ಬಿದ್ದು ಸುತ್ತಲೂ ಹರಡಿಕೊಂಡಿರುವ ಆನೆಗಳು ಕಂಡವೆಂದು ಕಲ್ಪಿಸಿ ಹೇಳಿದ್ದಾನೆ. ಹೀಗೆ ಕವಿ ಕಲ್ಪಿತಜ್ಞಾನದಿಂದ ಹೇಳುವುದು ಉತ್ಪ್ರೇಕ್ಷೆಯೆನಿಸುವುದು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(127) ಉತ್ಪ್ರೇಕ್ಷಾಲಂಕಾರ:- ಒಂದಾನೊಂದು ಪದಾರ್ಥವನ್ನೋ, ಅಥವಾ ಸನ್ನಿವೇಶವನ್ನೋ ಮತ್ತೊಂದನ್ನಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸುವುದೇ ಉತ್ಪ್ರೇಕ್ಷೆಯೆನಿಸುವುದು.**

---

115 "ಸಂಭಾವನಾಸ್ಯುರುತ್ಪ್ರೇಕ್ಷಾ ......" ("ಸಂಭಾವನಾಸ್ಯಾದುತ್ಪ್ರೇಕ್ಷಾ.. .. .. ")
ವರ್ಣಿಸುವ ಉಪಮೇಯಕ್ಕೆ ಉಪಮಾನದ ಸಾದೃಶ್ಯವಿರ್ಪುದರಿಂದ ಉಪಮಾನಮೆಂದೆಣಿಸುವುದು (ಊಹಿಸುವುದು), ಉತ್ಪ್ರೇಕ್ಷೆಯೆನಿಸುವುದು. (ಎಂದರೆ ವಸ್ತುಸ್ವರೂಪದಿಂದ ಒಂದು ವಸ್ತುವನ್ನು ಇನ್ನೊಂದು ವಸ್ತುವಾಗಿ ಸಂಭಾವಿಸುವುದು, ಎಂದರೆ ಕಲ್ಪಿಸುವುದು ಮುಖ್ಯವಾದ ಅಂಶ.)

ಆದರೆ ವರ್ಣಿಸುವ ವಸ್ತುವಿನಲ್ಲಿ ಅಥವಾ ಸನ್ನಿವೇಶದಲ್ಲಿ ಸಂಭಾವನೆ ಮಾಡುವ (ಕಲ್ಪಿಸಿಕೊಳ್ಳುವ) ವಸ್ತುವಿನ ಧರ್ಮವು ಇದ್ದೇ ಇರಬೇಕು.

ಉದಾಹರಣೆ:– (i)

**ಆಸೇನಾರಜದಿಂ ಪರಿ**
**ಧೂಸರವಾದುದು ನಿಜಾಂಗಮಂ ತೊಳೆಯಲ್ಕೆಂದೋಸರಿಸದೆ ಪೊಕ್ಕಂತಿರೆ**
**ವಾಸರಕರನಪರ ವಾರಿನಿಧಿಯಂ ಪೊಕ್ಕಂ॥**

(–ಕನ್ನಡ ಕೈಪಿಡಿ)

ಇದೊಂದು ಯದ್ಧ ಸಮಯದ ಸಾಯಂಕಾಲದ ವರ್ಣನೆ.

ಅರ್ಥ:– ಸೇನೆಯ ಕಾಲ್ತುಳಿತದಿಂದ ಎದ್ದ ಧೂಳು ಮೈಗೆ ಮೆತ್ತಲಾಗಿ, ಅಂಥ ಕೆಂಪು ಧೂಳಿನಿಂದ ಧೂಸರವಾದ ತನ್ನ ದೇಹವನ್ನು ತೊಳೆಯುವುದಕ್ಕೋಸುಗ ಪಶ್ಚಿಮ ಸಮುದ್ರವನ್ನು ಸೂರ್ಯನು ಹೊಕ್ಕನು.

ಸಹಜವಾಗಿ ಮುಳುಗಿದ ಸೂರ್ಯನನ್ನು, ಕವಿ ಸ್ನಾನಕ್ಕೋಸುಗವೇ ಪಶ್ಚಿಮ ಸಮುದ್ರಕ್ಕೆ ಮುಳುಗಿದನೆಂದು ಕಲ್ಪಿಸಿ ಹೇಳಿದ್ದಾನೆ.

ಸಾಯಂಕಾಲದಲ್ಲಿ ಸೂರ್ಯನ ಬಣ್ಣ ಕೆಂಪಾಗಿರುತ್ತದೆ ಮತ್ತು ಪಶ್ಚಿಮದಲ್ಲಿ ಅವನು ಮರೆಯಾಗುತ್ತಾನೆ. ಆದ್ದರಿಂದ ಕಲ್ಪಿಸಿ ಹೇಳುವ ಧೂಳುಮೆತ್ತಿ ಕೆಂಪಾದ ಮೆಯ್ಯಿ, ಪಶ್ಚಿಮದಲ್ಲಿರುವ ಸಮುದ್ರದಲ್ಲಿ ಕಾಣದಾಗುವನೆನ್ನುವಲ್ಲಿನ ಧರ್ಮವು ಇದೆ. ಆದ್ದರಿಂದ ಇದು ಉತ್ಪ್ರೇಕ್ಷಾಲಂಕಾರವೆನಿಸಿತು.

ಉದಾಹರಣೆ:– (ii) **ಪಾಲ್ದುಂಬಿದ ಸಾಲ್ದೆನೆಗಳ।**
**ನೆಲ್ದುರುಗಲನೊಲ್ದು ಸೀಳಿಗಿಳಿಭಯ ಭರದಿಂ॥**
**ಜೋಲ್ದಿಳೆಗಿಳಿವಂತಿರಬಂ।**
**ಬಲ್‌ದೆರೆಯೊಳ್ ಪೊಳೆದು ಮಡಿಯ ನೀರೋಳ್ ತೋರ್ಕುಂ॥**

(–ರಾಜಶೇಖರ ವಿಳಾಸ)

ಗದ್ದೆಯಲ್ಲಿ ನೀರಿದೆ. ಆ ನೀರಿನಲ್ಲಿ ಬತ್ತದ ತೆನೆಗಳ ಪ್ರತಿಬಿಂಬ ಕಾಣುತ್ತಿದೆ.

ಅರ್ಥ:– ಹಾಲುತುಂಬಿದ ಸಾಲುಸಾಲಾಗಿ ಕಾಣುವ ಬತ್ತದ ತೆನೆಗಳು ತಮ್ಮನ್ನು ಗಿಳಿಗಳು ಬಂದು ಸೀಳಿಬಿಡುತ್ತವೆಂಬ ಭಯದಿಂದ ಭೂಮಿಗೆ ಇಳಿದುಹೋದವೋ ಎಂಬಂತೆ ಗದ್ದೆಯ ನೀರಿನಲ್ಲಿ ಅವು ಪ್ರತಿಫಲಿಸಿ ಕಾಣುತ್ತಿದ್ದವು.

ಇಲ್ಲಿ ಸಹಜವಾಗಿ ನೀರಿನಲ್ಲಿ ಪ್ರತಿಫಲಿಸಿ ಕಾಣುವ ಬತ್ತದ ತೆನೆಗಳ ಆ ಸನ್ನಿವೇಶವನ್ನು ಕವಿಯು ಬೇರೊಂದು ಕಾರಣ ಕೊಟ್ಟು ಕಲ್ಪಿಸಿ ಗಿಳಿಗಳ ಭಯದಿಂದ ಅವು ಭೂಮಿಗೆ ಇಳಿದು ಹೋಗಿವೆ ಎಂದು ಸಂಭಾವನೆ ಮಾಡಿ ಹೇಳುವ ಇದು ಉತ್ಪ್ರೇಕ್ಷಾಲಂಕಾರವಾಗುವುದು.

## (೪) ದೃಷ್ಟಾಂತಾಲಂಕಾರ[116]

(i) **ಊರು ಉಪಕಾರ ಅರಿಯದು; ಹೆಣ ಶೃಂಗಾರ ಅರಿಯದು.**
(ii) **ಅಟ್ಟಮೇಲೆ ಒಲೆ ಉರಿಯಿತು; ಕೆಟ್ಟಮೇಲೆ ಬುದ್ಧಿಬಂತು.**
(iii) **ಮಾತುಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ.**

ಇತ್ಯಾದಿಯಾಗಿ ಹೇಳುವ ನಾಣ್ಣುಡಿಗಳನ್ನು ವಿಚಾರ ಮಾಡಿದರೆ, ಮೊದಲನೆಯ ವಾಕ್ಯದಲ್ಲಿ ಊರಿಗೆ ಉಪಕಾರ ಮಾಡುವುದೂ, ಹೆಣಕ್ಕೆ ಶೃಂಗಾರಮಾಡುವುದೂ ಒಂದೇ. ಎರಡನೆಯ ವಾಕ್ಯದಲ್ಲಿ ಅಡಿಗೆಯಾದ ಮೇಲೆ ಒಲೆ ಉರಿಯಹತ್ತಿತು. ಮನುಷ್ಯ ಕೆಟ್ಟ ಮೇಲೆ ಬುದ್ಧಿ ಬಂತು. ಮೂರನೆಯ ವಾಕ್ಯದಲ್ಲಿ ಮಾತಿನ ಮಹತ್ವ ತಿಳಿದವನು ಜಗಳ ಮಾಡಬೇಕಾದ ಪ್ರಮೇಯವೇ ಇಲ್ಲ; ಊಟದ ಮರ್ಮವರಿತವನು ರೋಗದಿಂದ ನರಳುವ ಭಯವಿಲ್ಲ. ಇತ್ಯಾದಿಯಾಗಿ ಎರಡೆರಡು ಮಾತುಗಳು ಅರ್ಥದ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬಗಳಂತೆ ಕಾಣುತ್ತವೆ. ಬಿಂಬ ಪ್ರತಿಬಿಂಬವೆಂದರೆ ತಾನು ಮತ್ತು ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬವಿದ್ದ ಹಾಗೆ. ಹೀಗೆ ವರ್ಣಿಸುವ ವಿಷಯಕ್ಕೆ ಬೇರೊಂದು ವಿಷಯದ ದೃಷ್ಟಾಂತವು ಪ್ರತಿಬಿಂಬದ ಹಾಗೆ ಕಾಣುವಂತಿದ್ದರೆ ಅದು ದೃಷ್ಟಾಂತಾಲಂಕಾರವೆನಿಸುವುದು. ಇದರ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

**(128) ದೃಷ್ಟಾಂತಾಲಂಕಾರ:– ಎರಡು ಬೇರೆ ಬೇರೆ ವಾಕ್ಯಗಳು (ವರ್ಣಿಸುವ ವಿಷಯದ ವಾಕ್ಯ ಅವರ್ಣ್ಯವಿಷಯ ವಾಕ್ಯಗಳು) ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬವಾದಂತೆ (ಒಂದರ ಪ್ರತಿಬಿಂಬ ಮತ್ತೊಂದೆನ್ನುವ ಭಾವದಂತೆ) ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರವೆನಿಸುವುದು.**

ಉದಾಹರಣೆ:– (i) **ನಿಂದಿಸುವರ್ ದುರ್ಜನರ್ ಎಂ।**
**ಬೊಂದುಭಯಂಬೆತ್ತು ಸುಕವಿರಚಿಸನೆಕೃತಿಯಂ?॥**
**ಮಂದೇಹರಭಯದಿಂದರ।**
**ವಿಂದಸಖಂ ನಿಜಮಯೂಖನಂ ಪ್ರಸರಿಸನೇ?॥**

(–ರಾಜಶೇಖರ ವಿಲಾಸ)

ಅರ್ಥ:– ದುರ್ಜನರು ನಿಂದಿಸುತ್ತಾರೆ ಎಂಬ ಹೆದರಿಕೆಯಿಂದ ಒಳ್ಳೆಯ ಕವಿಯಾದವನು ಕೃತಿಯನ್ನು ರಚಿಸುವುದಿಲ್ಲವೆ? ಅಂದರೆ ರಚಿಸಿಯೇ ರಚಿಸುತ್ತಾನೆ. ಕತ್ತಲೆಯ ಭಯದಿಂದ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸುವುದಿಲ್ಲವೆ? ಅಂದರೆ ಪ್ರಸರಿಸಿಯೇ ಪ್ರಸರಿಸುತ್ತಾನೆ.

---

116 "ಚೇದ್ಬಿಂಬ ಪ್ರತಿಬಿಂಬತ್ವಂ ದೃಷ್ಟಾಂತಸ್ತದಲಂಕೃತಿಃ"
ಅರ್ಥ:– ಎರಡು ವಾಕ್ಯಂಗಳ್ ಬೇರಾಗಿ ಒಂದರ್ಕೊಂದು ಸಾದೃಶ್ಯದಿಂ ಪ್ರತಿಬಿಂಬದಂತೆ ತೋರೆಯದು ದೃಷ್ಟಾಂತಾಲಂಕಾರಂ. (–ಅಪ್ರತಿಮವೀರಚರಿತ್ರೆ)

ಇಲ್ಲಿ–ದುರ್ಜನರು ನಿಂದೆ ಮಾಡುತ್ತಾರೆಂಬ ಹೆದರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಸತ್ಕವಿಯಾದವನು ಕೃತಿ ರಚಿಸಿಯೇ ರಚಿಸುತ್ತಾನೆಂಬ ಮಾತಿಗೂ, ಕತ್ತಲೆಯ ಹೆದರಿಕೆಯಿಂದ ಸೂರ್ಯನು ಸುಮ್ಮನಿರದೆ ತನ್ನ ಕಿರಣಗಳನ್ನು ಪ್ರಸರಿಸಿಯೇ ಪ್ರಸರಿಸುತ್ತಾನೆ–ಎಂಬ ಮಾತಿಗೂ ಅರ್ಥ ಸಾದೃಶ್ಯದಿಂದ ಬಿಂಬಪ್ರತಿಬಿಂಬ ಭಾವವು ಉಪಮೇಯ–ಉಪಮಾನಗಳೆರಡಕ್ಕೂ ತೋರುವುದರಿಂದ ಇದು ದೃಷ್ಟಾಂತಾಲಂಕಾರವಾಗುವುದು. ಇದರ ಹಾಗೆಯೇ–

ಉದಾಹರಣೆ:– (ii) **ಎನಿತೊಳವಪಾಯ ಕೋಟಿಗ।**
**ಳನಿತರ್ಕಂ ಗೇಹಮಲ್ತೆ ದೇಹಮಿದಂನೆ।**
**ಟ್ಟನೆ ಪೊತ್ತು ಸುಖವನರಸುವ।**
**ಮನುಜಂ ಮೊರಡಿಯೊಳೆ ಮಾದುಫಳಮನರಸದಿರಂ॥**
(–ಯಶೋಧರ ಚರಿತೆ)

ಅರ್ಥ:– ಅಪಾಯಗಳೆಷ್ಟಿವೆಯೋ ಅಷ್ಟೆಲ್ಲಕ್ಕೂ ಮನೆಯಂತಿರುವ ಈ ದೇಹವನ್ನು ಧರಿಸಿ ಸುಖವೇ ಬೇಕು; ದುಃಖವು ಬೇಡ; ಎನ್ನುವ ಮನುಷ್ಯನು ಕಲ್ಲು ಮೊರಡಿಯಲ್ಲಿ ಮಾದಳ ಫಲವನ್ನು ಅರಸದೆ ಇರುವನೇ?

ಇಲ್ಲಿ–ಅನೇಕ ಅಪಾಯಗಳನ್ನು ಪಡೆಯುವುದಕ್ಕೆ ಕಾರಣವಾದ ಈ ದೇಹವನ್ನು ಧರಿಸಿ ಕೇವಲ ಸುಖವೇ ಬೇಕು ಎನ್ನುವ ಮನುಷ್ಯನೂ, ಕಲ್ಲುಮೊರಡಿಯ ಪ್ರದೇಶದಲ್ಲಿ ಮಾದಳ ಹಣ್ಣನ್ನು ಹುಡುಕುವ ಮನುಷ್ಯನೂ ಒಂದೇ. ಏಕೆಂದರೆ ಕಲ್ಲುಮೊರಡಿಯಲ್ಲಿ ಮಾದಳ ಫಲವು ಸಿಗದು. ಅದರಂತೆ ಮನುಷ್ಯ ದೇಹಕ್ಕೂ ಅಪಾಯಗಳು ಅನಿವಾರ್ಯ. ಅವು ಬಂದೇ ಬರುತ್ತವೆ. ಹೀಗೆ ಉಪಮೇಯ–ಉಪಮಾನ ವಾಕ್ಯಗಳಿಗೆ ಬಿಂಬ ಪ್ರತಿಬಿಂಬಭಾವ ತೋರುವುದರಿಂದ ಇದು ದೃಷ್ಟಾಂತಾಲಂಕಾರವಾಗುವುದು.

## (೫) ಅರ್ಥಾಂತರನ್ಯಾಸಾಲಂಕಾರ[117]

(i) **ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ?**

(ii) **ಆತನು ಉಂಡಮನೆಗೆ ಕೇಡುಬಗೆದನು; ಕೃತಘ್ನರು ಏನನ್ನು ತಾನೆ ಮಾಡುವುದಿಲ್ಲ?**

ಇತ್ಯಾದಿಯಾಗಿ ಮಾತನಾಡುವುದುಂಟು. ಇಲ್ಲಿ ಮೊದಲನೆಯ ವಾಕ್ಯದಲ್ಲಿ 'ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸಿ ಉತ್ತೀರ್ಣನಾದನು' ಎಂದು ವರ್ಣಿಸುವ ವಿಶೇಷ

---

117 "ಉಕ್ತಿರರ್ಥಾಂತರನ್ಯಾಸಃ ಸ್ಯಾತ್ ಸಾಮಾನ್ಯ ವಿಶೇಷಯೋಃ"
ಅರ್ಥ:– ಸಾಮಾನ್ಯ ವಿಶೇಷಂಗಳಂ ಪೇಳ್ವದು ಅರ್ಥಾಂತರನ್ಯಾಸಂ. ಅದುವುಂ ಪ್ರಸ್ತುತಮಾದರ್ಥಂ ವಿಶೇಷಮಾಗಿ, ಅಪ್ರಸ್ತುತಮಾದರ್ಥಂ ಸಾಮಾನ್ಯ ಮಾಗೆಯದು (1) ಸಾಮಾನ್ಯದಿಂ ವಿಶೇಷ ಸಮರ್ಥನ ರೂಪಮಾದ ಅರ್ಥಾಂತರನ್ಯಾಸಂ. ಸಾಮಾನ್ಯಂ ಪ್ರಸ್ತುತಮಾಗೆ ವಿಶೇಷಂ ಅಪ್ರಸ್ತುತ ಮಾಗೆ (2) ವಿಶೇಷದಿಂ ಸಾಮಾನ್ಯ ಸಮರ್ಥನ ರೂಪಮಾದ ಅರ್ಥಾಂತರ ನ್ಯಾಸಾಲಂಕಾರಂ. (–ಅಪ್ರತಿಮವೀರ ಚರಿತೆ)

ವಾಕ್ಯವನ್ನು–ಲೋಕದಲ್ಲಿ ಎಲ್ಲ ಬುದ್ಧಿವಂತ ಮಕ್ಕಳಿಗೂ ಅನ್ವಯವಾಗುವಂಥ ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ? ಎಂಬ ಸಾಮಾನ್ಯ ನುಡಿಯಿಂದ ಸಮರ್ಥನೆ ಮಾಡಿದೆ. ಅದರಂತೆ, ಎರಡನೆಯ ವಾಕ್ಯದಲ್ಲಿಯೂ ಕೂಡ 'ಉಂಡಮನೆಗೆ ಕೇಡು ಬಗೆದನು' ಎಂಬ ಈ ವರ್ಣ್ಯವಾದ ಮಾತನ್ನು ಕೃತಘ್ನತಾ ಬುದ್ಧಿಯುಳ್ಳ ಜನಗಳು ಏನನ್ನು ತಾನೆ ಮಾಡುವುದಿಲ್ಲ? ಅಂದರೆ–ಎಲ್ಲ ಕೆಡುಕನ್ನು ಮಾಡುತ್ತಾರೆಂಬ ಲೋಕ ಸಾಮಾನ್ಯ ಮಾತಿನಿಂದ ಸಮರ್ಥನೆ ಮಾಡಿ ಹೇಳುವುದುಂಟು. ಇದರ ಹಾಗೆಯೇ ಈ ಕೆಳಗಿನ ಮಾತನ್ನು ನೋಡಿರಿ.

**"ಪರಮಾತ್ಮನು ತನ್ನ ಭಕ್ತರನ್ನು ಸದಾ ಕಾಪಾಡುತ್ತಾನೆ. ಭಕ್ತನಾದ ಪ್ರಹ್ಲಾದನಿಗೆ ತಂದೆಯಿಂದ ಗಂಡಾಂತರ ಬಂದಾಗ ಪರಮಾತ್ಮನು ಕಾಪಾಡಿದನು."**

ಈ ಮಾತಿನಲ್ಲಿ 'ಪರಮಾತ್ಮನು ತನ್ನ ಭಕ್ತರನ್ನು ಸದಾ ಕಾಪಾಡುತ್ತಾನೆ' ಎಂಬುದು ಸಾಮಾನ್ಯ ವಾಕ್ಯ; ಏಕೆಂದರೆ ಎಲ್ಲ ಪರಮಾತ್ಮನ ಭಕ್ತರಿಗೂ ಅನ್ವಯವಾಗುವ ಮಾತು ಅದು. ಈ ಸಾಮಾನ್ಯವಾದ ಮಾತನ್ನು ಭಕ್ತನಾದ ಪ್ರಹ್ಲಾದನಿಗೆ ಗಂಡಾಂತರ ಪ್ರಾಪ್ತವಾದಾಗ ಪರಮಾತ್ಮನು ಸಂರಕ್ಷಿಸಿದನೆಂಬ ವಿಶೇಷ ವಾಕ್ಯದಿಂದ ಈ ಮಾತಿನಲ್ಲಿ ಸಮರ್ಥನೆ ಮಾಡಲಾಗಿದೆ. ಹೀಗೆ ಅರ್ಥ ಚಮತ್ಕಾರದಿಂದ ವರ್ಣಿಸುವ ಅಲಂಕಾರವೇ ಅರ್ಥಾಂತರನ್ಯಾಸಾಲಂಕಾರವೆನಿಸುವುದು. ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(129) ಅರ್ಥಾಂತರನ್ಯಾಸಾಲಂಕಾರ:– ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದಾಗಲಿ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದಾಗಲಿ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುವುದು. (ಅಲ್ಲಿ ಸಾಮಾನ್ಯವಾಕ್ಯ ವಿಶೇಷ ವಾಕ್ಯಗಳೆರಡೂ ಉಕ್ತವಾಗಿರಬೇಕು)**[118]

ಉದಾಹರಣೆಗೆ (i) **ಎನಗೆ ಹಿತಂ ಬ್ರಾಹ್ಮಣ ನೀ–।**
**ತನೆನ್ನದೆ ಅವಿವೇಕಿಯಾಗಿ ಶಿವಭೂತಿ ತೊ–।**
**ಟ್ಟನೆ ಬಗೆದನಹಿತಮಂ।**
**ತದ್ವನಚರಂ 'ಎಂತುಂ ಕೃತಘ್ನರೇನಂ ಮಾಡರ್'?**
(–ಪಂಚತಂತ್ರ)

ಅರ್ಥ:– 'ನನಗೆ ಈ ಬ್ರಾಹ್ಮಣನು ಹಿತವನ್ನುಂಟುಮಾಡಿದವನು, ಎಂದು ಯೋಚಿಸದೆ ಆ ಬೇಡನು ಒಮ್ಮೆಲೆ ಅವನಿಗೆ ಕೇಡನ್ನು ಬಗೆದನು. ಕೃತಘ್ನರಾದವರು ಏನನ್ನು ತಾನೆ ಮಾಡುವುದಿಲ್ಲ?'

ಇಲ್ಲಿ ವರ್ಣಿಸಲ್ಪಡುವ ವಿಷಯವಾದ ಬೇಡನು ಬ್ರಾಹ್ಮಣನಿಗೆ ಅಹಿತವನ್ನು ಯೋಚಿಸಿದ ವಿಶೇಷ ವಿಷಯವನ್ನು 'ಕೃತಘ್ನರಾದವರು ಏನೆಲ್ಲವನ್ನೂ ಮಾಡುತ್ತಾರೆ' ಎಂಬ

118 ದೃಷ್ಟಾಂತವಾಗಿ ಹೇಳಿದ ವಿಚಾರವು ಸಾಮಾನ್ಯವಾದ ಮಾತಾಗಿ ಲೋಕ ಪ್ರಸಿದ್ಧವಾಗಿದ್ದರೆ ಅರ್ಥಾಂತರನ್ಯಾಸಾಲಂಕಾರವಾಗುವುದು.

ಲೋಕಸಾಮಾನ್ಯವಾದ ಪ್ರಸಿದ್ಧ ವಿಷಯದಿಂದ ಸಮರ್ಥನೆ ಮಾಡಿದುದರಿಂದ ಇದು ಅರ್ಥಾಂತರನ್ಯಾಸಾಲಂಕಾರವಾಗುವುದು. ಇಲ್ಲಿ ವಿಶೇಷವು ಸಾಮಾನ್ಯದಿಂದ ಸಮರ್ಥಿತವಾಗಿದೆ.

ಉದಾಹರಣೆ: (ii) [119]**ದೊರೆಯೊಳ್‌ಸೆಣಸುಗೆ ತನ್ನಿಂ।**
**ಪಿರಿಯರೊಳುರವಣಿಸಿ ಪೊಣರ್ದೊಡೆ ಅಳಿವುದು ದಿಟಮೀ।**
**ನರಪತಿಯೊಳ್ ಪೊಣರ್ದು ಅಳಿದರ್॥**
**ಪರಿಕಿಪೊಡಾ ಕೆಳದಿ, ಮಧುರೆ, ಬೇಡ, ಮರಾಟರ್॥**

(–ಅಪ್ರತಿಮವೀರಚರಿತೆ)

ಅರ್ಥ:– ಸರಿಸಮಾನರಾದವರಲ್ಲಿ ಯದ್ಧಮಾಡಬೇಕು. ತನಗಿಂತಲೂ ಬಲಿಷ್ಠರಾದವರಲ್ಲಿ ಯದ್ಧಮಾಡಿದರೆ ಸಾಯುವುದು ನಿಶ್ಚಯ. ಮಹಾರಾಜನಾದ ಚಿಕ್ಕದೇವರಾಜ ಒಡಯನೊಡನೆ ಯದ್ಧಮಾಡಿ ಕೆಳದಿಯವರೂ, ಮಧುರೆಯವರೂ, ಬೇಡರೂ, ಮರಾಟೆಯವರೂ ಸತ್ತರು.

ಇಲ್ಲಿ–'ತನಗೆ ಸರಿಸಮಾನರಾದವರೊಡನೆ ಸೆಣಸಬೇಕಲ್ಲದೆ, ತನಗಿಂತಲೂ ಪರಾಕ್ರಮಶಾಲಿಗಳಾದವರಲ್ಲಿ ಸೆಣಸಬಾರದು' ಎಂಬ ಸಾಮಾನ್ಯವಾದ ಅಂದರೆ ಲೋಕ ಪ್ರಸಿದ್ಧವಾದ ಮಾತನ್ನು, ಚಿಕ್ಕದೇವರಾಜರಂತಹ ಬಲಿಷ್ಠರೊಡನೆ ಸೆಣಿಸಿ ಕೆಳದಿಯವರೂ, ಮಧುರೆಯವರೂ, ಬೇಡರೂ, ಮರಾಟೆಯವರೂ ಸತ್ತರು ಎಂಬ ವಿಶೇಷ ವಾಕ್ಯದಿಂದ ಅಂದರೆ ವರ್ಣ್ಯವಾದ ಮಾತಿನಿಂದ ಸಮರ್ಥನೆ ಮಾಡಿರುವುದರಿಂದ ಇದು ವಿಶೇಷದಿಂದ ಸಾಮಾನ್ಯವನ್ನು ಸಮರ್ಥನೆ ಮಾಡಿದ ಅರ್ಥಾಂತರನ್ಯಾಸಾಲಂಕಾರವೆನಿಸಿತು.

## (೬) ಶ್ಲೇಷಾಲಂಕಾರ[120]

ಈ ಕೆಳಗಿನ ಒಂದು ವಾಕ್ಯವನ್ನು ವಿಚಾರಮಾಡಿರಿ–

**"ಆ ವಿವಾಹ ಮಂಟಪವು ಪುರಂದರ ಪುರದಂತೆ**
**ಸದಾರಂಭಾನ್ವಿತ ವಿಬುಧಮಿಳಿತವಾಗಿತ್ತು"**

ಇದೊಂದು ವಿವಾಹ ಮಂಟಪದ ವರ್ಣನೆ. ಅದು ಪುರಂದರರನ ಎಂದರೆ ದೇವೇಂದ್ರನ ಪಟ್ಟಣದ ಹಾಗೆ ಸದಾರಂಭಾನ್ವಿತವಾಗಿತ್ತು. ಮತ್ತು ವಿಬುಧರಿಂದ ಮಿಳಿತವೂ ಆಗಿತ್ತು. ಇಲ್ಲಿ ರಂಭಾ ಶಬ್ದಕ್ಕೂ 'ವಿಬುಧ' ಎಂಬ ಶಬ್ದಕ್ಕೂ ವಿವಾಹಮಂಟಪದ ಪರವಾಗಿ ಮತ್ತು ಇಂದ್ರನಗರವಾದ ಅಮರಾವತಿಯಪರವಾಗಿ ಬೇರೆ ಬೇರೆ ಅರ್ಥಮಾಡಬೇಕು.

---

119 ಚಿಕ್ಕದೇವರಾಜರ ಶೌರ್ಯವನ್ನು ವರ್ಣಿಸುವ ಒಂದು ಸಂದರ್ಭದ ಪದ್ಯ.

120 "ನಾನಾರ್ಥ ಸಂಶ್ರಯಃ ಶ್ಲೇಷಃ ವರ್ಣಾವರ್ಣ್ಯೋೞ ಭಯಾತ್ಮಕಂ"
ಅರ್ಥ:– ವಾಕ್ಯದೊಳ್ ಪದಂಗಳ್ ನಾನಾರ್ಥಮಾಗಿರೆ ಅದು ಶ್ಲೇಷಾಲಂಕಾರಮೆನಿಸುವುದು. (ಇದರಲ್ಲಿ ಹಲವಾರು ವಿಧಗಳುಂಟು. ಆ ಪ್ರಕಾರಗಳೆಲ್ಲ ಪ್ರಕೃತ ಅನವಶ್ಯ.) (–ಅಪ್ರತಿಮವೀರ ಚರಿತೆ)

ವಿವಾಹ ಮಂಟಪವು–(i) ರಂಭಾನ್ವಿತವಾಗಿತ್ತು ಎಂದರೆ ಬಾಳೆ ಗಿಡಗಳಿಂದ ಕೂಡಿತ್ತು. ಎಂದು ಅರ್ಥಮಾಡಬೇಕು. (ರಂಭಾ=ಬಾಳೆ) (ii) ವಿಬುಧ ಮಿಳಿತವಾಗಿತ್ತು. ಎಂದರೆ ಬ್ರಾಹ್ಮಣರ ಸಮೂಹದಿಂದ ಕೂಡಿತ್ತು–ಎಂದು ಅರ್ಥಮಾಡ ಬೇಕು. (ವಿಬುಧ=ಬ್ರಾಹ್ಮಣ) ಅಮರಾವತಿಯು–(iii) ರಂಭಾನ್ವಿತವಾಗಿತ್ತು ಎಂದರೆ ರಂಭೆಯೆಂಬ ಅಪ್ಸರ ಸ್ತ್ರೀಯಿಂದ ಕೂಡಿತ್ತು ಎಂದರ್ಥ ಮಾಡಬೇಕು. ರಂಭಾ=ಅಪ್ಸರೆ (ಒಬ್ಬಳು). (iv) ವಿಬುಧ ಮಿಳಿತವಾಗಿತ್ತು. ಎಂದರೆ ದೇವತೆಗಳಿಂದ ತುಂಬಿತ್ತು ಎಂದು ಅರ್ಥ ಮಾಡಬೇಕು. (ವಿಬುಧ=ದೇವತೆ)

ಹೀಗೆ 'ರಂಭಾ' ಶಬ್ದವು ಬಾಳೆ–ಅಪ್ಸರ ಸ್ತ್ರೀಯೆಂದೂ, 'ವಿಬುಧ' ಶಬ್ದವು ಬ್ರಾಹ್ಮಣ ಮತ್ತು ದೇವತೆಯೆಂದೂ ಎರಡರ್ಥಗಳಿಂದ ಕೂಡಿರುತ್ತವೆ. ಒಂದೇ ಶಬ್ದವು ವರ್ಣಿಸುವ ವಿವಾಹ ಮಂಟಪದ ಪರವಾಗಿಯೂ, ವರ್ಣಿಸುವ ವಿಷಯವಲ್ಲದ ದೇವೇಂದ್ರನ ಅಮರಾವತಿಯ ಪರವಾಗಿಯೂ ಎರಡು ಬೇರೆ ಬೇರೆ ಅರ್ಥ ಕೊಡುತ್ತದೆ. ಇಂಥ ಪದಗಳೇ '**ಶ್ಲೇಷೆ**' ಯೆನಿಸುವುವು. ಇದರ ಸೂತ್ರವನ್ನು ಈ ಕೆಳಗಿನಂತೆ ಹೇಳಬಹುದು.

**(130) ಶ್ಲೇಷಾಲಂಕಾರ:– ಬೇರೆಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದವು ವರ್ಣಿಸುವ ವಿಷಯ ಮತ್ತು ಅವರ್ಣ್ಯವಾದ ವಿಷಯಗಳ ಪರವಾಗಿ ಬೇರೆಬೇರೆ ಅರ್ಥ ಕೊಡುವುದೇ ಶ್ಲೇಷಾಲಂಕಾರವೆನಿಸುವುದು.**[121]

ಉದಾಹರಣೆಗೆ: ಕಲಿಯಂತೆ ಸಶರಂ, ಅಂಬರ।
ತಲದಂತೆ ಸಹಂಸಂ, ಅಮರಪುರಮೆನೆಸುಮನೋ।
ನಿಲಯಂ ಸಕವಿ ನೃಪಸಭಾ।
ತಲದಂತೆ ಅಹಿಯಂತೆ ಸವಿಷಮೊಪ್ಪಿದುದು ಸರಂ॥

ಇದು ಒಂದು ಸರೋವರದ ವರ್ಣನೆಯಾಗಿದೆ. ಆ ಸರವು ಒಪ್ಪಿದುದು ಹೇಗೆ? ಅದರ ಅರ್ಥ ನೋಡಿರಿ;

ಆ ಸರವು– (i) ಕಲಿಯಂತೆ ಸಶರವಾಗಿತ್ತು.
(ii) ಅಂಬರ ತಲದಂತೆ ಸಹಂಸವಾಗಿತ್ತು.
(iii) ಅಮರಪುರದಂತೆ ಸುಮನೋನಿಲಯವಾಗಿತ್ತು.
(iv) ನೃಪಸಭೆಯಂತೆ ಸಕವಿಯಾಗಿತ್ತು.
(v) ಹಾವಿನಂತೆ ಸವಿಷವಾಗಿತ್ತು.

---

121 ಶಬ್ದಗಳನ್ನು ಒಡೆದು ಬೇರೆಬೇರೆ ಅರ್ಥ ಮಾಡುವುದೂ ಉಂಟು. ಒಡೆಯದೆ ಬೇರೆಬೇರೆ ಅರ್ಥ ಮಾಡುವುದೂ ಉಂಟು. ಶಬ್ದವನ್ನು ಒಡೆದು ಬೇರೆಬೇರೆ ಅರ್ಥ ಮಾಡಿದರೆ ಸಭಂಗ ಶ್ಲೇಷೆಯೆಂದೂ ಒಡೆಯದೇ ಅರ್ಥ ಮಾಡಿದರೆ ಅಭಂಗಶ್ಲೇಷೆಯೆಂದೂ ಕರೆಯುವರು. ಸಭಂಗಶ್ಲೇಷೆ ಪ್ರಕೃತ ಅನವಶ್ಯಕ.

ಹೀಗಿತ್ತು. ಈಗ ಸಶರ, ಸಹಂಸ, ಸುಮನೋನಿಲಯ, ಸಕವಿ, ಸವಿಷ–ಈ ಐದು ಪದಗಳ ಅರ್ಥಗಳೂ ಸರೋವರದ ಪರವಾಗಿ ಬೇರೆಬೇರೆ ಅರ್ಥ ಕೊಡಬೇಕು. ಸಶರ ಅಂದರೆ ಶರಸಮೇತ ಎಂದು ಅರ್ಥ. ಇದರಂತೆ 'ಸ' ಬಂದಿರುವಲ್ಲೆಲ್ಲ ಸಮೇತ ಎಂದು ಅರ್ಥ ಮಾಡಬೇಕು.

| | ಸರೋವರ ಪರವಾಗಿ | ಕಲಿಯ ಪರವಾಗಿ |
|---|---|---|
| (i) **ಶರ:–** | ನೀರು | ಬಾಣ |
| | **ಸರೋವರ ಪರವಾಗಿ** | **ಅಂಬರತಲ ಆಕಾಶ ಪರವಾಗಿ** |
| (ii) **ಸಹಂಸ:–** | ಹಂಸಪಕ್ಷಿಯಿಂದ ಕೂಡಿತ್ತು (ಹಂಸ=ಹಂಸಪಕ್ಷಿ) | ಸೂರ್ಯನಿಂದ ಕೂಡಿತ್ತು (ಹಂಸ=ಸೂರ್ಯ) |
| | **ಸರೋವರ ಪರವಾಗಿ** | **ಅಮರಪುರದ ಪರವಾಗಿ** |
| (iii) **ಸುಮನೋನಿಲಯ:–** | (ತಾವರೆ) ಹೂಗಳಿಂದ ಕೂಡಿತ್ತು (ಸುಮನ=ಹೂವು) | ದೇವತೆಗಳಿಂದ ಕೂಡಿತ್ತು (ಸುಮನ=ದೇವತೆ) |
| (iv) **ಸಕವಿ:–** | **ಸರೋವರ ಪರವಾಗಿ** | **ನೃಪಸಭೆಯಪರವಾಗಿ** |
| | ನೀರುಹಕ್ಕಿಯಿಂದ ಕೂಡಿತ್ತು (ಕವಿ=ನೀರುಹಕ್ಕಿ) | ಕವಿಗಳಿಂದ ಕೂಡಿತ್ತು (ಕವಿ–ಕಾವ್ಯ ಬರೆಯುವವ) |
| | **ಸರೋವರ ಪರವಾಗಿ** | **ಹಾವಿನ ಪರವಾಗಿ** |
| (v) **ಸವಿಷ:–** | ನೀರಿನಿಂದ ಕೂಡಿತ್ತು (ವಿಷ=ನೀರು) | ವಿಷದಿಂದ ಕೂಡಿತ್ತು |

ಹೀಗೆ–

(೧) ಶರ = (i) ಬಾಣ (ii) ನೀರು
(೨) ಸುಮನ = (i) ಹೂವು (ii) ದೇವತೆ
(೩) ಹಂಸ = (i) ಹಂಸ ಪಕ್ಷಿ (ii) ಸೂರ್ಯ
(೪) ಕವಿ = (i) ನೀರುಹಕ್ಕಿ (ii) ಕವಿ
(೫) ವಿಷ = (i) ನೀರು (ii) ವಿಷ

ಒಂದೇ ಶಬ್ದವು ವರ್ಣಿಸುವ ಸರೋವರದ ಪರವಾಗಿಯೂ ಅವರ್ಣ್ಯವಾದ ಮತ್ತೊಂದು ವಿಷಯದ ಪರವಾಗಿಯೂ ಬೇರೆಬೇರೆ ಅರ್ಥಗಳನ್ನು ಕೊಡುವುದರಿಂದ ಶ್ಲೇಷಾಲಂಕಾರವೆನಿಸುವುದು.

# II – ಶಬ್ದಾಲಂಕಾರಗಳು

**(131) ಶಬ್ದ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೊಬಗು ಹೆಚ್ಚಿದರೆ 'ಶಬ್ದಾಲಂಕಾರ' ವೆನ್ನುವರೆಂದು ಈ ಪೂರ್ವದಲ್ಲಿ ಉದಾಹರಣೆ ಸಮೇತ ವಿವರಿಸಲಾಗಿದೆ. ಈ ಶಬ್ದಾಲಂಕಾರಗಳು ಎರಡು ವಿಧ.**

**ಶಬ್ದಾಲಂಕಾರ**
- **ಅನುಪ್ರಾಸ**
  - **(೧) ವೃತ್ತ್ಯನುಪ್ರಾಸ**
  - **(೨) ಛೇಕಾನುಪ್ರಾಸ**
- **ಯಮಕ**

## (ಅ) ಅನುಪ್ರಾಸ

### (೧) ವೃತ್ತ್ಯನುಪ್ರಾಸ[122]

ಈ ಗಾದೆಗಳನ್ನು ನೋಡಿರಿ

(೧) **ತುಪ್ಪದ ಮಾತಿಗೆ ಒಪ್ಪಿಕೊಂಡು ತಿಪ್ಪೆಪಾಲಾದ**
(೨) **ತುಂಟನಾದವ ಮಂಟಪದಲ್ಲಿ ಕೂತರೂ ತಂಟೆ ಬಿಡಲಾರ**

ಇತ್ಯಾದಿ ಮಾತುಗಳಲ್ಲಿ ಒಂದೇ ಅಕ್ಷರ ಎರಡು ಮೂರು ಸಲ ಬಂದು ವಾಕ್ಯಗಳ ಸೊಬಗನ್ನು ಹೆಚ್ಚಿಸಿದೆ. ಹಾಗೆಯೇ ಈ ಕೆಳಗಿನ ಒಂದು ಪದ್ಯವನ್ನು ನೋಡಿ.

**"ಮುರಾರಿ ಶಂಬರಾರಿ ವಾಗ್ವರಾರಿ ನಿರ್ಜರಾರ್ಜಿತೇ**
**ಧರಾಧರೇಶ್ವರಾತ್ಮಜೇಹರ ಪ್ರಿಯೇ ಜಯಾಂಬಿಕೆ॥"**

(–ವೃಷಭೇಂದ್ರ ವಿಜಯ)

ಈ ಪದ್ಯದಲ್ಲಿ ರಕಾರವು ಹಲವಾರು ಸಲ ಪುನರುಕ್ತವಾಗಿ ಪದ್ಯದ ಸೌಂದರ್ಯವು ಶಬ್ದಗಳಿಂದ ಹೆಚ್ಚಿದೆ. ಇದಕ್ಕೆ ಸೂತ್ರವನ್ನು ಹೀಗೆ ಹೇಳಬಹುದು.

---

[122]ಏಕದ್ವಿಪ್ರಭೃತೀನಾಂತು ವ್ಯಂಜನಾನಾಂ ಯದಾ ಭವೇತ್ ಪುನರುಕ್ತಿರಸೌ ನಾಮ ವೃತ್ಯನುಪ್ರಾಸ ಇಷ್ಯತೇ. ಅರ್ಥ:– ಒಂದಕ್ಕರಮಾದೊಡಂ ಎರಡಕ್ಕರಮಾದೊಡಂ ಪಲವುಂ ವೇಳೆಯೊಳ್ ಬಳಸಿ ಬರುತ್ತಿರೆಯದು ವೃತ್ತ್ಯನುಪ್ರಾಸವೆನಿಪ್ಪುದು. (–ಅಪ್ರತಿಮವೀರ ಚರಿತೆ)

**(132) ವೃತ್ತ್ಯನುಪ್ರಾಸ:– ಒಂದಾಗಲಿ, ಎರಡಾಗಲಿ ವ್ಯಂಜನಗಳು ಪುನಃ ಪುನಃ ಹೇಳಲ್ಪಟ್ಟಿದ್ದರೆ ಅದು ವೃತ್ತ್ಯನುಪ್ರಾಸವೆನಿಸುವುದು.**

ಉದಾಹರಣೆಗೆ: **ಎಳೆಗಿಳಿಗಳ ಬಳಗಂ ಗಳ**
**ಗಳನಿಳಿ ತಂದೆಳಸಿ ಬಳಸಿ ಸುಳಿದೊಳವುಗುತುಂ**
**ನಳನಳಿಸಿ ಬೆಳೆದು ಕಳಿಯದ ।**
**ಕಳವೆಯಕಣಿಶಂಗಳಂ ಕರಂ ಖಂಡಿಸುಗುಂ ॥**
(–ರಾಜಶೇಖರ ವಿಳಾಸ)

ಅರ್ಥ:– ಎಳೆಯ ಗಿಳಿಗಳ ಸಮೂಹವು ಗಳಗಳನೆ ಇಳಿದು ಬಂದು ಬತ್ತದ ಹಾಲುಗಾಳನ್ನು ಬಯಸಿ ಸುತ್ತುತ್ತಾ, ಸುಳಿಯುತ್ತಾ ನಳನಳಿಸಿ ಬೆಳೆದುನಿಂತ ಬತ್ತದ ಎಳೆಗಾಳುಗಳ ಗೊನೆಗಳನ್ನು ಸೀಳುತ್ತಿದ್ದವು.

ಇಲ್ಲಿ ಳ ಕಾರವು ಅನೇಕ ಸಲ ಪುನರುಕ್ತಿಗೊಂಡು ಪದ್ಯದ ಸೌಂದರ್ಯವು ಹೆಚ್ಚಿದೆ. ಆದ್ದರಿಂದ ಇದು '**ವೃತ್ತ್ಯನುಪ್ರಾಸ**' ಅಲಂಕಾರವೆನಿಸಿದೆ.

## (೨) ಛೇಕಾನುಪ್ರಾಸ[123]

(i) "**ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ**
**ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ**" (–ಬಸವಣ್ಣ)

(ii) "**ಹಾಡಿ ಹಾಡಿ ರಾಗ ಬಂತು**
**ಉಗುಳಿ ಉಗುಳಿ ರೋಗ ಬಂತು**" (–ಗಾದೆ)

ಮೇಲಿನ ಒಂದು ವಚನ ಮತ್ತು ಒಂದು ಗಾದೆ ಇವುಗಳಲ್ಲಿ ಬಂದಿರುವ ಎರಡೆರಡು ವ್ಯಂಜನಗಳಿಂದ ಕೂಡಿದ ಶಬ್ದಗಳ ಆವೃತ್ತಿಯು ಆ ಮಾತುಗಳ ಸೌಂದರ್ಯವನ್ನು ಹೆಚ್ಚಿಸಿದೆ. 'ಮಾಡಿ ಮಾಡಿ' ಎಂಬಲ್ಲಿ ಮಕಾರ ಡಕಾರಗಳು ಸೇರಿದ ಶಬ್ದ ಎರಡು ಸಲ ಬಂದಿದೆ. ಅನಂತರ 'ನೀಡಿ ನೀಡಿ' ಎಂಬ ಶಬ್ದ ಎರಡು ಸಲ ಬಂದಿದೆ. ಅದರಂತೆ ಗಾದೆಯಲ್ಲೂ ಎರಡೆರಡು ವ್ಯಂಜನಗಳನ್ನೊಳಗೊಂಡ ಶಬ್ದ ಜೊತೆ ಜೊತೆಯಾಗಿ ಬಂದಿವೆ. ಹೀಗೆ ಬಂದರೆ ಅದು 'ಛೇಕಾನುಪ್ರಾಸ' ವೆನಿಸುವುದು.

ಇದರ ಸೂತ್ರವನ್ನು ಕೆಳಗಿನಂತೆ ಹೇಳಬಹುದು.

---

123 ಭವೇದವ್ಯವಧಾನೇನ ದ್ವಯೋರ್ವ್ಯಂಜನ ಯುಗ್ಮಯೋಃ ।
ಆವೃತ್ತಿರ್ಯತ್ರ ಸ ಬುಧೈಃ ಛೇಕಾನುಪ್ರಾಸ ಇಷ್ಯತೇ ॥
ಅರ್ಥ:– ಒಂದು ಪದ್ಯದೊಳ್ ಎರಡೆರಡುಂ ಅಕ್ಕರಂ ಜತೆಜತೆಯಾಗಿ ಪಲವುಂ ಬಳಿಯೊಳ್ ಬರೆ, ಅದು ಛೇಕಾನುಪ್ರಾಸವೆನಿಪುದು. (–ಅಪ್ರತಿಮವೀರ ಚರಿತೆ)

**(133) ಛೇಕಾನುಪ್ರಾಸ:– ಎರಡೆರಡು ವ್ಯಂಜನಗಳಿಂದ ಕೂಡಿದ ಶಬ್ದವು ಪುನಃ ಪುನಃ (ಆವೃತ್ತಿಯಾಗಿ) ಪದ್ಯದಲ್ಲಿ ಬಂದಿದ್ದರೆ ಅದು ಛೇಕಾನುಪ್ರಾಸವೆನಿಸುವುದು.**

ಉದಾಹರಣೆಗೆ:– **ಸುತ್ತುಲುಂ ಪರಿವ ಪ್ರಚಾರದಿಂ ಪೂರದಿಂ।**
**ದೊತ್ತಿರಿಸಿಬರ್ಪ ಬಲ್ದೆರೆಗಳಿಂ ನೊರೆಗಳಿಂ।**
**ದೆತ್ತೆತ್ತಲೊಗೆವ ಸವ್ವಳಿಗಳಿಂ ಸುಳಿಗಳಿಂ ನಾನಾಪ್ರಕಾರದಿಂದೆ॥**
**ಒತ್ತಿಭೋರ್ಗರೆವ ರವದುರ್ಬಿನಿಂ ಪರ್ಬಿನಿಂ।**
**ಹತ್ತೊಂದುಗೂಡಿ ವಿಸ್ತೀರ್ಣದಿಂ ಪೂರ್ಣದಿಂ।**
**ತುತ್ತಿದುದು ಸಕಲಲೋಕಂಗಳಂ ತಿಂಗಳಂ ಪೋತ್ತವಂಬೆರಗಾಗಲು॥**
(–ಚನ್ನಬಸವ ಪುರಾಣ)

ಇದು ಜಲಪ್ರಳಯವಾದ ಒಂದು ಸಂದರ್ಭದ ವರ್ಣನೆ. ಪಾರ್ವತಿಯು ಈಶ್ವರನ ಕಣ್ಣನ್ನು ಹಿಂದಿನಿಂದ ಬಂದು ಮುಚ್ಚಿದಳು. ಈಶ್ವರನ ಆನಂದಾಶ್ರುಗಳು ಪಾರ್ವತಿಯ ಬೊಗಸೆಯಲ್ಲಿ ತುಂಬಿದವು. ಆ ಆನಂದಾಶ್ರುಗಳು ಪಾರ್ವತಿಯ ಹತ್ತು ಬೆರಳುಗಳಿಂದ ಹತ್ತು ನದಿಗಳಾಗಿ ಹರಿದು ಜಗತ್ತನ್ನೆಲ್ಲ ಆ ನೀರು ಆವರಿಸಿ ಜಲ ಪ್ರಳಯವಾಯಿತೆಂದು ಹೇಳುವ ಒಂದು ಭವ್ಯವರ್ಣನೆಯಿದು. ಇಲ್ಲಿ ಎರಡೆರಡು ವ್ಯಂಜನಗಳ ಆವೃತ್ತಿಯು ಹಲವಾರು ಕಡೆಗಳಲ್ಲಿ ಬಂದು ಪದ್ಯದ ಸೌಂದರ್ಯವನ್ನು ಹೆಚ್ಚಿಸಿವೆ. ಆದ್ದರಿಂದ ಇದು ಛೇಕಾನುಪ್ರಾಸ.

## (ಆ) ಯಮಕಾಲಂಕಾರ[124]

**(134) ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೋ, ಪದಭಾಗವೋ ಒಂದು ಪದ್ಯದ ಆದಿ, ಮಧ್ಯ, ಅಂತ್ಯ ಸ್ಥಾನಗಳಲ್ಲಿ ಎಲ್ಲಿಯಾದರೂ ನಿಯತವಾಗಿ ಬಂದಿದ್ದರೆ ಅದು ಯಮಕಾಲಂಕಾರವೆನಿಸುವುದು.**

ಉದಾ:– **ಬರಹೇಳ್ ನಿಕುಂಭನಂ ಶುಂಭನಂ ಜಂಭನಂ।**
**ಬರಹೇಳ್ ಸಶಬಲನಂ, ಪ್ರಬಲನಂ, ಸುಬಲನಂ।**
**ಬರಹೇಳ್ ಪ್ರವೀರನಂ, ಘೋರನಂ, ಶೂರನಂ, ಬರಹೇಳ್ ಮಹಾನಾಭನಂ॥**
**ಬರಹೇಳ್ ನಿಶುಂಭನಂ ಕುಂಭನಂ ಲಂಬನಂ।**
**ಬರಹೇಳ್ ಸುವಿಪುಳನಂ ಚಪಳನಂ ಕಪಿಳನಂ।**
**ಬರಹೇಳ್ ಮುಹುಂಡನಂ ಮುಂಡನಂ ಹುಂಡಮುಖ್ಯರನೆನುತ್ತುರಿದೆದ್ದನು॥**
(–ಚೆನ್ನಬಸವಪುರಾಣ)

---

[124] "ಯಮಕಂ ಪೌನರುಕ್ತೇತು ಸ್ವರವ್ಯಂಜನ ಯುಗ್ಮಯೋಃ"
ಅರ್ಥ:– ಸ್ವರಭೇದಮಿಲ್ಲದೆ, ಪಲವುಮಕ್ಕರಂಗಳ್, ಎರಡುಂ ಪಾದದೊಳಾದೊಡಂ, ಮಿತಿಯಾದ ತಾಣದೊಳ್ ಬಳಸಿಬರೆ ಅದು ಯಮಕಮೆನಿಪುದು. (–ಅಪ್ರತಿಮವೀರ ಚರಿತೆ)
(ಈ ಅಲಂಕಾರವನ್ನು ಹೆಚ್ಚಿನ ತಿಳಿವಳಿಕೆಗಾಗಿ ಮಾತ್ರ ಕೊಟ್ಟಿದೆ. ಹೈಸ್ಕೂಲುಗಳಲ್ಲಿ ಓದುವ ಮಕ್ಕಳಿಗೆ ಛೇಕಾನುಪ್ರಾಸ ತಿಳಿದರೆ ಸಾಕು.)

ಅಂಧಕಾಸುರನು ಶಿವನ ಮೇಲೆ ಯದ್ಧಕ್ಕೆ ಹೊರಟಾಗಿನ ಸಂದರ್ಭದ ಒಂದು ಪದ್ಯವಿದು. ಇಲ್ಲಿ ಆರೂ ಸಾಲುಗಳ ಆದಿಯಲ್ಲಿ 'ಬರಹೇಳ್' ಎಂಬ ನಾಲ್ಕು ವ್ಯಂಜನಗಳ ಶಬ್ದವೊಂದು ಕ್ರಮವಾಗಿ ಬರುವುದು. ಆದ್ದರಿಂದ ಇದು 'ಯಮಕಾಲಂಕಾರ' ವಾಯಿತು.

(ಯಮಕಾಲಂಕಾರಗಳಲ್ಲಿ ಹೀಗೆ ಒಂದೇ ಶಬ್ದ ಒಂದು ಗೊತ್ತಾದ ಕಡೆ ಬಂದಿದ್ದರೂ ಒಂದೊಂದು ಕಡೆಯಲ್ಲಿ ಒಂದೊಂದರ್ಥವಾಗುವಂತಹ ರೀತಿಯಲ್ಲೂ ಇರುವುದುಂಟು. ಪ್ರಕೃತ ಅಂಥ ಪದ್ಯದ ವಿವರಣೆ ಅನವಶ್ಯಕ.)

## III – ಸಾರಾಂಶ

**(೧) ಮನುಷ್ಯನು ತಾನು ಚೆನ್ನಾಗಿ ಕಾಣಲು ಉಡಿಗೆ ತೊಡಿಗೆಗಳನ್ನು ಧರಿಸುವಂತೆ, ಕಾವ್ಯವು ಆಕರ್ಷಕವಾಗುವಂತೆ ಅರ್ಥವೈಚಿತ್ರ್ಯದಿಂದ ಕೂಡಿದ, ಶಬ್ದವೈಚಿತ್ರ್ಯದಿಂದ ಕೂಡಿದ ಮಾತುಗಳನ್ನು ಕಾವ್ಯಗಳಲ್ಲಿ ಪ್ರಯೋಗಿಸುತ್ತಾರೆ. ಇಂಥ ಮಾತುಗಳೇ ಅಲಂಕಾರಗಳು.**

**(೨) ಅರ್ಥವೈಚಿತ್ರ್ಯದಿಂದ ಕಾವ್ಯದ ಸೊಬಗು ಹೆಚ್ಚಿದರೆ ಅದು ಅರ್ಥಾಲಂಕಾರ. ಶಬ್ದ ವೈಚಿತ್ರ್ಯದಿಂದ ಕಾವ್ಯದ ಸೊಬಗು ಹೆಚ್ಚಿದರೆ ಶಬ್ದಾಲಂಕಾರ.**

**(೩) ಕನ್ನಡದಲ್ಲಿ ಅಲಂಕಾರ ಗ್ರಂಥ ಬರೆದ ಲಾಕ್ಷಣಿಕರು ಮುಖ್ಯವಾಗಿ ನೃಪತುಂಗ, ನಾಗವರ್ಮ, ತಿರುಮಲಾರ್ಯ, ಜಾಯಪ್ಪದೇಸಾಯಿ ಮುಂತಾದವರು. ಇವರು ಕ್ರಮವಾಗಿ ಕವಿರಾಜಮಾರ್ಗ, ಕಾವ್ಯಾವಲೋಕನ, ಅಪ್ರತಿಮವೀರಚರಿತೆ, ಕನ್ನಡಕುವಲಯಾನಂದ– ಇತ್ಯಾದಿ ಗ್ರಂಥ ಬರೆದಿದ್ದಾರೆ.**

* * * * *

## ಅಭ್ಯಾಸ ಪ್ರಶ್ನೆಗಳು

(೧) ದೃಷ್ಟಾಂತಾಲಂಕಾರದ ಮುಖ್ಯ ಲಕ್ಷಣವೇನು? ಉಪಮಾಲಂಕಾರಕ್ಕೂ ಇದಕ್ಕೂ ಭೇದವೇನು? ವಿವರಿಸಿರಿ.

(೨) 'ಉತ್ಪ್ರೇಕ್ಷಾಲಂಕಾರ' ಎಂದರೇನು? ದೃಷ್ಟಾಂತ ಪೂರ್ವಕ ವಿವರಿಸಿರಿ.

(೩) 'ಜಾಲಿ ಮರದ ನೆಳಲು ನೆಳಲಲ್ಲ; ಮನೆಗೆ ಮಾತು ತಂದವಳು ಮಗಳಲ್ಲ' – ಈ ಗಾದೆಯಲ್ಲಿ ಅಡಗಿರುವ ಅಲಂಕಾರವೇನು?

(೪) ಉಪಮಾಲಂಕಾರಕ್ಕೆ ಸೂತ್ರ ಬರೆದು ಉದಾಹರಣೆಯೊಡನೆ ವಿವರಿಸಿರಿ.

(೫) "ಈ ಹುಡುಗಿ ಸಾಕ್ಷಾತ್ ಲಕ್ಷ್ಮಿ" ಈ ಮಾತಿನಲ್ಲಿ ಯಾವ ಅಲಂಕಾರವಡಗಿದೆ?

(೬) 'ತಿಳಿಗೊಳನಂ ಬಳಸಿ ಸುಳಿವೆಳಗಾಳಿ'–ಈ ವಾಕ್ಯವನ್ನು ಯಾವ ಶಬ್ದಾಲಂಕಾರವೆನ್ನುವಿರಿ? ಏಕೆ?

(೭) ಶ್ಲೇಷಾಲಂಕಾರವೆಂದರೇನು? ಸೂತ್ರೋದಾಹರಣ ಪೂರ್ವಕ ವಿವರಿಸಿರಿ.

(೮) "ಸಮುದ್ರವು ತನ್ನ ನೀರನ್ನು ಮೋಡಗಳಿಗೆ ಪ್ರೀತಿಯಿಂದ ಅತ್ತ ಕೊಟ್ಟರೆ–ಇತ್ತ ನದಿಯ ನಿರ್ಮಲ ಜಲವು ಅಧಿಕವಾಗಿ ಬಂದು ಸೇರುತ್ತಿತ್ತು. ಕೊಟ್ಟವನಿಗೆ ಬಡತನ ಬರುವುದೇ?" ಈ ವಾಕ್ಯವೃಂದಗಳಲ್ಲಿ ಯಾವ ಅಲಂಕಾರವಡಗಿದೆ?

ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳದಲ್ಲಿ ಆವರಣಚಿಹ್ನೆಯಲ್ಲಿನ ಒಂದು ಸರಿಯುತ್ತರವನ್ನು ಹುಡುಕಿ ಬರೆಯಿರಿ.

(೧) ವರ್ಣ್ಯ ಮತ್ತು ಅವರ್ಣ್ಯಗಳಿಗೆ ಬಿಂಬ ಪ್ರತಿಬಿಂಬ ಭಾವವು ವ್ಯಕ್ತವಾಗುತ್ತಿದ್ದರೆ ........... ಅಲಂಕಾರವೆನಿಸುವುದು.
(ಉತ್ಪ್ರೇಕ್ಷೆ, ದೃಷ್ಟಾಂತ, ಉಪಮೆ)

(೨) ಒಂದು ಸಾಮಾನ್ಯ ವಾಕ್ಯದಿಂದ ವಿಶೇಷವಾಕ್ಯವೂ, ವಿಶೇಷ ವಾಕ್ಯದಿಂದ ಸಾಮಾನ್ಯವಾಕ್ಯವೂ ಸಮರ್ಥಿತವಾಗಿದ್ದರೆ ......................... ಅಲಂಕಾರವಾಗುವುದು.
(ಉಪಮಾ, ಉತ್ಪ್ರೇಕ್ಷೆ, ಅರ್ಥಾಂತರನ್ಯಾಸ)

(೩) ಉಪಮೇಯ ಉಪಮಾನವಸ್ತುಗಳು ಒಂದರಂತೆ ಇನ್ನೊಂದಿದೆ ಎಂದು ಹೇಳದೆ, ಒಂದು ಮತ್ತೊಂದೇ ಆಗಿದೆ ಎಂದು ಹೇಳುವುದು ................ ಅಲಂಕಾರವೆನಿಸುವುದು.
(ದೃಷ್ಟಾಂತ, ರೂಪಕ, ಉಪಮಾ)

(೪) ಒಂದು ವಸ್ತುವನ್ನೋ ಸನ್ನಿವೇಶವನ್ನೋ ಮತ್ತೊಂದನ್ನಾಗಿ ಸಂಭಾವನೆ ಮಾಡುವುದು (ಕಲ್ಪಿಸಿ ಹೇಳುವುದು) ................ ಅಲಂಕಾರವೆನಿಸುವುದು.
(ಉತ್ಪ್ರೇಕ್ಷೆ, ಛೇಕಾನುಪ್ರಾಸ, ದೃಷ್ಟಾಂತ)

ಈ ಕೆಳಗಣ ವಾಕ್ಯಗಳಲ್ಲಿ ತಪ್ಪುಗಳಿವೆ ಸರಿಪಡಿಸಿರಿ.

(೧) ಒಂದು ವ್ಯಂಜನವಾಗಲಿ ಎರಡು ವ್ಯಂಜನಗಳಾಗಲಿ ಒಂದು ಪದ್ಯದಲ್ಲಿ ಪುನಃ ಪುನಃ ಹೇಳಲ್ಪಟ್ಟಿದ್ದರೆ ಅದು ಛೇಕಾನುಪ್ರಾಸ.

(೨) ಎರಡು ವಾಕ್ಯಗಳಿಗೆ ಬಿಂಬ ಪ್ರತಿಬಿಂಬ ಭಾವವು ತೋರುತ್ತಿದ್ದರೆ ಉಪಮಾಲಂಕಾರ.
(೩) ಒಂದು ವಿಶೇಷವಾಕ್ಯವನ್ನು ಸಾಮಾನ್ಯವಾಕ್ಯದಿಂದ ಸಮರ್ಥನೆ ಮಾಡುವುದು ರೂಪಕಾಲಂಕಾರ.

* * * * *

# ಲೇಖನಚಿಹ್ನೆಗಳು[125]

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಪ್ರಮುಖವಾದುದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆಯು ಸ್ಪಷ್ಟಾರ್ಥವನ್ನು ಕೊಡದೆ ಅನೇಕ ತೊಡಕುಗಳಿಗೆ ಕಾರಣವಾಗುವುದುಂಟು. ಆದುದರಿಂದ ಲೇಖನ ಚಿಹ್ನೆಗಳ ಕಡೆಗೆ ಅತ್ಯಂತ ಲಕ್ಷ್ಯ ಅವಶ್ಯಕ. ಈ ಕೆಳಗೆ ಎಲ್ಲಿ ಎಲ್ಲಿ ಎಂಥ ಎಂಥ ಲೇಖನ ಚಿಹ್ನೆಗಳಿರಬೇಕೆಂಬ ಬಗೆಗೆ ವಿವರಿಸಲಾಗಿದೆ. ಅದನ್ನು ಲಕ್ಷ್ಯದಲ್ಲಿಟ್ಟು ನಮ್ಮ ವಿದ್ಯಾರ್ಥಿಗಳು ಅವಶ್ಯವಾಗಿ ತಮ್ಮ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಉಪಯೋಗಿಸುವ ಅಭ್ಯಾಸವನ್ನು ಬಲಪಡಿಸಬೇಕು. ಇದರಿಂದ ಅವರ ಬರವಣಿಗೆಗೊಂದು ಬೆಲೆ ಬಂದಹಾಗಾಗುವುದು.

ಲೇಖನಚಿಹ್ನೆಗಳ ರೀತಿಗಳು

**(೧) ಪೂರ್ಣವಿರಾಮ–(.)** – ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣ ವಿರಾಮ ಚಿಹ್ನೆಯನ್ನು ಬರೆಯಬೇಕು.

ಉದಾಹರಣೆ: ರಾಮನು ಮರವನ್ನು ಕಡಿದನು**.**
ಮಗುವು ಮಲಗಿತು**.**

ಇಲ್ಲಿ ಪೂರ್ಣಕ್ರಿಯೆಯನ್ನು ಸೂಚಿಸುವ ಕಡಿದನು. ಮಲಗಿತು.–ಎಂಬ ಕ್ರಿಯಾಪದಗಳ ಮುಂದೆ ಪೂರ್ಣ ವಿರಾಮವಿದೆ.

**(೨) ಅರ್ಧವಿರಾಮ–(;)** – ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನ ವಾಗಿದ್ದಾಗ, ಉಪ ವಾಕ್ಯಗಳು ಮುಗಿದಲ್ಲೆಲ್ಲ ಅರ್ಧವಿರಾಮದ ' **;** ' ಈ ಚಿಹ್ನೆಯನ್ನು ಉಪಯೋಗಿಸಬೇಕು.

ಉದಾಹರಣೆ:

(i) ಅವನು ಕಾಶಿರಾಮೇಶ್ವರಗಳಿಗೆ ಹೋಗಿಬಂದನು; ಆದರೂ ಕೆಟ್ಟ ಬುದ್ಧಿಯನ್ನು ಬಿಡಲಿಲ್ಲ.

(ii) ಆ ದಿನ ಮಳೆ ಬಂದಿತ್ತು; ಆದುದರಿಂದ ಆಟವಾಡಲಿಲ್ಲ; ಇದು ಆಟಗಾರರಿಗೆ ಸ್ವಲ್ಪ ನಿರಾಸೆಯನ್ನುಂಟುಮಾಡಿತು.

---

125 ಕನ್ನಡದಲ್ಲಿ ಲೇಖನ ಚಿಹ್ನೆಗಳು ಮೊದಲು ರೂಢಿಯಲ್ಲಿರಲಿಲ್ಲ. ಕನ್ನಡ ಹಸ್ತಪ್ರತಿಗಳಲ್ಲೂ ಲೇಖನಚಿಹ್ನೆಗಳು ಎಲ್ಲೂ ಕಂಡುಬರುವುದಿಲ್ಲ. ಶಾಸನಗಳಲ್ಲೂ ಇಲ್ಲ. ಆಂಗ್ಲಭಾಷಾ ಪ್ರಭಾವದಿಂದ ಕೆಲವು ಚಿಹ್ನೆಗಳು ಕನ್ನಡ ಭಾಷೆಯಲ್ಲೂ ರೂಢಿಯಲ್ಲಿ ಬಂದಿವೆ. ಅವುಗಳ ಪರಿಚಯ ವಿದ್ಯಾರ್ಥಿಗಳಿಗೆ ಆಗಬೇಕೆಂಬ ಉದ್ದೇಶದಿಂದ, ಈ ವಿಷಯ ವಿವರಿಸಲಾಗಿದೆ.

ಮೇಲಿನ ಉದಾಹರಣೆಗಳಲ್ಲಿ ಮೊದಲನೆಯ ವಾಕ್ಯದಲ್ಲಿ ಒಂದು ಉಪವಾಕ್ಯವೂ ಎರಡನೆಯದರಲ್ಲಿ ಎರಡು ಉಪವಾಕ್ಯಗಳೂ ಇದ್ದು ಅಲ್ಲಿ ' **;** ' ಈ ರೀತಿಯ ಅರ್ಧವಿರಾಮ ಚಿಹ್ನೆಯನ್ನು ಬರೆದಿದೆ. ಅದನ್ನು ಲಕ್ಷ್ಯದಲ್ಲಿಟ್ಟು ಅನುಸರಿಸಬೇಕು.

**(೩) ಅಲ್ಪವಿರಾಮ–(,)** – ಸಂಬೋಧನೆಯ ಮುಂದೆ, ಅನೇಕ ಬೇರೆ ಬೇರೆ ವಿಶೇಷಣಗಳು ಕರ್ತೃಪದಕ್ಕಾಗಲಿ, ಕರ್ಮಪದಕ್ಕಾಗಲಿ, ಕ್ರಿಯಾಪದಕ್ಕಾಗಲಿ, ವಿಶೇಷಣಗಳಾಗಿದ್ದಾಗ ಕೊನೆಯ ವಿಶೇಷಣವನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮ ಚಿಹ್ನೆ ಬರೆಯಬೇಕು. ಅನೇಕ ಕರ್ತೃಗಳು ಅಥವಾ ಕರ್ಮಗಳು ಬಂದಾಗ, ಕೊನೆಯದನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮ ಬರೆಯಬೇಕು. ಇವು ಮುಖ್ಯವಾಗಿ ಅಲ್ಪವಿರಾಮ ಬರುವ ಸ್ಥಳಗಳು.

ಉದಾಹರಣೆಗೆ:– (i) ಸಂಬೋಧನೆಯ ಮುಂದೆ ಅಲ್ಪವಿರಾಮಕ್ಕೆ–

(ಅ) ರಾಮಾ, ಊಟಮಾಡು.

(ಆ) ಪರಮಾತ್ಮಾ, ಕಾಪಾಡು.

(ಇ) ಮಕ್ಕಳೇ, ಬನ್ನಿರಿ.

(ii) ಕರ್ತೃ ಕರ್ಮ ಕ್ರಿಯಾಪದಗಳಿಗೆ ಅನೇಕ ವಿಶೇಷಣಗಳಿದ್ದಾಗ–

(ಅ) ಶೂರನೂ, ಉದಾರಿಯೂ, ಪ್ರಜಾರಂಜಕನೂ ಆದ ರಾಜನಾಗಿದ್ದನು.

ಇಲ್ಲಿ 'ರಾಜನು' ಎಂಬ ಕರ್ತೃಪದಕ್ಕೆ ಮೂರು ವಿಶೇಷಣಗಳಿದ್ದು ಮೊದಲಿನ ಎರಡು ವಿಶೇಷಣಗಳ ಮುಂದೆ ಅಲ್ಪವಿರಾಮ **(,)** ಚಿಹ್ನೆ ಕೊಡಲಾಗಿದೆ. ಕೊನೆಯ ವಿಶೇಷಣಕ್ಕೆ ಕೊಡಬೇಕಾದುದಿಲ್ಲ.

(ಆ) ಆತನು ದೊಡ್ಡದೂ, ಭಾರವುಳ್ಳದೂ, ಉಪಯುಕ್ತವೂ ಆದ ಕಲ್ಲನ್ನು ಎತ್ತಿ ತಂದನು.

ಇಲ್ಲಿ ಕಲ್ಲನ್ನು ಎಂಬ ಕರ್ಮ ಪದಕ್ಕೆ ಮೂರು ವಿಶೇಷಣಗಳಿವೆ. ಮೊದಲೆರಡು ವಿಶೇಷಣಗಳ ಮುಂದೆ ಅಲ್ಪವಿರಾಮ ಬಂದಿದೆ.

(ಇ) ಆತನ ಬರವಣಿಗೆ ನೋಡಲು ಅಂದವಾಗಿಯೂ, ಮನಮೋಹಕ ವಾಗಿಯೂ, ಸ್ಪುಟವಾಗಿಯೂ, ಅಚ್ಚುಕಟ್ಟಾಗಿಯೂ ಕಾಣುತ್ತದೆ.

ಇಲ್ಲಿ ಕ್ರಿಯೆಗೆ ನಾಲ್ಕು ವಿಶೇಷಣಗಳಿವೆ. ಮೊದಲ ಮೂರು ವಿಶೇಷಣಗಳ ಮುಂದೆ ಅಲ್ಪವಿರಾಮ **(,)** ಬರೆಯಲಾಗಿದೆ.

(ಈ) ಒಂದೇ ಕ್ರಿಯೆಗೆ ಅನೇಕ ಕರ್ತೃಗಳಿದ್ದಾಗ–

ಜಾತ್ರೆಯಲ್ಲಿ ಮಕ್ಕಳೂ, ಸ್ತ್ರೀಯರೂ, ಮುದುಕರೂ, ತರುಣರೂ ಬಹುಸಂಖ್ಯೆಯಲ್ಲಿ ಸೇರಿದ್ದರು.

ಇಲ್ಲಿ ಸೇರುವ ಕ್ರಿಯೆಗೆ ನಾಲ್ಕು ಕರ್ತೃ ಪದಗಳಿವೆ. ಮೊದಲ ಮೂರು ಕರ್ತೃಪದಗಳ ಮುಂದೆ ಅಲ್ಪ ವಿರಾಮ (,) ಚಿಹ್ನೆ ಬಂದಿದೆ.

(ಉ) ಒಂದೇ ಕ್ರಿಯೆಗೆ ಅನೇಕ ಕರ್ಮಪದಗಳಿದ್ದಾಗ–

ಹಸಿದ ಆತನು ರೊಟ್ಟಿಯನ್ನೂ, ಅನ್ನವನ್ನೂ, ಹತ್ತು ಬಾಳೆಹಣ್ಣುಗಳನ್ನೂ, ತಂಬಿಗೆ ಹಾಲನ್ನೂ ಕುಡಿದನು.

ಇಲ್ಲಿ ಕುಡಿಯುವ ಕ್ರಿಯೆಗೆ ನಾಲ್ಕು ಕರ್ಮಪದಗಳಿವೆ. ಮೊದಲ ಮೂರು ಕರ್ಮಪದಗಳ ಮುಂದೆ ಅಲ್ಪ ವಿರಾಮ (,) ಚಿಹ್ನೆಯನ್ನು ಬರೆಯಲಾಗಿದೆ.

ಹೀಗೆ ಅಲ್ಪ ವಿರಾಮವು ಅನೇಕ ಕಡೆ ಬರುವುದುಂಟು. ಇದೂ ಅಲ್ಲದೆ ಸಾಪೇಕ್ಷ ಕ್ರಿಯೆಗಳಾದ ಕೃದಂತಾವ್ಯಯಗಳ ಮುಂದೆಯೂ ಅಲ್ಪ ವಿರಾಮ ಚಿಹ್ನೆಯನ್ನು ಬರೆಯುವ ಪದ್ಧತಿಯೂ ಉಂಟು.–

ಉದಾಹರಣೆಗೆ:– (i) ನಮಗೆ ಕಾರ್ಯ ಮುಗಿಯದೆ, ತೃಪ್ತಿಯುಂಟಾಗುವುದಿಲ್ಲ.

(ii) ಮಕ್ಕಳು ಕುಣಿಯುತ್ತಾ, ಓಡಿಹೋದರು.

(iii) ನೀವು ಬಂದರೆ, ಆ ಕಾರ್ಯ ಸಫಲ.

ಮೇಲೆ ಹೇಳಿದ ವಾಕ್ಯಗಳಲ್ಲಿ ಬಂದಿರುವ 'ಮುಗಿಯದೆ' 'ಕುಣಿಯುತ್ತಾ' 'ಬಂದರೆ' ಇತ್ಯಾದಿ ಸಾಪೇಕ್ಷ ಕ್ರಿಯೆಗಳಾದ ಕೃದಂತಾವ್ಯಯಗಳು ವಾಕ್ಯದಲ್ಲಿ ಎರಡು ಮೂರು ಕಡೆ ಬಂದಿದ್ದರೆ ಕೊನೆಯ ಸಾಪೇಕ್ಷ ಕ್ರಿಯೆಯನ್ನುಳಿದು ಉಳಿದವುಗಳ ಮುಂದೆ ಅಲ್ಪ ವಿರಾಮ ಚಿಹ್ನೆಯನ್ನು ಕೊಡವ ಪದ್ಧತಿ ಕೆಲವರಲ್ಲಿದೆ. ಆದರೆ ಕೆಲವರು ಕೊಡದೆ ಇರುವುದೂ ಉಂಟು.

**(ಳ) ಪ್ರಶ್ನಾರ್ಥಕ ಚಿಹ್ನೆ–(?)** – ಪ್ರಶ್ನಾರ್ಥಕ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕವಾದ ' **?** ' ಈ ಚಿಹ್ನೆಯನ್ನು ಹಾಕಬೇಕು.

ಉದಾಹರಣೆಗೆ:– (i) ಏಕೆ? ಯಾವುದು?

(ii) ಇದು ನಿನಗೆ ಬೇಕೆ?

(iii) ನಿನ್ನ ವಯಸ್ಸು ಏನು?

(iv) ಅವನಿಗೆ ಅದು ಬೇಕೆ?

ನೀವು ಎಷ್ಟು ಹೊತ್ತಿನವರೆಗೆ ಓದುತ್ತೀರಿ? ಇಲ್ಲಿ ಪ್ರಶ್ನಾರ್ಥಕ ಶಬ್ದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕವಾದ ' **?** ' ಈ ಚಿಹ್ನೆ ಬಂದಿರುವುದನ್ನು ಗಮನಿಸಿರಿ.

**(ಱ) ಭಾವ ಸೂಚಕ ಚಿಹ್ನೆ–(!)** – ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ, ಕೋಪ, ಆನಂದ–ಇತ್ಯಾದಿ ಭಾವ ಸೂಚಕ ಶಬ್ದಗಳ ಮುಂದೆ ' **!** ' ಈ ರೀತಿಯ ಭಾವ ಸೂಚಕ ಚಿಹ್ನೆಗಳನ್ನು ಬರೆದರೆ ಆ ಮಾತುಗಳ ಅರ್ಥ ಸ್ಫುಟವಾಗುವುದು.

ಉದಾಹರಣೆಗೆ:– (i) ಆಹಾ! ಎಷ್ಟು ಸೊಗಸಾಗಿದೆ!
(ii) ಅಯ್ಯೋ! ಅವನಿಗೆ ಕೇಡೇ!
(iii) ಅಕ್ಕಟಾ! ತಪ್ಪಾಯಿತು!
(iv) ಛೀ! ಮೂರ್ಖಾ ತೊಲಗು! –ಇತ್ಯಾದಿ.

**(೬) ಉದ್ಧರಣ ಚಿಹ್ನೆ ಅಥವಾ ವಾಕ್ಯವೇಷ್ಟನ ಚಿಹ್ನೆ–(" ")** – ಇನ್ನೊಬ್ಬರು ಹೀಗೆ ಹೇಳಿದರೆಂದು ಒಬ್ಬರ ಮಾತನ್ನು ಉದ್ಧರಿಸಿ ಬರೆಯುವಾಗ ಅಥವಾ ಇನ್ನೊಬ್ಬರ ನೇರ ಮಾತುಗಳನ್ನು ತೋರಿಸುವಾಗ ಈ ಚಿಹ್ನೆಯನ್ನು ಉಪಯೋಗಿಸಬೇಕು. ಇದರಲ್ಲಿ ಎರಡು ರೀತಿಯ ಚಿಹ್ನೆಗಳಿರುವುದನ್ನು ನೋಡಿರಿ.

(i) " " – ಹೀಗೆ ಮೊದಲು ಕೆಳಮುಖವಾದ ಎರಡು ಅಲ್ಪವಿರಾಮ ಚಿಹ್ನೆಗಳೂ, ಅನಂತರ ಮೇಲ್ಮುಖವಾದ ಎರಡು ಅಲ್ಪ ವಿರಾಮ ಚಿಹ್ನೆಗಳೂ ಉಳ್ಳ ಗುರುತನ್ನು ಇನ್ನೊಬ್ಬರ ಮಾತುಗಳನ್ನು ಉದ್ಧರಿಸಿ ಬರೆದಾಗ ಆ ಮಾತು ಎಷ್ಟಿದೆಯೋ ಅಷ್ಟಕ್ಕೆ ಈ ಚಿಹ್ನೆ ಹಾಕಬೇಕು.

(ii) ' ' ಹೀಗಿರುವ ಚಿಹ್ನೆಯನ್ನು ಬರವಣಿಗೆಯಲ್ಲಿ ಪಾರಿಭಾಷಿಕ ಪದಗಳನ್ನು ಬಳಸಿದಾಗ ಆ ಪದಕ್ಕೂ ಅಥವಾ ವಾಕ್ಯಕ್ಕೂ, ಹೀಗೆ ಹೇಳುತ್ತಾರೆ, ಎಂದು ಒಂದು ಯಾವುದಾದರೂ ಪದ ಹೇಳಿದರೆ, ಅಂಥ ಪದಕ್ಕೂ ಹಾಕಬಹುದು. ಇನ್ನೂ ಹಲವು ಕಡೆ ಉಪಯೋಗಿಸಬಹುದು. ಕೆಳಗಿನ ಉದಾಹರಣೆಗಳಲ್ಲಿ ನೋಡಿರಿ.

(iii) ವಾಕ್ಯವೇಷ್ಟನಕ್ಕೆ (ಉದ್ಧರಣಕ್ಕೆ), ನೇರಮಾತುಗಳಿಗೆ–

(ಅ) ನಿನ್ನೆ ಭಾಷಣದಲ್ಲಿ ನಮ್ಮ ಮುಖ್ಯೋಪಾಧ್ಯಾಯರು "ಪ್ರತಿಯೊಬ್ಬ ವಿದ್ಯಾರ್ಥಿಯೂ ಕಷ್ಟಪಟ್ಟು ಓದಬೇಕು" ಎಂದು ಹೇಳಿದರು.

ಇಲ್ಲಿ ಮುಖ್ಯೋಪಾಧ್ಯಾಯರು ಹೇಳಿದ ಮಾತು ಯಾವುದೋ ಅದನ್ನು ಉದ್ಧರಿಸಿ ಅದಕ್ಕೆ " " ಈ ಚಿಹ್ನೆ ಹಾಕಲಾಗಿದೆ.

(ಆ) ಮಹಾಭಾರತದಲ್ಲಿ "ಧರ್ಮಕ್ಕೆ ಜಯ ಉಂಟು" ಎಂದು ಹೇಳಿದೆ.

ಇಲ್ಲಿ ಮಹಾಭಾರತದಲ್ಲಿ ಹೇಳಿದ ಧರ್ಮಕ್ಕೆ ಜಯ ಎಂಬ ಮಾತನ್ನು ಉದ್ಧರಿಸಿ ಅದಕ್ಕೆ ಉದ್ಧರಣ ಚಿಹ್ನೆ ಹಾಕಲಾಗಿದೆ.

(ಇ) ಆಗ ಧೃತರಾಷ್ಟ್ರನು ಧರ್ಮರಾಯನಿಗೆ "ಅಪ್ಪಾ, ನನಗೆ ತಪಸ್ಸಿನ ಮೇಲೆ ಮನಸ್ಸಾಗಿದೆ. ನನಗೆ ಕಾಡಿಗೆ ಹೋಗಲು ಅನುಮತಿ ಕೊಡು." ಎಂದು ಕೇಳಲಾಗಿ ಧರ್ಮರಾಯನು "ಎಲ್ಲಿಯಾದರೂ ಉಂಟೆ! ಈ ಮುಪ್ಪಿನಲ್ಲಿ ನೀವು ಕಾಡಿಗೆ ಹೋಗುವು ದೆಂದರೇನು?" ಎಂದನು.

ಈ ವಾಕ್ಯವೃಂದದಲ್ಲಿ ಧೃತರಾಷ್ಟ್ರ ಮತ್ತು ಧರ್ಮರಾಯರ ನೇರ ಮಾತುಗಳಿಗೆ " " ಈ ಚಿಹ್ನೆಯನ್ನು ಹಾಕಲಾಗಿದೆ. ಹೀಗೆ ವಾಕ್ಯವೃಂದಗಳಲ್ಲಿ ಬರುವ ನೇರ ಮಾತುಗಳಿಗೆ ಉದ್ಧರಣ ಚಿಹ್ನೆ ಹಾಕಿದಾಗ ಮಾತಿನ ಸ್ಪಷ್ಟಾರ್ಥವಾಗುವುದು.

(ಈ) (೧) ಪಾರಿಭಾಷಿಕ ಪದಗಳನ್ನು ಉಪಯೋಗಿಸಿದಾಗ–

(1) ಕನ್ನಡದಲ್ಲಿ ಅನೇಕ 'ಇಂಗ್ಲೀಷ್' ಪದಗಳು ಸೇರಿ ಬಳಕೆಗೆ ಬಂದಿವೆ.
(2) ನಿನ್ನೆ ಉಪಾಧ್ಯಾಯರು 'ಹೈಡ್ರೋಜನ್' ವಿಷಯದಲ್ಲಿ ಪಾಠ ಹೇಳಿದರು.

ಇಲ್ಲಿ ಪಾರಿಭಾಷಿಕ ಪದಗಳಾದ 'ಇಂಗ್ಲೀಷ್' 'ಹೈಡ್ರೋಜನ್' ಮೊದಲಾದವುಗಳಿಗೆ ' ' ಈ ಚಿಹ್ನೆ ಹಾಕಲಾಗಿದೆ.

(೨) ಒಂದು ವಿಷಯವನ್ನು ಕುರಿತು ಹಲವು ವಾಕ್ಯಗಳನ್ನು ಹೊಂದಿಸಿ ಬರೆದರೆ, ಆ ವಾಕ್ಯಗಳ ಗುಂಪಿಗೆ 'ಮಹಾವಾಕ್ಯ' ವೆನ್ನುವರು. ಇದನ್ನು 'ವಾಕ್ಯವೃಂದ', 'ವಾಕ್ಯರಾಶಿ' – ಎಂದೂ ಕರೆಯುವುದುಂಟು.

ಮೇಲಿನ ವಾಕ್ಯವೃಂದದಲ್ಲಿ 'ಹೀಗೆ ಹೇಳುತ್ತಾರೆ' ಎಂದು ಅರ್ಥಬರುವ 'ಮಹಾವಾಕ್ಯ', 'ವಾಕ್ಯವೃಂದ', 'ವಾಕ್ಯರಾಶಿ' – ಇತ್ಯಾದಿ ಪದಗಳಿಗೆ ಈ ಚಿಹ್ನೆ ಹಾಕಲಾಗಿದೆ.

(೩) ದಿವಂಗತ ಎ.ಆರ್. ಕೃಷ್ಣಶಾಸ್ತ್ರಿಗಳು 'ಭಾಸಕವಿ', 'ಸಂಸ್ಕೃತ ನಾಟಕಗಳು', 'ನಿರ್ಮಲ ಭಾರತೀ', 'ಕಥಾಮೃತ', 'ವಚನಭಾರತ' ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ.

ಈ ವಾಕ್ಯದಲ್ಲಿ ಇಂಥ ಇಂಥ ಗ್ರಂಥ ಬರೆದಿದ್ದಾರೆನ್ನುವಲ್ಲಿ ಯಾವ ಯಾವ ಗ್ರಂಥಗಳೋ ಅವಕ್ಕೆಲ್ಲ ' ' ಈ ಚಿಹ್ನೆಯನ್ನು ಬಳಸಲಾಗಿದೆ.

(೪) ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಕಾವ್ಯನಾಮ 'ಶ್ರೀ' ಎಂದು.

ಮೇಲೆ ಹೇಳಿರುವ, ಅನೇಕ ಕಡೆಗಳಲ್ಲಿ ಬರುವ ಈ ಚಿಹ್ನೆಯ ಬಗೆಗೆ ವಿದ್ಯಾರ್ಥಿಗಳು ಅರಿತು ಬರೆಯ ಬೇಕು.

**(೭) ಆವರಣ ಚಿಹ್ನೆ–()** – ಒಂದು ಶಬ್ದವನ್ನೋ ಅಥವಾ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಶಬ್ದವನ್ನೋ ವಾಕ್ಯವನ್ನೋ ಹೇಳುವಾಗ ಈ ಆವರಣ ಚಿಹ್ನೆಯನ್ನು ಉಪಯೋಗಿಸಬೇಕು.

ಉದಾಹರಣೆ:– (i) ಒಂದು ದಿನ ಒಂದು ನರಿಯು ಕೊಕ್ಕರೆಯನ್ನು (ನೀರು ಹಕ್ಕಿಯನ್ನು) ತನ್ನ ಮನೆಗೆ ಊಟಕ್ಕೆ ಕರೆಯಿತು.

(ii) ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್) ಗಳು ಉತ್ಪತ್ತಿಯಾಗುತ್ತವೆ.

**(೮) ವಿವರಣಾತ್ಮಕ ಚಿಹ್ನೆ–(:)** – ಒಂದು ಅಭಿಪ್ರಾಯದ ವಿವರಣೆ ಮುಂದಿನಂತೆ ಇದೆ, ಎಂದು ತೋರಿಸುವಾಗ ಸಾಮಾನ್ಯವಾಗಿ ' **:** ' ಈ ಚಿಹ್ನೆ ಹಾಕುವುದುಂಟು.

ಉದಾಹರಣೆ:– (i) ಇದುವರೆಗೆ ನಳನ ಪಾಕಶಾಸ್ತ್ರ ನೈಪುಣ್ಯ ಹೇಳಿದ್ದಾಯಿತು. ಇನ್ನು ಭೀಮಸೇನನ ವಿಚಾರ: ಭೀಮಸೇನ ಹುಟ್ಟಿದ ತಿಥಿ, ವಾರ, ನಕ್ಷತ್ರ ..............

ಇಲ್ಲಿ ಭೀಮಸೇನನ ವಿಚಾರದ ವಿವರಣೆ ಪ್ರಾರಂಭವಾಗುವಲ್ಲಿ ' **:** ' ಈ ಚಿಹ್ನೆ ಹಾಕಲಾಗಿದೆ. ಇದು ಭೀಮಸೇನನ ವಿಚಾರದಲ್ಲಿ ವಿವರಣೆ ಪ್ರಾರಂಭಿಸುವ ಸೂಚನೆಗಾಗಿ ಹಾಕಿದುದೆಂದು ತಿಳಿಯಬೇಕು.

(ii) ಇನ್ನು ಪಂಪ ಮಹಾಕವಿಯ ವಿಚಾರ: ಪಂಪ ಕವಿಯು ಕನ್ನಡದ ಬಹು ದೊಡ್ಡ ಕವಿ ........ ಇತ್ಯಾದಿ.

ಇಲ್ಲಿ ಪಂಪ ಕವಿಯ ವಿಚಾರ–ಎಂಬ ಪದದ ಮುಂದೆ ವಿವರಣಾತ್ಮಕವಾದ ' **:** ' ಈ ಚಿಹ್ನೆ ಹಾಕಲಾಗಿದೆ.

ಹೀಗೆ : ಈ ಚಿಹ್ನೆಯನ್ನು ಮುಂದೆ ವಿವರಣೆ ಮಾಡಿದೆ ಎಂಬರ್ಥದಲ್ಲಿ ಹಾಕಬೇಕಾಗುವುದು.

**(೯) ಅಧಿಕ ಚಿಹ್ನೆ – (+)** – ಎರಡು ಪದಗಳನ್ನೋ, ಅಥವಾ ಪ್ರಕೃತಿ ಪ್ರತ್ಯಯಗಳನ್ನೋ, ಕೂಡಿಸಿ ಸಂಧಿಮಾಡಿ ಹೇಳುವಾಗ, ಎರಡು ಪದಗಳನ್ನು ಕೂಡಿಸಿ ಸಮಾಸ ಮಾಡುವಾಗ, ಅಥವಾ ಎರಡು ಸಂಖ್ಯೆಗಳನ್ನು ಕೂಡಿಸಿದೆ ಎಂಬರ್ಥ ಸೂಚನೆ ಮಾಡುವಾಗ ಸಾಮಾನ್ಯವಾಗಿ '+' ಈ ಚಿಹ್ನೆ ಬಳಸುವುದುಂಟು. ಇದಕ್ಕೆ ಅಧಿಕ (ಹೆಚ್ಚು) ಚಿಹ್ನೆ ಎಂದು ಕರೆಯುತ್ತಾರೆ.

ಉದಾಹರಣೆಗೆ: (i) ಸಂಧಿಮಾಡುವಾಗ

ಮನೆ + ಅಲ್ಲಿ = ಮನೆಯಲ್ಲಿ

ಅವನ + ಊರು = ಅವನೂರು

(ii) ಸಮಾಸಮಾಡುವಾಗ

ದೇವರ + ಮಂದಿರ = ದೇವಮಂದಿರ

ಕೈಯ + ಮುಂದು = ಮುಂಗೈ

(iii) ಸಂಖ್ಯೆಗಳನ್ನು ಕೂಡಿಸುವಾಗ

೮ + ೪ = ೧೨. ಇತ್ಯಾದಿ.

**(೧೦) ಸಮಾನಾರ್ಥಕ ಚಿಹ್ನೆ – (=)** – ಎರಡು ಪದಗಳ ಅರ್ಥ ಸಮಾನವೆನ್ನುವಾಗ, ಇವೆರಡು ಸೇರಿ ಇದಕ್ಕೆ ಸಮಾನವೆನ್ನುವಾಗ ಸಾಮಾನ್ಯವಾಗಿ **'='** ಈ ಚಿಹ್ನೆ ಉಪಯೋಗಿಸುವುದುಂಟು. ಇದಕ್ಕೆ 'ಸಮಾನಾರ್ಥಕ ಚಿಹ್ನೆ' ಎನ್ನುವರು.

ಉದಾಹರಣೆಗೆ:– (i) ಅರ್ಥಸಮಾನತೆ ಹೇಳುವುದಕ್ಕೆ

ಅಸುರ = ರಾಕ್ಷಸ.

ಇಲ್ಲಿ 'ಅಸುರ' ಎಂಬ ಪದದ ಅರ್ಥ ಮುಂದಿರುವ 'ರಾಕ್ಷಸ' ಎಂಬ ಪದದ ಅರ್ಥಕ್ಕೆ ಸಮಾನ – ಎಂದು ತಿಳಿಯಬೇಕು.

(ii) ಎರಡೂ ಸೇರಿ ಮುಂದಿನ ಪದಕ್ಕೆ ಸಮಾನ ಎಂಬರ್ಥದಲ್ಲಿ

(ಅ) ಅರಸನ + ಮನೆ = ಅರಮನೆ

(ಆ) ೮ + ೪ = ೧೨.

ಇಲ್ಲಿ ಅರಸನ ಪದವೂ, ಮನೆ ಪದವೂ ಸೇರಿ ಅರಮನೆ ಎಂಬ ಪದದ ಅರ್ಥಕ್ಕೆ ಸಮಾನ ಎಂಬರ್ಥದಲ್ಲಿ ' **=** ' ಈ ಚಿಹ್ನೆ ಬರೆಯಲಾಗಿದೆ, ಇದರಂತೆ ಎರಡನೆಯ ಉದಾಹರಣೆಯಲ್ಲಿ ೮ + ೪ ಎರಡೂ ಸೇರಿ ೧೨ ಕ್ಕೆ ಸಮಾನ ಎಂಬರ್ಥದಲ್ಲಿ ೮ + ೪ ರ ಮುಂದೆ ' **=** ' ಈ ಚಿಹ್ನೆಯನ್ನು ಬಳಸಲಾಗಿದೆ.

ಮೇಲೆ ವಿವರಿಸಿದ ಹಾಗೆ ಅನೇಕ ವಿಧವಾದ ಲೇಖನ ಚಿಹ್ನೆಗಳನ್ನು ನಾವು ನಮ್ಮ ಬರವಣಿಗೆಯಲ್ಲಿ ಅರಿತು ಬಳಸಿದರೆ ಬರವಣಿಗೆ ಅರ್ಥಪೂರ್ಣವಾಗುವುದು. ಓದುವವರಿಗೂ ಇದರಿಂದ ಸ್ಪಷ್ಟವಾದ ಅರ್ಥವಾಗುವಂತಾಗುವುದು.

* * * * *

# ಸೂಚನೆ

ಈ ಪುಸ್ತಕವು ಸರ್ಕಾರದ ಬುಕ್ ಡಿಪೋ ಇಲಾಖೆಯಿಂದ ನಿಯಮಿಸಲ್ಪಟ್ಟಿರುವ ಏಜೆಂಟರುಗಳಲ್ಲಿ ಪುಸ್ತಕದ ಮೇಲೆ ಮುದ್ರಿಸಿರುವ ಬೆಲೆಗೆ ದೊರೆಯುತ್ತದೆ. ಈ ಪುಸ್ತಕದ ಪ್ರತಿಗಳು ತಮ್ಮಲ್ಲಿ ದೊರೆಯುವುದಿಲ್ಲವೆಂದಾಗಲಿ, ಇತರರು ಈ ಪುಸ್ತಕಕ್ಕೆ ರಚಿಸಿರುವ "ನೋಟ್ಸ್"ನ್ನು ಕೊಂಡುಕೊಂಡ ಹೊರತು, ಈ ಪುಸ್ತಕವನ್ನು ಮಾರುವುದಿಲ್ಲವೆಂದಾಗಲಿ ಹೇಳುವ ಅಥವಾ ಈ ಪುಸ್ತಕದ ಮೇಲೆ ಕೊಟ್ಟಿರುವ ಬೆಲೆಗಿಂತ ಹೆಚ್ಚಾದ ಬೆಲೆಯನ್ನು ಹಾಕಿ ಮಾರುವ ಏಜೆಂಟರು ಮೊದಲಾದವರ ಹೆಸರನ್ನೂ, ವಿಳಾಸವನ್ನೂ ಪಠ್ಯಪುಸ್ತಕಗಳ ಇಲಾಖೆಯ ಡೈರೆಕ್ಟರ್‌ರವರಿಗೆ ಬರಹ ಮೂಲಕ ಕೂಡಲೆ ತಿಳಿಯಪಡಿಸಬೇಕೆಂದು ಕೋರಿದೆ.

ಬೆಂಗಳೂರು<br>
ನವೆಂಬರ್ ೧೯೬೯

ಟಿ. ವಿ. ತಿಮ್ಮೇಗೌಡ,<br>
ಡೈರೆಕ್ಟರು,<br>
ಪಠ್ಯ ಪುಸ್ತಕಗಳ ಇಲಾಖೆ

Printed at: Bhagavan Printers, Malleswaram, Bangalore-3.
50,000 copies – 1971